ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಬೋರೇಶಿ. ಈ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರು
ಡಾ. ಎಸ್.ಆರ್. ಚನ್ನವೀರಪ್ಪ
ಸಹ ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೬

738

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಬೋರೇಶಿ ಈ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರು
ಡಾ. ಎಸ್.ಆರ್. ಚನ್ನವೀರಪ್ಪ
ಸಹ ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೬

ಸಂಶೋಧಕರ ಪ್ರಮಾಣಪತ್ರ

"ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಎಸ್. ಆರ್. ಚನ್ನವೀರಪ್ಪ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

Boresh
ಬೋರೇಶಿ ಈ

ಸಂಶೋಧನಾ ವಿದ್ಯಾರ್ಥಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 19-12-2016
ಸ್ಥಳ : ವಿದ್ಯಾರಣ್ಯ

[illegible]

[illegible]

[illegible]

[illegible]

[illegible]

ಮಾರ್ಗದರ್ಶಕರ ದೃಢೀಕರಣ ಪ್ರಮಾಣಪತ್ರ

"ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಬೋರೇಶಿ ಈ.** ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎಸ್. ಆರ್. ಚನ್ನವೀರಪ್ಪ
ಸಹ ಪ್ರಾಧ್ಯಾಪಕರು/ಮಾರ್ಗದರ್ಶಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 19-12-2016

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪ

ಪೀಠಿಕೆ.

ನಮ್ಮ ಪ್ರಾಚೀನ ಸಾಹಿತ್ಯವೆಲ್ಲವೂ ಓಲೆಪ್ರತಿ, ಭೂರ್ಜಪತ್ರ, ಕೋರಿಕಾಗದಗಳಲ್ಲಿ ಲಿಖಿತವಾಗಿರುವುದು ಕಂಡುಬರುತ್ತದೆ. ಪೂರ್ವಜರು ಗಳಿಸಿದ ಜ್ಞಾನ, ಸಾಧಿಸಿದ ಸಿದ್ಧಿಗಳೆಲ್ಲವೂ ಇವುಗಳಲ್ಲಿ ಅಡಕವಾಗಿದ್ದು ಅವುಗಳ ಸಂಗ್ರಹಣೆ, ಸಂಪಾದನೆ, ಪ್ರಕಟಣೆ ಕಾರ್ಯಗಳು ಇನ್ನು ಹೆಚ್ಚು ಆಗುವುದರ ಅವಶ್ಯಕತೆಯಿದೆ. ಮನೆಗಳಲ್ಲಿ, ವಿದ್ವಾಂಸರಲ್ಲಿ ಮತ್ತು ಆಸಕ್ತ ಜನರಲ್ಲಿ ಅಡಗಿದ್ದ ಅನೇಕ ಅಮೂಲ್ಯ ಕೃತಿಗಳು ಪ್ರಕಟವಾಗಿ ಜನಸಾಮನ್ಯರಿಗೆ ದೊರೆಯುವಂತಾಗಬೇಕು. ಆ ದಿಸೆಯಲ್ಲಿ ಆಗಬೇಕಾದ ಆಗಾಧಕಾರ್ಯ ಇನ್ನೂ ಸಾಕಷ್ಟು ಪ್ರಮಾಣದಲ್ಲಿದೆ.

ಹಸ್ತಪ್ರತಿಗಳು ನಮ್ಮ ಸಂಸ್ಕೃತಿಯ ನಿಧಿಯೂ ಹೌದು, ಪ್ರತಿನಿಧಿಯೂ ಹೌದು. ರಾಜ್ಯದ ಒಳ ಹೊರಗಿನ ಅನೇಕ ಮಠ-ಮಂದಿರಗಳಲ್ಲಿ ಮತ್ತು ಅಭ್ಯಾಸಪ್ರಿಯ ವ್ಯಕ್ತಿಗಳ ವಶದಲ್ಲಿರುವ ಇವು ಇಂದು ವಾಚನದೂರ ವಸ್ತುಗಳಾಗಿ ಉಪೇಕ್ಷೆಗೆ ಗುರಿಯಾಗಿವೆ. ಕೆಲವೆಡೆ ದೇವರ ಜಗಲಿಯ ಮೇಲೆ ಪೂಜೆಯ ವಸ್ತುಗಳಾಗಿ ನೀರು ಗಂಧಗಳ, ಪ್ರೋಕ್ಷಣೆಯಿಂದ ಕೊಳೆಯುತ್ತಿವೆ. ಇವುಗಳ ರಕ್ಷಣೆ ನಮ್ಮ ಪರಮ ಕರ್ತವ್ಯವಾಗಿದೆ. ಕನ್ನಡ ಹಸ್ತಪ್ರತಿಗಳನ್ನು ನೆಲದ ಮರೆಯ ನಿಧಾನದಂತೆ ಹೊರತೆಗೆದು ನೋಡಿದಂತೆಲ್ಲ ಹೊಸ-ಹೊಸ ಸಂಗತಿಗಳನ್ನು ತಿಳಿಯುತ್ತೇವೆ. ಧಾರ್ಮಿಕವಾಗಿ, ಸಾಮಾಜಿಕವಾಗಿ, ನೋಡಿದಾಗ ದಾರ್ಶನಿಕತೆಯತ್ತ ಅವುಗಳ ಒಲವು ಹೆಚ್ಚಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ಆದಿಯಿಂದಲೂ ಮಾನವ ತನ್ನ ಯೋಗಕ್ಷೇಮವನ್ನು ಪೂರೈಸಿಕೊಳ್ಳಲು ಪ್ರಕೃತಿ ದೇವತೆ, ಸೂರ್ಯ, ಚಂದ್ರಾದಿ ದೇವರುಗಳೆಲ್ಲರೂ ತಮ್ಮ ಪಾಲಿನ ಆದಿದೈವರೆಂದು ತಿಳಿದುಕೊಂಡು ಬೆಳಗಾಗುವುದರೊಳಗೆ ಎದ್ದು ಜಪ-ತಪಗಳನ್ನು ಮಾಡಿ ದೇವರ ನಾಮಸ್ಮರಣೆಗಳೊಂದಿಗೆ ಪೂಜಾ ವಿಧಾನಗಳನ್ನು ಅನುಸರಿಸಿಕೊಂಡು ತಮ್ಮ ದಿನನಿತ್ಯದ ಕಾರ್ಯಗಳಲ್ಲಿ ತೊಡಗುತ್ತಿದ್ದರು.

ಹಸ್ತಪ್ರತಿಗಳ ಒಡಲೊಳಗೆ ರಾಜಕೀಯ, ಸಾಮಾಜಿಕ, ಆರ್ಥಿಕ, ಸಂಗತಿಗಳು ಅಡಕವಾಗಿದ್ದು, ಸಾಂಸ್ಕೃತಿಕ ಕ್ಷೇತ್ರದಲ್ಲಿ ಬಹುಮುಖ್ಯವಾದ ಪಾತ್ರವಹಿಸುತ್ತಾ ಬಂದಿವೆ. ಹಸ್ತಪ್ರತಿಗಳು ಒಟ್ಟಾರೆ ಮಾನವನನ್ನು ಸುಸಂಸ್ಕೃತರನ್ನಾಗಿಸಿ ತಾನು ತನ್ನ ಸುತ್ತಲಿನ ಜನರಲ್ಲಿ ಒಂದಾಗಿ ಬೆರೆತು ಎಲ್ಲರೊಂದಿಗೆ ನಗುನಗುತ್ತ ವಿದ್ಯೆ, ವಿನಯ, ದಯೆ, ದಾಕ್ಷಿಣ್ಯ, ಧರ್ಮ, ನೀತಿ, ನಿಯಮ, ಸತ್ಯ, ಸಂಪ್ರದಾಯಗಳನ್ನು ಅನುಸರಿಸಿಕೊಂಡು ಸಹಬಾಳ್ವೆಯನ್ನು ನಡೆಸಲು ಪ್ರೇರಣೆಯನ್ನು ಒದಗಿಸುತ್ತವೆ. ಅಲ್ಲದೆ ಅಜ್ಞಾನದ ಅಂಧಕಾರದಲ್ಲಿದ್ದವರನ್ನು ಜ್ಞಾನದ ಬೆಳಕಿನೆಡೆಗೆ ಕೊಂಡೊಯ್ಯುತ್ತವೆ. 'ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ' ಈ ವಿಷಯಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯು ಸೇರಿದಂತೆ ಸುತ್ತಲಿನ ಪರಿಸರದ ಅಸಂಖ್ಯಾತ ಹಸ್ತಪ್ರತಿಗಳನ್ನು ತನ್ನ ಗರ್ಭದಲ್ಲಿ ಹುದುಗಿಸಿಕೊಂಡಿದೆಯಾದರೂ ಹಸ್ತಪ್ರತಿಗಳ ಪರಿವೀಕ್ಷಣೆ ಸಂಗ್ರಹಣೆ, ಸೂಚೀಕರಣದಂತಹ ಮಹತ್ತರ ಕಾರ್ಯಗಳು ತುಂಬ ನಡೆಯಬೇಕಾಗಿವೆ. ಒಂದು ಕಾಲಕ್ಕೆ ಜನಸಾಮಾನ್ಯರ ಬಳಿ ಇದ್ದಂತಹ ಹಸ್ತಪ್ರತಿಗಳು ಇಂದು ವಿದ್ವತ್ ವಲಯವನ್ನು ದಾಟಿ ಹೊರ ಬರುತ್ತಿಲ್ಲ. ಹಸ್ತಪ್ರತಿಗಳ ಬಗೆಗಿನ ಮಹತ್ವವನ್ನು ಇಂದು ಜನತೆಯ ಬಳಿಗೆ ಮತ್ತೆ ತರಬೇಕಾಗಿದೆ. ಚಿತ್ರದುರ್ಗ ಜಿಲ್ಲೆಯ ಹಸ್ತಪ್ರತಿಗಳ ಕುರಿತು ಯಾವುದೇ ಅಧ್ಯಯನಗಳು ಸಾಕಷ್ಟು ಪ್ರಮಾಣದಲ್ಲಿ ನಡೆದಿಲ್ಲದಿರುವುದರಿಂದ **"ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು : ಸಾಂಸ್ಕೃತಿಕ ಅನನ್ಯತೆ"** ಎಂಬ ವಿಷಯವನ್ನು ಆಯ್ದುಕೊಂಡಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟಿತ ಮತ್ತು ಅಪ್ರಕಟಿತ ಹಸ್ತಪ್ರತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಅಧ್ಯಯನದ ಉದ್ದೇಶ, ವಿಧಾನ :

ಹಸ್ತಪ್ರತಿ ಅಧ್ಯಯನ ಎಂಬುದು ಹಸ್ತಪ್ರತಿಗಳಲ್ಲಿರುವ ಅಪಾರ ವಿಷಯ ಸಾಮಗ್ರಿಗಳನ್ನು, ವಿಶೇಷ ಮಾಹಿತಿಗಳನ್ನು ಹೊರತೆಗೆದು, ಅವುಗಳನ್ನು ಆಧುನಿಕ ಚಿಂತನೆಗೆ ಒಳಪಡಿಸುವುದಾಗಿದೆ. ಅಲ್ಲದೆ ಪ್ರಾಚೀನ ನಂಬಿಕೆ, ವಿಚಾರ ಮೌಲ್ಯಗಳ ಬಗೆಗೆ ಗಮನ ಸೆಳೆಯುವುದು ಇಂದಿನ ಸಂದರ್ಭದಲ್ಲಿ ಪಾರಂಪರಿಕವಾದಂತಹ ಸಾಹಿತ್ಯ, ಸಂಸ್ಕೃತಿಯ ಮೌಲ್ಯಗಳನ್ನು ಮಹತ್ವಗಳನ್ನು ದಾಖಲಿಸುವುದು ಹಾಗೂ ಸಾಮಾಜಿಕ ವಿಧಿವಿಧಾನಗಳನ್ನು ಗ್ರಹಿಸುವುದು. ಹಾಗೂ ಇಂದಿನ ಸಮಾಜಕ್ಕೆ ಪರಿಚಯವಿಲ್ಲದ ಹಿಂದಿನವರ ಅಪೂರ್ವ ಜ್ಞಾನಕ್ಷೇತ್ರಗಳ ಮಾಹಿತಿಗಳನ್ನು ಸಂಗ್ರಹಿಸಿರುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಇದಕ್ಕೆ ಸಂಬಧಿಸಿದಂತೆ ಪ್ರಕಟಿತ ಮತ್ತು ಅಪ್ರಕಟಿತ ಹಸ್ತಪ್ರತಿಗಳನ್ನು ಅಧ್ಯಯನಕ್ಕೆ ಒಳಪಡಿಸಿರುವುದು ಈ ಮಹಾಪ್ರಬಂಧದ ಸದುದ್ದೇಶವಾಗಿದೆ.

ಹಸ್ತಪ್ರತಿಗಳ ಸಂಗ್ರಹಣೆ ತೀವ್ರಗತಿಯಲ್ಲಿ ಆಗಬೇಕಾದುದು ಅನಿವಾರ್ಯ. ಈ ಕಾರಣವಾಗಿ ಇದುವರೆಗೆ ಹಸ್ತಪ್ರತಿಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದ ಶಿಕ್ಷಣ ಸಂಸ್ಥೆ, ಧಾರ್ಮಿಕ ಸಂಸ್ಥೆ, ವ್ಯಕ್ತಿ ಒಡೆತನದಲ್ಲಿ ಇರುವ ಹಸ್ತಪ್ರತಿಗಳ ಅಧ್ಯಯನ ಮಾಡುವುದು ಹಾಗೂ ಕ್ಷೇತ್ರಕಾರ್ಯದ ಮೂಲಕ ಹಸ್ತಪ್ರತಿಗಳನ್ನು ಸಂಗ್ರಹಣೆ ಮಾಡುವ ಮತ್ತೊಂದು ಉದ್ದೇಶವನ್ನು ಈ ಪ್ರಬಂಧ

ಒಳಗೊಂಡಿದೆ. ಹಸ್ತಪ್ರತಿಗಳನ್ನು ಹೀಗೆ ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಪ್ರತಿಮಾಡಿ ಕೊಡುವ ಹೀಗೆ ತಲೆಮಾರಿನಿಂದ ತಲೆಮಾರಿಗೆ ಹಸ್ತಪ್ರತಿಗಳ ಅರುಹು-ಕುರುಹುಗಳನ್ನು ಕಾಯ್ದುಕೊಂಡು ಲಿಪಿಕಾರರು ಹಾಗೂ ಈ ಪರಂಪರೆಯ ಅಧ್ಯಯನವು ಬಹಳ ಮುಖ್ಯವಾದುದು. ಹಾಗೆಯೇ ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳ ಲಿಪಿಕಾರರನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ. ಹಸ್ತಪ್ರತಿಗಳನ್ನು ಲಿಪಿಮಾಡುವವರು ಅದರಲ್ಲಿಯೂ ವಿಶೇಷವಾಗಿ ಬಯಲಾಟದ ಹಸ್ತಪ್ರತಿಗಳನ್ನು ಪ್ರತಿಮಾಡುವವರು ತುಂಬಾ ಜನರು ಸಿಗುತ್ತಾರೆ. ಬಯಲಾಟದ ಹಸ್ತಪ್ರತಿಗಳನ್ನು ಪ್ರತಿಮಾಡಿ ಕೊಡುವ ವೃತ್ತಿಲಿಪಿಕಾರರಿಗಿಂತ ಗ್ರಾಮಾಂತರ ಪ್ರದೇಶದಲ್ಲಿ ಬಯಲಾಟಗಳ ಪ್ರದರ್ಶನಕ್ಕಾಗಿ ಬರೆದುಕೊಡುವ ಹವ್ಯಾಸಿ ಲಿಪಿಕಾರರನ್ನು ಹೆಚ್ಚಾಗಿ ಕಾಣಬಹುದು. ಹಸ್ತಪ್ರತಿಗಳ ಅಧ್ಯಯನದಲ್ಲಿ ಸಂಗ್ರಹಕಾರರ ಪಾತ್ರವೂ ಗುರುತರವಾದುದು. ಚಿತ್ರದುರ್ಗ ಪರಿಸರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಯಲಾಟದ ಹಸ್ತಪ್ರತಿಗಳು ಸಿಗುತ್ತವೆ. ಇಲ್ಲಿಯ ಪ್ರತಿಯೊಂದು ಹಳ್ಳಿಹಳ್ಳಿಗಳಲ್ಲಿ ಬಯಲಾಟದ ಹಸ್ತಪ್ರತಿಗಳನ್ನು ವಿಶೇಷವಾಗಿ ಕಾಣಬಹುದು. ಇಂತಹ ಹಸ್ತಪ್ರತಿಗಳ ಸಂಗ್ರಹಕಾರರು ಇಲ್ಲಿ ಮುಖ್ಯವಾಗುತ್ತಾರೆ. ಉದಾಹರಣೆಗೆ ಈ ಸಂಗ್ರಹಕಾರರಲ್ಲಿ ಬಯಲಾಟವನ್ನು ಕಲಿಸುವ ಮಾಸ್ತರರು, ಪಾತ್ರಧಾರಿಗಳೂ ಸೇರಿಕೊಳ್ಳುತ್ತಾರೆ. ಇದರಿಂದಾಗಿ ಈ ಪರಿಸರದಲ್ಲಿ ಹಸ್ತಪ್ರತಿಗಳು ದೊರೆಯಲು ಸಾಧ್ಯವಾಗಿದೆ. ಇಂತಹ ಸಂಗ್ರಹದ ನೆಲೆಗಳನ್ನು ಶೋಧಿಸಿ ಅಧ್ಯಯನಕ್ಕೆ ಒಳಪಡಿಸಿರುವುದು ಇದರ ಉದ್ದೇಶವಾಗಿದೆ.

ಒಟ್ಟಿನಲ್ಲಿ ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳನ್ನು ಕೇಂದ್ರವಾಗಿಟ್ಟುಕೊಂಡು ಅವುಗಳ ಸಂಗ್ರಹಣೆ ಮತ್ತು ಅಧ್ಯಯನದ ಸಾಧ್ಯತೆಗಳನ್ನು ನಿರೂಪಿಸಿರುವುದು ಈ ಮಹಾಪ್ರಬಂಧದ ಉದ್ದೇಶವಾಗಿದೆ.

ವಿಧಾನ :

ಚಿತ್ರದುರ್ಗ ಪರಿಸರದಲ್ಲಿ ಕಂಡುಬಂದ ಪ್ರಕಟಿತ ಮತ್ತು ಅಪ್ರಕಟಿತ ಹಸ್ತಪ್ರತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹಾಗೂ ಮೂಲ ಆಕರಗಳು ಮತ್ತು ಪೂರಕ ಆಕರಗಳನ್ನು ಸಹ ಬಳಸಿಕೊಳ್ಳಲಾಗಿದೆ. ಅಂದರೆ ಹಸ್ತಪ್ರತಿಗಳನ್ನು ಕುರಿತ ವಿದ್ವಾಂಸರ ಬರಹಗಳು, ಲೇಖನಗಳು, ಕೃತಿಗಳು, ಆಕರಗಳು ಮುಂದುವರೆದು ಈ ಅಧ್ಯಯನಕ್ಕೆ ಕ್ಷೇತ್ರಕಾರ್ಯವನ್ನು ಅವಲಂಬಿಸಲಾಗಿದೆ. ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳ ನೆಲೆಗಳನ್ನು ಹಾಗೂ ಅವುಗಳ ಉತ್ಪಾದನೆ, ಪ್ರಸಾರ, ಮತ್ತು ಪರಿಚಲನೆಗಳನ್ನು ಅವುಗಳ ಸೃಷ್ಟಿಗೆ ಕಾರಣರಾದ ಕವಿ, ಲಿಪಿಕಾರರನ್ನು ಶೋಧಿಸುವ ಕಾರಣವಾಗಿ ಕ್ಷೇತ್ರಕಾರ್ಯವನ್ನು ಚಿತ್ರದುರ್ಗ ಪರಿಸರದಲ್ಲಿ ವ್ಯಾಪಕವಾಗಿ ಕೈಗೊಂಡು ಅಧ್ಯಯನ ಮಾಡಲಾಗಿದೆ. ಹೀಗಾಗಿ ಈ ಮಹಾಪ್ರಬಂಧ ಕ್ಷೇತ್ರಾಧ್ಯಯನ ವಿಧಾನವನ್ನು ಒಳಗೊಂಡಿದೆ

ಅಧ್ಯಯನದ ವ್ಯಾಪ್ತಿ :

"ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ" ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದ್ದು, ಅದನ್ನು ನಿಖರವಾಗಿ ಗುರಿ ತಲುಪಿಸಲು ನಿರ್ದಿಷ್ಟವಾದ

ಚೌಕಟ್ಟು ಅಗತ್ಯವಾಗಿರುತ್ತದೆ. ಹಾಗಾದಾಗ ಮಾತ್ರ ಅಧ್ಯಯನವೊಂದು ನಿಶ್ಚಿತವಾದ ಫಲಿತವನ್ನು ಕಂಡುಕೊಳ್ಳಲು ಸಾಧ್ಯ. ಹೀಗಾಗಿ ಪ್ರಸ್ತುತ ಮಹಾಪ್ರಬಂಧದಲ್ಲಿ ಚಿತ್ರದುರ್ಗವನ್ನು ಕೇಂದ್ರವಾಗಿರಿಸಿಕೊಂಡು ಸುತ್ತಲಿನ ಹಳ್ಳಿಗಳಲ್ಲಿ ಕ್ಷೇತ್ರಕಾರ್ಯ ಮಾಡಿ ಮೇಲಿನ ಸಂಗತಿಗಳನ್ನು ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನ ಮಾಡಲಾಗಿದೆ. ಜೊತೆಗೆ ಈ ಪೂರ್ವದಲ್ಲಿ ನಡೆದ ಅಧ್ಯಯನಗಳನ್ನು ಗಮನಿಸಿ, ಪೂರಕ ಮಾಹಿತಿಯನ್ನು ಬಳಸಿಕೊಳ್ಳುವುದರ ಮೂಲಕ ಒಟ್ಟಾರೆ ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳ ಸಂಗ್ರಹಣೆಯ ಮುಖೇನ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ :

ಅಧ್ಯಾಯ ಒಂದು: ಇದರಲ್ಲಿ ಮಹಾಪ್ರಬಂಧದ ತಾತ್ವಿಕ ನಿಲುವನ್ನು ಸ್ಥೂಲವಾಗಿ ವಿವರಿಸಲಾಗಿದೆ. ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪ ಆ ಮೂಲಕ ಸಂಶೋಧನೆಗೆ ಬೇಕಾದ ಒಂದು ದಾರಿಯನ್ನು ರೂಪಿಸಿಕೊಳ್ಳಲಾಗಿದೆ.

ಅಧ್ಯಾಯ ಎರಡು: "ಚಿತ್ರದುರ್ಗ ಪರಿಸರದ ಹಸ್ತಪ್ರತಿ ನೆಲೆಗಳು" ಈ ಅಧ್ಯಾಯದಲ್ಲಿ ವ್ಯಕ್ತಿ ಒಡೆತನದ ಹಸ್ತಪ್ರತಿ ನೆಲೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದ್ದು, ಎಂಟು ಜನ ಸಂಪನ್ಮೂಲ ವ್ಯಕ್ತಿಗಳನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಭೇಟಿಮಾಡಿ ಕೆಲವು ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ಅವರ ಒಡೆತನದಲ್ಲಿರುವ ಹಸ್ತಪ್ರತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಚಿತ್ರದುರ್ಗ ಜಿಲ್ಲೆಯ ಹಳ್ಳಿಗಳಾದ ನಲಗೇತನಹಟ್ಟಿ ಬೋಸೇದೇವರಹಟ್ಟಿ, ನಾಯಕನಹಟ್ಟಿ, ಬೆಳಗಟ್ಟ, ಬಂಜಗೆರೆ, ಬೇಡರೆಡ್ಡಿಹಳ್ಳಿ, ಮಾರಮ್ಮನಹಳ್ಳಿ, ಘಟಪರ್ತಿ, ಹಿರಿಯೂರು, ಸೂರಮ್ಮನಹಳ್ಳಿ, ದೇವರರೆಡ್ಡಿಹಳ್ಳಿ, ಪೇಲೂರಹಟ್ಟಿ, ಕಲ್ಲೇನಹಳ್ಳಿ, ಹಿರೇಹಳ್ಳಿ, ಕಡಬನಕಟ್ಟೆ, ಮುತ್ತಿಗಾರನಹಳ್ಳಿ, ಬೇರನಹಳ್ಳಿ, ಮುಂತಾದ ಹಳ್ಳಿಗಳಲ್ಲಿ ಹಸ್ತಪ್ರತಿಗಳ ಸರ್ವೇಕ್ಷಣೆ ಉತ್ಪಾದನೆ ಮತ್ತು ಪ್ರಸಾರದಲ್ಲಿ ವ್ಯಕ್ತಿ ಒಡೆತನಗಳ ಪಾತ್ರ ಪ್ರಮುಖವಾಗಿರುವುದು ಕಂಡುಬರುತ್ತದೆ. ಅಲ್ಲದೆ ಸಾಂಸ್ಥಿಕ ಒಡೆತನದಲ್ಲಿ ಕಂಡುಬರುವ ಧಾರ್ಮಿಕ ಹಾಗೂ ಸರಕಾರಿ ಸಂಸ್ಥೆ ನೆಲೆಯಲ್ಲಿಯೂ ಚರ್ಚಿಸಲಾಗಿದೆ.

ಅಧ್ಯಾಯ ಮೂರು: "ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಚಾರಿತ್ರಿಕ ಅನನ್ಯತೆ" ಎಂಬುದಾಗಿದ್ದು ಚಿತ್ರದುರ್ಗ ಪರಿಸರದಲ್ಲಿ ಆಗಿ ಹೋದಂತಹ ರಾಜಮಹಾರಾಜರ ಚರಿತ್ರೆಯನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ. ಇಲ್ಲಿನ ಚಕ್ರವರ್ತಿಗಳು, ರಾಜರು ಅಥವಾ ರಾಜ ಸಂಬಂಧಿಕರು ಬರೆದಿರುವಂತಹ ಗ್ರಂಥಗಳು ಅವರು ಜೀವಿಸಿದ್ದಂತಹ ಕಾಲವನ್ನು ಚರಿತ್ರೆಯ ಮೂಲಕವಾಗಿ ತಿಳಿದುಕೊಳ್ಳಬಹುದಾಗಿದೆ. ಈ ಎಲ್ಲ ಅಂಶಗಳನ್ನಿಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕು: "ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಮಾಜಿಕ ಅನನ್ಯತೆ" ಎಂಬ ಈ ಅಧ್ಯಾಯದಲ್ಲಿ ಸಾಮಾಜಿಕ ಅಂಶಗಳ ಮೂಲಕ ಒಂದು ಸಮಾಜದ ಜನರ ಸಂಸ್ಕೃತಿಯನ್ನು ಬಿಂಬಿಸಲಾಗಿದೆ. ಇಲ್ಲಿ ಹಸ್ತಪ್ರತಿಗಳ ರಚನೆ ಮತ್ತು ಪ್ರತಿಮಾಡುವ ಕಾರ್ಯವು ಮಠಗಳು ಮತ್ತು

ಬಸದಿಗಳ ಆಶ್ರಯದಲ್ಲಿ ನಡೆದು ಬಂದಿರುವುದನ್ನು ತಿಳಿಸಲಾಗಿದೆ. ಇವು ಅಲ್ಲಿಯ ಜನರ ಜೀವನ, ಬದುಕಿನ ರೀತಿ-ನೀತಿಯನ್ನು ಪ್ರತಿಬಿಂಬಿಸುವ ಜೊತೆಗೆ ವೃತ್ತಿಯ ಮೂಲಕ ಸ್ಥಾನಮಾನ ಅಭಿವ್ಯಕ್ತಿಸಿರುವುದು ಗೋಚರಿಸುತ್ತದೆ. ಹಾಗೆಯೇ ವ್ಯಕ್ತಿನಾಮ, ಸ್ಥಳನಾಮ, ಕುಲನಾಮಗಳ ಮೂಲಕವಾಗಿ ಆಯಾವೃತ್ತಿ ಸಂಬಂಧವನ್ನು ಹಾಗೂ ಸಾಮಾಜಿಕ ಬಾಂಧವ್ಯವನ್ನು ಗುರುತಿಸುವಂತಹ ಸಂಗತಿಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಐದು: "ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಹಿತ್ಯಿಕ ಅನನ್ಯತೆ" ಎಂಬುದಾಗಿದೆ. ಈ ಅಧ್ಯಾಯದಲ್ಲಿ ಇಲ್ಲಿನ ಪ್ರಮುಖ ಕವಿಗಳನು ಕವಿಗಳ ಕಾಲವನ್ನು ಸಾಹಿತ್ಯ ಕೃತಿಗಳ ಮೂಲಕವಾಗಿ ತಿಳಿದುಕೊಳ್ಳಬಹುದು. ಈ ಸಾಹಿತ್ಯ ಕೃತಿಗಳಲ್ಲಿ ವಚನಕ್ಕೆ ಸಂಬಂಧಿಸಿದ ಕೃತಿಗಳು, ರಗಳೆಗೆ ಸಂಬಂಧಿಸಿದ ಕೃತಿಗಳು, ಚರಿತ್ರೆಗೆ ಸಂಬಂಧಿಸಿದ ಕೃತಿಗಳು ತಾತ್ವಿಕ ಕೃತಿಗಳೆಂದು ವಿಭಾಗಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಆರು: "ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಧಾರ್ಮಿಕ ಅನನ್ಯತೆ" ಈ ಅಧ್ಯಾಯದಲ್ಲಿ ಇಲ್ಲಿ ಉಲ್ಲೇಖಿಸಲ್ಪಟ್ಟ ಮಠ, ಬಸದಿಗಳ ಹೆಸರುಗಳು ಆ ಕಾಲದ ಧಾರ್ಮಿಕ ವಿಚಾರಗಳನ್ನು ಪುನರ್‌ರಚಿಸಲಿಕ್ಕೆ ನೆರವಾಗುತ್ತವೆ. ಇದರಿಂದ ಭಿನ್ನ ಭಿನ್ನ ಧರ್ಮಗಳು ಭಿನ್ನ ಭಿನ್ನ ಆಚರಣೆಗಳನ್ನು ಹೊಂದಿರುವುದನ್ನು ನೋಡಬಹುದು. ಇದರಿಂದ ಗ್ರಂಥರಚನೆ ಮತ್ತು ಪ್ರತಿಮಾಡುವಲ್ಲಿ ಭಿನ್ನ ಮನೋಭಾವಗಳನ್ನು ಕಾಣಬಹುದು. ಗ್ರಂಥದ ಆರಂಭ ಹಾಗೂ ಕೊನೆಯ ಹಸ್ತಪ್ರತಿ ಪುಷ್ಪಿಕೆಗಳಲ್ಲಿ ಸ್ಮರಿಸುವಂತಹ ದೇವತಾ ಸ್ತುತಿಗಳು, ದೇವಸ್ಥಾನಗಳು, ಅವರ ನಂಬಿಕೆಗಳು, ಉಡುಗೆ-ತೊಡುಗೆ ಹೀಗೆ ಇವುಗಳ ಅಧ್ಯಯನದಿಂದ ಧಾರ್ಮಿಕ ವಿಶಿಷ್ಟತೆಗಳ ಅನನ್ಯತೆಯನ್ನು ಚರ್ಚಿಸಲಾಗಿದೆ.

ಅಧ್ಯಾಯ ಏಳು: "ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳ ಪರಿಚಲನೆ" ಎಂಬುದಾಗಿದ್ದು, ಈ ಅಧ್ಯಾಯದಲ್ಲಿ ಹಸ್ತಪ್ರತಿಗಳು ಹೇಗೆ ಪರಿಚಲನೆಗೊಳ್ಳುತ್ತ ಬಂದಿವೆ? ಅವು ಯಾವ ಯಾವ ಕಡೆಗಳಲ್ಲಿ ಪರಿಚಲನೆಗೊಳ್ಳುತ್ತ ಬಂದವು ಎಂಬುದನ್ನು ನೋಡುವುದಾದರೆ ಹೆಚ್ಚಿನ ಹಸ್ತಪ್ರತಿಗಳು ಮಠ ಮಂದಿರ, ಬಸದಿ, ಭವನ, ಅರಮನೆ-ಗುರುಮನೆ ಮುಂತಾದ ಕಡೆ ಸಂಗ್ರಹವಾದಂತೆ ಆಸಕ್ತರ ಮನೆಗಳಲ್ಲೂ ಸೇರಿದವು. ನಮ್ಮ ಆಧುನಿಕ ಸಂಸ್ಕೃತಿಯಿಂದ ಕಾವ್ಯವಾಚನ, ಗಮಕವಾಚನಗಳು ನಿಂತುಹೋಗಿ ಮುದ್ರಣ ಕಲೆ ಬಳಕೆಯಾದ ನಂತರ ಹಳೆಯ ತಲೆಮಾರಿನ ಜನ ನಶಿಸುತ್ತಿದ್ದಂತೆ ಹಳೆಯ ಹಸ್ತಪ್ರತಿಗಳನ್ನು ಓದುವವರೂ ನಶಿಸಿ ಅಲ್ಲಲ್ಲೇ ಉಳಿದವು. ಮಠ-ಮಂದಿರಗಳಂಥ ಕಡೆ ಸೇರಿದವುಗಳು ಬೆಳಕು ಕಂಡವು. ವ್ಯಕ್ತಿಗಳ ಕಡೆ ಇದ್ದವು ಅಲ್ಲೇ ಕತ್ತಲ್ಲಲೇ ಉಳಿದವು. ಇವುಗಳನ್ನು ಸಂಗ್ರಹಿಸುವ ಕಾರ್ಯವು ಇಂದಿನ ದಿನದಲ್ಲಿ ಬಹಳ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮೆಕೆಂಜಿ ಮೊದಲ್ಗೊಂಡು ಇಂದಿನವರೆಗೂ ನೂರಾರು ಜನ ವಿದ್ವಾಂಸರು ಸಂಸ್ಥೆಗಳ ಪರವಾಗಿಯೂ ವೈಯಕ್ತಿಕವಾಗಿಯು ಸಾವಿರ ಸಾವಿರ ಸಂಖ್ಯೆಯಲ್ಲಿ ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಹಸ್ತಪ್ರತಿಗಳ ರಚನೆಯಲ್ಲಿ ಕವಿಗಳು ಹಾಗೆಯೇ ಅವುಗಳ ಪರಿಚಲನೆಯಲ್ಲಿ

ನೂರಾರು ಲಿಪಿಕಾರರು ಅವುಗಳ ಸಂಗ್ರಹದಲ್ಲಿ ಹತ್ತಾರು ಜನ ವಿದ್ವಾಂಸರು ದುಡಿದಿರುವುದನ್ನು ದಾಖಲಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಹಸ್ತಪ್ರತಿಗಳ ರಚನೆಯ ಸಂದರ್ಭದ ದುಡಿಮೆಯಲ್ಲಿ ಭಾಗವಹಿಸಿದ ಕವಿ, ಲಿಪಿಕಾರ, ಸಂಗ್ರಹಕಾರರೆಂದು ಮೂರು ವಲಯದ ಸದಸ್ಯರನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹೀಗಾಗಿ ಹಸ್ತಪ್ರತಿಗಳನ್ನು ಬರೆದ ಕವಿಗಳು ಪ್ರತಿಮಾಡಿದ ಪ್ರತಿಕಾರರು, ಸಂಗ್ರಹಕಾರರು ಈ ಎಲ್ಲ ಅಂಶಗಳನ್ನು ಅಧ್ಯಯ ಏಳರಲ್ಲಿ ಚರ್ಚಿಸಲಾಗಿದೆ. ನನ್ನ ಅಧ್ಯಯನದ ಮಿತಿಯನ್ನು ಹೇಳುವುದಾದರೆ ಹಸ್ತಪ್ರತಿಗಳನ್ನು ಬರೆದ ಕವಿಗಳಾರು? ಪ್ರತಿಕಾರರಾರು? ಎಂಬುದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಇದಕ್ಕೆ ಕಾರಣ ಲಿಪಿಕಾರರೆಲ್ಲ ಕವಿಗಳಂತೆ ಬರೆದುಕೊಂಡ ಉದಾಹರಣೆಗಳಿವೆ. ಹಸ್ತಪ್ರತಿಗಳ ಪರಿಚಲನೆಯಲ್ಲಿ ಸಂಗ್ರಹಕಾರರ ಶ್ರಮ ಸಾರ್ಥಕವಾದದ್ದು. ಹಾಗೆ ನೋಡಿದರೆ ಬಯಲಾಟದ ಉಳುವಿಗೆ ಇವರೇ ಜೀವಾಳ. ಸಂಗ್ರಹಕಾರರು ಬಯಲಾಟದ ಹಸ್ತಪ್ರತಿಗಳನ್ನು ಸಂಗ್ರಹಿಸಿರುವುದು ಆಟ ಕಲಿಸುವ ಮಾಸ್ತರರ ರೂಪದಲ್ಲಿ, ನಿರ್ದೇಶಕರ ರೂಪದಲ್ಲಿ ಪಾತ್ರಧಾರಿಗಳ ರೂಪದಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಈ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಎಂಟು: ಸಮಾರೋಪ ಎಂಬುದು ಎಂಟನೇ ಅಧ್ಯಾಯವಾಗಿದ್ದು ಇದರಲ್ಲಿ ನನ್ನ ಸಂಶೋಧನೆಯಿಂದ ಕಂಡುಕೊಂಡ ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ. ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳನ್ನು ನೀಡಲಾಗಿದೆ.

ಅಧ್ಯಾಯ : ೨
ಚಿತ್ರದುರ್ಗ ಪರಿಸರದ ಹಸ್ತಪ್ರತಿ ನೆಲೆಗಳು

ಅಧ್ಯಾಯ–೨
ಚಿತ್ರದುರ್ಗ ಪರಿಸರದ ಹಸ್ತಪ್ರತಿ ನೆಲೆಗಳು

ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿ ಚಿತ್ರದುರ್ಗ ಜಿಲ್ಲೆ ಅನೇಕ ಕಾರಣಗಳಿಂದ ಮಹತ್ವದ್ದು. ಅದರಲ್ಲೂ ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ತುಂಬಾ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಚಿತ್ರದುರ್ಗ ೧೮೮೪ರಲ್ಲಿ ಪ್ರತ್ಯೇಕ ಜಿಲ್ಲೆಯೆಂದು ಗುರುತಿಸಿಕೊಂಡು ಅಸ್ತಿತ್ವಕ್ಕೆ ಬಂತು. ಕಂದಾಯ ವಿಭಾಗಕ್ಕೆ ಸಂಬಂಧಿಸಿದಂತೆ ಮೊದಲು ಒಂಭತ್ತು ತಾಲೂಕು ಹಾಗೂ ಎರಡು ಉಪವಿಭಾಗಗಳಾಗಿ ವಿಂಗಡನೆಯಾಗಿತ್ತು. ದಾವಣಗೆರೆ, ಹರಿಹರ, ಜಗಳೂರು ತಾಲೂಕುಗಳು ದಾವಣಗೆರೆ ಉಪವಿಭಾಗಕ್ಕೂ ಚಿತ್ರದುರ್ಗ, ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು, ಹೊಳಲ್ಕೆರೆ ಮತ್ತು ಹೊಸದುರ್ಗ ತಾಲೂಕುಗಳು ಚಿತ್ರದುರ್ಗ ಉಪವಿಭಾಗಕ್ಕೂ ಸೇರಿದ್ದವು. ೧೯೯೭–೯೮ರಲ್ಲಿ ದಾವಣಗೆರೆ ಪ್ರತ್ಯೇಕ ಜಿಲ್ಲೆಯಾಗಿ ಗುರುತಿಸಿಕೊಂಡು ದಾವಣಗೆರೆ, ಹರಿಹರ, ಜಗಳೂರು ತಾಲೂಕುಗಳು ಅಲ್ಲೇ ಉಳಿದವು. ಇನ್ನುಳಿದ ಆರು ತಾಲೂಕುಗಳು ಚಿತ್ರದುರ್ಗ ವ್ಯಾಪ್ತಿಯಲ್ಲಿ ಬರುತ್ತವೆ. ಚಿತ್ರದುರ್ಗ ಆ ತಾಲೂಕುಗಳನ್ನೇ ಕೇಂದ್ರಮಾಡಿಕೊಂಡು ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ. ಚಿತ್ರದುರ್ಗ ಜಿಲ್ಲೆಯು ಸಾವಿರಾರು ಸಂಖ್ಯೆಯಲ್ಲಿ ಹಸ್ತಪ್ರತಿಗಳನ್ನು ತನ್ನ ಒಡಲೊಳಗೆ ಹುದುಗಿಸಿಕೊಂಡಿದೆ. ಈ ಹಸ್ತಪ್ರತಿಗಳು ನಮ್ಮ ಸಂಸ್ಕೃತಿಯನು ಕಟ್ಟಿಕೊಡುವಲ್ಲಿ ಪ್ರಮುಖವಾದ ಪಾತ್ರವಹಿಸಿವೆ. ಇಂದು ಮಠ–ಮಂದಿರಗಳಲ್ಲಿ ಮತ್ತು ವ್ಯಕ್ತಿಗಳ ವಶದಲ್ಲಿರುವುದನ್ನು ನಾವು ಕಾಣಬಹುದು. ಹಸ್ತಪ್ರತಿಗಳು ಕೆಲವೆಡೆ ದೇವರ ಜಗಲಿಯ ಮೇಲೆ ಪೂಜಾ ವಸ್ತುಗಳಾಗಿ ನೀರು ಗಂಧಗಳಿಂದ ನಶಿಸುತ್ತಿವೆ. ಹಾಗಾಗಿ ಇವುಗಳ ಪೋಷಣೆಯನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ. ಹಸ್ತಪ್ರತಿಗಳನ್ನು ಮತ್ತೆ ಮತ್ತೆ ನೋಡಿದಂತೆಲ್ಲ ಹೊಸಹೊಸ ವಿಚಾರಗಳು ತಳಿಯುತ್ತವೆ. ಧಾರ್ಮಿಕವಾಗಿ,

[illegible]

[illegible]

[illegible]

ಸಾಮಾಜಿಕವಾಗಿ ನೋಡಿದಾಗ ದಾರ್ಶನಿಕತೆಯತ್ತ ಅವುಗಳ ಒಲವು ಹೆಚ್ಚುಗುತ್ತದೆ. ಹಸ್ತಪ್ರತಿಗಳ ಒಡಲೊಳಗೆ ಅನೇಕ ಸಂಗತಿಗಳು ಅಡಕವಾಗಿವೆ. ಕನ್ನಡ ಹಸ್ತಪ್ರತಿಗಳು ಸಂಸ್ಕೃತಿಕ ಕ್ಷೇತ್ರದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತ ಬಂದಿರುವುದನು ನೋಡಬಹುದು. ಒಟ್ಟಾರೆಯಾಗಿ ಮಾನವರನ್ನು ಬುದ್ಧಿವಂತರನ್ನಾಗಿಸಿ ತನ್ನ ಸುತ್ತಮುಲಿನ ಜನರಲ್ಲಿ ಒಂದಾಗಿಸಿಕೊಂಡು ಎಲ್ಲರೊಂದಿಗೆ ಸುಖ–ಸಂತೋಷದಿಂದ ವಿದ್ಯೆ, ವಿನಯ, ದಯೆ, ದಾಕ್ಷಿಣ್ಯತೆ, ನೀತಿ–ನಿಯಮ, ಸತ್ಯ, ಸಂಪ್ರದಾಯಗಳನ್ನು ಅನುಸರಿಸಿಕೊಂಡು ಉತ್ತಮ ಜೀವನವನ್ನು ನಡೆಸಲು ಪ್ರೇರಣೆಯನ್ನು ಒದಗಿಸುತ್ತವೆ.

ಧಾರ್ಮಿಕ ಸಂಸ್ಥೆಗಳಾದ ನೂರಾರು ಮಠ–ಮಾನ್ಯಗಳು ಮತ್ತು ಸ್ವಹಿತಾಶಕ್ತಿಯಿಂದ ಸಂಗ್ರಹಿಸಿಟ್ಟು ಕೊಂಡ ವೈಯಕ್ತಿಕ ಒಡೆತನಗಳಲ್ಲಿ ಹಸ್ತಪ್ರತಿಗಳು ಸಂಗ್ರಹಗೊಂಡು ಬಂದಿರುವುದನ್ನು ಮರೆಯುವಂತಿಲ್ಲ. ಹೀಗಿದ್ದೂ ಪ್ರತಿಯೊಂದು ಹಳ್ಳಿಯ ಸಂಸಾರಸ್ಥ ಮಠಸ್ಥರ ಕುಟುಂಬಗಳಲ್ಲಿ ಪ್ರತಿಷ್ಠಿತ ಮನೆತನಗಳಾದ ದೇಸಾಯಿ, ಪುರಾಣಿಕ, ಕುಲಕರ್ಣಿ, ಪಾಟೀಲರ ಒಡೆತನದಲ್ಲಿ ಈ ಸಂಪತ್ತು ನಿಗೂಢವಾಗಿ ಉಳಿದುಕೊಂಡಿರುವುದನ್ನು ಕಾಣಬಹುದು. ಪ್ರಮುಖವಾಗಿ ಎರಡು ರೀತಿಯ ಹಸ್ತಪ್ರತಿ ಒಡೆತನಗಳು ಕಂಡುಬರುತ್ತವೆ. ಅವುಗಳೆಂದರೆ ೧. ವ್ಯಕ್ತಿ ಒಡೆತನದ ಹಸ್ತಪ್ರತಿಗಳು ೨. ಸಾಂಸ್ಥಿಕ ಒಡೆತನದ ಹಸ್ತಪ್ರತಿಗಳು.

ಹಸ್ತಪ್ರತಿಗಳ ಒಡೆತನಗಳ ಬಗ್ಗೆ ತಿಳಿದುಕೊಳ್ಳುವ ಮೊದಲು ಇದುವರೆಗೂ ಚಿತ್ರದುರ್ಗ ಪರಿಸರದಲ್ಲಿ ನಡೆದಿರುವ ಅಧ್ಯಯನಗಳ ಸಮೀಕ್ಷೆಯ ಸ್ಥೂಲ ಪರಿಚಯವನ್ನು ನೋಡೋಣ. ಪ್ರಾಚೀನ ಜ್ಞಾನ ಸಾಮಗ್ರಿಗಳಲ್ಲಿ ಹಸ್ತಪ್ರತಿಗಳಿಂದ ಕವಿ ಲಿಪಿಕಾರರ ಚರಿತ್ರೆಯನ್ನು ಕನ್ನಡ ನಾಡು, ನುಡಿ, ಸಂಸ್ಕೃತಿ, ಕನ್ನಡಿಗರ ಧರ್ಮಾಭಿಮಾನ ವಿದ್ಯಾರ್ಜನೆಗೆ ನೀಡಿದ ಪ್ರೋತ್ಸಾಹ, ಗ್ರಂಥಗಳ ಪ್ರತೀಕರಣದ ಹಿಂದಿನ ಉದ್ದೇಶ ಕನ್ನಡಿಗರ ಸಂಸ್ಕೃತಿಯನ್ನು ಕಟ್ಟಿಕೊಡುವ ಬಹುಮುಖಿ ಆಯಾಮದ ಸಾಂಸ್ಕೃತಿಕ ಜೀವನೊಲವನ್ನು ಒಳಗೊಂಡ ಮಹತ್ವದ ಜ್ಞಾನ ಕೇಂದ್ರಗಳಾಗಿವೆ. ಹೀಗಾಗಿ ಹಸ್ತಪ್ರತಿಗಳ ಕುರಿತು ವಿದ್ವಾಂಸರು ಹಸ್ತಪ್ರತಿಗಳ ಸಂಗ್ರಹ, ಸಂಪಾದನೆ, ಪ್ರತೀಕರಣ, ಸೂಚೀಕರಣ, ವರ್ಗೀಕರಣ ಲಿಪಿಕಾರ ಪ್ರಶಸ್ತಿಗಳು ಹಸ್ತಪ್ರತಿಗಳ ಕುರಿತು ಬೆಳಕು ಚೆಲ್ಲಲು ಹಲವು ಗ್ರಂಥಗಳು ಹಾಗೂ ಲೇಖನಗಳು ರಚನೆಗೊಂಡವು.

ಚಿತ್ರದುರ್ಗದ ಹಸ್ತಪ್ರತಿ ಸಂಬಂಧಿತ ಚಟುವಟಿಕೆಗಳನ್ನು ಗಮನಿಸಿದರೆ ಹಸ್ತಪ್ರತಿಗಳ ಸಂರಕ್ಷಣೆಗಿಂತ ಸಂಪಾದನಾಶಾಸ್ತ್ರಕ್ಕೆ ಹೆಚ್ಚು ಒಲವು ಇರುವುದು ಕಂಡುಬರುತ್ತದೆ. ಪ್ರತಿಗಳ ಸಂರಕ್ಷಣೆ ಹಾಗೂ ಶ್ರೇಷ್ಠತೆಯ ನೆಲೆಯಲ್ಲಿ ನಡೆದ ಅಧ್ಯಯನಗಳು ಹಸ್ತಪ್ರತಿಗಳ ಸಂರಕ್ಷಣೆ ಕುರಿತಂತೆ ನಡೆದಿಲ್ಲ. ಪ್ರಾಚೀನ ಜ್ಞಾನ ಸಾಮಾಗ್ರಿಯಲ್ಲಿ ಒಂದಾದ ಹಸ್ತಪ್ರತಿಗಳ ಆಂತರಿಕ ಮತ್ತು ಬಾಹ್ಯ ಸಂರಕ್ಷಣೆಯಲ್ಲಿಯೂ ಜನಸಾಮಾನ್ಯರಿಗೂ ಅವಿನಾಭಾವ ಸಂಬಂಧವಿದೆ. ಪ್ರಸ್ತುತ ಮಹಾಪ್ರಬಂಧದ ವಿಷಯಕ್ಕೆ ಅನುಗುಣವಾಗಿ ಈ ನಿಟ್ಟಿನಲ್ಲಿ ಪ್ರಕಟಗೊಂಡ ಗ್ರಂಥಗಳು, ಲೇಖನಗಳ ಕೆಲವನ್ನು ಇಲ್ಲಿ ಹೆಸರಿಸಲಾಗಿದೆ.

ಗ್ರಂಥಗಳು

೧೯೨೪ರಲ್ಲಿ ಬಂದ ಪೂರ್ಣ ಪ್ರಮಾಣದ ಮೊದಲ ಕೃತಿ ಎಂ. ಎಸ್.ಪುಟ್ಟಣ್ಣನವರು ಬರೆದ 'ಚಿತ್ರದುರ್ಗದ ಪಾಳೆಯಗಾರರು'. ಅದನ್ನು ಬರೆಯುವಾಗ ಕೆಲವು ಹಸ್ತಪ್ರತಿ ಆಕರಗಳನ್ನು ಸಂಗ್ರಹಿಸಿ, ಈ ಪಾಳೆಯಗಾರರ ಆಳ್ವಿಕೆಯ ಆರಂಭದಿಂದ ಹಿಡಿದು ಅಂತ್ಯದವರೆಗಿನ ಚರಿತ್ರೆಯನ್ನು ಕಟ್ಟಿಕೊಡಲು ಯತ್ನಿಸಿದ್ದಾರೆ. ಆ ಆಕರಗಳು ಯಾವುವು ಎಂಬ ವಿವರವನ್ನು ಪೀಠಿಕೆಯಲ್ಲಿ ಹೇಳಿದ್ದಾರೆ.

೧. ಚಿತ್ರದುರ್ಗ ತಾಲ್ಲೂಕು ಸುಲ್ತಾನಿಪುರದ ಶಾನುಭೋಗ ಚಿನ್ನದ ಮನೆ ರಾಮಣ್ಣನವರಲ್ಲಿದ್ದ ಓಲೆ ಪ್ರತಿ.

೨. ಪಾಳೆಗಾರರ ವಂಶಸ್ಥರಾದ ಬಸಪ್ಪನಾಯಕರೆಂಬುವರು ಬರೆಯಿಸಿಕೊಟ್ಟ ಬಖೈರಿನ ಪ್ರತಿ

೩. ಕಡೇ ಮದಕರಿನಾಯಕನ ಚರಿತ್ರೆಯ ಪ್ರತಿ

ಎಂ.ಎಸ್.ಪುಟ್ಟಣ್ಣನವರು ಈ ಮೇಲಿನ ಹಸ್ತಪ್ರತಿ ಆಕರಗಳನ್ನು ಬಳಸಿಕೊಂಡು ಪುಸ್ತಕ ರಚಿಸಿದರಾದರೂ ಅವುಗಳನ್ನು ಸಂಪಾದಿಸಿ ಅವುಗಳ ಯಥಾವತ್ತು ಪಾಠ ಪ್ರಕಟಿಸಿಲ್ಲ.

ಚಿತ್ರದುರ್ಗದ ಬಖೈರು : ಹುಲ್ಲೂರು ಶ್ರೀನಿವಾಸ ಜೋಯಿಸ, ಪ್ರಕಾಶನ–ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲ, ಮೂರನೆಯ ಹಂತ, ಮೈಸೂರು ೨೦೦೯,

"ಚಿತ್ರದುರ್ಗದ ಬಖೈರು ಎಂಬ ಅಮೂಲ್ಯ ಕೃತಿಯ ಸಂಪಾದಕರು ಹುಲ್ಲೂರು ಶ್ರೀನಿವಾಸ ಜೋಯಿಸರು. ಈ ಕೃತಿಯನ್ನು 'ತಾಯಿನಾಡು' ಪತ್ರಿಕೆಯ ಮೂಲಕ ಮೊದಲು ಬೆಳಕಿಗೆ ತಂದರು. ಅದೇ ಊರಿನವರೂ, ಕನ್ನಡ ವಿದ್ವಾಂಸರೂ ಆದ ತ.ಸು. ಶ್ಯಾಮರಾಯರು ಪುಸ್ತಕ ರೂಪದಲ್ಲಿ ಪ್ರಕಟಿಸಿ ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ.

ಚಿತ್ರದುರ್ಗದ ಬಖೈರು ಆ ಊರಿನ ಕಡೆಯ ಕಾಲದ ಸ್ಥಿತಿಗತಿಗಳನ್ನು ನಮಗೆ ಪರಿಚಯ ಮಾಡಿಕೊಡುತ್ತದೆ. ಹಾಗೆಯೇ ಆ ಊರಿನ ಪಾಳೆಯಗಾರರ ಪೂರ್ವ ಚರಿತ್ರೆಯನ್ನು ತಿಳಿಸುತ್ತದೆ. ಹೈದರನಿಗೂ ರಾಜ ಮದಕರಿ ನಾಯಕನಿಗೂ ನಡೆದ ಕದನವೇ ಇದರ ಮುಖ್ಯ ವಿಷಯವಾಗಿದೆ. ಹೈದರನು ಮದಕರಿ ನಾಯಕನನ್ನು ತನ್ನ ಸ್ವಾಧೀನಪಡಿಸಿಕೊಳ್ಳಬೇಕೆಂದು ಹೂಡಿದ ಉಪಾಯಗಳನ್ನೆಲ್ಲಾ ವಿವರಿಸಲಾಗಿದೆ. ಈ ಬಖೈರಿನ ಮೂಲಕ ಅಂದು ನಡೆದಿರಬಹುದಾದ ಕೆಲವು ಘಟನೆಗಳ ವಿವರಗಳು ನಮಗೆ ಲಭಿಸುತ್ತವೆ. ಈ ಬರಹವು ಗದ್ಯ ರೂಪದಲ್ಲಿದ್ದು, ತನ್ನದೇ ಆದ ವಿಶಿಷ್ಟ ಲಕ್ಷಣವನ್ನು ಒಳಗೊಂಡಿದೆ. ಕೇವಲ ವ್ಯವಹಾರಿಕ ದೃಷ್ಟಿಯಿಂದ ಬರೆದಿರುವ ಈ ರಚನೆಯಲ್ಲಿ ಅಂದು ಆಡಳಿತ ಕ್ಷೇತ್ರದಲ್ಲಿ ಬಳಕೆಯಲ್ಲಿದ್ದ ಅನೇಕ ಪಾರಸಿ ಮತ್ತು ಉರ್ದು ಶಬ್ದಗಳು ಧಾರಾಳವಾಗಿ ಕಂಡುಬರುತ್ತವೆ. ಆಗಿನ ಕಾಲದ ಯುದ್ಧದ ವೈಖರಿ ಮತ್ತು ಅದಕ್ಕೆ ಸಂಬಂಧಿಸಿದ ವಿವರಗಳು ಈ ಕೃತಿಯಲ್ಲಿವೆ.

ಚಿತ್ರದುರ್ಗ ಪಾಳೆಗಾರರ ದಾಖಲೆಗಳು : ಬಿ. ರಾಜಶೇಖರಪ್ಪ ೨೦೦೭ರಲ್ಲಿ ಈ ಕೃತಿ ಚಿತ್ರದುರ್ಗ ಪಾಳೆಗಾರರ ವಂಶಾವಳಿ ಹಾಗೂ ದೊಡ್ಡ ಮದಕರಿ ನಾಯಕನ ಕೈಫಿಯತ್ತು ಎಂಬೆರಡು ದಾಖಲೆಗಳನ್ನು ಒಳಗೊಂಡಿದೆ. ಈ ಮನೆತನದ ಮೊದಲ ದೊರೆ ತಿಮ್ಮಣ್ಣ ನಾಯಕನಿಂದ ಹಿಡಿದು ಕೊನೆಯ ಮದಕರಿ ನಾಯಕನವರೆಗಿನ ಇತಿಹಾಸದ ವಂಶಾವಳಿ ನಿರೂಪಿಸುತ್ತದೆ. ಕೈಫಿಯತ್ತು ಇನ್ನೂ ಮುಂದುವರೆದು ಕೊನೆಯ ಮದಕರಿ ನಾಯಕನ ದಾಯಾದಿ ಸಂಬಂಧಿಯಾದ ದೊಡ್ಡ ಮದಕರಿ ನಾಯಕನವರೆಗಿನ ಚರಿತ್ರೆಯನ್ನು ವಿವರಿಸುತ್ತದೆ. ಹೀಗಾಗಿ ಇವು ಪರಸ್ಪರ ಪೂರಕ ಆಕರಗಳೆನಿಸುತ್ತವೆ. ಚಿತ್ರದುರ್ಗದ ಇತಿಹಾಸ ಸಂಸ್ಕೃತಿ ಬಗೆಗೆ ವಿಶೇಷ ಸಂಶೋಧನೆ ಮಾಡಿದ ಬಿ. ರಾಜಶೇಖರಪ್ಪ ಅವರು ಈ ಕೃತಿಯನ್ನು ನಾಲ್ಕು (ವಂಶಾವಳಿ-೩ ಮತ್ತು ಕೈಫಿಯತ್ತುಗೆ-೧) ಕಾಗದರೂಪದ ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ. ಪ್ರಸ್ತಾವನೆಯಲ್ಲಿ ಚಿತ್ರದುರ್ಗ ಪಾಳೆಗಾರರ ಕುರಿತು ಈವರೆಗೆ ಬಂದ ಆಕರಗಳ ಅವಲೋಕನ ಪ್ರಸ್ತುತ ಕೃತಿಗೆ ಬಳಸಿಕೊಂಡ ಹಸ್ತಪ್ರತಿಗಳ ಮಾಹಿತಿ ಎರಡೂ ದಾಖಲೆಗಳ ವಸ್ತು ನಿರೂಪಣೆ ಪಾಳೆಗಾರರ ಕ್ರಮಾನುಗತ ಇತಿಹಾಸವನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ.

* ಎಸ್.ಶಿವಣ್ಣ, ಶ್ರೀಜಗದ್ಗುರುರಾಜೇಂದ್ರ ಬೃಹನ್ಮಠದ ಹಸ್ತಪ್ರತಿಸೂಚಿ (ಸಂ)-೧,

* ಬಿ.ಎಂ. ಗುರುನಾಥ, ಬಯಲಾಟದ ಹಸ್ತಪ್ರತಿಗಳ ಅಂತರ್ ಶೋಧ

* ಎಸ್. ಶಿವಣ್ಣ ಯತಿ ಬಸವಲಿಂಗೇಶ ವಿರಚಿತ ತೋಂಟದ ಸಾಂಗತ್ಯ.

* ವೆಂಕಟೇಶ್ ಜೋಯಿಸ, ಮೆಕೆಂಜಿ ಸಂಗ್ರಹಿಸಿದ ಚಿತ್ರದುರ್ಗ ಇತಿಹಾಸ ಕುರಿತು ಚಾರಿತ್ರಿಕ ದಾಖಲೆಗಳು.

* ಎಸ್. ಶಿವಣ್ಣ (ಸಂ), ಮುರಿಗೆ ಶಾಂತವೀರ ಸ್ವಾಮಿಗಳ ಕೃತಿಗಳು.

* ವಿರೂಪಾಕ್ಷಿ ಪೂಜಾರಹಳ್ಳಿ, ಕಾಮಗೇತಿ ವಂಶಜರ ಚರಿತ್ರೆ.

* ವೀರಣ್ಣ ರಾಜೂರ (ಸಂ), ವೀರಶೈವ ತಾರಾವಳಿ ಸಂಪುಟ.

* ಲಕ್ಷ್ಮಣ ತೆಲಗಾವಿ, ಎಂ.ವಿ. ಶ್ರೀನಿವಾಸ (ಸಂ), ಹಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು.

* ಬಾಗೂರು ನಾಗರಾಜಪ್ಪ, ಹೊಸದುರ್ಗ ಸೀಮೆ ಜಾನಪದ

* ಎಸ್. ಶಿವಣ್ಣ (ಸಂ), ಮುರಿಗೆ ಶಾಂತವೀರಸ್ವಾಮಿಗಳ ಸೋತ್ರ ಕರಂಡ.

* ಲಕ್ಷ್ಮಣ ತೆಲಗಾವಿ, ಎಂ.ವಿ. ಶ್ರೀನಿವಾಸ (ಸಂ), ಹಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು.

* ಹಲ್ಲೂರು ಶ್ರೀನಿವಾಸ ಜೋಯಿಸ, ಹಿರೇಮದಕರಿ ನಾಯಕನ ತಾರಾವಳಿ.

* ಡಿ.ಎನ್. ಯೋಗೀಶ್ವರಪ್ಪ, ಮಧ್ಯಕಾಲೀನ ಕರ್ನಾಟಕದ ಪಾಳೆಗಾರರು

* ಬಿ. ರಾಜಶೇಖರಪ್ಪ, ಇತಿಹಾಸ ಕಥನ.

* ವಸು ಎಂ.ವಿ. (ಸಂ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು: ಕರ್ನಾಟಕ ರಾಜ ಸಂಸ್ಥಾನಗಳು–೩

* ಮೀರಾಸಾಬಿಹಳ್ಳಿ ಶಿವಣ್ಣ, ಮ್ಯಾಸಮಂಡಲ

* ಬಿ.ಎಸ್. ಪುಟ್ಟಸ್ವಾಮಿ, ಕರ್ನಲ್ ಮೆಕೆಂಝಿ ಮತ್ತು ಕೈಫಿಯತ್ತುಗಳು

* ಹುಲ್ಲೂರು ಶ್ರೀನಿವಾಸ ಜೋಯಿಸ (ಸಂ), ಮದಕರಿ ರಾಜೇಂದ್ರ ದಂಡಕ

* ತಿಪ್ಪೇಸ್ವಾಮಿ (ಸಂ), ಚಿತ್ರದುರ್ಗದ ದಫೇದಾರ್ ಬಸಪ್ಪನ ವಂಶಾವಳಿ

* ಲಕ್ಷ್ಮಣ್ ತೆಲಗಾವಿ, ದೊಡ್ಡೇರಿ ಕದನ

* ಬಿ.ಎಲ್. ವೇಣು, ಗಂಡುಗಲಿ ಮದಕರಿ ನಾಯಕ

* ಆರ್. ಗೋಪಾಲ್, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

ಲೇಖನಗಳು

* ಲಕ್ಷ್ಮಣ್ ತೆಲಗಾವಿ, ಬಖೈರು: ಒಂದು ಅಧ್ಯಯನ.

* ಎಸ್. ಪ್ರಸಾದಸ್ವಾಮಿ, ಚಿತ್ರದುರ್ಗ ಕುರಿತ ತ್ರಿವಳಿ

* ಲಕ್ಷ್ಮಣ್ ತೆಲಗಾವಿ, "ಎಪ್ಪತ್ತೇಳು ಪಾಳೇಗಾರರು"

* ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗದ ಒನಕೆ ಓಬವ್ವೆಯ ಘಟನೆ : ಚಾರಿತ್ರಿಕ ವಿಮರ್ಶೆ.

* ಎಸ್. ಶಿವಣ್ಣ, ಚಿತ್ರದುರ್ಗ ಬೃಹನ್ಮಠ ಸಂಗ್ರಹದಲ್ಲಿನ ಕೆಲವು ಕೃತಿಗಳು.

* ಲಕ್ಷ್ಮಣ್ ತೆಲಗಾವಿ, "ಚಿತ್ರದುರ್ಗದ ಲಡಾಯಿ ಲಾವಣಿ: ಪ್ರಥಮಪ್ರಕಟಿತ ಆಕರ ಇತಿಹಾಸ ದರ್ಶನ (ಸಂ)೧೮

* ಡಿ.ಎಸ್. ಯೋಗೀಶ್ವರಪ್ಪ, ನಾಯಕನಹಟ್ಟಿ ನಾಯಕರ ವಂಶಾವಳಿ; ಒಂದು ವಿವೇಚನೆ, ಇತಿಹಾಸ ದರ್ಶನ (ಸಂ)೧೫.

* ಎಸ್. ಶಿವಣ್ಣ, "ಚಿತ್ರದುರ್ಗ, ಬೃಹನ್ಮಠ ಸಂಗ್ರಹದಲ್ಲಿನ ಕೆಲವು ಕೃತಿಗಳು", ಇತಿಹಾಸ ದರ್ಶನ (ಸಂ)೭

* ಎ.ಕೆ. ಶಾಸ್ತ್ರಿ, ಚಿತ್ರದುರ್ಗಕ್ಕೆ ಸಂಬಂಧಿಸಿದ ಶೃಂಗೇರಿ ಮಠದ ದಾಖಲೆಗಳು, ಇತಿಹಾಸ ದರ್ಶನ (ಸಂ)೭

* ಡಿ.ಎಸ್. ಯೋಗೀಶ್ವರಪ್ಪ, "ಚಿತ್ರದುರ್ಗ ಭರಮಣ್ಣ ನಾಯಕನ: ಕೌಟುಂಬಿಕ ಜೀವನ ಸಮೀಕ್ಷೆ, ಇತಿಹಾಸ ದರ್ಶನ (ಸಂ)೧೮.

೨.೧. ವ್ಯಕ್ತಿ ಒಡೆತನದ ಹಸ್ತಪ್ರತಿಗಳು :

ಲಿಪಿಕಾರರಾಗಿ, ಲೇಖಕರಾಗಿ ಹಾಗೂ ಸಂರಕ್ಷಕರಾಗಿ ಅನೇಕ ಜನ ವ್ಯಕ್ತಿಗಳು ಹಸ್ತಪ್ರತಿಗಳನ್ನು ಸಂಗ್ರಹಿಸಿಟ್ಟುಕೊಂಡ ನಿದರ್ಶನಗಳಿವೆ. ವ್ಯಕ್ತಿಗಳ ಮನೆಯಲ್ಲಿ ಸಿಕ್ಕಿರುವ ಹಸ್ತಪ್ರತಿಗಳು ಸ್ವಮತ ಹಿತಾಸಕ್ತಿ ಹಾಗೂ ಸ್ವವಿಷಯ ಹಿತಾಸಕ್ತಿ ಸಂಗ್ರಹ ಹಾಗೂ ಪೋಷಣೆಗಳಾಗಿ ಕಂಡುಬರುತ್ತವೆ. ಆಯಾ ಸಮುದಾಯಗಳ ಶ್ರವಣ ಹಾಗೂ ಪಠಣ ಪರಂಪರೆಯ ಅಭಿರುಚಿಗಳು ಈ ಸಂಗ್ರಹಗಳಿಗೆ ಮಹತ್ವದ ಪ್ರೇರಣೆಯನ್ನು ನೀಡಿರಬಹುದು. ಇಂತಹ ಮನೋಭಿಲಾಷೆಯ ಹಿನ್ನೆಲೆಯಲ್ಲಿ ಹಸ್ತಪ್ರತಿಗಳ ಪ್ರತೀಕರಣದ ಪ್ರಕ್ರಿಯೆ ಹಾಗೂ ದಾನಕಾರ್ಯಾದಿ ಪ್ರಕ್ರಿಯೆಗಳು ಹೆಚ್ಚು ಮುನ್ನೆಲೆಗೆ ಬಂದಿರಬಹುದು. ವ್ಯಕ್ತಿಯೊಬ್ಬನು ತನ್ನ ಮನೋಧೋರಣೆಯ ಹಿನ್ನೆಲೆಯಲ್ಲಿ ಲಿಪಿಕರಿಸಿದ ಪ್ರತಿಯನ್ನು ಅಥವಾ ಪ್ರತಿಗಳನ್ನು ಮಠ-ಮಂದಿರಗಳಿಗೆ ಕಾಣಿಕೆಯಾಗಿ ನೀಡಿದಂಥ ಅನೇಕ ನಿದರ್ಶನಗಳು ಹಸ್ತಪ್ರತಿ ಚರಿತ್ರೆಯಲ್ಲಿವೆ. ಇಂತಹ ಸಂದರ್ಭಗಳಲ್ಲಿ ಲಿಪಿಕಾರನ ಸ್ಥಳೀಯ ಪ್ರಾದೇಶಿಕ ಅನನ್ಯತೆ ಹಾಗೂ ಮನೆತನದ ಶ್ರೇಯಸ್ಸು ಅಥವಾ ಘನತೆಗಳು ಲಿಪಿಕಾರನಿಗಿರಬಹುದಾದ ಮುಖ್ಯವಾದ ಆಶೋತ್ತರಗಳಾಗಿ ಕಂಡುಬರುತ್ತವೆ. ಹಸ್ತಪ್ರತಿ ಪುಷ್ಟಿಕೆ ಬರಹಗಳಲ್ಲಿ ಇಂತಹ ಸಂಗತಿಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಈ ನೆಲೆಗಟ್ಟಿನಲ್ಲಿ ವ್ಯಕ್ತಿ ಒಡೆತನದ ಹಸ್ತಪ್ರತಿಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಹೀಗೆ ನೋಡಬಹುದು. ಮಠ-ಮಾನ್ಯಗಳಂತಹ ಸಾಂಸ್ಥಿಕ ನೆಲೆಯಲ್ಲಿ ಇಲ್ಲಿಯ ಹಸ್ತಪ್ರತಿ ಸಂಪತ್ತನ್ನು ಗಮನಿಸಿದಂತೆ ಈ ಸಂಪತ್ತು ವ್ಯಕ್ತಿ ಒಡೆತನದಲ್ಲಿ ಸಂಗ್ರಹಗೊಂಡಿರುವುದು ಗೋಚರಿಸುತ್ತದೆ. ಅವುಗಳನ್ನು ಹಸ್ತಪ್ರತಿ ಪುಷ್ಪಿಕೆಗಳಿಂದ ತಿಳಿಯಬಹುದಾಗಿದೆ. ಪ್ರತಿಕಾರರ ಹಾಗೂ ಪ್ರತಿ ಮಾಡಿಸಿದವರ ಉಲ್ಲೇಖಗಳಲ್ಲದೆ ಸಂಗ್ರಹಕಾರರಾಗಿದ್ದುಕೊಂಡು ಹಸ್ತಪ್ರತಿ ಸಂರಕ್ಷಿಸಿದ ಅನೇಕ ಜನರು ಈ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಅವರಲ್ಲಿ ನಂಬ್ಯಣ್ಣ ದೇವ, ಬಸವಲಿಂಗದೇವ, ಎಮ್.ಎಸ್. ಬಸವರಾಜಯ್ಯ, ಸಿದ್ಧಲಿಂಗಚಾರಮೂರ್ತಿ ಮುಂತಾದವರ ಒಡೆತನದಲ್ಲಿ ಹಸ್ತಪ್ರತಿಗಳಿರುವುದು ತಿಳಿದುಬರುತ್ತದೆ. ಈ ನೆಲೆಗಟ್ಟಿನಲ್ಲಿ ವ್ಯಕ್ತಿಗತ ಸಂಗ್ರಹಗಳ ನಿದರ್ಶನಗಳನ್ನು ಚಿತ್ರದುರ್ಗ ಜಿಲ್ಲೆಯ ಹಸ್ತಪ್ರತಿಗಳಲ್ಲಿ ಹೀಗೆ ನೋಡಬಹುದು.

ಶ್ರೀ ಬಿ.ಎನ್. ಮಲ್ಲಯ್ಯ

ಇವರೇ ಪ್ರತಿಮಾಡಿ ಸಂಗ್ರಹಿಸಿದ ಬಯಲಾಟದ 'ಹಸ್ತಪ್ರತಿಗಳು' ಬಯಲಾಟದ ಮೇಳಗಾರಿಕೆಯಲ್ಲಿ ಪ್ರವೀಣರಾಗಿದ್ದ ಇವರು ತುರುವನೂರು ಗ್ರಾಮದಲ್ಲಿ ಜನಿಸಿದ್ದು ವೃತ್ತಿಯಲ್ಲಿ ಇಂಗ್ಲಿಷ್ ಶಿಕ್ಷಕರು. ಬಯಲಾಟಕ್ಕೆ ಮೇಳಗಾರಿಕೆ ವಹಿಸುವುದು ಇವರ ಪ್ರವೃತ್ತಿಯಾಗಿದ್ದು, ಸದಾ ಅದೇ ಗುಂಗಿನಲ್ಲೇ ಕಾಲ ಕಳೆಯುತ್ತಿದ್ದರು. ಇವರ ತಂದೆ, ಚಿಕ್ಕಪ್ಪ ಮತ್ತು ತಮ್ಮ ಬಯಲಾಟದಲ್ಲಿ ಪಾತ್ರ ವಹಿಸುತ್ತಿದ್ದರು. ಹಾಗಾಗಿ ಇವರು ಹುಟ್ಟಿ ಬೆಳೆದ ಪರಿಸರವೇ ಬಯಲಾಟದ ಸೊಗಡಿನ ಪರಿಸರ;

೧. ಕರಿಭಂಟನ ಕಥೆ

೨. ಚಿತ್ರಕೇತು

೩. ಸತ್ಯ ಹರಿಶ್ಚಂದ್ರ

೪. ಶಶಿರೇಖ ಪರಿಣಯ

೫. ಕರ್ಣಾರ್ಜುನರ ಕಾಳಗ

೬. ದುಶ್ಯಾಸನ ಕಥೆ

೭. ಕಾಳಾಸುರನ ಕಥೆ

೮. ಗಯ ಚರಿತ್ರೆ.

ಬಯಲಾಟಗಳಲ್ಲಿ ಗಣಸ್ತುತಿ ಪದಗಳನ್ನು ನೋಡಬಹುದು.

"ದೇಹಿ ಗಣಪತೇ। ವಿಭೋದೇಹಿ ಸನ್ನುತೇ ॥ಪ॥

ಹರನ ಶೌರ್ಯಶರದಿಚಂದ್ರ। ಪರಮದಯಾ ಮೋದಸಾಂದ್ರ

ಶರಣು ಮಾಳ್ಪೆ ವರಗಣೇಂದ್ರ ॥ಪ॥

ಶಾಂಭವಿ ಮುಖ ಬಿಂಬ ಮೋದ। ಜಂಭಮೋದ ವಿನುತ

ಪಾದ ॥ಪ॥

ಅಂಬುಜ ಮುಖಭಾವವಿನೋದ। ಕಂಬುಕರದ್ರುತೇ ॥ಪ॥

ದೋಶತಿಮಿರತತಿಪತಾಂಗ। ದೋಷಭಾಷಮುಕಪತಾಂಗ

ಭಾಷ ಲಲಿತ ವರ ಕೃಪಾಂಕ। ವಿಘ್ನೇಶ ಗಣಪತೇ"[೧]

ಬಯಲಾಟದ ಯಾವುದೇ ಹಸ್ತಪ್ರತಿಯಾಗಿರಬಹುದು ಅದು ದಪ್ಪನೆಯ (ಮೇಲುಹೊದಿಕೆ) ರಟ್ಟಿನಿಂದ ಸಂರಕ್ಷಿಸಲ್ಪಟ್ಟಿರುತ್ತದೆ. ತುಂಬಾ ದುಂಡಾಗಿ ದಪ್ಪ ಅಕ್ಷರಗಳಲ್ಲಿ ಕೃತಿಯ ಹೆಸರನ್ನು ಈ ಮೇಲು ಹೊದಿಕೆಯ ಮೇಲೆ ಬರೆದಿರಲಾಗಿರುತ್ತದೆ. ಕೆಲವು ವೇಳೆ ಕಥೆಯ ಹೆಸರನ್ನು ಸಾಮಾನ್ಯವಾಗಿಯೇ ಬರೆದಿರುತ್ತಾರೆ. ಪ್ರಸ್ತುತದಲ್ಲಿನ ಪ್ರತಿಗಳು ಕಾಗದ ಪ್ರತಿಗಳು ಮಾತ್ರ ಹಸ್ತಪ್ರತಿಯನ್ನು ತಯಾರಿಸಲು ಜೋಡಿಸಿದ ಹಾಳೆಗಳನ್ನು ಒಂದು ನಿರ್ದಿಷ್ಟ ಆಕಾರದಲ್ಲಿ ಕತ್ತರಿಸಿರುತ್ತಾರೆ. ಹಾಗೆಯೇ ದಾರದ ಸಹಾಯದಿಂದ ಹೋಲಿದಿರುತ್ತಾರೆ. ಪ್ರತಿಗಳು ಹಾಳಾಗದಿರಲೆಂದು ದಪ್ಪದ ರಟ್ಟಿನಿಂದ ಹೊಲಿದಿರುತ್ತಾರೆ. ಕೆಲವು ಪ್ರತಿಯ ವಾರಸುದಾರರು ಚರ್ಮವನ್ನು ಹೊದಿಸಿ (ಲೇಪಿಸಿ) ಹೊಲಿದಿರುವುದನ್ನು ಕಾಣುತ್ತೇವೆ. ಪ್ರಮುಖವಾಗಿ ಈಗ ದೊರೆಯುವ ಎಲ್ಲಾ ಪ್ರತಿಗಳೂ ಸಹ ಸಾಮಾನ್ಯವಾಗಿ ನವೀನ ನೋಟ್ ಪುಸ್ತಕದ ಹಾಳೆಗಳಲ್ಲೇ ದೊರೆಯುತ್ತವೆ.

"ಶ್ರೀ ವಾಲ್ಮೀಕೇಯನ್ನ ಮಹಾ ೧೯೮೨ ಫೆಬ್ರವರಿ ೪ನೇ ತಾರೀಕೆನಂದು ಕರ್ಣಾರ್ಜುನರ ಕಾಳಗವೆಂಬ ಯಕ್ಷಗಾನ ಪ್ರತಿ ಬರೆದವರು ಚಳ್ಳಕೆರೆ ತಾಲ್ಲು ನಾಯಕನಹಟ್ಟಿ ಎಸ್. ರುದ್ರಪ್ಪನಾಯಕ ಈ ಕೃತಿಯ ಹಕ್ಕುದಾರರು ಶ್ರೀ ಕಿನ್ನರಿ ಬೊಮ್ಮಣ್ಣ ಬಿನ್. ದಿವಂಗತ ಶ್ರೀ ಕಿನ್ನರಿ ಪಾತಣ್ಣನವರು"[೨]

* "ಮೊಳಕಾಲ್ಮೂರು ತಾಲ್ಲೂಕು ಕೊಂಡ್ಲಹಳ್ಳಿ ಗ್ರಾಮದಲ್ಲಿರುವ ಬಡಿಗೆ ಕಾಳಪ್ಪನವರು

ಮಾರುತಿಲಿಂಗ ವರಪ್ರಸಾದ ಮಾರ್ಚ ತಿಂಗಳು, ಗುರುವಾರ ತಾ ೩೧.೦೩.೨೦ನೇ

ಇಸ್ವಿಯಲ್ಲಿ ಮಾರುತಿಲಿಂಗ ವರಪ್ರಸಾದ ಯಿಲ್ಲಿಗೆ ಸಂಪೂರ್ಣ"[೩]

ಕಥೆ ಬರೆಯಲು ಪ್ರಾರಂಭಿಸಿದ ಯಾವುದೇ ವಿವರಗಳನ್ನು ಕೊಡದೆ ಇರುವುದಕ್ಕೆ ಈ ಪ್ರತಿ ಉದಾಹರಣೆಯಾಗಿದೆ.

* "ಸನ್ ೧೯೭೦ನೇ ಮಾಹೆಯಾನ ನವಂಬರ್ ತಿಂಗಳಲ್ಲಿ ಚಿತ್ರದುರ್ಗ ತಾಲ್ಲೂಕು ತುರುವನೂರು ಹೋಬಳಿ ಬಾಗೇನಾಳು ಗ್ರಾಮದ ಆದಿಕರ್ನಾಟಕ ನಾಟಕ ಮಂಡಳಿಯವರಿಗೆ ಚಳ್ಳಕೆರೆ ತಾಲ್ಲೂಕು ತಳಕು ಹೋಬಳಿ ವಲಸೆ ಗ್ರಾಮದ ಆದಿಕರ್ನಾಟಕದ ಘಟ್ಟಪರ್ತಿ ಮಾರಯ್ಯನ ಮಗ ತಿಪ್ಪಯ್ಯ ತನ್ನ ಸ್ವಂತ ಹಸ್ತದಿಂದ ಬರೆದು ಕೊಟ್ಟಿರುತ್ತಾರೆ. ಶ್ರೀಯುತರು, ಮಹಾಸ್ವಾಮಿಗಳು ಇದರಲ್ಲಿನ ವಾಕ್ಯದೋಶ ಚಿತ್ತುಕಾಟುಗಳು ಇದ್ದಲ್ಲಿ, ಬದ್ಧಿವಂತರಾದವರು ಸರಿಪಡಿಸಿ ಬರೆದವರ ಮನಸ್ಸಿಗೆ ಆನಂದವನ್ನುಂಟು ಮಾಡಬೇಕೆಂದು ಕೋರುತ್ತೇನೆ"[೪]

* "ಕೂಡ್ಲಿಗಿ ತಾ॥ ಕಾತ್ರಿಕೇನಟ್ಟಿ ತಮ್ಮಯ್ಯನ ಮಗ ಕಾರಯ್ಯನು ಈ ಪುಸ್ತಕವನ್ನು ಬರೆಸಿರುತ್ತಾನೆ. ಇದನ್ನು ಬರೆದವರು ಮೊಳಕಾಲ್ಮೂರು ತಾಲ್ಲೂಕು ಚಿತ್ರದುರ್ಗ ಜಿಲ್ಲಾ ತುಮಕೂರ್ಲಹಳ್ಳಿ ಗ್ರಾಮದವಾಸಿ ಮ್ಯಾಸನಾಯಕರ ಮಿಲ್ತ್ರಿ ಬೊಮ್ಮಣ್ಣನ ಮಗ ಬೆರೆಯಣ್ಣನ ಮಗ (ಮಾಸ್ಟರ್) ಮಾಷಾರ್ ಬೇಟಿ ಬರೆದಿರುತ್ತಾರೆ. ಶ್ರೀ ತಾರಣ ನಾಮ ಸಂವತ್ಸರದ ಮಾಘದಲ್ಲಿ ಹುಟ್ಟಿದ ಕಥೆಯ ಬರಹ"[೫]

ಚನ್ನಕೇಶವಯ್ಯ

ನಲಗತೇನಹಟ್ಟಿ ಗ್ರಾಮದ ವಾಸವಾಗಿದ್ದು, ಚಳ್ಳಕೆರೆ ತಾಲೂಕು ಚಿತ್ರದುರ್ಗ ಜಿಲ್ಲೆಯವರಾಗಿದ್ದಾರೆ. ಮೂಲತಃ ಪಾತ್ರದಾರಿಯಾಗಿದ್ದ ಇವರು ಕ್ರಮೇಣ ಮೇಳಗಾರಿಕೆಗೆ ಒಗ್ಗಿಕೊಂಡವರು. ಐದನೇ ತರಗತಿಯವರೆಗೆ ಓದಿದವರಾದ ಇವರಿಗೆ ಈಗ ೫೫ ವರ್ಷ. ಸದ್ಯಕ್ಕೆ ಇವರ ವೃತ್ತಿ ಮೇಳಗಾರಿಕೆಯಾಗಿದೆ.

೧. ಮಧುಕೈಟರ ಕಥೆ
೨. ಸೌಗಂಧಿಕ ಪುಷ್ಪ
೩. ಚಿತ್ರಕೇತು ಮಹಾರಾಜ
೪. ಶಿವ ಜಲಂಧರ
೫. ಗಿರಿಜಾ ಕಲ್ಯಾಣ
೬. ಕರೀಭಂಟನ ಕಾಳಗ
೭. ಶಶಿರೇಖಾ ಪರಿಣಯ

"ಮಧುಕೈಟರ ಕಥೆಯಲ್ಲಿಯ ಗಣಸ್ತುತಿ
ದೇಹಿ ಗಣಪತಿ। ವಿಭೋದೇಹಿ ಸಾಂನ್ನತೇ ಹರನ
ಶೌರಿ ಶರಧಿ ಚಂದ್ರ, ಪರಮದಯ, ಮೋದ ಸಾಂದ್ರ,
ಶರಣ ಮಾಳವವರ ಗಣೇಂದ್ರ। ಶಾರದಾಂಬಿಯೇ।
ವಿಭೋ ದೇಹಿ ಸನ್ನೂತೆ॥
ಶಾಂಬವಿ ಶಶಿಮುಖ ಬಿಂಬ ಮೊದ।
ಜಂಬ ಬೇದ ಎನುತ ಪಾದ
ಅಂಬುಜ ಮುಖಭವ ವಿನೋದ, ಕಂಬು ಕರದ್ರುತೆ'
"ವಿಭೋದೇಹಿ ಸನ್ನು ತೇ"
ದೋಷ ತಮಿರ ತತಿಪ ತಾಂಗ
ದೋಷ ಭಾಷ ಮುಖಪದಾಗ।
ಭಾಷ ಕಲಿತ ವರ ಕೈಪಾಂಗ
ವಿಘ್ನೇಶ ಪಾದವಗತೇ। ವಿಭೋದೇಹಿ"[೬]

ಈ ಮೇಲಿನ ಎಲ್ಲಾ ಪ್ರತಿಗಳನ್ನು ಸಂಗ್ರಹಿಸಿದ ಇವರು ಬಯಲಾಟ ಕಲಿಸುವ ಭಾಗವತರು ಹಾಗೂ ಕಲಾವಿದರು. ಹಾಗಾಗಿ ಅನೇಕ ಬಯಲಾಟ ಕೃತಿಗಳನ್ನು ಸ್ವತಃ ತಾವೇ ಬರೆದಿದ್ದಾರೆ. ಈ ಎಲ್ಲಾ ಪ್ರತಿಗಳು ಸಹ ಕಾಗದದ ಹಸ್ತಪ್ರತಿಗಳು. ಇವರ ಸಂಗ್ರಹದಲ್ಲಿರುವ ಹಸ್ತಪ್ರತಿಗಳಲ್ಲಿ ಕೆಲವೊಂದು ಪ್ರತಿಗಳಲ್ಲಿನ ಅಕ್ಷರಗಳು ಲೋಪಗೊಂಡಿರುವುದನ್ನು ಕಾಣಬಹುದಾಗಿದೆ.

ಬಿ.ಎಂ. ಗುರುನಾಥ

ಚಿತ್ರದುರ್ಗ ಜಿಲ್ಲೆಯ ಬೆಳಗಟ್ಟ ಗ್ರಾಮದವರಾದ ಇವರು ಚಿಕ್ಕಂದಿನಿಂದಲೇ ಬಯಲಾಟದ ಬಗ್ಗೆ ಆಸಕ್ತಿಯನ್ನು ಹೊಂದಿದ್ದು, ಅನೇಕ ನಾಟಕಗಳಲ್ಲಿ ಪಾತ್ರಗಳನ್ನು ಮಾಡಿ ನಾಟಕಗಳ ಬಗ್ಗೆ ಅಪಾರ ಶ್ರದ್ಧೆಯನ್ನು ಬೆಳೆಸಿಕೊಂಡು ಅನೇಕ ಬಯಲಾಟ ಹಸ್ತಪ್ರತಿಗಳನ್ನು ಸಂಗ್ರಹಿಸಿ ತಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದಾರೆ.

೧. ಶತ್ರುವಿಜಯ ಕಥೆ
೨. ಲಕ್ಷ್ಮೀಣಿ ಸ್ವಯಂವರ
೩. ಭೋಜಕಾಳಿದಾಸರ ವಿಲಾಸ
೪. ಕಾಳಿಂಗರಾಜನ ಕಥೆ
೫. ರಾಮಾಯಣದೊಳಗಣ ಚಿತ್ರಪಟಸಂಧಿ
೬. ಜಗನ್ಮೋಹಿನಿ ನಾಟಕ
೭. ತಾಮ್ರಧ್ವಾಜನ ಕಥೆ

* "ಕಮಲಾ ನಾಭನ ಪುರವಾ
ಕ್ರಮದಿ ಸೇರುವೆನಾನು
ಯಮಲೋಕ ದೋಳುನಾನು ಮಾಳ್ಪುದೇ ನೊ ॥ತಾ॥
ವನುಜ ಮುಖಿ ಸತಿಯ ಮೋಹದೀ।
ತನಯ ಸಹಿತ ವಿರನ್ನ ಪ್ರಾಣ।
ಈ ಕ್ಷಣದಿ ಕೊಡುವೆನು।
ವ್ರತವುನಾ ಬಿಡಲಾರೆ ಮೋಹಿನಿ ॥ವನಜ॥"[೭]

ಇವರ ಸಂಗ್ರಹದಲ್ಲಿರುವ ಎಲ್ಲಾ ಪ್ರತಿಗಳು ಸಹ ಕಾಗದದ ಹಸ್ತಪ್ರತಿಗಳಾಗಿವೆ. ಹಾಗೆಯೇ ಕೆಲವೊಂದು ಪ್ರತಿಗಳು ಭೌತಿಕವಾಗಿ ಉತ್ತಮವಾಗಿಲ್ಲ. ಕೆಲವೊಂದು ಪ್ರತಿಗಳಲ್ಲಿನ ಅಕ್ಷರಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಪ್ರಸ್ತುತದಲ್ಲಿ ಇವರ ಬಳಿ ಇರುವ ಹಸ್ತಪ್ರತಿಗಳು ಈಗಲೂ ಸಹ ಪ್ರದರ್ಶನಗೊಳ್ಳುತ್ತಿರುವುದನ್ನು ನೋಡಬಹುದು.

ಏಕಾಂತಪ್ಪ

ದೊಣೇಹಳ್ಳಿಯಲ್ಲಿ ಜನಸಿದ ಇವರು ಮೂಲತಃ ಪಾತ್ರಧಾರಿಯಾಗಿದ್ದು, ಇವರು ಕ್ರಮೇಣ ಮೇಳಗಾರಿಕೆಗೆ ಒಗ್ಗಿಕೊಂಡರು. ಏಳನೇ ತರಗತಿಯವರೆಗೆ ಓದಿದವರಾದ ಇವರಿಗೆ ಈಗ ಸುಮಾರು ೮೦ ವರ್ಷ. ಸದ್ಯಕ್ಕೆ ಇವರ ವೃತ್ತಿಯೇ ಮೇಳಗಾರಿಕೆಯಾಗಿದೆ. ಇಂದು ಚಿತ್ರದುರ್ಗ ತಾಲೂಕು ತುರುವನೂರು ಹೋಬಳಿಯಾಗಿದ್ದು, ಬಯಲಾಟದ ಪ್ರಸ್ತಾಪ ಬಂದರೆ ಇವರ ಹೆಸರೇ ಮುಖ್ಯವಾಗಿ ಕೇಳಿಬರುತ್ತದೆ. ಇವರ ಹತ್ತಿರ ಇರುವ ಬಯಲಾಟದ ಹಸ್ತಪ್ರತಿಗಳೆಂದರೆ–

೧. ಕರಿಭಂಟನ ಕಥೆ
೨. ದ್ರೌಪದಿ ಸ್ವಯಂವರ
೩. ಕಾಳಾಸುರನ ಕಥೆ
೪. ಕುರುಕ್ಷೇತ್ರ
೫. ಮಧುಕೈಟಭರ ಸಂಹಾರ
೬. ಕಂಸಾಸುರನ ಕಥೆ

ಕಮಲ ಕೃಷ್ಣಯ

ಬಯಲಾಟದ ಕಲಾವಿದರಾದ ಇವರು ಬಹಳ ಚಿಕ್ಕಂದಿನಿಂದಲೂ ಮೇಳಗಾರಿಕೆ ಮಾಡಿಕೊಂಡು ಬರುತ್ತಿದ್ದಾರೆ. ೮ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ಅನೇಕ ಬಯಲಾಟ ಕೃತಿಗಳನ್ನು ಬರೆದು ದಾಖಲಿಸಿದ್ದಾರೆ. ಇವರು ಬರೆದ ಬಯಲಾಟದ ಹಸ್ತಪ್ರತಿಗಳಲ್ಲಿ ಕನ್ನಡ ಲಿಪಿಯಾಧಾರಿತ ತೆಲುಗಿನ ಮಾತುಗಳು ಕಾಣಬರುತ್ತವೆ. ಇವರು ದಾಖಲಿಸಿದ ಪ್ರತಿಗಳು ಇಂತಿವೆ.

೧. ಗಿರಿಜಾ ಕಲ್ಯಾಣ
೨. ರಾಮಾಂಜನೇಯ ಯುದ್ಧ

೩. ದಕ್ಷಬ್ರಹ್ಮ

೪. ಕಂಸಾಸುರನ ವಧೆ

೫. ಶಶಿರೇಖ ಪರಿಣಯ

೬. ಕರಿಭಂಟನ ಕಥೆ

೭. ಪ್ರಮೀಳ ದರ್ಬಾರ್

ಅಲಿಕಿ ಗಾದ್ರಯ

ಇವರು ಜಾನಪದ ಕಲಾವಿದ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಇವರು ಕೂಡ ಬಯಲಾಟ ಕಲಾವಿದರಾಗಿ ಅನೇಕ ಬಯಲಾಟ ಹಸ್ತಪ್ರತಿಗಳನ್ನು ಬರೆದು ಸಂಗ್ರಹಿಕೊಂಡಿದ್ದಾರೆ.

೧. ಭಕ್ತ ಪ್ರಹ್ಲಾದ

೨. ಹಿಡಂಬಿ ಸ್ವಯಂವರ

೩. ಶಂಬ್ರಾ ಸುರನ ಕಥೆ

೪. ದ್ರೌಪದಿ ಸ್ವಯಂವರ

೫. ರೇಣುಕ ಮಹಾತ್ಮೆ

೬. ದಕ್ಷಬ್ರಹ್ಮನ ಕಥೆ

೭. ಪ್ರಹ್ಲಾದ ಚರಿತ್ರೆ

೮. ಗಿರಿಜಾ ಕಲ್ಯಾಣ

೯. ಬಬ್ರುವಾಹನ ಕಾಳಗ

೧೦. ಸುಂದ ಉಪಸುಂದ[೮]

ಕಾಟಂ ಲಿಂಗಯ್ಯ

ನಿವೃತ್ತ ಜವಾನರಾದ ಇವರು ಚಿತ್ರದುರ್ಗದ ಬೆಳಗಟ್ಟ ಪರಿಸರದ ಬಯಲಾಟ ಕಲಾವಿದರು ಹಾಗೂ ಯಶಸ್ವಿ ಮೇಳಗಾರರು. ಅನೇಕ ಬಯಲಾಟದ ಹಸ್ತಪ್ರತಿಗಳನ್ನು ಬರೆದಿದ್ದು, ಅವುಗಳನ್ನು ತಮ್ಮ ಹತ್ತಿರ ಇಟ್ಟುಕೊಂಡು ರಂಗ ಪ್ರಯೋಗ ಮಾಡುತ್ತ ಬರುತ್ತಿದ್ದಾರೆ.

೧. ರತಿಕಲ್ಯಾಣ

೨. ಸಂಪೂರ್ಣ ರಾಮಾಯಣ

೩. ಸೌಂಗಧಿಕ ಪುಷ್ಪ

೪. ಅಭಿಮನ್ಯು ಕಾಳಗ

ಚಿತ್ರದುರ್ಗ ಪ್ರದೇಶದಲ್ಲಿ ಬಯಲಾಟದ ಹಸ್ತಪ್ರತಿಗಳು ಅತ್ಯಂತ ವಿಶಿಷ್ಟವೆನಿಸುವ ಮುಖ್ಯ ಸಂಗತಿ ಎಂದರೆ ಭಾಷೆ. ಕನ್ನಡಕ್ಕೆ ಲಿಪಿ ಸಾಮ್ಯವಾದ ಭಾಷೆ ತೆಲುಗು ತೆಲುಗನ್ನು ಮಾತನಾಡುವವರ ಸಂಖ್ಯೆ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳಲ್ಲಿ ಅಧಿಕವಾಗಿದೆ. ಇಲ್ಲಿ ಸಂಪೂರ್ಣ

ತೆಲುಗು ಲಿಪಿಯಾಧಾರಿತ ಬಯಲಾಟದ ಹಸ್ತಪ್ರತಿಗಳು ದೊರೆಯದಿದ್ದರೂ, ಕೆಲವು ಪ್ರತಿಗಳ ನಡುನಡುವೆ ಕನ್ನಡ ಲಿಪಿಯಿಂದ ಕೂಡಿದ ತೆಲುಗು ಭಾಷೆ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ.

ಆಂಜನೇಯ ಮಾಟ: "ವರೇಭಂಡ ರಕ್ಕಸ ಕುಲಮಾನಂದುಪುಟ್ಟಿ ಮಾಂಸಂ ಧಂಡಿಗಾಭಕ್ಷಿಂಚಿ ತಿಂಡಿ ಪೋತುವಲೆ ತಿರುಗುತ ಈ ಭೂಮಂಡಲಮನಕು ಬಾರಮ್ಯೆನ ನೀಯಕ್ಕೆ ಪ್ರಾಣಮಲನು ದಂಡದಾರಿಮ್ಯೆನ ಕಾಲ ನೀಪುರಮನಕು ವೆಂಡುಗಾ ಪಂಪುದನುರುವರೇ ಮಂಡಿರಕ್ಕಸುಡು ಪ್ರಚಂಡ ಪೌರುಷಮುಲು ನೀಕ್ಯಾಲರಭಂಡಕ್ಕಸ ಸೂಡುವರೇ ದೊಂಗರಕ್ಕಸಾ ನೀವು ದೃಷ್ಟವಾರಲೋ ಅತಿಶ್ರೇಷ್ಠ ಮ್ಯೆನವಾಡನಿ ನೀಕು ನೇನು ಇಟವರಕು ನಾಚೇತ ಸಿಕ್ಕಿ ಯಮಪಟ್ಟಣಮಕು ವೆಡಲಿ ಪೋಯಿನ ಮೀ ಬಂಧುವಲ ತ್ರೋವ ನೀಕು ಚೊಪದನೂರ ನಾ ತೋಡಾ ಯುದ್ಧಮು ಚೇತಸಿಕ್ಕಿ ಯಮ ಪಟ್ಟಣಮಕು ವೆಡಲಿ ಯುದ್ಧಮು ಚೇಯಟುಕು ಸಿದ್ಧಮುಗ ನಿಲ್ವರಾ ರಾಕ್ಷಸಪತೀ ನೀಕು ಸ್ಮಶಾನಮೇ ಗತಿ"[೯] ಹೀಗೆಯೇ ಕನ್ನಡ ಲಿಪಿಯಿಂದ ಕೂಡಿದ ತೆಲುಗು ಭಾಷೆಯನ್ನು ನೋಡಬಹುದು.

ಎಲೈ ಭಂಡ ರಾಕ್ಷಸ ಕುಲದಲ್ಲಿ ಹುಟ್ಟಿ ಮಾಂಸವನು ತಿನ್ನುವ ತಿಂಡಿ ಪೋತನಾಗಿ ತಿರುಗುತ ಈ ಭೂಮಂಡಲಕ್ಕೆ ಬಾರವಾಗಿರುವ ನೀನು ಪ್ರಾಣವನು ಕಾಲ ಪುರುಷನು ಇರುವ ಜಾಗಕ್ಕೆ ಕಳುಹಿಸುವೆ ಎಲೈ ಮಂಡ ರಾಕ್ಷಸ ಪ್ರಚಂಡ ಪೌರುಷ ನಿನಗೆ ಎತಕೆ ಭಂಡ ರಾಕ್ಷಸ ನೋಡಲೆ ಕಳ್ಳ ರಾಕ್ಷಸ ನೀನು ಕೆಟ್ಟವರಲ್ಲಿ ಅತಿ ಶ್ರೇಷ್ಠನಾದವನೆಂದು ನಿನಗೆ ನಾನು ಇಲ್ಲಿಯವರೆಗೆ ನನ್ನ ಕೈಗೆ ಸಿಕ್ಕಿದ್ದೀಯ ನಿನ್ನನ್ನು ಯಮ ಪಟ್ಟಣಕ್ಕೆ ನಿಮ್ಮ ಬಂಧುಗಳ ಹತ್ತಿರ ಕಳಿಸುತ್ತೇನೆ. ತಡಮಾಡದೆ ನನ್ನ ಜೊತೆ ಯುದ್ಧಮಾಡಲು ಬೇಗ ಸಿದ್ಧನಾಗಲೇ ರಾಕ್ಷಸ ನಿನಗೆ ಸ್ಮಶಾನಕ್ಕೆ ದಾರಿಯನು ತೋರಿಸುತ್ತೇನೆ ಎಂದು ಆಂಜನೇಯನು ಹೇಳುತ್ತಾನೆ.

ಎಚ್. ಶ್ರೀಶೈಲ ಆರಾಧ್ಯ

೧. ವರವ ಬೇಡುವೆ ಗುರುವರೇಣ್ಯ ನಾ

೨. ಸ್ವಾಮಿಬಂದ ನೋಡೆ

೩. ಮುರಿಗೆ ಸ್ವಾಮಿಗಳ ಸಿಂಗಾರದ ಪದ

"ವರವ ಬೇಡುವೆ ಗುರುವರೇಣ್ಯ ನಾ
ಕರಣದಿಂದ ಪೊರೆಯುವಂತ ಮುರುಘ ರಾಜನಾ
ಅರಿವೆಯೊಳಗಿನಾ ಹರಳಿನಂದದೀ
ಕುರುಹು ದೋರದಂತೆ ಯಿರುವ ಪರಮ ಯೋಗಿಯಾ ವರವ ಬೇಡುವೆ ಗುರುವರೇಣ್ಯನಾ"[೧೦]

ಈ ಹಾಡಿನಲ್ಲೇ ಬರುವ ಚರಣದಿಂದ ಚಿತ್ರದುರ್ಗ ಸೀಮೆಯ ಓದಿಸುವ ಮಠಗಳ ಅಯ್ಯಗಳು ಈ ಹಾಡನ್ನು ಮಕ್ಕಳಿಂದ ಹಾಡಿಸುತ್ತಿದ್ದಿರಬೇಕೆಂದು ಕಂಡುಬರುತ್ತದೆ.

ಸ್ವಾಮಿ ಬಂದ ನೋಡೆ

"ಸ್ವಾಮಿಬಂದ ನೋಡೆ ಮುರಿಗೆಯದೇವ ಬಂದನೋಡೆ
ಕಾವಿ ಅಂಗಿದಟ್ಟಿ ಪಾದದಿ ಹಾವುಗೆಗಳ ಮೆಟ್ಟಿ
ತಾವರೆ ಮುಖಿ ಕೇಳ್ ಭಾವಜ ಹರನೇ
ತೀವಿಯಿಂದ ಧರೆ ಪಾಲನೆ ಮಾಡುವ
ಸ್ವಾಮಿಬಂದ ನೋಡೆ ಮುರಿಗೆಯ ದೇವಬಂದ ನೋಡೆ॥
ಕೊರಳ ಕಂಠಮಾಲೆ ಆಕರದಲ್ಲಿ ಜಪಮಾಲೆ
ಉರಗಾಭರಣ ವಿಚಾಯ ಯಿಂದಿಲ್ಲ
ಧರೆಯೊಳು ಭಕ್ತರ ಕರುಣದಿ ಸಲಹುವ
ಸ್ವಾಮಿಬಂದ ನೋಡೆ ಮುರಿಗೆಯದೇವ ಬಂದ ನೋಡೆ॥
ಕಂತು ಹರನಲೀಲೆ ಯತಿರಾಯ ಅಂತುಯಿಂತು ಬಾಲೆ
ಕಂತು ಕಪಿಲಸಿದ್ದ ಮಹಾಂತ ಮಲ್ಲೇಶ್ವರಾ
ಶಾಂತ ಮುರಿಗೆ ಗುರುಶಾಂತ ಮೂರುತಿಗೇ
ಸ್ವಾಮಿಬಂದ ನೋಡೆ ಮುರಿಗೆಯ ದೇವಬಂದ ನೋಡೆ॥"[೧೧]

ವ್ಯಕ್ತಿ ಒಡೆತನದ ಹಸ್ತಪ್ರತಿಗಳ ವೈಶಿಷ್ಟ್ಯ

ಕನ್ನಡ ನಾಡಿನ ಹಸ್ತಪ್ರತಿ ಇತಿಹಾಸದಲ್ಲಿ ಚಿತ್ರದುರ್ಗ ಜಿಲ್ಲೆಯ ಹಸ್ತಪ್ರತಿಗಳಿಗೆ ಅದರದೇ ಆದ ಮಹತ್ವದ ಸ್ಥಾನವಿದೆ. ಸಾಮಾನ್ಯವಾಗಿ ಒಂದು ಪ್ರದೇಶದ ಹಸ್ತಪ್ರತಿಗಳಿಗೂ ಮತ್ತೊಂದು ಪ್ರದೇಶದ ಹಸ್ತಪ್ರತಿಗಳಿಗೂ ಕೆಲವೊಂದು ವ್ಯತ್ಯಾಸಗಳಿರುವುದನ್ನು ಕಾಣುತ್ತೇವೆ. ಒಂದು ಪ್ರದೇಶದ ಹಸ್ತಪ್ರತಿಗಳ ವಸ್ತು, ಭಾಷೆ, ಬರವಣಿಗೆಯ ರೂಪ, ಸೌಂದರ್ಯ ಪ್ರಜ್ಞೆ ಈ ಎಲ್ಲಾ ಅಂಶಗಳನ್ನು ನೋಡಿದಾಗ ಇದು ಸ್ಪಷ್ಟವಾಗುತ್ತದೆ. ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳಲ್ಲಿ ಇಲ್ಲಿಯ ಪರಿಸರ, ಜನರ ಆಸಕ್ತಿ, ಜೀವನ ವಿಧಾನಗಳು ಸಾಕಷ್ಟು ಪ್ರಭಾವ ಬೀರಿರುವುದನ್ನು ಇಲ್ಲಿನ ಹಸ್ತಪ್ರತಿಗಳನ್ನು ಗಮನಿಸಿದಾಗ ತಿಳಿಯಬಹುದು. ಕರ್ನಾಟಕದ ಜೈನ, ಶೈವ, ವೈದಿಕ ಪರಂಪರೆಯ, ಸಕಲಲೌಕಿಕ ಆಧ್ಯಾತ್ಮಿಕ, ವೈಚಾರಿಕ, ಸಾಹಿತ್ಯ ಕೃತಿಗಳು ಇಲ್ಲಿ ಕಂಡುಬರುತ್ತವೆ. ಜೊತೆಗೆ ವೈದ್ಯ, ಪ್ರಾಣಿ ಶಾಸ್ತ್ರ, ಪಾಕಶಾಸ್ತ್ರ, ತಂತ್ರ, ಮಂತ್ರ, ಯೋಗ, ಜ್ಯೋತಿಷ್ಯ, ನಿಘಂಟು, ವ್ಯಾಕರಣ, ಛಂದಸ್ಸು ಮುಂತಾದ ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳಿವೆ. ಇವುಗಳಿಗಿಂತ ಮುಖ್ಯವಾಗಿ ಇಲ್ಲಿಯ ಜನರ ಜೀವನಾಡಿಯಾದ ಬಯಲಾಟ ಕಲೆಗೆ ಸಂಬಂಧಿಸಿದ ನೂರಾರು ಹಸ್ತಪ್ರತಿಗಳು ಕಂಡುಬರುತ್ತವೆ.

೨.೨. ಸಾಂಸ್ಥಿಕ ಒಡೆತನದ ಹಸ್ತಪ್ರತಿ ನೆಲೆಗಳು

ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಮಠ–ಮಾನ್ಯಗಳು ಕಂಡುಬರುತ್ತವೆ. ಅವುಗಳಲ್ಲಿ ಸದ್ಯ ನಾಲ್ಕು ಮಠಗಳು ಮಾತ್ರ ಅಸ್ತಿತ್ವದಲ್ಲಿವೆ. ಈ ಎಲ್ಲಾ ಮಠಗಳು ಸಾಹಿತ್ಯ ಸೇವೆಯ ಭಾಗವಾಗಿ ಹಸ್ತಪ್ರತಿಗಳ ಸೃಷ್ಟಿ ಸಂರಕ್ಷಣೆ ಕಾರ್ಯದಲ್ಲಿ ನಿರತವಾಗಿರುವುದು ಕಂಡುಬರುತ್ತದೆ. ಪ್ರಮುಖ ಮಠಗಳೆಂದರೆ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಶ್ರೀ ಉಜ್ಜಯಿನಿ ಮಠ, ಸಿರಿಗೆರೆ ಜಗದ್ಗುರು ತರಳಬಾಳು ಬೃಹನ್ಮಠ, ಸಾಣೆಹಳ್ಳಿ ತರಳಬಾಳು ಸಂಸ್ಥಾನ ಮಠ, ಹಾಗೆಯೇ ಸರಕಾರಿ ಸಂಸ್ಥೆಯಾದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿಯೂ ಹಸ್ತಪ್ರತಿ ಸಂಗ್ರಹ ಕಾರ್ಯ ನಡೆದಿರುವುದು ಕಂಡುಬರುತ್ತದೆ.

೨.೨.೧. ಧಾರ್ಮಿಕ ಸಂಸ್ಥೆ : ಕನ್ನಡ ಸಾಹಿತ್ಯ ಸಂಸ್ಕೃತಿಯ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಮಠ–ಮಾನ್ಯಗಳ ಪಾತ್ರ ಬಹಳ ಮುಖ್ಯವಾದದ್ದು. ನಮ್ಮ ನಾಡಿನಲ್ಲಿ ರೂಪುಗೊಂಡ ವಚನ ಚಳವಳಿಯ ನಂತರ ಸಾಂಸ್ಥಿಕ ನೆಲೆಯಲ್ಲಿ ವೀರಶೈವ ಮಠಗಳು ಜನ್ಮತಾಳಿದವು. ಆ ಮೂಲಕ ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಜೀವನವೂ ಭದ್ರವಾಗಿರುವುದನ್ನು ಕಾಣಬಹುದು. ಇದಕ್ಕೂ ಪೂರ್ವದಲ್ಲಿ ಜೈನ, ವೈದಿಕ ಮಠಗಳು ಅಸ್ತಿತ್ವದಲ್ಲಿದ್ದವು. ಆರಂಭದಲ್ಲಿ ಈ ಮಠಗಳು ಸಾಂಸ್ಥಿಕವಾಗಿ ಸೀಮಿತ ಸಮುದಾಯಕ್ಕೆ ಮಾತ್ರ ಮೀಸಲಾಗಿದ್ದವು. ಹಾಗಾಗಿ ಅವು ವೈಯಕ್ತಿಕ ಹಿತಾಸಕ್ತಿಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಲಾರಂಭಿಸಿದವು. ಆದರೂ ವೈದಿಕ ಮತ್ತು ಜೈನ ಮಠಗಳು ಕನ್ನಡ ಸಾಹಿತ್ಯ, ಧರ್ಮ, ಜನ ಜೀವನದ ಬಗ್ಗೆ ಅಪಾರ ಕಾಳಜಿಯಿಂದ ದುಡಿಯುತ್ತ ಬಂದಿವೆ ಎಂದೂ ಹೇಳಬಹುದು. ಈ ಹಿನ್ನೆಲೆಯಲ್ಲಿ ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ–ಸಾಂಸ್ಕೃತಿಕ ಸಂದರ್ಭದಲ್ಲಿ ಹುಟ್ಟಿಕೊಂಡ ವೀರಶೈವ ಮಠಗಳು ಬಸವಾದಿ ಪ್ರಮಥರ ಜಾತ್ಯಾತೀತ ಹೋರಾಟದ ತಳಹದಿಯ ಮೇಲೆ ರೂಪುಗೊಂಡಿವೆಯೆಂಬುದು ಬಹುಮುಖ್ಯವಾದ ಅಂಶ. ಸಾಮಾಜಿಕ ಅಸಮತೋಲನದಿಂದ ಆಗ ತಾನೇ ಎಚ್ಚರಗೊಂಡಿದ್ದ ಜನಸಮೂಹಕ್ಕೆ ಇಂಥ ಮಠಗಳಿಂದ ತಮ್ಮೊಳಗಿನ ಆಧ್ಯಾತ್ಮಿಕತೆಯ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಪರಿಸರ ನಿರ್ಮಾಣವಾಯಿತು.

ಕರ್ನಾಟಕದಾದ್ಯಂತ ವ್ಯಾಪಿಸಿದ ಗುರು–ವಿರಕ್ತಮಠಗಳು ವಚನಕಾರರ ಆಶೋತ್ತರಗಳನ್ನು ಪಾಲಿಸುತ್ತ ಜಾತ್ಯಾತೀತ ನಿಲುವಿನೊಂದಿಗೆ ಜನರ ಮನಸ್ಸಿನೊಳಗಣ ಹಲವು ಕಷ್ಟ–ನಷ್ಟಗಳಿಗೆ ದಾರಿದೀಪಗಳಾದವು. "ವೀರಶೈವ ಮಠಗಳು ಕೇವಲ ಆಧ್ಯಾತ್ಮಿಕ ಹಸಿವಿಗೆ ಮಾತ್ರ ಕಾರಣವಾಗದೆ ಸಾಮಾಜಿಕ ಜೀವನದ ಮಾರ್ಗಸೂಚಿಯ ಶಿಕ್ಷಣ, ಸದ್ಧರ್ಮ, ಬದುಕಿನ ಕೈದೀವಿಗೆಯಾದವು. ಕನ್ನಡ ನಾಡು–ನುಡಿ, ನೆಲ–ಜಲದೊಂದಿಗೆ ದೇಸಿ ಸಂಸ್ಕೃತಿಯನ್ನು ಅಚ್ಚ ಕನ್ನಡದಲ್ಲಿಯೇ ಪ್ರತಿಬಿಂಬಿಸಿದವು. ವೈದಿಕ ಸಂಸ್ಕೃತಿಯೊಂದಿಗೆ ಸರಿಸಮನಾಗಿ ನಿಲ್ಲುವ ಉದ್ದೇಶದಿಂದ ಸಂಸ್ಕೃತ ಭಾಷೆಯನ್ನು ಕಲಿಸತೊಡಗಿದರೂ, ಕೆಲವು ವೀರಶೈವ ಮಠಗಳು ಸರ್ವರಿಗೂ ಶಿಕ್ಷಣ ಎಂಬ ಆಶಯದಿಂದ ಹುಟ್ಟಿಕೊಂಡದ್ದನ್ನು ಮರೆಯುವಂತಿಲ್ಲ. ಹನ್ನೆರಡನೆಯ ಶತಮಾನದ ವಚನ

ಸಾಹಿತ್ಯವನ್ನಲ್ಲದೇ ವೀರಶೈವ ಕಾವ್ಯ, ಪುರಾಣ, ಶಾಸ್ತ್ರಗ್ರಂಥಗಳನ್ನು ಪ್ರಕಟಿಸಿದ ಕೀರ್ತಿ ಈ ಮಠಗಳಿಗೆ ಸಲ್ಲುತ್ತದೆ. ಕನ್ನಡ ನಾಡಿನಾದ್ಯಂತ ಪ್ರತಿಭಾ ಸಂಪನ್ನರಿಂದ ರಚನೆಗೊಂಡ ಕಾವ್ಯ, ಪುರಾಣಶಾಸ್ತ್ರ, ವಚನ ಸ್ವರವಚನಗಳನ್ನೊಳಗೊಂಡ ಹಸ್ತಪ್ರತಿಗಳನ್ನು ಲಿಪ್ಯಂತರ ಮಾಡಿಸುವ ಮೂಲಕ ತಾಳೆಪ್ರತಿ, ಕೋರಿಕಾಗದ ಪ್ರತಿ, ತಾಮ್ರಪತ್ರಗಳಂಥ ಆಕರ ಸಾಮಗ್ರಿಗಳನ್ನು ಕಾಯ್ದಿರಿಸಿಕೊಂಡು ಬಂದಿವೆ. ಅವುಗಳನ್ನು ಸಂರಕ್ಷಿಸುವ ಗುರುತರ ಜವಾಬ್ದಾರಿಯನ್ನು ಹೊತ್ತುಕೊಂಡಿರುವುದು ನಾಡಿನ ಸುದೈವವಾಗಿದೆ. ವಿಶೇಷವಾಗಿ ವಚನ ಸಾಹಿತ್ಯವನ್ನು ಹಲವಾರು ವಿದ್ವಾಂಸರ ಅಧ್ಯಯನದ ದಾಹ, ಮಠಾಧಿಪತಿಗಳ ಸಾಹಿತ್ಯಾಸಕ್ತಿಯಿಂದಾಗಿ ಹೆಚ್ಚಿನ ಸಂಖ್ಯೆಯ ಹಸ್ತಪ್ರತಿಗಳು ಮಠಗಳಲ್ಲಿ ಸಂಗ್ರಹವಾಗಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಶಿವಯೋಗಮಂದಿರ, ಗದುಗಿನ ತೋಂಟದಾರ್ಯ ಮಠ, ಬೆಳಗಾವಿಯ ನಾಗನೂರು ಶ್ರೀ ರುದ್ರಾಕ್ಷಿ ಮಠ, ಹುಬ್ಬಳ್ಳಿಯ ಮೂರು ಸಾವಿರ ಮಠ, ಧಾರವಾಡದ ಮುರುಘಾ ಮಠ, ಚಿತ್ರದುರ್ಗ ಮುರುಘಾಮಠ, ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠ ಮುಂತಾದ ವೀರಶೈವ ಮಠಗಳು ಅಪಾರ ಹಸ್ತಪ್ರತಿ ಸಂಗ್ರಹಗಳು ಬಹುಮುಖ್ಯವಾದವು. ಚಿತ್ರದುರ್ಗದ ಮುರುಘಾ ಬೃಹನ್ಮಠ ಮಠಗಳಂಥ ಧಾರ್ಮಿಕ ಕೇಂದ್ರಗಳಲ್ಲಿ ಒಂದು ಕೃತಿಯ ಒಂದಕ್ಕಿಂತ ಹೆಚ್ಚು ಪ್ರತಿಗಳು ಸಿಗುತ್ತವೆ. ಬಹುಶಃ ಭಕ್ತರು ತಮ್ಮ ಇಚ್ಛಾನುಸಾರ ಕಾಲಕಾಲಕ್ಕೆ ಬರೆದು ಅರ್ಪಿಸಿದುದು ಇಲ್ಲವೆ ಈ ಸಾರ್ವಜನಿಕ ಭಂಡಾರಗಳಲ್ಲಿ ಓದಲು ಏಕಕಾಲಕ್ಕೆ ಹಲವು ಪ್ರತಿಗಳು ಬೇಕೆಂಬುದು ಇದಕ್ಕೆ ಕಾರಣವಾಗಿರಬಹುದು. ಚಿತ್ರದುರ್ಗ ಬೃಹನ್ಮಠದ ೩೬೦೦ ಕನ್ನಡದ ಹಸ್ತಪ್ರತಿಗಳಲ್ಲಿ ಅಕ್ಕಗಳ ಸೃಷ್ಟಿಯ ವಚನ ೩೫, ಅಕ್ಷರ ಮಾಲಿಕಾ ಗದ್ಯ ೩೨, ಅಕರಾಂಕನಗದ್ಯ ೩೪, ಅನುಭವಸಾರ ೧೯, ಅಷ್ಟಾವರಣ ಸ್ತೋತ್ರದ ತ್ರಿವಿಧಿ ೩೧, ಏಕೋತ್ತರ ಶತಸ್ಥಲ (ಜಕ್ಕಣ) ೨೫, ಕರ್ನಾಟಕ ಶಬ್ದಾಮಂಜರಿ ೧೬, ಕರಣ ಹಸಿಗೆ (ಚೆನ್ನಬಸವಣ್ಣ) ೪೭, ಕೈವಲ್ಯಪದ್ಧತಿ ೧೩, ಗಿರಿಜಾಕಲ್ಯಾಣ ೮ ಪ್ರಭುದೇವರ ಟೀಕಿನ ವಚನ ೭, ಪ್ರಭುಲಿಂಗಲೀಲೆ ೧೫, ಬಸವ ಪುರಾಣ ೬, ಮಂತ್ರ ಮಹತ್ವಕಂದ ೨೮, ರಾಜಶೇಖರ ವಿಳಾಸ ೭, ವಿವೇಕ ಚಿಂತಾಮಣಿ ೧೨, ಶಬರ ಶಂಕರ ವಿಳಾಸ ೭, ಷಟ್‌ಸ್ಥಲ ಜ್ಞಾನ ಸಾರಾಮೃತ ೧೦ ಹೀಗೆ ಪ್ರತಿಗಳು ಸಿಗುವುದು ಗಮನಿಸಬೇಕಾದ ಸಂಗತಿಯಾಗಿದೆ.[೨]

"ಚಿತ್ರದುರ್ಗದ ಬೃಹನ್ಮಠಕ್ಕೆ ವೀರಶೈವ ಮಠಪರಂಪರೆಯಲ್ಲಿ ವಿಶಿಷ್ಟ ಸ್ಥಾನವಿದೆ. ಇದಕ್ಕೆ ತಕ್ಕಂತೆ ವಿಫುಲ ಸಂಖ್ಯೆಯ ಗ್ರಂಥಗಳನ್ನುಳ್ಳ ಭಂಡಾರವನ್ನು ಅದು ಬೆಳೆಸಿಕೊಂಡು ಬಂದಿದೆ. ಇಲ್ಲಿ ಒಟ್ಟು ೭೧೫ ಹಸ್ತಪ್ರತಿ ಕಟ್ಟುಗಳಿವೆ. ಇವುಗಳ ಒಡಲಲ್ಲಿ ಕನ್ನಡ ಭಾಷೆಯ ಪ್ರತಿ ೩೬೦೦ ಸಂಸ್ಕೃತ ಭಾಷೆ ಕನ್ನಡ ಲಿಪಿಯ ಪ್ರತಿ ೧೦೩೭, ಹಿಂದಿ ಭಾಷೆ ಕನ್ನಡ ಲಿಪಿಯ ತೆಲುಗು ಭಾಷೆ ಕನ್ನಡ ಲಿಪಿಯಪ್ರತಿ ೧, ಸಂಸ್ಕೃತ ಭಾಷೆ ದೇವನಾಗರಿ ಲಿಪಿಯಪ್ರತಿ ೧೨, ಹೀಗೆ ಒಟ್ಟು ೪೬೬೧ ಪ್ರತಿಗಳು ಅಡಕವಾಗಿವೆ. ರಾಘವಾಂಕನ ಹರಿಶ್ಚಂದ್ರ ಕಾವ್ಯ, ಸಿದ್ಧರಾಮನ ಚರಿತ್ರೆ ಮಗ್ಗೆಯಮಾಯಿದೇವನ ಕೃತಿಗಳು ಇಲ್ಲವೆಂಬುದನ್ನು ಬಿಟ್ಟರೆ ವಚನ ಸಾಹಿತ್ಯ ಸ್ವರವಚನ

ಸಾಹಿತ್ಯದಂಥ ಮೌಲಿಕ ವಾಙ್ಮಯ, ಗಿರಿಜಾಕಲ್ಯಾಣ, ಚನ್ನಬಸವಪುರಾಣ, ಬಸವಪುರಾಣ, ಪ್ರಭುಲಿಂಗಲೀಲೆ, ರಾಜಶೇಖರ ವಿಳಾಸ ಮೊದಲಾದ ವೀರಶೈವ ಮುಖ್ಯ-ಅಮುಖ್ಯ ಕೃತಿಗಳು ಇಲ್ಲಿ ಕಂಡುಬರುತ್ತವೆ. ಇತ್ತೀಚೆಗೆ ಶ್ರೀ ಜಗದ್ಗುರು ಮುರುಘಾರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ ಹೆಸರಿನ ಗ್ರಂಥ ಪ್ರಕಟವಾಗಿದ್ದು ಸಂಪಾದಕರಾದ ಎಸ್. ಶಿವಣ್ಣ ಅವರ ಪ್ರಕಾರ ಕವಿಚರಿತೆಯಲ್ಲಿ ಉಕ್ತರಾಗದ ಹೊಸ ಲೇಖಕರು ೬೫ ಜನ ಕವಿಚರಿತೆಯಲ್ಲಿ ಉಕ್ತರಾಗಿರುವ ಲೇಖಕರ ಹೆಚ್ಚಿನ ಕೃತಿಗಳು ೨೫, ಕವಿ ಚರಿತೆಯಲ್ಲಿ ಉಕ್ತವಾಗದ ಕೃತಿಗಳು ೮೨",[೧೩] ಎಂದು ತಿಳಿದುಬರುತ್ತದೆ. ಇಲ್ಲಿಯ ಹಸ್ತಪ್ರತಿಗಳ ಆದ್ಯಂತ್ಯದಲ್ಲಿರುವ ಲಿಪಿಕಾರ ಪ್ರಶಸ್ತಿಯಿಂದ ಅನೇಕ ಚಾರಿತ್ರಿಕ ವಿಚಾರಗಳು ಬೆಳಕಿಗೆ ಬರುತ್ತಿರುವುದು ವಿಶೇಷದ ಸಂಗತಿಯಾಗಿದೆ.

ಹಸ್ತಪ್ರತಿಗಳ ಸಂಗ್ರಹ ಮತ್ತು ಸಂರಕ್ಷಣೆಯಲ್ಲಿ ಚಿತ್ರದುರ್ಗ ಮುರುಘಾರಾಜೇಂದ್ರ ಬೃಹನ್ಮಠವು ಹಿಂದೆ ಬಿದ್ದಿಲ್ಲ. ಇಲ್ಲಿ ಬಸವ, ಅಲ್ಲಮ, ಚನ್ನಬಸವ, ಅಕ್ಕಮಹಾದೇವಿ ಮೊದಲಾದ ಶರಣರ ವಚನ-ಸ್ವರವಚನಗಳು, ಹರಿಹರ, ರಾಘವಾಂಕ, ಭೀಮಕವಿ ಮುಂತಾದ ಶಿವಕವಿಗಳ ಕಾವ್ಯ ಪುರಾಣಗಳು, ವಿವಿಧ ಕವಿಗಳ ಲಘುಕೃತಿಗಳು, ಶಾಸ್ತ್ರ ಗ್ರಂಥಗಳ ಹಸ್ತಪ್ರತಿಗಳ ಸಂಗ್ರಹವು ಅಧ್ಯಯನ ಯೋಗ್ಯವಾಗಿವೆ. ಜೊತೆಗೆ ಜನಪ್ರಿಯ ಕಾವ್ಯಗಳು, ಸ್ವರವಚನಗಳು, ಹಾಡುಗಳ ಪ್ರತಿಗಳು ಅಧಿಕ ಸಂಖ್ಯೆಯಲ್ಲಿವೆ. ಕರ್ನಾಟಕ ಕವಿಚರಿತೆಯಲ್ಲಿ ಉಕ್ತವಾಗದ ಅಕ್ಷರಾಂಕನಗದ್ಯ, ಛಂದಸ್ಸಿನ ಗಣನೆಯ ವಾರ್ಧಕ, ನಕ್ಷತ್ರ ಚೂಡಾಮಣಿಗಳಂಥ ಅನೇಕ ಕೃತಿಗಳು ನೂರೊಂದು ಸ್ಥಲದ ವ್ಯಾಖ್ಯಾನ ಶ್ರೀರುದ್ರಭಾಷ್ಯದ ಟೀಕು ಮೊದಲಾದ ಅಪ್ರಕಟಿತ ಕೃತಿಗಳ ಹಸ್ತಪ್ರತಿಗಳಿರುವುದು. ಈ ಮಠದ ಪರಂಪರೆಯಲ್ಲಿ ಬರುವ ಇಮ್ಮಡಿ ಮುರುಘಾಗುರುಸಿದ್ಧನ ಅನೇಕ ಕೃತಿಗಳು ಇಲ್ಲಿದೆ. ಚಿತ್ರದುರ್ಗ ಪಾಳೆಯಗಾರರಿಗೆ ಸಂಬಂಧಿಸಿದ ದಾಖಲೆಗಳಿರುವುದು ಈ ಸಂಗ್ರಹದ ವಿಶೇಷತೆಯಾಗಿದೆ".[೧೪] ಹಸ್ತಪ್ರತಿಗಳನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದಂತೆ ಅವುಗಳ ಪ್ರಕಟಣೆಯ ಕಡೆಗೂ ಶ್ರೀ ಮಠವು ಗಮನಹರಿಸಬೇಕಾಗಿದೆ.

* "ಶ್ರೀ ವಿಜಯಭ್ಯೂದಯ ಶಾಲಿವಾನಹ ಶಾಕಬ್ದಾ:೧೭೮೫ ನೆ ಪ್ರವರ್ತಮಾನಕ್ಕೆ
ಸಲುವ ದುಂದುಭಿನಾಮ ಸಂವತ್ಸರ ದಕ್ಷಿಣಾಯನೆ ಹಿಮಂತ್ರು ತೌ ಮಾರ್ಗಶಿರ
ಮಾಸೆ ಶುಕ್ಲಪಕ್ಷೆತಿಥೌ ೨ ಭಾನುವಾರ ಜೇಷ್ಠ ನಕ್ಷತ್ರ ಮಧ್ಯಾನ್ಹ ಚಂನ
ಬಸವಪುರಾಣಂ ಲಿಖ್ಯತೆ ಶುಭಾಮಸ್ತು
ಶಾಲಿವಾಹನ ಶಕಾಬ್ದಾ ೧೭೮೫ನೆಯ ಪ್ರವರ್ತಮಾನಕ್ಕೆ ಸಲುವ
ದುಂದುಭಿನಾಮ ಸಂವತ್ಸರೆ ಉತ್ತರಾಯನೆ ಶಶಿರುತೌ ಫಾಲ್ಗುಣ
ಮಾಸೆ ಕೃಷ್ಣ ಪಕ್ಷೆ ತಥೌ ಚತುರ್ದಶಿ ೭೭ ಘಟ ೧೧ ಪಳ ಶತತಾರ
ನಕ್ಷತ್ರ ೨೦ ಘಟ ೧ ಸುದಿವಸ ಬೀರೂರಲ್ಲಿರುವ ತ್ಯಾವಣಿಗೆ ಮಠದ

ದತ್ತ ಪುರಯ್ಯನವರ ತನೂಭವ ಶಿವಲಿಂಗದೇವಾಹ್ವಯ ಸುಹಸ್ತದಿಂ

ಚನ್ನಗಿರಿಯಲ್ಲಿರುವ ಜವಳಿ ನಾಗಪ್ಪನವರುದರುದ್ಭವರಾದ ಜೇಷ್ಟ ಪುತ್ರ

ವೀರಪ್ಪಗೆ ಸದಾ ಸ್ಥಿರತರಾರೋಗ್ಯ ಸೌಭಾಗ್ಯ ಲಕ್ಷ್ಮೀ

ಸಂಪತ್ಸ ಮುದ್ಯಾಗಳೆಂದು ಸ್ವಾಮಿ ಪ್ರಾರ್ಥನೆಯಿಂದ ಸದರಿ

ಪೌರಾಣವಂನು ಲಿಖಿಸಿ ಕೊಡುವಂಥಾದ್ದು ಯಿವತ್ತಿನ ಸುದಿವಸ

ದಿನ ೬ ತಾಸಿನಲ್ಲಿ ಸಂಪೂರ್ಣವಾದದ್ದಕ್ಕೆ ಮಂಗಳ ಮಹ ಶ್ರೀ ಶ್ರೀ

ಶ್ರೀ ಕು(ಕ)ಉಲೆದುರ್ಗದ ತಾಲ್ಲೊಕ್ಕೊ ಗರಗಲ್ಲು ಮಠದಲ್ಲು ಮುಗಿದಂಥಾದ್ದಕ್ಕೆ ಶಿವಾರ್ಪಣಮಸ್ತು"[೧೫]

ಕ್ರಮ ಸಂಖ್ಯೆ ೨೨೮೪ ಕೃತಿಯ ರಚನೆಯಾದ ಕಾಲ ೧೭೮೫; ಕಾಗದದ ಹಸ್ತಪ್ರತಿ, ಇದರಲ್ಲಿ ೧ರಿಂದ ೩೦೮ ಪ್ರತಿಗಳು ಇದರಲ್ಲಿರುವುದನ್ನು ನೋಡಬಹುದು. ಇದು ಸಮಗ್ರ ಕೃತಿಯಾಗಿದೆ. ಕಾಗದದ ಹಸ್ತಪ್ರತಿಯನ್ನು ದಪ್ಪರಟ್ಟಿನಿಂದ ದಾರದಲ್ಲಿ ಹೊಲಿಯಲಾಗಿದೆ. ಹಾಗಾಗಿ ಇದರ ಭೌತಿಕ ಸ್ಥಿತಿ ಉತ್ತಮವಾಗಿದೆ. ಈ ಪ್ರತಿಯಲ್ಲಿ ಕೆಲವೊಂದು ಸಾಲುಗಳಲ್ಲಿ ಅಕ್ಷರಗಳು ಲೋಪಗೊಂಡಿರುವುದನ್ನು ನೋಡಬಹುದು. ಈ ಪ್ರತಿಯು ಚಿತ್ರದುರ್ಗದ ಮುರಾಘಾರಾಜೇಂದ್ರ ಬೃಹನ್ಮಠದ ಸಂಗ್ರಹಾಲಯದಲ್ಲಿದೆ.

"ಸರ್ವಧಾರಿ ಸಂವತ್ಸರದ ಶ್ರಾವಣ ಬಃಲೂ ಅರುಟಾಳ ಮಠದ

ಶಾಂತದೇವರ ಶಿಷ್ಯರು ಕೆಂಚಸಿದ್ದೆಯ ದೇವರು ಹಣಬೆ ಮಠದ

ಚಂನ ವೀರಣೊಡೆದ್ದೇವರ ಶಿಷ್ಯ ಸಿದ್ಧ ಇಯ್ಯನಿಗೆ ಬಂದಏಕೋತ್ತರ"[೧೬]

ಕ್ರಮಸಂಖ್ಯೆ ೭೫೨ ಓಲೆಪ್ರತಿ ಸಂಖ್ಯೆ ೩೪೪/೧, ಓಲೆಪ್ರತಿಯಲ್ಲಿರುವ ಪ್ರತಿಗಳು ೧ರಿಂದ ೧೧೬ ಇವೆ. ಸಮಗ್ರ ಕೃತಿಯಾಗಿದೆ. ಅಕ್ಷರಗಳು ಸ್ಪಷ್ಟವಾಗಿದ್ದು, ಓಲೆಪ್ರತಿಯು ಸಾಧಾರಣವಾಗಿದೆ. ಇದು ಮುರುಘಾಮಠದ ಹಸ್ತಪ್ರತಿ ಸಂಗ್ರಹಾಲಯದಲ್ಲಿದೆ.

ಅರುಟಾಳಮಠ ಶಾಂತ ದೇವರ ಶಿಷ್ಯ ಕೆಂಚಸಿದ್ದೆಯ ದೇವರು ಹಣಬೆಮಠದ ಚಂನ ವೀರಣೊಡೆದ್ದೇವರ ಶಿಷ್ಯನಾದ ಸಿದ್ಧ ಇಯ್ಯನಿಗೆ ಬರೆದ ಏಕೋತ್ತರ ಶತಸ್ಥಲದ ಕೃತಿಯಾಗಿದೆ.

* "ಪಾರ್ತಿವ ಸಂದ ಮಾಘ ಬ೧೧ಲ್ಲು ಮಾದಳ್ಳಿ ಮಠದ ಚಿಕ

ವೀರಂಣೊಡೆಯದೇವರ ಶಿಷ್ಯರು ಶಿವನಂ ಕಾಠದೇವರಿಗೆ ತಗಡೂರ

ದೊಡಮಲ್ಲೊಡೆಯರ ಕುಮಾರ ಚಂದ್ರೊಡೆಯರು ತಮ್ಮ ಭಕ್ತಿಯಿಂದ

ಬೈಚಣ್ಣೊಡೆಯರ ಹಸ್ತದಲ್ಲಿ ಬರಯಿಸಿಕೊಟ್ಟ ಏಕೋತ್ತರ ಶತಸ್ಥಲ

ಶಿವಾರ್ಪಣ ಮಸ್ತು"[೧೭]

ಕ್ರಮಸಂಖ್ಯೆ ೭೫೩, ಓಲೆಪ್ರತಿ, ಇದರ ರಚನೆಯಾದ ಕಾಲ ೩೯೯; ಓಲೆಗರಿ ಹಸ್ತಪ್ರತಿಯಲ್ಲಿರುವ ಪ್ರತಿಗಳು ೧ರಿಂದ ೧೮೦ರವರೆಗೆ. ಇದರಲ್ಲಿ ಬರೆದ ಲಿಪಿ ಮತ್ತು ಭಾಷೆ ಹಿಂದಿ ಸಮಗ್ರ ಕೃತಿ

[illegible]

ಕೃತಿಯ ಹೆಸರು ಏಕೋತ್ತರ ಶತಸ್ಥಲ, ಲಿಪಿಕಾರ ಕುಮಾರ ಚಂದ್ರೊಡೆಯರು ಅಕ್ಷರಗಳು ಉತ್ತಮವಾಗಿವೆ. ತಗಡೂರ ದೊಡಮಲ್ಲೊಡೆಯರು ಕುಮಾರ ಚಂದ್ರೊಡೆಯರು ಭಕ್ತಿಯಿಂದ ಬೈಚಣ್ಣೊಡೆಯ ಹತ್ತಿರ ಬರೆಸಿಕೊಟ್ಟ ಏಕೋತ್ತರ ಶತಸ್ಥಲ ವಚನವಾಗಿದೆ.

* "ಶಶಿಶೇಖರಾಯನಮಃ

ಚಂನಮಲ್ಲೇಶ್ವರಾಯ ನಮಃ

ಈ ಯೇಕೋತ್ತರ ಸತಸ್ಥಲವನು ಕೀಲಕ ಸಂವತ್ಸರದ ಆಶ್ವೀಜ

ಮಾಸದ ಬಹುಳ ಸಪ್ತಮಿ ಬೃಹಸ್ಪತಿವಾರದಲ್ಲು ಗುಂಮ್ಮಳಾಪುರದ

ಹಿರಿಯ ಮಠದ ಪರಮಾನಂದದೇವರ ಶಿಷ್ಯರು ಬಸವ ಪ್ರಭುದೇವರಿಗೆ

ನಣಂಚಿಯ ಮಠದ ಮರುಳಸಿದ್ದದೇವರ ಶಿಷ್ಯರು ಚಂದ್ರಶೇಖರದೇವರ

ಶಿಷ್ಯನು ಮರುಳಸಿದ್ದದೇವರು ಬರೆದ ಪುಸ್ತಕ ಶಿವಗಣಂಗಳ

ಪಾದಕ್ಕೆ ಸಮಾಪ್ತಿ"[೧೮]

ಚಿತ್ರದುರ್ಗ ಮುರುಘಾರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಭಂಡಾರದಲ್ಲಿ ಕ್ರಮಸಂಖ್ಯೆ ೨೫೪ ಓಲೆ ಪ್ರತಿಯ ಹಸ್ತಪ್ರತಿಯಾಗಿದೆ. ಕೃತಿ ರಚನೆಯಾದ ಕಾಲ ೬೫೯. ಇದರಲ್ಲಿ ೧ರಿಂದ ೨೦೨ ಓಲೆ ಪ್ರತಿಗಳಿರುವುದನ್ನು ಗಮನಿಸಬಹುದು. ಇದು ಸಮಗ್ರ ಕೃತಿಯಾಗಿದೆ. ಓಲೆ ಪ್ರತಿಗಳು ಉತ್ತಮ ಸ್ಥಿತಿಯಲ್ಲಿವೆ. ಅಕ್ಷರಗಳನ್ನು ಓದಲು ದುಂಡಾಗಿ ಸ್ಪಷ್ಟವಾಗಿ ಕಾಣುತ್ತವೆ. ಗುಂಮ್ಮಳಾಪುರದ ಹಿರಿಯಮಠದ ಪರಮಾನಂದ ದೇವರ ಶಿಷ್ಯರು ಬಸವ ಪ್ರಭುದೇವರಿಗೆ ನಣಂಚೆಯ ಮಠದ ಮರುಳಸಿದ್ದದೇವ ಮತ್ತು ಚಂದ್ರಶೇಖರದೇವ ಬರೆದ ಪುಸ್ತಕವನ್ನು ಕಾಣಬಹುದು.

ಶಾಲಿವಾಹನ ಸಖವರ್ಷಂಗಳು ಸಂದ ೧೦.೦೦೦ ೭೭೩ನೆ ಶುಕ್ಲನಾಮ ಸಂ\ದ ಕಾರ್ತಿಕ ಶುದ್ಧ ಪಂಚಮಿ ಸೋಮವಾರದಲ್ಲು ವಪ್ಪಹತ್ತಿನಕಡೆ ಚರಮೂರ್ತಿಗಳಾದ ನೀಲಕಂಠಪ್ಪನವರು ಪಚ್ಚೆಕಂಥೆ ಕಡೆ ಬಸವಲಿಂಗದೇವರು ಬರದು ಸಮಾಪ್ತಿಯಾಯಿತ್ತು.

"ಶ್ರೀ ಮುರಿಗಾ ಜಗದ್ಗುರುಸ್ವಾಮಿನೆ ನಮಃ

ಶ್ರೀ ಗುರು ಶಿವನಂ ಕಾರೇಶ್ವರಾಯ ನಮಃ

ಶ್ರೀ ಗುರು ಚೆನ್ವೀರೇಶ್ವರಾಯ ನಮಃ

ಶ್ರೀ ಗುರು ತೋಂಟದ ಸಿದ್ಧಲಿಂಗೇಶ್ವರಾಯ ನಮಃ

ಶ್ರೀ ಗುರು ಸ್ವತಂತ್ರ ಸಿದ್ದೇಶ್ವರಾಯ ನಮಃ

ಶ್ರೀ ಗುರು ಶಾಂತಮಲ್ಲೇಶ್ವರಾಯ ನಮಃ"[೧೯]

ಕ್ರಮಸಂಖ್ಯೆ ೭೧೨, ಓಲೆಪ್ರತಿ ಸಂಖ್ಯೆ ೪೬೦, ಪ್ರತಿಗಳು ೧ರಿಂದ ೯೯ರವರೆಗೆ ಇವೆ. ಕೃತಿ

ರಚನೆಯಾದ ಕಾಲ ಶ. ೧೭೭೩ ಇದು ಬೃಹನ್ಮಠದ ಸಂಗ್ರಹಾಲಯದಲ್ಲಿದೆ. ಸಮಗ್ರವಾದ ಕೃತಿಯಾಗಿದೆ. ಓಲೆ ಪ್ರತಿಗಳು ಶಿಥಿಲಗೊಂಡಿವೆ. ಅಕ್ಷರಗಳು ದುಂಡಾಗಿರುದು ಗಮನಾರ್ಹ. ಕೃತಿಯು ಪ್ರಚಲಿತದಲ್ಲಿರುವುದನ್ನು ನೋಡಬಹುದಾಗಿದೆ. ಕೃತಿಯನ್ನು ನೀಲಕಂಠಪ್ಪನವರು ಮತ್ತು ಕಡೆ ಬಸವಲಿಂಗ ದೇವರು ಬರೆದಿರುವುದನ್ನು ಕಾಣಬಹುದು.

* "ಆದಿ ಶ್ರೀ ಗುರು ಮುರಿಗಾ ಶಾಂತವೀರೇಶ್ವರಾಯ ನಮಃ

ಶ್ರೀ ಮದ್ಗುರು ಲೀಲಾಖ್ಯ ದೇಶಿಕೇಂದ್ರೋಭ್ಯೋ ನಮಃ

ಚನ್ನವೀರ ದೇಶಿಕೇಂದ್ರೋಭ್ಯೋ ನಮಃ

ಶ್ರೀ ಗುರು ಸ್ವತಂತ್ರ ಸಿದ್ಧಲಿಂಗೇಶ್ವರಯ ನಮಃ

ಶ್ರೀ ಮುರಿಗಾ ಜಗದ್ಗುರುವೇ ನಮಃ

ಬರಹವ ಕಲಿತವನಲ್ಲದೆ

ತರುಣನು ಬರೆದಂತ ಬರದಂತ ಬರೆದ ಅಕ್ಷರಂಗಳು

ಹರ ಶರಣರು ವೋದಿ ನೋಡಿರಿ

ಕೊರತೆಯ ಅಕ್ಷರವ ಕಂಡಾ ಸೈರಣಿ ಮಾಳ್ಪುರೂ"[೨೦]

ಕ್ರಮಸಂಖ್ಯೆ ೧೭೯ ಓಲೆಪ್ರತಿ ಗರಿಗಳು ೧ರಿಂದ ೫೮ ಸಮಗ್ರ ಕೃತಿಯಾಗಿದೆ.

* "ಶ್ರೀ ಗುರು ಚಿನ್ಮೂಲ ಮುರಿಗೇಂದ್ರಾಯ ನಮಃ

ಸ್ವಸ್ತಿ ಶ್ರೀ..... ಶಾಲಿವಾಹನ ಶಖವರುಷಂಗಳು ೧೭೭೮ ರಾಕ್ಷಸ ಸಂವತ್ಸರದ

ಆಷಾಡ ಶುದ್ಧ ೫ಯಲಲ್ಲಿ ಶ್ರೀ ಮೇದ್ವೆದ ವೇದಾಂತ ಪ್ರತಿಪಾದಿತ ವೀರಶೈವ

ಸಮಯ ಶತಕೇಕೋತ್ತರಸ್ಥಲೋಕ್ತ.... ಸನ್ಮೋಹನಾಂಗ ಮದನ ಮರ್ದನ

ಮಾಯಾ ಕೋಳಾಹಲ ನಿತ್ಯ ನಿರಂಜನ ನಿರಾಕಾರ ನಿಗಮಗೋಚರ.... ಶ್ರೀ

ಮದಲ್ಲಮಪ್ರಭುಸ್ವಾಮ್ಯನ್ವಯ ಸಂಜನಿತನಾಂ ಶ್ರೀ ಮದ್ವೀರಶೈವ ಸಿದ್ಧಾಂತ

ಸಕಲ ಸಿಂಹಾಸನಾಧೀಶ ಷಟುಸ್ಥಲಸ್ಥಾನಾಚಾರ್ಯವರ್ಯಾಣಂ ಶ್ರೀ ಮದ್ಗುರು

ಅಡವೀಶ ಕರಜಾತಮೂರ್ತಿ ಕೂಡಲಸಂಗಮಗೆ ಮೋಕ್ಷಾರ್ಥ ಕೊಡಲ್ಪಟ್ಟಂಥ

ಮಹಾಸ್ವಾಮಿ ಅಡವೀಶನ ಪಾದಕ್ಕೆ ಶ್ರೀ ಮತರ್ಪ ಮಪಾವನ ಸದ್ಗುರು ಪದ

ನಖಚಂದ್ರ ಸಾಂದ್ರ ಚೇಂದ್ರಿಕಾ ಚಂಚ ಚಕೋರಾಯಮಾನರಾದಂಥ ಯಿಕ್ಕ

ನೂರಮಠ ಗುರುಲಿಂಗೈಯ್ಯ ಪುತ್ರ ಶಿದ್ದಪ್ಪನ ಕುಮೊರನಾದ ಶಿವೈಯ್ಯನು

ಬರೆದು ವಪ್ಪಿಸಿದ ಪ್ರಭುಲಿಂಗಲೀಲೆ"[೨೧]

ಕ್ರಮಸಂಖ್ಯೆ ೪೮೩, ಓಲೆಪ್ರತಿ ಇದರ ಸಂಖ್ಯೆ ೨೪೪೮, ಕೃತಿ ರಚನೆಗೊಂಡ ಕಾಲ ೧೭೭೮, ಗರಿಗಳು ೧ರಿಂದ ೬೬ರವರೆಗೆ ಇವೆ. ಈ ಕೃತಿಯು ಅಪೂರ್ಣಗೊಂಡಿದೆ. ಗರಿಗಳು ಉತ್ತಮ ಸ್ಥಿತಿಯಲ್ಲಿವೆ.

* "ಶ್ರೀ ಗುರು ಮುರಿಗೆ ಶಾಂತವೀರಸ್ವಾಮಿಗಳ....

ಶ್ರೀ ಗುರುಲಿಂಗ ಜಂಗಮದ ಪಾದಪದ್ಮಂಗಳಿಗೆ.... ಈ ಪುಸ್ತಕವ ಬರದವರು

ಆರೆಂದಡೆ ಕಂಡತ್ತಿಮಠದ ಪರುತ್ತದೇವರು ಪುಸ್ತಕ ಬರೆದವರು ರಾಮ

ಘಟ್ಟದ ಬಸವಲಿಂಗದೇವರು ಯೆತ್ತಿದ ಪ್ರತಿ ಕ್ರೋಧನ ಸಂವತ್ಸರದ

ಆಶ್ವೀಜ ಬಹುಳ ಏಳರಲ್ಲು ಸೋಮವಾರದ ಏಳು ತಾಸಿಗೆ ಗಂಗೆ ಗಿರಿಜೆ

ಸಂವಾದ ಸಂಪೂರ್ಣ"[೨೨]

ಕ್ರಮಸಂಖ್ಯೆ ೬೫೧, ಓಲೆಪ್ರತಿ ಸಂಖ್ಯೆ ೫೮/೧, ಗರಿಗಳು ೧ರಿಂದ ೬೫ ಸಮಗ್ರ ಕೃತಿ

ಪುರುಷ ಸೂತ್ರ ಸಹಸ್ರನಾಮ

"ಶ್ರೀ ಮತು ಖಾಸದ ಸೋಲೂರ ಗುಂಟನೂರ ಮಠದ ಸಂಗನ

ಬಸವಪ್ಪನವರು ಸರ್ವಧಾರಿ ಸಂವತ್ಸರದ ಶ್ರಾವಣಸುದ್ಧ ವ್ಯಾಲ

ಚೌತಿ ಗುರುವಾರದ ಪ್ರಾತಃ ಕಾಲದಲ್ಲಿ ಶ್ರೀ ರುದ್ರಚಮೆ ಪುರಾಷ ಸೂಕ್ತ

ಸಹಸ್ರ ನಾಮಂಗಳ ಸೇರುವೆಯ ಪುಸ್ತಕ ಬರೆದು ಮುಗಿದ

ಪುಸ್ತಕಕ್ಕೆ ನಿರ್ವಿಘ್ನಮಸ್ತು"[೨೩]

ಕ್ರಮಸಂಖ್ಯೆ ೧೩೨೭, ಓಲೆಪ್ರತಿ ಸಂಖ್ಯೆ ೧೮/೪ ಗರಿಗಳು ೮ರಿಂದ ೧೯, ಭಾಷೆ ಮತ್ತು ಲಿಪಿ ಹಿಂದಿ, ಅಪೂರ್ಣ ಹಸ್ತಪ್ರತಿಯಾಗಿದೆ.

* "ಬಾಗವಾಡದ ಮಠದ ಚರಂತಿ ಹಿರೇರಾದ ಕರಿಬಸವಪ್ಪ ವಪ್ಪ

ನವರು ರಕ್ಷಿಸಿದಂಥ ಅಂದನಪ್ಪನವರ ಶಿಷ್ಯನಾದ ಬಸವಲಿಂಗ ಮರಿದೇವರಿಗೆ

ಸುಲಿಗಾವಿ ಬಸವಲಿಂಗಪ್ಪನವರು ಬರಕೊಟ್ಟ ಬಸವಪುರಾಣದ ವಸ್ತುಕದ

ನುಡಿ ಸಮಾಪ್ತ"[೨೪]

ಕ್ರಮಸಂಖ್ಯೆ ೨೪೪೬, ಓಲೆಪ್ರತಿ ಹಸ್ತಪ್ರತಿ ಸಂಖ್ಯೆ ೫೪೩/೩೦, ಗರಿಗಳು ೧ರಿಂದ ೬೧ ಕೃತಿಯು ರಚನೆಯಾದ ಕಾಲ ೧೬೭೭ ಸಮಗ್ರ ಪ್ರತಿಯಾಗಿದೆ. ಪ್ರತಿಯು ಉತ್ತಮ ರೀತಿಯಲ್ಲಿದೆ. ಅಕ್ಷರಗಳು ಸ್ಫುಟವಾಗಿ ಕಾಣಿಸುತ್ತವೆ. ಈಗಲೂ ಈ ಕೃತಿಯು ಪ್ರಚಲಿತದಲ್ಲಿದೆ.

* "ಸೌಮ್ಯನಾಮ ಸಂವತ್ಸರದ ಆಷಾಢ ಶುದ್ಧ ೧೪ ಬುಧವಾರ

ಸವುಮ್ಯ ನಾಮ ಸಂವತ್ಸರ ಆಶ್ವೀಜ ಬಹು ೧ಲ್ಲು ತರಿಕೆರೆಮಠದಸ್ವಾಮಿ

ಗಳಿಗೆ ಸೂಲಿಕುಂಟೆ ಸೆಟ್ಟಿಬಾಳಪ್ಪನವರ ನಂಜುಂಡ ಬರೆದು ವಪ್ಪಿಸಿದ ಸಕಲ

ಗಣಂಗಳ ವಚನಾ"[೨೫]

ಕ್ರಮಸಂಖ್ಯೆ ೨೯೭೧, ಓಲೆಪ್ರತಿ ಸಂಖ್ಯೆ ೬೦೫ ಗರಿಗಳು ೧ರಿಂದ ೫೦ರವರೆಗೆ ಇವೆ. ಕೃತಿಯ ಕಾಲ ತಿಳಿಯ ಬಂದಿಲ್ಲ; ಸಮಗ್ರ ಕೃತಿಯಾಗಿದೆ. ಗರಿಗಳು ಉತ್ತಮ ಸ್ಥಿತಿಯಲ್ಲಿವೆ.

ಅನುಭವಸಾರ : "ಶ್ರೀ ಗುರುಸಿದ್ಧ ಲಿಂಗೇಶ್ವರನ ಸಂಸ್ಕಾರ ಕಾರಣನಾದ ಗುರು

ಲಿಂಗಣಾಚಾರಿಯ್ಯರು ಆಗುರು ಲಿಂಗಣಾಚಾರ್ಯರ ಸಂಸ್ಕಾರ ಕಾರಣನಪ್ಪ

ಚಂನಬಸವಶ್ವರನು ಬರೆದ ಅನುಭವಸಾರ ಲೇಖನ ಕೃತ್ಯದ ಪುಸ್ತಕ

ಶ್ರೀ ಗುರು ಮುದ್ದು ಬಸವೇಶ್ವರಾಯ ನಮಸ್ತೆ ನಮಸ್ತೆ ನಮಃ"[೨೬]

ಚಿತ್ರದುರ್ಗ ಬೃಹನ್ಮಠ ಹಸ್ತಪ್ರತಿ ಭಂಡಾರದಲ್ಲಿನ ಪ್ರತಿ; ಕ್ರಮಸಂಖ್ಯೆ ೧೩೦, ಕೃತಿಯ ಕಾಲಮಾನ ೧೬೦೦, ಪ್ರತಿ ಸಂಖ್ಯೆ ೨೯/೧, ತಾಳೆಪ್ರತಿ ೧-೩೯ ಪ್ರತಿಗಳಿವೆ. ಇದು ತ್ರಿಪದಿಯಲ್ಲಿ ರಚನೆಗೊಂಡಿದ್ದು ಸಮಗ್ರ ಕೃತಿಯಾಗಿದೆ. ಇದನ್ನು ಬರೆದವನು ಚಂನಬಸವೇಶ್ವರ ಎಂಬುದು ಗೊತ್ತಾಗುತ್ತದೆ.

ಅನುಭವಸಾರ : "ಶ್ರೀ ಗುರು ಯಿಮ್ಮಡಿ ಮುರಿಗೆ ಸ್ವಾಮಿನೇ ನಮಃ

ಶ್ರೀಮತು ವಿಳಂಬಿನಾಮ ಸಂವತ್ಸರದ ಶ್ರಾವಣ ಬಹುಳ ೧೦ ಭಾನುವಾರ

ಮಹಂತ ಮಲ್ಲಿಕಾರ್ಜುನಸ್ವಾಮಿ ಪಾದಾರವಿಂದಕ್ಕೆ ಸಂಗೀತದ ಚೆಂನ

ಬಸವಪ್ಪನು ಭಕ್ತಿ ಪುರಸ್ಸರದಿಂದ ಬರೆದುಕೊಟ್ಟು ಅಭನುವಸಾರಕ್ಕೆ ಶುಭಮಸ್ತು"[೨೭]

ಇದು ಸಹ ಬೃಹನ್ಮಠದ ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹಗೊಂಡಿರುವ ಹಸ್ತಪ್ರತಿಯಾಗಿದೆ. ಕ್ರಮಸಂಖ್ಯೆ ೧೩೬, ಸಾಧಾರಣ ಪ್ರತಿಯಾಗಿದ್ದು, ಇದರ ಕಾಲ ೧೭೧೮. ಪ್ರತಿಸಂಖ್ಯೆ ೧೭೧/೧, ತಾಳೆ ಪ್ರತಿಗಳು, ೧ರಿಂದ ೩೬ ಗರಿಗಳಿವೆ. ಇದು ಸಮಗ್ರವಾದ ಕೃತಿಯಾಗಿದ್ದು ಬರೆದವರು ಸಂಗೀತದ ಚೆಂನಬಸವಪ್ಪನು ಎಂಬುದಾಗಿ ತಿಳಿದುಬರುತ್ತದೆ.

ಆದಿತ್ಯ ಪುರಾಣ : "ಕೊಲ್ಲೂರ ಮೂಕಾಂಬಕಾಯ ನಮಃ

ಇಕ್ಕೇರಿ ಅಘೋರೇಶ್ವರ ಪಾದವೇಗತಿ

ಮಂಜುನಾಥಾಯ ನಮಃ

ಕೊಡಗು ಸಂಸ್ಥಾನದಲ್ಲಿ ಇರುವ ಅಮ್ಮತಿ ನಾಡು ಬೆಳಗುಂದದ ಗ್ರಾಮದ

ಮಕ್ಕಾಟ್ಟಿ ಅಯ್ಯಪ್ಪನ ಪ್ರತಮ ಪುತ್ರ ಮಹಸ್ವಾಮಿಯವರ ದಿವ್ಯ ಶ್ರೀ

ಚರಣಾರವಿಂದದಲ್ಲಿ ಸಾರ್ವಕಾಲದಲ್ಲಿ ಸೇವೆ ಮಾಡಿಕೊಂಡು ಯಿರುವ ರಾಯ

ಸದ ಮುಧು ಅಂಣನವರಿಗೆ ನಗರದ ಸಂಸ್ತಾನದಲ್ಲಿ ಯಿಕ್ಕೇರಿ ಕರೀದಿ
ಹೋಬಳಿ ವಳಗಣ ಕರೀದಿ ಹೋಬಳಿಲಿಯಿರುರ ಕಾಲ್ಲೆ ನಾರಾಯಣನು ಈ
ಪುಸ್ತಕ ಬರೆದವನು ಯಿಕ್ಕೇರಿ ಶಿರಿವಂತ್ತೆ ಶೀಮೆ ಹುಳ್ಳೇಗಾರು ಗ್ರಾಮದ
ವಿಟ್ಟೆಲೈಯ್ಯನ ಮಗ ಪರಮೇಶ್ವರಯ್ಯನ ಕೈಯ್ಯ ಮಧು ಅಂಣನವರು.
ಹೇಳಿದು. ಈ ಅಲೇಖನಲ್ಲಿ ಆದಿತ್ಯ ಪುರಾಣವನ್ನು ಬರೆಸುಯಂತ ಹೇಳಿ
ದಲ್ಲಿ ಆ ಪರಮೇಶ್ವರಯ್ಯನು ಬರೆಶಿದು ಆ ನಾರಾಣಪ್ಪನ ಕೈಯ್ಯ ಆನಾರಾಣಪ್ಪನ
ಬರಹ....ಸ್ವಸ್ತಿ ಜಯಾಭ್ಯುದೆಯ ಶಾಲವಾಹನ ಶಖ ವರುಷಂವರ್ತ
ಮಾನಕ್ಕೆ ಸಲುವ ಭಾವನಾಮ ಸಂ ಭಾದ್ರಪದ ಬ. ೧೨ ಯಾ ಗುರುವಾರ...”[೨೮]

ಕ್ರಮಸಂಖ್ಯೆ ೩೦೮ರಲ್ಲಿದೆ. ಕೃತಿಯ ಹೆಸರು ಆದಿತ್ಯ ಪುರಾಣ; ಇದರ ಕಾಲ ೧೫೫೦. ತಾಳೆ ಪ್ರತಿ ಇದರ ಸಂಖ್ಯೆ ೪೨೦, ಗರಿಗಳು ೧–೧೭೦; ಸಮಗ್ರ ಕೃತಿಯಾಗಿದೆ. ಗರಿಗಳು ಉತ್ತಮವಾಗಿದ್ದು, ಲಿಪಿಯು ಸ್ಪಷ್ಟವಾಗಿ ಓದಲು ಬರುತ್ತದೆ. ಇದು ಇಂದಿಗೂ ಕೂಡ ಈ ಕೃತಿಯು ಪ್ರಚಲಿತದಲ್ಲಿರುವುದನ್ನು ನೋಡಬಹುದು. ಇದರ ಲಿಪಿಯೂ ಕನ್ನಡ, ಭಾಷೆಯೂ ಕೂಡ ಕನ್ನಡವಾಗಿದೆ. ಇದನ್ನು ಪರಮೇಶ್ವರಯ್ಯನು ನಾರಾಣಪ್ಪನ ಹತ್ತಿರ ಬರೆಸಿದನು ಎಂಬುದಾಗಿ ಗೊತ್ತಾಗುತ್ತದೆ.

ಆರಾಧ್ಯ ಚಾರಿತ್ರ : “ರೌದ್ರಿ ಸಂವತ್ಸರದ ವೈಶಾಖ ಬಹುಳ ೨ ಸೋಮನವಾರಯು
ಯಿ ಆರಾಧ್ಯ ಚಾರಿತ್ರವನು ನಣಂಬೆಯ ಸಿಂಹಾಸನಾಗ್ರಗಣ್ಯರಾದ ಮರುಳ
ವಿರಂಣೊಡೆದೇವರು ಅವರ ಕರಕಂಜೋದ್ಭವರು ಜಕ್ಕಡಹಳ್ಳಿಯ ವೀರಂ
ಣೋಡೆದ್ದೇವರು ಅವರ ಹಸ್ತ ಸಂಭವರು ಮರುಳಸಿದ್ಧ ದೇವರು ಅವರ ಕರ
ಬಿಸರುಹರು ಚಂದ್ರಶೇಖರ ದೇವರ ಕರಕಮಲದಲ್ಲಿ ಉತ್ಪತ್ತಿಯಾದ ವೀರ
ಮಾಹೇಶ್ವರಾಚಾರ್ಯರ ಭೃತ್ಯರಾದ ವಿರಕ್ತ ಮರುಳ ಸಿದ್ಧದೇವರು ತಮಗೆ
ಬರೆದುಕೊಂಡ ಪುಸ್ತಕವಿದು. ಶಿವಮಾಹೇಶ್ವರರಲ್ಲಿ ಅನುಗಾಲ ಚರಿಸುತ್ತಿರಲಿ
ನಿರ್ವಿಘ್ನಮಸ್ತು ಅಮ್ಮವ್ವೆ ಗುಡಿಯಲ್ಲಿ ಬಿಜ್ಜಾವರದ ಚಿಕ್ಕುಗೌಡರ ಭಕ್ತಿಯ
ಲ್ಲಿರು ಬರೆದು ಮುಗಿಯಿತ್ತು”[೨೯]

ಕ್ರಮಸಂಖ್ಯೆ ೩೧೨, ಕೃತಿಯ ಹೆಸರು ಆರಾಧ್ಯ ಚಾರಿತ್ರ್ಯ ಕೃತಿಕಾರ ನೀಲಕಂಠಾರಾಧ್ಯ. ಇದರ ಕಾಲ ೧೪೮೫ ತಾಳೆಪ್ರತಿ ಗರಿಗಳು ೧ರಿಂದ ೨೨೫ರವರೆಗೆ ಇವೆ. ಸಮಗ್ರ ಕೃತಿಯಾಗಿದ್ದು, ಗರಿಗಳು ಸಾಧಾರಣವಾಗಿವೆ. ಅಕ್ಷರಗಳು ಅಲ್ಲಲ್ಲಿ ಲೋಪಗೊಂಡಿವೆ. ಲಿಪಿ ಕನ್ನಡವಾಗಿದ್ದು ಇದನ್ನು ಬರೆದ ಲಿಪಿಕಾರ ವೀರ ಮಾಹೇಶ್ವರಾಚಾರ್ಯರ ಭೃತ್ಯರಾದ ವಿರಕ್ತ ಮರುಳ ಸಿದ್ಧದೇವರು ತಮಗೆ ಬರೆದುಕೊಂಡ ಪುಸ್ತಕ ಎಂಬುದಾಗಿ ತಿಳಿದುಬಂದಿದೆ.

ನಂನ್ನೈಯ್ಯನವರ ಕಾವ್ಯ : "ಜಯ ಸಂವತ್ಸರದ ಪುಶ್ಯ ಬ ೧೨ ಮಂದವಾರ ತಾಸು ೩ಕ್ಕೆ ಮುಗಿಯಿತು.

ಯಿದ ಬರೆದಾತ ಸೂಳೆಕೆರೆ ಮಠದ ಚಂನಬಸವರಾಜದೇವರ ಕರಕಮಲೋದ್ಭವನಾದ

ವೋದಿಸುವ ಚಂನಬಸವ್ವೆಯನು ಶ್ಯಾಡಗುಪ್ಪೆ ಮಠದ ಬಸವಲಿಂಗದೇವರ

ಸಂಣವರು ಮಕ್ಕಳಿಗೆ ಅಷ್ಟೇಶ್ವೈರ್ಯ ಸಂಪತ್ತು ಆಗಲಿಯೆಂದು ಹರಶಿ ಬರಕೊಟ್ಟ ನಂನ್ನೈಯ್ಯನವರ ಕಾವ್ಯಕ್ಕೆ ಶುಭಮಸ್ತು..."[೩೦]

ಕ್ರಮಸಂಖ್ಯೆ ೨೦೦೬, ಓಲೆಪ್ರತಿ, ಸಾಧಾರಣ, ಕಾಲ ೭೮೬ರಲ್ಲಿ ರಚನೆಗೊಂಡಿದೆ. ಗರಿಗಳು ೧ರಿಂದ ೮೦ರವರೆಗೆ ಇವೆ. ಸಮಗ್ರ ಕೃತಿಯಾಗಿದೆ. ಅಕ್ಷರಗಳು ಸ್ಫುಟವಾಗಿ ಕಾಣುತ್ತವೆ. ಹಾಗೆಯೇ ದುಂಡಾಗಿಯೂ ಇವೆ. ಅಷ್ಟೈಶ್ವರ್ಯ ಉಂಟಾಗಲೆಂದು ಸುಳೆಕೆರೆ ಮಠದ ಚಂನಬಸವ್ವೆಯನು ಬಸವಲಿಂಗ ದೇವರ ಮಕ್ಕಳಿಗೆ ಹರಶಿ ಬರೆದುಕೊಟ್ಟ ನನ್ನಯ್ಯಕಾವ್ಯ ಎಂಬುದಾಗಿ ತಿಳಿದು ಬರುತ್ತದೆ.

* "ಶಾಲಿವಾಹನ ಶಖೆ ೧೬೭೭ಯಿವ ಸಂವತ್ಸರದಾ ಜೇಷ್ಠಸುದ್ಧ ೧೧ರಲ್ಲು ಪುರಾಣದ ಬಗೆ ವೀರಪ್ಪವಡೇರ ಕರಜಾತನಾದ ಕಲ್ಯಾಣದೈಯ್ಯನು ಹೇರೂರ ಕೆರೆಯ (ಠ)ದ ಚೆಂನಮಲ್ಲಪ್ಪ ನವರಿಗೆ ಬರಕೊಟ್ಟ..."[೩೧]

ಕ್ರಮಸಂಖ್ಯೆ ೧೨೬೩, ಓಲೆಪ್ರತಿ, ಕೃತಿಯು ರಚನೆಗೊಂಡ ಕಾಲ ೧೬೭೭ರ. ಗರಿಗಳು ೧ರಿಂದ ೨೮ ಇವೆ. ಭಾಷೆ ಹಿಂದಿ, ಕೃತಿಯು ಸಮಗ್ರ ಹಾಗೂ ಉತ್ತಮ ಸ್ಥಿತಿಯಲ್ಲಿದೆ. ಹೇರೂರ ಕೆರೆಮಠದ ಚನ್ನಮಲ್ಲಪ್ಪನವರಿಗೆ ಕಲ್ಯಾಣದಯ್ಯನು ಗುಂಡಬ್ರಹ್ಮಯ್ಯನ ಸಾಂಗತ್ಯವನ್ನು ಬರೆದು ದಾನವಾಗಿ ಕೊಟ್ಟಿರುವುದನ್ನು ನೋಡಬಹುದು.

* "ಶ್ರೀ ಮಚ್ಚಿನ್ಮೂಲಾದ್ರಿ ಮಠಾಂತರೆ ಅರವತ್ತು ಮೂವರ ಪುರಾತನರ

ತ್ರಿವಿಧಿ ಬಾಗಡಕೋಟೆ ಚಂನವೀರಪ್ಪವರಿಗೆ ಲೋಚನದ ಮುರಿಗೆ ಲೋಚನ ಚಿಂದಬರಪ್ಪನವರು ಚನವೀರ ಮುರಿಗೆ ಲಿಖಿತವ ಮಾಡಿ ದಯದಿಂದ ಕೊಟ್ಟುದು"[೩೨]

ಕ್ರಮಸಂಖ್ಯೆ ೩೦೯, ಕಾಗದದ ಪ್ರತಿ, ಸಂಖ್ಯೆ ೮೮೨/೫, ಸಮಗ್ರ ಕೃತಿ, ಪ್ರತಿಗಳು ಉತ್ತಮ ಸ್ಥಿತಿಯಲ್ಲಿವೆ. ಲಿಪಿ ಕನ್ನಡ; ಅಕ್ಷರಗಳು ದುಂಡಾಗಿವೆ. ಲೋಚನ ಚಿದಂಬರಪ್ಪರವರು ಚನವೀರಮರಿಗೆ ದಯೆಯಿಂದ ಬರೆದು ದಾನವಾಗಿ ಕೊಟ್ಟಿರುವುದನ್ನು ನೋಡಬಹುದು.

* "ಸ್ವಸ್ತಿ ಸಮಸ್ತವಾದ ಶಕವರುಷಂ ೧೪೪೪ ಕ್ಕೆ ಸಲುವ ವ್ಯಯ

ಸಂವತ್ಸರದ ಅಶ್ವಯುಜ ೭ ಮಿಯೂ ಗುರುವಾರದ ದಿವಸದಲ್ಲಿ

ಪದನು ೪೨೦೭ ಪದಕ್ಕಂ ಸಂಪುರ್ಣವಾಗಿ ವೊಡೆಯರು ಭಕ್ತರ

ಕೃಪೆಯಲಿ ನಿರೂಪದಿಂದ ಮಯಿಸುರ ಶ್ರೀ ಗಿರಿದೇವನು ಸುಪುತ್ರನಾದ

ಚೆಂನಬಸವಯ್ಯನು ಬರದ ಆರಾಧ್ಯ ಚಾರಿತ್ರ..ಭೋಗವಾದಿಯ

ಮಠದ ಅತಿಥಿ ಸಿದ್ಧವೀರೇಶ್ವರದೇವರ ನಿರೂಪದಿಂದ ಮಹಿಸೂರ

ಶ್ರೀ ಗಿರಿದೇವಯ್ಯನ ಸುಪುತ್ರನಾದ ಚನ್ನಬಸವಯ್ಯನು ಬರದ

ಆರಾಧ್ಯ ಚಾರಿತ್ರ"[೩೩]

ಕ್ರ.ಸಂ. ೫೧೨ರಲ್ಲಿ ಈ ಓಲೆ ಪ್ರತಿ ಇದೆ ಸಂಖ್ಯೆ ೫೪೭ರಲ್ಲಿ ಇದೆ. ಕಾಲ ೧೪೪೪ ರಲ್ಲಿ ರಚನೆಯಾಗಿದೆ. ಇದರಲ್ಲಿ ೧ರಿಂದ ೩೨೨ರವರೆಗೆ ಓಲೆ ಗರಿಗಳಿವೆ. ಇದು ಸಮಗ್ರ ಕೃತಿಯಾಗಿದೆ. ಮೈಸೂರು ಶ್ರೀ ಗಿರಿದೇವಯ್ಯನ ಮಗನಾದ ಚನ್ನಬಸವಯ್ಯನು ಆರಾಧ್ಯ ಚಾರಿತ್ರ ಎಂಬ ಕೃತಿಯನ್ನು ಬರೆದಿರುವ ಕವಿಯಾಗಿದ್ದಾನೆ.

"ದುಂದುಭಿ ಸಂಮ್ಮಸರದಾ ವೈಶಾಕ ಶು೨ಗೆ ಸೋಮವಾರ

ದಿವಸ ಸಮಾಪ್ತಂ....ಶ್ರೀ ಮಹಾರಜನ ದುರ್ಗದ ಕಲ್ಲೇ ನಿಂಗಯ್ಯನ ಮಗ

ಕಲ್ಲೈಯನ ಮಗ ಸಿದ್ಧರಾಮನು ಓದಿಕೊಳದಕ್ಕೆ ಹಸ್ತಂತ್ರ ಬರೆದ ಬರಹ

ಶ್ರೀ ಶ್ರೀ"[೩೪]

ಕ್ರಮಸಂಖ್ಯೆ ೪೪೬, ಓಲೆಪ್ರತಿ ಕೃತಿಯ ಕಾಲಮಾನ ತಿಳಿದುಬಂದಿಲ್ಲ ಓಲೆಗರಿಗಳು ೭೫ರಿಂದ ೮೬ರವರೆಗೆ ಮಾತ್ರ ಇವೆ. ಕೃತಿಯು ಪೂರ್ಣಗೊಂಡಿಲ್ಲ. ಅಕ್ಷರಗಳು ದುಂಡಾಗಿ ಇರುವುದನ್ನು ನೋಡಬಹುದು. ಗರಿಗಳು ಸ್ವಲ್ಪ ಹಾಳಾಗಿವೆ ಶ್ರೀ ರಾಮಹಾರಜನ ದುರ್ಗದ ಕಲ್ಲೇ ನಿಂಗಯ್ಯನ ಮಗ.. ಕಲ್ಲೈಯನ ಮಗ ಸಿದ್ಧರಾಮನು ಓದಿಕೊಳ್ಳುವುದಕ್ಕೆ ಬರೆಸಿದ ಕದಂ(ಬ) ನೀತಿಮಾಲಿಕೆ ಕೃತಿಯನ್ನು ನೋಡಬಹುದು.

* "ಗದುಗಿನ ವೀರನಾರಾಯಣ ದಿವ್ಯ ಚರಣಾರವಿಂದವೆ ಗತಿ ಮತಿ

ತೃಣಪುರದ ಭೀಮರಾಯರ

ಚಿನ್ಮನಿ ಗಿರಿದುರ್ಗದ ಕಾಳಂಮ...

ಸ್ವಸ್ತಿ ಶ್ರೀ...ಶಾಲಿ... ವರುಷಂಗಳು॥ ಖರ ನಾಮ ಸಂವತ್ಸರದ ಜೇಷ್ಟ

ಬ. ೧೨ರು ಅಕ್ಕಸಾಲೆ ಬೊಕ್ಕಸದ ಕುಮಾರ ಪುಲ್ಲವಪಗೆ ಓದಿಸುವ ರಾಮಪ್ಪನು ಆ ಚಂದ್ರಾ... ಬರೆದು ಕೊಟ್ಟಂಥ..."[೩೫]

ಕ್ರಮಸಂಖ್ಯೆ ೫೧೧, ಕಾಲ ೧೧೬೦ರಲ್ಲಿ ಕೃತಿಯು ರಚನೆಗೊಂಡಿದೆ. ಸಂಖ್ಯೆ ೪೦೪/ ೪ಗರಿಗಳು ೧–೧೬. ಸಮಗ್ರ ಹಸ್ತಪ್ರತಿಯ ಭೌತಿಕ ಸ್ಥಿತಿ ಉತ್ತಮವಾಗಿದೆ. ಅಕ್ಷರಗಳು ದುಂಡಾಗಿದ್ದು ಸ್ಪಷ್ಟವಾಗಿ ಕಾಣುತ್ತವೆ. ಈ ಕೃತಿಯು ಸಹ ಪ್ರಚಲಿತದಲ್ಲಿರುವುದನ್ನು ನಾವು ಕಾಣಬಹುದು.

ಧಾರ್ಮಿಕ ಸಂಸ್ಥೆ ಒಡೆತನದ ಹಸ್ತಪ್ರತಿಗಳ ವಿಶೇಷತೆ :

ಧಾರ್ಮಿಕ ಸಂಸ್ಥೆ ಒಡೆತನದ ಸಂಗ್ರಹದಲ್ಲಿ ವಚನ, ಸ್ವರವಚನ, ವೀರಶೈವ ಪುರಾಣ, ಕಾವ್ಯಗಳು ಹೆಚ್ಚಾಗಿ ಲಭ್ಯವಾಗಿವೆ. ಹಾಗೆಯೇ ವೈದ್ಯಶಾಸ್ತ್ರ, ಅಶ್ವಶಾಸ್ತ್ರ, ಬೆಡಗಿನ ವಚನಗಳಿಗೆ ಟೀಕು, ವ್ಯಾಖ್ಯಾನ, ಮಾಟ-ಮಂತ್ರ, ಬಯಲಾಟದ ಹಸ್ತಪ್ರತಿಗಳು ಹೆಚ್ಚಾಗಿ ಕಂಡುಬರುತ್ತವೆ.

ಒಟ್ಟಾರೆಯಾಗಿ ಚಿತ್ರದುರ್ಗ ಪ್ರದೇಶದಲ್ಲಿ ಒಟ್ಟು ಮೂರು ಮಠಗಳಲ್ಲಿ ಹಸ್ತಪ್ರತಿಗಳ ಸಂಗ್ರಹ ಪ್ರಕಟಣೆಯ ಕಾರ್ಯಗಳು ಇಂದಿಗೂ ಸಹ ನಡೆಸಿಕೊಂಡು ಬರುತ್ತಿರುವುದನ್ನು ನೋಡಬಹುದಾಗಿದೆ. ಸಾಂಸ್ಕೃತಿಕ ಭಾಗಗವಾಗಿರುವ ಹಸ್ತಪ್ರತಿ ಸಂರಕ್ಷಣೆಯಲ್ಲಿ ನಾಡಿನ ಮಠ-ಮಾನ್ಯಗಳ ಜವಾಬ್ದಾರಿ ಬಹಳ ಪ್ರಮುಖವಾದದ್ದಾಗಿದೆ.

೨.೨.೨. ಸರಕಾರಿ ಸಂಸ್ಥೆ :

ನಮ್ಮ ಪ್ರಾಚೀನ ಜ್ಞಾನ ಭಂಡಾರವೇ ಈ ಹಸ್ತಪ್ರತಿಗಳಾದರೂ ಇದನ್ನು ಗ್ರಂಥ ಸಂಪಾದನೆಯಲ್ಲಿ ಮಾತ್ರ ಗುರುತಿಸಿಕೊಂಡಿರುವುದರ ಫಲವಾಗಿ ಸಾಹಿತ್ಯ ವಲಯದಲ್ಲಿ ಇಂದು ಮುಗಿದುಹೋದ ಅಧ್ಯಯನವೆನಿಸಿದೆ. ಸರ್ಕಾರದ ಕಾನೂನಿನ ಎಲ್ಲಾ ಪ್ರಾಚ್ಯವಸ್ತುಗಳ ಅಡಿಯಲ್ಲಿ ಈ ಹಸ್ತಪ್ರತಿ ಬಂದರೂ, ಇದನ್ನು ಅಷ್ಟು ಮುಖ್ಯವಾಗಿ ಪರಿಗಣಿಸುವುದಿಲ್ಲ. ಅನಾಯಾಸವಾಗಿ ಸಿಕ್ಕರೆ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸುವುದನ್ನು ಬಿಟ್ಟರೆ ಬೇರೇನನ್ನೂ ಇದರ ಬಗ್ಗೆ ಯೋಚಿಸುವುದಿಲ್ಲ. ಆದ್ದರಿಂದ ಇವು ಒಂದು ರೀತಿಯಲ್ಲಿ ನಿರ್ಲಕ್ಷಿತ ಸ್ಮಾರಕಗಳೆನಿಸಿವೆ.

ಸರಕಾರಿ ಹಸ್ತಪ್ರತಿ ಭಂಡಾರದ ಇತಿಹಾಸ ಪ್ರಾರಂಭವಾಗುವುದು ಬ್ರಿಟಿಷ್ ಅಧಿಕಾರಿಗಳಾದ ಕರ್ನಲ್ ಮೆಕೆಂಜಿ, ಸಿ.ಪಿ. ಬ್ರೌನ್ ಮುಂತಾದವರ ಮೂಲಕ. ೧೮೮೦ರಿಂದ ೧೯೭೫ರ ಅವಧಿಯಲ್ಲಿ ಅವರು ನಮ್ಮ ನಾಡಿನಲ್ಲಿ ಸಂಚರಿಸಿ ಜನರನ್ನು ಸಂಪರ್ಕಿಸಿ ಅವರಿಗೆ ಈ ಬಗೆಗೆ ತಿಳುವಳಿಕೆ ಮೂಡಿಸಿ ಅಪಾರವಾದ ಇತರ ಪ್ರಾಚ್ಯವಸ್ತುಗಳನ್ನು ಸಂಗ್ರಹಿಸುವ ಒಂದು ಆಂದೋಲನವನ್ನು ಕೈಗೊಂಡರು. ಫಲವಾಗಿ ಪ್ರಾಚೀನ ಹಸ್ತಪ್ರತಿಗಳ ಮೌಲ್ಯದ ಅರಿವಾಯಿತು.

ಇದೇ ಸಂದರ್ಭದಲ್ಲಿ ಪಂಡಿತ ರಾಧಾಕೃಷ್ಣರು ಕ್ರಿ.ಶ. ೧೮೯೮ ಮೇನಲ್ಲಿ ವಿಕ್ಟೋರಿಯ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದು ಈ ಬಗೆಗೆ ಹೆಚ್ಚಿನ ಕಾಳಜಿ ವಹಿಸಿ ವ್ಯವಸ್ಥಿತ ಇಲಾಖೆಯೊಂದರ ಸ್ಥಾಪನೆಯ ಸಲಹೆಯನ್ನು ನೀಡಿದರು. ಇದನ್ನು ಸ್ವೀಕರಿಸಿದ ಸರ್ಕಾರ ತಜ್ಞರ ಸಮಿತಿಯೊಂದನ್ನು ನೇಮಿಸಿತ್ತು.

ಪ್ರಾಚ್ಯವಸ್ತು ಸಂಗ್ರಹಾಲಯ ಚಿತ್ರದುರ್ಗ :

ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ತಾಳೆಗರಿ ಹಸ್ತಪ್ರತಿಗಳು ಸಂಗ್ರಹಗೊಂಡಿರುವುದನ್ನು ನೋಡಬಹುದು. ಸಂಗ್ರಹಾಲಯದಲ್ಲಿ ಇರುವ ಕೆಲವು ತಾಳೆಗರಿ ಹಸ್ತಪ್ರತಿಗಳನ್ನು ಎಸ್. ಶಿವಣ್ಣನವರು ಸೂಚಿ ಕಾರ್ಯ ಮಾಡುವ ಸಂದರ್ಭದಲ್ಲಿ ಇದರಲ್ಲಿರುವ ಕೆಲವೊಂದು ಹಸ್ತಪ್ರತಿಗಳನ್ನು ಮಾತ್ರ

ಬೃಹನ್ಮಠ ಹಸ್ತಪ್ರತಿ ಸೂಚಿ ಸಂಪುಟ-೧ರಲ್ಲಿ ಸೇರಿಸಿರುವುದನ್ನು ನೋಡಬಹುದು. ಇಲ್ಲಿರುವ ಕೆಲವೇ ಹಸ್ತಪ್ರತಿಗಳು ಇಂದೂ ಪ್ರದರ್ಶನಕ್ಕೆ ಮಾತ್ರ ಸೀಮಿತಗೊಂಡಿವೆ. ಇವುಗಳನ್ನು ಅಲ್ಲಿರುವ ಅಧಿಕಾರಿಗಳು ಸಂಶೋಧನಾ ವಿದ್ಯಾರ್ಥಿಗಳಿಗಾಗಲಿ ಇಲ್ಲವೇ ಹಸ್ತಪ್ರತಿ ಬಗ್ಗೆ ಆಸಕ್ತಿ ಇರುವ ವಿದ್ವಾಂಸರಿಗಾಗಲಿ ನೀಡುವುದಿಲ್ಲ. ಅವುಗಳನ್ನು ಒಂದು ಕೊಠಡಿಯಲ್ಲಿ ಬಂಧಿಸಿ ಪ್ರವಾಸಿಗರಿಗೆ ತೋರಿಸಲು ಇಟ್ಟ ವಸ್ತುಗಳಂತೆ ನೋಡಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಇಲ್ಲಿರುವ ಕೆಲವು ಹಸ್ತಪ್ರತಿಗಳು, ಅವುಗಳ ಹೆಸರು ಮತ್ತು ಕಾಲವನ್ನು ಮಾತ್ರ ನನಗೆ ನಮೂದಿಸಿಕೊಳ್ಳಲು ಅವಕಾಶ ಮಾಡಿಕೊಟ್ಟರು. ಹಾಗಾಗಿ ನಾನು ಕೇವಲ ಹೆಸರು ಮತ್ತು ಕಾಲವನ್ನು ಮಾತ್ರ ಇಲ್ಲಿ ಸಂಗ್ರಹಿಸಿ ಬರೆದಿದ್ದೇನೆ.

೧. ಭಾಗವತ ಪ್ರಥಮ ಸ್ಕಂದ
೨. ಭಾಗವತ ಪ್ರಥಮ ಸ್ಕಂದ-೧೫ನೇ ಶತಮಾನ
೩. ಗದುಗಿನ ಭಾತರ-೧೮ನೇ ಶತಮಾನ (ಅಪೂರ್ಣ ಹಸ್ರಪ್ರತಿ)
೪. ವಚನ ಭಾರತ-೧೮ನೇ ಶತಮಾನ
೫. ತೊರವೇ ರಾಮಾಯಣ-೧೮ನೇ ಶತಮಾನ
೬. ಸ್ಕಂದ ಪುರಾಣ-೧೮ನೇ ಶತಮಾನ
೭. ಸಂಸ್ಕೃತ ಶ್ಲೋಕಗಳು-೧೮ನೇ ಶತಮಾನ ಸ್ಥಳ ಚಿತ್ರದುರ್ಗ
೮. ರಘುವಂಶ ಕಾವ್ಯ-೧೮ನೇ ಶತಮಾನ ಸ್ಥಳ ಚಿತ್ರದುರ್ಗ.
೯. ಶಕುನ ವಚನ-೧೮ನೇ ಶತಮಾನ ಸ್ಥಳ ಚಿತ್ರದುರ್ಗ.
೧೦. ಸಂಸ್ಕೃತ ಮಂತ್ರಗಳು-೧೮ನೇ ಶತಮಾನ ಸ್ಥಳ ಚಿತ್ರದುರ್ಗ.
೧೧. ಗಿರಿಜಾ ಕಲ್ಯಾಣ-೧೮ನೇ ಶತಮಾನ ಸ್ಥಳ ಚಿತ್ರದುರ್ಗ ಈ ಪ್ರತಿಯನ್ನು ನೀಡಿದವರು ರಾಯರ ಪುತ್ರರಾದ ಎಚ್.ಎಸ್. ಚಂದ್ರಶೇಖರ ಬಿ.ಎ. ಇವರಿಂದ ಕೊಡಲ್ಪಟ್ಟಿದ್ದು
೧೨. ಜ್ಯೋತಿಷ್ಯ-೧೮ನೇ ಶತಮಾನ ಸ್ಥಳ ಚಿತ್ರದುರ್ಗ.
೧೩. ಚಂದ್ರಹಾಸ ಸಾಂಗತ್ಯ -ಬರೆದವರು ಹೆಳವನಕಟ್ಟೆ ಗಿರಿಯಮ್ಮ ೧೮ನೇ ಶತಮಾನ ಸ್ಥಳ ಚಿತ್ರದುರ್ಗ
೧೪. ಸಂಸ್ಕೃತ ಶ್ಲೋಕಗಳು- ೧೮ನೇ ಶತಮಾನ ಚಿತ್ರದುರ್ಗ
೧೫. ಜೈಮಿನಿ ಭಾರತ (ತಾಮ್ರಧ್ವಜನ ಕಾಳಗ)೧೮ನೇ ಶತಮಾನ ಚಿತ್ರದುರ್ಗ
೧೬. ರಾಮಾಯಣ-೧೮ನೇ ಶತಮಾನ ಚಿತ್ರದುರ್ಗ
೧೭. ನೀಲ ಕಂಠಸ್ತುತಿ-೧೮ನೇ ಶತಮಾನ ಚಿತ್ರದುರ್ಗ

೧೮. ಪಂಚತಂತ್ರ–ಭಾಷೆ ತೆಲುಗು; ಲಿಪಿ ಕನ್ನಡ

೧೯. ಸರ್ವಪಾಪ ಪ್ರಾಯಶ್ಚಿತ–೧೮ನೇ ಶ.ಮಾ. ಚಿತ್ರದುರ್ಗ

೨೦. ಆಯುರ್ವೇದ ಗ್ರಂಥ–೧೮ನೇ ಶ.ಮಾ. ಚಿತ್ರದುರ್ಗ

೨೧. ಸಂಸ್ಕೃತ ಮಂತ್ರಗಳು–ಕನ್ನಡ ಲಿಪಿ

೨೨. ಮಹಾಭಾರತ–(ಅಭಿಮನ್ಯು ಕಾಳಗ)೧೮ನೇ ಶತಮಾನ ಚಿತ್ರದುರ್ಗ

೨೩. ಸಂಸ್ಕೃತ ಶ್ಲೋಕಗಳು ೧೮ನೇ ಶತಮಾನ

೨೪. ಸಂಸ್ಕೃತ ಶ್ಲೋಕಗಳು–೧೮ನೇ ಶ.ಮಾ.

೨೫. ರಾಮಚರಿತೆ–೧೮ನೇ ಶತಮಾನ

೨೬. ಭಾರತ ಚಂಪು–೧೮ನೇ ಶತಮಾನ

ಇಷ್ಟು ಕೃತಿಗಳು ಈ ಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿರುವುದನ್ನು ನಾವು ಕಾಣಬಹುದಾಗಿದೆ.

ಸರಕಾರಿ ಸಂಸ್ಥೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ದಾನಿಗಳು ನೀಡಿದ ಹಸ್ತಪ್ರತಿಗಳು

ಶ್ರೀ ಮಹಾರುದ್ರಚಾರ್ಯ ಚಿತ್ರದುರ್ಗ ಇವರ ಒಡೆತನದ ಹಸ್ತಪ್ರತಿಗಳು

* ಧನಂಜಯ ನಿಘಂಟು (ಟೀಕು)

"ನಿರ್ವಿಘ್ನಮಸ್ತು। ಧನಂಜಯ ನಿಘಂಟು ಪ್ರಾರಂಭ। ತಂ ನಮಾಮಿ ಪರಂಜ್ಯೋತಿ
ರವಾಗ್ಮನ ಸಗೋಚರಂ। ವುನ್ಮೂಲಿಯತ್ಯ ವಿದ್ಯಾಂ ಯದ್ವೇದ್ಯನು ನಿರ್ಲ
ಯತ್ಯ ಪೆಯತ್ ॥೧॥

"ಟೀಕೆ" ಯದಿವಗಟ। ಅವಿದ್ಯಂ। ಅಜ್ಞಾನವನು। ವುನ್ಮೊಲಯತಿ। ಬೊರಸಿ ಕೇಳ್
ವದುವಿದ್ಯಂ ಸುಜ್ಞಾನವನು। ವುನ್ಮೂಲಯತಿ। ಉದಯಿಸಿ ಕೊಡುವದು। ವಚನ
ಕ್ಕೆಯು। ಮನಕ್ಕೆಯು।ಸಂಬಂಧವಾದಂತ।
ಹರಿಣ। ಮೃಗ। ಪ್ರೊಷದ। ಈ ಮೂರನ್ನು। ಮೃಗಾವಿಲೆ ಪರ್ವತದಂತೆ। ಆಮೃಗ।
ಪರ್ಯಾಯ ಮುಂದರ। ಅಂಕಶಬ್ದಂ। ಪೆಟ್ಟಿತೇ। ಶಾರ್ವಾಂತರ। ಬೃಂಧು ನಿಪೆರ್ವು।
ಹರಿಣಕ್ಕಂ। ಯುಗಾಂತ। ಹರಿಣಲಾಂಚನಃ। ಮೃಂಗಾ ಲಾಂಚನಃ। ವೃಷಭಲಾಂಚನ।
ಹರಿಣಚಿನ್ಹ ಮೃತಚಿನ್ಹ ವೇಷಭಚಿನ್ಹಹರಿಣಲಕ್ಷ। ಮೃಗಲಕ್ಷ। ಯಿವು
ಮೊದಲೈನ। ವಿಚಂದ್ರು ವಿಪೆರ್ಲು"[೬]

ಈ ಕೃತಿಯ ಕ್ರಮ ಸಂಖ್ಯೆ ೨೦೦, ತಾಳೆಪ್ರತಿ ಕೃತಿ ರಚನೆಯಾದ ಕಾಲ ೬೨೫ ತಾಳೆಪ್ರತಿಯು ಸಾಧಾರಣವಾಗಿದೆ. ೧ರಿಂದ ೨೩ರವರೆಗೆ ತಾಳೆಗರಿಗಳಿವೆ. ಅವುಗಳು ಕೂಡ ಸಾಧಾರಣವಾಗಿವೆ. ವಿಶೇಷ ಎಂದರೆ ಇದು ಸಮಗ್ರ ಕೃತಿಯಾಗಿದೆ. ಇದು ಧನಂಜಯ ನಿಘಂಟಿನ ಕನ್ನಡ ಟೀಕೆಯಾಗಿದೆ

* **ನಾಟಿವೈದ್ಯ :**

"(ಆದಿಯಲ್ಲಿ) ಕರ್ಣಮೂಲ ಕೆಲವು ಔಷದಿಗಳನ್ನು ಪೇಳ್ವೆನು। ಮಣಿಸಿಲಿ।ಒಂದು

ತೂಕ ಅರಿಸಿಣ ಒಂದುತೂಕ xxxx ಮೆಣಸು ನಾಲ್ಕುತೂಕ ಬಜಿ ಮೂರುತೂಕ

ಮೆಣಸು ನಾಲ್ಕು ತೂಕ ತಾಳಕ ಕೃಷ್ಣಾಜಿನ ನಾಲ್ಕು ತೂಕ ಇವೆಲ್ಲ ಮಂ

ಚೂರ್ಣವ ಮೂಡಿ xxxx ಒಳ್ಳೆಣ್ಣೆಯ xxx ಇರುವತನಕ xxx ದಿನ

ಮಾಡುವುದು

xxxxxxxx।ದಂಡಿ।ಹಿಂದಡಿ।ಮರ್ಧನಂ।ಧರ್ಮನಂ। xxxಅರೆ।ದು

ಅವೇಭಮಂ xxx ನರಸುಕ್ಕ ಅಂಗಲರಿಯೊಳಂ ನಾನಾ ಕಲಹ ದಿನಿಂ

ಇಂ ಕ್ರಾಂ ಇದೇ ಮಂತ್ರಂ"[೩೭]

ಕ್ರಮ ಸಂಖ್ಯೆ ೨೧೧ ಇದು ಕಾಗದ ಪ್ರತಿಯಾಗಿದೆ. ಇದು ರಚನೆಯಾದ ಕಾಲ ೬೬೬ ೬x೮ ಸಾಧಾರಣ ಹಾಗೆಯೆ ಕಾಗದದ ಹಾಳೆಗಳು ೯–೯೮ರವರೆಗೆ ಇವೆ. ಅವು ಕೂಡ ಸಾಧಾರಣ ಇದು ಅಸಮಗ್ರ ಕೃತಿಯಾಗಿದ್ದು ಹಸ್ತಪ್ರತಿಗಳು ಜೀರ್ಣಸ್ಥಿತಿಯಲ್ಲಿರುವುದನ್ನು ನೋಡಬಹುದು. ಈ ಹಸ್ತಪ್ರತಿಯಲ್ಲಿ ವಿವಿಧ ರೋಗಗಳಿಗೆ ಸಂಬಂಧಿಸಿದಂತೆ ಚೂರ್ಣಗಳ ವಿವರ ಇರುವುದನ್ನು ಗಮನಿಸಬಹುದು.

* **ನಾಟಿವೈದ್ಯ :**

"ಬೆಲ್ಲ ಉಪ್ಪ ೨ ಅರದು ಸುಳಿಗೆ ಹಚ್ಚಿ ಆಕಳ ತುಪ್ಪದಲ್ಲಿ ಸೋಸಿ ಮೂರುದಿನ

ಕೊಡಿ ॥ಪಥ್ಯ॥ ಜೋಳದ ರೊಟ್ಟಿ, ಒಳ್ಳೆಣ್ಣೆ ತೊಟ್ಟಲಕಾಯಿ ಬಾಳೆಕಾಯಿ

ಲವಣಾಂಬ್ರ ವರ್ಜಿತ। ನಾರಹುಣ್ಣಿಗೆ ತ್ವಂಟಿಗನ ಸೊಪ್ಪು। ಒಂದು ಹಿಡಿ ಇಂಗು

ಬೆಲ್ಲ ಎಳ್ಳು ಇವಂ ಕುಟ್ಟಿ ೧೪ ಗುಳಿಗೆಯಂ ಮಾಡಿ ಮುಂಜಾನೆ ಒಂದು ಸಂಜೆ

ಒಂದು ಮಾತ್ರೆ ಮಾಡಿಕೊಡೆ ನಾರಹುಣ್ಣು ಪರಿಹಾರವಾಗುವುದು।

ಮೂಗಿನರಕ್ತ, ಬಾಯಿರಕ್ತ ಬೀಳುವದಕ್ಕೆ। ಹಳೆಮಾವಿನ ಬೀಜ ನೀರಲ್ಲಿ

ಅರದು ನೆನೆಸಿ ಸುತ್ತಲು ತುರಿದು ಮಂಣು, ವಿಭೂತಿ ಸಾಗದ ನೆತ್ತಿಗೆ ಹಾಕಲು

ಕಾಲು ರಕ್ತ ಮಾಯುವುದು। ಹಾಲೊಳಗೆ ತಿರುತ ಸಾಕೆಬೇರು, ಕುರುವೆಬೇರು

ಎರಡನ್ನೂ ಚೂರ್ಣಮಾಡಿಹಾಕಿ ಕಾಸಿದರೆ ಘಟ್ಟಿಯಕ್ಕು। ಬಿಸಿಲೊಳಗೆ ಇರಿಸಿದರೆ
ಶಬ್ಬಕ್ಕೆ ಮತ್ತು ಬಳೆಗಾರ ಕರ್ಪೂರ ಶಿಲಾಧಾರೆ ಲೊಳಸರದಿಂದ ಅರದು
ಕೈಯಿಗೆ ಪೂಸಿಕೊಂಡು ಕಾದ ಎಣ್ಣೆಯಲ್ಲಿ ಕೈಯಿಕ್ಕಲು ಕೈಸುಡುವುದಿಲ್ಲ।
ಕೆರೆಯಂಗಳ ಹಾವಸೆ ನುಗ್ಗಿಬೀಜ ಗುಳದಹಣ್ಣಿನ ರಸದಿಂದ ಲೇಪನವಂ
ಮಾಡಿ ಭೋಗಿಸೆ ಸ್ತ್ರೀಯರು ಮೆಚ್ಚುವರು।"೩೮

ಕ್ರಮಸಂಖ್ಯೆ ೨೧೩, ಕಾಗದಪ್ರತಿ ಸಾಧಾರಣವಾಗಿದೆ ಕೃತಿ ರಚನೆಯಾದ ಕಾಲ ೬೫೭ ಕೃತಿಯಲ್ಲಿ ೧ರಿಂದ ೪೦ ಹಾಳೆಗಳಿವೆ ಇದು ಅಸಮಗ್ರ ಕೃತಿಯಾಗಿದ್ದು, ಹಸ್ತಪ್ರತಿಯಲ್ಲಿ ವಿವಿಧ ರೋಗಗಳಿಗೆ ಸಂಬಂಧಿಸಿದಂತೆ ಔಷಧಿ ನೀಡುವ ವಿವರಗಳನ್ನು ಕಾಣಬಹುದಾಗಿದೆ.

ಭೋಜಪ್ರಬಂಧ ನಾಟಕ

"ಶ್ರೀ ವಿಘ್ನೇಶ್ವರಾಯನಮಃ॥ ಭೋಜಪ್ರಬಂಧ ನಾಟಕ॥ ನಾಂದಿ। ಶ್ರೀ ಶಂಭೋ
ಶಂಕರ ಸುರಂಶ್ರುತಿತತಿ xxxxx ಧೀರ॥ ಗಂಗಾಭಂಗಾ ಸಂಗಾತುಂಗಾ ಸುಚರದಿಗುರು
xxxxxx ಗಿಂರಾಡ್ವಲಾ। ಮುಖಕಿಲಾಲಾ। ಭವಗ್ರಣಿಮ xxxxx ಕರುಣಹರ।
ಕರಣ ಶರಣಪದ। ಮರಣ xxxxxxx ಗುರು ॥೧॥
೧ನೇ ಬ್ರಾಹ್ಮಣ॥ ಶಿಂಧುಲ ಮಹಾರಾಜರ ದೇಹಸ್ಥಿತಿಯು ಬಹಳ ಅಪಾಯ
ದಲ್ಲಿಹುದು। ಗ್ರಹಗತಿಗಳು ಸರಿಯಾಗಿಲ್ಲ। ರಾಜನು ಜೀವಿಸದೇ xxxxxx
ಭೋಜನು ಪರದೇಶಿ ಆಗುವನು। ದೇವರ ಚಿತ್ತವು xxxxx ಕಂಡವರಾರು
೫ನೇ ಅಂಕ। ಕಾಳಿದಾಸ–ಅಮಂಗಳವನ್ನು ಹೋಗಲಾಡಿಸಿ ಸರ್ವ ಚರಾಚರಂಗ
ಳಿಗೂ ಕ್ಷೇಮವನ್ನು ಕಲ್ಪಿಸುವ ಆ ಪರಮೇಶ್ವರನನ್ನು ಕೊಂಡಾದು...
ಶ್ರೀ ಕೃಷ್ಣ ಮಹೇಶ ನಿತ್ಯಂ ಸೌಭಾಗ್ಯ ದೀರ್ಘಯುಗಳಿಂ ಸಾಮ್ರಾಜ್ಯವಿತ್ತು
ಸಲಹು ಭವಾನಿ ಭಾಗ್ಯದಾಯಿನಿ"೩೯

ಕ್ರಮಸಂಖ್ಯೆ ೩೨೭ ಕಾಗದದ ಪ್ರತಿಯಾಗಿದ್ದು ೬೦೮ರಲ್ಲಿ ಈ ಕೃತಿಯು ರಚನೆಗೊಂಡಿದೆ. ಹಾಗೆಯೇ ಇದು ಸಾಧಾರಣ ಪ್ರತಿಯಾಗಿದ್ದು ಕೃತಿಯಲ್ಲಿ ೧–೮೩ ಹಾಳೆಗಳು ಇವೆ. ಸಮಗ್ರ ಕೃತಿಯಾಗಿದ್ದು ಸಿಂಧುಮಹಾರಾಜನ ಕಥೆಯನ್ನು ಒಳಗೊಂಡಿದೆ.

ಯಂತ್ರ–ಮಂತ್ರ–ತಂತ್ರ

"ಓಂ ಅಘೋರವೀರ ಶಕ್ತಿ ಬಾಲಬ್ರಹ್ಮ ಸ್ವರೂಪ xxx ದಂಡಕೋಲ ಹಲಿಉಗಳಾ। ಯಕ್ಷಿಣಿ ಪಾರ್ವತಿ। ಪರಮೇಶ್ವರಿ। ಮಹೇಶ್ವರಿ। ಮಾಯ। ಕರ್ಣಿಕಾ। ವಜ್ರಂಕಿ xxx ಕಾಳಿ ಕರಾಳಿ। ಕುಮಾರಿ। ಭದ್ರಕಾಳಿ। ವಜ್ರಕವಚೆ। ಚಾರುಣಿ। ಧೀರುಣಿ। ನಿಷ್ಕಳಂಕಿಣಿ। ನಿರಾಧಾರಿಣಿ। ಭವಾನಿ। ಶಿವಿನಿ। ಕದಂಬ। ಶಾರಂಭ।ಯೋಗವಿಧಿ...

ಹ್ರಾಂ ಫ್ರೀಂ ಹ್ರಾಂ ತ್ರಂ ತ್ರೋಂ ತು ಶ್ರೀ ನವಮಾ ಪಂಚಲೋಲಾ ಇಂದ್ರ ಜೀತು ಕಲಮಾ ಬೇರುಂಡ ಹೊಂ ಫ್ರೀಂ ಆಮೇಕಾ ಅನಿವಾರ್ಯಿನಿ ಪರಂಜೆಷಷಟ್ ಹ್ರಾಂ ಫ್ರೀಂ...।"[೪೦]

ಕ್ರಮಸಂಖ್ಯೆ ೩೫೮ ಕಾಗದದ ಪ್ರತಿ ಸಾಧಾರಣವಾಗಿದ್ದು ೬೬೦ರಲ್ಲಿ ಕೃತಿಯು ರಚನೆಗೊಂಡಿದೆ. ಕೃತಿಯಲ್ಲಿ ೩–೪೨ ಹಾಳೆಗಳು ಇವೆ ಅಕ್ಷರಗಳು ದುಂಡಾಗಿ ಉತ್ತಮ ಸ್ಥಿತಿಯಲ್ಲಿರುವುದನ್ನು ಕಾಣಬಹುದು. ಮಾಟ, ಮಂತ್ರ ಮತ್ತು ಯಂತ್ರಕ್ಕೆ ಸಂಬಂಧಿಸಿದ ವಿಷಯವನ್ನು ಒಳಗೊಂಡಿರುವುದನ್ನು ನೋಡಬಹುದಾಗಿದೆ. ಇದು ಅಸಮಗ್ರವಾಗಿದ್ದು, ಸಾಂದರ್ಭಿಕ ಚಿತ್ರಗಳಿರುವುದು ಕಂಡುಬರುತ್ತದೆ.

ಯುನಾನಿಲೇಹಗಳ ಸಂಗ್ರಹ :

"ಆದಿಯಿಲ್ಲ xxxxxx ತಾರೀಖು ೧೪ಕ್ಕೆ ಸರಿಯಾದ ಕೀಲಿಕ ಸಂವತ್ಸರದ ಫಾಲ್ಗುಣ ಭಾನುವಾರದಲ್ಲು ಚಿತ್ರದುರ್ಗ ತಾಲ್ಲೂಕು ಕು(ತು)ರುವನೂರು ಮನಿಯಲ್ಲಿಯೊಳ್ ವಾಸವಾಗಿರುವ ಮನೋಚಾರಿ ಪಂಡಿತ ಭೀಮಣ್ಣನವರ ಯುನಾನಿ ಲೇಹಗಳ ಸಂಗ್ರಹ॥ ಶುಭಮಸ್ತು॥ ಲವಂಗಾದಿ ಲೋಹ। ಲವಂಗ

ಸೆ–೧ ಜಾಕಾಯಿ ಕೊ೧ ಡಿವ್ವಿಲಿಕೊ೧ ಯೀ ಮೂರು ದಿನಸಗಳನ್ನ ಕೂಡಿಸಿ ಶೋಧಿಸಿಕೊಂಡು ಹಸುವಿನ ಹಾಲಿಗೆ ಕಾಡು ಕುಂಬಳದ ಗೆಡ್ಡೆರಸ ಬಳಿ ಹಾಕಿ। ಮೇಲಿನ ಮೂರು ದಿನಸಿನ ಚೂರ್ನವಂ ಹಾಕಿ ಪಾಕಕ್ಕೆ xx ದು ಮತ್ತು ಈ ಲೇಹಕ್ಕೆ ಗ್ರಂಥಿಕೆ ದಿನಸು।

ನಷ್ಟೇಂದ್ರಿಯಕ್ಕೆ ಲೇಪನ॥ ಬಿಳಿ ಪನ್ನೇರುಗೆಡ್ಡೆ, ಸೈಂಧವ ಲವಣ ಇವುಗಳನ್ನೇ ಚೂರ್ಣಮಾಡಿ ೪ ಪಾಲು ತುಪ್ಪ, ಇವುಗಳ ೪ಪಾಲು ಮೇಕೆ ಹಾಲುಹಾಕಿ ತುಪ್ಪ ಉಳಿಯುವವರೆಗೆ ಕಾಯಿಸಿ ಲೇಪಿಸಬೇಕು ಮೀರಿಯಲೂ ಸೈಂಧವ ಲವಣವು ಪಿಪ್ಪಳ್ಲು, ಗ್ರಾಂಥಿಕರಮು ಮೂಲಕ ಪಂಡ್ಲು, ಉತ್ತರಣೆ, ಚಂಗಲ್ವ ಕೋಷ್ಟ ಯವಲು, ಮಿನುಮುಲು, ದಿರಿ ನೆನಪು ಕಾಯಿ ಚಾರ್ಣಮ ಜೇಸಿ ಕೆನೆಗಲಪಿ ಪ್ರತಿದಿನಮು ಲೇಪನಮು ಜೇಯವಲಯುನ॥[೪೧]

ಕ್ರಮಸಂಖ್ಯೆ ೩೬೧ ಕಾಗದದ ಪ್ರತಿ ಸಾಧಾರಣ ಕೃತಿಯು ೬೭೨ರಲ್ಲಿ ರಚನೆಗೊಂಡಿದ್ದು ೧ರಿಂದ ೨೦ರವರೆಗೆ ಹಾಳೆಗಳು ಇವೆ. ಕೃತಿಯ ಭಾಷೆ ತೆಲುಗು ಲಿಪಿ ಕನ್ನಡ ಇದು ಅಸಮಗ್ರ ಕೃತಿಯಾಗಿದೆ. ಔಷಧೋಪಚಾರಗಳ ವಿವರದ ಬಗ್ಗೆ ತಿಳಿಸಿ ಕೊಡುವುದನ್ನು ನೋಡಬಹುದು.

ವೈದ್ಯ ಪುಸ್ತಕ : "ಶ್ರೀ ಗುರು ಪ್ರಸನ್ನ। ವೈದ್ಯಪುಸ್ತಕ ಬರವುದಕ್ಕೆ ಶುಭಮಸ್ತು ॥ಗ್ರಂಥ॥ ಅರ್ಕಕ್ಷೀರ ಅಜಕ್ಷಿರ। ನಿರ್ಗಂದಿ ತ್ರಿಥಣಿರಸಂ। ತಿರತೈಲಸಮಕ್ಷಿತಂ। ಪಾಕಾದಿನಿತ್ಯ

ಗದ್ಯಾಣಂ। ಮಿಕ್ಕತೈಲ ಸರ್ವಾಂಗಲೇಪನಂ। ಪರ್ವಾತ ನಿವಾರಣಕಂ।
"ಟೀಕು" ಯಕ್ಕಿಹಾಲು ಪಾವು। ಆಡಿನಹಾಲು ಪಾವು ಲಕ್ಕಿರಸ ಪಾವು। ಹುಣಚಿ
ಸೊಪ್ಪಿನ ರಸ ಪಾವು। ಅಚ್ಚಯಳ್ಳೆಂಣೆ ಸೇರು। ಯಿವು ಯರಡು ಸೇರಿಸು। ವಂದು
ಸೇರು। ತುಂಬಿ ಯಣ್ಣಿ ವುಳಿಯಲಟ್ಟು। ಆಯಣಿ ಆಗೋಪರಿಯಾಂತ್ರ ನಿತ್ಯ
ಗದ್ಯಾಣ ತಕ್ಕೊಂಡು। ಮುಖಕೆರಡು ಹೊರ್ತು। ಸರ್ವಾಂಗ ಲೇಪನಂ ಮಾಡಿ।
ಬಿಸಿಲು ಇಲ್ಲವೆ ಬೆಂಕಿಯ ತಾಳತಾಳ ಚಂನಾಗಿ ಕಾಸಲಾಗಿ ಸರ್ವವಾತ। ವಾಯ ಮಂಡಿಹುಣ್ಣು
॥೧॥

ಮನುಷ್ಯರಿಗೆ ಬಿಳುವು ಹತ್ತಿದರೆ। ನೆಲಗುಳದ ಬೇರು। ತೊಟ್ಟಲ ಬೇರು ಬಿಳೆ
ಹೂಲಿ ಬೇರು। ಪಡವಿನ ಬೇರು। ನೆಲ ಅಮರಿ ಬೇರು। ಕಾಮಕಸ್ತೂರಿ ಬೇರು
ಕಾಡಕವಡಿ ಬೇರು। ಕಾರ್ಚಿಗಡಿಯ ತೈಲ ತೆಗೆದು। ಯಿದರಲ್ಲಿ ಗೆಜಿಕಡ್ಲಿ ಐದು ದುಡೂ।
ಯೀವು ಮೂರನು ಸುಟ್ಟು ತೈಲದಲ್ಲಿ ಪುಡಿಮಾಡಹಾಕಿ । ಬಿಳಿಪು
ಯಿದ್ದಲ್ಲಿಗೆ ಹಚ್ಚಿ। ಹೊಟ್ಟೆಗೆ ತೆಗೆದುಕೊಳ್ಳಬೇಕು ೯ದಿನಕೆ ಹುಣು। ಪತ್ಯ
ಮಾಡಬೇಕು ॥೨೮೦॥ ಶ್ರೀ ನಳನಾಮ ಸಂವತ್ಸರ ವೈಶಾಖ ಸು ॥೧೨ಯಲ್ಲು
ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ"[೪೨]

ಕ್ರಮ ಸಂಖ್ಯೆ ೪೨೭ ಕಾಗದದ ಪ್ರತಿ ಸಾಧಾರಣ ಕೃತಿಯು ೭೬೫ರಲ್ಲಿ ರಚನೆಯಾಗಿದೆ. ೧ರಿಂದ ೧೪೪ ಹಾಳೆಗಳಿವೆ ಇವು ಸಾಧಾರಣ ಪ್ರತಿಗಳಾಗಿದ್ದು ಸಮಗ್ರ ಕೃತಿಯಾಗಿದೆ. ವಿವಿಧ ರೋಗಗಳಿಗೆ ವನಸ್ಪತಿ ವಿವರಗಳು ಇರುವುದನ್ನು ಗಮನಿಸಬಹುದು. ಇದು ಇಂದಿಗೂ ಪ್ರಚಲಿತದಲ್ಲಿರುವುದನ್ನು ನೋಡಬಹುದಾಗಿದೆ.

ಶಕುನ ಶಾಸ್ತ್ರ : (ಆದಿಯಿಲ್ಲ) "ಪೂರ್ವ ಭಾದ್ರಪದವು ರೇವತಿ ಮೀನ ಮೇಷ ವೃಷಭ
ಮಿಥುನ ಕರ್ಕಾಟಕ ಸಿಂಹ ಕನ್ಯಾ ತುಲಾ ವೃಶ್ಚಿಕ ಧನಸ್ಸು ಮಕರ ಕುಂಭ ಮೀನ ಹನ್ನೆರಡು
ರಾಶಿ ಗಣಂ॥ ಕುಲಮೇಷ ಮಕರ ಕರ್ಕಟಕ ಈ ನಾಲ್ಕು ದೇವಗಣ। ವೃಶ್ಚಿಕ
ಸಿಂಹ ವೃಷಭ ನಾಲ್ಕು ರಾಕ್ಷಸಗಣ। ಧನಸ್ಸು ಮೀನ ಕನ್ಯಾ ಮೀಥುನ ನಾಲ್ಕು
ಮನುಷ್ಯಗಣ। ಮೃಗಶಿರ ಸ್ವಾತಿ ಪುಷ್ಯ ಪುನರ್ವಸು ಶ್ರವಣ ಅನುರಾಧೆ ರೇವತಿ ಅಶ್ವಿನಿ
ಇವು ದೇವಗಣ ॥೧॥

ಯಿಂನು ಮನೆಯ ಕಟ್ಟಿಸುವ ಲಕ್ಷಣ। ಚೈತ್ರ ಮಾಸದಲ್ಲಿ ಮಧ್ಯಮ। ವೈಶಾಖ
ದಲ್ಲಿ ಶುಭವು। ಜೇಷ್ಠದಲ್ಲಿ ಮರಣ। ಆಷಾಡದಲ್ಲಿ ನಾಶ। ಶ್ರಾವಣದಲ್ಲಿ
ದೇವರ ಬರವು। ಭಾದ್ರಪದದಲ್ಲಿ ಕಲಹ। ಅಶ್ವೀಜದಲ್ಲಿ ಸಂತೋಷ ।ಮಾರ್ಗ

ಶಿರದಲ್ಲಿ ಶುಭ। ಪುಷ್ಯದಲ್ಲಿ ಅಗ್ನಿಭಯ। ಮಘದಲ್ಲಿ ಲೇಸು। ಪಾಲ್ಗುಣದಲ್ಲಿ
ಧನಲಾಭ। ಈ ಹನ್ನೆರಡು। ಮಾಸದ ಫಲವು।"[೪೩]

ಕ್ರಮ ಸಂಖ್ಯೆ ೪೩೯ ಕಾಗದದ ಪ್ರತಿಯಾಗಿದ್ದು ಸಾಧಾರಣ ಕೃತಿಯ ಕಾಲ ೬೬೪ ೧ರಿಂದ ೬ ಹಾಳೆಗಳಿವೆ ಇದು ಅಸಮಗ್ರ ಕೃತಿಯಾಗಿದೆ. ರಾಶಿಫಲಗಳ ವಿಚಾರವನ್ನು ಒಳಗೊಂಡಿದ್ದು ಇದು ಇಂದಿಗೂ ಪ್ರಚಲಿತದಲ್ಲಿರುವುದನ್ನು ನೋಡಬಹುದು.

ಸುಧನ್ವನ ಕಥೆ : "ಸನ್ ೧೮೬೭ನೆಯ। ಸನ್ ಮಾಹೆ ನವ್ವಂಬರ್ ತಾರೀಖು ೨೭ರಂದು ಹದಿನೆಂಟು

ನೂರ ಅರವತ್ತೇಳನೆ ಇಸವಿಗೆ ಸರಿಯಾದ ಪ್ರಭವ ಸಂ। ರದ ಪುಷ್ಯ ಶುದ್ಧ
೨ಯಲ್ಲು ಶುಕ್ರವಾರ ಸುರ್ಯ ಉದಯದ ಏಳುಗಂಟೆ ಹೊಡೆದಯಾಳೆಕಲ್ಲಿ
ಚಿತ್ರದುರ್ಗ ತಾಲೂಕು ಉ(ತು)ರವನೂರು x ಸಭೆಯಲ್ಲಿ ಇರುವ ಸರ್ವಾ
ಯಿಲಾಕ ಮಹಮ್ಮದ್ ಫಕ್ರುದ್ಧೀನ್ ಸಾಹೇರ್ಬ xxx ಚಂದನಾಗಲ್ಪಂಥರುಹಂ
ಅಹ್ಮದಭಾಷಾಸಾಹೇಬರು ಅಕ್ಷರವನ್ನು ವಾಚಿಗೆ ಮಾಡಿ ಕೇಳುವಗೋಸ್ಕರ
ಬರೆದಂಥಾ ಸುಧನ್ವನ ಕಲಿಪಾರ್ಥರ ಸಂಗ್ರಾಮದ ಕಾಳಗ ಬರೆವುದಕ್ಕೆ ಶುಭ
ಮಸ್ತು। ಸೂಚನೆ। ಹಿಂದುಳಿದ ನಾಪಾವಕ್ಕೆಂದು ಹಂಶಧ್ವಜಂ। ನಂದನನ ನೆಣ್ಣೆ
ಗಾಗಿರ್ದ x ಉರಿಗೆಯೊಳ ತಂದು ಕೆಡಹಿಸಲಚ್ಯುತನ ಧ್ಯಾನದಿಂ ತಂಪವಡೆ
ದನವನಚ್ಚರಿಯನೆ ॥೦॥
ಸತ್ಕಾಣೆ ಪೊಕ್ಕು ತಾ ಸಾರಮಮಂ। ಕಲಕುವಂ ತಕ್ಕ ಜದೊಳುತ್ತಲಿಕ್ಕಿದ ನಿಖಿಳ
ಸೈನಮಂ ಮಿಕ್ಕದುಂದೆಂತಲಂ ಲಂಚಿರಿವರಿದಟ್ಟುವಂ ಕೊಡಪಿದನತಿ ಬಲರಮಂ
॥೦॥ ತತ್ಕ ಸಿದುಳೆತ್ಕಕುಳ ಕೈಕಂದ ವೀರರಂ ಮುತ್ತುರುಕಿ ತೆಕ್ಕೆಗೆಡಸಿದ ನಾರನ
ಗ್ರದೋಳೆತ್ಕಳಿಸಿದುತ್ಕಂದದ ದಾಟ್ಟಿಂದು ಸುರತನರಿಸಿದನ ಅಚ್ಚುತಾ
ರ್ಜುನರನು॥೬॥"[೪೪]

ಕ್ರಮಸಂಖ್ಯೆ ೫೧೩ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಈ ಕೃತಿ ಇದೆ. ಕಾಗದದ ಪ್ರತಿಯಾಗಿದೆ ಸಾಧಾರಣ ಕೃತಿಯ ಕಾಲ ೬೬೩ ೩–೨೧ ಕಾಗದದ ಹಾಳೆಗಳಿವೆ. ಸಾಧಾರಣ ಇದು ಕನ್ನಡ ಪಿಯಲ್ಲಿ ರಚನೆಗೊಂಡಿದ್ದು ಹಸ್ತಪ್ರತಿಯು ಅಸಮಗ್ರವಾಗಿದೆ. ಮಹಾಭಾರತದಲ್ಲಿ ಬರುವ ಸುಧನ್ವರಾಜನ ಕಥೆಯನ್ನು ಈ ಕೃತಿಯು ಒಳಗೊಂಡಿರುವುದನ್ನು ನೋಡಬಹುದು.

ಶ್ರೀಯುತರು ತಮ್ಮ ಒಡೆತನದಲ್ಲಿದ್ದ ಸುಮಾರು ೧೨ ಕೃತಿಗಳನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ, ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ದಾನವಾಗಿ ನೀಡಿದ್ದಾರೆ. ಈ ವಿಚಾರವನ್ನು ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂಪುಟ-೨ರಲ್ಲಿ ನೋಡಬಹುದಾಗಿದೆ. ಇವು ಇಂದಿಗೂ ಪರಾಮರ್ಶನ ಗ್ರಂಥಗಳಾಗಿ ಬಳಕೆಯಾಗುತ್ತಿವೆ. ಸಂಶೋಧನಾ ವಿದ್ಯಾರ್ಥಿಗಳು ಬೇರೆ ಬೇರೆ ಕಡೆಗಳಿಂದ ಬಂದು ಇವುಗಳನ್ನು ತಮ್ಮ ಅಧ್ಯಯನಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇಷ್ಟೇ ಅಲ್ಲದೇ ಪ್ರಾಧ್ಯಾಪಕರು ಕೂಡ ಹಸ್ತಪ್ರತಿಗಳ ಅಧ್ಯಯನದಲ್ಲಿ ಬಳಕೆ ಮಾಡಿಕೊಂಡು ಬರುತ್ತಿದ್ದಾರೆ. ಹೀಗೆಯೇ ಪ್ರತಿಯೊಬ್ಬರೂ ಸಹ ತಮ್ಮಲ್ಲಿರುವ ಹಸ್ತಪ್ರತಿಗಳನ್ನು ಹಾಳುಮಾಡದೆ ಮಠ ಅಥವಾ ವಿಶ್ವವಿದ್ಯಾಲಯಗಳಿಗೆ ದಾನ ಮಾಡಿದರೆ ಅದರಿಂದ ಅನೇಕ ಹೊಸ ವಿಚಾರಗಳು ಬೆಳಕಿಗೆ ಬರಲು ಸಾಧ್ಯವಿದೆ. ಆ ನಿಟ್ಟಿನಲ್ಲಿ ಎಲ್ಲರೂ ಜಾಗ್ರತರಾಗಬೇಕಾಗಿದೆ.

ದೇವಸ್ಥಾನದ ಅರ್ಚಕ ಎಚ್. ಗೋವರ್ಧನ :

೧. ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ

೨. ಲಕ್ಷ್ಮೀಶ ಕವಿಯ ಜೈಮಿನಿ ಭಾರತ

"ಹರ್ತಿಕೋಟೆ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಅರ್ಚಕರಾದ ಎಚ್. ಗೋವರ್ಧನ ಅವರು ತಮ್ಮ ಬಳಿಯಿದ್ದ ಎರಡು ಅಮೂಲ್ಯ ತಾಳೆಗರಿ ಹಸ್ತಪ್ರತಿಗಳನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಇದರಲ್ಲಿ ಒಂದು ಕುಮಾರ ವಾಲ್ಮೀಕಿ ಎಂದು ಹೆಸರು ಪಡೆದ ನರಹರಿ ಕವಿಯ ತೊರವೆ ರಾಮಾಯಣ. ಇದು ಎರಡುವರೆ ಅಡಿ ಉದ್ದದ ಎರಡು ಇಂಚು ಅಗಲದ ಶ್ರೀತಾಳದ ಹಸ್ತಪ್ರತಿಯಾಗಿದೆ. ಮತ್ತೊಂದು ಲಕ್ಷ್ಮೀಶ ಕವಿಯ ಜೈಮಿನಿ ಭಾರತ ಕೃತಿಯಾಗಿದೆ. ಪಠಣ ಪರಂಪರೆಗೆ ಸೇರಿದ ಈ ಎರಡು ಕೃತಿಗಳು ಶ್ರೀ ವೈಷ್ಣವರಾದ ಗೋವರ್ಧನ ಅವರ ಪೂರ್ವಿಕರು ಧಾರ್ಮಿಕ ಕಾರ್ಯಗಳಿಗಾಗಿ ಮಳೆ ಬಾರದೆ ಮತ್ತು ಬರ ಬಿದ್ದ ಸಂದರ್ಭದಲ್ಲಿ ಮಳೆಬಂದು ಸಮೃದ್ಧಿಯಾಗಲೆಂದು ಊರಿನ ಪ್ರಯೋಜನಕ್ಕಾಗಿ ವಾಚನ ಮಾಡುತ್ತಿದ್ದರು ಎನ್ನುವುದು ವಿಶೇಷವಾಗಿದೆ".[೪೫]

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕು ಹೆಗ್ಗರೆ ಗ್ರಾಮದ ಗೌಡರ ಮನೆಯಲ್ಲಿ ಕೃಷ್ಣ ಚರಿತ್ರೆ ಹಸ್ತಪ್ರತಿ ಇದೆ. ಈ ಕೃತಿಯ ಅಂತ್ಯದಲ್ಲಿ "ಶ್ರೀ ರಾಮಾಯ ನಮಃ ಶ್ರೀ ರಘುನಾಥಾಯ ನಮಃ ಚಿತ್ರಭಾನು ಸಂವತ್ಸರದ ಪುಷ್ಯ ಶುದ್ಧ ೬ ಚಾಮವಾಸರು ಸೂರ್ಯೋದಯ xxxx ಕೃಷ್ಣ ಚರಿತ್ರೆ ಬರೆದು ಸಂಪೂರ್ಣವಾಯಿತು. ಬರದಾತ ಹಂದನಕೆರ್ರೆ ಸ್ಥಳದ ಭಾರತಿಗಳಾದಂಥ ತಿಂಗಟ್ಟೆಯ್ಯನವರು। ಕಾಯಎಯೂಧಿಜನಾದಂಧ್ಧ ಗಿರ್‍ರಿಯಪ್ಪನು ಹೆಗ್ಗರ್‍ರೆ ಗ್ರಾಮದ ಗೌಡರಾದ ಬೂಕಂಣನ ತನುಶರಧಿ ಜಾತ। ಸೋಮನಾದಂಥ ವೆಂಗಟಗೌಡಗೆ ಪುತ್ರ ಪೌತ್ರ ವಂಶಾಭಿವೃದ್ಧಿಯಾಗಿ ಧನಕನಕ ವಸ್ತುವಾಹನ ಸಮೃದ್ಧಿಯಾಗಿ ಬದುಕಲೀಯಂಬುದಾಗಿ ಶ್ರೀ ಲಕ್ಷ್ಮೀವೆಂಕಟೇಶ್ವರ ಪಾದ ಕಮಲಂಗಳಂ ಭಜಿಸಿ ಬರೆದು ಕೊಟ್ಟ ಕೃಷ್ಣ ಚರಿತ್ರೆ ಪುಸ್ತಕಕ್ಕೆ ನಿರ್ವಿಗ್ನಮಸ್ತು ಅಚಂದ್ರ ತಾರಾರ್ಕ ಪ್ರತಿಯಂತರಂ ವಂಶಾಭಿವೃದ್ಧಿರಸ್ತು...

"ರಾಮಾಯಣಮಸ್ತು ಶ್ರೀ ಗುರು ಬಸವಲಿಂಗಾಯ ನಮಃ"[೪೬] ಎಂದಿದೆ.

ನನ್ನ ಕ್ಷೇತ್ರಕಾರ್ಯ ಅನುಭವದ ಆಧಾರದ ಮೇಲೆ ಸಿಕ್ಕಷ್ಟು ಮಾಹಿತಿಗಳನ್ನು ಇರಿಸಿಕೊಂಡು ಈ ಭಾಗದ ಹಸ್ತಪ್ರತಿಗಳ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಕೊನೆ ಟಿಪ್ಪಣಿ

೧. ಕರ್ಣಾರ್ಜುನರ ಕಾಳಗ, ನಾಯಕನಹಟ್ಟಿ ಪ್ರತಿ, ಪು.ಸಂ, ೨

೨. ಅದೇ, ಪು.ಸಂ–೧೦೫

೩. ಮಾರುತಿ ಲಿಂಗ ವರಪ್ರಸಾದ, ಕೊಂಡ್ಲಹಳ್ಳಿ ಪ್ರತಿ, ಪು.ಸಂ, ೧೧

೪. ಕಂಸಸೂರನ ಕಥೆ, ದೊಣ್ಣೆಹಳ್ಳಿ ಪ್ರತಿ, ಪು.ಸಂ, ೩೦

೫. ಸಾರಂಗಧರನ ಕಥೆ, ಮುತ್ತಿಗಾರನಹಳ್ಳಿ ಪ್ರತಿ, ಪು.ಸಂ, ೧೮

೬. ಗಿರಿಜಾಕಲ್ಯಾಣ ಪ್ರತಿ, ನಲಗೇತನಹಟ್ಟಿ ಪ್ರತಿ, ಪು.ಸಂ, ೨

೭. ಜಗನ್ಮೋಹಿನಿ ಕಥೆ, ಗುರುನಾಥ ಬಿ.ಎಂ., ಪು.ಸಂ, ೧೩೬

೮. ಬಯಲಾಟದ ಹಸ್ತಪ್ರತಿಗಳ ಅಂತರ್‌ಶೋಧ, ಗುರುನಾಥ ಬಿ.ಎಂ., ಅನ್ನಪೂರ್ಣ ಪ್ರಕಾಶನ, ಬೆಂಗಳೂರು, ೨೦೧೨, ಪು.ಸಂ, ೬೬–೬೭

೯. ಐರಾವಣ ಮೈರಾವಣ, ಕಲ್ಲೇನಹಳ್ಳಿ ಪ್ರತಿ, ಪು.ಸಂ, ೯೦

೧೦. ಚಿನ್ಮೂಲಾದ್ರಿ ಚೇತನ, ರಜತ ಮಹೋತ್ಸವ, ಸ್ಮರಣ ಸಂಚಿಕೆ, ಹಾಡುಗಳು ಮತ್ತು ಲಾವಣಿ, ಶ್ರೀಶೈಲ ಆರಾಧ್ಯ ಎಚ್., ೧೯೪೯ ಪು.ಸಂ, ೨೧೦

೧೧. ಅದೇ, ಪು.ಸಂ, ೨೧೦

೧೨. ಕನ್ನಡ ಹಸ್ತಪ್ರತಿಶಾಸ್ತ್ರ, ಕಲಬುರ್ಗಿ ಎಂ.ಎಂ., ಸಪ್ನಬುಕ್ ಹೌಸ್, ಬೆಂಗಳೂರು, ೨೦೧೦, ಪು.ಸಂ, ೫೦–೫೧

೧೩. ಅದೇ, ಪು.ಸಂ, ೫೯

೧೪. ಕಂಠಪತ್ರ–೩, ಹಳ್ಳಿಕೇರಿ ಎಫ್.ಟಿ., ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೪, ಪು.ಸಂ, ೧೧೬

೧೫. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಶಿವಣ್ಣ ಎಸ್. (ಸಂ), ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೪, ಪು.ಸಂ, ೨೭೧–೨೭೨

೧೬. ಅದೇ, ಪು.ಸಂ, ೮೩

೧೭. ಅದೇ, ಪು.ಸಂ, ೮೩

೧೮. ಅದೇ, ಪು.ಸಂ, ೮೩

೧೯. ಅದೇ, ಪು.ಸಂ, ೭೮–೭೯

೨೦. ಅದೇ, ಪು.ಸಂ, ೧೮

೨೧. ಶ್ರೀ ಜಗದ್ಗುರು ಮುರುಘಾರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂ–೧ ಶಿವಣ್ಣ ಎಸ್., ಪು.ಸಂ, ೩೮೬

೨೨. ಅದೇ, ಪು.ಸಂ, ೩೮೩

೨೩. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಶಿವಣ್ಣ ಎಸ್. (ಸಂ), ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೪, ಪು.ಸಂ–೧೫೦

೨೪. ಬೃಹನ್ಮಠದ ಹಸ್ತಪ್ರತಿ ಸೂಚಿ ಸಂ–೧ ಶಿವಣ್ಣ ಎಸ್., ಪು.ಸಂ, ೩೯೧

೨೫. ಅದೇ, ಪು.ಸಂ, ೩೯೩

೨೬. ಅದೇ, ಪು.ಸಂ, ೩೭೮

೨೭. ಅದೇ, ಪು.ಸಂ, ೩೭೮–೩೭೯

೨೮. ಅದೇ, ಪು.ಸಂ, ೩೭೯

೨೯. ಅದೇ, ಪು.ಸಂ, ೩೭೯–೩೮೦

೩೦. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಶಿವಣ್ಣ ಎಸ್. (ಸಂ), ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೪, ಪು.ಸಂ–೨೩೭

೩೧. ಅದೇ, ಪು.ಸಂ, ೧೩೯

೩೨. ಅದೇ, ಪು.ಸಂ, ೩೭

೩೩. ಅದೇ, ಪು.ಸಂ, ೫೬

೩೪. ಅದೇ, ಪು.ಸಂ, ೩೮೨

೩೫. ಅದೇ, ಪು.ಸಂ, ೩೮೨

೩೬. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ ಸಂ–೨, ವೀರೇಶ ಎಸ್. ಬಡಿಗೇರ, ಚನ್ನವೀರಪ್ಪ ಎಸ್.ಆರ್., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪು.ಸಂ, ೧೫೪–೧೫೫

೩೭. ಅದೇ, ಪು.ಸಂ, ೧೬೨

೩೮. ಅದೇ, ಪು.ಸಂ, ೧೬೩

೩೯. ಅದೇ, ಪು.ಸಂ, ೨೫೪

೪೦. ಅದೇ, ಪು.ಸಂ, ೨೭೭

೪೧. ಅದೇ, ಪು.ಸಂ, ೨೭೯

೪೨. ಅದೇ, ಪು.ಸಂ, ೩೩೧

೪೩. ಅದೇ, ಪು.ಸಂ, ೩೪೦

೪೪. ಅದೇ, ಪು.ಸಂ, ೩೯೬

೪೫. ಉದಯವಾಣಿ, ಗುರುವಾರ, ಮೇ, ೧೬.೨೦೧೩

೪೬. ಹಸ್ತಪ್ರತಿ ವ್ಯಾಸಂಗ–೧, ನಾವಡ ಎ.ವಿ., ಅಂಗಡಿ ಎಸ್.ಎಸ್. (ಸಂ), 'ದಕ್ಷಿಣ ಕರ್ನಾಟಕದ ಹಸ್ತಪ್ರತಿ ನೆಲೆಗಳು, ನಂಜುಂಡಸ್ವಾಮಿ ಬಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪು.ಸಂ, ೮೨

ಅಧ್ಯಾಯ : ೩

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು : ಚಾರಿತ್ರಿಕ ಅನನ್ಯತೆ

ಅಧ್ಯಾಯ–೩

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಚಾರಿತ್ರಿಕ ಅನನ್ಯತೆ

ಆಧುನಿಕ ಪೂರ್ವ ಕರ್ನಾಟಕದ ಸಾಹಿತ್ಯಿಕ, ಸಾಂಸ್ಕೃತಿಕ, ಸಂಗತಿಗಳನ್ನು ತಿಳಿದುಕೊಳ್ಳುವಲ್ಲಿ ಹಲವಾರು ಆಕರಗಳು ನೆರವಾಗುತ್ತವೆ. ಅಂಥವುಗಳಲ್ಲಿ ಭಾಷಾ ಸಾಮಗ್ರಿಗಳಾದ ಹಸ್ತಪ್ರತಿಗಳು ಪ್ರಮುಖವಾಗಿವೆ. ಕನ್ನಡನಾಡಿನ ಜನತೆ ಬರೆಯಿಸುವುದರ ಮೂಲಕ ಬರೆಪಕಾರರಾಗಿ (ಲಿಪಿಕಾರ) ಹಸ್ತಪ್ರತಿ ನಿರ್ಮಾಣ ಕಾರ್ಯವನ್ನು ಜೀವಂತವಾಗಿಟ್ಟು ನಮ್ಮ ನಾಡನ್ನು ಅಪಾರವಾದ ಹಸ್ತಪ್ರತಿ ಭಂಡಾರವನ್ನಾಗಿಸಿದ್ದಾರೆ. ಹಸ್ತಪ್ರತಿಗಳು ಇತರೆ ಪ್ರಮುಖ ಆಕರಗಳು ಕಟ್ಟಿಕೊಡದ ಅಥವಾ ಕಟ್ಟಿಕೊಡುವಲ್ಲಿ ವಿಫಲವಾದ ಸಂದಿಗ್ಧತೆಯನ್ನು ಬಿಡಿಸಿಕೊಡುವಲ್ಲಿ ಸಂಶೋಧಕರ ನೆರವಿಗೆ ಬರುತ್ತವೆ. ಹಸ್ತಪ್ರತಿಗಳ ವ್ಯಾಪ್ತಿಯಲ್ಲಿ ಬರುವ ಕಡತಗಳು, ಪ್ರಾಚೀನರ ಜಮಾ–ಖರ್ಚಿನ ಪುಸ್ತಕಗಳು ಕೂಡ ಸಾಂಸ್ಕೃತಿಕ ಅಧ್ಯಯನಕ್ಕೆ ಸಹಕಾರಿಯಾಗುತ್ತವೆ. ಹಸ್ತಪ್ರತಿಗಳು ಗ್ರಂಥ ರೂಪದಲ್ಲಿರದೆ ನೇರವಾಗಿ ರಾಜರ ಇತಿಹಾಸ ಸಂಬಂಧದ ಕಡತ, ನಾಮೆ, ಬಖೈರು, ಕೈಫಿಯತ್ತು, ನಿರೂಪ, ಸನ್ನದು ಮುಂತಾದವುಗಳು ಸೇರುತ್ತವೆ. ಇವೆಲ್ಲಾ ಪ್ರಧಾನವಾಗಿ ಇತಿಹಾಸದ ಸಾಮಗ್ರಿಗಳಾಗಿವೆ. "ಚರಿತ್ರೆ ಬರೆಯಲು ಅತ್ಯವಶ್ಯವಾದ ಆಧಾರ ಸಾಮಗ್ರಿ ನಮ್ಮಲ್ಲಿ ಕಡಿಮೆ ಈ ಕಡಿಮೆ. ಆಧಾರ ಸಾಮಗ್ರಿಯಲ್ಲಿ ಪ್ರಾಮಾಣಿಕತೆ ಇನ್ನೂ ಕಡಿಮೆ" ಎಂಬ ಡಾ.ಎಂ.ಎಂ. ಕಲಬುರ್ಗಿಯವರ ಮಾತುಗಳ ಹಿನ್ನೆಲೆಯಲ್ಲಿ ಶುದ್ಧ ಚಾರಿತ್ರಿಕ ಹಸ್ತಪ್ರತಿಗಳ ವಿವೇಚನೆ ಮಾಡಬೇಕಾಗಿದೆ. ಶಾಸನಗಳು, ರಾಜರ ಚರಿತ್ರೆಗಳು, ಕೆಲವು ಸಾಹಿತ್ಯಗಳು ಒಂದು ನಾಡಿನ ಇತಿಹಾಸ ರಚನೆಗೆ ಸಾಧನಗಳಾಗಿರುವಂತೆ ಹಸ್ತಪ್ರತಿಗಳು ಕೂಡ ಆ ಬಗೆಗೆ ಮಾಹಿತಿಗಳನ್ನು ಒದಗಿಸುತ್ತವೆ. ಕರ್ನಾಟಕದಲ್ಲಿ ದೊರೆಯುವ ಹಸ್ತಪ್ರತಿಗಳನ್ನು ವರ್ಗೀಕರಿಸಿದರೆ ಚರಿತ್ರೆಯನ್ನೇ ಪ್ರಧಾನ ಉದ್ದೇಶಕ್ಕಾಗಿ ನಿರ್ಮಾಣಗೊಂಡಿರುವ ಹಸ್ತಪ್ರತಿಗಳಿಂದ ಐತಿಹಾಸಿಕವಾದ ಅನೇಕ ವಿಷಯಗಳು ಪ್ರಕಟವಾಗುವ ಸಾಧ್ಯತೆಗಳಿವೆ.

ಕನ್ನಡದಲ್ಲಿ ಪ್ರಾರಂಭದ ಹಾದಿಯಲ್ಲಿ ಚಾರಿತ್ರಿಕ ಹಸ್ತಪ್ರತಿಗಳು ತೀರ ಕಡಿಮೆ ಸಂಖ್ಯೆಯಲ್ಲಿ ಪ್ರಕಟವಾದವು. ಆರಂಭದಲ್ಲಿ ಚಾರಿತ್ರಿಕ ಹಸ್ತಪ್ರತಿಗಳಲ್ಲಿ ಐತಿಹಾಸಿಕ ವ್ಯಕ್ತಿಗಳು ಪೌರಾಣಿಕ ಪುರುಷರೊಂದಿಗೆ ಸಮೀಕರಿಸಲ್ಪಟ್ಟವರಾಗಿದ್ದರು. "ನರರನ್ನು ಹೊಗಳುವುದು ಪೊಲ್ಲುಮೆ" ಎಂಬ ಧೋರಣೆ ಪ್ರಬಲವಾಗಿದ್ದರಿಂದ ಶುದ್ಧ ಚಾರಿತ್ರಿಕ ಹಸ್ತಪ್ರತಿಗಳು ವಾಸ್ತವವಾಗಿ ಧಾರ್ಮಿಕವೇ ಆಗಿದ್ದವು. ಇದರಿಂದ ಮೊಟ್ಟಮೊದಲ ಬಾರಿಗೆ ಚಾರಿತ್ರಿಕ ಕಾವ್ಯದ ಹಣೆಪಟ್ಟಿಯಲ್ಲಿ ಸಿಕ್ಕ ಕೃತಿಯೆಂದರೆ ೧೬ನೆಯ ಶತಮಾನದ ನಂಜುಂಡನ 'ರಾಮನಾಥ ಚರಿತೆ' ಈ ಕಾವ್ಯದ ನಂತರ ಐತಿಹಾಸಿಕ ಅಂಶಗಳ ಮೇಲೆ "ತೋಂಟದ ರಾಯನ ಸಾಂಗತ್ಯ" ಎಂಬ ಮತ್ತೊಂದು ಚಾರಿತ್ರಿಕ ಕಾವ್ಯ ರಚನೆಯಾಗಿದೆ. ರಾಮನಾಥ ಚರಿತೆ ಮತ್ತು ತೋಂಟದ ರಾಯನ ಸಾಂಗತ್ಯಗಳೆರಡು ಸಾಂಗತ್ಯ ರೂಪದಲ್ಲಿಯೇ ಪ್ರಕಟಗೊಂಡಿವೆ. ಇದರಿಂದ ಕನ್ನಡದಲ್ಲಿ ಚಾರಿತ್ರಿಕ ಹಸ್ತಪ್ರತಿಗಳು ಸಾಂಗತ್ಯ ರೂಪದಲ್ಲಿಯೇ ಪ್ರಾರಂಭವಾಗಿರಬಹುದೆಂದು ನಿರ್ಧರಿಸಲು ಅವಕಾಶವಿದೆ.

ಶುದ್ಧ ಚಾರಿತ್ರಿಕ ಕೃತಿಗಳ ನಿರ್ಮಾಣ ಬಹುತೇಕ ಮೈಸೂರು ಅರಸರ ಕಾಲದಲ್ಲಿಯೇ ನಡೆದಿದೆ. ಈಗ ಪ್ರಕಟವಾದ ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ'ದ ಬಳಿಕ ಐತಿಹಾಸಿಕ ಸಂಗತಿಗಳನ್ನೊಳಗೊಂಡ ಕಾವ್ಯಗಳು, ಚಂಪು, ಗದ್ಯ ಪ್ರಕಾರಗಳಲ್ಲಿ ಎರಡೆರಡು ಕಾವ್ಯಗಳು ಸಾಂಗತ್ಯದಲ್ಲಿ ಏಳೆಂಟು ಕಾವ್ಯಗಳು ರಚಿತವಾಗಿವೆ. ತಿರುಮಲಾರ್ಯನ 'ಚಿಕ್ಕದೇವರಾಜ ವಿಜಯಂ' ಚಿಕ್ಕದೇವರಾಜ ವಂಶಾವಳಿ ಹಾಗೂ ಅಪ್ರತಿಮ ವೀರಚರಿತೆಗಳು ಮೈಸೂರಿನ ಇತಿಹಾಸ ರಚನೆಯಲ್ಲಿ ಮುಖ್ಯ ಆಕರ ಗ್ರಂಥಗಳಾಗಿವೆ. ಕ್ರಿ.ಶ. ೧೭೬೩ರಲ್ಲಿ ರಚಿತವಾದ ಲಿಂಗಣ್ಣ ಕವಿಯ ಕೆಳದಿ ನೃಪವಿಜಯ, ಕೆಳದಿ ಅರಸರ ವಂಶಪರಂಪರೆಯನ್ನು ಮತ್ತು ಆ ಕಾಲದ ಐತಿಹಾಸಿಕ ಘಟನೆಗಳನ್ನು ತಿಳಿಸುತ್ತದೆ. ಅನಂತರ ಹುಟ್ಟಿಕೊಂಡ ಪಾರ್ಶ್ವಕವಿಯ ನಿಂಬಸಾಮಂತ ಚರಿತೆ, ಮಲ್ಲಿಕಾರ್ಜುನ ಕವಿಯ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಸಿರುಮಚರಿತ್ರೆ, ಕುಮಾರರಾಮನ ಸಾಂಗತ್ಯಗಳೆಲ್ಲ ಚಾರಿತ್ರಿಕ ಧ್ವನಿಯನ್ನು ಅಭಿವ್ಯಕ್ತಿಸುವ ಕೃತಿಗಳಾಗಿವೆ. ಚಾರಿತ್ರಿಕ ಹಸ್ತಪ್ರತಿಗಳ ಸೃಜನಕ್ರಿಯೆಯಲ್ಲಿ ಜೈನ, ವೀರಶೈವ, ವೈದಿಕ ಕವಿಗಳೆಲ್ಲ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಕ್ರಿ.ಶ. ೧೬೮೦ರ ಚಿಕ್ಕರಸ ಕವಿಯ "ಸೊಣ್ಣಬೈರೇಗೌಡನ ಚರಿತ್ರೆ" ಈ ದೃಷ್ಟಿಯಿಂದ ಮುಖ್ಯವಾದುದ್ದಾಗಿದೆ. ಜೈನ ಕವಿಯಾದ ಚಿಕ್ಕರಸ ತನ್ನ ಆಶ್ರಯದಾತನಾದ ಸೊಣ್ಣಬೈರೇಗೌಡನನ್ನು ಕುರಿತು ಬರೆದ ಕಾವ್ಯವಿದು. ಇದರಲ್ಲಿ "ಆವತಿನಾಡ ಪ್ರಭುವಾದ ದೇವಣಾಪುರದ ಸೊಣ್ಣಬೈರೇಗೌಡನ ವಿಜಯಾದಿಗಳು ವರ್ಣಿತವಾಗಿವೆ ಎಂದು ಆರ್. ನರಸಿಂಹಾಚಾರ್ ಹೇಳುತ್ತಾರೆ. ಕ್ರಿ.ಶ. ೧೬೫೦ರಲ್ಲಿ ರಚಿತವಾದ ಇಮ್ಮಡಿ ತಮ್ಮರಾಯ ಕೆಂಪರಾಯ 'ಪದ'ವೆಂಬ ಹಸ್ತಪ್ರತಿ ಇಮ್ಮಡಿ ಕೆಂಪೇಗೌಡನ ರಾಜಕೀಯಕ್ಕೆ ಸಂಬಂಧಿಸಿದ ವಿವರ ನೀಡುತ್ತದೆ. ಇದರ ಕವಿಯ ಬಗ್ಗೆ ತಿಳಿದಿಲ್ಲ. ಕ್ರಿ.. ೧೭೪೦ರಲ್ಲಿ ರಚಿತವಾದ ಸೂರೊಂದಯ್ಯನ ಸೌಂದರ ಕಾವ್ಯ ಕೃಷ್ಣರಾಜ ಮತ್ತವನ ದಳಪತಿಗಳಾದ ದೇವರಾಜ ನಂಜರಾಜರ ವಿಷಯವನ್ನು ತಿಳಿಸುವ ಹಸ್ತಪ್ರತಿಗಳಾಗಿವೆ. ಶ್ರೀನಿವಾಸನ ಕೃಷ್ಣರಾಜ ವರ್ಷವದಂತಿಶತಕ,

ಮದ್ದಗಿರಿ ನಂಜಪ್ಪರ ಕೃಷ್ಣರಾಜೇಂದ್ರ ವಿಲಾಸ, ದೇವಲಾಪುರದ ನಂಜುಂಡನ ಕೃಷ್ಣರಾಜ ಪಟ್ಟಾಭಿಷೇಕ ವರ್ಣನೆ, ಅಳಿಯ ಲಿಂಗರಾಜನ ನರಪತಿ ಚರಿತ್ರೆ ಎಲ್ಲವೂ ಚರಿತ್ರೆಯ ವಿಷಯಕ್ಕೆ ಸಂಬಂಧಿಸಿದಂತೆ ರಚನೆಗೊಂಡ ಹಸ್ತಪ್ರತಿಗಳಾಗಿವೆ. ಚಾರಿತ್ರಿಕ ಹಸ್ತಪ್ರತಿಗಳಲ್ಲಿನ ಪಠ್ಯ ಭಾಗಗಳಲ್ಲಿ ದೊರೆಯುವ ಅಂಶಗಳು ಇತಿಹಾಸಕ್ಕೆ ಹೇಗೆ ನೇರವಾಗಿ ಆಕರವಾಗಬಲ್ಲವು ಎಂಬುದಕ್ಕೆ 'ವೇಣುಪುರದ ಕ್ಷತ್ರಿಯರ ವಂಶಾವಳಿ' ಹಸ್ತಪ್ರತಿಯನ್ನು ಗಮನಿಸಬಹುದು. ಶ್ರೀರಂಗಪಟ್ಟಣ ಚರಿತ್ರೆ ಹೊಳೆಹೊನ್ನೂರು ಕೈಫಿಯತ್ತು ಹೊಯ್ಸಳ ರಾಜರ ಚರಿತ್ರೆ ವೇಣುಗೋಪಾಲ ವರಪ್ರಸಾದ ಕವಿಯ 'ಚಿಕ್ಕದೇವರಾಜ' ವಂಶಾವಳಿ ಬಿಳಿಗಿಲ ಅರಸರ ಚರಿತೆ ಮದಕರಿ ನಾಯಕನ ಚರಿತ್ರೆ, ಬುಕ್ಕರಾಯನ ಚರಿತ್ರೆ, ಧರಣಿಪಂಡಿತನ ೧೬೫೦ ಬಿಜ್ಜಳರಾಯನ ಚರಿತ್ರೆ, ಶಾಂತಿ ನಿರಂಜನ ಕವಿಯ ಅಬ್ಬಲೂರು ಚರಿತೆ, ಕೆಳದಿ ಸಂಸ್ಥಾನದ ರಾಯರ ವಂಶಾವಳಿ ಇತ್ಯಾದಿ ನೂರಾರು ಹಸ್ತಪ್ರತಿಗಳು ಚಾರಿತ್ರಿಕ ವಸ್ತುವನ್ನು ಒಳಗೊಂಡು ರಚನೆಯಾಗಿವೆ.

ಚಾರಿತ್ರಿಕ ಹಸ್ತಪ್ರತಿಗಳಿಂದ ರಾಜರ ವಂಶಾವಳಿ, ಆಡಳಿತಾತ್ಮಕ ಮಾದರಿಗಳು, ಐತಿಹಾಸಿಕ ಘಟನೆ, ಆರ್ಥಿಕ, ಸಾಮಾಜಿಕ ಸಂಘಟನೆ, ರಾಜಕೀಯ ಸ್ವರೂಪದಂಥ ಒಟ್ಟು ಸಾಂಸ್ಕೃತಿಕ ಮಹತ್ವವನ್ನು ಪುನರ್ ರೂಪಿಸಲು ನೆರವಾಗುವ ಮತ್ತು ಬಹುಮುಖ್ಯವಾದ ದಾಖಲೆಗಳಾಗುತ್ತವೆ.

ಚರಿತ್ರೆಗೆ ಸಂಬಂಧಿಸಿದ ಹಸ್ತಪ್ರತಿಗಳು : ಕರ್ನಾಟಕದಲ್ಲಿ ಆಳಿದ ಮನೆತನಗಳಲ್ಲಿ ಮಹಾನಾಡು ಪ್ರಭುಗಳು ಒಬ್ಬರು. ಈ ಮನೆತನ ೩ನೆಯ ಶತಮಾನದಷ್ಟು ಪ್ರಾಚೀನವಾದದ್ದು ಎಂಬುದು ಐತಿಹಾಸಿಕ ದಾಖಲೆಗಳಿಂದ ಗೊತ್ತಾಗುತ್ತದೆ. ಕಂಚಿ ಪಲ್ಲವ, ನೊಳಂಬ ಪಲ್ಲವ ಹಾಗೂ ಮಹಾನಾಡು ಪ್ರಭು ಎಂಬುದಾಗಿ ಮೂರು ಹೆಸರುಗಳಲ್ಲಿ ಈ ಪರಂಪರೆಯ ಇತಿಹಾಸ ಸಾಗಿ ಬಂದಿರುವುದನ್ನು ನೋಡಬಹುದು. ೧೩ನೆಯ ಶತಮಾನದ ಹೊತ್ತಿಗೆ ಮಹಾನಾಡಪ್ರಭು ಎಂಬ ಹೆಸರಿನಿಂದ ತಲೆಯೆತ್ತಿದ ಈ ಮನೆತನ ವಿಜಯನಗರದ ಅರಸರ ಪ್ರೀತಿಯನ್ನು ಗಳಿಸಿ ನಂತರ ಸ್ವತಂತ್ರ ರಾಜ್ಯವನ್ನು ಸ್ಥಾಪನೆ ಮಾಡಿರುವುದು ಮಹತ್ತರ ಸಾಧನೆಯಾಗಿದೆ. ಮಾದೇಗೌಡ, ಕಾಳಣ್ಣಗೌಡ, ಚನ್ನಪ್ಪಗೌಡ, ಕಾಳಚಿಕ್ಕಪ್ಪಗೌಡ, ರಾಮಪ್ಪಗೌಡ, ಸಂಗಪ್ಪಗೌಡ ಮತ್ತು ಚಿಕ್ಕಪ್ಪಗೌಡ ಎಂಬ ಏಳು ಜನ ಸಹೋದರರು ಈ ಮನೆತನದಲ್ಲಿ ಆಗಿಹೋಗಿದ್ದಾರೆ. ಇವರು ಕೋರಾ, ತೆರಿಯೂರು, ಚೇಳೂರು, ಗುಬ್ಬಿ, ಹೊಸಹಳ್ಳಿ, ಎಣ್ಣೆಗೆರೆ, ಬಿದರೆ ಗ್ರಾಮಗಳಲ್ಲಿ ನೆಲೆನಿಂತು ರಾಜ್ಯಭಾರ ಮಾಡಿದವರು. ಈ ಏಳು ಗ್ರಾಮಗಳ ಪ್ರದೇಶವೇ ಮಹಾನಾಡು. ಇವುಗಳ ನಾಯಕರೇ ಮಹಾನಾಡ ಪ್ರಭುಗಳು ಎಂದು ಚರಿತ್ರೆಯಲ್ಲಿ ಕರೆಯಲ್ಪಟ್ಟಿದ್ದಾರೆ. ಇವರಲ್ಲಿ ಇಮ್ಮಡಿ ಚಿಕ್ಕಭೂಪಾಲ ಅತ್ಯಂತ ಪ್ರಭಾವಶಾಲಿ ನಾಯಕ. ಈತನನ್ನು ಕುರಿತಂತೆ ಪ್ರಶಸ್ತಿಗಳು ಹೀಗೆ ಹೇಳುತ್ತವೆ.

"ರೌದ್ರಿ ಸಂವತ್ಸರದ ಶ್ರಾವಣಶುದ್ಧ ೧೧ಲ್ಲು ಶ್ರೀಮನ್ಮಹಾನಾಡಪ್ರಭು ಬಿಜ್ಜವರದ ಇಮ್ಮಡಿ ಚಿಕ್ಕಪ್ಪಗೌಡರಯ್ಯನವರ ಶರದಾ ಭಂಡಾರಕ್ಕೆ. ಅನುಭವದ ಸೊಂಪದೇವರ ಮಕ್ಕಳು ವೀರ ಸೊಂಪದೇವರು ಬರದ ಸ್ತೋತ್ರಭಾಷ್ಯಗಳ ಪುಸ್ತಕ"

"ಇದು ಪರಮೇಶ್ವರಾಂ ಘ್ರಿಸರ ಸೀರುಹ ಷಟ್ಪದ ಶಾತ್ರವರ್ಗದ ಪರ್ವತ ಶತಹೃದ ಕಾಮಿನೀಜನ ಲಸತ್ಕುಸುಮಾಸ್ತ್ರೀ ಸತ್ಕೃಪಾಕಾರ ಬುಧಕಲ್ಪ ಮಹೀರುಹ ಸದ್ಗುರುಲಿಂಗ ಜಂಗಮ ಸೇವಾದುರಂಧರ ವೀರಶೈವ ನಿಷ್ಠಾಸಮವರ್ತಿ ತೋಟಭೂಪಾಲ ಗರ್ಭಾಬ್ದಿ ಪೂರ್ಣಹಿಮಕರ ಸಂಗಮಾಂಬಾ ತನೂಜ ಪ್ರಭುಲಲಾವಾವಾಮ ಯಿಂವಾಡಿ ತೋಟ ಭೂಪಾಲಕಂ ಬರೆಯಿಸಿದ ಮದನ ತಿಲಕದ ಪುಸ್ತಕ.....ಸಿದ್ಧಾರ್ಥಿ

ಸಂವತ್ಸರದ ಕಾರ್ತಿಕ ಶು. ೫ ಬುಧವಾರದಲೂ ತ್ತೋಂಟದ್ಭೈಯ್ಯ ನಾಯಕರವರಿಗೆ ಚಿಟ್ಟಿನಹಳ್ಳಿಯ ಸೇನಭಾಗ ಲಿಂಗಪ್ಪನು ಬರೆದುಕೊಟ್ಟ ಮದನ ತಿಲಕದ ಪುಸ್ತಕ"

"ಪಂಚಪ್ರಕಾರ ಗದ್ಯವನು ಶ್ರೀಮದ್ವೀರಶೈವಾಚಾರ ವಿಸ್ತಾರ ವೀರ ಮಹೇಶ್ವರಾಗ್ರಣಿ ವಿರಕ್ತ ಶಿಖಾಮಣಿ ಗೂಳೂರು ಶಿದ್ಧ ವೀರೇಶ್ವರ ದೇವರ ಶ್ರೀಪಾದ ಪದ್ಮಕ್ಕೆ ಬಿಜ್ಜವರ ಪುರವರ ೨ಗುರುಲಿಂಗ ಜಂಗಮಾಚಾರ ದಿವಾಚರಣ ದೀಕ್ಷಾ ಪರಾಯಣನಾದ ಇಮ್ಮಡಿ ಚಿಕ್ಕಭೂಪಾಲ ಬರೆಯಿಸಿ ಸಮರ್ಪಿಸಿದ..."

"ಪ್ಲವ ಸಂವತ್ಸರ ಮಾರ್ಗಶಿರ ಬ.೧೦ರಲ್ಲು ಶ್ರೀ ಮನ್ಮಹಾನಾಡ ಪ್ರಭು ಬಿಜ್ಜಾವರದ ಇಮ್ಮಡಿ ಚಿಕ್ಕಪ್ಪಗೌಡರು ಬರೆಸಿದ ಸಾನಂದ ಪುರಾಣಂ ಇದನು ಬರೆದಾತನು ಯಜ್ಞನಾರಾಯಣ ದೀಕ್ಷಿತರ ಮಗ ವಿಶ್ವನಾಥನು ಇದ ಬರೆಸಿದ ಇಮ್ಮಡಿ ಚಿಕ್ಕಪ್ಪಗೌಡರಿಗೆ ಅಷ್ಟೈಶ್ವರ್ಯವೂ ಈಶ್ವರ ಕೃಪಾದೃಷ್ಟಿಯೂ ಆ ಚಂದ್ರಾರ್ಕಮಸ್ತು...[೧]

ಈ ನಾಲ್ಕು ಪುಷ್ಪಿಕೆಗಳಿಂದ ಮಹಾನಾಡ ಪ್ರಭುಗಳು ಬಿಜ್ಜಾವರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಮೈಸೂರು ಒಡೆಯರ ದಳವಾಯಿಗಳಾಗಿದ್ದವರು ಕಳಲೆ ಮನೆತನದವರು. ಈ ಮನೆತನದವರಲ್ಲಿ ನಂಜರಾಜರು ಅತ್ಯಂತ ಪ್ರಭಾವಶಾಲಿಯಾದ ವ್ಯಕ್ತಿ. ಇವರ ವಂಶಾವಳಿಯನ್ನು ಪ್ರಶಸ್ತಿಯೊಂದು ಹೀಗೆ ನಿರೂಪಿಸುತ್ತದೆ.

"ಇತಿ ಶ್ರೀಮದ ಮಿತನಮಿತಾಂಭೋಜ ಸಂಭವಜಂಭಾರಿ ಪ್ರಮುಖ ಸುರಸುರವಂದ್ಯಮಾನ ಗರಳ ಪುರಾಧಿನಾಥ ಚರಣಾರವಿಂದ ಸೇವಾಸವಾಸಾದಿತ ಗೀರ್ವಾಣಾಂಧ್ರ ಕರ್ನಾಟಕಾದಿ ನಾನಾಭಾಷಾ ವಿಶೇಷ ಕಾವ್ಯ ರಚನಾಚತುರೀಧುರೀಣ ಶ್ರೀಮನ್ಮ ರಾಜಾಧಿರಾಜಾ ಪರಮೇಶ್ವರ ರಾಜಮಾರ್ತಾಂಡ ಪ್ರೌಢ ಪ್ರತಾಪಪ್ರತಿಮ ವೀರನರಪತಿ ಬಿರುದೆಂತೆಂಬರಗಂಡ ಬಿರುದಾಂಕಿತ ಶಂಖ ಚಕ್ರಮಕರಮತ್ಸ್ಯಹನೂ ಮದ್ಗರುಡ ಗಂಡಭೇರುಂಡ ಸಿಂಹಶರಭ ಸಾಲ್ವ ಭೂವರಾಹಾದಿ ನಾನಾವಿಧ ದೇವಧ್ವಜ ಬಿರಾದಾಂಕಿತ ಸಕಲ ದೇಶಾಧೀಶಕೀರಿಟ ಮಣಿಘೃಣನಿರಾಜಿತ ಚರಣಯುಗಳ ಯಾದವ ವಂಶತಿಲಕ ಮಹೀಶೂರ ಕೃಷ್ಣರಾಜ ಸೇನಾಧಿಪ ದೊಡ್ಡರಾಜ ಪೌತ್ರ ವೀರರಾಜ ತನೂಜ ದಳಪತಿ ದೇವರಾಜಾನುಜ ಪರರಾಜಮದೇಭ ಪಂಚಾನನ ದಾನಕ್ಷಾತ್ರಾಧೀಶ್ವರ ಹನೂಮದ್ವಜ

ಬಿರುದಾಂಕಿತ ಶಿವಪೂಜಾ ದುರಂಧರ ಭಾರದ್ವಾಜ ಸಗೋತ್ರ ಅಶ್ವಲಾಯನಸೂತ್ರ ಋಕ್ಶಾಖಾಧ್ಯಯಿಕ ವಿಭುದಜನವಿಧೇಯ ರಾಜ್ಯಮಾನ್ಯ ರಾಜಶ್ರೀ ಕಳಲೆನಂಜರಾಜ ವಿರಚಿತಮಾಗಿ ಕರ್ಣಾಟಕ ಭಾಷಾ ವಿರಚಿತಮಾದ ಸಂಜರಾಜವಾಣಿ ವಿಲಾಸವೆಂಬ ಮಹಾಭಾರತ ತಾತ್ಪರ್ಯ ಟೀಕಿನ ವ್ಯಾಸಕೃತವಾದ ಸಂಹಿತೆಯಲ್ಲಿ ಹರಿವಂಶವು ಸಂಪೂಣ"

ಕಳಲೆ ಅರಸು ಮನೆತನದವರು ಭಾರದ್ವಾಜ ಗೋತ್ರ ಅಶ್ವಲಾಯನ ಸೂತ್ರದವರಾಗಿದ್ದಾರೆ. ಅವರಲ್ಲಿಯೇ ನಂಜರಾಜನು ಪರರಾಜಯದೇಭ ದಾನಾಕ್ಷಾತ್ರಾಧೀಶ್ವರ ವಿಭುದಜನರಲ್ಲಿ ವಿಧೇಯ ಕಳಲೆ ನಂಜರಾಜನ ವಂಶಾವಳಿಯನ್ನು ಹೀಗೆ ಗುರುತಿಸಬಹುದು.

ದೊಡ್ಡರಾಜ (ಮೈಸೂರು ಒಡೆಯರ ಸೇನಾಧಿಪತಿ) ವೀರರಾಜ ದೇವರಾಜ ನಂಜರಾಜ

"...ಕಳಲೆ ಪುರಾಧಿಪರಾದ ರಾಜೈಯ್ಯರಸಿನವರ ಪ್ರಪೌತ್ರರಾದ ಕೆಂಪರಾಜೈಯ್ಯರಸಿವನ ಪೌತ್ರರಾದ ಲಕ್ಷ್ಮೀಕಾಮತಯ್ಯರಸಿನವರ ಪುತ್ರರಾದ ಕಾಂತರಾಜೈಯ್ಯರಸಿನವರು ಸ್ವಹಸ್ತಾಕ್ಷರದಿಂದ ಬರೆದು ಪೂರ್ಣಮಾದ ಸಾರಸಂಗ್ರಹದ ಪುಸ್ತಕಕ್ಕೆ ಸಿದ್ಧಾರಸ್ತು"[೨]

ಮೇಲಿನ ಉಲ್ಲೇಖದಿಂದ ಕಾಂತರಾಜಯ್ಯನವರ ವಂಶಾವಳಿಯನ್ನು ಲಿಪಿಕಾರನೊಬ್ಬ ರಾಜೈಯ್ಯ, ಕೆಂಪರಾಜೈಯ್ಯ, ಲಕ್ಷ್ಮೀಕಾಂತಯ್ಯ, ಕಾಂತರಾಜೈಯ್ಯ ಎಂಬುದಾಗಿ ದಾಖಲಿಸಿದ್ದಾನೆ. ಅಲ್ಲದೇ ಈ ಮನೆತನದ ರಾಜಶೇಖರ, ಮಲ್ಲರಾಜ, ಲಕ್ಷ್ಮೀಕಾಂತಯ್ಯ ಮೊದಲಾದ ಅರಸರ ಬಗೆಗೂ ವಿಫುಲ ಮಾಹಿತಿ ಇಲ್ಲಿ ದೊರೆಯುತ್ತದೆ.

ವಸುಧಾರೆ ಗ್ರಾಮದ ಕೈಫಿಯತ್ತು : "ಪೂರ್ಣಯ್ಯನವರ ಆದೇಶದ ಪ್ರಕಾರ ಊರವರಿಗೆ ಕಾಣುವ ಹಾಗೆ ಗೈಬರಾಜಯೆಂಬ ಫತ್ತೆ ಹೈದರನ ಸಂಗಡಯಿದ್ದ ವೀರಭದ್ರಯ್ಯ ಬಸವಪ್ಪ, ವೀರಪ್ಪಗವುಡ ಮೊದಲಾದ ಹತ್ತು ಜನರನ್ನು ಗಲ್ಲುಹಾಕಿದ ವಿವರಗಳನ್ನು ಇಲ್ಲಿ ದಾಖಲಿಸಲಾಗಿದೆ. "ಗೈಬರಾಜಯೆಂಬ ಫತ್ತೆ ಹೈದರನ ಸಂಗಡಯಿದ್ದ ದಳವಾಯಿ ವೀರಭದ್ರಯ್ಯ ಬಸವಪ್ಪಯಂಬವರು, ಕೆಳನೂರು ವೀರಪ್ಪಗವುಡ ಚೆಂಜಿ ಅರಸು ಯಿವರ ತಮ್ಮ ದೇವೇಗೌಡ ಮೊದಲಾದವರು ಯೀಪ್ರಕಾರ ತುಂಟತನ ಮಾಡಿಕೊಂಡು ಯೀಹತ್ತು ಜನಾನೂಯಿ ವಸ್ತಾರೆ ಕೋಟೆ ಪಶ್ಚಿಮ ದಿಕ್ಕಿನಲ್ಲಿ ಬಾಗಿಲ ಸಮೀಪದಲ್ಲಿ ಪೂರ್ಣಯ್ಯನವರ ಅಪ್ಪಣೆ ಪ್ರಕಾರ ವೂರವರಿಗೆ ಕಾಣುವ ಹಾಗೆ ಗಲ್ಲು ಹಾಕಿದರು. ಆಮೇಲೆ ತಾಲ್ಕೋ ಬಂದುಬಸ್ತು ಮಾಡಿದರು. ಆದಿನ ಮೊದಲು ಮಾಡಿಕೊಂಡು ಅಮೀಲದಾರರು ಮೈಸೂರು ಕೃಷ್ಣರಾಜವಡೇ ಕಡೆದಿವಾನನ ಕೈ ಕೆಳಗಿನಿಂದ ಅಧಿಕಾರ ಮಾಡುತ್ತ ಬಂದರು"[೩]

ದರೋಜಿ ಕೈಫಿಯತ್ತು : "ಪೂರ್ಣಯ್ಯನವರ ಕಡಿಯಿಂದ ವಡ್ಡಿನ ಭೀಮರಾಯನು ಕಂಪ್ಲಿ ತಾಲೂಕಿನ ಮಾಮಲಿಕಿಯನ್ನು ಮಾಡಿದುದನ್ನು ದರೋಜಿ ಕೈಫಿಯತ್ತು ಹೀಗೆ ಹೇಳುತ್ತದೆ. "ಶ್ರಾವಣಮಾಸ ಆರಂಭ ಮಾಡಿಕೊಂಡು ಮಾಘಮಾಸ ಪರಿಯಂತ್ರ, ಕುಂಪಣಿ ಕಡಿಯಿಂದ

ಪುರ್ಣಯ್ಯನವರ ಠಾಂಣ್ಯ ಆಯಿತು"[೪] ಅವರ ಕಡಿಯಿಂದ ಕಂಪ್ಲಿ ತಾಲೂಕಕ್ಕೆ ಶೇರಿಸಿ ಮಾಮಲಕಿ ವಡ್ಡಿನ ಭೀಮರಾಯ ಮಾಡಿದನ್ನು

ಹೀಗೆ ಪೂರ್ಣಯ್ಯನವರ ಆಡಳಿತದ ಕೆಲವು ನಿರ್ಣಯಗಳನ್ನು ಕೈಫಿಯತ್ತುಗಳಲ್ಲಿ ದಾಖಲಿಸಲಾಗಿದೆ.

ಸ್ಥಳೀಯ ಮಹಾತ್ಮರ ಚಾರಿತ್ರಿಕ ಕೃತಿಗಳು : ಜನಸಮೂಹದ ಮಧ್ಯದಲ್ಲಿಯೇ ಹುಟ್ಟಿ ತಮ್ಮ ಅಗಾಧವಾದ ವ್ಯಕ್ತಿತ್ವದ ಮೂಲಕ ಲೋಕ ಕಲ್ಯಾಣಕ್ಕಾಗಿ ಸೇವೆಗೈದು ಜನಮಾನಸದಲ್ಲಿ ಮಹಾತ್ಮರಾಗಿ ಬಾಳಿಬದುಕಿ ಅಜರಾಮರರಾಗಿದ್ದಾರೆ. ಅಂಥವರಲ್ಲಿ ಕೋಡೆಕಲ್ಲು ಬಸವಣ್ಣ, ಎಮ್ಮೆಬಸವಣ್ಣ, ತಿಂಥಿಣಿ ಮೋನಪ್ಪಯ್ಯ ಮುಂತಾದವರು. ಈ ಸಾಲಿಗೆ ಸೇರುವವರು ನುಂಕೆಮಲೆ ಸಿದ್ದೇಶ್ವರ, ನಾಗಾವಿಯ ಗುಂಡ ಬಸವೇಶ್ವರ, ಹಂಜಿಗೆಯ ಬೊಮ್ಮಲಿಂಗದೇವ, ಮೇದೂರಿನ ರಾಮನಾಥರು. ಈ ಸ್ಥಳೀಯ ಮಹಾತ್ಮರ ಕುರಿತು ಕಾವ್ಯ ಪುರಾಣ ಹಾಗೂ ಚರಿತ್ರೆಗಳು ರಚನೆಗೊಂಡಿವೆ.

"ಗುಂಡ ಬಸವೇಶ್ವರ ಚರಿತ್ರೆಯು ಧರ್ಮಕಲ್ಯಾಣ ಸಂಪ್ರದಾಯ ಆ ಸಂಪ್ರದಾಯದ ಮುಖ್ಯ ವ್ಯಕ್ತಿಯಾದ ಗುಂಡ ಬಸವೇಶ್ವರನ ಚರಿತ್ರೆಯನ್ನು ನಿರೂಪಿಸುವ ಒಂದು ಚಾರಿತ್ರಿಕ ಕೃತಿಯಾಗಿದೆ. ೭ ಸಂಧಿ, ೭೯೩ ಸಾಂಗತ್ಯ ಪದ್ಯಗಳನ್ನೊಳಗೊಂಡಿದೆ."[೫]

* "ತಿಂಥಿಣಿಯನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಧರ್ಮ ಸಮಾಜ ಸಂಸ್ಕೃತಿಯ ಏಳಿಗೆಗಾಗಿ ಸಮನ್ವಯಕಾರನಾಗಿ ದುಡಿದು ಜನಜಾಗೃತಿಯನ್ನು ಮೂಡಿಸಿದವನು ಮೋನಪ್ಪಯ್ಯ ಈತನ ಕುರಿತು ಮೊದಲು ಕಾವ್ಯ ಬರೆದವನು ಕೋಳೂರು ಶಂಕರಕವಿ. ಈತ ಶರಣ ಮೋನಪ್ಪಯ್ಯನ ಚಾರಿತ್ರ ಹೆಸರಿನ ಕೃತಿಯನ್ನು ರಚಿಸುವುದರ ಮೂಲಕ ಮೋನಪ್ಪಯ್ಯನ ವ್ಯಕ್ತಿತ್ವ ಮತ್ತು ಸಾಧನೆಯನ್ನು ಅನಾವರಣಗೊಳಿಸಿದ್ದಾನೆ. ಕವಿಯು ೧೧ ಸಂಧಿ ೧೧೩೦ ಸಾಂಗತ್ಯ ಪದ್ಯಗಳಲ್ಲಿ ಮೋನಪ್ಪಯ್ಯನ ಚರಿತ್ರೆಯನ್ನು ನಿರೂಪಿಸಿದ್ದಾನೆ".[೬]

* ಲಿಂಗಾಯಿತ ಧರ್ಮದ ತತ್ವ ಸಿದ್ಧಾಂತಗಳನ್ನು ಸಿದ್ಧಬೊಮ್ಮಯ್ಯನ ಚರಿತ್ರೆ ಮೂಲಕ ಪರಿಚಯಿಸುವ ಕೃತಿಯಾಗಿದೆ. ಬೊಮ್ಮಲಿಂಗದೇವರ ಕಾವ್ಯ ೭ ಸಂಧಿ, ೩೪೦ ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಈ ಕೃತಿಯು ಸಿದ್ಧಬೊಮ್ಮಯ್ಯನ ಪವಾಡದ ಚರಿತ್ರೆಯನ್ನು ಹೇಳುತ್ತದೆ. ಅಲ್ಲದೇ ಕರ್ನಾಟಕ ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಹಂಜಿಗೆ, ಮಂಗಳಾಪುರ, ಆಲಂದೆ, ಅಕ್ಕಲಕೋಟೆ, ಕಲಬುರ್ಗಿ, ಡಿಳ್ಳಿ, ಕಮಲಾಪುರ, ಜಿನಪುರ ಮತ್ತು ಜೇವೂರ ಗ್ರಾಮಗಳ ಭೌಗೋಳಿಕ ವಿವರಗಳು ಸ್ಥಳೀಯ ಇತಿಹಾಸವನ್ನು ಅರಿತುಕೊಳ್ಳಲು ನೆರವಾಗುತ್ತದೆ. ಸಂಪಾದಕರಾದ ಎಚ್.ಎಸ್. ಮೇಲಿನಮನಿ ಅವರು ಕವಿ, ಕಾವ್ಯ, ವಿಚಾರ, ಕಥೆಯ ವಸ್ತು, ಕಾವ್ಯ ವಿಮರ್ಶೆ ಕುರಿತು ಪ್ರಸ್ತಾವನೆಯಲ್ಲಿ ಸ್ಥೂಲವಾಗಿ ಚರ್ಚಿಸಿದ್ದಾರೆ ಎಂದು ಶ್ರೀಯುತರು ತಿಳಿಸಿದ್ದಾರೆ.

"ಅಬ್ಬಲೂರು ಚರಿತೆಯ ಕರ್ತೃವಾದ ನಿರಂಜನ ಕವಿಯ ಮತ್ತೊಂದು ಕೃತಿ ಕಂಚಿಪುರಾಣ ಇದು ವಿಶ್ವಕರ್ಮ ಬ್ರಾಹ್ಮಣ ಸಮುದಾಯದ ಇತಿಹಾಸವನ್ನು ನಿರೂಪಿಸುವ ಚಾರಿತ್ರಿಕ ಕೃತಿ ೧೬ ಸಂಧಿ, ೮೩೭ ಭಾಮಿನಿ ಷಟ್ಪದಿಯನ್ನೊಳಗೊಂಡಿದೆ".[೭]

* ಸುಗುಣಾಶೆಟ್ಟಿ ಅವರು ಸಂಪಾದಿಸಿದ ಮೂಡಬಿದರೆ ಬಸದಿಗಳಲ್ಲಿರುವ ಬಿಂಬಗಳ ಲೆಕ್ಕ ಪುಸ್ತಕವು ಒಂದು ವಿಶಿಷ್ಟ ಚಾರಿತ್ರಿಕ ಕೃತಿಯಾಗಿದೆ. ಹೆಸರೇ ಹೇಳುವಂತೆ ಇದು "ಮೂಡಬಿದರೆಯ ಬೆಟ್ಟಕೆರೆ, ಬಡಗ, ಚೋಳಶೆಟ್ಟಿ, ಕೆರೆಬಸದಿ, ಶೆಟ್ರಬಸದಿ, ದೇವರಾಯಬಸದಿ, ಹೊಸಬಸದಿ, ಮುಂತಾದ ೧೮ ಬಸದಿಗಳ ಹೆಸರುಗಳು ಅಲ್ಲಿರುವ ಆಭರಣ ಪಾತ್ರೆ, ಗಂಟೆ, ಮೂರ್ತಿ, ಹಣತೆಗಳಂಥ ನೂರಾರು ವಸ್ತುಗಳ ಸಮಗ್ರ ವಿವರಗಳನ್ನು ನೀಡುತ್ತದೆ. ಮೂಡಬಿದರೆಯ ಜೈನ ಮಠದ ಹಸ್ತಪ್ರತಿ ಭಂಡಾರಕ್ಕೆ ಸೇರಿದ ಏಕೈಕ ತಾಡೋಲೆ ಪ್ರತಿಯ ನೆರವಿನಿಂದ ಇದನ್ನು ಪರಿಷ್ಕರಿಸಲಾಗಿದೆ".[೮]

* ಬೂದಿಹಾಳಿನ ಪಾಳೆಯಗಾರನಾದ ಸಿರುಮನ ಚರಿತ್ರೆಯನ್ನು ಮೂರು ಜನ ಕವಿಗಳು ಬರೆದಿದ್ದಾರೆ. ಕ್ರಿ.ಶ. ೧೫ನೆಯ ಶತಮಾನದಲ್ಲಿ ಕೆಂಚಶೆಟ್ಟಿಯ ಮಗ ರಾಮನೆಂಬಾತನು ಸಿರುಮನ ಚರಿತೆಯನ್ನು ಶಿವಲೀಲೆ ವೀರಯ್ಯನ ಮಗ ಮಲ್ಲ ಎಂಬಾತನು ಗೊಲ್ಲ ಸಿರುಮನ ಚರಿತೆಯನ್ನು ಮತ್ತು ೧೭೭೮ ಸುಮಾರಿಗೆ ಸಿದ್ಧಕವಿಯು ಸಿರುಮಣನಾಯಕನ ಸಾಂಗತ್ಯವನ್ನು ಬರೆದಿದ್ದಾರೆ.

ಹುಲ್ಲೂರು ಶ್ರೀನಿವಾಸ ಜೋಯಿಸರಿಗೆ ಕೆಂಚಶೆಟ್ಟಿಯ ಮಗ ರಾಮನು ಬರೆದ ಸಿರುಮನ ಚರಿತೆಯ ಹಸ್ತಪ್ರತಿ ದೊರಕಿ ಅವರು ಅದನ್ನು ಇದೇ ಹೆಸರಿನಿಂದ ಇಂಗ್ಲೀಷ್‌ಗೆ ಗದ್ಯಾನುವಾದವನ್ನು ಮಾಡಿ ಪ್ರಕಟಿಸಿದ್ದಾರೆ. ಕ್ರಿ.ಶ. ೧೫೦೦ರ ಸುಮಾರಿಗೆ ಸಿಂಗಿರಾಜ ಕವಿಯು ಬಸವರಾಜ ಚರಿತ್ರೆವನ್ನು ಬರೆದಿದ್ದಾನೆ. ಇದನ್ನು ಸಿಂಗರಾಜ ಪುರಾಣವೆಂದೂ ಕರೆಯುತ್ತಾರೆ.

ಚರಿತ್ರೆಗೆ ಸಂಬಂಧಿಸಿದ ಬಯಲಾಟದ ಹಸ್ತಪ್ರತಿಗಳು

ಕರಿಭಂಟನ ಕಥೆ

ಬಸಪ್ಪಯ್ಯನ ಕಥೆ.

ನುಂಕೆಮಲೆ ಸಿದ್ದೇಶ

ಲಕ್ಷಾಪತಿ ರಾಜನ ಕಥೆ

ಮಹಾಂಧಾತ ಮಹಾರಾಜ

ನುಂಕೆಮಲೆ ಸಿದ್ದೇಶ್ವರ ಪುರಾಣವು ಕಾವ್ಯವು ಹೌದು; ಸ್ಥಳನಾಮ ಚರಿತ್ರೆಯೂ ಹೌದು. ಹೀಗಾಗಿ ಇದಕ್ಕೆ ಸಾಹಿತ್ಯಿಕ ಹಾಗೂ ಚಾರಿತ್ರಿಕ ಗೌರವಗಳು ಸಲ್ಲುತ್ತವೆ. ಕನ್ನಡ ಸಾಹಿತ್ಯದಲ್ಲಿ ಸ್ಥಳೀಯ ಚರಿತ್ರೆ ನಿರೂಪಿಸುವ ಹಲವು ಕೃತಿಗಳು ರಚನೆಯಾಗಿವೆ. ನುಂಕೆಮಲೆ ಸಿದ್ದೇಶ್ವರ ಪುರಾಣವು ವಿಶಿಷ್ಟ ಕೃತಿಯಾಗಿದೆ. ನುಂಕಿಮಲೆ ಸಿದ್ದೇಶ್ವರ ಪುರಾಣವು ದ್ವಿಪತಿ, ತ್ರಿವುಡೆ, ಜಂಪೆ, ಅಟತಾಳ, ಏಕತಾಳ, ಸಾಂಗತ್ಯ ಕಂದ, ಯಾಲಪದ ಮುಂತಾದ ಛಂಧೋರೂಪಗಳಿಂದ ರಚನೆಗೊಂಡಿದೆ. ಐತಿಹಾಸಿಕವಾಗಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಪ್ರಾಗೈತಿಹಾಸಿಕ ತಾಣವಾಗಿದೆ. ಬ್ರಹ್ಮಗಿರಿ, ಜಟಿಂಗರಾಮೇಶ್ವರ, ಹಾಳೇಕೆರೆ, ಪೂಜಾರಹಳ್ಳಿ ಮೊದಲಾದವುಗಳಂತೆ ನುಂಕೆಮಲೆಗೂ ಆ ಗೌರವ ಸಲ್ಲುತ್ತದೆ.

ಕರಿಭಂಟನ ಕಾಳಗ : ಕರಿಭಂಟನ ಕಾಳಗದ ಈ ಘಟನೆಯಲ್ಲಿ ಗಮನಾರ್ಹವಾದ ಒಂದು ಅಂಶ ಕಂಡುಬರುತ್ತದೆ. ಇದು ತೊಣ್ಣೂರಿನ ಸುತ್ತಮುತ್ತಲಿನ ಜನರಲ್ಲಿ ಕರಿಭಂಟನ ಕಾಳಗದ ಎಲ್ಲ ಪಾತ್ರಗಳೂ ದೇವತೆಗಳೆಂಬ ನಂಬಿಕೆ ಇದೆ. ಆದರೆ ಮೈಸೂರು, ಮಂಡ್ಯ ಜಿಲ್ಲೆಯಲ್ಲಿ ಉದ್ದಂಡಿಯನ್ನಾಗಲಿ, ಬನವಂತಾದೇವಿಯನ್ನಾಗಲಿ ದೇವತೆ ಎಂದು ಪೂಜಿಸುವ ಸಂಪ್ರದಾಯ ಕಂಡುಬರುವುದಿಲ್ಲ. ಇದರ ಸುಳಿವು ಕೆಂಪಣ್ಣಗೌಡನಲ್ಲಿಯೂ ಮತ್ತು ಕೆಲವು ಪ್ರಾಚೀನ ನಾಟಕಕಾರರಲ್ಲಿಯೂ ದೊರೆಯುತ್ತದೆ. ಕರಿಭಂಟನ ಕಾಳಗ ಚಾರಿತ್ರಿಕ ಘಟನೆಯೇ ಎಂಬುದೊಂದು ಸಮಸ್ಯೆ ಪ್ರತಿಯೊಂದು ಕಥೆಯು ನಡೆದ ಒಂದು ಘಟನೆಯ ಹಿನ್ನೆಲೆಯಲ್ಲಿಯೇ ರೂಪಿತವಾಗಿರುತ್ತದೆ. ಕರಿಭಂಟನ ಕಥೆ ಚಾರಿತ್ರಿಕ ಘಟನೆ ಎಂದು ಪ್ರತಿಪಾದಿಸ ಹೊರಟವರಲ್ಲಿ ಹುಲ್ಲೂರು ಶ್ರೀ ನಿವಾಸ ಜೋಯಿಸರು ಪ್ರಮುಖರು. ಹಾಗೆಯೇ ಇತ್ತೀಚೆಗೆ ಶ್ರೀ ಎಸ್.ವಿ. ಗೌಡೂರ್ ಎಂಬುವರು "ಕರಿಭಂಟನ ಐತಿಹಾಸಿಕತೆ" ಎಂಬ ಲೇಖನದಲ್ಲಿ ಇದೊಂದು ಚಾರಿತ್ರಿಕ ಘಟನೆ ಎಂದು ಪ್ರತಿಪಾದಿಸಿದ್ದಾರೆ.

ಜಿ.ವರದರಾಜರಾಯರು ಕರಿಭಂಟನ ಕಾಳಗದ ಕಥೆಯ ಬಗ್ಗೆ ಇದೊಂದು ಚಾರಿತ್ರಿಕ ಘಟನೆಯೆಂದೂ, ಗಂಗದೊರೆ ರಕ್ಕಸ ಗಂಗನೇ ಕರಿಭಂಟನೆಂದೂ ಹೇಳಿದ್ದಾರೆ. ಅಷ್ಟೆ ಅಲ್ಲ ಎಸ್.ವಿ. ಗೌಡೂರ್‌ರವರು ಕರಿಭಂಟನ ಕಥೆಯ ಅಂತಿಮ ಘಟನೆ ನಡೆದುದು ಚಿತ್ರದುರ್ಗ ಜಿಲ್ಲೆಯ ಹಾಯ್ಕಲ್‌ನಲ್ಲೆಂದು ಆಗ ಅದಕ್ಕೆ ಮಲ್ಲಿಗನೂರೆಂಬ ಹೆಸರಿತ್ತೆಂದೂ ಪ್ರತಿಪಾದಿಸಿದ್ದಾರೆ. ಚಿತ್ರದುರ್ಗ ತಾಲ್ಲೂಕು ಹಾಯ್ಕಲ್ ಗ್ರಾಮದಲ್ಲಿ ಕರಿಭಂಟನಿಗೆ ಸಂಬಂಧಿಸಿದ ಕಥೆಗಳನ್ನು ಅಲ್ಲಿನ ನಿವಾಸಿಗಳಿಂದ ಈಗಲೂ ಕೇಳಬಹುದು.

ಚಿದಾನಂದಾವಧೂತ ಚರಿತ್ರೆ : ಇದು ಹಂಪಿಯ ಗಾಯತ್ರಿ ಪೀಠದ ಪ್ರತಿ ಮತ್ತು ಲಿಂಗಸೂಗೂರು ತಾಲೂಕು ತಲೆಕಟ್ಟು ಗ್ರಾಮದ ಪ್ರತಿಗಳನ್ನು ಪರಿಷ್ಕರಿಸಿ ಸಂಪಾದಿಸಲಾಗಿದೆ ಎಂದು ಸಂಪಾದಕರಾದ ಎಫ್.ಟಿ. ಹಳ್ಳಿಕೇರಿ ಅವರು ಹೇಳುತ್ತಾರೆ. ಚಿದಾನಂದಾವಧೂತರ ಬಾಲ್ಯ, ಜನನ, ಲೋಕ ಸಂಚಾರ ಕುರಿತಾದ ಚಾರಿತ್ರಿಕ ಕಾವ್ಯ ಇದಾಗಿದೆ. ಆತನ ಶಿಷ್ಯನಾದ ಅಯ್ಯಪ್ಪನೆಂಬುವವನಿಂದ ರಚನೆಯಾಗಿದೆ. ಈ ಕೃತಿಯು ಕನಕಗಿರಿ, ಆನೆಗುಂದಿ, ಚಿಕ್ಕಜಂತಕಲ್ ಇತ್ಯಾದಿ ಗ್ರಾಮಗಳ ಚರಿತ್ರೆಯನ್ನು ನಿರೂಪಿಸುತ್ತದೆ.

ಬಿಜ್ಜ ಮಹಾದೇವಿ ಚಾರಿತ್ರ್ಯ : ಇದರಲ್ಲಿ ಬಿಜ್ಜಾವರದ ಕದಿರಕಾಯಕದವಳಾದ ಅಮ್ಮವ್ವೆಯ ಚರಿತ್ರೆ ಹೇಳಲಾಗಿದೆ. ಅಮ್ಮವ್ವೆಯು ಶಿವನನ್ನೇ ಮಗನನ್ನಾಗಿ ಪಡೆಯಲು ಬಯಸಿದಾಗ ಅವಳ ಭಕ್ತಿಯನ್ನು ಪರೀಕ್ಷಿಸಲು ಶಿಶುರೂಪದ ಶಿವನು ಖಾಯಿಲೆಯಿಂದ ನರಳುವುದಕ್ಕೆ ಪ್ರಾರಂಭ ಮಾಡುವನು. ಇದು ಯಕ್ಷಗಾನ ರೂಪದಲ್ಲಿ ಶಿವಶರಣೆಯೊಬ್ಬಳ ಚಾರಿತ್ರ್ಯ ನಿರೂಪಣೆ ಮಾಡಿರುವುದು ಮಹತ್ವಪೂರ್ಣವೆನಿಸಿದೆ.

* ಮಹದೇವ ಕವಿಯ ಮಹಾಲಿಂಗೇಂದ್ರ ವಿಜಯ–ಇದೊಂದು ಹಿರಿಯ ಗಾತ್ರದ ಷಟ್ಪದಿ ಕಾವ್ಯ ೩೦ ಅಧ್ಯಾಯ ೨೦೬೪ ವಾರ್ಧಕ ಷಟ್ಪದಿ ಪದ್ಯಗಳನ್ನೊಳಗೊಂಡಿದೆ. ಮುರುಘಾ ಸಂಪ್ರದಾಯದ ೨೧ನೆಯ ಜಗದ್ಗುರು ಮಹಾಲಿಂಗರ ಜೀವನ, ಸಾಧನೆ, ಸಿದ್ಧಿಗಳು ಈ ಕಾವ್ಯದ ಮುಖ್ಯ ವಸ್ತುವಾಗಿದೆ.

ಗುಂಡಬ್ರಹ್ಮಯ್ಯಗಳ ಚರಿತ್ರೆ : ಕೃತಿಯು ಕೋರಿಕಾಗದದಲ್ಲಿ ಬರೆದು ಕಾಗದ ಹಿಂಬದಿಯಲ್ಲಿ ತೆಳ್ಳನೆಯ ಅರಿವೆಯನ್ನು ರಕ್ಷಣೆಗಾಗಿ ಅಂಟಿಸಲಾಗಿದ್ದು, ಸುರುಳಿ ಸುತ್ತಿರುತ್ತಾರೆ. ೭೮ ಉದ್ದ ೧೩ ಅಗಲವಿರುವ ಈ ದಾಖಲೆಯಲ್ಲಿ ಪತ್ಯಕ್ಕೆ ಸಂಬಂಧಿಸಿದಂತೆ ರೇಖಾಚಿತ್ರ ಹಾಕಲಾಗಿದೆ ಎಂದು ಸಂಪಾದಕರು ಹೇಳಿದ್ದಾರೆ.

"ಶಾಸನೋಕ್ತ ಶೈವಸ್ತುತಿ ನಮಸ್ತುಂಗ ಶಿರಸ್ತುಂಬಿ ಚಂದ್ರಚಾಮರ ಚಾರವೇ। ಎಂಬ ಶ್ಲೋಕದಿಂದ ದಾಖಲೆ ಪ್ರಾರಂಭವಾಗುತ್ತದೆ. ಪ್ರತಿಕಾರರ ಹೆಸರು ಹಾಗೂ ಪ್ರತಿ ಮಾಡಿದ ಕಾಲದ ಉಲ್ಲೇಖ ಇರುವುದಿಲ್ಲ ಎಂಬುದು ತಿಳಿದುಬರುತ್ತದೆ. ಗುಂಡಬ್ರಹ್ಮಯ್ಯರ ಜನನಕ್ಕೂ ಮೊದಲು ಜಗತ್ ಸೃಷ್ಟಿಯ ಬಗೆಯನ್ನು ಸುದೀರ್ಘವಾದ ಗದ್ಯ ಪ್ರಕಾರದಲ್ಲಿ ತಿಳಿಸುತ್ತದೆ. ಈ ಕೃತಿಯಲ್ಲಿ ಬಿಜ್ಜಳನನ್ನು ಕೊಂದು ಶಿವನಾಜ್ಞೆಯಂತೆ ಜಗದೇವ ಮಲ್ಲಿಬೊಮ್ಮಣ್ಣರಾಗಿ ಓರಂಗಲ್ಲಿನಲ್ಲಿ ಗುಂಡುಬ್ರಹ್ಮಯ್ಯರಾಗಿ ಜನಿಸಿದವರಾಗಿರದೆ ಆದಿರುದ್ರನ ಸೇವೆಯಲ್ಲಿದ್ದ ಕಚರನೆಂಬ ಶಾಪಗ್ರಸ್ತ ಗಾಂಧರ್ವನೆ ಗುಂಡಬ್ರಹ್ಮಯ್ಯರ ಜನನಕ್ಕೆ ಆದಿಪುರುಷನೆಂಬುದನ್ನು ದಾಖಲೆ ಹೀಗೆ ವಿವರಿಸುತ್ತದೆ. "ಆದಿರುದ್ರಮೂರ್ತಿ ತ್ರಿಪುರವನ್ನು ಸಂಹಾರ ಮಾಡಿ ಬರುವಾಗ ಕಚರನೆಂಬ ಗಾಂಧರ್ವನು ಆದಿರುದ್ರನ ಹತ್ತಿರ ಸೇವೆಯಲ್ಲಿದ್ದನು. ದಕ್ಷಿಣ ದಿಕ್ಕಿನಲ್ಲಿ ಘಟಚಕ್ರದಾಕಾರವಾಗಿ ವಾಸನವೆಂಬ ಕುಂಬೇಶ್ವರ ಲಿಂಗವು। ವಾಯುವೆಂಬ ಶಕ್ತ ಆಧಾರದಿಂದ ತಿರುಗುತ್ತಯಿತ್ತು."[೯]

ಮಧುಗಿರಿಗೆ ಸಂಬಂಧಿಸಿದ ಮೆಕೆಂಜಿಯವರ ಅಪ್ರಕಟಿತ ಕೈಫಿಯತ್ತು : "ಮೆಕೆಂಜಿಯವರು ಮಧುಗಿರಿ ಪಾಳೆಯಗಾರರ ಬಗ್ಗೆ ಸಂಗ್ರಹಿಸಿದ ಮಾಹಿತಿಯನ್ನು ೮ ದೊಡ್ಡ ಪುಟಗಳಲ್ಲಿ ವಿವರಿಸಲಾಗಿದೆ. ಕ್ರಿ.ಶ. ೧೩೭೯ರಲ್ಲಿ ಮಾರೆಗೌಡ ಮತ್ತು ಅವನ ಸಹೋದರರು ವಿಜಯನಗರದ ಅರಸರ ಪ್ರೀತಿ ಮತ್ತು ಕೃಪೆಗೆ ಪಾತ್ರರಾಗಿ ಅವರಿಂದ ಮಾನ್ಯತೆಯನ್ನು ಪಡೆದು ವಿವಿಧ ಪ್ರದೇಶಗಳಲ್ಲಿ ಹೊಸ ಪಾಳೆಯಪಟ್ಟುಗಳನ್ನು ಸ್ಥಾಪಿಸುತ್ತಾರೆ ಎಂದು ಪ್ರಸ್ತಾಪಿಸಿದ್ದಾರೆ. ಈ ಪಾಳೇಗಾರರು ಮುಮ್ಮಡಿ ಪಟ್ಟಣ ಬಿಜ್ಜಾವರ ಮತ್ತು ಮಧುಗಿರಿ ಹಾಗೂ ಸಿದ್ಧಾಪುರಗಳಲ್ಲಿ ಕೋಟೆ ಮತ್ತು ಕಟ್ಟಡಗಳನ್ನು ಕಟ್ಟಿಸಿರುವ ಬಗ್ಗೆ ಹಾಗೂ ಕರಿತಿಮ್ಮ ಚಿಕ್ಕಪ್ಪಗೌಡ ಹಾಗೂ ಇಮ್ಮಡಿ ಚಿಕ್ಕಪ್ಪಗೌಡರು ಪ್ರಮುಖ ಅರಸರಾಗಿದ್ದು, ಇವರ ಅನೇಕ ಸಾಧನೆಗಳ ಬಗ್ಗೆ ಈ ಕೈಫಿಯತ್ತು ವಿವರವಾದ ಮಾಹಿತಿಯನ್ನು ನೀಡುತ್ತದೆ."[೧೦]

[illegible]

ಮುಂಡರಗಿ ಭೀಮರಾಯನ ಲಾವಣಿ ಪದ :

"ವೀರ ಕುಂಪಣಿ ಸರದಾರ ಟೇಲರಸಾಹೇಬಗ್ಯಾರು
ಸರಿ ಈ ಜಗದೊಳಗ
ಸಾರಿ ಹೇಳಿ ಹನ್ನೆರಡು ಗಂಟೆಗೆ
ಸೂರೆ ಮಾಡಿದ ಭೀಮರಾಯ ದೊರಿಗೆ ॥
ದೇಶದೇಶದೊಳೆಲ್ಲ ಕುಂಪಣಿಯವರು
ಹುಕುಂ ಮಾಡಿದರು"[೧೧] ಹೀಗೆಯೇ ಲಾವಣಿ ಪದ ಮುಂದುವರೆಯುತ್ತದೆ.

ಸಿಂದಿಗೇರಿ ನೀಲಮ್ಮನ ಚರಿತ್ರೆ : "ಕುತಬುದಿನ್‌ಖಾನನು ನೀಲಮ್ಮನ ಮಠದ ಮೇಲೆ ದೌರ್ಜನ್ಯ ನಡೆಸುವ ವಿಷಯ ಹಾಗೂ ನೀಲಮ್ಮನವರು ಇದನ್ನು ತಮ್ಮ ದಿವ್ಯ ದೃಷ್ಟಿಯಿಂದ ಅರಿಯುವ ವಿಷಯದ ಜೊತೆಗೆ ನೀಲಮ್ಮನವರ ಜೀವನದ ಇತರೆ ಘಟನೆಗಳ ಬಗ್ಗೆ ತಿಳಿಸುತ್ತದೆ. "ನೀಲಮ್ಮನ ತಂದೆ ಹೆಸರು ಕೆಂಚನಗೌಡ; ತಾಯಿ ಹೆಸರು ಪೋರಮ್ಮ. ಇವರುಗಳ ಮಗಳೇ ಕೆಂಚಮ್ಮ ಏಳು ವರುಷ ಪರಿಯಂತರ ಹುಟ್ಟಿದ ಮನೆಯಲ್ಲಿದ್ದು ಎಂಟನೆಯ ವರುಷದಲ್ಲಿ ಹಗಲುಹೊತ್ತು ಹೊಲಕ್ಕೆ ಹೋದಲ್ಲಿ ಅಲ್ಲಿ ಅತ್ಯದ್ಭುತವಾದ ಆಕಾರವನ್ನು ಕಂಡು ಹೆದರಿ ಮೂರ್ಛೆ ಹೊಂದಿ ಜನರ ಸಂಗಡ ಮಾತಾಡದೇ ಮೌನದಲ್ಲಿ ಇರಲಾಗಿ ತಂದೆ ತಾಯಿಗಳು ಕೇಳಿ ಪ್ರಳಾಪಿಸಿ"[೧೨] ಹೀಗೆ ಮುಂದುವರೆಯುತ್ತ ಸಾಗುವುದನ್ನು ಕಾಣಬಹುದಾಗಿದೆ.

* "ಉಡುಪಿ ಜಂಗಮ ಮಠದ ಕೆಳದಿ ಸೋಮಶೇಖರ ನಾಯಕನ ಅಪ್ರಕಟಿತ ಚಾರಿತ್ರಿಕ ದಾಖಲೆ ಇದು. ೧೪ ಸಾಲುಗಳು ಹಾಗೂ ೨೦ ಅಕ್ಷರಗಳಿಂದ ಕೂಡಿದ ದಾಖಲೆಯಾಗಿದೆ. ಈ ದಾಖಲೆಯ ಅಂತ್ಯದಲ್ಲಿ ಮೊಹರು ಇದೆ. ಇದರ ಕಾಲಮಾನ ಅಸ್ಪಷ್ಟ ಎಂಬುದಾಗಿ ತಿಳಿದುಬರುತ್ತದೆ. "ಸಂವತ್ಸರದ ಭಾದ್ರಪದ ಶು ೨ಲು ಎಂಬ ಉಲ್ಲೇಖವಿದೆ. ಎಂದು ಶ್ರೀಯುತರು ಈ ಲೇಖನದಲ್ಲಿ ತಿಳಿಸಿದ್ದಾರೆ. ಈ ದಾಖಲೆಯು ಹಲವು ಬಾರಿ ನ್ಯಾಯಾಲಯಗಳಿಗೆ ಹಾಜರು ಮಾಡಿರುವ ಉಲ್ಲೇಖಗಳನ್ನು ಸೂಚಿಸುತ್ತದೆ.

೧ ---- ಸಂವತ್ಸರದ ಭಾದ್ರಪದ ಶು. ೨ಲ್ಲು ಶ್ರೀಮತ್ಕೆಳದಿ ಸೋಮಶೇಖರ ನಾಯಕರು
೨ ---- ಪ್ಪಗೆ ಬರಸಿ ಕಳುಹಿಸಿದ ಪ್ರಯೋಜನ। ಉಡುಪಿನಲ್ಲೂ
೩ ---- ಸರಲ್ಲೂ ವಿರಾಪುರವೆಂದು ನಾಲು ಕಟೆಸ್ತ ಮಹತ್ತಿನ
೪ (ಮಟದ) ಧರ್ಮಕ್ಕೆ ಸ್ವಾಸ್ಥೆಯಲ್ಲ ಸ್ವಾಸ್ಥೆ ಉತ್ತಾರಾ ಕೊಡಬೇಕೆಂದು ನಿಲ್ (೯)"[೧೩] ಹೀಗೆಯೇ ಈ ದಾಖಲೆಯ ಪಾಠ ಮುಂದುವರೆಯುತ್ತದೆ. ಈ ದಾಖಲೆಯಲ್ಲಿ ಕೆಳದಿ ಸೋಮಶೇಖರ ನಾಯಕರು ನಿರ್ಮಿಸಿದ ಮೀರಾಪುರ ಮಠದ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ಶ್ರೀ ಸೊಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಚಾರಿತ್ರಿಕ ದಾಖಲೆಗಳು : "ದಾಖಲೆಗಳಲ್ಲಿ ನಮೂದಿಸಲಾದ ವಿಷಯ ಕುರಿತು ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಸುಮಾರು ೧೨೦೦ ವರ್ಷಗಳ ಚರಿತ್ರೆಯನ್ನು ಈ ದಾಖಲೆಗಳು ಬೆಳಕಿಗೆ ತರುತ್ತವೆ. ಸ್ವರ್ಣವಲ್ಲಿ ಮಠದ ಉತ್ಪತ್ತಿ ಮತ್ತು ಗುರು ಪರಂಪರೆಯ ಇತಿಹಾಸವನ್ನು ಸ್ಪಷ್ಟವಾಗಿ ತಿಳಿಸುವ ಸು.ಕ್ರಿ.ಶ. ೧೮೮೦ರ ದಾಖಲೆಯು ಮಠದಲ್ಲಿ ದೊರೆತಿದೆ. ಪೂರ್ವದಲ್ಲಿ ಅಹಿ ಕ್ಷೇತ್ರದಲ್ಲಿ ದೈವ ದ್ರಾವಿಡ ಬ್ರಾಹ್ಮಣನಾದ ವಿಶ್ವಪತಿ ದೀಕ್ಷಿತರ ಮಗನಾದ ಗುಣನಿಧಿಯೆಂಬವನು ವಿರಕ್ತನಾಗಿ ಗೋಕರ್ಣ ಮಹಾಕ್ಷೇತ್ರದಲ್ಲಿ ದೇವತಾನುಗ್ರಹ ಸಂಪಾದಿಸಿಕೊಂಡು ಶ್ರೀಮತ್ ಕಾಶಿ ಕ್ಷೇತ್ರಕ್ಕೆ ಹೋಗಿ ಅಲ್ಲಿ ಶ್ರೀ ಶಂಕರಾಚಾರ್ಯರಿಗೆ ಹೇಳಿಕೊಳ್ಳಲಾಗಿ"[೧೪]

ಹೀಗೆಯೇ ಇದರ ಚರಿತ್ರೆಯು ಮುಂದುವರೆಯುತ್ತದೆ. ಹೀಗೆಯೇ ಇಲ್ಲಿನ ದಾಖಲೆಗಳಿಂದ ಈ ಮಹಾಸಂಸ್ಥಾನದ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಹಸ್ತಪ್ರತಿಗಳು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ.

ಮಧುಗಿರಿ ಪಾಳೆಯಗಾರರ ಕೈಫಿಯತ್ತು : "ಪ್ರಸ್ತುತ ಮಧುಗಿರಿ ತಾಲೂಕಿನ ಬೇಡತೂರು ಗ್ರಾಮದಲ್ಲಿ ವಾಸವಾಗಿರುವ ಡಾ. ರಾಮಾಂಜನೇಯರವರ ಬಳಿಯಿರುವ ಕೈಫಿಯತ್ತು ಸುಮಾರು ಎಂಟು ಅಂಗುಲ ಅಗಲ ಹಾಗೂ ಸುಮಾರು ಆರು ಅಡಿ ಉದ್ದ ಎರಡು ಕಡೆ ಒಂದು ರೀತಿಯ ಕಪ್ಪು ಮಸಿಯಿಂದ ಬರೆಯಲಾಗಿದೆ. ಈ ಕೈಫಿಯತ್ತಿನಲ್ಲಿ ಟಿಪ್ಪುಸುಲ್ತಾನನ ಆಳ್ವಿಕೆಯ ಅಜೀಜಿನ ಕಾಲಕ್ಕೆ ಸಂಬಂಧಿಸಿದ ದಾಖಲೆಗಳು ದೊರೆಯುತ್ತವೆ. ಮಧುಗಿರಿ ಪಾಳೆಯಗಾರರು ಮಧುಗಿರಿ ಸೇರಿದಂತೆ ಚನ್ನರಾಯನ ದುರ್ಗದವರೆಗೂ ತಮ್ಮ ರಾಜ್ಯವನ್ನು ವಿಸ್ತರಿಸಿದ್ದರು. ವಿಜಯನಗರದ ಮಹಾಪ್ರಭುಗಳಾದ ಶ್ರೀರಂಗರಾಯರ ಉಲ್ಲೇಖ ಈ ಕೈಫಿಯತ್ತಿನಲ್ಲಿ ದೊರೆಯುತ್ತದೆ. ಉದ್ದನೆಯ ಸುರುಳಿ ಸುತ್ತಿದ ಈ ಪತ್ರ ಮೇಲುನೋಟಕ್ಕೆ ಮೋಡಿ ಅಕ್ಷರದಂತೆ ಕಂಡುಬರುತ್ತದೆ ಎಂಬುದಾಗಿ ಹೇಳಲಾಗಿದೆ. ಈ ಪತ್ರವನ್ನು ಕಾಲಕಾಲಕ್ಕೆ ನಕಲು ಮಾಡಿದ್ದಾರೆ ಎಂದು ತಿಳಿದುಬಂದಿದೆ".[೧೫]

ಚಾರಿತ್ರಿಕವಾಗಿ ಹಸ್ತಪ್ರತಿಗಳು ಹಲವಾರು ಸಾಮ್ರಾಜ್ಯಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಅವು ಅನೇಕ ರಾಜಕೀಯ ಹೋರಾಟಗಳು, ಘರ್ಷಣೆಗಳು, ರಾಜಕೀಯ ಏರಿಳಿತಗಳು ಮತ್ತು ಒಳಹೊರಗಿನ ದಾಳಿಗಳ ವಿವರಗಳನ್ನು ಒಳಗೊಂಡಿದ್ದು, ಅವುಗಳ ಕಾರಣ ಮತ್ತು ಪರಿಣಾಮಗಳನ್ನು ಈ ಮೇಲಿನ ದಾಖಲೆಗಳು ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತವೆ.

ಚಿತ್ರದುರ್ಗದ ಚರಿತ್ರೆಗೆ ಸಂಬಂಧಿಸಿದ ಹಸ್ತಪ್ರತಿಗಳು : ಚಿತ್ರದುರ್ಗದ ಪಾಳೆಯಗಾರರು : ಎಂ.ಎಸ್. ಪುಟ್ಟಣ್ಣನವರು ಹೇಳಿರುವ "ಓಬವ್ವೆಯನ್ನು ಶತ್ರು ಸೈನಿಕರು ಕಡಿದುಹಾಕಿದರು ಎಂಬುದನ್ನು ಎ.ಡಿ. ಕೃಷ್ಣಯ್ಯನವರು ಒಪ್ಪದೆ ದಾಖಲೆ ಆಧಾರಗಳ ಪ್ರಕಾರ ಕೊಂಬಿನವರು ಓಬವ್ವೆಯ ಭಯಾನಕ ಕಾರ್ಯವನ್ನು ಕಂಡು ಶತ್ರುಗಳ ಮುತ್ತಿಗೆ ಉತ್ತರ ದಿಕ್ಕಿನಿಂದ ಪ್ರಾರಂಭವಾಗಿದೆ

ಎಂಬ ಸೂಚನೆಯನ್ನು ತನ್ನ ಕೊಂಬನ್ನು ಮೊಳಗಿಸುವುದರ ಮೂಲಕ ಸಾರಲು ತಕ್ಷಣ ನಾಯಕನ ಸೈನಿಕರು ಅಲ್ಲಿಗೆ ಧಾವಿಸಿ ಬಂದು ಅಳಿದುಳಿದ ಶತ್ರುಸೈನಿಕರನ್ನು ಸದೆಬಡೆದರು. ಓಬವ್ವೆ ದೇಹಾಲಸ್ಯದಿಂದ ದಣಿದು ಮೂರ್ಛೆ ಹೋದಳು; ಆಕೆಯನ್ನು ಅರಮನೆಗೆ ಎತ್ತಿಕೊಂಡು ಹೋದರು ಎಂದು ಹೇಳಿದ್ದಾರೆ.

"ಚಿತ್ರದುರ್ಗದ ಬಖೈರು" ಇದರಲ್ಲಿ ರಾಜನು ಸೆರೆಸಿಕ್ಕ ವಿಚಾರವಾಗಲಿ ಮರಣದ ವಿಚಾರವಾಗಲಿ, ಹೇಳದೆ ರಾಜನ ಸಂಬಂಧಿಕರು ಪರಶುರಾಮಪ್ಪ ನಾಯಕ ಮಗ ಸಾಹಿಬ್‌ಜಾದೆ. ಭರಮಪ್ಪನಾಯಕ ದೊಡ್ಡಮದಕರಿ ನಾಯಕ ಮತ್ತು ಇತರರು ಗಾಯಗೊಂಡಿದ್ದರೂ ದುರ್ಗಕ್ಕೆ ಹಿಂದಿರುಗಿ ಸುಖವಾಗಿದ್ದರು ಎಂದು ಹೇಳಿದೆ. ಮದಕರಿ ನಾಯಕನ ಮರಣದ ವಿಚಾರದಲ್ಲೂ ಒಮ್ಮತವಿಲ್ಲ.

"ಜಂಪ್ಪಣ್ಣನಾಯಕನ ಕೈಫಿಯತ್ತು" ಇದರ ಪ್ರಕಾರ ಕಬ್ಬಾಳ ದುರ್ಗದಲ್ಲಿ ಕೈದಿಗಳಾಗಿದ್ದ ಅವನ ಸಂಬಂಧಿಕರು ತಪ್ಪಿಸಿಕೊಂಡು ಹೋಗಲು ಪ್ರಯತ್ನಪಟ್ಟು ಸಾಧ್ಯವಾಗದೇ ಹೈದರಾಲಿಯ ಸೈನಿಕರ ಕೈಗೆ ಸಿಗಲು ಅವರನ್ನೆಲ್ಲಾ ಗಲ್ಲಿಗೇರಿಸಿದರು. ಅನಂತರ ರಾಜಾ ವೀರಚಿಕ್ಕಮದಕರಿ ನಾಯಕನಿಗೆ ವಿಷ ಕೊಟ್ಟು ಸಾಯಿಸಿದರು ಎಂದಿದ್ದಾರೆ.

"ಚಿತ್ರದುರ್ಗ ಗೆಜೆಟಿಯರ್ಸ್‌ನಲ್ಲಿ ಬಿ.ಎಲ್.ರೈಸ್‌ರವರು ಕ್ರಿ.ಶ. ೧೭೭೯ರಲ್ಲಿ ಮದಕರಿ ನಾಯಕ ಹಾಗೂ ಅವನ ಸಂಸಾರವನ್ನು ಖೈದಿಗಳನ್ನಾಗಿ ಶ್ರೀರಂಗಪಟ್ಟಣಕ್ಕೆ ರವಾನಿಸಿದನು. ಅಲ್ಲಿ ಮದಕರಿ ನಾಯಕ ಸತ್ತನು ಎಂದು ಹೇಳಿದ್ದಾರೆ. "ಜಿ.ಎನ್. ಸಾಲೆತ್ತೂರ್ ಅವರ ಜಾನ್ ವೆಬ್‌ಸ್ಟರ್ ಜಾನ್ ಸ್ಪೆನ್‌ಸರ್‌ಗೆ ಬರೆದ ಪತ್ರದಲ್ಲಿ ಸೆರೆಮನೆಯಲ್ಲಿದ್ದ ರಾಜವಂಶಿಕನಾದ ದೊಡ್ಡಮದಕರಿ ನಾಯಕನ ಮನಸನ್ನು ತಿರುಗಿಸಿ ತನ್ನ ಸೈನ್ಯದಲ್ಲಿ ಕೆಲಸ ಕೊಟ್ಟನೆಂದು ಹೇಳಿದೆ ಎಂದು ತಿಳಿಸಿದ್ದಾರೆ. ಚಿತ್ರದುರ್ಗದ ನಾಯಕರು ವೀರಶೈವ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಭರಮಣ್ಣನಾಯಕನ ಕಾಲದಲ್ಲಿಯೇ ಬರೆದಂತಹ ಭರಮಣ್ಣನಾಯಕನ ಸಮರ ವಿಜಯ ಎಂಬ ಒಂದು ಕೃತಿ ದೊರೆತಿದೆ. ಆದರೆ ಅದರ ಕರ್ತೃ, ಕಾಲ ದೊರೆತಿಲ್ಲ. ಹಾಗೆಯೇ ಈತನ ಮಗ ಹಿರಿಯ ಮದಕರಿ ನಾಯಕನ ಕಾಲದಲ್ಲಿ ರಚನೆಯಾದ "ಹಿರಿಯ ಮದಕರಿನಾಯಕನ ತಾರಾವಳಿ" ಎಂಬ ಕೃತಿಯ ಕರ್ತೃ ಯಾರೆಂಬುದು ತಿಳಿಯದು. ಇದು ಹಿರಿಯ ಮದಕರಿನಾಯಕನ ಸಾಧನೆಗಳನ್ನು, ಸಮಕಾಲೀನ ನಾಯಕರ ಜೊತೆಗಿನ ಅವನ ಸಂಬಂಧಗಳನ್ನು ಹಾಗೂ ಅವನ ಹಿರಿಯ ಮಗ ಕಸ್ತೂರಿ ರಂಗಪ್ಪನಾಯಕನ ಪಟ್ಟಾಭಿಷೇಕ ಮತ್ತು ಗುರು ಶ್ರೀ ಮುರಿಗೆಯ ಸ್ವಾಮಿಗಳ ಬಗ್ಗೆ ತಿಳಿಸುತ್ತದೆ. ಕಾವ್ಯ ಗುಣಗಳನ್ನು ಹೊಂದಿರುವ ಈ ತಾರಾವಳಿ ಚಿತ್ರದುರ್ಗದ ನಾಯಕರ ಇತಿಹಾಸದ ಉಪಯುಕ್ತ ಮಾಹಿತಿ ನೀಡುತ್ತದೆ. ಮುರುಘಾ ಮಠದ ಗುರುಗಳಾಗಿದ್ದ ಮಹಾಲಿಂಗ ಸ್ವಾಮಿಗಳ ಚರಿತ್ರೆಯನ್ನು ಅದೇ ಕಾಲದಲ್ಲಿ ಮಹಾದೇವ ಎಂಬ ಕವಿಯು "ಮಹಾಲಿಂಗೇಂದ್ರ ವಿಜಯ" ಎಂಬ ಕಾವ್ಯವನ್ನು ಷಟ್ಪದಿಯಲ್ಲಿ ರಚಿಸಿರುವರು. ಚಿತ್ರದುರ್ಗದ ನಾಯಕರು ಸ್ವತಃ ಕವಿಗಳಲ್ಲದಿದ್ದರೂ ಸಾಹಿತ್ಯಕೃತಿ ರಚನೆಗೆ, ಸಾಹಿತ್ಯ ಕರ್ತೃಗಳಿಗೆ ಪ್ರೋತ್ಸಾಹ

ನೀಡುತ್ತಾ ಬಂದಿದ್ದಾರೆ. ವೀರಶೈವ ಸಾಹಿತ್ಯದ ಜೊತೆಗೆ ಕೆಲವು ವೈಷ್ಣವ ಸಾಹಿತ್ಯಗಳೂ ಇದ್ದಿರಬೇಕೆಂದು ಶ್ರೀಯುತರು ಹೇಳಿದ್ದಾರೆ.[೧೬]

"ಚಿತ್ರಕಲ್ಲು ಮದಕರಿ" ಇದೊಂದು ಕೋಲುಪದ; ಇದರಲ್ಲಿ ಕೊನೆಯ ರಾಜವೀರ ಮದಕರಿ ನಾಯಕ ತೀರಿಕೊಳ್ಳಲು ಆತನ ರಾಣಿಯರ ಸಮಗ್ರ ಪ್ರಸಂಗ ಚಿತ್ರಣ ಈ ಕೋಲುಪದದಲ್ಲಿ ಅನಾವರಣಗೊಂಡಿದೆ.

ಹಟ್ಟಿ ಪಾಳೆಯಗಾರರು : ಚಿತ್ರದುರ್ಗ ಜಿಲ್ಲೆಯನ್ನು ಆಳ್ವಿಕೆ ಮಾಡಿದ ಪಾಳೆಯಪಟ್ಟುಗಳಲ್ಲಿ ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿಯೂ ಒಂದಾಗಿತ್ತು. ನಾಯಕನಹಟ್ಟಿಯನ್ನು ತಮ್ಮ ಆಡಳಿತದ ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಇವರನ್ನು ಹಟ್ಟಿ ಪಾಳೇಗಾರರೆಂದು ಕರೆಯಲಾಗುತ್ತದೆ. ಹಿಂದೆ ಈ ಊರನ್ನು ಕಟ್ಟಿಸಿದವನು ಕೋಟೆ ಮಲ್ಲನಾಯಕನೆಂಬುವನು. ಈತನ ಮೂಲ ಒಂದು ರೀತಿಯ ಜನಪದ ಕಥೆಯ ರೂಪದಲ್ಲಿ ಪ್ರಾರಂಭವಾಗುತ್ತದೆ. "ನಾಯಕನಹಟ್ಟಿ ಬಖೈರಿನ ಪ್ರಕಾರ ಈ ಮಲ್ಲನಾಯಕನು ಶ್ರೀಶೈಲಪರ್ವತದ ಬಳಿಯ ಕರಮಲೆ ಮತ್ತು ಕೊಮ್ಮಮಲೆಗಳ ಸಮೀಪ ನೆಲೆಸಿದ್ದು ಅಸಂಖ್ಯಾತ ತುರುಕರುಗಳ ಒಡೆಯನಾಗಿದ್ದನು. ಒಮ್ಮೆ ಈ ಪ್ರದೇಶದ ಭೀಕರ ಕ್ಷಾಮಕ್ಕೆ ತುತ್ತಾದ ನಂತರ ಈತ ತನ್ನ ೧೨ ಪೆಟ್ಟಿಗೆ ದೇವರು, ೧೨೦೦ ಪಶುಗಳೊಂದಿಗೆ ಹಾಗೂ ೫೦೦ ಜನ ಮ್ಯಾಸರು ಮತ್ತು ತನ್ನ ಆರು ಜನ ಅಣ್ಣ-ತಮ್ಮಂದಿರೊಡನೆ ಹುಲ್ಲು ನೀರು ಹುಡುಕುತ್ತಾ ಇಂದಿನ ನಾಯಕನಹಟ್ಟಿ ಬಳಿ ಬಂದು ನೆಲೆನಿಂತನು. ಈ ಪ್ರದೇಶದಲ್ಲಿ ಬೆಳೆದಿದ್ದ ಕಾಡನ್ನು ಕಡಿದು ಹಟ್ಟಿಯನ್ನು ಹಾಕಿಕೊಂಡು ಇಲ್ಲಿ ನೆಲೆಸಿದನು. ಆದರೆ ದೊರೆಗಳ ಅನುಮತಿಯಿಲ್ಲದೆ ಹಟ್ಟಿ ಹಾಕಿಕೊಂಡಿದ್ದ ಇವನನ್ನು ವಿಜಯನಗರದ ಅರಸರು ಈತನ ಮೇಲೆ ಯುದ್ಧ ಮಾಡಲು ಸೈನ್ಯವನ್ನು ಕಳುಹಿಸಿದರು. ಮಲ್ಲನಾಯಕರ ದನಕರುಗಳು ವಿಜಯನಗರದ ಸೈನ್ಯದ ಮೇಲೆ ನುಗ್ಗಿದ್ದಾಗ ಸೈನ್ಯ ದಿಕ್ಕೆಟ್ಟು ಓಡಿ ಹೋಗುತ್ತದೆ. ತರುವಾಯ ಈತನ ಸಾಹಸವನ್ನು ಮೆಚ್ಚಿ ವಿಜಯನಗರದವರು ಈತನಿಗೆ ಹಟ್ಟಿ ಕಟ್ಟಿಕೊಳ್ಳಲು ಮಾನ್ಯತೆ ನೀಡುತ್ತಾರೆ. ಜೊತೆಗೆ ಧರ್ಮದ ಆಡಳಿತವನ್ನು ಇವನಿಗೆ ವಹಿಸುವುದರ ಮೂಲಕ ಪಾಳೆಯಗಾರ ಪದವಿ ನೀಡಿದರೆಂದು ತಿಳಿದುಬರುತ್ತದೆ. ಹಟ್ಟಿ ಮಲ್ಲಪ್ಪನಾಯಕನ ತರುವಾಯ ಬಂದ ಈ ಮನೆತನದ ಪಾಳೆಯಗಾರರಲ್ಲಿ ಅತ್ಯಂತ ಪ್ರಸಿದ್ಧಿ ಪಡೆದವನೆಂದರೆ ಬೋಡಿಮಲ್ಲಪ್ಪ ನಾಯಕ ಎಂಬುವನು. ಈತನ ಕಾಲದಲ್ಲಿ ನಾಯಕನಹಟ್ಟಿ ತನ್ನ ಸರ್ವತೋಮುಖ ಬೆಳವಣಿಗೆಯನ್ನು ಕಾಣುತ್ತದೆ. ಇವನಿಗೆ ಚಿತ್ರದುರ್ಗದ ಚಿಕ್ಕಣ್ಣನಾಯಕನ ತಂಗಿ ಸರ್ಜಮ್ಮ ನಾಗತಿಯನ್ನು ಕೊಟ್ಟು ಮದುವೆ ಮಾಡಲಾಯಿತು. ಬಹುಶಃ ಚಿತ್ರದುರ್ಗ ಪಾಳೆಯಗಾರರು ಈತನಿಗೆ ಸಹಕರಿಸಿದಂತೆ ಕಂಡುಬರುತ್ತದೆ. ಈತನು ವಿಜಯನಗರದ ಅರಸರಿಗೆ ಸೇವೆ ಸಲ್ಲಿಸಿದ್ದರಿಂದಲೂ ಜಟ್ಟಿಯೊಬ್ಬನನ್ನು ಸೋಲಿಸಿ ತನ್ನ ಬಲ ಪ್ರದರ್ಶನ ಮಾಡಿದ್ದರಿಂದಲೂ ಅವನಿಗೆ 'ಭೀಮ' ಎಂಬ ಬಿರುದು ನೀಡಿ ಗೌರವಿಸಲಾಯಿತು. ಇದರ ಜ್ಞಾಪಕಾರ್ಥವಾಗಿ ಮಲ್ಲಪ್ಪನು ನಾಯಕನಹಟ್ಟಿ ಪ್ರದೇಶದಲ್ಲಿ ೭ ಕೆರೆಗಳು ಹಾಗೂ ೭ ಪುರಗಳನ್ನು

ಕಟ್ಟಿಸಿದಂತೆ ಕಂಡುಬರುತ್ತದೆ. ಅವುಗಳೆಂದರೆ ೧. ಭೀಮನ ಕೆರೆ ೨. ಹಿರೇಕೆರೆ ೩. ಚಿಕ್ಕೆರೆ ೪. ರಾಮಸಾಗರ ಕೆರೆ ೫. ವರವಿನ ಕೆರೆ ೬. ಹೊಸಕೆರೆ ೭. ನಾಯಕನಕೆರೆ ಇದೇ ರೀತಿ ೧. ಕಾಶೀಪುರ ೨. ಗಿಡ್ಡಾಪುರ ೩. ಮಲ್ಲಾಪುರ ೪. ಬಸವಾಪುರ ೫. ಕುಧಾಪುರ ೬. ಮಹಾದೇವಪುರ ೭. ಗೌರಿಪುರ ಎಂಬ ಪುರಗಳನ್ನು ಸ್ಥಾಪಿಸಿದನು."[೧೭] ಇವುಗಳಲ್ಲಿ ಕೆಲವು ಈಗಲೂ ಅಸ್ತಿತ್ವದಲ್ಲಿವೆ. ಗೌರಿಪುರದಲ್ಲಿ ಗೌರಿಶಂಕರ ದೇವಸ್ಥಾನ ಈತನ ಅವಧಿಯಲ್ಲಿಯೇ ನಿರ್ಮಾಣವಾಗಿರುವುದೆಂದು ಹೇಳಲಾಗಿದೆ.

"ಬೋಡಿಮಲ್ಲಪ್ಪ ನಾಯಕನ ನಂತರ ಬಂದ ಮಲ್ಲಪ್ಪನಾಯಕನೆಂಬುವನು ರಾಯದುರ್ಗದ ಬೊಮ್ಮನಾಯಕನ ಪ್ರಾರ್ಥನೆಯಂತೆ ೨೦೦೦ ಕಪ್ಪ ಮತ್ತು ೧೦೦೦ ಹಸುಗಳನ್ನು ಒದಗಿಸಿದನಂತೆ ಅದಕ್ಕೆ ಪ್ರತಿಯಾಗಿ ಬೊಮ್ಮನು ಮೊಳಕಾಲ್ಮೂರು ಬೆಟ್ಟವನ್ನು ಮಲ್ಲಪ್ಪನಾಯಕನಿಗೆ ಬಿಟ್ಟು ಕೊಟ್ಟನು. ಮಲ್ಲಪ್ಪನಾಯಕನು ಈ ಬೆಟ್ಟದ ಮೇಲೆ ಕೋಟೆ ಕೊತ್ತಲಗಳನ್ನು ನಿರ್ಮಿಸಿದನು ಎಂಬುದು ಈ ಬಖೈರಿನಿಂದ ತಿಳಿದು ಬರುತ್ತದೆ."[೧೮]

* **ಕಟ್ಟೆಮನೆ** ಮ್ಯಾಸನಾಯಕರ ಪ್ರಮುಖರು ತಮ್ಮ ಸಮುದಾಯದ ಅಭಿವೃದ್ಧಿಗಾಗಿ ಮತ್ತು ರಕ್ಷಣೆಗಾಗಿ ಕೆಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದ್ದರು. ಅವುಗಳಲ್ಲಿ ಕಟ್ಟೆಮನೆಗಳನ್ನು ಸ್ಥಾಪಿಸಿದ ವಿಚಾರವು ಸೇರಿದೆ. ದೊರೆ ಮತ್ತು ದಳವಾಯಿಗಳು ಸೇರಿ ಬೇಡ ಜನಾಂಗದಲ್ಲಿ ಉದ್ಭವಿಸಬಹುದಾದ ಜಾತಿ, ಕಲಹ, ಕೋಮುಗಲಭೆ, ಗೋತ್ರಗಳ ಕಲಹ, ಗುರು ಪೂಜಾದಿಗಳಲ್ಲಿ ಹಾಗೂ ಆಯಾಯ ದೇವರಿಗೆ, ಆಯಾಯ ಗೊತ್ರಕ್ಕೆ ಸಂಬಂಧಿಸಿದ ವಿವಾದಗಳನ್ನು ಪರಿಹರಿಸಿಕೊಳ್ಳಲು ಇವರು ಕಟ್ಟೆಮನೆಗಳನ್ನು ಸ್ಥಾಪಿಸಲು ಯೋಜನೆ ರೂಪಿಸಿದ್ದರು. ಇದು ಬೇಡ ಸಮುದಾಯಗಳ ನ್ಯಾಯಾಂಗ ವ್ಯವಸ್ಥೆಯ ಇನ್ನೊಂದು ಮುಖವಾಗಿತ್ತೆಂದು ಪರಿಚಯಿಸುತ್ತದೆ. ಮ್ಯಾಸಬೇಡರು ಒಂದು ಕುಲ ಹಟ್ಟಿ ಮತ್ತು ದೇವಸ್ಥಾನಗಳಿಗೆ ಗುಡಿ ಕಟ್ಟೆ ಇದ್ದರೆ ಇಂತಹ ಅನೇಕ ಗುಡಿ ಕಟ್ಟೆಗೆ ಒಂದು ಕಟ್ಟೆಮನೆ ಇರುತ್ತದೆ.

ಯರಮಂಚಿನಾಯಕನ ಸಂಗಡ ಅವನ ಸಹೋದರರಾದ ಗಾದರಿ ಪಾಲನಾಯಕ, ರಪ್ಪಲಸೂರಿ ಮುಂತಾದವರು ತಾವು ಹೊಂದಿದ ಪಶುಗಳೊಡನೆ ಪಯಣ ಬೆಳೆಸಿದರು. ಇವರ ಜತೆ ಮೂರು ಲಕ್ಷ ಮ್ಯಾಸಮಂಡಲದ ಬೇಡರು ಸಹ ಇದ್ದರು. ಇವರು ಗೋದಾವರಿ ನದಿ ತೀರಕ್ಕೆ ಬಂದು ಇಳಿದುಕೊಂಡರು (ಬಹುಶಃ ಇದು ವೇದಾವತಿ ನದಿಯಾಗಿರಬೇಕು. ಏಕೆಂದರೆ ಮ್ಯಾಸಬೇಡರು ವಲಸೆ ಬರುವುದು ಆಂಧ್ರಪ್ರದೇಶದಿಂದ ಕರ್ನಾಟಕದ ಪೂರ್ವಕ್ಕೆ ಇರುವ ಮೊಳಕಾಲ್ಮೂರು ಪ್ರದೇಶಕ್ಕೆ ಅಭಿಮುಖವಾಗಿ ಬಂದಿರಬಹುದು)ಆಗ ಮೂರು ಕಟ್ಟೆಮನೆ ಮೂರು ದೇವರುಗಳು ಮತ್ತು ಮೂರು ಜನ ಪೂಜಾರಿಗಳು ಅವರು ನೇಮಕ ಮಾಡಿದರು. ಆಡಳಿತವನ್ನು ನೋಡಿಕೊಳ್ಳಲು ಮೂರು ಮಂದಿ ನಾಯಕರನ್ನು ಮೂರುಮಂದಿ ದಾಸಯ್ಯರನ್ನು ಏಳುಮಂದಿ ಹಿರಿಯರನ್ನು ಮತ್ತು ಎಪ್ಪತ್ತೇಳು ಮನ್ನೆಗಾರರನ್ನು ನೇಮಕ ಮಾಡಿದ್ದರು. "ಎಸ್.ಬಿ. ತಿಪ್ಪನಾಯಕ ಅವರು

ಆ ಮೂರು ಕಟ್ಟೆಮನೆಗಳೆಂದರೆ ಪೆನ್ನೋಬಳ, ಕಟ್ಟೆಮನೆ, ಅಹೋಬಲ ದೇವರ ಕಟ್ಟೆಮನೆ ಮತ್ತು ಬುಗ್ಗೋಬಳ ದೇವರ ಕಟ್ಟೆಮನೆ; ಇವುಗಳಿಗೆ ಸುರಪತಿ, ನರಪತಿ, ಗಜಪತಿ ಎಂಬುದಾಗಿ ದೊರೆಗಳನ್ನು ನೇಮಿಸಿದರು."[೧೯]

ಇವುಗಳ ಕಾಲಮಾನ ತಿಳಿದು ಬಂದಿಲ್ಲ ಮತ್ತು ಇವುಗಳ ಸ್ಥಾಪನೆ ಸ್ಥಳ, ವ್ಯಕ್ತಿಗಳ ಬಗೆಗೆ ಕಾಲದ ಪತ್ರಗಳು ಲಭ್ಯವಿಲ್ಲ. ಇಂದಿಗೂ ಸಹ ಇವು ಇಲ್ಲವೆ ಎನ್ನುವುದಕ್ಕೆ ಆಧಾರಗಳಿರುವುದಿಲ್ಲ. ಆನೆಗೊಂದಿ ಅರಸರನ್ನು ನರಪತಿಗಳೆಂದು ಕರೆಯುತ್ತಿದ್ದರು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. "ವಾಸ್ತವವಾಗಿ ಪ್ರಚಲಿತವಿರುವ ಕಟ್ಟೆಮನೆಗಳು ಮೂರು; ಮ್ಯಾಸ ಬೇಡರ ಆ ಮೂರು ಕಟ್ಟೆಮನೆಗಳೆಂದರೆ ನನ್ನಿವಾಳ, ಗೋನೂರು, ಮತ್ತು ನಾಯಕನಹಟ್ಟಿ. ಈಗಾಗಲೇ ಇವು ಐತಿಹಾಸಿಕವಾಗಿ ಖ್ಯಾತಿ ಪಡೆದಿವೆ. ಹೀಗಾಗಿ ಎಸ್.ಬಿ. ತಿಪ್ಪನಾಯಕ ಅವರು ಹೇಳುವ ಮೂರು ಕಟ್ಟೆಮನೆಗಳು ಯಾವುಗಳೆಂಬುದು ಜಿಜ್ಞಾಸೆಯಾಗಿದೆ. ಎಂದು ಬಿ.ಪಿ. ವೀರೇಂದ್ರಕುಮಾರ್ ಅವರು ಹೇಳಿದ್ದಾರೆ. ಈ ಪೆನ್ನೂಬಳ, ಅಹೋಬಲ ಮತ್ತು ಬುಗ್ಗೋಬಳ ಎನ್ನುವವು ಯಾವ ಪ್ರದೇಶಕ್ಕೆ ಸೇರಿದ್ದಾವೆಂದು ಮತ್ತು ಅವುಗಳ ಕಾರ್ಯನಿರ್ವಹಣೆ ಬಗ್ಗೆ ಆಧಾರಗಳಿಲ್ಲದ ಕಾರಣ ಬಹುಶಃ ಈ ಮೂರು ಕಟ್ಟೆಮನೆಗಳ ಹೆಸರುಗಳನ್ನು ಉತ್ಪ್ರೇಕ್ಷಿಸಿ ನನ್ನಿವಾಳ, ಗೋನೂರು, ಮತ್ತು ನಾಯಕನಹಟ್ಟಿಗೆ ಕರೆದಿರಬಹುದೆಂದೂ ಊಹಿಸಲು ಶಕ್ಯವಿದೆ. ಆಂಧ್ರಪ್ರದೇಶದ ಕೆಲವು ಪ್ರಸಿದ್ಧ ಯಾತ್ರಾ ಸ್ಥಳಗಳ ಹೆಸರುಗಳಿವು; ಹೀಗಾಗಿ ಇವುಗಳನ್ನು ಸಾಂಕೇತಿಕವಾಗಿ ಗುರುತಿಸಬೇಕಾಗಿದೆ ಎಂದು ಹೇಳುತ್ತಾರೆ."[೨೦]

ಕುಮಾರ ರಾಮನ ಸಾಂಗತ್ಯ ಅಪ್ರಕಟಿತ ಹಸ್ತಪ್ರತಿ : ಇದು ಕಾಗದದ ಪ್ರತಿಯಾಗಿದ್ದು, ೩೬೦ ಪುಟಗಳಿಂದ ಕೂಡಿದೆ. ಇದನ್ನು "ರೌದ್ರಿ ಸಂವತ್ಸರದ ಜೇಷ್ಠಬಹುಳ ೬ಯಲ್ಲು ಭಾನುವಾರ ದಿವಸ ೯ ತಾಸಿನೊಳಗೆ ಕುಮಾರರಾಮನ ಪುಸ್ತಕ ಮುಗೆ ಬರದು ಯಿಥಿತೆ ತಪಂಬರದಾತಂಕಡು ಜಡನಪ್ಪೇತನೆಂದು ಬಯಲ್ಬೇಡಂತಪ್ಪಕ್ಕು ಶುದ್ಧಮಕ್ಕು ತಪ್ಪುಳ್ಳರೆ ತಿದ್ದಿ ಓದುವದುತ್ತುಮ ಪುರುಷರು ಐಶ್ವರ್ಯಮಸ್ತು ಆಯುರಾರೋಗ್ಯ ಮಸ್ತು ಯೀಪುಸ್ತಕ ಯಾರಿಗೆ ಬರದುಕೊಟ್ಟುದ್ದು ಯಂದರೆ ರಾಜೇಶ್ರೀ ಹಿರೆಕೆರೆಯಾಗಳಹಳ್ಳಿ ಗೌಡರ ಕರಿಬಸಪ್ಪನವರ ಗರ್ಭೋದ್ಭವರಾದ ಮರುಳಪ್ಪ ಶಿದ್ದಪ್ಪಗೆ ಬರದುಕೊಟ್ಟ ಯೀಥಿತೆ ಯೀಪುಸ್ತಕ ಬರೆದವರು ರಾಜಶ್ರೀ ಉಜ್ಜೈನಿವಳಗೆಯಿರುವ ಮತ್ತಿಹಳ್ಳಿ ಸಿದ್ಧಲಿಂಗಪ್ಪನವರ ಮಗ ಚೆನ್ನವೀರಪ್ಪನು ಬರೆದ ಈ ಪುಸ್ತಕವನ್ನು ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲ್ಲೂಕು ಸೂಲದಹಳ್ಳಿ ಗ್ರಾಮದಲ್ಲಿರುವ ಎಂ.ಎಸ್. ಓಬಯ್ಯನವರು ತಂದ ಈ ಹಳೆಯ ಪುಸ್ತಕವನ್ನು ನೋಡಿಕೊಂಡು ಈಥಿತೆಯ ಮುಗೆ ಬರದುದು ಶುಕ್ರವಾರ ಬೈಗಿನ ಮೂರು ಗಂಟೆಗೆ ಮುಗೆ ಬರದವರು ಒಂದನೇ ಮ್ಯಾಸನಾಯ್ಕರ ೧ ನೇ ಎಚ್. ಮಲಿಯಪ್ಪ ೨ನೇ ಜಿ. ಓಬಯ್ಯ, ೩ನೇ ಎಸ್.ಆರ್. ದೊಟ್ಟಪಾಲಯ್ಯ, ೪ನೇ ಚಿ॥ ಓಬಯ್ಯ ಬರೆದವರು. ಸಹಾಯಕರು ಎ.ಕೆ. ಸಿದ್ಲಿಂಗಪ್ಪ ಕೇಂದ್ರಯ್ಯಗಳ ಓಬಯ್ಯ ೧೯.೩.೧೯೭೧ರಲ್ಲಿ ಬರೆದದ್ದು ಎಂಬುದಾಗಿ ತಿಳಿದು

ಬಂದಿದೆ. ಅಪ್ರಕಟಿತ ಹಸ್ತಪ್ರತಿಯಲ್ಲಿ ಮೊದಲ ಎರಡು ಸಂಧಿಗಳು ಇಲ್ಲ. ೩ನೇ ಸಂಧಿಯಿಂದ ಕುಮಾರರಾಮನ ಸಾಂಗತ್ಯದ ಪದ್ಯಗಳು ಪ್ರಾರಂಭವಾಗುತ್ತವೆ. ಇದರಲ್ಲಿ ಒಟ್ಟು ಸಂಧಿಗಳು ೩೭; ಪದ್ಯಗಳು ೫೧೩೯ ಇರುವುದನ್ನು ನೋಡಬಹುದು. ಕೊಮಾರ ರಾಮಯ್ಯನ ಚರಿತ್ರೆಗೂ ಈ ಹಸ್ತಪ್ರತಿಗೂ ಸಾಮ್ಯತೆ ಇರುವುದು ಕಂಡುಬರುತ್ತದೆ. ಕುಮಾರ ರಾಮಯ್ಯನ ಚರಿತ್ರೆ ೨೬ ಸಂಧಿಗಳಿಂದ ಕೂಡಿದೆ. ಈ ಕುಮಾರರಾಮನ ಅಪ್ರಕಟಿತ ಪ್ರತಿಯೂ ೩೭ ಸಂಧಿಯನ್ನು ಒಳಗೊಂಡಿದೆ. ಕೊಮಾರ ರಾಮಯ್ಯ ಚರಿತ್ರೆ ೨೮೯೬ ಪದ್ಯಗಳನ್ನು ಒಳಗೊಂಡಿದೆ. ಅಪ್ರಕಟಿತ ಹಸ್ತಪ್ರತಿ ೫೧೩೯ ಪದ್ಯಗಳೂ ಒಳಗೊಂಡಿರುವುದನ್ನು ನೋಡಬಹುದು. ಕೆಲವೊಂದು ಸಂಧಿಗಳು ಅಪ್ರಕಟಿತ ಪ್ರತಿಯಲ್ಲಿಯು ಸ್ವಲ್ಪ ಬದಲಾವಣೆಗಳಿಂದ ಕೂಡಿರುವುದು ಕಂಡುಬರುತ್ತವೆ.

ಅಪ್ರಕಟಿತ ಹಸ್ತಪ್ರತಿಯೂ ಒಳಗೊಂಡಿರುವ ಸಂಧಿಗಳು ಮತ್ತು ಪದ್ಯಗಳು ಈ ಕೆಳಗಿನಂತೆ ನೋಡಬಹುದು.

೧. ಮೂರನೇ ಸಂಧಿ – ೧೭೪ ಪದ್ಯಗಳು
೨. ೪ನೇ ಸಂಧಿ – ೩೩ ಪದ್ಯಗಳು
೩. ೫ನೇ ಸಂಧಿ – ೧೧೧ ಪದ್ಯಗಳು
೪. ೬ನೇ ಸಂಧಿ – ೧೧೭ ಪದ್ಯಗಳು
೫. ೭ನೇ ಸಂಧಿ – ೨೦೯ ಪದ್ಯಗಳು
೬. ೮ನೇ ಸಂಧಿ – ೧೮೮ ಪದ್ಯಗಳು
೭. ೯ನೇ ಸಂಧಿ – ೪೧೪ ಪದ್ಯಗಳು
೮. ೧೦ನೇ ಸಂದಿ – ೧೦೬ ಪದ್ಯಗಳು
೯. ೧೧ನೇ ಸಂದಿ – ೧೬೭ ಪದ್ಯಗಳು
೧೦. ೧೨ನೇ ಸಂಧಿ – ೮೪ ಪದ್ಯಗಳು
೧೧. ೧೩ನೇ ಸಂಧಿ – ೧೬೦ ಪದ್ಯಗಳು
೧೨. ೧೪ನೇ ಸಂಧಿ – ೧೯೬ ಪದ್ಯಗಳು
೧೩. ೧೫ನೇ ಸಂಧಿ – ೧೩೪ ಪದ್ಯಗಳು
೧೪. ೧೬ನೇ ಸಂಧಿ – ೨೩೮ ಪದ್ಯಗಳು ಬಲ್ಲಾಳರಾಯ ಕಾಳಗದ ಸಂಧಿ
೧೫. ೧೭ನೇ ಸಂಧಿ – ೧೫೦ ಪದ್ಯಗಳು ಸೂಲದ ಹಬ್ಬ ಮಾಡಿದ ಸಂಧಿ
೧೬. ೧೮ನೇ ಸಂಧಿ – ೧೨೨ ಪದ್ಯಗಳು ರಾಮಯ್ಯನನ್ನು ರತ್ನಾಜಿ ಕಂಡ ಸಂಧಿ

೧೭.	೧೯ನೇ ಸಂದಿ	– ೪೧	ಪದ್ಯಗಳು
೧೮.	೨೦ನೇ ಸಂಧಿ	– ೭೪	ಪದ್ಯಗಳು, ರತ್ನಾವಿರಹ ತಾಪದ ಸಂಧಿ
೧೯.	೨೧ನೇ ಸಂಧಿ	– ೮೭	ಪದ್ಯಗಳು
೨೦.	೨೨ನೇ ಸಂಧಿ	– ೧೧೩	ಪದ್ಯಗಳು
೨೧.	೨೩ನೇ ಸಂಧಿ	– ೧೫೮	ಪದ್ಯಗಳು, ಮದನಾಗ್ನಿಯಿಂದ ಚಿತ್ರಬೊಂಬೆಯೊಳು ರತ್ನಿ ಹದಗೆಟ್ಟಸಂಧಿ
೨೨.	೨೪ನೇ ಸಂಧಿ	– ೮೬	ಪದ್ಯಗಳು
೨೩.	೨೫ನೇ ಸಂಧಿ	– ೩೧	ಪದ್ಯಗಳು
೨೪.	೨೬ನೇ ಸಂಧಿ	– ೧೪೧	ಪದ್ಯಗಳು, ತಾಯಿ ಬಳಿಗೆ ಬಂದು ಚಂಡು ಬೇಡಿದ್ದು
೨೫.	೨೭ನೇ ಸಂಧಿ	– ೧೭೮	ಪದ್ಯಗಳು
೨೬.	೨೮ನೇ ಸಂಧಿ	– ೧೮೭	ಪದ್ಯಗಳು, ರತ್ನಮ್ಮನಿಗೆ ಚೆಂಡು ಬಿದ್ದ ಸಂಧಿ
೨೭.	೨೯ನೇ ಸಂಧಿ	– ೯೦	ಪದ್ಯಗಳು
೨೮.	೩೦ನೇ ಸಂಧಿ	– ೧೬೨	ಪದ್ಯಗಳು, ರಾಮಯ್ಯನ ನೆಲ ಮಾಳಿಗೆಗೆ ಪ್ರವೇಶ
೨೯.	೩೧ನೇ ಸಂಧಿ	– ೨೫೨	ಪದ್ಯಗಳು, ನೇಮಿಯ ದಂಡು ಬಂದುದು ಕುಮ್ಮಟ ಮುತ್ತಿಗೆ ಮಾಡಿದ್ದು
೩೦.	೩೨ನೇ ಸಂಧಿ	– ೧೦೬	ಪದ್ಯಗಳು, ರಾಮಯ್ಯ ನೆಲಮಾಳಿಗೆಯಿಂದ ಹೊರಟು ಬಂದ ಸಂಧಿ
೩೧.	೩೩ನೇ ಸಂಧಿ	– ೧೫೮	ಪದ್ಯಗಳು, ರಾಮಯ್ಯ ನೇಮಿಯ ಕೂಡ ಕಾಳಗದ ಸಂಧಿ
೩೨.	೩೪ನೇ ಸಂ	– ೩೪೭	ಪದ್ಯಗಳು, ಮಾತಂಗಿ ಕಾಳಗಕ್ಕ ಬಂದ ಸಂಧಿ
೩೩.	೩೫ನೇ ಸಂದಿ	– ೭೫	ಪದ್ಯಗಳು, ಕೈಲಾಸದಲ್ಲಿ ರಾಮೈಯ ಪ್ರಾಣ ಪಡೆದ ಸಂಧಿ
೩೪.	೩೬ನೇ ಸಂಧಿ	– ೯೨	ಪದ್ಯಗಳು, ರಾಮೈಯ್ಯ ಕೈಲಾಸದಿಂದ ಧರೆಗಿಳಿದು ಬಂದ ಸಂಧಿ

೩೫. ೩೭ನೇ ಸಂಧಿ – ೧೫೪ ಪದ್ಯಗಳು, ರಾಮಯ್ಯ ಬಾಬಮ್ಮ ಕುಮ್ಮಟಕೆ ಬಂದ ಸಂಧಿ

ಒಟ್ಟು: ೫೧೩೭

ಕೆಲವೊಂದು ಸಂಧಿಯ ಹೆಸರನ್ನು ಲಿಪಿಕಾರರು ಬರೆಯದೇ ಇರುವುದನ್ನು ನಾವು ನೋಡಬಹುದು. ಹಾಗಾಗಿ ಈ ಹಸ್ತಪ್ರತಿಯನ್ನು ಓದಿ ಕೆಲವೊಂದು ಸಂಧಿಯನ್ನು ಗುರುತಿಸಲು ಅದರಲ್ಲಿ ಕೆಲವೊಂದು ಅಕ್ಷರಗಳು ಸ್ಪಷ್ಟವಾಗಿ ಕಾಣದೇ ಇರುವುದರಿಂದ ಅದನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಈ ಹಸ್ತಪ್ರತಿಯ ಪ್ರಾರಂಭವು ಈ ರೀತಿಯಲ್ಲಿದೆ.

ಶ್ರೀ ಗುರು ಬಸವಲಿಂಗಾಯ ನಮಃ ಶ್ರೀ ಗುರು ಶ್ರೀ ಭ್ಯೋಬ್ಯಾಯ ನಮಃ
ಶ್ರೀ ಗುರು ಶಾಂತಾಂಭಯ ನಮಃ ಶ್ರೀ ಗುರು ಸಿದ್ಧಲಿಂಗಾಯ ನಮಃ
ಶ್ರೀ ಗಿರಿಜಾಧೀಶನಾಗ ಚರ್ಮಾಂಭರ ಯೊಗಿಜನನಮ್ರದಾಯಃ
ಆಗಮತೀತ ಆನಂದ ಭರಿತಜಯ ಬೋಗಿ ಭೂಷಣ ನೇತ್ರ ಗೋಪತಿಲಾರ್ಯ
ಗೋಪತಿ ಸಿರತರ ಗೋಪತಿ ಕೋಟಿನಯಿನರ್ಚನೆ ಗೋಪಿ ಕಂಕಣ ಸೂತ್ರ
ಗೊಪ ಮಂಡಲಧರ ಗೋಪಿಗುರ್ಣೊಪತೇಜ ಉರಿಗಣ್ಣ ಸಿರಿಮಾಲ ಗೊಳ ಕಂದರ
ವಾವಾ ಗಿರಿಜೆಯಧರಿಯ ರಂಜಗೋಪ ಪರಂಜೋತಿಯದೆನ್ನ ಗುರುರಾಯ
ನಿನ್ನ ಚರಣವನು ನಾಬಲಗೊಂಬೆ ॥ ರಾಮನ ಪೆತ್ತವನೆ ಕಮಲಲೋಚನ ।
ಸತ್ತೆಭಾಮೆಯರಸನೇ ಶ್ರೀ ಕೃಷ್ಣ ॥
ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಗುರು ಬಸವಲಿಂಗಾಯ ನಮಃ
ಶ್ರೀ ಜಾನಕಿವಾಸ ಶುಭಗೀರಿವಾಸ ॥
ಭಾನಾ ಕೋಟಿ ಪ್ರಕಾಶ ಭಕ್ತಿ ಜನ ಪೋಷಾ ॥
ಬಾಳಾ ನೇತ್ರನೇ ಸಖಾನೆ ಭಜಕಾರ ರಕ್ಷನೆ ॥
ಶ್ರೀ ಲಕ್ಷ್ಮೀವರನಾಥಾ ಸ್ತ್ರಿಥ ಪಾರಿಜಾತಾ ಸಕಲಾಲೋಕೇಸ್ವರಾನೆ ॥
ಶಂಕರಾಪ್ರಿಯನೇ ಕಮಲ ಜಾಸನಪಿತನೇ ಕಾರುಣ್ಯ ಮೂರ್ತಿ ॥
ಅಮರರನು ಕಾಯ್ದವನೆ ಅಸುರಮದ್ಧನನೇ
ಸುಮನಸ ಮನೋಲ್ಲಾಸ ಸುರಚಿರವಿಲಾಸಾ ।
ಕರುಣಾ ಕಟಾಕ್ಷನೇ ಕಾಯೊ ಮುಂದೆನ್ನಾ ಆರೈದು ಸಲವಯ್ಯ ಮಾರುಪಿತ ಹರಿಯೇ.
" ದೇವಾಗಿರೀಯಾ ಮುತ್ತಿಗೆ ರಾಮಾದೇವಾರಾಯನೂ ।

ಜೀವಾ ದೊರೆಸಿ ಕೈಸೆರೆಯಾ

ಸುರಿತಾಳ ಡಿಳ್ಳಿಂದ ದೇವಾಗಿರಿಗೆ ಬಂದು

ಸೆರೆಸುರೆ ಹಿಡಿಯೆ ರಾಯನನೂ"೨೧

ಮಲಪಂಥುಲ ದೇಶದ ರಾಜನಲ್ಲಿದ ಮುಮ್ಮಡಿ ಶಿಂಗಭಂಟನು ರಾಜನ ಸಂಗಡವಾಗ್ದೋಷಗಳಿಂದ ಜಗಳ ಮಾಡಿಕೊಂಡು ರಾಯದುರ್ಗವನ್ನಾಳುವ ರಾಮದೇವರಾಯನು ರಾಜ್ಯ ಪರಿಪಾಲಿಸುವ ಇವರ ರಾಜ್ಯಕ್ಕೆ ಗಡಿ ಹತ್ತಿರ ಬಂದು ಮುಮ್ಮಡಿ ಸಿಂಗನು ತನ್ನ ಆಳುಗಳಲ್ಲಿ ಕೆಲವರನ್ನು ರಾಮದೇವರಾಯರ ಹತ್ತಿರ ಕಳುಹಿಸುತ್ತಾನೆ. ದ್ವಾರಬಾಗಿಲ ಕಾಯುವ ಗೊಲ್ಲರು ರಾಜನಿಗೆ ಹೋಗಿ ಮುಝುರೆ ಮಾಡಿ ಸ್ವಾಮಿ ನಮ್ಮ ರಾಜ್ಯದ ಗಡಿಯ ಹತ್ತಿರ ಯಾವ ಪರದೇಶದ ವೀರ ಭಂಟನು ನಿಮ್ಮದರುಶನಕ್ಕೆ ಬಂದಿರುವನು. ನಿಮ್ಮ ಅಪ್ಪಣೆ ಕೇಳಲು ಚರರನ್ನು ಕಳುಹಿಸಿರುವನು. ಬಂದ ಚರರಿಗೆ ರಾಯ ಸಂತೊಷದಿಂದ ಅವರಿಗೆ ಉಡುಗೊರೆಯನ್ನು ಕೊಟ್ಟು ಅವರನ್ನು ಕರೆದುಕೊಂಡು ಬನ್ನಿರಿಯೆಂದನು. ಆಗ ಮುಮ್ಮಡಿ ಸಿಂಗನು ತನ್ನ ಸೈನ್ಯ ಸಮೇತವಾಗಿ ಬಂದು ರಾಮದೇವರಾಯರಿಗೆ ತನ್ನ ಅನಂತ ವಂದನೆಗಳನ್ನು ಸಲ್ಲಿಸಿದನು. ಆಗ ರಾಜನು ನೀನು ಯಾರು ಯಾವದೇಶ ನಿನ್ನ ಹೆಸರೇನು ಯೆನು ಕಾರಣ ನನ್ನಲ್ಲಿ ಬಂದೆ ಎಂದು ಕೇಳಲು ಆಗ ಮುಮ್ಮಡಿ ಸಿಂಗನು ನಮ್ಮದೇಶ ಮಲ ಪಂಥುಲ ದೇಶ. ನಮ್ಮ ರಾಜನ ಬಳಿ ಮನಸ್ತಾಪ ಮಾಡಿಕೊಂಡು ನಿಮ್ಮ ಬಳಿಗೆ ಬಂದಿರುವೆನು. ನೀವು ಎನಗೆ ಆಶ್ರಯ ಕೊಟ್ಟರೆ ನಿಮ್ಮ ರಾಜಧಾನಿಯಲ್ಲಿ ಯಾವುದಾದರೊಂದು ಭಂಟನನ್ನಾಗಿ ಇರಿಸಿಕೊಳ್ಳಿರಿ ಎಂದನು ಆಗ ರಾಜನು ಈತನ ಮುಖಲಕ್ಷಣಗಳನ್ನು ಶೌರ್ಯ ಧೈರ್ಯವನ್ನು ನೋಡಿ ಸಂತೋಷಪಟ್ಟು ತನ್ನಲ್ಲಿ ಮುಖ್ಯ ಭಂಟನ ಪದವಿಯನ್ನು ಕೊಟ್ಟು ಸೇರಿಸಿಕೊಂಡನು. ಹಾಗೆಯೇ ಕುಮ್ಮಟದುರ್ಗವನ್ನು ಆಳಿದ ಕಂಪಿಲರಾಯ ಮತ್ತು ಮಗನಾದ ಕುಮಾರರಾಮ ಹಾಗೂ ಆ ಭಾಗದಲ್ಲಿದಂತಹ ಜೈನಭಾಂಧವರ ವೈಮನಸ್ಸಿಗೆ ಕಾರಣವಾದ ಜಾತಿಸೂತಕ ಸಂದರ್ಭವನ್ನು ಕಟ್ಟಿ ಕೊಡುವಲ್ಲಿ ಪ್ರಮುಖವಾದ ಆಕರವಾಗಿದೆ. ಕುಮಾರ ರಾಮನನ್ನು ಪ್ರೀತಿ ವಿಶ್ವಾಸಗಳಿಂದ ಕರೆಸಿಕೊಂಡು ಕುಮ್ಮಟದುರ್ಗದ ಜೈನರು ಆತಿಥ್ಯ ನೀಡಿ ಅನಂತರ ಕುಮಾರರಾಮ ಕುಳಿತ ಜಾಗವನ್ನು ಮಲಿನವಾಯಿತೆಂಬ ಭಾವನೆಯಿಂದ ಅದನ್ನು ಶದ್ಧಗೊಳಿಸಿದರೆಂಬ ವದಂತಿಯನ್ನು ಕೇಳಿದ ಕುಮಾರರಾಮ ಜೈನರನ್ನು ಕುಮ್ಮಾಟ ದುರ್ಗದಿಂದ ಹೊರಹಾಕಿ ಬಸದಿಯಲ್ಲಿ ಕುರಿ ಕೋಣಗಳನ್ನು ಕೊಲ್ಲಿಸಿದ ಪ್ರಸಂಗವನ್ನು ಹಾಗೂ ರಾಮೈಯ್ಯ ಕೈಲಾಸದಿಂದ ಧರೆಗೆಳಿದು ಬಂದದ್ದನು ಈ ಹಸ್ತಪ್ರತಿ ಉಲ್ಲೇಖಿಸುತ್ತದೆ.

ನಾಯಕನಹಟ್ಟಿಯ ಬುದಿಮಲ್ಲಪ್ಪ ನಾಯ್ಕನ ಮೂಲವಿಚಾರ : "ತೊಟ್ಟೆ ಮಲ್ಲಪ್ಪ ನಾಯ್ಕನೆಂಬಾತನು ಶ್ರೀಶೈಲದ ಪೂರ್ವ ದಿಕ್ಕಿನ ಭಾಗದಲ್ಲಿರುವ ತರೆಮಲೆ ಮತ್ತು ತೊಂಮಲೆ ಎಂಬ ಪರ್ವತ ಪ್ರದೇಶದಿಂದ ತನ್ನ ಸಾವಿರಾರು ರಾಸುಗಳನ್ನು ತೆಗೆದುಕೊಂಡು ಕ್ಷಾಮದ ಸಲುವಾಗಿ ಹಟ್ಟಿ

ಅಂದರೆ ಈಗಿನ ನಾಯಕನಹಟ್ಟಿಯ ಪ್ರದೇಶಕ್ಕೆ ಬಂದನು. ಅಲ್ಲಿ ನೀರು ಹುಲ್ಲಿನ ಸಮೃದ್ಧಿಯನ್ನು ಕಂಡು ವಿಜಯನಗರದ ಅರಸರ ಅಪ್ಪಣೆಯನ್ನು ಕೇಳದೆ ಅರಣ್ಯ ಪ್ರದೇಶದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಅಲ್ಲಿಯೇ ನೆಲೆಸಿದನು. ಕೆಲವು ಕಾಲದ ನಂತರ ಒಬ್ಬ ಭಟ್ಟಂಗಿಯ ಹೊಗಳಿಕೆಗೆ ಮೆಚ್ಚಿ ಕೋಟೆಮಲ್ಲಪ್ಪ ನಾಯಕನು ವಿಜಯನಗರದ ಅರಸರಲ್ಲಿ ಮನಸ್ತಾಪ ಮಾಡಿಕೊಂಡಿದ್ದರಿಂದ ಆ ಅರಸರು ಈ ಮಲ್ಲಪ್ಪ ನಾಯಕನನ್ನು ಸೆರೆಹಿಡಿದು ತರಲು ದಂಡನ್ನು ಕಳುಹಿಸಿಕೊಟ್ಟನು. ಈ ದಂಡನ್ನು ನೋಡಿ ಮಲ್ಲಪ್ಪನಾಯ್ಕನ ರಾಸುಗಳೆಲ್ಲಾ ಬೆದರಿ ಅವರ ಮೇಲೆ ಬೀಳಲಾಗಿ ದಂಡು ಚದುರಿ ದಿಕ್ಕಾಪಾಲಾಯ್ತು. ಈ ರೀತಿ ಮೂರಾವರ್ತಿ ಮುಖಭಂಗವಾಗಿದ್ದನ್ನು ಕಂಡು ವಿಜಯನಗರದ ಅರಸರು ಈ ಮಲ್ಲಪ್ಪನಾಯ್ಕನಿಗೆ ನಾಯಕನಹಟ್ಟಿಯನ್ನು ಕೊಟ್ಟು ಮತ್ತೊಂದು ಪ್ರಾಂತ್ಯದ ಆಡಳಿತವನ್ನು ವಹಿಸಿಕೊಟ್ಟರು. ಹೀಗಿರುತ್ತಾ ಈತನ ವಂಶದ ೩ ನೇ ತಲೆಯವನಾದ ಬೂದಿ ಮಲ್ಲಪ್ಪನಾಯ್ಕನು ಬೇರೆಯಾಗಿ ತನ್ನ ರಾಸುಗಳನ್ನು ಬೇರೆ ಕಡೆ ಸಾಗಿಸಿಕೊಂಡು ಬಂದು ಪುನಃ ಮೇಲ್ಕಂಡ ಹಟ್ಟಿಯ ಬಳಿ ನೆಲೆಸಿದನು. ಈತನು ವಿಜಯನಗರದ ಅರಸರಿಗೆ ಮುಖ್ಯ ಸಹಾಯಕನಾಗಿದ್ದನು. ಈತನು ವಿಜಯನಗರದ ಆಸ್ಥಾನದಲ್ಲಿದ್ದ ಜಟ್ಟಿಯನ್ನು ಸೋಲಿಸಿದ್ದರಿಂದ ಈತನಿಗೆ ಭೀಮನೆಂಬ ಹೆಸರನ್ನು ಕೊಟ್ಟರೂ ಈತನು ಭೀಮನಕೆರೆ ಎಂಬ ಒಂದು ಕೆರೆಯನ್ನು ಕುಕ್ಕುದೇವಸ್ಥಾನವನ್ನು ಕಟ್ಟಿಸಿದನು. ಈ ಮಲ್ಲಪ್ಪನಾಯ್ಕನು ತನ್ನ ೩೦೦೦ ತಂದ ೧೦೦೦ ಹಸುಗಳನ್ನು ರಾಯದುರ್ಗದ ಬೊಮ್ಮನಾಯ್ಕನಿಗೆ ಆತನ ಆಶೆಯ ಪ್ರಕಾರ ಕೊಟ್ಟು ಆತನ ಆಧೀನದಲ್ಲಿದ್ದ ಮೊಳಕಾಲ್ಮೂರುವನ್ನು ಬದಲಿಯಾಗಿ ತೆಗೆದುಕೊಂಡು ಬೆಟ್ಟದ ಮೇಲೆ ಕೋಟೆ ಕಟ್ಟಿಸಿ ನೆಲೆಸಿದ್ದನು. ಚಿತ್ರದುರ್ಗದ ಬಿಚ್ಚುಗತ್ತಿ ಭರಮಪ್ಪನಾಯ್ಕನು ಮೊಳಕಾಲ್ಮೂರುವನ್ನು ತೆಗೆದುಕೊಂಡು ಮಲ್ಲಪ್ಪನಾಯ್ಕನನ್ನು ಮೊದಲಿದ್ದ ಹಟ್ಟಿಯ ಬಳಿಗೆ ಒತ್ತಿದನು. ತರುಣ ಹಿರಿಯಮದಕರಿ ನಾಯ್ಕನ ಕಾಲದಲ್ಲಿ ಈ ಹಟ್ಟಿಯು (ನಾಯಕನಹಟ್ಟಿಯು) ಚಿತ್ರದುರ್ಗಕ್ಕೆ ಸೇರಿತು."[೨೨]

ಇಷ್ಟು ಮಾಹಿತಿಯನ್ನು ನಾನು ಕ್ಷೇತ್ರಕಾರ್ಯ ಮಾಡಿದಾಗ ಸಂಗ್ರಹಿಸಿದ ಕಾಗದದ ದಾಖಲೆಯಲ್ಲಿ ಈ ಹಟ್ಟಿಮಲ್ಲಪ್ಪ ನಾಯಕನ ಮೂಲ ವಿಚಾರದ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.

ಚಿತ್ರದುರ್ಗದ ಡಿ॥ ಮೊಳಕಾಲ್ಮೂರುವಿನ ಪೂರ್ವ ವಿಚಾರ : "ಮೊಳಕಾಲ್ಮೂರುವು ಮೊದಲು ರಾಯದುರ್ಗದ ಅಧಿಕಾರಿಯಾಗಿ ವಿಜಯನಗರದ ಅರಸರಿಂದ ನೇಮಿಸಲ್ಪಟ್ಟಿದ್ದ ಬೊಮ್ಮನಾಯ್ಕನ ಅಧೀನದಲ್ಲಿತ್ತು. ವಿಜಯನಗರ ಸಂಸ್ಥಾನವು ೧೫೬೭ರಲ್ಲಿ ಹಾಳಾದ ನಂತರ ಈ ಬೊಮ್ಮನಾಯ್ಕನು ಹಟ್ಟಿ ಎಂದಿರ ಈಗ ನಾಯ್ಕನಹಟ್ಟಿ ಎಂದು ಕರೆಯಲ್ಪಡುವ ಸ್ಥಳದಲ್ಲಿದ್ದ ಬೂದಿ ಮಲ್ಲಪ್ಪನಾಯ್ಕನಿಗೆ ಮೊಳಕಾಲ್ಮೂರುವನ್ನು ಕೊಟ್ಟು ಆತನಿಂದ ೩೦೦೦ ತೆಂದ ೧೦೦೦ ಬಿಳಿ ರಾಸುಗಳನ್ನು ತೆಗೆದು ಕೊಂಡದ್ದರಿಂದ ಈ ಬೊಮ್ಮನಾಯ್ಕನಿಗೆ ಹುಚ್ಚು ದೊರೆ ಎಂದು ವಾಡಿಕೆಯಾಯ್ತಿ ಈ ಬೂದಿ ಮಲ್ಲಪ್ಪನಾಯ್ಕನು ತನ್ನ ರಾಸುಗಳಿಗೆ ನೀರು ವಗೈರೆ ಅನುಕೂಲವಾಗಿರುವುದನ್ನು ಕಂಡು ಗುಡ್ಡದ ಮೇಲೆ ಕೋಟೆ ವಗೈರೆ ಕಟ್ಟಿಸಿಕೊಂಡು ನೆಲೆಸಿದ್ದನು. ಈ ಬೂದಿಮಲ್ಲಪ್ಪನ ಮಗನ ಕಾಲದಲ್ಲಿ

ಈ ಮೊಳಕಾಲ್ಮೂರುವನ್ನು ಚಿತ್ರದುರ್ಗವನ್ನು ಹೈದರನ್ನು ಗೆದುಕೊಳ್ಳುವವರಿಗೂ ಈ ಮೊಳಕಾಲ್ಮೂರು ಚಿತ್ರದುರ್ಗದವರ ಆಳ್ವಿಕೆಯಲ್ಲಿದ್ದು ಅಲ್ಲಿನ ಗಡಿ ಬಂದೋಬಸ್ತಿಗಾಗಿ ಹೊಟ್ಟೆಕಾಟನಾಯ್ಕನಿಗೆ ೭೦೦ ಜನ ಕಂದಾಚಾರದ ಮೇಲೆ ನೇಮಿಸಿತ್ತು. ಈ ಹೊಟ್ಟೆ ಕಾಟನಾಯ್ಕನೆ ಹಾಲಿ ಮೊಳಕಾಲ್ಮೂರುವಿನಲ್ಲಿರುವ ಪಾಳೆಯಗಾರರ ಮೂಲ ಪುರುಷ"[೨೩] ಇಷ್ಟು ಮಾಹಿತಿಯು ನನಗೆ ದೊರೆತ ಕಾಗದದ ದಾಖಲೆಯಲ್ಲಿ ಇರುವುದನ್ನು ನಾನು ಇಲ್ಲಿ ನಮೊದಿಸಿದ್ದೇನೆ.

"ನಲಗೇತನಹಟ್ಟಿಯ ಶ್ರೀ ಚನ್ನಕೇಶವಸ್ವಾಮಿ ದೇವರ ಪೂಜಾರಿಕೆ ಪಟ್ಟಕ್ಕೆ ಸಂಬಂಧಿಸಿದ ಅಪ್ರಕಟಿತ ದಾಖಲೆ" : ಶ್ರೀಮಾನ್ ಮಹನಾಯ್ಕ ಶಿರೋಮಣಿಗಳಾದ ಶ್ರೀ ಕಂಪಳದೇವರ ಗುಡಿಕಟ್ಟಿನ ಅಧ್ಯಕ್ಷತೆಯಲ್ಲಿ ಮೂರು ಕಟ್ಟೆಮನೆಯವರು, ಕುಲಸಾವಿರದವರು ಮತ್ತು ಏಳುಮಂದಿ ಗುರು ಹಿರಿಯರವರು ಇನ್ನು ಮುಂತಾದವರು ಸೇರಿ ಪಟ್ಟಕಟ್ಟುವ ವಿಚಾರ ಎಂದು ಈ ದಾಖಲೆ ಪ್ರಾರಂಭವಾಗುತ್ತದೆ. ಚಳ್ಳಕೆರೆ ತಾಲ್ಲುಕು ನಾಯ್ಕನಹಟ್ಟಿ ಮತ್ತು ನಲಗೇತನಹಟ್ಟಿ ಗ್ರಾಮದ ಅಧ್ಯಕ್ಷತೆಯಲ್ಲಿ ಇರುವ ಶ್ರೀ ಚನ್ನಕೇಶವಸ್ವಾಮಿ ದೇವರ ಪಟ್ಟದ ಪೂಜಾರಿಯವರ ವಂದನೇ ಹಿರೆಮಗ ಪೂಜಾರಿ ಚಿತ್ರಯ್ಯನವರಿಗೆ ಇದೇ ಗ್ರಾಮದ ಶ್ರೀ ಚನ್ನಕೇಶವ ದೇವರಿಗೆ ಪಟ್ಟದ ಪೂಜಾರಿಯನ್ನು ಮಾಡಬೇಕೆಂದು ಮೂರು ಕಟ್ಟೆಮನೆಯವರು ಕುಲಸಾವಿರದವರು ಇನ್ನು ಮುಂತಾದವರು ಸೇರಿ ಸದರಿಪೂಜಾರಿ ಚಿತ್ರಯ್ಯನವರಿಗೆ ಯಿಮೇಲ್ಕಂಡ ಶ್ರೀ ಕಂಪಳ ದೇವರ ಗುಡಿಕಟ್ಟಿನ ಅಧ್ಯಕ್ಷತೆಯಲ್ಲಿ ಏಳು ಮಂದಿ ಗುರುಹಿರಿಯರು ಸೇರಿ ಸದರಿ ಯಿದೇಗುಡಿಕಟ್ಟಿನಲ್ಲಿ ಸರ್‍ವರ ವಪ್ಪಿಗೆಯಿಂದ ಪಟ್ಟದ ನಾಮಕರಣವನ್ನು ಮಾಡಿ ಶ್ರೀ ಚನ್ನಕೇಶವ ದೇವರಿಗೂ ಮತ್ತು ನೆಲಗೇತಲ ಮುತ್ತಯ್ಯಗಳಿಗೂ ಇಯರಡು ದೇವರುಗಳಿಗೆ ಸದರಿ ಪೂಜಾರಿ ಚಿತ್ರಯ್ಯನವರನ್ನೆ ಪಟ್ಟದ ಪೂಜಾರಿಯಾಗಿ ಕಾಯಂಮಾಡಿಸಿ ಸರ್‍ವರ ಅಧಿಕಾರದಿಂದ ಸದರಿ ಚಿತ್ರಯ್ಯನವರು ಪೂಜಾಕ್ರಮಗಳಿಗೂ ಮತ್ತು ಮುತ್ತಯ್ಯಗಳಲ್ಲಿ ಪಾಡ್ಯದ ಕಾರ್‍ಯಗಳಿಗೂ ಮತ್ತು ದೇವರ ಹೊತ್ತು ಕೊಳ್ಳುವದಕ್ಕೂ ಯೀತನಿಗೆ ಕುಲಸಾವಿರದವರು ಮೂರುಕಟ್ಟೆ ಮನೆಯವರು ಗುರುಹಿರಿಯರವರು ಸಹ ಸೇರಿ ಪೂಜಾರಪ್ಪರವನ್ನೆ ಪಟ್ಟದ ಅಧ್ಯಕ್ಷತೆಯಲ್ಲಿ ಮತ್ತು ದೇವರ ಗುಡಿಯಲ್ಲಿ ಯೀತನೇ ಪೂಜಾಕ್ರಮಗಳನ್ನು ಮತ್ತು ದೇವರ ಉತ್ಸವ ಕಾಲಗಳಲ್ಲಿ ದೇವತ ಕಾರ್‍ಯಗಳಿಗೆ ಯೀ ಮೆಲ್ಕಂಡ ಶ್ರೀ ಚನ್ನಕೇಶವ ದೇವರ ಗುಡಿ ಕಟ್ಟಿನ ಅಧ್ಯಕ್ಷರು–ಏಳುಮಂದಿ ಗುರುಹಿರಿಯರವರು ಅಧಿಕಾರಕ್ಕೆ ವಳಪಟ್ಟ ಪೂಜಾರಿ ಚಿತ್ರಯ್ಯರವರನ್ನು ದೇವತಾ ಪೂಜಾಕ್ರಮಗಳಿಗೆ ಅಕ್ಕು ಸ್ತಾಪಿತವನ್ನು ವಳಪಡಿಸಿ ಹಿಂದಿನ ಪೂಜಾರಿ ವಂಶಸ್ತರನ್ನಾಗಿ ಯೀತನಿಗೆ ಶ್ರೀ ಚನ್ನಕೇಶವ ದೇವರ ಪೂಜಾರಿಮಾಡಿ ದೇವರನ್ನು ಹೊರಿಸಿರುತ್ತೇವೆ. ಇತನ ವಂಶಪರಂಪರ್‍ಯವಾಗಿಯೂ ಮತ್ತು ಯೀತನ ಮಕ್ಕಳು ಮೊಮ್ಮಕಳು ವರವಿಗೂ ಯೀ ಮೇಲ್ಕಂಡ ಶ್ರೀ ಚನ್ನಕೇಶವದೇವರ ಮತ್ತು ಮುತ್ತಯ್ಯಗಳ ಯಿಯರಡು ದೇವರುಗಳಿಗೆ ಪೂಜಾರಿಹಕ್ಕನು ಸ್ತಾಪಿಸಿರುತ್ತೇವೆ. ಇನ್ನು ಬೇರೆಯವರಿಗೆ ಯಾರಿಗೂ ಅವಕಾಶವಿಲ್ಲ ಯೀ ಮೇಲ್ಕಂಡ ಶ್ರೀ ಕಂಪಳ ದೇವರ ಗುಡಿಕಟ್ಟಿನ ಅಧ್ಯಕ್ಷತೆಯಲ್ಲಿ ಪೂಜಾರಿ ಚಿತ್ರಯ್ಯವನರನ್ನು ಗುರುವು–ಮಾಡಿ ಸ್ವಾಮಿಯ

ಪೂಜಾ ಕಾರ್ಯಗಳಿಗೆ ಯೀತನನ್ನಾ ನಮ್ಮ ಅಧಿಕಾರದಿಂದ ಯಿದೇ ಗುಡಿಕಟ್ಟಿನ ಸರ್ವರು ಸೇರಿ ಪಟ್ಟವನಾ ತೀರ್ಮಾನ ಮಾಡಲಾಯ್ತಿ ಯೀವಿಚಾರದಲ್ಲಿ ಪೂಜಾರಿ ಚಿತ್ರಯ್ಯನವರಿಗೆ ಶ್ರೀ ಚನ್ನಕೇಶವ ದೇವರು ಮತ್ತು ಮುತ್ತಯ್ಯಗಳು ಯಿಯರಡಕ್ಕೆ ಪಟ್ಟದ ಪೂಜಾರಿಯಂಕ ಕೋರ್ಟು ಮುಖಾಂತರ ಡಿಕ್ರಿ ಸಹ ಯೀತನ ಹೆಸರಿಗೆ ಆಗಿರುತ್ತದೆ. ಇದಕ್ಕೆ ಸಹ ನಾವು ವಪ್ಪಿ ಕೊಂಡು ಯಲ್ಲಂ ಕಾರ್ಯಗಳಿಗೆ ಭಾಗಿಗಳಾಗಿ ಪೂಜಾರಿಯನ್ನು ಕಾಯಂನಿಂದ ಪಟ್ಟಕಟ್ಟಿ ಯಾವ ತೊಂದರೆಯಿಲ್ಲದೇ ದೇವತಾರ್ಚನೆಗಳು ಸಾಂಗವಾಗಿ ಯೀತನಿಂದ ಏಳುಮಂದಿ ಗುರುಹಿರಿಯರು ಕುಲಸಾವಿರದವರು ಯಾವ ತಂಟೆ ತಕರಾರುಬಾರದಂತೆ ಸದರಿ ಪೂಜಾರಿ ಚಿತ್ರಯ್ಯನವರು ಯಿಲಾಗಾಯ್ತಿನಿಂದ ಯಾವ ತೊಂದರೆಗಳಿಗೆ ಹೋಗದಂತೆ ಸ್ವಾಮಿಯ ಕಾರ್ಯ ಕಲಾಪಗಳು ಮಾಡಿಕೊಂಡು ಹೋಗಬೇಕಾಗಿ ನಮ್ಮಗಳ ತಿರ್ಮಾನ.

ಶ್ರೀ ಕಂಪಳದೇವರ ಗುಡಿಕಟ್ಟಿನ ಗುರುಹಿರಿಯರವರು

೧. ಯಜಮಾನ ದಗಮು ಓಬಯ್ಯ

೨. ಪೂಜಾರಿ ಓಬಯ್ಯ

೩. ನಗರದ ಓಬಯ್ಯ

೪. ಯತ್ತಿನ ಕಿಲಾರಿ ಸಣ್ಣಬೋರಯ್ಯ

೫. ಯಜಮಾನ ಪಾಲಯ್ಯ

೬. ಬೋರಯ್ಯ

ಶ್ರೀ ನಲಗೇತಲಹಟ್ಟಿ ಗುಡಿಕಟ್ಟಿನ ಗುರುಹಿರಿಯರವರು

೧. ಯಜಮಾನ ನಲ್ಲನ ಬೋರಯ್ಯ

೨. ಪುರ್ರನ್ನ ಓಬಯ್ಯ

೩. ಕಂಪಲಿ ಬೋರಯ್ಯ

೪. ಮೂಗನ ದಾಸಯ್ಯ

೫. ದೊಡ್ಡ ಗೌಡ್ರ ಬೋರಯ್ಯ

೬. ಬುಡುಗಿ ಭಮ್ಮಯ್ಯ

೭. ಗುಪ್ನ ಬೋರಯ್ಯ

ಶ್ರೀ ಗೊನೂರು ಕಟ್ಟೆಮನೆ ಮುಖ್ಯಸ್ಥರು

೧. ಸೂರಪ್ಪನಾಯ್ಕ

೨. ಬೋಸನಾಯ್ಕ

೩. ಪಾಲಯ್ಯ

ಶ್ರೀ ನನ್ನಿವಾಳ ಕಟ್ಟೆಮನೆ ಯಜಮಾನರು ಗುರುಹಿರಿಯರು

೧. ಚಿನ್ನ ಪಾಲನಾಯ್ಕ

೨. ಬಂಗಾರು ದೇವರಪೂಜಾರಿ ಓಬಯ್ಯ

೩. ಯಜಮಾನ ಬೋರಯ್ಯ

೪. ಗುಡ್ಡರ ಚೆನ್ನಯ್ಯ[೨೪]

ಹೀಗೆಯೇ ದೇವಸ್ಥಾನದ ಪೂಜಾರಿಕೆ ಪಟ್ಟಕ್ಕೆ ಸಂಬಂಧಿಸಿದ ಮಾಹಿತಿಯನ್ನು ಈ ದಾಖಲೆ ಒಳಗೊಂಡಿರುವುದನ್ನು ನೋಡಬಹುದು.

ಭರಮಣ್ಣ ನಾಯಕನ ಸಮರ ವಿಜಯ

"ಶ್ರೀ ಗಿರಿಜೆ ರಮಣ ಸಂಪಿಗೆ ಸಿದ್ಧರಂಗಯ್ಯ ।
ಯೋಗೀಶ ಮಾರಗೀ ಯೋಗಿಂದ್ರ ವರದಿ ॥
ಹೊರಪೇಟೆ ಹನುಮನಾ । ದಯ ಸುಪ್ರಸನ್ನ ।
ದಾನದೊಳು ಕರ್ಣ ಶ್ರೀ । ಪೂರ್ಣ ಗುಣರನ್ನ ॥೧॥
ಭುವನದೊಳು ಚಿನ್ಮೂಲ । ರಾಜಧಾನಿಯೊಳು ।
ಯುವರಾಜ ಸ್ಥಿರಪಟ್ಟ ಭದ್ರಾ ।
ಕರುಣಾ ಸಮುದ್ರ ಪರ ಸೈನ್ಯ ಛಿದ್ರ ॥೨॥
ಹಿರಿಯೂರು ತೇರುಮ । ಲೋಶ್ವರನ ಕರುಣವನು ।
ಹರುಷದಲಿ ನೆರೆ ಮುನ್ನ ಪಡದೆ ।
ಸಂತೋಷವಿಡಿದೆ ಸತ್ಕೀರ್ತಿ ಪಡದೆ । ॥೩॥
ಶರಧಿ ಮಧ್ಯದಲಿ ಚಂ । ದಿರನುದಿಸಿದಂದದಲಿ ।
ವರಕಾಮಗೇತಿ ವಂಶದಲಿ ಪುಟ್ಟಿ ।
ಸೌಖ್ಯದಲಿ ಬಾಳುವ ಕೃಪಾಳು ॥೪॥
ವೀರ ಮದಕರಿಯ ಸುಕುಮಾರ ಬಿಚ್ಚುಫಿರಂಗಿ ।
ಭಾರಿ ನಿಗಳಾಂತ ಬಲವಂತಾ ।
ಬಾಳು ಸಿರಿವಂತಾ ಭಲರೆ ನಿಶ್ಚಿಂತಾ ॥ ॥೫॥
ದಿಕ್ಕಿನೊಳು ಹೆಸರಾದ । ಮುಕ್ಕಣ್ಣ ಭಲ್ಲೆಯರ ।
ಕಕ್ಕಸರ ಮೊನೆಗಾರ ।

ಬಿರಿದಾಂತ ಶೂರ ಮನ್ನೆಯವಜೀರ" ॥೬॥[೨೫]

ಹೀಗೆಯೇ ಇದು ಮುಂದುವರೆಯುತ್ತ ಹೋಗುವುದನ್ನು ನೋಡಬಹುದಾಗಿದೆ.

ಭರಮಣ್ಣ ನಾಯಕನ ಸಮರ ವಿಜಯವನ್ನು ವಿವರಿಸುವ ಈ ಪ್ರತಿಯು ಚಿನ್ನದ ಮನೆಯವರು ಬರೆದಿರುವ ಚಿತ್ರದುರ್ಗ ಪಾಳೇಗಾರರ ಚರಿತ್ರೆಯಲ್ಲಿ ದೊರೆತಿರುವುದಾಗಿ ತಿಳಿದು ಬಂದಿದೆ. ಇದರಲ್ಲಿ ಕವಿಯ ಹೆಸರು ಇಲ್ಲ ಹಾಗೂ ಇತರೆ ಯಾವ ವಿಷಯಗಳ ಬಗ್ಗೆ ಆಗಲಿ ಮಾಹಿತಿಯು ದೊರೆಯುವುದಿಲ್ಲ. ಹಾಗೆಯೇ ಈ ರಾಜನ ಪೂರ್ಣಚರಿತ್ರೆಯನ್ನು ಇದರಲ್ಲಿ ವಿವರಿಸಿಲ್ಲ. ಹಾಗಾಗಿ ಇದು ರಾಜನ ಕಾಲದಲ್ಲಿಯೇ ಈ ಸಮರ ವಿಜಯವನ್ನು ಬರೆದಿರುವಂತೆ ಕಂಡುಬರುತ್ತದೆ ಎಂದು ಹುಲ್ಲೂರು ಶ್ರೀನಿವಾಸ ಜೋಯಿಸರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇವರಿಗೆ ದೊರೆತ ಪ್ರತಿಯಲ್ಲಿ ಅನೇಕ ಲೋಪದೋಷಗಳಿದ್ದವು; ಅವುಗಳನ್ನು ಸಾಧ್ಯವಾದಷ್ಟು ಸರಿಪಡಿಸಿದ್ದೇನೆ. ಎಂದು ಹೇಳಿಕೊಂಡಿದ್ದಾರೆ. ಭರಮಣ್ಣ ನಾಯಕನು ಚಿತ್ರದುರ್ಗದಲ್ಲಿ ಆಳಿದ ಪಾಳೆಯಗಾರರಲ್ಲಿ ಪ್ರಭಾವಶಾಲಿಯಾದ ದೊರೆಯಾಗಿದ್ದಾನೆ. ಚಿನ್ಮೂಲಾದ್ರಿ ಬೃಹನ್ಮಠದ ಸ್ಥಾಪಕರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮಿಗಳವರ ವರದಿಂದ ಇವನಿಗೆ ರಾಜ್ಯ ದೊರೆಯುತ್ತದೆ. ಭರಮಣ್ಣ ನಾಯಕನು ಮಹಾಶೂರ ಸ್ವಬಾಹು ಬಲದಿಂದ ಎಲ್ಲರನ್ನು ಎದುರಿಸಿ ಸಮರಮಾರ್ತಾಂಡನೆನಿಸಿ ತನ್ನ ರಾಜ್ಯವನ್ನು ವಿಸ್ತರಿಸಿದನು. ಹೀಗೆಯೇ ಇವನ ಶೌರ್ಯ ಪರಾಕ್ರಮಗಳ ಬಗ್ಗೆ ಮಾಹಿತಿಯನ್ನು ಭರಮಣ್ಣ ನಾಯಕನ ಸಮರ ವಿಜಯವು ತಿಳಿಸಿಕೊಡುತ್ತದೆ.

ಹಿರೇ ಮದಕರಿ ನಾಯಕನ ತಾರಾವಳಿ

"ಶ್ರೀ ವಿಜಯ ವೀರ ಮದಕರೀ ರಾಜೇಂದ್ರ ।
ಕಾಮಗೇತಿಯ ಅರಸೆ ನಿಜಗುಣ ಸಾಂದ್ರ ।
ಝುಗಝುಗಿಪ ರತ್ನ ಪೀಠದ ಸದರಿನಲ್ಲಿ ।
ಮೃಗಧರನ ಪ್ರಿಬಿಂಬ ಇಂಬು ರೂಪಿನಲ್ಲಿ ।
ಅಘಹರನ ಮುರಿಗೆ ಶಾಂತನ ಕರುಣದಲ್ಲಿ ।
ನಗೆ ಮುಖದ ಜಾಣ ಕುಳಿತಿಹ ಸದರಿನಲ್ಲಿ ॥೧॥
ಮಿಸುನಿ ಕಾಂತಿಯಲ್ಲಿ ಎಸೆವ ಕಂದರವು
ಹೊಸ ಮುತ್ತು ಪವಳ ರಂಜಿಸುವ ದಶನಗಳು ।
ಎಸೆವ ಕಿರು ಬೆಳಲಿಟ್ಟ ಮುದ್ರೆಯುಂಗರವು
ಹಸನಾದ ಬಿಡಿಮುತ್ತಿನೊಂಟ ಸಂಭ್ರಮವು ॥೨॥
ಅಚ್ಚ ಬಿಳಿಯ ಪಟ್ಟಿ ಹಚ್ಚಡವ ಹೊದ್ದಿದ್ದಾ ।

ಗಚ್ಚು ಚಿನ್ನದ ಕಂಬಿಪಾಗು ಸುತ್ತಿದ್ದಾ ।
ಮುತ್ತಿನಾ ತುರಾಯದ ಸರ ಇಳಿಯ ಬಿಟ್ಟಿದ್ದು ।
ಗತ್ತಿನಾ ಸದರಿನಲ್ಲಿ ಸುಖದಿ ಕುಳಿತಿದ್ದ" ॥೩॥[೨೬]

ಹೀಗೆ ಪದ್ಯ ಮುಂದುವರಿಯುವುದನ್ನು ಗಮನಿಸಬಹುದು. ಚಿತ್ರದುರ್ಗದ ಪಾಳೇಗಾರರಲ್ಲಿ ಹಿರೇಮದಕರಿ ನಾಯಕನು ಹೆಸರಾದ ದೊರೆ. ಇವನು ಕ್ರಿ.ಶ. ೧೭೨೧ರಿಂದ ೧೭೪೮ರವರೆಗೆ ಸುಮಾರು ೨೭ ವರ್ಷ ರಾಜ್ಯಭಾರ ಮಾಡಿರುವುದಾಗಿ ತಿಳಿದು ಬರುತ್ತದೆ. ಮದಕರಿಯು ಮಹಾಶೂರ ಮತ್ತು ಉದಾರಿ. ಧುರವಿಜಯ ಆಹವ ವಿಕ್ರಮಾರ್ಕ ದಾನರಾಧೇಯ, ದೀನಬಂಧು ಮೊದಲಾದವು ಈ ರಾಜನಿಗೆ ಇದ್ದ ಬಿರುದುಗಳು ತಾರಾವಳಿ, ಕೋಲುಪದ, ದಂಡಕ, ಲಾವಣಿ ಮೊದಲಾದ ಕವಿತ್ವಗಳನ್ನು ರಚಿಸಿದ. ಅನೇಕ ಕವಿಗಳು ಈ ರಾಜನ ಕೀರ್ತಿಯನ್ನು ಹಾಡಿದ್ದಾರೆ. ಈ ರಾಜನ ವಿಷಯವಾದ ಕೆಲವು ಜಾನಪದ ಸಾಹಿತ್ಯದ ಹಾಡುಗಳು ಸಹ ದೊರೆತಿವೆ. ಕವಿಗಳ ಹೆಸರಾಗಲಿ, ಅವರ ಜೀವನ ಚರಿತ್ರೆಗಳಾಗಲಿ ತಿಳಿದು ಬಂದಿಲ್ಲ. ಕ್ರಿ.ಶ. ೧೬೬೨ನೆಯ ರೌದ್ರಿ ಸಂವತ್ಸರದಲ್ಲಿ ನಡೆದ ಹಿರಿಯ ಮಗ ಕಸ್ತೂರಿ ರಂಗಪ್ಪ ನಾಯಕನ ಯುವರಾಜ್ಯಾಭಿಷೇಕ ಫತೇಹಜಂಗನ ಭೇಟಿ ಮತ್ತು ಸಂತೆಬೆನ್ನೂರು ವಿಜಯ ಎಂಬ ಮೂರು ವಿಷಯಗಳು ಈ ತಾರಾವಳಿಯಲ್ಲಿ ಉಕ್ತವಾಗಿವೆ.

ಮದಕರಿ ರಾಜೇಂದ್ರ ದಂಡಕ : ಈ ಕೃತಿಯಲ್ಲಿ ಕೃತಿಕಾರ ತನ್ನ ಹೆಸರನ್ನು ಕೃತಿಯ ಕೊನೆಯಲ್ಲಿ ಚಂದ್ರಭಿಮಾಖ್ಯ ವಿದ್ವತ್ಕವೀಂದ್ರ ಎಂದು ಹೇಳಿಕೊಂಡಿರುವನು. ಇದನು ಬಿಟ್ಟರೆ ಕವಿಯ ಕಾಲ ದೇಶ ಕುಲಗೋತ್ರಗಳ ವಿಷಯದಲ್ಲಿ ಗ್ರಂಥದಲ್ಲಿ ಏನೂ ದೊರೆಯುವುದಿಲ್ಲ. ಗ್ರಂಥದ ಆರಂಭದಲ್ಲಿ ಈಶ್ವರನನ್ನು ಸ್ತುತಿಸಿರುವುದರಿಂದಲೂ, ಮಧ್ಯಭಾಗದಲ್ಲಿ ಚಿತ್ರದುರ್ಗ ಬೆಟ್ಟದ ಮೇಲಿರುವ ಭೂತನಾಥೇಶ್ವರ ಅಂದರೆ ಹಿಡಿಂಬೇಶ್ವರನಿಗೆ ಪ್ರಾಧಾನ್ಯತೆ ಕೊಟ್ಟಿರುವುದರಿಂದಲೂ ಶಿವಭಕ್ತನೆಂದು ಹೇಳಬಹುದು. ಚಿತ್ರದುರ್ಗದ ಪಾಳೆಯಗಾರರ ವಂಶಸ್ಥರಾದ ಶ್ರೀಮಾನ್ ಬಿಚ್ಚುಗತ್ತಿ ದೊಡ್ಡ ಮದಕರಿನಾಯಕರು ತಾವು ಬರೆದಿರುವ ಕೈಬರಹದ ಪುಸ್ತಕದಲ್ಲಿ ಪೀಠಿಕೆ ರೂಪವಾಗಿ ಬರೆದಿರುವುದನ್ನು ಇಲ್ಲಿ ನಾವು ಕಾಣಬಹುದಾಗಿದೆ. "ಚಿತ್ರದುರ್ಗದ ಸಂಸ್ಥಾನವನ್ನು ಶಾಲಿವಾಹನ ಶಕ ೧೭೦೦ನೆಯ ವಿಳಂಬಿ ಸಂವತ್ಸರದವರೆಗೆ ದೌಲತ್ತು ಮಾಡಿದ ಶ್ರೀಮರ್ಾ ಮಹಾನಾಯಕಾಚಾರ್ಯ ನಾಯಕ ಶಿರೋಮಣಿ ಕಾಮಗೇತಿ ಕಸ್ತೂರಿ ಹಗಲು ಕಗ್ಗೊಲ್ಲ ಮಾನ್ಯ ಗಂಡು ಗೊಡಲಿಯ ಸರ್ಜಾ ಗಾಧುರಿಮಲೆ ಹೆಬ್ಬುಲಿ ಚಂದ್ರಗಾವಿ ಛಲದಾಂಕ್ಯ, ಧೂಳ್ ಕೋಟೆ ವಜೀರ ರಾಜಾ ವೀರಮದಕರಿ ನಾಯಕರ ದಂಡಕ."[೨೭]

ಚಿತ್ರದುರ್ಗವನ್ನು ಆಳಿದ ಪಾಳೆಯಗಾರರಲ್ಲಿ ಕೊನೆಯವನಾದ ವೀರ ಮದಕರಿ ಭೂಪಾಲನ ಆಶ್ರಿತನಾದ ಚಂದ್ರ ಭೀಮಕವಿಯು ಮದಕರಿರಾಜೇಂದ್ರದಂಡಕ ಎಂಬ ಗ್ರಂಥವನ್ನು ಬರೆದಿದ್ದಾನೆ.

ಈ ಕೃತಿಯು ಚಿತ್ರದುರ್ಗದ ಪಾಳೆಯಗಾರರಲ್ಲಿ ಕೊನೆಯ ದೊರೆಯಾದ ವೀರಮದಕರಿಯ ಚರಿತ್ರೆಯನ್ನು ಈ ದಂಡಕದಿಂದ ತಿಳಿದುಕೊಳ್ಳಬಹುದು.

ಉಪ್ಪಾರ ತಿಮ್ಮಣ್ಣ ಚಿತ್ರದುರ್ಗದಲ್ಲಿದ್ದ ಉಪ್ಪಾರ ಕುಲದ ಯಜಮಾನರಿಗೆ ಬರೆದ ಕಾಗದದ ವಕ್ಕಣಿ ಅದು ಏನೆಂದರೆ, “ರಾಯದುರ್ಗದ ಶೀಮೆಯಲ್ಲಿರುವ ಉಪ್ಪಾರ ಕುಲದ ಯಾವತ್ತೂ ಜನರು ಚಿತ್ರಕಲ್ಲುದುರ್ಗದಲ್ಲಿರುವ ಕುಲಸ್ತರಿಗೆ ಮಾಡುವ ಶರಣಾರ್ತಿಗಳು ನಮ್ಮ ಸೀಮೆಯ ಮುನ್ನೂರು ಜನ ಉಪ್ಪಾರರೂ ೩೦೦ ಕೋಣಗಳೂ ನಿಮ್ಮ ಅರಸರ ಬಳಿ ಸೇಶಿ ಸಿಕ್ಕಿರುವರು ಪರದೇಶದಲ್ಲಿ ಸಿಕ್ಕಿರುವವರನ್ನು ಬಿಡಿಸಲಾರದೇ ನಾವು ಮಾನಹಾನಿಯಿಂದ ಬಾಳುತ್ತಾ ಇರುತ್ತೇವೆ. ಅವರ ಕುಟುಂಬದವರ ಚಿಂತೆಯು ಅಧಿಕವಾಗಿತ್ತಿದೆ. ಈ ಕಾಗದವನ್ನು ನೀವು ಪರಾಂಬರಿಸಿ ಉಪ್ಪಾರ ಕುಲದವರೆಂಬ ಅಭಿಮಾನವಿಟ್ಟು ಸೆರೆಬಿದ್ದವರನ್ನು ಬಿಡಿಸಿ. ಪುಣ್ಯವನ್ನು ಕೀರ್ತಿಯನ್ನು ಹೊಂದುವುದು ನಿಮ್ಮಿಂದ ನಮ್ಮ ಮಾನವು ಉಳಿಯುವುದೆಂದು ನಂಬಿರುವೆವು.”[೨೮]

ಈ ರೀತಿ ಕಾಗದವನ್ನು ಬರೆದು ಧೀರನೂ ನಂಬಿಗಸ್ಥನೂ ಆದ ಒಬ್ಬ ಉಪ್ಪಾರನ ಸಂಗಡ ಚಿತ್ರದುರ್ಗಕ್ಕೆ ರಾಯದುರ್ಗದ ಉಪ್ಪಾರರ ಯಜಮಾನರು ಕಳುಹಿಸಿಕೊಟ್ಟರು. ಈ ಕಾಗದವನ್ನು ಚಿತ್ರದುರ್ಗದ ಉಪ್ಪಾರ ಕುಲದವರು ನೋಡಿಕೊಂಡ ತಮ್ಮಿಂದ ಆಗದ ಕೆಲಸವೆಂದು ಹೇಳಿದರು. ಆದರೂ ಉಪ್ಪಾರ ತಿಮ್ಮಣ್ಣನನ್ನು ಕಾಣುವುದು ಯುಕ್ತವೆಂದು ತಿಳಿಸಿದರು. ತಿಮ್ಮಣ್ಣನು ಕಾಗದವನ್ನು ಓದಿಕೊಂಡು ಅದರ ಅಭಿಪ್ರಾಯವನ್ನು ಅರಿತವನಾಗಿ ಸೆರೆಸಿಕ್ಕಿರುವವರನ್ನು ಸೆರೆಯಿಂದ ಬಿಡಿಸುವುದಾಗಿ ನಿಶ್ಚಯಿಸಿದನು.

“ಉಪ್ಪಾರ ಕುಲವನ್ನೇ ಉದ್ಧಾರಮಾಡಿ ಉಪ್ಪಾರರ ಮಾನವನ್ನು ಕಾಪಾಡಿದ ತಿಮ್ಮಣ್ಣನೆ. ಇಂದಿನಿಂದ ಸಗರ ಕುಲಕ್ಕೆ ಯಜಮಾನನಾಗಿರುವನು. ಸಗರ ಕುಲದ ಗೌಡಿಕೆ ಈತನಿಗೆ ಸಲ್ಲುವುದು. ಚನ್ನಿಗರಾಯನನ್ನು ಈತನೇ ಪ್ರತಿಷ್ಠೆ ಮಾಡಲು ಅರ್ಹನು” ಎಂದು ನಿರ್ಧರಿಸಿದರು.”[೨೯]

ಈ ದಾನ ಪತ್ರವು ಹುಟ್ಟಿ ಮೂನ್ನೂರೈವತ್ತು ವರ್ಷಗಳ ಮೇಲಾಯಿತು. ಉಪ್ಪಾರರೆಲ್ಲಾ ಈ ದಾನ ಪತ್ರದಂತೆ ಈಗಲೂ ನಡೆದುಕೊಳ್ಳುತ್ತಿದ್ದಾರೆ.

* ಚನ್ನಬಸವಣ್ಣ ಚಿತ್ರದುರ್ಗದ ಪಾಳೆಯಗಾರನಾದ ವೀರ ಮದಕರಿ ರಾಜೇಂದ್ರನು ಕೂಲಹಳ್ಳಿಯನ್ನು ಮುತ್ತಿದ್ದ ಹರಪನಹಳ್ಳಿ ಪಾಳೆಯಗಾರ ರಾಮದುರ್ಗದ ಪಾಳೆಯಗಾರ ಮತ್ತು ಸವಣೂರಿನ ನವಾಬರನ್ನು ಸೋಲಿಸಿದ ವಿಷಯವಾಗಿ ಲಾವಣಿಯನ್ನು ರಚಿಸಿರುವನು. ಹೈದರಾಲಿಗೆ ಸೆರೆಹೋದ ವಿಷಯದ ಏಳಪ್ಪ ಮೆದಕೇರಣ್ಣ ಎಷ್ಟೊತ್ತು ಮಲಗಿದ್ದೆ ಎಂಬ ಕೋಲುಪದವನ್ನು ರಚಿಸಿರುವನು ಇದರಲ್ಲಿ ೧೫ ಪದಗಳು ಮಾತ್ರ ಇವೆ. ತನ್ನ ಹೆಸರನ್ನು ಕೊನೆಯ ಪದದಲ್ಲಿ ಹೇಳಿಕೊಂಡಿರುವನು.

“ಮುದ್ರಿಕಿಲ್ಲದ ಪದ ಮೂವತ್ತು ಕೇಳಿದರೆ ।
ಮಗ್ಗಲೂರ ಚೆನ್ನಬಸವಣ್ಣ ಕೋಲು ॥

ಮಗ್ಗಲೂರಾನೆ ಚೆನ್ನಬಸವಣ್ಣ ಹೇಳಿದ ।

ಪದ ನಾಡಮೇಗೆಲ್ಲ ಹರಿದಾವು" ॥ಕೋಲು॥[೩೦]

ಇದು ಚಿತ್ರದುರ್ಗವು ಪತನವಾದ ನಂತರ ರಚಿತವಾಗಿರಬೇಕು. ಕಾಲ ಸುಮಾರು ಕ್ರಿ.ಶ. ೧೭೮೨ ಎಂದು ತಿಳಿದು ಬಂದಿದೆ.

ದೊಡ್ಡೇರಿ ಕಾಳಗದ ಲಾವಣಿ

"ಖಾಶೀಂಖಾನ ಶಂಕರನಾರಾಯಣ ಕಂಚಿಯಲಿಬ್ಬರೂ ಭೇಟಿ ಆಗಿ ।

ಹಗೆಯವನ ಮೇಲೆ ಹಣವಿಗೆ ಹೋಗುತ್ತೇನೆ । ಪಗದೀಗೆ ಹೋಗುತ್ತೇನೆ ।

ದುರ್ಗದ ವಜೀರನ ದಾರಿಬಿಡೆಂದು ॥೧॥

ದಾರಿಬಿಡಲೀಕೆ ನೀ ಯಾವೂರ ಧೊರೆಯೊ ।

ನೀ ಎಂತೂರ ಧೊರೆಯೋ ।

ಮುಂದಕ್ಕೆ ಹೋದರೆ ಆಣಿ । ಇಳಿಸೆಂದ ದಂಡಾ ॥೨॥

ಹೊತ್ತು ಮುಳಿಗಿದಾ ವಂಭತ್ತು ಗಳಿಗ್ಯಾಗೆ ।

ಹನ್ನೊಂದು ಗಳಿಗ್ಯಾಗೆ ।

ತಕ್ಕೋಬೇಕಂತೆ ಗಾರೆಬಾಗಿಲ ತನಕ ॥೩॥

ಇಂತಪ್ಪ ಸುದ್ದಿಯನು ಗುಂಟನುರು ಮಲ್ಲಪ್ಪ ಕೇಳಿ ಬೆಂಕಿ ಭರಮೇಂದ್ರಗೆ । ಓಲೆಯ ಬರದಾ ॥೪॥

ಬಂದಂಥ ಓಲೆಯನು ಕುಂತೊಮ್ಮೆ ಓದಸಿದ

ನಿಂತೊಮ್ಮೆ ಓದಿಸಿದ ।

ಐಯ್ಯಯ್ಯೋ ಧಗಡಿನೀ ಹೊಕ್ಕಲ್ಲಿ ಬಿಡೆನೋ"[೩೧]

ಹೀಗೆಯೇ ದೊಡ್ಡೇರಿ ಕದನವು ಚಿತ್ರದುರ್ಗ ಚರಿತ್ರೆಯ ರೋಚಕ ಅಧ್ಯಾಯ ಎನ್ನುವುದರಲ್ಲಿ ಅನುಮಾನವಿಲ್ಲ. ಈ ಕದನ ನಡೆದುದು ಮರಾಠಾ ಮತ್ತು ಚಿತ್ರದುರ್ಗದ ಸಂಯುಕ್ತ ಪಡೆ ಹಾಗೂ ಮೊಗಲರ ಮಧ್ಯೆ. ದೊಡ್ಡೇರಿ ಕದನಕ್ಕೆ ಸಂಬಂಧಿಸಿದ ವಿವರಗಳು ದೊರೆಯುವುದು ಫಾರ್ಸೀಕೃತಿಗಳು ಮರಾಠಿ ದಾಖಲೆಗಳು ಹಾಗೂ ಚಿತ್ರದುರ್ಗ ನಾಯಕ ಅರಸರ ವಂಶಾವಳಿಗಳಿಂದ ಹಾಗೂ ಮುಖ್ಯವಾಗಿ ಈ ಕದನವನ್ನು ಪ್ರತ್ಯೇಕವಾಗಿ ವರ್ಣಿಸುವ ಹಾಗೂ ಕನ್ನಡದಲ್ಲಿರುವ ದೊಡ್ಡೇರಿಯ ಕಾಳಗ ಎಂಬ ಜನಪದ ಕಥನ ಗೀತೆಯಿಂದ ಈ ಕಥನ ಗೀತೆಯನ್ನು ಸಂಗ್ರಹಿಸಿದವರು ಇದನ್ನು 'ಲಾವಣಿ'ಯೆಂತಲೂ ಕರೆದಿದ್ದಾರೆ.

ದೊಡ್ಡೇರಿಯ ಕಾಳಗ ಜನಪದ ಕಥನಗೀತೆ ಅಥವಾ ಲಾವಣಿಯನ್ನು ಮೊದಲಿಗೆ ಗಮನಿಸಿದವರು ಚಿತ್ರದುರ್ಗದ ಸಂಶೋಧಕ ಹುಲ್ಲೂರು ಶ್ರೀನಿವಾಸ ಜೋಯಿಸರು. ಪ್ರಸಿದ್ಧ ಇತಿಹಾಸಕಾರ ಜಿ.ಎಸ್. ದೀಕ್ಷಿತ್ ಮತ್ತು ಜೋಯಿಸರು ಇಬ್ಬರು ಒಟ್ಟಿಗೆ ೧೯೫೦ಳರಲ್ಲಿ ದೊಡ್ಡೇರಿಯಲ್ಲಿ ಈ ಕಥನ ಗೀತೆಯನ್ನು ಸಂಗ್ರಹಿಸಿದರು. ದೊಡ್ಡೇರಿಯ ಕಾಳಗ ಕಥನ ಗೀತೆಯನ್ನು ಪ್ರಕಟಿಸುವುದರೊಡನೆ ಚಿತ್ರದುರ್ಗ ನಾಯಕರ ಚರಿತ್ರೆ ಅಧ್ಯಯನಕ್ಕೆ ಮತ್ತಷ್ಟು ವಿಸ್ತಾರವನ್ನು ಒದಗಿಸಿಕೊಟ್ಟಿದ್ದಾರೆ. ದೀಕ್ಷಿತ್ ಚಿತ್ರದುರ್ಗ ನಾಯಕ ಅರಸರ ಚರಿತ್ರೆಗೆ ಸಂಬಂಧಿಸಿದ ಪ್ರಕಟಿತ ಆಕರಗಳ ಸಾಲಿಗೆ ಇವರು ಪ್ರಕಟಿಸಿದ ಪ್ರಸ್ತುತ ಕಥನ ಗೀತೆಯೊಂದು ಹೊಸ ಸೇರ್ಪಡೆಯಾಗಿದೆ. ಈ ಕದನಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ನಾಯಕ ಅರಸರ ವಂಶಾವಳಿಗಳಲ್ಲಿಯ ಮಾಹಿತಿಗಿಂತ ಹೆಚ್ಚಿನ ಮಾಹಿತಿಯನ್ನು ಈ ಕಥನಗೀತೆ ಒಳಗೊಂಡಿದೆ.

ಎಪ್ಪತ್ತೇಳು ಪಾಳೆಯಗಾರರು : ಕುಮಾರರಾಮನ ಸಮಕಾಲೀನನೆನಿಸಿದವನು ಹುಂಡಿ ಹೆತ್ತನಾಯಕ ಕುಂಚಿಟಿಗರ ಕುಲದ ಹಿರಿಯ. ಈತನ ಕುಲದವರ ವಿವರ ಸಮಕಾಲೀನ ರಾಜಕೀಯ, ಘಟನೆ, ಇತ್ಯಾದಿ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕು ನಂದನ ಹೊಸೂರಿನಲ್ಲಿ ದೊರೆತ ಕ್ರಿ.ಶ. ೧೩೩೨ರ ತಾಮ್ರಪಟಗಳಲ್ಲಿ ಪ್ರಸ್ತಾಪಗೊಂಡಿದೆ ಎಂದು ಸಂಶೋಧಕರಾದ ಲಕ್ಷ್ಮಣ ತೆಲಗಾವಿಯವರು ತಿಳಿಸಿದ್ದಾರೆ.

ಕರ್ನಾಟಕದ ನಾಯಕ ಅರಸರಲ್ಲಿ ಅಗ್ರಗಣ್ಯ ಸ್ಥಾನದಲ್ಲಿರುವವರು ಚಿತ್ರದುರ್ಗದ ನಾಯಕರು. ಇವರಲ್ಲೆಲ್ಲ ಅತ್ಯಂತ ಪ್ರಸಿದ್ಧನಾದವನೆಂದರೆ ಸಂಸ್ಥಾನದ ಕೊನೆಯ ಅರಸ ರಾಜಾವೀರ ಮದಕರಿನಾಯಕ ಈ ದೊರೆಯನ್ನು ಕುರಿತು "ಚಂದ್ರಭೀಮನೆಂಬುವನು ತಾನು ರಚಿಸಿದ ದಂಡಕದಲ್ಲಿ ಗೋಲ ಕೊಂಡೆ । ವಿಜಾಪುರ । ಕಲ್ಯಾಣ । ಕಲ್ಬುರ್ಗಿ । ಸ್ವಣೂರು । ಗದ್ವಾಲ । ಕರ್ನೂಲು । ಶ್ರೀರಂಗ ಪಟ್ಟಣ್ಣಂಬು ಮೊದಲೈವ ಡಬ್ಬೈಯೇಡಿಂಟಿ ಪಾಳ್ಯಂಬುನಾನೀದೇ ಪೇರಯ್ಯ ಎಂದು ಹೊಗಳಿರುವನು. ತನ್ನ ಸಮಕಾಲೀನ ೭೭ ಪಾಳೆಯ ಪಟ್ಟುಗಳೆಲ್ಲೆಲ್ಲ ಈ ದೊರೆಯು ಕೀರ್ತಿವಂತನಾಗಿದ್ದಾನಂತೆ."[೨] ಈ ನಾಯಕನನ್ನು ಕುರಿತು ಜನಪದ ಗೀತೆಯೊಂದರಲ್ಲಿ ಬರುವ ಎಪ್ಪತ್ತೇಳು ಪಾಳೆಯಗಾರರ ಮಿಂಡ ಎಂಬ ಪ್ರಯೋಗವು ಇರುವುದನ್ನು ಕಾಣಬಹುದು.

ಮದಕರಿ ನಾಯಕನ ಕಾಲದ ಆಯಗಾರರ ನಿರ್ಣಯ ಗ್ರಂಥ : ಚಿತ್ರದುರ್ಗದಲ್ಲೇ ಆಳಿದ ಮದಕರಿನಾಯಕನ ಕಾಲದ ಆಯಗಾರರ ನಿರ್ಣಯ ಗ್ರಂಥ ಎಂಬ ಚಾರಿತ್ರಿಕ ದಾಖಲೆಯೊಂದನ್ನು ಪುಣೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕಾರಾದ ಡಾ. ಚಿಟ್ನೀಸ್‌ರವರ ಮಾರ್ಗದರ್ಶನದಲ್ಲಿ ಡಾ. ಹೆಚ್.ಟಿ. ದೇಶಪಾಂಡೆಯವರು ತಮ್ಮ ಚಿತ್ರದುರ್ಗ ಸ್ಟೇಟ್ ಎಂಬ ಅಪ್ರಕಟಿತ ಮಹಾಪ್ರಬಂಧದಲ್ಲಿ ತಿಳಿಸಿದ್ದಾರೆ. ಇದರಲ್ಲಿ ೧೩ ಪತ್ರಗಳು ಕನ್ನಡದಲ್ಲಿ ಇವೆ ಎಂಬ ವಿಚಾರವನ್ನು ಅವರು ತಿಳಿಸಿದ್ದಾರೆ. ಹಾಗೆಯೇ ಈ ಕೃತಿಯು ಹಳ್ಳಿಗಳ ಸ್ವಾವಲಂಬನೆಗೆ ಆಗಿನ ದೇಶಿಯ ಸಂಸ್ಥಾನಗಳು ನೀಡಿದ ಪ್ರಮುಖ ವಿವರಣೆಗಳು ಪ್ರಮುಖವಾಗಿವೆ ಎಂಬುದು ಗೊತ್ತಾಗುತ್ತದೆ. ದೇಶಿಯ

ಸಂಸ್ಥಾನಗಳಲ್ಲಿ ಮಧ್ಯಕಾಲೀನ ಕಾಲದ ಗ್ರಾಮೀಣ ಆಡಳಿತ ಇತಿಹಾಸವನ್ನು ನಿರ್ಮಿಸಲು ಪ್ರಮುಖವಾದ ಆಕರಗಳನ್ನು ಒದಗಿಸಿವೆ.

ಮುರಿಗೆ ತಾರಾವಳಿ ಕರ್ತೃ ಇಮ್ಮಡಿ ಮುರಿಗಾಗುರುಸಿದ್ಧ ಶಿವಯೋಗಿ

"॥ ಪಲ್ಲ ॥ ಬಣ್ಣಿಸಲಳವೆ ನಿಮ್ಮನು ಜಯಶೀಲ ಮು
ಕ್ಕಣ್ಣ ಮುರಿಗೆಯ ಶ್ರೀ ಶಾಂತವೀರೇಶ್ವರಿ
ಬಣ್ಣಿಸಲಳವೆ ನಿಮ್ಮ ॥
॥ ಪದ ॥ ಮುದದೊಳನಾದಿ ಭಕ್ತನ ದಿವ್ಯ ಮಂಜುಲ
ಹೃದಯ ಪಯೋರುಹಸದನದೊಳಿರುತಿರ್ದು
ನದರಿಟ್ಟು ತನ್ನೊಳುದಯವಾದ ಜಗವನು
ಪದುಳದೆ ಸಲಹಲಯೋನಿ ಸಂಭವನಾಗಿ
ವಿದಿತ ಧರೆಯೊಳಷ್ಟವ ರುಷದ ಹರೆಯದೆ
ಸರಮಲ ಗೋಸಲೇಶನ ಕರದೊಳು ಪುಟ್ಟಿ
ಬಿದಿಗೆಯ ಶಶಿಯಂತೆ ಕಳೆವೆಚ್ಚಿ ಕಡೆಯಲ್ಲಿ
ಪುದಿದ ಷಟ್ಸ್ಥಲ ಮಾರ್ಗವನು ನೆಲೆಗೊಳಿಸಲು
ಮದವಿರಹಿತ ತೋಂಟದಯ್ಯ ತಾನೆನಿಸಿ ನ
ಡೆರು ನಾಡೆ ಎಡೆಯೂರೊಳಗೆ ಲಿಂಗಮಗೆ ಮ
ತ್ತದು ಮಸುಳಿಸಿ ಬರುತಿರಲೆಂದಿನಂದದಿ
ಚಿದಚಿದ್ವಿವೇಕ ದೇಶಿಕನರುವಿನೊಳು ತಾ
ನುದಿಸುತ ಮುರಿಗೆಯ ಶಾಂತವೀರೇಶನೆಂ
ಬುದಧಿಗ ಭೀರನಾಮದೆ ಬಂದು ನಿಂದು ನಿ
ರ್ಗದನಾಗಿ ಚರಿಸುತಿರಲು ಸರ್ವಲೋಕವು
ಸದರವಲ್ಲೀತನಲ್ಲಮನೊ ದಧೀಚನೊ
ಪಡೆದ ಕುಂಭಜ ಮುನಿಯೊ । ರೇಣುಕೇಶನೊ
ಬದವಿ ಸದಾನಂದನೊ । ಸಾನಂದನೊ
ಮೊದಲಾದವರೊಳಗಾರೊ ಎಂದು ಭಾವಿಸುತಿರೆ"[೩೩]
ಹೀಗೆಯೇ ತಾರಾವಳಿ ಮುಂದುವರೆಯುತ್ತದೆ.

ಮುರಿಗೆಯ ತಾರಾವಳಿಯಲ್ಲಿ ಬರುವ ಅನೇಕ ರಾಜರುಗಳ ಉಲ್ಲೇಖ ಆಗಿನ ಕಾಲದ ರಾಜಕೀಯ ಪರಿಸ್ಥಿತಿಯ ಸ್ಥೂಲ ವಿವರವನ್ನು ನೀಡುವುದರೊಂದಿಗೆ ಅರಮನೆ-ಗುರುಮನೆಗಳ ಸಂಬಂಧವನ್ನು ತೋರ್ಪಡಿಸುತ್ತದೆ. ಶ್ರೀಗಳನ್ನು ದುರ್ಗಕ್ಕೆ ಕರೆತರುವ ವೇಳೆಗೆ ಮೂಡಣ ದಿಗಂತದಲ್ಲಿ ಅರುಣೋದಯ ಮೂಡಿತು. ಶ್ರೀ ಶಿವರೂಪನಾದ ಮಹಾಗುರುವಿನ ದರ್ಶನಕ್ಕೆಂದು ಆನಂದದಿಂದ ದುಂಬಿವಿಂಡಿರ್ಪಉತ್ತಮ ದರ್ಜೆಯ ತಾವರೆಹೂಗಳಲ್ಲಿಯೂ ಉತ್ತಮ ತರಗಳಾದ ತಾವರೆಹೂಗಳನ್ನು ಕೈಯಲ್ಲಿ ಹಿಡಿದುಕೊಂಡು ಬಂದನೇ ಎಂಬಂತೆ ಸೂರ್ಯನೂ ಸಹ ಬಾಲಕರಣಗಳನ್ನು ಪಸರಿಸುತ್ತಾ ಉದಿಸಿಬಂದನು. ಹೀಗೆ ಶ್ರೀಗುರುವನ್ನು ವರ್ಣಿಸಿರುವ ಪದ್ಯವು ಈ ರೀತಿಯಲ್ಲಿದೆ.

ಮನುರಾಜೇಂದ್ರನ ತಾರಾವಳಿ

"॥ ಪಲ್ಲ ॥ ಸ್ತುತಿ ಸಲೆನ್ನಳವೆ ನಿಮ್ಮತಿಶಯ ಮಹಿಮೆ (ಯ)
ಕ್ಷಿತಿವರ ಹಮ್ಮೀರರಾಜೇಂದ್ರ ತೇಜನೆ ॥
ಪದ॥ ಪಟ್ಟಗಲ್ಲೆಂಬ ನಗರಿಯಾಳ್ವ ದೊರೆಗಳು
ಕಟ್ಟು ಗ್ರದ ನವನಂದನರುಗಳು (೦)
ದಿಟ್ಟತನವನುಳ್ಳ ದಶ ಗುಪ್ತರಾಯರು
ಕೊಟ್ಟುದಟ್ಟುಳಿಗ ವಿಂಶತಿ ಮೌರಿರಾಯರು
ನೆಟ್ಟನೆ ಸಪ್ತವಿಂಶತಿರಾಜೇಂದ್ರರು
ಕಟ್ಟೊಂಡೆಯ ವೀಂಶ (ತಿ) ಚಾಳುಕ್ಯರಾಯರು
ಸೃಷ್ಟಿ ಪತಿಗಳವರನ್ವಯೋದ್ಧರಣರು
ಕಟ್ಟರಸು ತ್ರೈಲೋಕ್ಯ ಚೂಡಾಮಣಿರಾಯ
ಪಟ್ಟದ ರಾಣಿ ಮಹಾದೇವಿಯಮ್ಮನು
ನಿಷ್ಠೆಯಿಂ ಮಾರ್ಕಂಡ್ಯ ಪೌರಾಣವನು ಕೇಳಿ
ಶಿಷ್ಟ ಸದ್ಗತಿಯ ಸತ್ಪುತ್ರ ನಿಲ್ಲದೆ ತಾವು
ಬಟ್ಟಬಯಲಿ ಪರಶಿವನ ಧ್ಯಾನವ ಕುರಿತು
ಅಷ್ಟಾಂಗದಿಂ ಧರಣಿಯಲ್ಲಿ ಪ್ರಣತರಾಗಿ
ತುಟ್ಟ ತುದಿಯ ತೂರ್ಯಯೋಗದಿಂದಿರುತಿರೆ
ಬಟ್ಟಾಂಗಧರ ಪರಮೇಶ ತಾನಿಜದೋರಿ
ಮುಟ್ಟಿ ಧ್ಯಾನಿಪ ತ್ರೈಲೋಕ್ಯರಾಜನೆ (ನಿ)

ನ್ನಿ ಷ್ವಾರ್ಥ ವೀವೆನೆಂದು । ಪ್ರಮಥಗಣ
ಕಟ್ಟೆಸಕದಿಂದೆ ಬಂದು । ಪೂಮಳೆಗಳ
ತಿಟ್ಟನೆ ಕರೆದನಂದು । ಯೋನಿಜನಲ್ಲ
ದೃಷ್ವಳ್ಳ ಪುತ್ತನೆಂದು । ನಿನಗೆ ನಾನು
ಕೊಟ್ಟೇನು ಸತ್ಯವೆಂದು । ಎನುತೆ ಕಟ್ಟ
ಕಡೆಯಲ್ಲಿ ಬಯಲಾಗಿ ಹೊದ ಕರುಣ ಸಿಂಧು"[೩೪] ॥

ಹೀಗೇಯೇ ಮನುರಾಜೇಂದ್ರನ ತಾರಾವಳಿಯು ಮುಂದುವರಿಯುತ್ತದೆ. ಇದು ರಾಜೇಂದ್ರ ವಿಜಯ ಎಂಬ ಪರ್ಯಾಯ ನಾಮವನ್ನು ಹೊಂದಿದ ಹಮ್ಮಿರ ಕಾವ್ಯದ ವಸ್ತುವನೇ ಮನುರಾಜೇಂದ್ರ ತಾರಾವಳಿ ಒಳಗೊಂಡಿದೆ. ಅಲ್ಲಮ ಪ್ರಭುಗಳ ಗುರುಗಳಾದ ಪಟ್ಟದ ಕಲ್ಲಿನ ಅನಿಮಿಷದೇವರ ಚರಿತ್ರೆಯನ್ನು ಒಳಗೊಂಡಿದೆ.

ಚಿತ್ರದುರ್ಗದ ಒನಕೆ ಓಬವ್ವೆಯ ಘಟನೆ : ಚಾರಿತ್ರಿಕ ವಿಮರ್ಶೆ

ಇದು ಕಾಗದದ ದಾಖಲೆ; ವಂಶಾವಳಿ ಪ್ರತಿಗಳಲ್ಲಿ ಭಿನ್ನ ಸಂಪ್ರದಾಯದ್ದು ಚಿತ್ರದುರ್ಗದ ಟಿ.ಜಯಣ್ಣ ಅವರಲ್ಲಿದ್ದ ಕೈಬರಹದ ಈ ದಾಖಲೆಯ ನಕಲನ್ನು ಶ್ರೀಯುತರು ಇಲ್ಲಿ ಪ್ರಸ್ತಾಪಿಸಿದ್ದಾರೆ. "ಈ ದಾಖಲೆಯ ವೃತ್ತಾಂಶವನ್ನೇ ಹೋಲುವ ಇನ್ನೊಂದು ಹಸ್ತಪ್ರತಿಯು ಚಿತ್ರದುರ್ಗ ನಾಯಕ ಅರಸರ ಮಂತ್ರಿಯಾಗಿದ್ದ ಪರಶುರಾಮಪ್ಪನ ಸಂತತಿಗೆ ಸೇರಿದವರೆಂದು ಹೇಳಲಾದ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ನಿವಾಸಿಯಾಗಿದ್ದ ಪೊಸ್ಟ್‌ರಂಗಪ್ಪ ಅವರ ವಶದಲ್ಲಿದ್ದು ಅದರಲ್ಲಿಯ ಕೆಲ ಆಯ್ದ ಭಾಗಗಳನ್ನು ಎಂ.ವಿ. ಶ್ರೀನಿವಾಸ್ ಮತ್ತು ಎಂ.ವಿ. ಚಿತ್ರಲಿಂಗಯ್ಯ ಅವರುಗಳು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಎರಡು ಪಾಠಗಳಲ್ಲಿಯ ಓಬವ್ವೆಯನ್ನು ಕುರಿತು ವೃತ್ತಾಂತವು"[೩೫]

ಭಾಷೆಯ ವ್ಯತ್ಯಾಸದ ವಿನಾ ಉಳಿದಂತೆ ಒಂದೇ ರೀತಿಯಾಗಿದೆ ಎಂದು ತಿಳಿದು ಬಂದಿದೆ.

ಕೈಫಿಯತ್ತುಗಳು ವಿವರಿಸುವ ಚಿತ್ರದುರ್ಗದ ನಾಯಕರು :

ಮದಕರಿ ನಾಯಕ : ಚಿತ್ರದುರ್ಗದ ಅರಸು ಮಧಕೆರಿ ನಾಯಕನು ಬಂದು ಶತವರುಷ ೧೬೪೬ ನೇ ಕ್ರೋಧಿ ಸಂ\ದಲ್ಲಿ ಶೀಮೆಯನ್ನು ಕಟ್ಟಿಕೊಂಡು ರಾಯರ ಪಾದದ ಕಣಿವೆ ಆಚೆಗೆ ಯಿರುವ ಗ್ರಾಮಗಳನ್ನು ತನ್ನ ತಲ್ಲೂಕು ಹೊಳಲ ಕೆರಿಯ ಶೀಮೆಗೆ ಸೇರಿಸಿಕೊಂಡುದು ವಿವರ

೧. ತುಪ್ಪದಹಳ್ಳಿ ಗ್ರಾಮ   ೧. ತಾಳಿಕಟ ಗ್ರಾಮ
೧. ಶಿಂಗೆನಹಳ್ಳಿ ಗ್ರಾಮ   ೧. ಕಣಿವೆಹಳ್ಳಿ ಗ್ರಾಮ
೧. ಹೊಸಹಳ್ಳಿ ಗ್ರಾಮ   ೦. ಧಪಾ

ಕೈಫಿಯತ್ತುಗಳು ವಿವರಿಸಿರುವಂತೆ ಹೈದರ್ ಅಲಿ :

"೩೫ ಯೀಚೆಗೆ ಶ್ರೀರಂಗಪಟ್ಟಣದಿಂದ ದೊಡ್ಡ ವನಾಬರು ಚಿತ್ರಭಾನು ಸಂವತ್ಸರದ ಪುಷ್ಯಮಾಸದಲ್ಲೂ ನಗರವನ್ನು ತೆಗೆದು ಕೊಂಡು ಯಿವರ ಸರದಾರ ರಾಣೋಜಿಕ್ಕರ ಸಾಗರವನ್ನು ಬಂದು ಕಿಲ್ಲೆ ತೆಗೆದುಕೊಂಡುಮ್ಯಾಲೆ... ಮಾಚಿ ಕಡೆ ಮಲ್ಲಪ್ಪರಾಯ ಮಾಮಲೆ ಸಹಾ ಯಿತ್ತದು ದಿನ ಚಿತ್ರಭಾನು ಸಂವತ್ಸರದ ಆರಭ್ಯ ಸಿದ್ದಾರ್ತಿ ಸಂರದ ಚೈತ್ರ ಬ। ೩೦ರ ವರೆಗೆ ವರುಷ ೩೬ ತಿಂ ೩ಕ್ಕೆ ಮಹಾರಾಷ್ಟರ ಠಾಣಿ ವಿರೋಧಿ ಕೃತ ನ।....ಶುಧನಿಂತ ವರುಷ ೩.೫ ತಿಂ ೩"[೩೬]

ಹೀಗೆಯೇ ಕೈಫಿಯತ್ತು ಚಿತ್ರದುರ್ಗದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಚಿತ್ರದುರ್ಗದ ನಾಯಕರಲ್ಲಿ ಪ್ರಬಲನಾದವನು ಭರಮಣ್ಣ ನಾಯಕನ ಮಗ ಈತನು ಹನ್ನೆರಡು ವರ್ಷದವನಿರುವಾಗಲೇ ಸಿಂಹಾಸನವನ್ನೇರಿದ. ಈತನಿಗೆ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಮೈಸೂರಿನ ಹೈದರಾಲಿಯೂ, ಮರಾಠರೂ, ರಾಯದುರ್ಗದ ನಾಯಕರು, ಚಿತ್ರದುರ್ಗವನ್ನು ಕಬಳಿಸಲು ಕಾಯುತ್ತಿದ್ದರು. ರಾಯದುರ್ಗ, ಸವಣೂರು ಹಾಗೂ ಹರಪನಹಳ್ಳಿಯ ಸೈನ್ಯ ಒಂದಾಗಿ ಇದಿರಾದಾಗ ಮದಕರಿ ಅವರನ್ನು ಸೋಲಿಸುತ್ತಾನೆ. ಮದಕರಿ ನಾಯಕನಿಗೂ ಹೈದರ್ ಆಲಿಗೂ ಯುದ್ಧಗಳು ನಡೆಯುತ್ತವೆ. ಈ ಯುದ್ಧದಲ್ಲಿ ಮದಕರಿಗೆ ಸೋಲಾಗುತ್ತದೆ. ಚಿತ್ರದುರ್ಗ ಹೈದರ್ ಆಲಿಯ ವಶವಾಗುತ್ತದೆ. ಐದನೇ ಮದಕರಿನಾಯಕ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ೧೭೭೯ರಲ್ಲಿ ಕೊನೆಯುಸಿರೆಳೆಯುವುದರೊಂದಿಗೆ ಚಿತ್ರದುರ್ಗದ ನಾಯಕರ ವಂಶ ಕೊನೆಗಾಣುತ್ತದೆ.

ಕಾಮಗೇತಿ ವಂಶಜರ ಚರಿತ್ರೆ :

"ಚಿತ್ರದುರ್ಗ ನಾಯಕರ ವಂಶಾವಳಿ (ರೈಸ್ ಆಧಾರಿತ) (ಕರ್ನಾಟಕ ಚರಿತೆ ಸಂಪುಟ=೩)

ಕಾಮಗೇತಿ ಕಸ್ತೂರಿರಂಗನಾಯಕ ಓಬಣ್ಣ ನಾಯಕ

ತಿಮ್ಮಣ್ಣ ನಾಯಕ (೧೫೫೬–೧೫೮೩) ಚಿಕ್ಕಪ್ಪ ನಾಯಕ(೧೬೦೬)

ಮದಕೇರಿ ನಾಯಕ (೧೫೬೮–೧೫೮೧)

ರಂಗಪ್ಪ ನಾಯಕ (೧೫೭೬–೧೬೩೩)

ಮದಕರಿನಾಯಕ (೧೬–೦೯–೧೬೫೩)	ಭರಮಪ್ಪ ನಾಯಕ (೧೬೪೦–೧೬೬೩)	ಚಿಕ್ಕಣ್ಣ ನಾಯಕ (೧೬೭೮–೧೬೮೧)
ಭರಮಪ್ಪ ನಾಯಕ	ಮದಕೇರಿ ನಾಯಕ (೧೬೬೦–೧೬೮೭)	

ಮೆದಕೇರಿ ನಾಯಕ ಚಿಕ್ಕಣ್ಣನಾಯಕ

(೧೭೧೨–೧೭೩೦) (೧೭೨೧)

ರಂಗಪ್ಪ ನಾಯಕ ರಂಗಪ್ಪ ನಾಯಕ

(೧೬೯೦–೧೭೫೫)

ಮದಕೇರಿ ನಾಯಕ (೧೭೫೬–೧೭೭೯) ಮದಕೇರಿ ನಾಯಕ"[೩೭]

ಹೀಗೆಯೇ ಇವರ ಕಾಲಾನುಕ್ರಮದಲ್ಲಿ ಈ ವಂಶದವರು ಆಳ್ವಿಕೆ ನಡೆಸಿರುವುದನ್ನು ಈ ವಂಶವಳಿಯ ಮೂಲಕ ನಾವು ನೋಡಬಹುದಾಗಿದೆ.

* ತಿಮ್ಮಣ್ಣ ನಾಯಕನಕೆರೆ ಚಿತ್ರದುರ್ಗದ ಮೊದಲನೆ ಪಾಳೇಗಾರ ತಿಮ್ಮಣ್ಣ ನಾಯಕನು ಕಟ್ಟಿಸಿದ ಕೆರೆ ಎಂದು ವಂಶಾವಳಿಗಳು ಹೇಳುತ್ತವೆ. ಆದ್ದರಿಂದ ಇದು ಅವನ ಕಾಲದ್ದೇ ಎಂದು ಹೇಳಬಹುದು. ಇವನ ಕಾಲ ೧೯ನೇ ಶತಮಾನ.

* ದೊಡ್ಡಣ್ಣನ ಕೆರೆತಿಮ್ಮಣ್ಣ ನಾಯಕನ ಆಪ್ತಬಂಧುಗಳಲ್ಲಿ ಒಡನಾಡಿಗಳಲ್ಲಿ ಒಬ್ಬನೂ ಸ್ವಲ್ಪಕಾಲ ಉಚ್ಚಂಗಿದುರ್ಗದ ನಾಯಕನೂ ಆಗಿದ್ದ ದೊಡ್ಡಣ್ಣ ನಾಯಕನು ಕಟ್ಟಿಸಿದನು. ಇಲ್ಲಿಯ ಸಿತ್ತೆಕಲ್ಲು ಹಳ್ಳಕ್ಕೆ ಅಡ್ಡಗಟ್ಟೆ ಹಾಕಿಸಿ ಈ ಕೆರೆ ಕಟ್ಟಿಸಿದಂತೆ ಚಿತ್ರದುರ್ಗದ ಪಾಳೇಗಾರರ ವಂಶಾವಳಿಗಳು ತಿಳಿಸುತ್ತವೆ.

* ಮುರುಗಿ ಮಠದ ಕೆರೆಗಳು; ಚಿತ್ರದುರ್ಗದ ಪಾಳೆಯಗಾರರ ಚಾರಿತ್ರಿಕ ದಾಖಲೆಗಳ ಪ್ರಕಾರ ಇವೆರಡಕ್ಕೂ ಆ ದಾಖಲೆಗಳಲ್ಲಿ ಮುರುಗಿಮಠದ ಕೆರೆಗಳು ಎಂದು ಹೆಸರಿಸಿದ್ದಾರೆ. ಈಚಿನ ಕಾಲದ ದಾಖಲೆಗಳಲ್ಲಿ ಮಠದ ಮುಂಭಾಗದ ಕೆರೆಯನ್ನು ಅರಸಿನ ಕೆರೆ ಎಂತಲೂ, ಹಿಂಭಾಗದ ಕೆರೆಯನ್ನು ಮಠದ ಕೆರೆ ಎಂತಲೂ ಹೆಸರಿಸಿದ್ದಾರೆ.

ಚಿತ್ರದುರ್ಗ ಪಾಳೆಯಗಾರರ ಕಾಲದ ಕೆರೆಗಳು :

"ಮೊದಲನೆಯ ಪಾಳೆಯಗಾರ ತಿಮ್ಮಣ್ಣನಾಯಕನಿಂದ ಹಿಡಿದು ಕೊನೆಯ ಪಾಳೆಯಗಾರ ಮದಕರಿ ನಾಯಕನವರೆಗೆ ಅನೇಕ ನಾಯಕರು ಹಲವಾರು ಕೆರೆಗಳ ನಿರ್ಮಾಣ, ವಿಸ್ತರಣೆ ಹಾಗೂ ಜೀರ್ಣೋದ್ಧಾರಗಳನ್ನು ಮಾಡಿದ್ದಾರೆ. ಅವರ ಕಾಲದ ಈ ಕಾಮಗಾರಿಯ ಪಟ್ಟಿ ದೊಡ್ಡದು. ತಿಮ್ಮಣ್ಣನಾಯಕನು ಕಟ್ಟಿದ್ದೆನ್ನುವ ತಿಮ್ಮಣ್ಣನಾಯಕ ಕೆರೆ ಅವನು ಜೀರ್ಣೋದ್ಧಾರ ಮಾಡಿದ ಕೆರೆ ಮಾತ್ರ ಎಂಬುದನ್ನು ಗಮನಿಸಬಹುದು. ಹೊರಕೆರೆ ದೇವರಪುರದ ಬಳಿಯ ಗುಂಡಿಕೆರೆ ಮತ್ತು ಹುಲ್ಲೂರು ಗ್ರಾಮದ ಕೆರೆ ಅವನ ಮಗ ಓಬಣ್ಣನಾಯಕ ಅರ್ಥಾತ್ ೧ನೆಯ ಮೆದಕರಿನಾಯಕನ ಕೊಡುಗೆಗಳೆಂದೂ ೨ನೆಯ ಮೆದಕೇರಿನಾಯಕನು ಮಾಡಿಸಿದವು ತನ್ನ ತಾಯಿಯ ಹೆಸರಿನಲ್ಲಿ ಓದೋತಿಮ್ಮವ್ವನಕೆರೆ ಮಗಳು ಕೆಂಚವ್ವನ ಹೆಸರಿನಲ್ಲಿ ಒಂದು ಕೆರೆ ಮತ್ತು ಜನಿಗೆಹಳ್ಳಕ್ಕೆ ಹಾಕಿಸಿದಕೆರೆ ಎಂದೂ ಈ ಪಾಳೆಯಗಾರರ ಚಾರಿತ್ರಿಕ ದಾಖಲೆಗಳು ತಿಳಿಸುತ್ತವೆ."[೩೮]

ದಾಖಲೆಗಳಿಂದ ತಿಳಿದುಬರುವಂತೆ ಈ ಪಾಳೆಯಗಾರರಲ್ಲೇ ಕೆರೆಯ ಕಾಮಗಾರಿ ಕೆಲಸಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿಸಿದವನೆಂದರೆ ಬಿಚ್ಚುಗತ್ತಿ ಭರಮಣ್ಣನಾಯ. ಇವನ ಕಾಲದಲ್ಲಿ ಇಪ್ಪತ್ತು ಕೆರೆಗಳು ನಿರ್ಮಾಣಗೊಂಡಿರುವುದಾಗಿ ತಿಳಿದುಬರುತ್ತದೆ.

ವೋರುಗಲ್ಲಮ್ಮನ ಕಥನ :

ಮದಕರಿ ನಾಯಕನಸೇವೆ ದಾಖಲಿಸುವ ಹಸ್ತಪ್ರತಿ

ಓಲೆಗರಿ ಕಟ್ಟಿನಲ್ಲಿ ಒಟ್ಟು ೧೪೪ ಕ್ರಮ ಸಂಖ್ಯೆ ನಮೂದುಳ್ಳ ನಾರಾರು ಗರಿಗಳಿದ್ದು, ಕೆಲವು ಗರಿಗಳು (ಅಲ್ಲಲ್ಲಿ) ಇಲ್ಲವಾಗಿವೆ. ಮತ್ತು ಒಂದೆರಡು ಗರಿಗಳು ಅರ್ಧ ಭಾಗ ಮಾತ್ರ ಉಳಿದಿವೆ. ವೋರುಗಲ್ಲಮ್ಮನ ಕಥನವು ೧೦೭ನೇ ಗರಿಯವರೆಗೆ ಮಾತ್ರ ಇದೆ. ಈ ಹಸ್ತಪ್ರತಿಯನ್ನು ಇಂದಿಗೆ ಒಂದುನೂರ ಎಂಭತ್ತೊಂಭತ್ತು ವರ್ಷಗಳ ಹಿಂದೆ ಬರೆಯಲಾಗಿದೆ. ಅತ್ಯಂತ ಕುತೂಹಲವನ್ನು ಕೆರಳಿಸುವ ಸಂಗತಿಯೆಂದರೆ ವೋರುಗಲ್ಲಮ್ಮನ ಕಥನ ಭಾಗದಲ್ಲಿನ ಕಡೆಯ ಗರಿಗಳಲ್ಲಿ ಅಂದರೆ ೮೯ನೇ ಮತ್ತು ೯೧ನೇ ಪದ್ಯಗಳಲ್ಲಿ ಮದಕರಿನಾಯಕನ ಹೆಸರು ಪ್ರಸ್ತಾಪಿಸಿರುವುದು.

" .... ಉಭಂಗಿ ಗಿರ್‍ರಿಯಾ

ದೇಶಾದ ಕಾಮಗೇತಿಯ ಮೇದಾ ಕೇರಿಯ ದಾರಾದಾ ಜೋ

ಗಿ ತೀವಿದ ನೂ (೮೯)

" ನರುಗಾನಹಳ್ಳಿಯ ದೊರೆ ಕುಮಾರರು ದೊಡ್ಡ ಬಿರ್‍ರಿದುಳ್ಳ ಚಿಂನ್ಮೂನಗಿರಿ

ಯಾ ಧೊರೆ ಮೇದಕೇರ್‍ರಿಯ ತಂಮಂದಿರಿತ್ತಾ" ॥೯೧॥ಘ

ಶ್ರೀ ಓರುಗಲ್ಲಮ್ಮ ದೇವರಿಗೆ ಚಿತ್ರದುರ್ಗದ ದೊರೆ ಮದಕರಿನಾಯಕ ಮತ್ತು ಅವನ ತಮ್ಮಂದಿರು ತಾಳಿ ಮತ್ತು ಚೌಡಿಕೆಯನ್ನು ಕಾಣಿಕೆಯಾಗಿ ಸಲ್ಲಿಸಿದರೆಂದು ಮೇಲ್ಕಂಡ ೧೦೭ ಮತ್ತು ೧೮೯ನೆಯ ಗರಿಗಳಲ್ಲಿರುವ ಪದ್ಯಭಾಗಗಳಿಂದ ತಿಳಿದು ಬರುತ್ತದೆ.

ಪರಕಾಲ ಮಠದ ಪತ್ರ.

"ಶ್ರೀ ಶ್ರೀ ಬೃಹ್ಮತಂತ್ರ ಪರಕಾಲ ಸ್ವಾಮಿಗಳವರ ಶ್ರೀ ಮಠದಿಂದ ಚಿತ್ರದುರ್ಗ ಡಿಸ್ಟ್ರಿಕ್ಟು ಹೊಸದುರ್ಗ ತಾಲ್ಲೂಕು ಸಮತ್ತು ಶ್ರೀ ರಾಂಪುರದಲ್ಲಿರ್‍ವ ಶ್ರೀ ವೈಷ್ಣವ ಸಮಯಾಚಾರ್ ಬ್ರಾಂಚ್ ಸರ್ವಾಧಿಕಾರಿ ದೊಡ್ಡರಂಗಪ್ಪನ ಮಗ ಅಂದಾನಪ್ಪನಿಗೆ ಅಪ್ಪಣಿ ಕೊಡಿಸುವುದೇನೆಂದರೆ ನಿಮ್ಮ ಲಿಸ್ಟು ಪ್ರಕಾರ ಶ್ರೀ ಗವೀರಂಗನಾಥಸ್ವಾಮಿ ಕಟ್ಟೆರಂಗನಾಥಸ್ವಾಮಿ ಮಾವಿಕಟ್ಟೆ ರಂಗನಾಥ ಸ್ವಾಮಿ ಹಾರ್‍ನ ಕಣಿವೆ ರಂಗನಾಥಸ್ವಾಮಿ ಕಂಚಿವರದರಾಜಸ್ವಾಮಿ ಗರುಗದ ರಾಮದೇವರು ತಂಡಗದ ಆಂಜನೇಯ ಬಿಳೀಕಲ್ಲು ರಂಗನಾಥಸ್ವಾಮಿ ಚಿಕ್ಕಬ್ಯಾಲದಕೆರೆ ಕಂಚಿವರದ ರಾಜಸ್ವಾಮಿ ಮತ್ತು ಕಪ್ಪಗೆರೆಯಮ್ಮ ಮತ್ತು ಚಿಕ್ಕ ತೇಕಲವಟ್ಟಿ ದೊಡ್ಡತೇಕಲವಟ್ಟಿ ಆಂಜನೆಯಸ್ವಾಮಿ ಇದೇ ಗುಡುಕಟ್ಟಿನಲ್ಲಿ ನಡೆಯಬೇಕಾದ ಚಂಕ್ರಾಂತಿ ಮತ್ತು ಪೂಜಾರಿಕೆಪಟ್ಟ ದಾಸದೇಶಾ ಭಾಗದವರಿಗೂ ಸಹ ಪೂಜಾರಿಕೆಪಟ್ಟ ಚಂಕ್ರಾಂಕಿತ ಮಾಡಬೇಕಾದರೆ ಮೊದಲು ಒಂದುಜತೆ ಪಂಚೆ ಐದು ಕಲಶ ಐದು ಸೇರು ಅಕ್ಕಿ ಬನವಾಸಿಗೆ ಒಂದುಸೇರುಅಕ್ಕಿ ಐದು ಕಲಶಕ್ಕೂ ಹಡ್ಡದ ರೊಕ್ಕ ಮುದ್ರೆ ಕೊಳಗು ಆಡದ ರೊಕ್ಕಕಂಕಣಕ್ಕೂ ಅಡ್ಡದ ರೊಕ್ಕಮಧ್ಯ ಗುರುಕಲಶಕ್ಕೆ ನಾಲ್ಕು ರೂಪಾಯಿ

ಒಂದು ಹಣ ಇಟ್ಟು ಕೆಲಸವನ್ನು ಪೂರೈಸಿದ ನಂತರ ಮಾಲೆಗಳಲ್ಲಿ ದಾಸದೇಶಾಭಾಗದವರು ಕೊಂಡುಕಾರ್ ನೀವು ಹೇಳಿದಂತೆ ಕೇಳಿದರೆ ಅವರಿಗೆ ಒಂದು ಮಾಲೆ ಕೊಡಬೇಕು ನೀವು ಹೇಳಿದಂತೆ ಕೇಳದೆ ಇದ್ದಪಕ್ಷದಲಿ ಅವರಿಗೂ ಕೊಡಬೇಡಿ ಹಾಂಗೆ ತಕರಾರು ಮಾಡಿದ ಪಕ್ಷದಲ್ಲಿ ಸನ್ನಿದಿಗೆ ತಿಳಿಸಿ ಅವರು ಮುಂದಿನ ತೊಂದರೆಗೆ ಒಳಪಡಬೇಕಾಗುತ್ತದೆ. ಈ ಕೆಲಸ ಆದನಂತರ ರಾಯರಿಗೆ ಶಕ್ತಾನುಸಾರ ಮರಿಯಾದೆಯನ್ನ ಕೊಡಬೇಕು ಅಲ್ಲದೆ ರಾಯರು ಗುರುಕಲಶದ ಹಣವನ್ನು ಮಠಕ್ಕೆ ಕಳುಹಿಸಬೇಕು ಎಂದು ಅಪ್ಪಣೆ ಕೊಡಿಸಿದ ಶ್ರೀಮುಖ”[೪೦] ಎಂದು ಈ ಪತ್ರದಲ್ಲಿ ಮಾಹಿತಿಯನ್ನು ದಾಖಲಿಸಲಾಗಿದೆ.

ಹೊಸದುರ್ಗ ತಾಲ್ಲೂಕಿನ ಒಂದು ಗುಡಿ ಕಟ್ಟೆಗೆ ಸೇರಿದ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಚಕ್ರಾಂತಿ ಮತ್ತು ಪೂಜಾರಿಕೆ ಪಟ್ಟಕಟ್ಟಲು ವೈಷ್ಣವ ಸಮಯಾಚಾರ್ ಎಂಬ ಅಧಿಕಾರಿಯನ್ನು ಪರಕಾಲದ ಮಠದಿಂದ ನೇಮಕ ಮಾಡುವ ಸಂಗತಿ ಹಾಗೂ ಸರ್ವಾಧಿಕಾರಿಯು ಗುಡಿಕಟ್ಟಿನಲ್ಲಿ ನಡೆಯುವ ಚಕ್ರಾಂತಿ ಮತ್ತು ಪೂಜಾರಿಕೆ ಪಟ್ಟದ ಸಂದರ್ಭದಲ್ಲಿ ನೀಡುವ ಕಾಣಿಕೆಗಳನ್ನು ಪಡೆಯ ಬೇಕಾದ ಮಾಹಿತಿಯನ್ನು ಶ್ರೀಮುಖದಲ್ಲಿ ಹೇಳಲಾಗಿದೆ. ಚಾಕ್ರಾಂತಿ ಮತ್ತು ಪೂಜಾರಿಕೆ ಪಟ್ಟ ಹೊಂದುವವರು ಕಾಣಿಕೆಗಳನ್ನು ಸಲ್ಲಿಸಬೇಕಾದಾಗ ನಿಬಂಧನೆಗಳು ಹಾಗೂ ಒಪ್ಪಿಸದಿದ್ದವರ ಬಗ್ಗೆ ನೀಡಿರುವ ಎಚ್ಚರಿಕೆಯ ಆದೇಶ ಮುಂತಾದ ವಿವರಗಳು ಈ ದಾಖಲೆಯಲ್ಲಿವೆ. ಇದು ಒಟ್ಟು ೨೪ ಸಾಲುಗಳನ್ನುಳ್ಳ ದಾಖಲೆಯಾಗಿದೆ.

ಚಿತ್ರದುರ್ಗ ಪಾಳೆಯಗಾರರ ವಂಶಾವಳಿ :

“ಶ್ರೀ ಗುರು ಮುರಿಗಾ ಗುರುಪಾದ ದೇಶಿಕೇಂದ್ರಾಯ ನಮಃ

ಶ್ರೀ ಸುರ್ಯ ನಾರಾಯಣಾಯ ನಮಃ

ಕಾಮಗೇತಲವರ ವಂಶ ಹುಟಿದ್ದು ದೇಶ ಆಳಿದ್ದು ವಿವರ ಬರೆಯುವುದಕ್ಕೆ ಶುಭಮಸ್ತು ಕಾಮಗೇತಲವರು ಬಂದದ್ದು ಜಡಕಲ್‌ದುರ್ಗದಿಂದ ಆ ಕಡೆಯ ಅವಾಂತರ ಸಂಬಂಧ ತೆರಳಿ ಬಂದದ್ದು ತಮ್ಮ ಮನೆಯ ದೇವರು ಅಹೋಬಲ ನಾರಸಿಂಹ ದೇವರು ಕಂಪಳ ಸಹ ಈ ರಾಜ್ಯಕ್ಕೆ ಬಂದದ್ದು. ಈ ಪ್ರಾತ್ಯದಲ್ಲು ತಮ್ಮ ಮನೆಯದೇವರು ನೀರುತಡಿ ಎಂಬ ಗ್ರಾಮ ಬಳಿಯ ಕೆಂಡೇಗುಂಡೆ (ಕೋಗುಂಡೇ) ಹೆಬ್ಬಾಳು ಈ ಪ್ರಾಂತ್ಯದಲ್ಲು ತಮ್ಮ ಮನೆಯ ದೇವರು ಕಂಪಳ ಸಹ ಇಳಕೊಂಡು ಇರಲಾಗಿ ಈ ಕಂಪಳಕ್ಕೆ ಹಿರಿಯರು ಜಡವಿ ನಾಯಕ ಗಬ್ಬಗಡಿ ಓಬನಾಯಕ ಬುಳ್ಳನಾಯಕ ಇವರು ಮೂರುಮಂದಿ ಬಂದು ನಿಂತರು ನಿಂತಲ್ಲಿ ಸ್ವಾಮಿ (ಪಚಾರಿಸಿ) “ನನ್ನನ್ನು ಕಂಡ ಕಂಡ ಕಡೆಗೆ ತೆಗೆದುಕೊಂಡು ಹೋಗಬೇಡಿ ಈ ನೀರುತಡಿಯಲ್ಲಿ ವಾಸವಾಗಿ ನಿಂತೇನು" ಎಂದು ಅಪ್ಪಣೆ ಪಾಲಿಸಲಾಗಿ "ಬುದ್ಧಿ" ಎಂದು ನೀರುತಡಿಯಲ್ಲಿ ದೇವರು (ರಂಗನಾಥ) ಸ್ವಾಮಿಯನ್ನು ಪ್ರತಿಷ್ಠೆಮಾಡಿ ಎಡಬಲದ ಗ್ರಾಮಗಳಲ್ಲಿ ಸ್ವಾಮಿಪಾದ ಕಾದು ನಿಂತರು.

[illegible]

[illegible]

[illegible]

ಅಣ್ಣ ತಮ್ಮಗಳ ವಿವರ : ಜಡವಿ(?) ನಾಯಕನ ಜನ ೧ ಗಟ್ಟಿಗಡಿ (?) ಓಬನಾಯಕ ಜನ ೧, ಬುಳ್ಳನಾಯ್ಕನ ಜನ,೧ ಈತನ ಮಗ ಹಿರಿಯವನು ಹನುಮಂತನಾಯಕ ಶಾಗಲೆಯಲ್ಲಿ ನಿಂತನು ಈತನ ಮಗ ತಿಮ್ಮಳ್ಳ ನಾಯಕರು ಮತ್ತಿ ಎಂಬ ಗ್ರಾಮದಲ್ಲಿ ನಿಂತರು"[೪೧] ಹೀಗೆಯೇ ಈ ವಂಶಾವಳಿಯು ಮುಂದುವರೆಯುತ್ತಾ ಹೋದುತ್ತದೆ.

ವಂಶಾವಳಿಯಲ್ಲಿ ತಿಮ್ಮಣ್ಣನಾಯಕನಿಂದ ಪ್ರಾರಂಭವಾಗಿ ಕೊನೆಯ ಮೆದಕೇರಿನಾಯಕ ಹಾಗೂ ಹೈದರಾಲಿ ಚಿತ್ರದುರ್ಗಕ್ಕೆ ಮುತ್ತಿಗೆ ಹಾಕ್ಕಿದ್ದವರೆಗೂ ಮಾಹಿತಿಯನ್ನು ಈ ವಂಶಾವಳಿಯು ನೀಡುತ್ತದೆ. ರಾಜಕೀಯ ಚರಿತ್ರೆಯ ಬಗ್ಗೆ ಗಮನ ನೀಡಿದರೆ ವಂಶಾವಳಿ ಕಾಲಾನುಕ್ರಮದಲ್ಲಿ ತಿಮ್ಮಣ್ಣ ನಾಯಕ ೧ನೇ ಓಬಣ್ಣ ನಾಯಕ ಅಥವಾ ೧ನೇ ಮೆದಕೇರಿನಾಯಕ ೧ನೇ ಕಸ್ತೂರಿ ರಂಗಪ್ಪನಾಯಕ, ಇಮ್ಮಡಿ ಮೆದಕೇರಿ ನಾಯಕ ೨ನೇ ಓಬಣ್ಣನಾಯಕ, ಚಿಕ್ಕಣ್ಣ ನಾಯಕ, ೩ನೇ ಮೆದಕೇರಿನಾಯಕ, ದೊಣ್ಣೆರಂಗಪ್ಪನಾಯಕ, ನಗರನಹಳ್ಳಿ, ರಘುವಪ್ಪನಾಯಕ, ಸೂರ್ಯಕಾಂತಿ ರಂಗಪ್ಪನಾಯಕ, ಬರಮಣ್ಣ ನಾಯಕ, ಹಿರೇಮೆದಕೇರಿ ನಾಯಕ ೨ನೇ ಕಸ್ತೂರಿ ರಂಗಪ್ಪನಾಯಕ ಕೊನೆಯ ಮೆದಕೇರಿ ನಾಯಕನವರೆಗಿನ ಮಾಹಿತಿಗಳನ್ನು ಈ ವಂಶಾವಳಿಯು ವಿವರಿಸುತ್ತದೆ.

ದೊಡ್ಡ ಮೆದಕೇರಿ ನಾಯಕನ ಕೈಫಿಯತ್ತು

"೧ನೇ ತಲೆ ಪ್ರಾರಂಭ

ಓಬಳನಾಯಕರ ಮಗ ಹೀರೆಹನುಮಪ್ಪನಾಯ್ಕ ಶಾಗಲಿ ಎಂಬ ಗ್ರಾಮದಲ್ಲಿ ನಿಂತನು. ಈತನ ಮಗ ತಿಮ್ಮಳನಾಯಕ ಮತ್ತಿ ಎಂಬ ಗ್ರಾಮದಲ್ಲಿ ನಿಂತನು ಆ ತಿಮ್ಮಳ ನಾಯಕನು ವಸಂತ (ವಸವಂತ) ಕಾಲದಲ್ಲಿ ಬ್ಯಾಂಟೆಯಾಡುವ ನಿಮಿತ್ಯ ಚಿನ್ಮಲಗಿರಿ ತಪ್ಪಲಲ್ಲಿ ಮೃಗ ಬ್ಯಾಂಟೆಯಾಡಿಕೊಂಡು ಬಿಸಿಲಿನ ದಾವಾಂತರದಿಂದ ಬಾಯಾರಿ ನೀರು ಕಾಣದೆ ಕಷ್ಟ ಬಿದ್ದು ಚಂದ್ರವಳಿ (ಚಂದ್ರವಳ್ಳಿ) ಎಂಬ ಕಾಡಿನಲ್ಲಿ ಕುಳುತು ಇದ್ದ ಸಮಯದಲ್ಲಿ ಬ್ಯಾಂಟೆ(ಗೆ) ಸಂಗಡ ಬಂದು ಇದ್ದನಾಯಿ ಸೂಕರನ ಗದಿಮಿಕೊಂಡು ಚಿನ್ಮಲಗಿರಿ ಮೇಲೆ ಸಿದ್ಧರ ಕೊಳದಲ್ಲಿ ನೀರು ಕುಡಿದು. ನೀರು ಮುಳುಗಿ ಆ ನಾಯಿಬಂದು ಇವರ ಮುಂದೆ ಮೈಯಿ ಕೊಡವಿತು ಅದು ಕಂಡು ಈಗ ಸಾಯಂಕಾಲ ಸಮಯವೆಂದು ಸ್ಥಳಕ್ಕೆ ಬಂದರು. ಮತ್ತಿ ಎಂಬ ಗ್ರಾಮದಲ್ಲಿ ದನಕಾಯೊನು ಸದರಿ ಮತ್ತಿ ತಿಮ್ಮಳ ನಾಯ್ಕನ ಮನೆ ಹಸು ಚಿನ್ನಲಗಿರಿ ಮೇಲಕ್ಕೆ ಮೇಯಲಿಕ್ಕೆ ಬಂದದ್ದರ ಒಳಗೆ ೧ ಹಸು ೨ ತಿಂಗಳು ಇಂದ ಹಾಲು ಕೊಡದೆ ಇರಲಾಗಿ ಆ ದನಕಾಯೋ ಹುಡುಗನ ತಾಯಿ ತಂದೆ ಆ ಹುಡುಗನಿಗೆ ಹೇಳಿದ್ದು ಏನೆಂದರೆ "ಅಡವಿಯಲ್ಲಿ ಹಾಲು ಕರದು ನೀನೇ ಕುಡಿಯುತ್ತೀಯಾ? ಎಂದು ಹೊಡದದ್ದರಿಂದ "ನಾನು ಕುಡದವನಲ್ಲಾ" ಎಂಬದಾಗಿ ಹೇಳಿದ್ದರಿಂದ ದನಗಳು ಮೇಯಲಿಕ್ಕೆ ಬಾರದ ಮುಚಿತಿವಾಗಿ ಸದರಿ ಹುಡಗನ ತಂದೆ ಒಬ್ಬರೂ ಕಾಣದ ಹಾಗೆ ಮರದ ಮೇಲೆ ಕೊವರಾ ಕಾದುಕೊಂಡು ಇದ್ದನು."[೪೨] ಹೀಗೆಯೇ ಈ ಕೈಫಿಯತ್ತು ೧೧ನೇ ತಲೆಯವರೆಗೆ ಮುಂದುವರಿದುಕೊಂಡು ಹೋಗುತ್ತದೆ.

ಕೈಫಿಯತ್ತು ತಿಮ್ಮಣ್ಣ ನಾಯಕನಿಂದ ಪ್ರಾರಂಭವಾಗಿ ಕೊನೆಯ ಮದಕೇರಿನಾಯಕ ಹೈದರಾಲಿಯ ಬಂಧನದಲ್ಲಿ ಮರಣ ಹೊಂದುವವರೆಗೂ ಅವನ ದಾಯಾದಿ ಸಂಬಂಧದ ಅಣ್ಣ ದೊಡ್ಡಮದಕೇರಿ ನಾಯಕನು ಮಾತ್ರ ಉಳಿದು ಇವನು ಚಿತ್ರದುರ್ಗವನ್ನು ಮರಳಿ ಪಡೆಯುವಲ್ಲಿ ವಿಫಲನಾಗಿ ಕೊನೆಗೆ ಸಾಯುತ್ತಾನೆ. ಕೈಫಿಯತ್ತಿನ ಪ್ರಾರಂಭದಲ್ಲಿ ಚಿತ್ರದುರ್ಗಕ್ಕೆ ಚಿನ್ಮಲಗಿರಿ ಎಂಬ ಹೆಸರು ಹೇಗೆ ಬಂತು ಮತ್ತು ತಿಮ್ಮಣ್ಣನಾಯಕನ ಆಳ್ವಿಕೆ ಆರಂಭವಾಗುವವರೆಗೆ ಮಾಹಿತಿಯು ಇದೆ. ಕೈಫಿಯತ್ತಿನ ನಿರೂಪಣೆ ವಂಶಾವಳಿ ಹೇಳುವ ಕ್ರಮದಲ್ಲಿಯೇ ಸಾಗುತ್ತದೆ. ಆದರೆ ನಡುವೆ ಬರುವ ನರಗನಹಳ್ಳಿ ರಘುವಪ್ಪ ನಾಯಕನ ಪ್ರಸ್ತಾಪ ಬರುವುದಿಲ್ಲ ಮತ್ತು ಇಮ್ಮಡಿ ಮದಕೇರಿ ನಾಯಕನನ್ನು ಗಡ್ಡದ ಮದಕೇರಿನಾಯಕ ಎಂದು ಹೆಸರಿಸಲಾಗಿದೆ. ಕೈಫಿಯತ್ತು ಚಿಕ್ಕ ಓಬಣ್ಣನಾಯಕನಿಗಿಂತ ಮುಂಚೆ ಓಬಣ್ಣನಾಯಕ ಎಂಬ ಇನ್ನೊಬ್ಬನನ್ನು ಹೆಸರಿಸುತ್ತದೆ. ಹಾಗೆಯೇ ಕೊನೆಯ ಮದಕೇರಿನಾಯಕನ ಅಂತ್ಯವನ್ನು ೨ನೇ ಕಸ್ತೂರಿ ರಂಗಪ್ಪನಾಯಕನು ದತ್ತು ತೆಗೆದು ಕೊಂಡಿದ್ದರೂ ಪಟ್ಟಾಧಿಕಾರದ ಅವಕಾಶದಿಂದ ವಂಚಿತನಾದ ದೊಡ್ಡಮದಕೇರಿ ನಾಯಕನ ಬದುಕಿನ ಅನೇಕ ತಿರುವುಗಳ ವಿವರವನ್ನು ಈ ಕೈಫಿಯತ್ತು ನೀಡುವುದನ್ನು ಗಮನಿಸಬಹುದು

ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಶ್ರೀ ಬೃಹನ್ಮಠ :

"ಬೃಹನ್ಮಠವು ಹಲವಾರು ಸಂಸ್ಥಾನಗಳ ಮತ್ತು ಮಠಗಳ ಗೌರವಕ್ಕೆ ಪಾತ್ರವಾಗಿರುವುದನ್ನು ನೋಡಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದ ಅರಸರಾದ ನಂತರ ಮಠದೊಂದಿಗೆ ತಮ್ಮ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಜಗದ್ಗುರುಗಳವರನ್ನು ಪೂಜ್ಯಭಾವದಿಂದ ನೋಡಲಾರಂಭಿಸಿದರು. ಅವರು ಮಠಕ್ಕೆ ಕೊಟ್ಟಿರುವ ನಿರೂಪಗಳಲ್ಲಿ ಈ ಮನೋಭಾವ ವ್ಯಕ್ತವಾಗಿದೆ. ತಮ್ಮ ಆಡಳಿತದ ಅವಧಿಯಲ್ಲಿ ಮುಮ್ಮಡಿ ಕೃಷ್ಣರಾಜರು ಮತ್ತು ಅವರ ಅಧಿಕಾರಿಗಳು ಸುಮಾರು ೬೦ ನಿರೂಪಗಳನ್ನು ಮಠಕ್ಕೆ ಸಂಬಂಧಿಸಿದ್ದಂತೆ ನೀಡಿದ್ದಾರೆ. ಪ್ರತಿಯೊಂದು ನಿರೂಪವು ಬೃಹನ್ಮಠದ ಹಿರಿಮೆಯನ್ನು ಎತ್ತಿಹಿಡಿಯುವ ಮತ್ತು ಮುಮ್ಮಡಿ ಕೃಷ್ಣರಾಜ ಅವರ ಭಕ್ತಿಯನ್ನು ಪ್ರದರ್ಶಿಸುತ್ತವೆ. ನಿರೂಪಗಳಲ್ಲಿ ಶ್ರೀ ಬೃಹನ್ಮಠದ ಜಗದ್ಗುರುಗಳವರಿಗೆ ಅನುಕ್ರಮವಾಗಿ ಬಂದ ಬಿರುದು ಬಾವಲಿಗಳು ಚಿತ್ರದುರ್ಗದಲ್ಲಿ ಆಗ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದವರು. ಮಠಕ್ಕೆ ಮಾಸಿಕ ಹಾಗೂ ವಾರ್ಷಿಕ ಕಾಣಿಕೆಗಳನ್ನು ಸರ್ಕಾರಕ್ಕೆ ನೀಡುತ್ತಿದ್ದುದು ಅರಮನೆಗೆ ಸೀಮೆ ಗಡಿಗಳಿಂದ ಹಿಂದಿನಿಂದಲೂ ಮಠಕ್ಕೆ ದವಸವನ್ನು ಕೊಡುತ್ತಿದ್ದ ಸಂಪ್ರದಾಯ, ಅರಮನೆ ಗುರುಮನೆಗಳ ಸಂಬಂಧ ಹಾಗೂ ಸ್ವಾಮಿಗಳ ಪರವಾಗಿ ಕಾರ್ಯನಿರ್ವಹಿಸುತ್ತಿದ್ದ ಚರಮೂರ್ತಿಗಳು ಮಠದ ಕೀರ್ತಿ ಗೌರವಗಳನ್ನು ಕಂಡು ಮರುಗಿ ಇತರ ಮಠಗಳವರು ವ್ಯಕ್ತಪಡಿಸುತ್ತಿದ್ದ ದ್ವೇಷ ಇತ್ಯಾದಿಗಳ ಬಗ್ಗೆ ಇಲ್ಲಿ ಮಾಹಿತಿ ದೊರೆಯುತ್ತದೆ. ಬೃಹನ್ಮಠಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರು ನೀಡಿರುವ ನಿರೂಪಗಳಲ್ಲಿ ೧೮೧೫ರಲ್ಲಿ ಕೊಟ್ಟ ಎರಡು ನಿರೂಪಗಳು ಮೊದಲನೆಯವು. ಮೊದಲನೆಯ ನಿರೂಪದಲ್ಲಿ ಬೃಹನ್ಮಠದ ಖರ್ಚಿಗೆ ಸರ್ಕಾರದಿಂದ ಸಂದಾಯವಾದ ಹಣವನ್ನು

ಕುರಿತು ಮಠಕ್ಕೆ ತಿಳುವಳಿಕೆ ನೀಡಿ ಬರೆಯಲಾಗಿದೆ. ಈ ನಿರೂಪವು ಶ್ರೀ ಬೃಹನ್ಮಠವನ್ನು ಕೃಷ್ಣರಾಜ ಒಡೆಯರ ಅವರು ಪೋಷಿಸುತ್ತಿದ್ದರೆಂಬುದಕ್ಕೆ ಆಧಾರವಾಗಿದೆ. ಎರಡನೆಯ ನಿರೂಪವು ಕೇವಲ ರಾಜಾಶ್ರಯದಿಂದಲ್ಲದೇ ಸೀಮೆ ಗಡಿಗಳ ಗ್ರಾಮಗಳಿಂದ ಪೂರ್ವದಿಂದಲೂ ಮಠಕ್ಕೆ ನಡೆದುಕೊಂಡು ಬರುತ್ತಿದ್ದ ದಾಸೋಹದ ಬಗ್ಗೆ ಬೆಳಕು ಚೆಲ್ಲುತ್ತದೆ. ಜನಸಾಮಾನ್ಯರ ಸಹಕಾರದ ಮೇಲೆಯೇ ಮಠ-ಮಾನ್ಯಗಳು ಬೆಳೆದುಬಂದುವೆಂಬುದನ್ನು ತಿಳಿಸುತ್ತದೆ. ೧೮೨೦ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಒಂದೇ ಒಂದು ನಿರೂಪವನ್ನು ಕೊಟ್ಟಿದ್ದಾರೆ. ಬೃಹನ್ಮಠಕ್ಕೆ ಆ ನಿರೂಪವು ಮಠದ ಮಹತ್ವದ ದೃಷ್ಟಿಯಿಂದ ಅತ್ಯಂತ ಉಪಯುಕ್ತ ದಾಖಲೆ ಎನಿಸಿದೆ."[೪೩]

ಸ್ವಾಮಿಗಳು ಅಡ್ಡ ಪಲ್ಲಕೀ ಉತ್ಸವದ ಸಮಯದಲ್ಲಿ ಪ್ರದರ್ಶಿಸಬೇಕಾದ ಬಿರುದು ಬಾವಲಿಗಳನ್ನು ನಿಷೇಧಿಸಿ ಡೆಪ್ಯೂಟಿ ಸೂಪರಿಂಟೆಂಡೆಂಟ್ ಮೆ। ಕೋಲ್ ಎಂಬುವರು ಕೊಟ್ಟ ಅಪ್ಪಣೆಯನ್ನು ರದ್ದುಪಡಿಸಿ ಕಮೀಷನರ್ ಸರ್ಕಾರದ ಕಾರ್ಯದರ್ಶಿ ಕ್ಯಾಂಪ್‌ಬೆಲ್ ಅವರ ಕೊಟ್ಟ ಒಪ್ಪಿಗೆಯನ್ನು ಒಳಗೊಂಡಿದೆ.

ಮುರಿಗೆ ಸ್ವಾಮಿಗಳ ಸಿಂಗಾರದ ಪದ

"ನಮಸ್ತೆ ಸದ್ಗುರು ಮುರಿಗೇಂದ್ರ । ಸಲಹೊ ನೀಯನ್ನ ಕರುಣ ದಿಂದಾ ।
ಭಜಿಸುವೆ ಲಾವಣಿ ಪದದಿಂದಾ ಎಪ್ಪತ್ತೇಳು ಬಿರುದು ನಿಮಗೆ ಚಂದಾ ।
ಅರ್ಥಮಹಾಗರಾಜ ದೇವತೆಯಂ ತಿರುತೀರ ಶಿವಾ
ಮರ್ತ್ಯಲೋಕಕೆ ಸತ್ಯಮೂರುತಿ ಸದ್ಗುರು ಮುರಿಗೇಂದ್ರಾ ।
ನಿತ್ಯಭಜಿಸುವ ಭಕ್ತರ ಸಲಹುವ ಯತಿಗಳ ಕುಲಚಂದ್ರಾ ।
ಎಪ್ಪಂತ್ತೆಳಲಿ ಯತಿ ಮಹಾತ್ಮರು ಮಾಡಿದ ಅವತಾರಾ ।
ಅಷ್ಟದಿಕ್ಕುಗಳ ಚೆರಿಸುತ ಇದ್ದರು ಚಿನ್ಮೂಲಾದ್ರೀಶಾ ।
ಶೂನ್ಯ ಸಿಂಹಾಸನ ಅಲ್ಲಿ ಸೃಷ್ಟಿಸಿದ ಮಠವೊಂದು ಆಶ್ಚರ್ಯ ।
ಕಲ್ಲುಗೆಲಸದಿಂದ ಬಲ್ಲ ಜಾಣರು ಕಟ್ಟಿದ ಚಿತ್ತಾರಾ ।
ಸುತ್ತಮುತ್ತಲು ಸೂಕ್ಷ್ಮದ್ವಾರ ಸಿಂಹಾಸನದಾಕಾರಾ
ಮತ್ತೆ ಹೇಳುವೆನು ಚಿದಾರಣ್ಯದಲಿ ಪರಿ ಪರಿ ಫಲಹಾರಾ ।
ವೃಕ್ಷ ಜಾತಿಯು ಪುಷ್ಪ ಬೆಳದಿಹದೊಂದೊಂದು ತರ ತರಾ ।
ಅಷ್ಟ ರತ್ನದಂತಲ್ಲೊಂದಿಸಿದರು ಹೊಳೆವುದು ಬಂಗಾರಾ ।
ಸುತ್ತ ಕೋಟೆ ಚಿದಾರಣ್ಯದ ಬಾಗಿಲು ಕದವೆಲ್ಲ ಚಿತ್ತಾರಾ

ಅದರೊತ್ತಿಲಿ ಎರಡು ಕೆರೆಯು ತುಂಬಿ ಕೊಂಡಿರುತ ಭರ್ಪೂರಾ"[೪೪] ॥೧॥

ಹೀಗೆಯೇ ಮುರಿಗೆ ಸ್ವಾಮಿಗಳ ಸಿಂಗಾರ ಪದ ಮುಂದೆ ಸಾಗುವುದನ್ನು ನಾವು ನೋಡಬಹುದು ಶೂನ್ಯ ಸಿಂಹಾಸನದ ಪರಂಪರೆಯಲ್ಲಿ ೩೦ನೆಯ ಜಗದ್ಗುರುಗಳಾಗಿದ್ದ ಸಣ್ಣಪಾದದ ಚನ್ನವೀರ ಮಹಾಸ್ವಾಮಿಗಳವರ ದಸರಾ ಉತ್ಸವವನ್ನು ವರ್ಣಿಸುವ ಲಾವಣಿಯಾಗಿದೆ. ಕ್ರಿ.ಶ. ೧೮೪೪ರ ಸುಮಾರಿಗೆ ಪಟ್ಟವೇರಿದ ಶ್ರೀಗಳು ಪೀಠದ ಬಿರುದು ಬಾವಲಿಗಳೊಡನೆ ದೇಶ ಸಂಚಾರ ಮಾಡಿ ಧರ್ಮ ಪ್ರಚಾರ ಮಾಡುತ್ತಾರೆ. ಜನಜೀವನ ಶುದ್ಧವಾಗಲು ಶ್ರಮಿಸುತ್ತಾರೆ. ಶ್ರೀಗಳು ಪೀಠವೇರಿದ ಒಂಬತ್ತನೆಯ ವರ್ಷದಲ್ಲಿ ಈ ಲಾವಣಿ ರಚನೆಯಾಗಿರುವುದಾಗಿ ತಿಳಿದು ಬರುತ್ತದೆ. ಇದನ್ನು ಭರಮಣ್ಣನೆಂಬುವನು ಕಟ್ಟಿದನಂತೆ; ಹಾಗೆಯೇ ಆಗಿನ ಕಾಲದ ದಸರಾ ಹಬ್ಬ ಕಣ್ಮುಂದೆ ನಿಲ್ಲುವಂತೆ ಕವಿ ವರ್ಣಿಸಿದ್ದಾನೆ.

ಚಿತ್ರದುರ್ಗಕ್ಕೆ ಸಂಬಂಧಿಸಿದ ಶೃಂಗೇರಿ ಮಠದ ದಾಖಲೆಗಳು :

"ಶೃಂಗೇರಿ ಮತ್ತು ಚಿತ್ರದುರ್ಗಕ್ಕೆ ಸಂಬಂಧವನ್ನುಂಟು ಮಾಡುವ ಕೆಲವು ದಾಖಲೆಗಳನ್ನು ಇಲ್ಲಿವೆ. ಶಕವರ್ಷ ೧೬೬೬ರಲ್ಲಿ ಮದಕರಿನಾಯಕರು ಶ್ರೀಮದಭನವ ಸಚ್ಚಿದಾನಂದ ಭಾರತೀ ಸ್ವಾಮಿಗಳ ಶೃಂಗೇರಿ ಮಠಕ್ಕೆ ಸೀಮೆಯೊಳಗಿನ ಕಡಿವಾಣಕಟ್ಟೆ ಗ್ರಾಮವನ್ನು ದಾನವಾಗಿ ಕೊಟ್ಟ ಶಾಸನ ಪ್ರತಿಯು ಕಡತದಲ್ಲಿ ದೊರೆಕಿದೆ. ದಿವಾನ್ ಪೂರ್ಣಯ್ಯನವರು ಚಿತ್ರದುರ್ಗದ ಚನ್ನಮಲ್ಲಪ್ಪನವರಿಗೆ ಸಿದ್ಧಾರ್ಥಿ ಸಂವತ್ಸರ (೧೮೦೦)ರಲ್ಲಿ ಕಳುಹಿಸಿದ ಪರವಾನೆ ಪತ್ರವು ಮೇಲ್ಕಾಣಿಸಿದ ಶಾಸನವನ್ನು ದೃಢೀಕರಿಸುತ್ತದೆ.

ಕ್ರಿ.ಶ. ೧೭೭೯ರಲ್ಲಿ ಚಿತ್ರದುರ್ಗವು ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿದ್ದನ್ನು ಮೊದಲೇ ತಿಳಿದುಕೊಂಡಿದೆ. ಶೃಂಗೇರಿ ಶ್ರೀ ನರಸಿಂಹ ಭಾರತೀಸ್ವಾಮಿಗಳು ಮೈಸೂರಿಗೆ ಬಂದು ಅಲ್ಲಿಂದ ರಾಮೇಶ್ವರಕ್ಕೆ ಹೋಗಿ ಬರುವುದರಿಂದ ಅವರಿಗೆ ಸಕಲ ಮರ್ಯಾದೆ ನೀಡಿ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗಿ ಚಿತ್ರದುರ್ಗ ತುಕಡಿ ಸೂಪಿರಿಂಟೆಂಡೆಂಟ್ ಕ್ಯಾಪ್ಟನ್ ಡಾಬ್ಸ್ ಸಾಹೇಬರು ೧೮೩೬ರಲ್ಲಿ ತಾಲ್ಲೂಕುಗಳ ಅಮೀಲ ಶಿರಸ್ತೆದಾರ ವೇಷ್ಕಾರ ಮುಂತಾದವರಿಗೆ ರಹದಾರಿಯನ್ನು ನಿರೂಪಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿ ೧೮೩೬–೩೭ರ ಅವಧಿಯಲ್ಲಿ ಡಾಬ್ಸ್ ಸಾಹೇಬರು ಹೊರಡಿಸಿದ ಇನ್ನೂ ಮೂರು ರಹದಾರಿಗಳು ದೊರೆತಿವೆ. ಈ ರೀತಿಯಾಗಿ ಶೃಂಗೇರಿ ಮಠದ ಕಡತಗಳಲ್ಲಿಯ ೨ ಮತ್ತು ಕಾಗದಗಳಲ್ಲಿಯ ೬ ದಾಖಲೆಗಳು"[೪೫] ಚಿತ್ರದುರ್ಗಕ್ಕೆ ಸಂಬಂಧಿಸಿರುವುದು ಕಂಡುಬರುತ್ತವೆ.

ಚಿತ್ರದುರ್ಗದ ಬಖೈರು :

ಚಿತ್ರದುರ್ಗದ ಬಖೈರು ಆ ಊರಿನ ಕಡೆಯ ಕಾಲದ ಸ್ಥಿತಿಗತಿಗಳನ್ನು ನಮಗೆ ಪರಿಚಯ ಮಾಡಿಕೊಡುತ್ತದೆ. ಹಾಗೆಯೇ ಆ ಊರಿನ ಪಾಳೇಗಾರರ ಪೂರ್ವ ಚರಿತ್ರೆಯನ್ನು ನಮಗೆ

ತಿಳಿಸಿಕೊಡುತ್ತದೆ. ಹೈದರನಿಗೂ ರಾಜಾಮದಕರಿ ನಾಯಕನಿಗೂ ನಡೆದ ಯುದ್ಧವೇ ಇದರ ಮುಖ್ಯ ವಿಷಯವಾಗಿರುವುದಾಗಿ ಕಂಡುಬರುತ್ತದೆ. ಹೈದರನು ಮದಕರಿ ನಾಯಕನನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕೆಂದು ಹೂಡಿದ ಉಪಾಯಗಳನ್ನೆಲ್ಲಾ ಈ ಬಖೈರಿನಲ್ಲಿ ವಿವರಿಸಲಾಗಿದೆ. ಹಾಗೆಯೇ ಈ ಬಖೈರ್‌ನ ಮೂಲಕ ಅಂದು ನಡೆದಿರಬಹುದಾದ ಕೆಲವು ಘಟನೆಗಳ ವಿವರಗಳು ನಮಗೆ ಸಿಗುತ್ತವೆ. "ಬಖೈರಿನ ಬರಹವು ಗದ್ಯದಿಂದ ಕೂಡಿರುವುದು ಗೊತ್ತಾಗುತ್ತದೆ. ಇದು ತನ್ನದೇ ಆದ ವಿಶಿಷ್ಟ ಲಕ್ಷಣವನ್ನು ಒಳಗೊಂಡಿದೆ. ಕೇವಲ ವ್ಯಾವಹಾರಿಕ ದೃಷ್ಟಿಯಿಂದ ಬರೆದಿರುವ ಈ ರಚನೆಯಲ್ಲಿ ಅಂದು ಆಡಳಿತದ ಕ್ಷೇತ್ರದಲ್ಲಿ ಬಳಕೆಯಲ್ಲಿದ್ದ ಅನೇಕ ಪಾರಸಿ ಮತ್ತು ಉರ್ದು ಶಬ್ದಗಳು ಧಾರಾಳವಾಗಿ ಕಂಡು ಬರುತ್ತವೆ. ಆಗಿನ ಕಾಲದ ಯುದ್ಧದ ವೈಖರಿ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿವರಗಳನ್ನು ಈ ಬಖೈರಿನಲ್ಲಿ ಕಾಣಬಹುದಾಗಿದೆ.

ಸ್ವಭಾನು ಸಂಬತ್ಸರದಲ್ಲಿ ಮದಕರಿನಾಯಕನು ಹೈದರಾಲಿಯ ಭೇಟಿಗೆ ಹೋಗಿ

ಬಸವಾಪಟ್ಟಣದ ಮಾರ್ಗವಾಗಿ ಪ್ರಯಾಣ ಮಾಡಿ ಹೊಳೆಹರಸೂಲ ಬಳಿ ಹೊಳೆ ದಾಟಿ ಬಂಕಾಪುರದ ಬಳಿ ಭೇಟಿಯಾದನು."[೪೬] ಹೀಗೆಯೇ ಬಖೈರಿನ ವಿಷಯ ಮುಂದೆ ಸಾಗುತ್ತದೆ.

ದಾನ ಸಾಲಮ್ಮ ಭೀಕ್ಷೆ ನೀಡಿದ್ದು :

"ಶ್ರೀ ಗುರು ಬಸವಲಿಂಗಾಯ ನಮಃ ತಾಮ್ರದ ಶೀಟಿನಲ್ಲಿ ಯಿದ್ನದ್ದನ್ನು ಯತ್ತಿ ಬರದಿರುವುದು ೧೭೦೦ ವರುಷಗಳು.

ದಾನಸಾಲಮ್ಮಗೆ ಮಕ್ಕಳುಯಿಲ್ಲ ಪರಮೇಶ್ವರನು ಜಂಗಮ ರೂಪಿನಿಂದ ದಾನಸಾಲಮ್ಮನ ಅರಮನೆಗೆ ಭಿಕ್ಷಕ್ಕೆ ಬಂದನು. ಸಾಕ್ಷಾತ್ ಗುರುವು ಬಂದುಯಿರುತ್ತಾನೆಯೆಂದು ಮರದಾಗೆ ಮುತ್ತು ತುಂಬಿಕೊಂಡು ಬಂದಳು. ನಿನಗೆ ಮಕ್ಕಳು ಸಂತಾನವುಂಟೆಯೆಂದು ಗುರುವು ಕೇಳಲದಕ್ಕೆ ನನಗೆ ಮಕ್ಕಳ ಸಂತಾನವು ಗುರುವು ಕೊಡಲಿಲ್ಲ ಮಕ್ಕಳುಯಿಲ್ಲದ ಬಂಜೆ ಕೈಯಾಗೆ ನಾನು ಭಿಕ್ಷವು ತೆಗೆದುಕೊಂಬುವುದಿಲ್ಲ ಯೆಂತ ಹೋಗುತ್ತಾಯಿದ್ದ ಜಂಗಮಗೆ ನೀನೆ ನನಗೆ ಮಕ್ಕಳ ಫಲ ಕೊಡ ಬೇಕೆಂದು ಪಾದಹಿಡಿದಳು. ಬಿಕ್ಷವೆತ್ತಿ ತಿರುಕೊಂಡು ತಿಂಬುವ ಜಂಗಮ ನಾನು ಯೇನು ಫಲಕೊಡಲಿ ಯೆಂದು ನನ್ನ ಪಾದ ಬಿಡುಯೆಂದು ಕೇಳಿದರು. ನೀನೆ ನನಗೆ ಕೊಡಬೇಕಿ ಹೊರ್ತ ಮತ್ತು ಯಾರು ಕೊಡ ತಕ್ಕವರಿಲ್ಲ. ದಾನ ಸಾಲಮ್ಮನ ಭಕ್ತಿಗೆ ಮೆಚ್ಚಿ ಯರಡು ಕುಂಬಳದ ಬೀಜ ಕೊಟ್ಟನು. ಯರಡರ ಪೈಕಿವಂದು ಬೀಜ ದಕ್ಕಲಮಗ್ಗೆ ಕೊಡಬೇಕು ವಂದು ಬೀಜ ನೀನೆ ಸ್ವಂತವಾಗಿ ಹಾಕಬೇಕು ಯಂತಾ ಹೇಳಿದರು. ಆಯಮ್ಮ ಗುರು ಹೇಳಿದ ಮಾತು ಮೀರಲಾರದು ಯೆಂದು ಒಂದು ಬೀಜ ಹಿತ್ತಲಲ್ಲಿ ಹಾಕಿದಳು ಬಳ್ಳಿ ಆಗಿ ವಂದು ಕಾಯಿಬಿಟ್ಟಿತು. ಮೊದಲ ಬಿಟ್ಟಕಾಯಿ ನಾವು ತಿನ್ನಬಾರದೆಂದು ಪಂಚಂಗದಯ್ಯಗೆ ಕೊಟ್ಟಳು ಪಂಚಂಗದಯ್ಯನು ಮನೆಗೆ ತೆಗೆದುಕೊಂಡು ಹೋದ. ತನಗೆ ಸಾಧ್ಯವಾಗದೆ ಪುನಹ ಗೊಡ್ಡುಮುಂಡೆ ಕೊಟ್ಟಕಾಯಿ

ಯಂದು ಅರಮನೆಗೆ ತಂದು ಕೊಟ್ಟರು ಯಿಸಕರ್ಮ್ಮಯೆಂಬ ಕಮ್ಮರನು ನಾನು ಯೀ ಕಾಯಿ ಸಾಧ್ಯ ಮಾಡಿಕೊಳ್ಳುತ್ತೇನಂತ ತೆಗೆದು ಕೊಂಡು ಹೋದನು. ೪ ಜನಗಳಿಗೆ ಕರಸಿ ೪ ಚಮ್ಮಟಿಗೆ ಕೊಟ್ಟು ಕೊಲುಮೆಯಲ್ಲಿ ಹಾಕಿ ಯಿಕ್ಕಳದಲ್ಲಿ ಹಿಡಿದು ಆಡಿಗಲ್ಲು ಮೇಲೆ ಯಿಟ್ಟು ವಡೆದಾಗ್ಯು ನುರೀಯದೆ ಕಾಯಿವಡಿಯದೆ ಕಾಲಿಗೆ ಬಡಿದು ಚಮ್ಮಟಿಗೆ ಹಿಡಿದಿದ್ದು ೪ ಜನಗಳಿಗೆ ತಗಲಿ ನಾಲ್ಕು ಜನಗಳು ಮೃತರಾದರು. ಯಿಸ ಕಮ್ಮಾರಯೆಂಬ ಕಮ್ಮಾರನು ವಾಪಾಸುತಂದು ನಿಮ್ಮ ಕುಂಬಳಕಾಯಿ ನಮಗೆ ಸಾಧ್ಯವಾಗಲಿಲ್ಲ ಯೆಂದು ದಾನಸಾಲಮ್ಮಗೆ ಕೊಟ್ಟು ಹೋದನು ನಾನು ಹಾಕಿದ ಕಾಯಿ ನಾನೆ ತಿನ್ನಬೇಕೆ ಹೊರ್ತು ಮತ್ತೊಬ್ಬರಿಗೆ ಕೊಡಬಾರದುಯೆಂದು ದಾನ ಸಾಲಮ್ಮ ಕುಡುಗೋಲು ತೆಗೆದುಕೊಂಡು ಕೊಯ್ದಳು ೭ ಓಳುಕ ಆಯಿತು. ಗುಡಾಣಕ್ಕೆ ತುಂಬಿ ವಲೆಯ ಮೇಲೆಯಿಟ್ಟಳು ಮನೆಯೊಳಗೆ ಯಿದ್ದ ನೀರು ವೈದಳು ಸಾಲದೆ ಬಂದವು ನೀರುಕೂಡ ತೆಗೆದು ಕೊಂಡು ದಾನಸಾಲಮ್ಮ ಹೊಳೆ ನೀರಿಗೆ ಹೋಗುತ್ತಾಳೆ. ನೆರೆ ಹೊರೆ ಹೆಣ್ಣು ಮಕ್ಕಳು ನಾವು ನೀರಿಗೆ ಬರುತ್ತೇವಂತ ಹೇಳಿದರು. ನೀವು ಮಕ್ಕಳು ಹೆತ್ತವರು ನಾನು ಗೊಡ್ಡು ಮುಂಡೆಯೆಂದು ತಡಾದು ಹೋದಳು ನೀವು ನನ್ನ ಸಂಗಡ ಬರಬಾರದು ಯೆಂದು ಹೊಳೆಗಂಗಮ್ಮನಲ್ಲಿಗೆ ಹೋಗಿ ಕೈಕಾಲು ಮುಖ ತೊಳೆದು ಕೊಂಡಳು"[೪೭] ಇಷ್ಟು ಮಾಹಿತಿಯನ್ನು ಈ ಹಸ್ತಪ್ರತಿ ನೀಡುತ್ತದೆ. ಉಳಿದ ಹಾಳೆಗಳು ಕಳೆದು ಹೋಗಿರುವುದರಿಂದ ಈ ಕಥೆಯು ಸ್ವಲ್ಪಕ್ಕೆ ನಿಲ್ಲುತ್ತದೆ. ಇದು ಕಾಗದದ ಹಸ್ತಪ್ರತಿಯಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ ಒಂದು ನಾಡಿನ ಸಾಂಸ್ಕೃತಿಕ ಇತಿಹಾಸದ ಅಧ್ಯಯನವೆಂದರೆ ಅಲ್ಲಿ ಬಾಳಿದ ಜನರ ಬದುಕಿನ ಅಧ್ಯಯನವೆಂದೇ ಹೇಳಬಹುದು. ಆ ಜನರ ನೋವು–ನಲಿವು, ಆಚಾರ–ವಿಚಾರ, ವ್ಯವಹಾರ ಮೊದಲಾದವುಗಳು ಅಲ್ಲಿ ಮಡುಗಟ್ಟಿರುತ್ತವೆ. ಇವುಗಳನ್ನು ತಿಳಿಯಲು ನಮಗೆ ಲಿಖಿತ ಮತ್ತು ಅಲಿಖಿತ ಆಕರಗಳು ಮಹತ್ವವೆನಿಸುತ್ತವೆ. ಚಿತ್ರದುರ್ಗದ ನಾಯಕರ ಚರಿತ್ರೆ ಬಗ್ಗೆ ತಿಳಿದುಕೊಳ್ಳಲು ಶಾಸನಗಳು ಎಂ.ಎಸ್. ಪುಟ್ಟಣ್ಣನವರ ಮತ್ತು ಇತರ ಐತಿಹಾಸಿಕ ಕೃತಿಗಳು ಮತ್ತು ಪತ್ರಗಳು, ಕೈಫಿಯತ್ತುಗಳು, ನಿರೂಪಗಳು, ದಾಖಲೆಗಳು ಮುಂತಾದವುಗಳು ಇಲ್ಲಿನ ಚರಿತ್ರೆಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಹೀಗೆ ಚಾರಿತ್ರಿಕ ಹಸ್ತಪ್ರತಿಗಳಿಂದ ರಾಜ ವಂಶಾವಳಿ, ಆಡಳಿತಾತ್ಮಕ ಮಾದರಿಗಳು, ಐತಿಹಾಸಿಕ ಘಟನೆ, ಆರ್ಥಿಕ, ಸಾಮಾಜಿಕ, ಸಂಘಟನೆ, ರಾಜಕೀಯ ಸ್ವರೂಪದಂಥ ಒಟ್ಟು ಸಾಂಸ್ಕೃತಿಕ ಮಹತ್ವವನ್ನು ಪುನರ್‌ರೂಪಿಸಲು ಇಂಥ ಹಸ್ತಪ್ರತಿಗಳು ನೇರವಾದ ಮತ್ತು ಬಹುಮುಖ್ಯ ದಾಖಲೆಗಳಾಗಿವೆ.

ಕೊನೆ ಟಿಪ್ಪಣಿಗಳು

೧. ಕಂಠ ಪತ್ರ–೩, ಹಳ್ಳಿಕೇರಿ ಎಫ್.ಟಿ., ವಿಕಾಸ ಪ್ರಕಾಶನ, ಹೊಸಪೇಟೆ ೨೦೧೪, ಇತಿಹಾಸ ಮತ್ತು ಪುರಾತತ್ವ ಅಧ್ಯಯನದ ಆಕರಗಳಾಗಿ ಹಸ್ತಪ್ರತಿ ಪ್ರಶಸ್ತಿಗಳು ಪು.ಸಂ, ೨೨

೨. ಅದೇ, ಪು.ಸಂ., ೨೬.

೩. ಕರ್ನಾಟಕದ ಕೈಫಿಯತ್ತುಗಳು, (ಸಂ) ಕಲಬುರ್ಗಿ ಎಂ.ಎಂ., ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೪, ಪು.ಸಂ., ೧೨೪.

೪. ಅದೇ, ಪು.ಸಂ, ೫೧೪.

೫. ಕಂಠ ಪತ್ರ–೩, ಹಳ್ಳಿಕೇರಿ ಎಫ್.ಟಿ., ಪು.ಸಂ, ೧೪೬.

೬. ಅದೇ, ಪು.ಸಂ, ೧೪೭

೭. ಅದೇ, ಪು.ಸಂ, ೧೫೦.

೮. ಅದೇ, ಪು.ಸಂ, ೧೫೨.

೯. ಇತಿಹಾಸ ದರ್ಶನ ಸಂ. ೧೫/೨೦೦೦, ಗುಂಡಬ್ರಹ್ಮಯ್ಯಗಳು: ಒಂದು ದಾಖಲೆ, ರವೀಂದ್ರನಾಥ ಕೆ. ಪು.ಸಂ, ೭೫ರಿಂದ ೭೭.

೧೦. ಅದೇ, ಮಧುಗಿರಿಗೆ ಸಂಬಂಧಿಸಿದ ಮೆಕೆಂಜಿಯವರ ಅಪ್ರಕಟಿತ ಕೈಫಿಯತ್ತು: ಕಾವಲಮ್ಮ ಆರ್., ಪು.ಸಂ, ೧೨೫.

೧೧. ಇತಿಹಾಸ ದರ್ಶನ ಸಂ.೧೮/೨೦೦೩, ಮುಂಡರಗಿ ಭೀಮರಾಯನ ಪರಿಷ್ಕರಿಸಿದ ಲಾವಣಿಪದ, ಶಿರೂರ ಬಿ.ವ್ಹಿ., ಪು.ಸಂ. ೨೧೫

೧೨. ಅದೇ, ಪು.ಸಂ, ೨೨೩.

೧೩. ಇತಿಹಾಸ ದರ್ಶನ ಸಂ. ೧೨/೧೯೯೭, ಪು.ಸಂ, ೫೫.

೧೪. ಇತಿಹಾಸ ದರ್ಶನ ಸಂ. ೧೧/೧೯೯೬, ಪು.ಸಂ, ೧೫೧.

೧೫. ಅದೇ, ಪು.ಸಂ, ೨೭೩.

೧೬. ಪೂರ್ವ ಕರ್ನಾಟಕದ ಪಾಳೆಯಗಾರರು: ಒಂದು ಅಧ್ಯಯನ, ಶ್ಯಾಮಲ ಸಿ.ಆರ್., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೮, ಪು.ಸಂ, ೮೬ರಿಂದ ೯೦.

೧೭. ವಸು ಎಂ.ವಿ, ದಕ್ಷಿಣ ಭಾರತದ ಅರಸು ಮನೆತನಗಳು ಪು.ಸಂ, ೭೯.

೧೮. ಲಕ್ಷ್ಮಣ್ ತೆಲಗಾವಿ (ಸಂ), ನಾಯಕನಹಟ್ಟಿ ಬಖೈರು, ಚಂದ್ರವಳ್ಳಿ, ಪು.ಸಂ, ೩೩.

೧೯. ತಿಪ್ಪನಾಯಕ ಎಸ್.ಬಿ. ನಾಯಕ ಜನಾಂಗದ ಇತಿಹಾಸ, ಅಪ್ರಕಟಿತ ಹಸ್ತಪ್ರತಿ, ೧೯೯೫ ಪು.ಸಂ,೨೬೦.

೨೦. ನನ್ನಿವಾಳದ ಕಟ್ಟೆಮನೆ ಕುರಿತು ಚಳ್ಳಕೆರೆಯ ವೀರೇಂದ್ರ ಕುಮಾರ್ ಬಿ.ಪಿ. ಅವರು ಸಂಶೋಧನೆ ಮಾಡಿದ್ದಾರೆ.

೨೧. ಕುಮಾರರಾಮನ ಸಾಂಗತ್ಯದ ಹಸ್ತಪ್ರತಿ, ಬಂಜಗೆರೆ, ಗುರುಮೂರ್ತಿ ಪು.ಸಂ, ೧

೨೨. ನಾಯಕನಹಟ್ಟಿಯ ಬುದಿಮಲ್ಲಪ್ಪನಾಯ್ಕನ ಮೂಲ ವಿಚಾರದ ಕಾಗದದ ದಾಖಲೆ. ಮಾರಮ್ಮನಹಳ್ಳಿ ಮಂಜಣ್ಣ ಪಿ.

೨೩. ಚಿತ್ರದುರ್ಗ ಡಿ॥ ಮೊಳಕಾಲ್ಮೂರುವಿನ ಪೂರ್ವ ವಿಚಾರದ ಕಾಗದದ ದಾಖಲೆ ಮಾರಮ್ಮನಹಳ್ಳಿ, ಮಂಜಣ್ಣ ಪಿ.

೨೪. ಶ್ರೀ ಚನ್ನಕೇಶವಸ್ವಾಮಿ ದೇವರ ಪೂಜಾರಿಕೆ ಪಟ್ಟಕ್ಕೆ ಸಂಬಂಧಿಸಿದ ದಾಖಲೆ, ನಲಗೇತನಹಟ್ಟಿ ತಿಪ್ಪೇಸ್ವಾಮಿ

೨೫. ಐತಿಹಾಸಿಕ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸ (ಸಂ), ಲಕ್ಷ್ಮಣ್ ತೆಲಗಾವಿ ಶ್ರೀನಿವಾಸ್ ಎಂ.ವಿ., ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣೆ ಸಮಿತಿ, ಚಿತ್ರದುರ್ಗ ೧೯೭೬, ಪು.ಸಂ, ೫೦

೨೬. ಅದೇ, ಪು.ಸಂ, ೬೦

೨೭. ಅದೇ, ಪು.ಸಂ, ೬೭

೨೮. ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, (ಸಂ) ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ.. ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣೆ ಸಮಿತಿ, ಚಿತ್ರದುರ್ಗ ೧೯೯೫ ಪು.ಸಂ, ೪೧೩.

೨೯. ಅದೇ, ಪು.ಸಂ, ೪೧೫.

೩೦. ಅದೇ, ಪು.ಸಂ, ೧೫೯.

೩೧. ದೊಡ್ಡೇರಿ ಕದನ ಚರಿತ್ರೆ ಮತ್ತು ಜಾನಪದದ ನೆಲೆಯಲ್ಲಿ ಲಕ್ಷ್ಮಣ್ ತೆಲಗಾವಿ, ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು.ಸಂ, ೨೪ರಿಂದ ೨೫.

೩೨. ಇತಿಹಾಸ ದರ್ಶನ ಸಂ ೩/ಸಂಚಿಕೆ. ೧, ೧೯೮೮ ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು, ಪು.ಸಂ, ೨೨೫.

೩೩. ಮುರಿಗೆ ಶಾಂತವೀರ ಸ್ವಾಮಿಗಳ ಕೃತಿಗಳು (ಸಂ) ಶಿವಣ್ಣ ಎಸ್., ಬೃಹನ್ಮಠ ಸಂಸ್ಥಾನ ಚಿತ್ರದುರ್ಗ, ೧೯೮೯, ಮುರಿಗೆ ತಾರಾವಳಿ, ಪು.ಸಂ, ೩೫೭ ರಿಂದ ೩೫೮.

೩೪. ಅದೇ, ಪು.ಸಂ. ೨೫೭.

೩೫. ಇತಿಹಾಸ ದರ್ಶನ ಸಂಪುಟ ೬ / ೧೯೯೧, ಚಿತ್ರದುರ್ಗದ ಒನಕೆ ಓಬವ್ವಯ ಘಟನೆ: ಚಾರಿತ್ರಿಕ ವಿಮರ್ಶೆ, ಲಕ್ಷ್ಮಣ್ ತೆಲಗಾವಿ ಪು.ಸಂ, ೨೫೨.

೩೬. ಕರ್ನಲ್ ಮೆಕೆಂಝಿ ಮತ್ತು ಕೈಫಿಯತ್ತುಗಳು, ಪುಟ್ಟಸ್ವಾಮಿ ಬಿ.ಎಸ್. ಮನೋಜ್ ಪಬ್ಲಿಕೇಷನ್, ಬೆಂಗಳೂರು ೨೦೧೨, ಪು.ಸಂ, ೧೫೯ರಿಂದ೧೬೦.

೩೭. ಕಾಮಗೇತಿ ವಂಶಜರ ಚರಿತ್ರೆ, ವಿರೂಪಾಕ್ಷಿಪೂಜಾರಹಳ್ಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು.ಸಂ, ೫೩.

೩೮. ಕೆರೆ ನೀರಾವರಿ ನಿರ್ವಹಣೆ, ಚಾರಿತ್ರಿಕ ಅಧ್ಯಯನ (ಸಂ) ರಾಜಾರಾಮ ಹೆಗಡೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩ ಪು.ಸಂ, ೧೧೬ರಿಂದ ೧೧೭.

೩೯. ಹೊಸದುರ್ಗ ಸೀಮೆ ಜಾನಪದ, ಬಾಗೂರು ನಾಗರಾಜಪ್ಪ, ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೪, ಪು.ಸಂ, ೨೦೭ರಿಂದ ೨೦೮.

೪೦. ಅದೇ, ಪು.ಸಂ, ೨೧೧.

೪೧. ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು (ಸಂ) ಬಿ.ರಾಜಶೇಖರಪ್ಪ, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು ೨೦೦೭ ಪು.ಸಂ, ೧

೪೨. ಅದೇ, ಪು.ಸಂ, ೪೭ರಿಂದ ೪೮.

೪೩. ರಹದಾರಿ ಪತ್ರಗಳು ನಿರೂಪ (೪-೧೦-೧೮೨೦) ಪು.ಸಂ, ೩೩

೪೪. ಚಿನ್ಮೂಲಾದ್ರಿ ಚೇತನ ರಜತಮಹೋತ್ಸವ ಸ್ಮರಣಸಂಚಿಕೆ (ಸಂ) ಶಿವಕುಮಾರ್ ಜಿ., ಕರಿಸಿದ್ದೇಶ್ವರಸ್ವಾಮಿ, ಎಂ.ಎಸ್., ೧೯೮೭ ಪು.ಸಂ, ೨೧೧.

೪೫. ಇತಿಹಾಸ ದರ್ಶನ ಸಂಪುಟ-೭ ಚಿತ್ರದುರ್ಗಕ್ಕೆ ಸಂಬಂಧಿಸಿದ ಶೃಂಗೇರಿ ಮಠದ ದಾಖಲೆಗಳು ಶಾಸ್ತ್ರಿ ಎ.ಕೆ. ಪು.ಸಂ,. ೧೭೩.

೪೬. ಚಿತ್ರದುರ್ಗದ ಬಖೈರು, ಹುಲ್ಲೂರು ಶ್ರೀನಿವಾಸ ಜೋಯ್ಸರು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು, ೨೦೦೯ ಪು.ಸಂ, ೯

೪೭. ದಾನ ಸಾಲಮ್ಮ ಭಿಕ್ಷೆ ನೀಡಿದ್ದು ಕಾಗದದ ಹಸ್ತಪ್ರತಿ, ಬಿಜಿಕೆರೆ ನಾಗೇಶ ಎಂ.

ಅಧ್ಯಾಯ : ೪

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು : ಸಾಮಾಜಿಕ ಅನನ್ಯತೆ

ಅಧ್ಯಾಯ : ನಾಲ್ಕು

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು : ಸಾಮಾಜಿಕ ಅನನ್ಯತೆ

ಸಾಮಾಜಿಕ ಅಂಶಗಳ ಮೂಲಕವಾಗಿಯೂ ಒಂದು ಕಾಲದ ಸಮಾಜದ ಜನರ ಸಂಸ್ಕೃತಿಯನ್ನು ನೋಡಬಹುದು. ಇದಕ್ಕೆ "ಹಸ್ತಪ್ರತಿಗಳ ಕಾಲೋಫಿನ್ಸ್‌ಗಳು ಮೂಲ ಆಕರವಾಗಿದೆ.[೧] ಹಸ್ತಪ್ರತಿ ಪುಷ್ಟಿಕೆಗಳಲ್ಲಿ ಸಿಗುವ ವೈವಿಧ್ಯಮಯದ ವ್ಯಕ್ತಿನಾಮಗಳನ್ನು, ಸ್ಥಳನಾಮಗಳನ್ನು ಆಯಾ ಕಾಲದಲ್ಲಿ ಸಿಗುವ ಶಾಸನಗಳ, ವ್ಯಕ್ತಿನಾಮಗಳ, ಸ್ಥಳನಾಮಗಳ ಜೊತೆಯಲ್ಲಿ ಇಟ್ಟು ಒಂದು ಸಾಂಸ್ಕೃತಿಕ ಅಧ್ಯಯನವನ್ನು ಮಾಡಲು ಸಾಧ್ಯವಿದೆ.[೨] ಹಸ್ತಪ್ರತಿ ಸೇವಾ ಕಾರ್ಯದಲ್ಲಿ ಕುಟುಂಬ, ಊರು, ಮಠಗಳು, ವ್ಯಕ್ತಿಗಳು ತೊಡಗಿರುವುದನ್ನು ಕಾಣುವ ಮೂಲಕ ಸಮಾಜದ ಜನರ ಬದುಕಿನ ರೀತಿ–ನೀತಿಯನ್ನು ಪ್ರತಿಬಿಂಬಿಸುತ್ತದೆ. ಹಸ್ತಪ್ರತಿಗಳಲ್ಲಿ ಉಲ್ಲೇಖಿತಗೊಂಡಿರುವ ಸ್ಥಳನಾಮಗಳು, ವ್ಯಕ್ತಿನಾಮಗಳು ವೈವಿಧ್ಯಮಯವಾಗಿದ್ದು, ಇವುಗಳ ಮೂಲಕವಾಗಿ ಸಾಂಸ್ಕೃತಿಕ ಅಧ್ಯಯನವನ್ನು ಮಾಡಬಹುದಾಗಿದೆ. ಸಮಾಜದಲ್ಲಿರುವ ವೃತ್ತಿಗಳ ಮೂಲಕವಾಗಿ ಜನರ ಸ್ಥಾನಮಾನಗಳನ್ನು ಆರ್ಥಿಕ ಸ್ಥಿತಿಗತಿಗಳನ್ನು ಗುರುತಿಸಬಹುದಾಗಿದೆ. ಹೀಗೆ ಸ್ಥಳನಾಮ, ಕುಲನಾಮಗಳ ಮೂಲಕ ಆಯಾ ವೃತ್ತಿ ಸಂಬಂಧವನ್ನು ಹಾಗೂ ಸಾಮಾಜಿಕ ಸಂಗತಿಗಳನ್ನು ತಿಳಿಯಬಹುದಾಗಿದೆ. ವಿಶೇಷವಾಗಿ ಶಾಸ್ತ್ರ ಭವಿಷ್ಯ/ಹೇಳುವ ಹಸ್ತಪ್ರತಿಗಳಲ್ಲಿ ಈ ರೀತಿಯ ವಿವರಗಳು ಸಿಗುತ್ತವೆ. ವಸ್ತು–ವ್ಯಕ್ತಿಗಳ ಕಳೆದುಹೋದ ವಿಚಾರ, ಮಕ್ಕಳ ಮದುವೆ ನಾಮಕರಣದ ವಿಚಾರ ಇತ್ಯಾದಿ ಆಚರಣೆಗಳು ಖಾಯಿಲೆ, ಕಷ್ಟ ನಿವಾರಣೆಯಂತಹ ಹಲವು ಸಾಮಾಜಿಕ ವಿವರಗಳ ಹಿನ್ನೆಲೆಯಲ್ಲಿ ಸಮಾಜದ ಸ್ವರೂಪವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಗ್ರಂಥದಾನ ಒಂದು ಸಾಮಾಜಿಕ ಮೌಲ್ಯ. ಇದು ಭಾರತೀಯರ ಭವ್ಯ ಸಂಸ್ಕೃತಿಯಾಗಿದ್ದು, ಎಲ್ಲ ಧರ್ಮದವರಲ್ಲೂ ಕಂಡುಬಂದಿದೆ. ಯಾರು, ಯಾರಿಗೆ, ಏಕೆ ಗ್ರಂಥವೊಂದನ್ನು ಪ್ರತಿ ಮಾಡಿಕೊಡುತ್ತಾರೆ ಎನ್ನುವ ವಿವರಗಳಲ್ಲಿ ನಮ್ಮ ನಾಡಿನ ಸಾಂಸ್ಕೃತಿಕ ಮೌಲ್ಯವೇ ಅಡಗಿದ್ದು ಅದರತ್ತ ಬೆಳಕು ಚೆಲ್ಲುವ ಕೆಲಸವನ್ನು ಈ

ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹಸ್ತಪ್ರತಿಗಳಲ್ಲಿ ದೊರೆಯುವ ಸಾಮಾಜಿಕ ಅಂಶಗಳು ಆಗಿನ ಕಾಲದ ಸಮಾಜದ ಸ್ಥಿತಿಗೆ ಹಿಡಿದ ಕನ್ನಡಿಯೆಂದು ಹೇಳಬಹುದು. ಹಾಗೆಯೇ ಅವುಗಳ ನಿಜ ಚಿತ್ರಣ ಹಸ್ತಪ್ರತಿಗಳಲ್ಲಿ ದೊರಕುತ್ತವೆ. ಹಸ್ತಪ್ರತಿಗಳ ರಚನೆ ಮತ್ತು ಪ್ರತಿ ಮಾಡುವ ಕಾರ್ಯವು ಮಠಗಳ ಹಾಗೂ ಬಸದಿಗಳ ಆಶ್ರಯದಲ್ಲಿ ಹಿಂದಿನಿಂದಲೂ ನಿರಂತರವಾಗಿ ನಡೆದುಕೊಂಡು ಬಂದಿರುವ ಬಗ್ಗೆ ಹಸ್ತಪ್ರತಿ ಪ್ರಶಸ್ತಿಗಳಿಂದ ತಿಳಿದುಬರುತ್ತದೆ. ಮಠ–ಮಂದಿರಗಳಲ್ಲಿ ಹಸ್ತಪ್ರತಿಗಳ ಪ್ರತಿ ಮಾಡುವ ಕೆಲಸ ಅತ್ಯಂತ ಅಚ್ಚುಕಟ್ಟಾಗಿ ನಡೆಯುತ್ತಿತ್ತು. ಆಗಿನ ಕಾಲದ ಜನ ಸಮುದಾಯ ಶ್ರದ್ಧೆ–ಭಕ್ತಿಯಿಂದ ಅವುಗಳನ್ನು ಪೋಷಿಸಿ ಬೆಳೆಸುತ್ತಿದ್ದರು. ಈ ಸಾಮಾಜಿಕ ಧೋರಣೆಗಳ ಪ್ರತಿಬಿಂಬ ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಸಿಗುತ್ತವೆ.

ಲಿಪಿಕಾರರು ಬರೆಹಕ್ಕೆ ತೊಡಗುವಾಗ ಮತ್ತು ಮುಕ್ತಾಯಗೊಳಿಸುವಾಗ ಶುಭ ಮಹೂರ್ತ ಮತ್ತು ದಿನಗಳನ್ನು ನೋಡುತ್ತಿದ್ದರು. ಅನಿಷ್ಟಗಳು ಬರಬಾರದೆಂಬುದೇ ಅವರ ಉದ್ದೇಶವಾಗಿತ್ತು. ಲಿಪಿಕಾರರು ಶ್ರದ್ಧೆ, ಭಕ್ತಿ, ಪ್ರಾಮಾಣಿಕತೆಯಿಂದ ಪ್ರತೀಕರಣ ಕಾರ್ಯ ಮಾಡುತ್ತಿದ್ದರು. ಆದರೂ ಕೆಲವು ಸಂದರ್ಭದಲ್ಲಿ ಅವರಿಗೆ ಅರಿಯದಂತೆ ಕೆಲವು ದೋಷಗಳು ಆಗುತ್ತಿದ್ದವು. ಅದು ಅವರ ಗಮನಕ್ಕೆ ಬಂದಾಗ ಪಶ್ಚಾತ್ತಾಪ ಪಡುವ ಸಂಗತಿಗಳು ಹಸ್ತಪ್ರತಿ ಪ್ರಶಸ್ತಿಗಳಲ್ಲಿ ದಾಖಲಾಗಿವೆ. ತಮ್ಮಿಂದಾದ ದೃಷ್ಟಿ ತಪ್ಪು–ಕೈತಪ್ಪು, ದೈಹಿಕ ಮತ್ತು ಮಾನಸಿಕ ದೌರ್ಬಲ್ಯ, ಆಲಸ್ಯ ಮುಂತಾದವುಗಳನ್ನು ಲಿಪಿಕಾರರು ಮುಕ್ತವಾಗಿ ಒಪ್ಪಿಕೊಂಡಿದ್ದಾರೆ.

ಕೆಲವು ಲಿಪಿಕಾರರು ತಮಗೆ ವಿದ್ಯೆ ಕಲಿಸಿದ ಗುರುವನ್ನು ಹೃದಯತುಂಬಿ ಸ್ಮರಿಸಿದ್ದಾರೆ. ಶಿಕ್ಷಕರೂ ಸಹಿತ ತಮ್ಮ ವೃತ್ತಿಯ ಬಗ್ಗೆ ಸಂತೋಷದಿಂದ ಹೇಳಿಕೊಂಡಿದ್ದಾರೆ. ಇದರಿಂದ ಆಧುನಿಕ ಪೂರ್ವ ಕರ್ನಾಟಕದ ಶಿಕ್ಷಣ ವ್ಯವಸ್ಥೆಯ ಬಗ್ಗೆ ವಿಶೇಷವಾಗಿ ಗುರು–ಶಿಷ್ಯ ಸಂಬಂಧದ ಬಗ್ಗೆ ಅನೇಕ ಒಳನೋಟಗಳು ಹಸ್ತಪ್ರತಿ ಪ್ರಶಸ್ತಿಗಳಲ್ಲಿ ದೊರಕುತ್ತವೆ. ಇವುಗಳಿಂದ ಆ ಕಾಲದ ಸಾಮಾಜಿಕ ಜೀವನದಲ್ಲಿ ಶಿಕ್ಷಕ ವೃತ್ತಿ ಮತ್ತು ಸಮಾಜದಲ್ಲಿ ಅವರ ಸ್ಥಾನಮಾನ ವ್ಯಕ್ತವಾಗಿದೆ. ಇದಲ್ಲದೆ, ಸಾಲಿಮಠ, ಓದ್ಸುಮಠ, ಟೀಕಿನ ಮಠ, ಓಲೆಮಠ ಮುಂತಾದ ಮಠಗಳು ಹೆಗ್ಗಡೆ, ಕುಲಕರ್ಣಿ ಮುಂತಾದ ಆ ಕಾಲದ ಧನಿಕರ ಮನೆಗಳು ವಿದ್ಯಾ ಕೇಂದ್ರಗಳಾಗಿದ್ದವು ಎಂಬ ಅಂಶಗಳು ತಿಳಿದುಬರುತ್ತವೆ. ಸಾಮಾಜಿಕ ಅಂಶಗಳನ್ನು ಮೂರು ರೀತಿಯಲ್ಲಿ ವರ್ಗೀಕರಿಸಲಾಗಿದೆ.

೧. ವ್ಯಕ್ತಿನಾಮ

೨. ಸಮಾಜದ ವ್ಯಕ್ತಿಗಳ ವೃತ್ತಿಗಳು

೩. ಸ್ಥಳನಾಮ

೧. ವ್ಯಕ್ತಿನಾಮ : ವ್ಯಕ್ತಿನಾಮದ ಮೂಲಕವಾಗಿ ಕುಲನಾಮವನ್ನು ನೋಡಬಹುದಾಗಿದೆ. ಇಲ್ಲಿ ಲಿಪಿಕಾರರ ಹೆಸರು ಹಾಗೂ ಲಿಪಿ ಮಾಡಿಸಿದವರ ಹೆಸರುಗಳನ್ನು ಈ ವ್ಯಕ್ತಿನಾಮದಲ್ಲಿ ನೋಡಬಹುದಾಗಿದೆ.

* ಚಟ್ಟಹಳ್ಳಿ ಚನ್ನಬಸವೇಶ್ವರ ದೇವರ ಪಾದ ಕಮಲೋದ್ಭವರಾದಂಥ ಸಿಂಗಟಗೆರೆ ಸಿದ್ದಪ್ಪದೇವರ ಮಗ ರೇವಯ್ಯನು ಚಿಕ್ಕಮಗಳೂರು ಸೀಮೆ ತಾ. ಕುರುಬರಳಿಮಠದ ಸಿದ್ದೀರ ದೇವರ ಕುಮಾರ ಮಲ್ಲೇದೇವರ ಕುಮಾರ ಚನವೀರ ದೇವರ ಪಾದಕಮಲೋದ್ಭರಾದಂಥಾ ನಲೂರ ಚನ್ನಬಸವಪ್ಪ ಶೆಟರ ಕುಮಾರ ಸಿದ್ದಪ್ಪ ಶೆಟ್ಟಿ"[೩] (ಕ್ರ.ಸಂ. ೧೯೨)

ಚನ್ನಬಸವೇಶ್ವರ, ಸಿದ್ದಪ್ಪ, ರೇವಯ್ಯ, ಸಿದ್ವೀರ, ಮಲೇದೇವ, ಚನ್ನವೀರ, ಚನ್ನಬಸವಪ್ಪ, ಸಿದ್ದಪ್ಪ ಎಂಬ ವ್ಯಕ್ತಿವಾಮಗಳೊಂದಿಗೆ ಕುರುಬರಳಿಮಠ ಎಂಬ ಕುಲನಾಮ ದಾಖಲಾಗಿದೆ.

* ತ್ರಿವಿಧಿ ಬಾಗಲಕೋಟೆ ಚಂನವೀರಪ್ಪವರಿಗೆ ಲೋಚನದ ಮುರಿಗೆ

ಮರಿಯ ಬರಕೊಟ್ಟ ಪುಸ್ತಕ ಶ್ರೀ ಚಿನ್ಮಾಲಾದ್ರಿ ಮಠಾಂತರದಲ್ಲಿ

ಲೋಚನ ಚಿದಂಬರಪ್ಪನವರು ಚನವೀರಮರಿಗೆ ಲಿಖಿತವ ಮಾಡಿ ದಂಯದಿಂದ ಕೊಟ್ಟುದೂ[೪]

(ಕ್ರ.ಸಂ.೩೦೯)

ಚನ್ನವೀರಪ್ಪ, ಮುರಿಗೆ ಮರಿಯ, ಚಿದಂಬರಪ್ಪ, ಚನ್ನವೀರಮರಿಗೆ ಇವುಗಳೆಲ್ಲ ಹಸ್ತಪ್ರತಿಗಳಲ್ಲಿರುವ ವ್ಯಕ್ತಿನಾಮಗಳು

* ಪ್ರಮೋಧೂತ ಸಂ ಕಾರ್ತೀಕ ಕೃಷ್ಣಪಕ್ಷ ಅಷ್ಟಮಿ ಸೋಮವಾರ

ಪುಟ್ಟು ಬಸವಲಿಂಗದೇವರು ಸಹಪುರದ ಜುಟ್ಟಿನ

ಗಂಗಾಧರ ದೇವರಮಠದಲ್ಲಿ ಷಟ್ಕಾವ್ಯ ಬರೆದು ಮುಗಿತು[೫] (ಕ್ರ.ಸಂ.೩೫೪)

ಬಸವಲಿಂಗ, ಗಂಗಾಧರ ಎಂಬ ವ್ಯಕ್ತಿನಾಮಗಳೊಂದಿಗೆ ದೇವರಮಠ ಎಂಬ ಕುಲನಾಮ ಹಸ್ತಪ್ರತಿಯಲ್ಲಿ ದಾಖಲಾಗಿರುವುದು ಗಮನಾರ್ಹ.

* ಭಕ್ತರ ಕೃಪೆಯಲಿ ನಿರೂಪದಿಂದ ಮಯಿಸೂರ ಶ್ರೀ ಗಿರಿದೇವನು ಸುಪುತ್ರನಾದ ಚೆಂನಬಸವಯ್ಯನು ಬರದ ಆರಾಧ್ಯ ಚಾರಿತ್ರ ಭೋಗವಾದಿಯ ಮಠದ ಅತಿಥಿ ಸಿದ್ಧ ವೀರೇಶ್ವರ ದೇವರ ನಿರೂಪದಿಂದ ಮೈಸೂರು ಶ್ರೀ ಗಿರಿದೇವಯ್ಯನ ಸುಪುತ್ರನಾದ ಚೆನ್ನ ಬಸವಯ್ಯನು ಬರೆದ ಆರಾದ್ಯ ಚರಿತ್ರೆ[೬] (ಕ್ರ.ಸಂ.೫೧೨)

ಗಿರಿದೇವ, ಚೆಂನಬಸವಯ್ಯ, ಸಿದ್ದವೀರೇಶ ಎಂಬ ವ್ಯಕ್ತಿನಾಮಗಳೊಂದಿಗೆ ಭೋಗವಾದಿಯ ಮಠ ಎಂಬ ಕುಲನಾಮವನ್ನು ನೋಡಬಹುದು.

* ಮರುಳ ವೀರಣೊಂಡೆದೇವರು ಅವರ ಕಲಕಂಜೋದ್ಭವರು. ಚಿಕ್ಕಡಹಳ್ಳಿಯ ವೀರಣೊಂಡೆದೇವರು ಅವರ ಹಸ್ತಸಂಭವರು ಮರುಳಸಿದ್ದದೇವರು ಅವರ ಕರಬಿಸರುಹರು ಚಂದ್ರ ಶೇಖರದೇವರು ಚಂದ್ರಶೇಖರದೇವರ ಕರಕಮಲದಲ್ಲಿ ಉತ್ಪತ್ತಿಯಾದ ವೀರಮಾಹೇಶ್ವರಾಚಾರ್ಯರ ಭೃತ್ವರಾದ ವಿರಕ್ತ ಮರುಳ ಸಿದ್ದದೇವರು ತಮಗೆ ಬರೆದುಕೊಂಡ ಪುಸ್ತಕವಿದು.[೭] (ಕ್ರ.ಸಂ. ೫೧೪)

[illegible]

ಮರುಳ ವೀರಣೊಡೆದೇವರು, ವೀರಣೊಡೆದೇವರು ಮರುಳಸಿದ್ದ. ಚಂದ್ರಶೇಖರ ವೀರಮಾಹೇಶ್ವರ ವಿರಕ್ತ ಮರುಳಸಿದ್ದ ಎಂಬ ವ್ಯಕ್ತಿನಾಮಗಳನ್ನು ನೋಡಬಹುದು.

* ವಿಭವ ಸಂವತ್ಸರದ ವೈಸಾಕ ಬಹುಳ ಅಮವಾಸೆಯಲ್ಲು ಬರದವರು ಚೆಂನಬಸವರಾಜ ದೇವರು ಬರಸಿದವರು ದೇಶಾಭಾದಲ್ಲಿ ಚರಮೂರ್ತಿಗಳಾಗಿ ಚರಿಸಾಡುವ ವಿರಕ್ತಮೂರ್ತಿಗಳಾದಂಥಾ ಪಚ್ಚೇ ಕಂಥೇಸ್ವಾಮಿಯವರಿಗೆ ಆಯುರಾರೋಗ್ಯ ಅಯಿಶ್ವರಿ ಆಗಲೆಂದು ಬರ[೮] (ಕ್ರ.ಸಂ.೫೪೪೮)

ಈ ಕಥಾಸಾಗರವನ್ನು ಬರೆಸಿರುವುದಕ್ಕೆ ಕಾರಣವೇನು ಎಂಬುದನ್ನು ನೀಡಿದ್ದಾರೆ. ವಿರಕ್ತಮೂರ್ತಿಗಳಾದಂಥಾ ಪಚ್ಚೇಕಂಥೇಸ್ವಾಮಿಯವರಿಗೆ ಆಯರಾರೋಗ್ಯ ಆಯಿಶ್ವರಿ ಆಗಲೆಂದು ಬರೆದು ಕೊಟ್ಟರುವುದಾಗಿ ಹೇಳಿದ್ದಾರೆ. ಇಲ್ಲಿ ಚೆಂನಬಸವರಾಜ, ಪಚ್ಚೇಕಂಥೇಸ್ವಾಮಿ ಎಂಬ ವ್ಯಕ್ತಿನಾಮಗಳಿವೆ.

* ಉದ್ಧರಣೆಯ ವಾಚ್ಯ ಸಂಬಂಧವ ನಂಬ್ಯಣನ್ಣವರಿಗೆ ರುದ್ರಮುನಿ ಬರಕೊಟ್ಟನು ಅಂತಪ್ಪಾ ಶ(ರ)ಣರ ಚರಸೇವ(ಕ)ನೆಂದು ಚಿಂದಿಗೆ ಚೆನಬಸವೇಶ್ವರದೇವರ ಸ್ತಾನಿಕ ಚೆಂನನು ಬರದ ಪ್ರತಿ.[೯] (ಕ್ರ.ಸಂ. ೫೭೪)

ಉದ್ಧರಣೆಯ ವಾಚ್ಯ ಎನ್ನುವ ಕೃತಿಯನ್ನು ರುದ್ರಮುನಿಯವರು ನಂಬ್ಯಣ್ಣನವರಿಗೆ ಬರೆದುಕೊಟ್ಟದ್ದಾರೆ. ನಂಬ್ಯಣ್ಣ ರುದ್ರಮುನಿ, ಚೆನಬಸವೇಶ್ವರ ಚೆಂನ ಎಂಬ ವ್ಯಕ್ತಿನಾಮಗಳು ಕಂಡುಬರುತ್ತವೆ.

* ಸರ್ವಜೀತವಾಮ ಸಂದ ಚೈತ್ರ ಶುಶಿಯಲು ಚಿಕನಾಯಕನಹಳ್ಳಿಯ ಸುಬ್ಬೈಯನವರ ಮಗ ದಾಸಿಯಪ್ಪನು ಬರದ ಪುಸ್ತಕ[೧೦] (ಕ್ರ.ಸಂ. ೬೧೩)

ಸುಬ್ಬೈಯ, ದಾಸಿಯಪ್ಪ ಎಂಬ ವ್ಯಕ್ತಿನಾಮಗಳನ್ನು ಇಲ್ಲಿ ನಾವು ನೋಡಬಹುದು.

* ವಪ್ಪಹತ್ತಿನ ಕಡೆ ಚರಮೂರ್ತಿಗಳಾದ ನೀಲಕಂಠಪ್ಪನವರು ಪಚ್ಚೆಕಂಥೆ ಕಥೆ ಬಸವಲಿಂಗದೇವರು ಬರದು ಸಮಾಪ್ತಿಯಾಯಿತ್ತು.[೧೧] (ಕ್ರ.ಸಂ.೭೧೨)

ನೀಲಕಂಠಪ್ಪ, ಪಚ್ಚೆಕಂಥೆಸ್ವಾಮಿ ಎಂಬ ವ್ಯಕ್ತಿನಾಮಗಳನ್ನು ನಾವು ಇಲ್ಲಿ ಕಾಣಬಹುದು.

* ಸರ್ವಧಾರಿ ಸಂವತ್ಸರದ ಶ್ರಾವಣ ಬಹಿಲ್ಲೂ ಅರುಟಾಳ ಮಠದ ಶಾಂತದೇವರ ಶಿಷ್ಯರು ಕೆಂಚಸಿದ್ದೆಯ ದೇವರು ಹಣಬೆ ಮಠದ ಚೆಂನವೀರಣೊಡೆದ್ದೇವರ ಶಿಷ್ಯ ಸಿದ್ದ ಇಯ್ಯನಿಗೆ ಬರೆದ ಏಕೋತ್ತರ[೧೨] (ಕ್ರ.ಸಂ.೭೫೨)

ಶಾಂತದೇವ, ಕೆಂಚಸಿದ್ದ, ಚನ್ನವೀರ, ಸಿದ್ದಯ್ಯ ಎಂಬ ವ್ಯಕ್ತಿನಾಮಗಳೊಂದಿಗೆ ಹಣಬೆಮಠ ಅರುಟಾಳಮಠ ಎಂಬ ಕುಲನಾಮಗಳನ್ನು ಸಹ ನೋಡಬಹುದಾಗಿದೆ.

* ಈ ಯೇಕೋತ್ತರ ಸತಸ್ಥಲವನು ಕೀಲಕ ಸಂವತ್ಸರದ ಆಶ್ವೀಜ ಮಾಸದ ಬಹುಳ ಸಪ್ತಮಿ ಬೃಹಸ್ಪತಿ ವಾರದಲ್ಲು ಗುಂಮ್ಮಳಾಪುರದ ಗಿರಿಯಮಠದ ಪರಮಾನಂದದೇವರ ಶಿಷ್ಯರು ಬಸವ

ಪ್ರಭುದೇವರಿಗೆ ನಣಂಚಿಯ ಮಠದ ಮರುಳಸಿದ್ದದೇವರ ಶಿಷ್ಯರು ಚಂದ್ರಶೇಖರ ದೇವರ ಶಿಷ್ಯನು ಮರುಳಸಿದ್ದದೇವರು ಬರೆದ ಪುಸ್ತಕ ಶಿವಗಣಂಗಳ ಪಾದಕ್ಕೆ ಸಮಾಪ್ತಿ[೧೩] (ಕ್ರ.ಸಂ.೭೫೪)

ಪರಮಾನಂದ, ಬಸವಪ್ರಭು, ಮರುಳ ಸಿದ್ಧ, ಚಂದ್ರಶೇಖರ ಎಂಬ ವ್ಯಕ್ತಿನಾಮಗಳೊಂದಿಗೆ ಹಿರಿಯ ಮಠ, ನಣಂಚಿಯ ಮಠ ಎಂಬ ಕುಲನಾಮಗಳು ಹಸ್ತಪ್ರತಿಯಲ್ಲಿ ದಾಖಲಿಸಿದ್ದಾರೆ.

* ದುಂದುಬಿ ಸಂಮ್ಮಸರದಾ ವೈಶಾಖ ಶು೨ಗೆ ಸೋಮವಾರ ದಿವಸ ಸಮಾಪ್ತಂ, ಶ್ರೀ ಮಹಾರಜದುರ್ಗದ ಕಲ್ಲೇ ನಿಂಗಯ್ಯನಮಗ ಕಲ್ಲೈಯನ ಮಗ ಸಿದ್ಧರಾಮನು ಓದಿಕೊಳದಕ್ಕೆ ಹಸ್ತಂತ್ರ ಬರದ ಬರಹ ಶ್ರೀ ಶ್ರೀ.[೧೪] (ಕ್ರ.ಸಂ.೮೨೦)

ಕದಂಬ ನೀತಿ ಮಾಲಿಕೆಯನ್ನು ಓದಿಕೊಳುವುದಕ್ಕೆ ಸಿದ್ಧರಾಮನು ಬರೆದುಕೊಂಡಿದ್ದಾನೆ. ಕಲ್ಲೇನಿಂಗಯ್ಯ, ಸಿದ್ಧರಾಮ ಎಂಬ ವ್ಯಕ್ತಿನಾಮಗಳನ್ನು ಇಲ್ಲಿ ನೋಡಬಹುದು.

* ಈ ಪುಸ್ತಕವ ಬರದವರು ಆರೆಂದಡೆ ಕಂಡತ್ತಿ ಮಠದ ಪರುತ್ತ ದೇವರು ಪುಸ್ತಕ ಬರದವರು ರಾಮಘಟ್ಟದ ಬಸವಲಿಂಗದೇವರು ಯೆತ್ತಿದ ಪ್ರತಿ[೧೫] (ಕ್ರ.ಸಂ.೧೨೪೩)

ಗಂಗೆಗೌರಿ ಸಂವಾದ ಕೃತಿಯನ್ನು ಬರೆದ ಲಿಪಿಕಾರ ಕಂಡತ್ತಿಮಠದ ಪುರುತ್ತದೇವರು ಇಲ್ಲಿ ಪರುತ್ತ ದೇವರು, ಬಸವಲಿಂಗ ವ್ಯಕ್ತಿನಾಮ ಹಾಗೂ ಕಂಡತ್ತಿಮಠ ಎಂಬ ಕುಲನಾಮಗಳನ್ನು ನೋಡಬಹುದಾಗಿದೆ.

* ಶಾಲಿವಾಹನ ಶಖೆ ೧೯೭೭ಯಿವ ಸಂವತ್ಸರದಾ ಜೇಷ್ಠ ಸುದ್ಧ ೧೧ರಲ್ಲು ಪುರಾಣದ ಬಗೆ ವೀರಪ್ಪವಡೇರ ಕರಜಾತನಾದ ಕಲ್ಯಾಣದೈಯ್ಯನು ಹೇರೂರ ಕೆರೆಮ(ಠ)ದ ಚೆಂನಮಲ್ಲಪ್ಪನವರಿಗೆ ಬರಕೊಟ್ಟ ಗಣಂಗಳತಾರಾವಳಿ ಸೋಮೇಕಟ್ಟೆ ಚೆನ್ನವೀರಸ್ವಾಮಿ[೧೬] (ಕ್ರ.ಸಂ.೧೨೬೩)

ಗಣಂಗಳ ತಾರಾವಳಿಯನ್ನು ಬರೆದ ಲಿಪಿಕಾರ ಕಲ್ಯಾಣದೈಯ್ಯ ಇತನು ಈ ಕೃತಿಯನ್ನು ಹೇರೂರ ಕೆರೆಮ(ಠ)ದ ಚೆಂನಮಲ್ಲನವರಿಗೆ ಬರೆದು ಕೊಟ್ಟಿದ್ದಾನೆ. ಕಲ್ಯಾಣದೈಯ್ಯ ಚೆಂನಮಲ್ಲಪ್ಪ ಎಂಬ ವ್ಯಕ್ತಿನಾಮದೊಂದಿಗೆ ಕೆರೆಮಠ ಎಂಬ ಕುಲನಾಮ ಉಲ್ಲೇಖಿತಗೊಂಡಿದೆ.

* ಶ್ರೀಮತು ಖಾಸದ ಸೋಲೂರ ಗುಂಟನೂರ ಮಠದ ಸಂಗನ ಬಸವಪ್ಪನವರು ಸರ್ವಧಾರಿ ಸಂವತ್ಸರದ ಶ್ರಾವಣ ಸುದ್ಧ ವ್ಯಾಲಚೌತಿ ಗುರುವಾರದ ಪ್ರಾತಃಕಾಲದಲ್ಲಿ ಶ್ರೀರುದ್ರಚಮೆ ಪುರುಷ ಸೂಕ್ತ ಸಹಸ್ರನಾಮಗಳ ಸೇರುವೆಯ ಪುಸ್ತಕ ಬರೆದು ಮುಗಿದ[೧೭] (ಕ್ರ.ಸಂ.೧೩೨೭)

ಸಂಗನ ಬಸವಪ್ಪ ಎಂಬ ವ್ಯಕ್ತಿನಾಮದೊಂದಿಗೆ ಗುಂಟನೂರ ಮಠದ ಸಂಗನಬಸವಪ್ಪನವರು ಎಂಬ ಕುಲನಾಮವನ್ನು ಹಸ್ತಪ್ರತಿಯಲ್ಲಿ ಉಲ್ಲೇಖಿತವಾಗಿದೆ.

* ಶ್ರೀ ಮತ್ಸಾ (ಲಿವಾಹನಶಕ) ವರ್ಷ ೧೪೩೫ ಸಂದುವರ್ತಮಾನ ಕಲಿಯುಗ ಧಾತು ಸಂವತ್ಸರದ ಫಲ್ಗುಣ ಬ ೧೨ ಗುರುವಾರದಲೂ ಹೆಗ್ಗೆವಾಡಿಯಲು ಯಿಹ ನಾಗರಸಯ್ಯನವರ ಮಕ್ಕಳು ಸಂಣಹಂಣನವರು ಯಲವಕೂರಿನಲ್ಲಿಹ ವಿರಪವೊಡೆಯರು ದೇವರ ಕೊಮಾರರೂ ವಿರಂಣ ವೊಡೆಯರಿಗೆ ಬರೆದುಕೊಟ್ಟ ಗಿರಿಜಾ ಕಲ್ಯಾಣ.[೧೮] (ಕ್ರ.ಸಂ.೧೩೬೨)

ನಾಗರಸಯ್ಯನವರ ಮಕ್ಕಳು ಸಂಣಹಂಣನವರು ಯಲವಕೂರಿನಲ್ಲಿಹ ವಿರಪವೊಡೆಯರು ವೀರಂಣವೊಡೆಯರಿಗೆ ಗಿರಿಜಾಕಲ್ಯಾಣವನ್ನು ಬರೆದುಕೊಟ್ಟಿದ್ದಾರೆ. ಇಲ್ಲಿ ನಾಗರಸಯ್ಯ ಸಂಣಹಂಣ ವಿರಪವೊಡೆಯ, ವೀರಂಣವೊಡೆಯ ಎಂಬ ವ್ಯಕ್ತಿನಾಮಗಳಿರುವುದನ್ನು ಗಮನಿಸಬಹುದು.

* ಶ್ರೀ ಮನ್ಮಹಾರಾಜಧಿರಾಜ ಪೂಜಿತರಾದ ರಾಣಿಬೆಂನೂರಿನಲ್ಲಿ ಯಿರುವ ಹೊಸಮಠದ ಮರಳುಸಿದ್ಧಪ್ಪನವರ ಕುಮಾರನಾದಂಥ ಸಿವಬಸಪ್ಪೈಯ್ಯನವರು ವುದ್ದಿದೇಸಾಯಿ ದೇವೈಯ್ಯ ಗೌಡರಿಗೆ ಧನಕನಕ ಅಂದೋಳ ಛತ್ರ ಚಾಮರಾರಾಜ್ಯಧಿ ಪತೀತ್ವ ದುರ್ಗ್ಗಾದಿಪತ್ಯಅನೇ[೧೯] (ಕ್ರ.ಸಂ. ೧೬೭೨)

ಮರುಳ ಸಿದ್ಧಪ್ಪ, ಸಿವಬಸಪ್ಪೈಯ್ಯ, ದೇವಯ್ಯ ಎಂಬ ವ್ಯಕ್ತಿನಾಮಗಳನ್ನು ಹಾಗೂ ಹೊಸಮಠದ ಮರುಳಸಿದ್ಧಪ್ಪ ಎಂಬ ಕುಲನಾಮ ಇದೆ.

* ನಳ ಸಂ ಆಶ್ವೀಜ ಶುದ್ಧ ಪೌರ್ನಿಮಿ ಸೋಮವಾರ ಬಿದುರೆಯ ಸಿದ್ಧಲಿಂಗದೇವರ ಶಿಷ್ಯರು ಚೆನ್ನಮಲ್ಲಿಕಾರ್ಜುನ ದೇವರು ಅನುಭಾವದ ವೀರಣ್ಣೊಡೆ ದೇವರ ಕುಮಾರ ಚೆಂನದೇವರಿಗೆ ಬರದು ಕೊಟ್ಟರು[೨೦] (ಕ್ರ.ಸಂ. ೧೮೬೧)

ಇದರಲ್ಲಿ ಸಿದ್ಧಲಿಂಗದೇವ, ಚೆನ್ನಮಲ್ಲಿಕಾರ್ಜುನ, ವೀರಣ್ಣೊಡೆಯ, ಚೆಂನ ಎಂಬ ವ್ಯಕ್ತಿನಾಮಗಳನ್ನು ನಾವು ಇಲ್ಲಿ ನೋಡಬಹುದು.

* ವಿಕಾರಿ ಸಂವತ್ಸರ ಮಾಗ ಶು೧೫ ಸೋಮವಾರ ಮೈಸೂರು ನಂಬ್ಯಣ್ಣ ದೇವರ ಮಕ್ಕಳು ಆಲೂರಲ್ಲಿ ಇಹ ನೋಟದ ನಂಬ್ಯಣ್ಣ ದೇವರ ಮಕ್ಕಳು ಸಿದ್ಧವೀರೈಯ್ಯನ ಕುಮಾರ ಚೆನ್ನವೀರ ದೇವರಿಗೆ ಬರದು ಕೊಟ್ಟ ನನ್ನಯ್ಯಗಳ...[೨೧] (ಕ್ರ.ಸಂ. ೨೦೦೧)

ನಂಬ್ಯಣ್ಣ, ನೋಟದ ನಂಬ್ಯಣ್ಣ, ಸಿದ್ಧವೀರೈಯ್ಯ, ಚೆನ್ನವೀರ ಎಂಬ ವ್ಯಕ್ತಿನಾಮಗಳಿವೆ.

* ಶ್ರೀ ಗುರು ಸಿದ್ಧಲಿಂಗೇಶ್ವರನ ಸಂಸ್ಕಾರ ಕಾರಣನಾದ ಗುರು ಲಿಂಗಾಣಾಚಾರಿಯ್ಯರು ಆ ಗುರು ಲಿಂಗಣಾಚಾರ್ಯರ ಸಂಸ್ಕಾರ ಕಾರಣನಪ್ಪ ಚಂನಬಸವೇಶ್ವರನು ಬರೆದ ಅನುಭವಸಾರ ಲೇಖನ ಕೃತ್ಯದ ಪುಸ್ತಕ[೨೨] (ಕ್ರ.ಸಂ. ೧೩೦)

ಗುರುಲಿಂಗಣಾಚಾರ್ಯ, ಚಂನಬಸವೇಶ್ವರ, ಎಂಬ ವ್ಯಕ್ತಿನಾಮಗಳ ಪ್ರಸ್ತಾಪಗಳಿವೆ.

* ಕೊಡಗು ಸಂಸ್ಥಾನದಲ್ಲಿ ಇರುವ ಅಮ್ಮತಿನಾಡು ಬೆಳಗುಂದದ ಗ್ರಾಮದ ಮಕ್ಕಾಟ್ಟಿ ಅ್ಯಯ್ಯಪ್ಪನ ಪ್ರತಮ ಪುತ್ರ ಮಹಸ್ವಾಮಿಯವರ ದಿವ್ಯ ಈ ಚರಣಾರವಿಂದದಲ್ಲಿ ಸಾರ್ವಕಾಲದಲ್ಲಿ ಸೇವೆ ಮಾಡಿಕೊಂಡು ಯಿರುವ ರಾಯ ಸದ ಮುಧುಅಂಣವವರಿಗೆ ನಗರದ ಸಂಸ್ತಾನದಲ್ಲಿ ಯಿಕ್ಕೇರಿ ಕರೀದಿ ಹೋಬಳಿ ವಳಗಣ ಕರೀದಿ ಹೋಬಳಿಲಿಯಿರುರ ಕಲ್ಲೆ ನಾರಾಯಣನು ಈ ಪುಸ್ತಕ ಬರೆದವನು.[೨೩](ಕ್ರ.ಸಂ. ೩೦೮)

[illegible]

ಅಯ್ಯಪ್ಪ, ಮಧುಅಂಣ, ಕಲ್ಲೆನಾರಾಯಣ ಎಂಬ ವ್ಯಕ್ತಿನಾಮಗಳು ಹಸ್ತಪ್ರತಿಯಲ್ಲಿವೆ.

* ಪಾರ್ತಿವ ಸಂವತ್ಸರದ ಮಾಘ ಬ೧೧ಲ್ಲು ಮಾದಳ್ಳಿಮಠದ ಚಿಕವೀರಂಣೊಡೆಯದೇವರ ಶಿಷ್ಯರು ಶಿವನಂಕಾರ ದೇವರಿಗೆ ತಗಡೂರ ದೊಡ್ಡ ಮಲ್ಲೊಡೆಯರ ಕುಮಾರ ಚಂದ್ರೊಡೆಯರು ತಂಮ ಭಕ್ತಿಯಿಂದ ಬೈಚಂಣೊಡೆಯರ ಹಸ್ತದಲ್ಲಿ ಬರಯಿಸಿಕೊಟ್ಟ ಏಕೋತ್ತರ ಶತಸ್ಥಲ ಶಿವಾರ್ಪಣಮಸ್ತು[೨೪] (ಕ್ರ.ಸಂ. ೪೨೮)

ಚಿಕವೀರಂಣೊಡೆಯ, ಶಿವನಂಕಾ ದೊಡಮಲ್ಲೊಡೆಯ, ಚಂದ್ರೊಡೆಯ, ಬೈಚಂಣೊಡೆಯ, ಎಂಬ ವ್ಯಕ್ತಿ ನಾಮಗಳೊಂದಿಗೆ ಮಾದಳ್ಳಿಮಠದ ಚಿಕವೀರಣೊಡೆಯ ಎಂಬ ಕುಲನಾಮವನ್ನು ಈ ಹಸ್ತಪ್ರತಿ ಉಲ್ಲೇಖಿಸಿದೆ.

* ವೀವ ಸಂವತ್ಸರದ ಆಶಾಡ ಬ ೧೨ಲ್ಲು ಮೇಗಳಕೆರೆ ಶಾನುಭೋಗ ಶಾಂತಪ್ಪನ ಮಗ ಆವರಗೊಳದ ಶಾನುಭೋಗ ಮಲ್ಲಣ್ಣನ ಮಗ ಹಿರೇಕೊಟ್ಟಪ್ಪನ ಶಿಷ್ಯ ಸಿದ್ಧಲಿಂಗಣ ಬರದಕಾಲ ಚಕ್ರ.[೨೫] (ಕ್ರ.ಸಂ. ೫೭೯)

ಕಾಲಚಕ್ರ ಕೃತಿಯನ್ನು ಬರೆದ ಲಿಪಿಕಾರ ಸಿದ್ಧಲಿಂಗಣ. ಶಾಂತಪ್ಪ, ಮಲ್ಲಣ್ಣ, ಸಿದ್ಧಲಿಂಗಣ ಎಂಬ ವ್ಯಕ್ತಿನಾಮಗಳನ್ನು ಇಲ್ಲಿ ನೋಡಬಹುದಾಗಿದೆ.

* ಕಾಳಾಯುಕ್ತಿ ಸಂವತ್ಸರದ ಆಸ್ವೀಜ ಬ೧೧ ಗುರುವಾರದಲ್ಲೂ ಶ್ರೀ ಮಮಾಯಾದಲಕಟ್ಟೆ ರುದ್ರಪ್ಪನೂ ಕೋಮಟಿಗರ ಚಂನಪ್ಪನ ಮಗ ಯಂಕಗೆ ಧನ ಕನಕ[೨೬] (ಕ್ರ.ಸಂ. ೮೦೪) ರುದ್ರಪ್ಪ, ಚಂನಪ್ಪ, ಯಂಕ, ಎಂಬ ವ್ಯಕ್ತಿನಾಮಗಳಿವೆ.

* ರೊಉದ್ರಿ ಸಂವತ್ಸರ ವೈಖ್ಯಕ ಸುಂಧ ೧೩ಯಲು ಸಿಂದಗಟ್ಟಿದ ಮಠ ದೊಡ್ಡೈಯನೋರ ಮಗ ಕಲ್ಯಾಣದ್ಯೆ ಅವರ ಮಗ ಕಲ್ಯಾಣದ್ಯೆಯ್ಯ ಬರದ ಪ್ರಭುಲಿಂಗಲೀಲೆ.[೨೭] (ಕ್ರ.ಸಂ. ೧೪೮೧) ದೊಡ್ಡೈಯ ಕಲ್ಯಾಣದ್ಯೆ ಎಂಬ ವ್ಯಕ್ತಿನಾಮದೊಂದಿಗೆ ಸಿಂದಗಟ್ಟದಮಠ ದೊಡ್ಡೈಯನೊರ ಎಂಬ ಕುಲನಾಮವನ್ನು ಗುರುತಿಸಬಹುದು.

* ಹೊನ್ನಹಳ್ಳಿಯ ಮಠದ ದೊಡ್ಡದೇವರ ಹಂಪಣ್ಣ ದೇವರ ವರಸುತನು ಪ್ರಭುದೇವರು ಬರೆದ ಭಾವಚಿಂತಾರತ್ನ[೨೮] (ಕ್ರ.ಸಂ.೧೯೯೩)

ದೊಡ್ಡದೇವ, ಹಂಪಣ್ಣ, ಪ್ರಭುದೇವ, ಎಂಬ ವ್ಯಕ್ತಿನಾಮದೊಂದಿಗೆ ಹೊನ್ನಹಳ್ಳಿಯಮಠದ ದೊಡ್ಡದೇವರ ಎಂಬ ಕುಲನಾಮವಿದೆ.

* ಬಾವನಾಮ ಸಂವತ್ಸರ ಕಾರ್ತೀಕ ೫ ಸೋಮವಾರ ಗಂಗಾಧರ ದೇವರ ಮಗ ಶೈಬೈಯ್ಯನವರ ಸ್ವಹಸ್ತದ ಬರಹ[೨೯] (ಕ್ರ.ಸಂ. ೨೧೪೭)

ಗಂಗಾಧರ, ಶೈಬೈಯ್ಯ ಎಂಬ ವ್ಯಕ್ತಿನಾಮಗಳು ಇಲ್ಲಿ ಉಲ್ಲೇಖಗೊಂಡಿವೆ.

* ಗಣಪನವರ ರಘಪತಯ್ಯನ ಮಗ ಚಿಗವರದಯ್ಯನು ಹೊಸಟ್ಟಿ ಹನುಮಯ್ಯನ ಮಗ ಕೆಂಚಯ್ಯಗೆ ವಿಕೃತಿ ಸಂವತ್ಸರದ ಆಶ್ವೀಜ ಶು. ೧೫ಲು ಬರಕೊಟ್ಟ ವಿರಾಟ ಪರ್ವ ಮಂಗಳ ಮಹಾ[೩೦] (ಕ್ರ.ಸಂ. ೨೩೬೯)

ಗಣಪ, ರಘುಪತಯ್ಯ, ಚಿಗವರದಯ್ಯ, ಹನುಮಯ್ಯ, ಕೆಂಚಯ್ಯ ವ್ಯಕ್ತಿನಾಮಗಳಾಗಿವೆ.

* ಶ್ರೀ ಶಕಾಬ್ದಾ ೧೭೭೯ನೆ ಕಾಳಯುಕ್ತಿನಾಮ ಸಂವತ್ಸರದ ಶ್ರಾವಣ ಬ.೧೪ ಸೋಮವಾರ ಮಗ ನಕ್ಷತ್ರ ಯುಕ್ತಮಾದ ಶುಭದಿವಸದಲ್ಲು ಪುಂಗನೂರ ಕೆಂಪಿನ ಯೋಕೋತ್ರ ಗವಿಮಠದ ರಾಘವಾಂಕ ಸ್ವಾಮಿಗಳವರು ಹೊಸಕೋಟೆ ಆಡಕೆ ಚಂಗಪ್ಪನಿಗೆ ಬರೆದುಕೊಟ್ಟ ಶರಣಲೀಲಾ ವಿಲಾಸ[೩೧] (ಕ್ರ.ಸಂ. ೨೫೫೧)

ರಾಘವಾಂಕಸ್ವಾಮಿ, ಚಂಗಪ್ಪ, ಎಂಬ ವ್ಯಕ್ತಿನಾಮದೊಂದಿಗೆ ಪುಂಗನೂರ ಕೆಂಪಿನ ಯೇಕೋತ್ರ ಗವಿಮಠದ ರಾಘವಾಂಕಸ್ವಾಮಿ ಎಂಬ ಕುಲನಾಮಗಳಿದ್ದವು.

* ಸ್ವಸ್ತಿ– ವರುಷ ೧೫೫೨ನೆಯ ನಳ ಸಂವತ್ಸರದ ಫಾಲ್ಗುಣ ಶು.೫ ಸೋಮವಾರ ಪ್ರಾತಃ ಕಾಲಕ್ಕೆ ಮುಗಿದ ಸಾಸಲ–ಶ್ರೀಮತ್ಸಜ್ಜನ ಶುದ್ಧ ಶಿವಾಚಾರ ಸಂಪನ್ನರಾದ ದೇವಾ ಪೃಥ್ವಿ ಮಹಾಮಹತ್ತಿ ನೊಳಗಾದ ಹೊನಾಳಿಪೇಠೆಯ ಮಟದ ಮಹಾಂತದೇವರ ಮಗ ರಚವಟ್ಟಿ ದೇವರು ನೇಮತಿಗೌಡರು ಲಿಂಗಬಾನ ಮಗ ಲಿಂಗಯ್ಯಗೆ ಆಯುರಾರೋಗ್ಯ ಭೈರೇಶ್ವರ ಕಾವ್ಯವ ಬರೆದು ಕೋಟ್ಟಿದು.[೩೨] (ಕ್ರ.ಸಂ. ೩೦೯೩)

ರಾಚವಟ್ಟಿ ದೇವರು ಹಾಗೂ ನೇಮತಿಗೌಡರು ಲಿಂಗಯ್ಯಗೆ ಭೈರೇಶ್ವರ ಕಾವ್ಯವನ್ನು ಬರೆದುಕೊಟ್ಟಿದಾರೆ ಮಹಾಂತದೇವ, ರಾಚವಟ್ಟಿ, ನೇಮತಿಗೌಡ, ಲಿಂಗಬಾನ, ಲಿಂಗಯ್ಯ ಎಂಬ ವ್ಯಕ್ತಿನಾಮಗಳನ್ನು ಗಮನಿಸಬಹುದಾಗಿದೆ.

೨. ಸಮಾಜದ ವ್ಯಕ್ತಿಗಳ ವೃತ್ತಿಗಳು :

ಹಸ್ತಪ್ರತಿಗಳಲ್ಲಿ ಉಲ್ಲೇಖಗೊಂಡ ವೃತ್ತಿಗಳ ಮೂಲಕವಾಗಿ ಅಲ್ಲಿಯ ಜನರ ಸ್ಥಾನಮಾನವನ್ನು ಗುರುತಿಸಬಹುದು. ಜನರು ವಿವಿಧ ವೃತ್ತಿಗಳ ಮೂಲಕ ಹೇಗೆ ಜೀವನವನ್ನು ನಡೆಸುತ್ತಿದ್ದರೆಂಬುದನ್ನು ನೋಡಬಹುದು. ಉಪಾಧ್ಯ, ಏಜೆಂಟ್, ಗುರಿಕಾರ, ಚಿಪ್ಪಿಗ, ಅಕ್ಕಸಾಲೆ, ಜಿವಳಿಗ, ದೇವಾಂಗ, ನೀಲಗಾರ, ಬಣಜಿಗ, ಬಳೇಸಾಲಿ, ರಾಯಸ್ತ, ವಕೀಲ, ಶಾನಭೋಗ, ಶೆಟ್ಟಿ, ಸೇವಕ ಹೀಗೆ ವಿವಿಧ ವೃತ್ತಿಗನುಗುಣವಾಗಿ ಅಲ್ಲಿಯ ಜನರ ಜೀವನವನ್ನು ನಿರ್ಧರಿಸಬಹುದು.

* ಸಾಧಾರಣ ಸಂವತ್ಸರದ ಅಧಿಕ ವೈಶಾಕ ಶು ೫ಯ ಸೌಮ್ಯವಾರ ಗಳಿಗೆ ೧೬ರಲ್ಲು ಮೊದ್ಲ ಪ್ರತಿಯಿದ್ದಾಗ್ಯೆ ಬರದಾಯಿದ್ದೇನೆ.. ಕೊಡ್ಲಿಪ್ಯಾಟೆಯಲ್ಲು ಯಿರುವ ಹಂಪಸಾಗರ ಚಿಪ್ಪಿಗರ ದೊಡ್ಡ ಬಸ್ಸೆಯನ ಮಗ ಶಾಂತಪ್ಪ ಶೆಟ್ಟಿಯ ಯಸಳೂರ ಪ್ಯಾಟೆಯ ವೇಮಲು ಶೆಟ್ಟಪ್ಪಗೆ.[೩೩] (ಕ್ರ.ಸಂ. ೧೮೧) ಚಿಪ್ಪಿಗ ಎಂದಾಗ 'ಶಿಲ್ಪಿ' ಎಂಬ ಅರ್ಥವನ್ನು ಪಡೆದುಕೊಳ್ಳುತ್ತಿದೆ. ಅಂದರೆ

'ಶಿಲ್ಪಿಗಳು ಸಹ ಇದ್ದರೆಂದು, ಕೆತ್ತನೆಯ ವೃತ್ತಿಯನ್ನು ಅವಲಂಬಿಸಿಕೊಂಡು ಇವರು ತಮ್ಮ ಜೀವನವನ್ನು ನಡೆಸುತ್ತಿದ್ದರು; ಇವರಿಗೆ ಸಮಾಜದಲ್ಲಿ ಬೇಡಿಕೆ ಇತ್ತೆನ್ನಬಹುದು. ಹಾಗೆಯೇ ಇವರು ಪ್ರಮುಖ ಸ್ಥಾನವನ್ನು ಹೊಂದಿದರೆನ್ನಬಹುದು.

* ಶ್ರೀಮತು ವಿಳಂಬಿನಾಮ ಸಂವತ್ಸರದ ಶ್ರಾವಣ ಬಹುಳ ೧೦ ಭಾನುವಾರ ಮಹಂತ ಮಲ್ಲಿಕಾರ್ಜುನಸ್ವಾಮಿ ಪಾದಾರವಿಂದಕ್ಕೆ ಸಂಗೀತದ ಚೆಂನಬಸಪ್ಪನು ಭಕ್ತಿ ಪುರಸ್ಸರ ದಿಂದ ಬರದು ಕೊಟ್ಟ ಅನುಭವಸಾರಕ್ಕೆ ಶುಭಮಸ್ತು[೩೪] (ಕ್ರ.ಸಂ. ೨೩೨)

ಸಂಗೀತ ಎನ್ನುವುದು ಪ್ರಮುಖ ವೃತ್ತಿಯಾಗಿದ್ದು ಲಿಪಿಕಾರನು ಸಂಗೀತವನ್ನು ಕಲಿಸುತ್ತಿದುದ್ದರಿಂದ ಹಸ್ತಪ್ರತಿಯಲ್ಲಿ ಉಲ್ಲೇಖಗೊಂಡಿರಬಹುದು. ಮಲ್ಲಿಕಾರ್ಜುನ ಸ್ವಾಮಿಗಳಿಗೆ ಸಂಗೀತದ ಚೆಂನಬಸವಪ್ಪನು ಅನುಭವಸಾರವನ್ನು ಬರೆದು ಕೊಟ್ಟಿರುವುದನ್ನು ನೋಡಬಹುದಾಗಿದೆ.

* ಸ್ವಸ್ತಿಶ್ರೀ... ಶಾಲಿ... ವರುಷಾಗಳೂ॥ ಖರನಾಮ ಸಂವತ್ಸರದ ಜೇಷ್ಠ ೧೨ರು 'ಅಕ್ಕಸಾಲೆ ಬೊಕ್ಕಸದ ಕುಮಾರ ಪುಲ್ಲಪಗೆ ಓದಿಸುವ ರಾಮಪ್ಪನು ಆ ಚೆಂದ್ರಾ.. ಬರೆದು ಕೊಟ್ಟಂಥ...[೩೫] (ಕ್ರ.ಸಂ.೭೫೬) ಉಲ್ಲೇಖಿಸುವಲ್ಲಿ ಕೆಲವು ಅಂಶಗಳು ಬಿಟ್ಟಿರುವುದನ್ನು ನೋಡಬಹುದು. 'ಅಕ್ಕಸಾಲೆ' ಎಂದರೆ ಚಿನ್ನ, ಬೆಳ್ಳಿ, ಕೆಲಸ ಮಾಡುವವನು. ಇಂತಹ ವೃತ್ತಿಯವರು ಸಹ ಇದ್ದರೆಂಬುದನ್ನು ನೋಡಬಹುದು. ಇಲ್ಲಿ ಅಕ್ಕಸಾಲೆ ಎಂದಾಗ ಉನ್ನತ ಸ್ಥಾನವನ್ನು ಪಡೆದಿದ್ದರೆನ್ನಬಹುದು. ಅಕ್ಕಸಾಲೆಗೆ ಸೇರಿದ ಕುಮಾರ ಪುಲ್ಲಪ್ಪ ಎಂಬುವವನಿಗೆ ರಾಮಪ್ಪನು ಬರೆದುಕೊಟ್ಟಂಥ ಎಂದಿದೆ. ಯಾವ ಗ್ರಂಥವನ್ನು ಬರೆದುಕೊಟ್ಟಿದ್ದಾರೆ ಎಂಬುದನ್ನು ಉಲ್ಲೇಖಿಸುವಲ್ಲಿ ಬಿಟ್ಟಿದ್ದಾರೆ.

* "ಚಿತ್ರದುರ್ಗ ತಾಲ್ಲೂಕ್ ಸಿರಿಗೆರೆ ಜಗದ್ಗುರು ತರಳಬಾಳ ಮಠದ ಏಜೆಂಟ್ ಶ್ರೀ ರುದ್ರಪ್ಪಯ್ಯನವರಿಂದ ತರಿಸಿಕೊಳ್ಳಲಾಗಿದ್ದ ಓಲೆ ಪ್ರತಿಯಿಂದೀ ಪ್ರತಿ ತಯಾರು ಮಾಡಿದೆ. ಪ್ರತಿಮಾಡಿದವರು ಶ್ರೀ ಎಂ. ಎಸ್. ಬಸವರಾಜಯ್ಯ ಅವರು[೩೬] (ಕ್ರ.ಸಂ. ೧೦೧೨) ಏಜೆಂಟ್ ಎಂದರೆ ದಲ್ಲಾಳಿ ಕೆಲಸ ಮಾಡುವವನಾಗಿರಬಹುದು. ಈ ಏಜೆಂಟ್ ಪ್ರಮುಖ ವೃತ್ತಿಯಾಗಿರುವುದು. ಕಲ್ಲೇಲಿಂಗೇಶ್ವರನ ಚಾರಿತ್ರ–ಬಸವ ಎನ್ನುವ ಕೃತಿಯನ್ನು ಲಿಪಿ ಮಾಡಿದವರು ಎಂ.ಎಸ್. ಬಸವರಾಜಯ್ಯ ಎಂಬುದಾಗಿ ತಿಳಿದುಬರುತ್ತದೆ.

* ವಿಜಯ ಸಂ ಆವರ್ತನೆ ಅಮವಾಸಿಯ ಅಷ್ಟಮಿ ಸೋಮವಾರ ಎರಡನೆಯ ಜಾವದಲ್ಲು.. ಸಗರದ ಓದಿಸುವ ಚೆನ್ನಯ್ಯ ಪ್ರತಿ ಸಮಾನವಾಗಿ ಬರದ...[೩೭] (ಕ್ರ.ಸಂ. ೧೨೯೭) ಇಲ್ಲಿ ಕೆಲವು ಪದಗಳನ್ನು ಉಲ್ಲೇಖಿಸದೆ ಇರುವುದನ್ನು ನೋಡಬಹುದು. 'ಓದಿಸುವ' ಎಂಬ ವೃತ್ತಿಯಿತ್ತೆಂದು; ಓದಿಸುವ ಎಂದರೆ ಪ್ರತಿಯೊಬ್ಬರಿಗೂ ತನ್ನಲ್ಲಿರುವ ಜ್ಞಾನವನ್ನು ಧಾರೆಎರೆಯುದೆಂದರ್ಥ ಓದಿಸುವ ಚೆನ್ನಯ್ಯನು ರತ್ನಮಾಲೆ ಪುಸ್ತಕವನ್ನು ಬರೆದಿರುವುದನ್ನು ನೋಡಬಹುದು.

* ಶಾಲಿ ೧೭೭೭ನೆ ಪ್ರವರ್ತಮಾನ ರಾಕ್ಷಸನಾಮ ಸಂ ಭಾದ್ರಪದ ಶುದ್ಧ ೩ ಭಾರ್ಗವಾರ ಹುಲಗೂರ ಓದಿಸುಮಠದ ಚೆನ್ನವೀರಂಣ[೩೮] (ಕ್ರ.ಸಂ. ೧೪೯೩)

ಓದಿಸುವುದು ಪ್ರಮುಖ ವೃತ್ತಿಯಾಗಿದ್ದು ಗ್ರಂಥವನ್ನು ಪ್ರತಿ ಮಾಡುತ್ತಿದ್ದುದ್ದನ್ನು ನೋಡಬಹುದು. ಹುಲಗೂರ ಓದಿಸುಮಠದ ಚೆನವೀರಂಣನು ಗುರುರಗಳೆ ವ್ಯಾಖ್ಯಾನವನ್ನು ಬರೆದಿರುವುದು ಗಮನಾರ್ಹ.

* ಪರಾಭವ ಸಂ/ದ ಶ್ರಾವಣ ಶು೧೦ಯಲು ಶ್ರೀಮತು ಯಾದಕೆರೆ ವೆಂಕಪನ ಕುಮಾರ ಸೀತಾರಾಮನು ಸ್ಥಳದ ಶಾನಭೋಗ ತಿಪ್ಪಣ್ಣನ ಕುಮಾರ್ರು ರುದ್ರಪ ಅಯಂಣಗೆ ಬರಕೊಟ್ಟ...[೩೯](ಕ್ರಸಂ. ೧೬೧೧) 'ಶಾನುಭೋಗ' ಎಂಬ ವೃತ್ತಿಯಿತ್ತೆಂದು ಶಾನುಭೋಗ ಎಂದರೆ ಹಳ್ಳಿಯ ಲೆಕ್ಕಪತ್ರಗಳನ್ನು ಬರೆಯುವವನಾಗಿದ್ದಾನೆ. ಇವನಿಗೆ ಸಮಾಜದಲ್ಲಿ ಉನ್ನತ ಸ್ಥಾನವನ್ನು ಕೊಡಲಾಗಿದೆ. ಹಾಗಾಗಿ ಈತ ಉನ್ನತ ವರ್ಗದವನಾಗಿ ಕಂಡುಬರುತ್ತಾನೆ. ತಿಪ್ಪಣ್ಣನ ಮಗನಾದ ರುದ್ರಪ ಅಯಂಣನಿಗೆ ಚಿತ್ರಶೇಖರ ಸೋಮಶೇಖರ ಯಕ್ಷಗಾನವನ್ನು ಬರೆದುಕೊಟ್ಟಿರುವುದನ್ನು ಉಲ್ಲೇಖಿಸಲಾಗಿದೆ.

* ಶಾ. ಶ೧೭೮೭ನೆ ರಕ್ತಾಕ್ಷಿ ಶ್ರಾವಣ ಬ೧೦ ಭೃಗುವಾರ ಮೃಗಶಿರ ನಕ್ಷತ್ರ ವಜ್ರ ನಾಮಯೋಗ ವನಜಕರಣ ಧನುರ್ಲಗ್ನ ಶ್ರೀ ಮತು ನನಿವಾಳ ಮಠದ ಹಿರಿಯೂರೆಲ್ಲೂ ಇರುವ ಓದಿಸುವ ಸಿವರುದ್ರಪ್ಪನು ಬರೆದ ಚನ್ನಬಸವದೇವರ ಪೌರಾಣ.[೪೦] (ಕ್ರ.ಸಂ. ೧೬೭೯) ಇಲ್ಲಿಯೂ ಓದಿಸುವುದು ಒಂದು ವೃತ್ತಿಯಾಗಿ ಕಂಡುಬರುತ್ತದೆ. ಇವರು ಸಹ ಗ್ರಂಥಗಳನ್ನು ಪ್ರತಿ ಮಾಡುತ್ತಿದ್ದುದ್ದನ್ನು ಹಾಗೆಯೇ ಓದಿಸುವ ಸಿವರುದ್ರಪ್ಪನು ಚನ್ನಬಸವದೇವರ ಪುರಾಣವನ್ನು ಬರೆದಿರುವದನ್ನು ದಾಖಲಿಸಲಾಗಿದೆ.

* ಜಯ ಸಂವತ್ಸರದ ಪುಶ್ಯ ಬ೧೨ ಮಂದವಾರ ತಾಸು ೩ಕ್ಕೆ ಮುಗಿಯಿತು. ಯಿದ ಬರದಾತ ಸೂಳೆಕೆರೆಮಠದ ಚಂನಬಸವರಾಜದೇವರ ಕರಕಮಲೋಧ್ಭವನಾದ ವೋದಿಸುವ ಚಂನಬಸವ್ವೆಯನು ಶ್ಯಾಡಗುಪ್ಪೆ ಮಠದ ಬಸವಲಿಂಗದೇವರ ಸಂಣವರು ಮಕ್ಕಳಿಗೆ ಅಷ್ಟೈಶ್ವರ್ಯ ಸಂಪತ್ತು ಆಗಲಿಯೆಂದು ಹರಶಿ ಬರಕೊಟ್ಟ ನಂನ್ಸೈಯ್ಯನವರ ಕಾವ್ಯಕ್ಕೆ ಶುಭಮಸ್ತು.[೪೧] (ಕ್ರ.ಸಂ. ೨೦೦೬) ಇಲ್ಲಿಯೂ ಓದಿಸುವುದು ಪ್ರಮುಖ ವೃತ್ತಿಯಾಗಿದೆ ಇವರು ಸಹ ಗ್ರಂಥಗಳನ್ನು ಪ್ರತಿ ಮಾಡುತ್ತಿದ್ದರು. ಹಾಗೆಯೇ ಓದಿಸುವ ಚಂನಬಸವ್ವೆಯನ್ನು ಸಂಣವರು ಅವರ ಮಕ್ಕಳಿಗೆ ಅಷ್ಟೈಶ್ವರ್ಯ ಸಂಪತ್ತು ಆಗಲಿಯೆಂದು ನಂನ್ಸೈಯ್ಯನವರ ಕಾವ್ಯವನ್ನು ಬರೆದುಕೊಟ್ಟಿದ್ದಾರೆ.

* ಶಾಲಿವಾಹನ ಶಕಾಬ್ದಾ ೧೭೮೫ನೆಯ ಪ್ರವರ್ತಮಾನಕ್ಕೆ ಸಲುವ ದುಂದುಭಿನಾಮ ಸಂವತ್ಸರೆ ಉತ್ತರಾಯನೆ ಶಶಿರುತೌ ಪಾಲ್ಗುಣ ಮಾಸೆ ಕೃಷ್ಣ ಪಕ್ಷೆ ತಿಥೌ ಚಿತುರ್ದಶಿ ೭೭ ಘಟಿ ೧೧ ಪಳಶತತಾರ ನಕ್ಷತ್ರ ೨೦ ಘಟಿ ೧ ಸುದಿವಸ ಬೀರೂರಲ್ಲಿರುವ ತ್ಯಾವಣಿಗೆ ಮಠದ ದತ್ತ ಪುರಯ್ಯನವರ ತನೂಭವ ಶಿವಲಿಂಗದೇವಾಹ್ವಯ ಸುಹಸ್ತದಿಂ ಚನ್ನಗಿರಿಯಲ್ಲಿರುವ ಜವಳಿ ನಾಗಪ್ಪನವರುದರುದ್ಭವರಾದ ಜೇಷ್ಟ ಪುತ್ರ ವೀರಪ್ಪಗೆ ಸದಾ ಸ್ಥಿರತರಾರೋಗ್ಯ ಸೌಭಾಗ್ಯ ಲಕ್ಷ್ಮೀ ಸಂಪತ್ಸಮುದ್ಯಾಗಳೆಂದು ಸ್ವಾಮಿ ಪ್ರಾರ್ಥನೆಯಿಂದ ಸದರಿ ಪೌರಾಣವಂನು ಲಿಖಿಸಿ ಕೊಡುವಂಥಾದ್ದು[೪೨] (ಕ್ರ.ಸಂ. ೨೨೮೪)

[illegible]

‘ಜವಳಿ’ ಎಂದರೆ ಬಟ್ಟೆಯನ್ನು ಮಾರುವವನು. ಬಟ್ಟೆಯನ್ನು ಮಾರಿಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದಾರೆನ್ನೆಬಹುದು. ‘ಜವಳಿ’ ಎಂಬ ವೃತ್ತಿ ಇತ್ತು ಎನ್ನಬಹುದು. ಇವರಿಗೆ ಸಮಾಜದಲ್ಲಿ ಮಧ್ಯಮ ಹಾಗೂ ಕೆಳವರ್ಗದ ಸ್ಥಾನವಿತ್ತು. ಇಲ್ಲಿ ಶಿವಲಿಂಗ ದೇವಾಹ್ವಯರು ಜವಳಿ ನಾಗಪ್ಪನವರ ಹಿರಿಯ ಮಗನಾದ ವೀರಪ್ಪಗೆ ಚೆನ್ನಬಸವ ಪುರಾಣವನ್ನು ಬರೆದುಕೊಟ್ಟಿರುವುದನ್ನು ನೋಡಬಹುದು.

* ಸ್ವಸ್ತಿಶ್ರೀ.. ಸಕವರ್ಷ ೧೫೬೮ನೆಯ ಸಂವ ಸರ್ವಜಿತು ಸಂವತ್ಸರದ ಜೇಷ್ಟ ಶು ೧೦ ಬುಧವಾರದಲ್ಲು ಪೆನುಗೊಂಡೆಯ ಗಾಣಿಗರ ಹಂಪಸೆಟ್ಟಿ ಮಕ್ಕಳು ಅಪ್ಪುಸೆಟ್ಟಿಗೆ ಮಹಿಸೂರ ಗುರುದೇವರ ಮಕ್ಕಳು ಭೋಗಿವಡೆಯರು ಬರೆದ ಬಸವಪುರಾಣದ ಪುಸ್ತಕಕ್ಕೆ[೪೩](ಕ್ರ.ಸಂ. ೧೫೪೪) ಗಾಣಿಗ, ಎಂದರೆ ಗಾಣದಿಂದ ಎಣ್ಣೆಯನ್ನು ತೆಗೆಯುವವನು ಗಾಣಿಗ ಎಂಬ ವೃತ್ತಿ ಇತ್ತು ಇವರು ಸಮಾಜದಲ್ಲಿ ಮಧ್ಯಮ ಸ್ಥಾನವನ್ನು ಪಡೆದುಕೊಂಡಿದ್ದರು. ಭೋಗಿವಡೆಯರು ಬಸವಪುರಾಣವನ್ನು ಬರೆದಿರುವುದನ್ನು ನೋಡಬಹುದು. ಹೀಗೆ ಈ ಮೇಲಿನಂತೆ ಯಾವ ವೃತ್ತಿ ಇತ್ತೆಂಬುದು ಹಾಗೂ ಆ ವೃತ್ತಿಗಳ ಮೂಲಕ ಅವರು ಸಮಾಜದಲ್ಲಿ ಯಾವ ಸ್ಥಾನಮಾನವನ್ನು ಪಡೆದುಕೊಂಡಿದ್ದರೆಂಬುದನ್ನು ತಿಳಿದುಕೊಳ್ಳಬಹುದಾಗಿದೆ.

೨. ಸ್ಥಳನಾಮ : ಸ್ಥಳನಾಮಗಳ ಮೂಲಕವಾಗಿ ಹಸ್ತಪ್ರತಿ ಕಾರ್ಯ ಯಾವ ಸ್ಥಳದಲ್ಲಿ ನಡೆಯುತೆಂಬುದನ್ನು ತಿಳಿಯುವುದಕ್ಕೆ ಹಸ್ತಪ್ರತಿಗಳು ಸಹಾಯಕವಾಗುತ್ತವೆ. ಸ್ಥಳನಾಮವನ್ನು ಲಿಪಿಕಾರರ ನೆಲೆಯಲ್ಲಿ ಧರ್ಮದ ನೆಲೆಯಲ್ಲಿ, ಭಾಷೆಯ ನೆಲೆಯಲ್ಲಿ, ಸಮಾಜದ ನೆಲೆಯಲ್ಲಿ, ಸಾಹಿತ್ಯದ ನೆಲೆಯಲ್ಲಿ ಹೀಗೆ ಎಲ್ಲಾ ನೆಲೆಯಲ್ಲಿಯೂ ಅಧ್ಯಯನ ಮಾಡಬಹುದಾಗಿದೆ. ಇಲ್ಲಿ ಗ್ರಾಮ, ತಾಲ್ಲೂಕು, ಜಿಲ್ಲೆದ, ರಾಜ್ಯ, ದೇಶ ಎಲ್ಲವನ್ನು ಒಳಗೊಂಡಿರುವುದರ ಮೂಲಕವಾಗಿ ಎಲ್ಲಾ ಕಡೆಯಲ್ಲಿಯೂ ಈ ಹಸ್ತಪ್ರತಿ ಕಾರ್ಯತೊಡಗಿತ್ತೆಂಬುದನ್ನು ತಿಳಿಯಬಹುದಾಗಿದೆ.

* ಶಾ. ಶ. ೧೭೪೧ನೆ ವರ್ತಮಾನಕ್ಕೆ ಸಲುವ ಈಶ್ವರನಾಮ ಸಂವತ್ಸರ ಅಧಿಕ ಶ್ರಾವಣ ಶು ೧೫ ಸೋಮವಾರ ಗರುಡನಗಿರಿ ತಾ। ಚಟ್ಟಹಳ್ಳಿ ಚನ್ನಬಸವೇಶ್ವರ ದೇವರ ಪಾದಕಮಲೋದ್ಭವರಾದಂಥ ಸಿಂಗಟಗೆರೆ ಸಿದ್ದಪ್ಪದೇವರ ಮಗ ರೇವಯ್ಯನು ಚಿಕಮಗಳೂರ ಸೀಮೆ ತಾ। ಕುರುಬರಳಿ ಮಠದ ಸಿದ್ವೀರದೇವರ ಕುಮಾರ ಮಲ್ಲೇದೇವರ ಕುಮಾರ ಚನವೀರದೇವರ ಪಾದಕಮಲೋದ್ಭವರಾದಂಥಾ ನಲೂರ ಚನ್ನಬಸವಪ್ಪ ಶೆಟರ ಕುಮಾರ ಸಿದ್ದಪ್ಪಶೆಟ್ಟಿ[೪೪] (ಕ್ರ.ಸಂ. ೧೯೨) ತಾಲ್ಲೂಕು, ಊರಿನ ಹೆಸರಿನ ಮೂಲಕ ಸ್ಥಳನಾಮವನ್ನು ನೋಡಬಹುದು. ಗರುಡನಗಿರಿ ತಾ। ಚಟ್ಟಿಹಳ್ಳಿ ಸಿಂಗಟಗೆರೆ ಚಿಕಮಗಳೂರು ತಾ। ಕುರುಬರಳಿ ಎಂಬ ಊರು ಹೀಗೆ ಐದು ಸ್ಥಳನಾಮವನ್ನು ನೋಡುವ ಮೂಲಕವಾಗಿ ಲಿಪಿಕಾರನು ಯಾವ ಸ್ಥಳಕ್ಕೆ ಸೇರಿದ್ದನೆಂಬುದನ್ನು ಗುರುತಿಸಬಹುದಾಗಿದೆ.

* ರಾಮಗಿರಿಯ ಕರಿಯ ಸಿದ್ದೇಶನ ಕರಕಮಲದಲ್ಲುದಯನಾದ ಬಸವಲಿಂಗದೇವರು ಬರದ ದಿನ ಕಲಿವರುಷ ದೂಷಿಕಾ ೩೧೭೯ನೆಯ್ದಿದ ಶಾಲಿವಾಹನ ಶುಭ ೧೫೮೦ನೆಯ್ದಿದ ಉಭಯ ೪೮೭೯ನೆಯ್ದಿದ ಕಾಳಾರ್ಥಿ ಸಂವತ್ಸರದ ಪುಷ್ಯ ಶು ೨ಲು ಗುರುವಾರದಲು ಸಮಾಪ್ತವಾಯಿತ್ತು.[೪೫] (ಕ್ರ.ಸಂ. ೫೪೪) ಈ ಹಸ್ತಪ್ರತಿಯಲ್ಲಿ ದಾಖಲಾಗಿರುವಂತೆ

ರಾಮಗಿರಿ ಎಂಬ ಸ್ಥಳನಾಮವನ್ನು ಗುರುತಿಸಬಹುದಾಗಿದೆ. ಕರಿಯ ಸಿದ್ದೇಶ, ಬಸವಲಿಂಗದೇವರು ಇವರು ರಾಮಗಿರಿ ಎಂಬ ಸ್ಥಳಕ್ಕೆ ಸೇರಿರುವುದನ್ನು ನೋಡಬಹುದು.

* ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ ಶಾಲಿವಾಹನ ಸಖದ ವರುಷ ೧೬೦೭ನೆಯ ಕ್ರೋಧನಾಮ ಸಂದ ಶುಕ್ಲ ಪಕ್ಷದ ಆಸ್ವೀಜ ಶುದ್ಧ ಪೌರ್ನಮಿ ಬೃಹಸ್ಪತಿವಾರದಲ್ಲು ಕೊಡಗನೂರು ಮಠದಲ್ಲಿ ಅಖಿಳ ಜನ ದುರಿತವನದಾಹ ಸುಲೇಗಾವಿಯ ಮಹತ್ತೇಶ್ವರನ ಶ್ರೀ ಪಾದಕಮಲಭೃಂಗನಾಗಿ ಒಪ್ಪಲ್ಪಟ್ಟ ರುದ್ರಮುನಿದೇವರು ವಂಬತ್ತು ತಾಸುತ್ತಿನ ಅಮೃತಗಳಿಗೆಯಲ್ಲಿ ಬರದ ಕಥಾಸಾಗರ ಸಮಾಪ್ತ[೪೬] (ಕ್ರ.ಸಂ. ೫೪೭) ಈ ಹಸ್ತಪ್ರತಿ

ಕೊಡಗನೂರು, ಸುಲೇಗಾವಿ ಎಂಬ ಸ್ಥಳನಾಮವನ್ನು ಸೂಚಿಸುತ್ತಿದೆ. ಸುಲೇಗಾವಿಯ ರುದ್ರಮುನಿದೇವರು ತಮ್ಮ ಹಸ್ತಾಕ್ಷರದಿಂದ ಕಥಾಸಾಗರವನ್ನು ಬರೆದಿರುವುದು ಕಂಡುಬರುತ್ತದೆ.

* ಸರ್ವಜಿತು ನಾಮ ಸಂದ ಚೈತ್ರ ಶು ೫ಯಲು ಚಿಕನಾಯಕನಹಳ್ಳಿಯ ಸುಬ್ಬೈಯನವರ ಮಗ ದಾಸಿಯಪ್ಪನು ಬರದ ಪುಸ್ತಕ.[೪೭] (ಕ್ರ.ಸಂ. ೬೧೩) ಚಿಕ್ಕನಾಯಕನಹಳ್ಳಿ ಹೆಸರಿನ ಸ್ಥಳವನ್ನು ದಾಖಲಿಸಲಾಗಿದೆ. ಸುಬ್ಬೈಯನವರ ಮಗನಾದ ದಾಸಿಯಪ್ಪನು ಎಲ್ಲ ಪುರಾತನ ವಚನಗಳನ್ನು ಬರೆದಿರುವುದನ್ನು ನೋಡಬಹುದು. ಹಾಗೆಯೇ ಲಿಪಿಕಾರನು ಯಾವ ಸ್ಥಳಕ್ಕೆ ಸೇರಿದವನು ಎಂಬುದನ್ನು ಗುರುತಿಸಬಹುದಾಗಿದೆ.

* ಪ್ರಮಾಧೀಚನಾಮ ಸಂವತ್ಸರದ ಮಾಘಮಾಸದ ಶುಕ್ಲ ಪಕ್ಷದ ಪಂಚಮ ಶುದ್ಧ ಸೋಮವಾರದ ಉದಯದ ತಾಸುವರೆಯೊಳಗೆ ಅಮೃತವ್ಯಾಳ್ಯದಲ್ಲಿ ಸುಲೆಗಾವಿ ಚೆಂನಬಸವದೇವರು ಯೆಲ್ಲಾ ಪುರಾತರ ವಚನವ ಆ ಸಕಲ ಶರಣರ ಹಷ್ಟೋತ್ತರದಿಂದ ಬರದು ಸಂಪೂರ್ನ್ನಮಾಡಿ (ಸ)ಮಾಪ್ತಿ ಆಯಿತ್ತು ಮಂಗಳ ಮಹ[೪೮] (ಕ್ರ.ಸಂ. ೬೩೭)

ಸೂಲೆಗಾವಿ ಎಂಬ ಸ್ಥಳವನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ಹಾಗೆಯೇ ಲಿಪಿಕಾರನು ಸೂಲೆಗಾವಿಯ ಪುರಾತ ವಚನವನ್ನು ಬರೆದ ಎಂಬುದು ತಿಳಿದುಬರುತ್ತದೆ.

* ಪಾರ್ತಿವ ಸಂದ ಮಾಘ ಬ೧೧ಲ್ಲು ಮಾದಳ್ಳಿ ಮಠದ ಚಿಕವೀರಂಣೊಡೆಯ ದೇವರ ಶಿಷ್ಯರು ಶಿವನಂಕಾರದೇವರಿಗೆ ತಗಡೂರ ದೊಡಮಲ್ಲೊಡೆಯರ ಕುಮಾರ ಚಂದ್ರೊಡೆಯರು ತಮ್ಮ ಭಕ್ರಿಯಿಂದ ಬೈಚಣ್ಣೊಡೆಯರ ಹಸ್ತದಲ್ಲಿ ಬರಯಿಸಿಕೊಟ್ಟ ಏಕೋತ್ತರ ಶತಸ್ಥಲ ಶಿವಾರ್ಪಣ ಮಸ್ತು...[೪೯](ಕ್ರ.ಸಂ. ೭೫೩)

ಚಿಕವೀರಂಣೊಡೆಯರು ಮಾದಳ್ಳಿಗೆ ಸೇರಿದವಾಗಿದ್ದಾರೆ. ಹಾಗೆಯೇ ದೊಡಮಲ್ಲೊಡೆಯರ ಮಗನಾದ ಚಂದ್ರೊಡೆಯರು ತಗಡೂರು ಎಂಬ ಸ್ಥಳಕ್ಕೆ ಸೇರಿದವರಾಗಿದ್ದಾರೆ. ಚಂದ್ರೊಡೆಯರು ಬೈಚಣ್ಣೊಡೆಯರ ಹತ್ತಿರ ಏಕೋತ್ತರ ಶತಸ್ಥಲವನ್ನು ಬರೆಸಿಕೊಟ್ಟಿದ್ದಾರೆ. ಮಾದಳ್ಳಿ, ತಗಡೂರು ಸ್ಥಳ ಊರುಗಳನ್ನು ಉಲ್ಲೇಖಿಸಲಾಗಿದೆ.

* ಈ ಯೇಕೋತ್ತರ ಸತಸ್ಥಲವನು ಕೀಲಕ ಸಂವತ್ಸರದ ಆಶ್ವೀಜ ಮಾಸದ ಬಹುಳ ಸಪ್ತಮ ಬೃಹ ಸ್ಪತಿವಾರದಲ್ಲು ಗುಂಮ್ಮಳಾಪುರದ ಹಿರಿಯಮಠದ ಪರಮಾನಂದ ದೇವರ ಶಿಷ್ಯರು ಬಸವ ಪ್ರಭುದೇವರಿಗೆ ನಣಂಚಿಯ ಮಠದ ಮರುಳಸಿದ್ದದೇವರ ಶಿಷ್ಯರು ಚಂದ್ರ ಶೇಖರದೇವರ ಶಿಷ್ಯನು ಮರುಳಸಿದ್ದದೇವರು ಬರದ ಪುಸ್ತಕ ಶಿವಗಣಂಗಳ ಪಾದಕ್ಕೆ ಸಮಾಪ್ತಿ.[೫೦] (ಕ್ರ.ಸಂ. ೭೫೪) ಗುಂಮ್ಮಳಾಪುರ, ನಣಂಚಿ ಎಂಬ ಊರುಗಳನ್ನು ಉಲ್ಲೇಖಿಸಲಾಗಿದೆ. ಆಮೂಲಕ ಲಿಪಿಕಾರನು ಯಾವ ಸ್ಥಳಕ್ಕೆ ಸೇರಿದ್ದನೆಂಬುದನ್ನು ಗುರುತಿಸಬಹುದಾಗಿದೆ.

* ಚಿತ್ರದುರ್ಗ ತಾಲ್ಲೂಕ್ ಸಿರಿಗೆರೆ ಜಗದ್ಗುರು ತರಳಬಾಳ ಮಠದ ಏಜೆಂಟ್ ಶ್ರೀ ರುದ್ರಪ್ಪಯ್ಯನವರಿಂದ ತರಿಸಿಕೊಳ್ಳಲಾಗಿದ್ದ ಓಲೆ ಪ್ರತಿಯಿಂದೀ ಪ್ರತಿ ತಯಾರು ಮಾಡಿದೆ. ಪ್ರತಿಮಾಡಿದವರು ಶ್ರೀ ಎಂ. ಎಸ್. ಬಸವರಾಜಯ್ಯ ಅವರು.[೫೧] (ಕ್ರ.ಸಂ. ೧೦೧೨) ತಾಲ್ಲೂಕು ಹಾಗೂ ಊರಿನ ಹೆಸರಿನ ಮೂಲಕ ಸ್ಥಳನಾಮವನ್ನು ನೋಡಬಹುದು. ಚಿತ್ರದುರ್ಗ ತಾಲ್ಲೂಕು ಸಿರಿಗೆರೆ ಎಂಬ ಊರಿನ ಲಿಪಿಕಾರ ಎಂದು ತಿಳಿಯಬಹುದು.

* ಆವಿರಿಗೊಳ ಸಿಂಹಾಸನಾಧೀಶ್ವರಾದಂಥ ಪಡುವಿಡಿ ರಾಮಗಟ್ಟದ ಚರಮೂರ್ತಿ ಬಸವಲಿಂಗ ದೇವರ ಪಾದದಲ್ಲಿ ಹುಟ್ಟಿದ ಮರಿಬಸವಲಿಂಗದೇವರು ಬರದೋದಿ ಪೇಳಿದರು ಈ ಗಿರುಜೆ ಸಂವಾದ ಸಂಪೂರ್ಣ ವಿದ್ಯೆ ಗುರುವಿನ ಪಾದವೆಗತಿ.[೫೨] (ಕ್ರ.ಸಂ. ೧೨೩೫) ಆವಿರಿಗೊಳ, ರಾಮಗಟ್ಟ ಎಂಬ ಸ್ಥಳಕ್ಕೆ ಸೇರಿರುವುದನ್ನು ಖಚಿತಪಡಿಸಿಕೊಳ್ಳಬಹುದು.

* ಹೊಸಬಾವಿ ಪೇಟೆಯ ಆನೆ ಹಂಪೈಯ್ಯನ ವಿರಕ್ತಮಟದಲ್ಲಿ ಸೋಮವಾರ (ರುದಲು ಹನ್ನೊತ್ತಾಸೊತ್ತಿನಲ್ಲಿ ಗಣ.. ಶ್ರೀ ಮದ್ಗುರು ಕವುದಿ ಮಹಾಂತ ಸ್ವಾಮಿಯ ಭೃತ್ಯ ಮಹತ್ತ ದೇವರು ಗಣಭಾಷಿತ ರತ್ನಮಂ ಬರೆದರು.[೫೩] (ಕ್ರ.ಸಂ. ೧೨೯೮) ಹೊಸಬಾವಿ ಪೇಟೆ ಎಂಬ ಸ್ಥಳನಾಮವನ್ನು ಗುರುತಿಸಬಹುದಾಗಿದೆ. ಮಹತ್ತದೇವರು ಹೊಸಬಾವಿ ಪೇಟೆಗೆ ಸೇರಿದವರಾಗಿದ್ದು ಇವರು ಗಣಭಾಷಿತ ರತ್ನವನ್ನು ಬರೆದಿರುವುದನ್ನು ಕಾಣಬಹುದು.

* ಕೋಳುಗುಂದದ ಆರಾಧ್ಯಸ್ಥಲದ ಮಟದಾ ಚೆಂನವೀರದೇವರ ಮಗ ಚೆಂನದೇವರು ಬರದ ಸಹಸ್ರ ಗಣನಾಮಕ್ಕೆ ಶುಭಮಸ್ತು.[೫೪] (ಕ್ರ.ಸಂ. ೧೩೨೮) ಕೋಳುಗುಂದ ಎಂಬ ಸ್ಥಳವಿದ್ದು, ಇಲ್ಲಿ ಲಿಪಿಕಾರನಾದ ಚೆಂನದೇವರು ತನ್ನ ಕೃತಿಯಾದ ಸಹಸ್ರ ಗಣನಾಮವನ್ನು ಬರೆದಿದ್ದಾನೆ ಎಂಬುದನ್ನು ತಿಳಿಯಬಹುದು.

[illegible]

* ಶಾಲಿವಾಹನ ಸಖೆ ಸಾವಿರದ ಯೇಳನೂರಯಿಪ್ಪತ್ತೈದನೆಯ ೧೭೨೫ ಕ್ರೋಧನ ವತ್ಸರದ ಭಾದ್ರಪದ ಬಹುಳ ೧೨ ಗುರುವಾರ ಕಾವ್ಯ ಪುಸ್ತಕ ಮಹಾದೇವಪುರದ ಮಠದೊಳಗೆ ಮುಗಿಯಿತ್ತು.[೫೫] (ಕ್ರ.ಸಂ. ೧೩೭೪) ಮಹಾದೇವಪುರ ಎಂಬ ಊರಿನ ಮೂಲಕ ಸ್ಥಳನಾಮವನ್ನು ಗುರ್ತಿಸಬಹುದು ಹಾಗೆಯೇ ಲಿಪಿಕಾರನು ಇಲ್ಲಿ ಕಾವ್ಯವನ್ನು ಬರೆದಿದ್ದಾನೆ ಎಂಬುದನ್ನು ಸಹ ತಿಳಿಯಬಹುದು.

* ವಿರೋಧಿನಾಮ ಸಂ/ದ ಮಾರ್ಗಶಿರ ಬ೧೩ ಬುಧವಾರ ಕನಕೂರ ಮಠಕ್ಕೆ ಸ್ಥಾಪನಾಚಾರ್ಯರಾದ ಮೇಳಿಯಪನವರು ಅರುಳಿಕಟೆ ಗೌಡ.[೫೬] (ಕ್ರ.ಸಂ. ೧೬೧೨) ಕನಕೂರು, ಅರುಳಿಕಟೆ ಎಂಬ ಸ್ಥಳನಾಮಗಳನ್ನು ಗುರುತಿಸಬಹುದು. ಕನಕೂರಿಗೆ ಸೇರಿದ ಮೋಳಿಯಪನು ಅರುಳಿಕಟೆಗೆ ಸೇರಿದ ಗೌಡನಿಗೆ ಕೃತಿಯನ್ನು ಬರೆಸಿಕೊಟ್ಟಿರುವುದು ತಿಳಿದುಬರುತ್ತದೆ.

* ಶ್ರೀ ಮನ್ಮಹಾರಾಜರಾಜ ಪೂಜಿತರಾದ ರಾಣಿಬೆಂನೂರಿನಲ್ಲಿ ಯಿರುವ ಹೊಸಮಠದ ಮರುಳಸಿದ್ಧಪ್ಪನವರ ಕುಮಾರ ನಾದಂಥ ಸಿವಬಸಪ್ಪೈಯ್ಯನವರು ವುದ್ದ್ರಿದೇಸಾಯಿ ದೇವೈಯ್ಯ ಗೌಡರಿಗೆ ಧನ ಕನಕ ಅಂದೋಳ ಛತ್ರ ಚಾಮರಾರಾಜ್ಯಾಧಿ ಪತೀತ್ವ ದುರ್ಗ್ಗದಿಪತ್ಯ ಆನೆ.[೫೭] (ಕ್ರ.ಸಂ. ೧೬೭೨) ರಾಣಿಬೆನೂರು ಎಂಬ ಸ್ಥಳವನ್ನು ಗುರುತಿಸಬಹುದು. ಮರುಳಸಿದ್ಧಪ್ಪನವರ ಮಗನಾದ ಸಿವಬಸಪ್ಪೈಯನ್ನು ರಾಣಿಬೇನೂರು ಸ್ಥಳಕ್ಕೆ ಸೇರಿದವನಾಗಿದ್ದಾನೆ. ಈತನು ವುದ್ದ್ರಿದೇಸಾಯಿ ದೇವೈಯ್ಯ ಗೌಡರಿಗೆ ಚನ್ನಬಸವ ಪುರಾಣವನ್ನು ಬರೆಸಿಕೊಟ್ಟಿದ್ದಾನೆ.

* ಯೀ ಪುಸ್ತಕವನ್ನು ಧಾತ್ತು ಸಂವತ್ಸರದ ಆಶ್ವೀಜ ೯ಯಲ್ಲಿ ಹೊಸಳ್ಳಿ ಗೌಡರ ಬಸಪ್ಪನವುದರೋದ್ಭವನಾದ ಚನಬಸಪ್ಪಗೆ ವೋದಿಕೊಳ್ಳುವುದಕ್ಕೆ ಯಿ ಪುರಾಣ ಕೊಟ್ಟು ಯಿರುತ್ತೇನೆ ಹಿರಿಕ್ಯೆರೆಯೂರಲ್ಲಿವಂತ್ತ ಕಲುಬುರುಗಿ ನೂರಂದಪ್ಪನ ದಸ್ತುರು ಕುದ್ದು[೫೮] (ಕ್ರ.ಸಂ. ೧೭೫೯) ಹೊಸಳ್ಳಿ, ಹಿರಿಕ್ಯೆರೆಯೂರು, ಕಲುಬುರುಗಿ ಎಂಬ ಮೂರು ಸ್ಥಳಗಳ ಹೆಸರು ಉಲ್ಲೇಖಿತಗೊಂಡಿದೆ. ಗೌಡರಬಸಪ್ಪ ಹಾಗೂ ಚಂನಬಸಪ್ಪ ಇವರು ಹೊಸಳ್ಳಿ ಎಂಬ ಸ್ಥಳಕ್ಕೆ ಸೇರಿದವರಾಗಿದ್ದಾರೆ. ನೂರಂದಪ್ಪ ಹಿರೆಕ್ಯೆರೆಯೂರು ಎಂಬ ಸ್ಥಳದಲ್ಲಿ ಇದ್ದರೆಂದೂ ಗುರುತಿಸಬಹುದು. ನೂರಂದಪ್ಪನು ಗೌಡರ ಬಸಪ್ಪನ ಮಗನಾದ ಚನಬಸಪ್ಪಗೆ ಚೋರ ಬಸವ ಚಾರಿತ್ರವನ್ನು ಬರೆಸಿಕೊಟ್ಟಿರುವುದನ್ನು ನೋಡಬಹುದು.

* ಆನಂದ ಸಂವತ್ಸರದ ಕಾರ್ತೀಕ ಶುದ್ಧ ೧ಲು ಸೋಮವಾರದಲ್ಲು ಶ್ರೀ ಮತು ನುಗ್ಗಿಹಳ್ಳಿ ಮಠದ ಸಿದ್ಧವೀರಪ್ಪನವರ ಮಗ ಹುಚ್ಚಪ್ಪನು ಸಿವರದ ತೋಟದಯ್ಯನವರ ಮಗ ಸಿದ್ಧಂಣಗೆ ತೋಂಟದ ಸಿದ್ಧಲಿಂಗೇಶ್ವರ ಸ್ವಾಮಿಯವರ ಸಾಂಗತ್ಯವ ಬರದಕ್ಕೆ ಶುಭಮಸ್ತು[೫೯] (ಕ್ರ.ಸಂ. ೧೮೨೫) ನುಗ್ಗಿಹಳ್ಳಿ, ಸಿವರ ಎಂಬ ಎರಡು ಸ್ಥಳನಾಮಗಳನ್ನು ಗುರುತಿಸಬಹುದು. ಸಿದ್ಧವೀರಪ್ಪ, ಹುಚ್ಚಪ್ಪನವರು ನುಗ್ಗಿಹಳ್ಳಿ ಎಂಬ ಸ್ಥಳಕ್ಕೆ ಸೇರಿದವರು ಎಂದಿದೆ. ತೋಟದಯ್ಯ ಸಿದ್ಧಂಣ ಸಿವರಕ್ಕೆ

ಸೇರಿದವರು. ಸಿದ್ಧವೀರಪ್ಪನವರ ಮಗನಾದ ಹುಚ್ಚಪ್ಪನು ಸಿವರದ ತೋಟದಯ್ಯನವರ ಮಗನಾದ ಸಿದ್ಧಂಣಗೆ ತೋಂಟದ ಸಿದ್ಧಲಿಂಗೇಶ್ವರ ಸ್ವಾಮಿಯ ಸಾಂಗತ್ಯವನ್ನು ಬರೆದುಕೊಟ್ಟಿರುವುದನ್ನು ಉಲ್ಲೇಖಿಸಲಾಗಿದೆ.

* ವಿಜಯ ಸಂವತ್ಸರ ಮಾರ್ಗಸಿರ ಶುಶಿಲು ವಾಡವಾಣದ ರಾಚೈಯ್ಯದೇವರಿಗೆ ಶಿವಳ್ಳಿ ಮಠದ ಚಂನಬಸಪ್ಪನು ಬರಕೊಟ್ಟ ನಾಂದ್ಯದ ಪುಸ್ತಕ ಸಂಪೂರ್ಣ ಮಂಗಳ ಮಹಾ ಶ್ರೀ ಶ್ರೀ ಶ್ರೀ[೬೦] (ಕ್ರ.ಸಂ. ೨೦೩೪)

ಶಿವಳ್ಳಿ ಎಂಬ ಸ್ಥಳನಾಮದ ಲಿಪಿಕಾರನಾದ ಚಂನಬಸಪ್ಪ ಶಿವಳ್ಳಿಗೆ ಸೇರಿದವನು ಎಂಬುದು ದಾಖಲಾಗಿದೆ.

* ಶಾಲಿವಾಹನ ಶಕಾಬ್ದಾ ೧೭೮೫ನೆಯ ಪ್ರವರ್ತಮಾನಕ್ಕೆ ಸಲುವ ದುಂದುಭಿನಾಮ ಸಂವತ್ಸರೆ ಉತ್ತರಾಯನೆ ಶಶಿರುತೌ ಫಾಲ್ಗುಣ ಮಾಸ ಕೃಷ್ಣ ಪಕ್ಷೆ ತಥೌ ಚತುರ್ದಶಿ ೭೭ ಘಟಿ೧೧ ಪಳ ಶತತಾರ ನಕ್ಷತ್ರ ೨೦ ಘಟಿ ೧ ಸುದಿವಸ ಬೀರೂರಲ್ಲಿರುವ ತ್ಯಾವಣಿಗೆ ಮಠದ ದತ್ತ ಪುರಯ್ಯನವರ ತನೂಭವ ಶಿವಲಿಂಗದೇವಾಹ್ವಯ ಸುಹಸ್ತದಿಂ ಚನ್ನಗಿರಿಯಲ್ಲಿರುವ ಜವಳಿ ನಾಗಪ್ಪನವರು ದರುದ್ಭವರಾದ ಜೇಷ್ಟಪುತ್ರ ವೀರಪ್ಪಗೆ ಸದಾ ಸ್ಥಿರತರಾರೋಗ್ಯ ಸೌಭಾಗ್ಯ ಲಕ್ಷ್ಮೀ ಸಂಪತ್ಸ ಮುದ್ಯಾಗಳೆಂದು ಸ್ವಾಮಿ ಪ್ರಾರ್ಥಿನೆಯಿಂದ ಸದರಿ ಪೌರಾಣವಂನು ಲಿಖಿಸಿ ಕೊಡುವಂಥಾದ್ದು ಯಿವತ್ತಿನ ಸುದಿವಸ ದಿನ ೬ ತಸಿನಲ್ಲಿ ಸಂಪೂರ್ಣವಾದದ್ದಕ್ಕೆ ಮಂಗಳ ಮಹಶ್ರೀ ಶ್ರೀ ಶ್ರೀ ಕಉಲೆದುರ್ಗದ ತಾಲ್ಕೊ ಗರಗಲ್ಲು ಮಠದಲ್ಲು ಮುಗಿದಂಥಾದ್ದಕ್ಕೆ ಶಿವಾರ್ಪಣಮಸ್ತು[೬೧] (ಕ್ರ.ಸಂ. ೨೨೮೪) ಬೀರೂರು ತ್ಯಾವಣಿಗೆ, ಚನ್ನಗಿರಿ, ಕಉಲೆದುರ್ಗ ಎಂಬ ನಾಲ್ಕು ಸ್ಥಳನಾಮಗಳನ್ನು ಹಸ್ತಪ್ರತಿ ಗುರುತಿಸಿದೆ. ಶಿವಲಿಂಗದೇವಯ್ಯನವರು ತ್ಯಾವಣಿಗೆ ಊರಿನವರು ಜವಳಿನಾಗಪ್ಪನ ಮಗನಾದ ವೀರಪ್ಪ ಚನ್ನಗಿರಿ ಸ್ಥಳದಲ್ಲಿ ಇದ್ದವರು ಎಂಬುದಾಗಿ ಹಸ್ತಪ್ರತಿ ತಿಳಿಸುತ್ತದೆ. ಬಸವಪುರಾಣವನ್ನು ಕಉಲೆದುರ್ಗದ ಗರಗಲ್ಲು ಮಠದಲ್ಲಿ ಬರೆದಿರುವುದನ್ನು ಗುರುತಿಸಬಹುದಾಗಿದೆ.

* ತಳುಕಿನ ಹುಚ್ಚಪ್ಪದೇವರು ಗಡ್ಡದ ವೀರಣ್ಣನಿಗೆ[೬೨] (ಕ್ರ.ಸಂ. ೧೦೪೭) ತಳುಕು ಎಂಬ ಸ್ಥಳನಾಮವನ್ನು ಗುರುತಿಸಬಹುದು. ಹುಚ್ಚಪ್ಪದೇವರು ಎಂಬುವರು ತಳುಕಿಗೆ ಸೇರಿದವರು ಎಂಬುದನ್ನು ಹಸ್ತಪ್ರತಿ ತಿಳಿಸುತ್ತದೆ.

* ದುರ್ಮುಖಿ ಸಂ ಮಾಘ ಬ. ೧೦ಯಲ್ಲು ದುರ್ಗದ ಕಾಮಗೇತಿ ಚನ್ನಾಯ್ಕರು ಮರವಂಜಿ ರಂಗೈಯನ ಮಗ ತಿಂಮಗೆ[೬೩] (ಕ್ರ.ಸಂ. ೧೦೫೧) ಅವನು ದುರ್ಗ ಎಂಬ ಸ್ಥಳಕ್ಕೆ ಸೇರಿರುವುದನ್ನು ನೋಡಬಹುದು.

* ದೊಡೇರಿ ವೀರಭದ್ರದೇವರ ಪಾದವೇಗತಿ.[೬೪] (ಕ್ರ.ಸಂ. ೩೭೩) ಚಳ್ಳಕೆರೆ ತಾಲೂಕಿನ ದೊಡ್ಡೇರಿ ಗ್ರಾಮದ ವೀರಭದ್ರ ದೇವರು ದೊಡೇರಿ ಎಂಬ ಸ್ಥಳಕ್ಕೆ ಸೇರಿರುವುದನ್ನು ಹಸ್ತಪ್ರತಿ ವಿವರಿಸುತ್ತದೆ.

* ಶ್ರೀಮತ್ ಸಚ್ಚಿದಾನಂದ ನಿತ್ಯ ಪರಿಪೂರ್ನಲಕ್ಷಣ ಲಕ್ಷಿತ ಸ್ವಯಂ ಪ್ರಕಾಶ ಪರಬ್ರಹ್ಮ ಸ್ವರೂಪರಾದಂಥಾ ಮುರಿಗಾ ಸಿದ್ಧಲಿಂಗ ಸ್ವಾಮಿಯವರ ಐಕ್ಯ ಸ್ಥಿತಿಯೆಂತೆಂದೊಡೆ ಯಿಶ್ವರನಾಮ ಸಂವತ್ಸರದ ಜೇಷ್ಟ ಶುದ್ಧ ಸಪ್ತಮಿ ಬುಧವಾರ ತಾಸು ವಂಭತ್ತರಲ್ಲಿ ರುದ್ರಸರಿ ಜಮದಗ್ನಿ ವೃಷ್ಯಾ ಶ್ರೀಮವಾದ ಸ್ವಂತ ಮಲ್ಲೇಶ್ವರ ಸುಸ್ಥಳವಾದ ಶ್ರೀ ಮತ ಚಂಗಡಿಹಳ್ಳಿ ಮಠದಲ್ಲಿ ಸಗುಣಲೀಲೆ ಬಿಟ್ಟು ನಿರ್ಗುಣಲೀಲೆಯ ಧರಿಸಿದರು.[೬೫] (ಕ್ರ.ಸಂ. ೧೨೭) ಪ್ರಸ್ತುತ ಹಸ್ತಪ್ರತಿಯಲ್ಲಿ ಚಂಗಡಿಹಳ್ಳಿ ಎಂಬ ಸ್ಥಳನಾಮವಿದೆ.

* ರಾಮಗಿರಿಯ ಕರಿಯ ಸಿದ್ದೇಶನ ಕರಕಮಲದಲ್ಲುದಯವಾದ ಬಸವಲಿಂಗ ದೇವರು ಬರದ ದಿನ ಕಲಿವರುಷ ದೂಷಿಕಾಲ ೩೧೭೯ ನೆಯ್ದದ ಶಾಲಿವಾಹನ ಶಖ ೧೫೮೦ ನೆಯ್ದಿದ ಉಭಯ ೪೭೯೯ ನೆಯ್ದಿದ ಕಾಳಾರ್ಥಿ ಸಂವತ್ಸರದ ಪುಷ್ಯ ಶು. ೨೮ಲು ಗುರುವಾರದಲು ಸಮಾಪ್ತವಾಯಿತು.[೬೬] (ಕ್ರ.ಸಂ. ೩೩೮)

ರಾಮಗಿರಿ ಎಂಬ ಸ್ಥಳನಾಮವನ್ನು ಬಸವಲಿಂಗದೇವರು ರಾಮಗಿರಿ ಎಂಬ ಸ್ಥಳಕ್ಕೆ ಸೇರಿರುವುದನ್ನು ಗಮನಿಸಬಹುದು.

* ಶ್ರೀ ರಾಮಗಟದ ಸ್ವಾಮಿಯವರ ಪಾದವೆಗತಿ. ವೀವ ಸಂವತ್ಸರದ ಆಶಾಡ ಬ ೧೨ಲ್ಲು ಮೇಗಳಕೆರೆ ಶಾನುಭೋಗ ಶಾಂತಪ್ಪನ ಮಗ ಆವರಗೊಳದ, ಶಾನುಭೋಗ ಮಲ್ಲಣ್ಣನ ಮಗ ಹಿರೇಕೊಟ್ಟಪ್ಪನ ಶಿಷ್ಯ ಸಿದ್ಧಲಿಂಗಣ ಬರದ ಕಾಲಚಕ್ರ.[೬೭] (ಕ್ರ.ಸಂ.೫೭೯)

ರಾಮಗಟ ಮೇಗಳಕೆರೆ, ಅವರಗೊಳ ಎಂಬ ಸ್ಥಳನಾಮಗಳನ್ನು ಈ ಹಸ್ತಪ್ರತಿ ಗುರುತಿಸಿದೆ. ಶಾನುಭೋಗ ಶಾಂತಪ್ಪನು ಮೇಗಳಕೆರೆ ಎಂಬ ಸ್ಥಳಕ್ಕೆ ಹಾಗೆಯೇ ಶಾನುಭೋಗ ಮಲ್ಲಣ್ಣನ ಮಗ ಹಿರೇಕೊಟ್ಟಪ್ಪ ಅವರಗೊಳ ಎಂಬ ಸ್ಥಳಕ್ಕೆ ಸೇರಿರುವುದನ್ನು ನೋಡಬಹುದು.

* ಶ್ರೀಮತು ಖಾಸದ ಸೋಲೂರ ಗುಂಟನೂರಮಟದ ಸಂಗನ ಬಸವಪ್ಪನವರು ಸರ್ವಧಾರಿ ಸಂವತ್ಸರದ ಶ್ರಾವಣ ಸುದ್ಧ ವ್ಯಾಲ ಚೌತಿ ಗುರುವಾರದ ಪ್ರಾತಃ ಕಾಲದಲ್ಲಿ ಶ್ರೀ ರುದ್ರಚಮೆ ಪುರುಷಸೂಕ್ತ ಸಹಸ್ರನಾಮಂಗಳ ಸೇರುವೆಯ ಪುಸ್ತಕ ಬರದು ಮುಗಿದ ಪುಸ್ತಕ[೬೮] (ಕ್ರ.ಸಂ.೬೩೧) ಸೋಲೂರ, ಗುಂಟನೂರು ಎಂಬ ಸ್ಥಳನಾಮಗಳನ್ನು ಹಸ್ತಪ್ರತಿ ಗುರುತಿಸಿದೆ. ಸಂಗನ ಬಸವಪ್ಪನವರು ಗುಂಟನೂರು ಎಂಬ ಸ್ಥಳದಲ್ಲಿ ತಮ್ಮ ಕೃತಿಯನ್ನು ಬರೆದು ಮುಗಿಸಿರುವುದನ್ನು ಹಸ್ತಪ್ರತಿ ಉಲ್ಲೇಖಿಸಿದೆ.

* ಕೋಳುಗುಂದದ ಆರಾಧ್ಯ ಸ್ಥಲದ ಮಟದಾ ಚೆಂನವೀರದೇವರ ಮಗ ಚೆಂನದೇವರು ಬರದ ಸಹಸ್ರಗಣನಾಮಕ್ಕೆ ಶುಭಮಸ್ತು[೬೯] (ಕ್ರ.ಸಂ.೬೩೫) ಕೋಳಗುಂದ ಎಂಬ ಸ್ಥಳನಾಮವನ್ನು ಗುರುತಿಸುವುದರ ಜೊತೆಗೆ ಲಿಪಿಕಾರನು ಈ ಸ್ಥಳಕ್ಕೆ ಸೇರಿದವನ್ನು ಎಂಬುದನ್ನು ಗುರುತಿಸಬಹುದು.

* ಶಾಂತವೀರೇಶ್ವರನ ಶಿಷ್ಯನಾದಾ ಕರತಜಾನಾದಾ ಶಾಂತಾ ಚರಮೂರ್ತಿ ಬರೆದ ವಾಚ್ಯವು ಪುಷ್ಯಮಾಸದ ಪಂಚಮಿಯಲ್ಲಿ ಮಂಗಳವಾರದಲ್ಲಿ ಸೋಮರಪೇಠೆಯಲ್ಲಿ ಸಂಪೂರ್ಣ ಶ್ರೀ ಸಿದ್ಧಲಿಂಗೇಶ್ವರನ ಅಭಿಧಾನವನುಳ್ಳ ಸಿದ್ಧಲಿಂಗ ಚರಮೂರ್ತಿ ಬರದುದು[೨೦] (ಕ್ರ.ಸಂ. ೮೭೬) ಸೋಮರಪೇಠೆ ಎಂಬ ಸ್ಥಳನಾಮವನ್ನು ಗುರುತಿಸಬಹುದು. ಇಲ್ಲಿ ಲಿಪಿಕಾರನು ತನ್ನ ಕೃತಿಯನ್ನು ಬರೆದಿದ್ದಾನೆ.

* ವಿಕಾರಿ ಸಂವತ್ಸರ ಮಾಗ ಶು೧೫ ಸೋಮವಾರ ಮೈಸೂರು ನಂಬ್ಯಣ್ಣದೇವರ ಮಕ್ಕಳು ಆಲೂರಲ್ಲಿ ಇಹ ನೋಟದ ನಂಬ್ಯಣ್ಣದೇವರ ಮಕ್ಕಳು ಸಿದ್ಧವೀರ್ಯೆಯ್ಯನ ಕುಮಾರ ಚೆನುವೀರದೇವರಿಗೆ ಬರದುಕೊಟ್ಟ ನನ್ನಯ್ಯ ಚಾರಿತ್ರ[೨೧] (ಕ್ರ.ಸಂ.೯೬) ಮೈಸೂರು, ಆಲೂರು ಎಂಬ ಸ್ಥಳನಾಮಗಳನ್ನು ಗುರುತಿಸಬಹುದು. ನಂಬ್ಯಣ್ಣ ಮೈಸೂರು ಎಂಬ ಸ್ಥಳಕ್ಕೆ ಸೇರಿರುವುದನ್ನು ಗಮನಿಸಬಹುದು ಹಾಗೆಯೇ ನಂಬ್ಯಣ್ಣನ ಮಗನಾದ ಸಿದ್ಧವೀರ್ಯೆಯ್ಯನು ಆಲೂರು ಎಂಬ ಸ್ಥಳಕ್ಕೆ ಸೇರಿರುವರೆಂದು ಹಸ್ತಪ್ರತಿ ತಿಳಿಸುತ್ತದೆ.

* ಅಕ್ಷಯ ನಾಮ ಸಂವತ್ಸರದ ಅಧಿಕ ಶ್ರಾವಣ ಬಹುಳ ೧೧ಲ್ಲು ಚಿಗಟೇರ ಕಮಲಾಪುರದ ಕುಪುಸ್ತ ಶರಸಿಂಬೆ ಮಡಿವಾಳಪ್ಪನ ಕುಮಾರಪನಾದ ವೀರಪ್ಪನು ದುರ್ಗದ ಮೊದೆಹಳ್ಳಿಯಲ್ಲಿ ಸುಹಸ್ತದಿಂದ ಬರೆದ ಪ್ರಭುದೇವರ ವಚನ ಬೇಕು ಸಮಾಪ್ತ[೨೨] (ಕ್ರ.ಸಂ. ೧೩೫೨) ಚಿಗಟೇರ ಕಮಲಾಪುರ ದುರ್ಗ, ಮೆದೆಹಳ್ಳಿ ಎಂಬ ಸ್ಥಳನಾಮಗಳನ್ನು ಈ ಹಸ್ತಪ್ರತಿ ಹೊಂದಿದೆ. ಈ ಹಿನ್ನೆಲೆಯಲ್ಲಿ ಲಿಪಿಕಾರನು ಈ ಪ್ರದೇಶಗಳಲ್ಲಿ ತನ್ನ ಕೃತಿಯನು ಬರೆದನು ಎಂದು ತಿಳಿಯಬಹುದು.

* ಸಿಂಧಾನೂರ ಗಚ್ಚಿನ ಹಿರೇಮಠದ ಮರಿರಾಚವಟ್ಟಿ ದೇವರು ಕುಪ್ಪಸದ ರಾಚಪ್ಪನ ಮಗ ವೀರಪ್ಪಗೆ ಬರಕೊಟ್ಟ ಹರವಾಕ್ಯವೂ.[೨೩] (ಕ್ರ.ಸಂ. ೧೫೩೫)

ಸಿಂಧನೂರು ಎಂಬ ಸ್ಥಳನಾಮವನ್ನು ಹಸ್ತಪ್ರತಿ ದಾಖಲಿಸಿದೆ. ಮರಿರಾಚವಟ್ಟಿ ದೇವರು ಸಿಂಧನೂರು ಎಂಬ ಸ್ಥಳಕ್ಕೆ ಸೇರಿದವರು ಎಂಬುದನ್ನು ತಿಳಿಯಬಹುದು.

* ಶ್ರೀ ಮತು ಚಂಗಡಹಳ್ಳಿ ಮಠದ ಸಿರಟ್ಟಿ ಸಿದ್ಧಲಿಂಗ ಮುರಿಗಸ್ವಾಮಿಗಳ ಚರಮೂರ್ತಿಗಳಾದ ಶಾಂತವೀರೇಶ್ವರನ ಅಭಿಧಾನವಾನುಳ್ಳಂಥಾ ಚರಮೂರ್ತಿಗಳ ಕರಕಂಜಾತರಾದಾ ಶಾಂತವೀರ ಚರಮೂರ್ತಿ ಲೇಖಿಸಿದ ಭಿಕ್ಷಾಠಾಣ ಕಾವನ ಸೋಮಾರ ಪೇಠೆಯಲ್ಲಿ ದೈತ್ಯವಾರಾದಲ್ಲಿ ಸಮಾಪ್ತ[೨೪] (ಕ್ರ.ಸಂ.೧೭೧೮)

ಚಂಗಡಹಳ್ಳಿ, ಸಿರಟ್ಟಿ ಸೋಮಾರಪೇಠೆ ಎಂಬ ಮೂರು ಸ್ಥಳನಾಮಗಳು ಹಸ್ತಪ್ರತಿಯಲ್ಲಿದೆ. ಇಲ್ಲಿ ಲಿಪಿಕಾರನು ತನ್ನ ಕೃತಿಯನ್ನು ಬರೆದು ಮುಗಿಸಿದ ಎಂದು ತಿಳಿಯಬಹುದು.

* ಈಶ್ವರ ಸಂವತ್ಸರದ ಚೈತ್ರ ಸು. ೧ಲೂ ಮಸಿಗೆಯ ಮಠದ ಸಿದ್ಧವೀರಣ್ಣೊಡೆಯರು ದೇವರಿಗೆ ಹೊಸಪುರದ ಪಟ್ಟದ ಸಿದ್ಧಬಸವರಾಜ ದೇವರ ಕರಕಮಲೋದ್ಭವ ಸಿದ್ಧಪ್ಪೊಡೆಯರು ಲಿಂಗ[೨೫] (ಕ್ರ.ಸಂ. ೨೨೩೧)

ಮಸಿಗೆ ಹೊಸಪುರ ಎಂಬ ಸ್ಥಳನಾಮವನ್ನು ಸಿದ್ಧಬಸವರಾಜರು ಹೊಸಪುರ ಸ್ಥಳಕ್ಕೆ ಸೇರಿರುವುದನ್ನು ನೋಡಬಹುದು.

* ಶ್ರೀ ಶಕಾಬ್ದಾ ೧೭೯ನೆ ಕಾಳಯುಕ್ತಿ ನಾಮ ಸಂವತ್ಸರದ ಶ್ರಾವಣ ಬ.೧೪ ಸೋಮವಾರ ಮಘ ನಕ್ಷತ್ರ ಯುಕ್ತಮಾದ ಶುಭದಿವಸದಲ್ಲು ಪುಂಗನೂರು ಕೆಂಪಿನ ಯೇಕೋತ್ರ ಗವಿಮಠದ ರಾಘವಾಂಕ ಸ್ವಾಮಿಗಳವರು ಹೊಸಕೋಟೆ ಆಡಕೆ ಚಂಗಪ್ಪನಿಗೆ ಬರೆದುಕೊಟ್ಟ ಶರಣ ಲೀಲಾ ವಿಲಾಸ[೭೬] (ಕ್ರ.ಸಂ. ೨೫೫೧)

ಪುಂಗನೂರು, ಹೊಸಕೋಟೆ ಎಂಬ ಸ್ಥಳನಾಮಗಳನ್ನು ಗುರುತಿಸಬಹುದು. ರಾಘವಾಂಕಸ್ವಾಮಿಗಳು ಪಂಗನೂರು ಸ್ಥಳಕ್ಕೆ ಸೇರಿರುವುದನ್ನು ಹಾಗೂ ಅಡಕೆ ಚಂಗಪ್ಪ ಹೊಸಕೋಟೆಯವರೆಂದು ಹಸ್ತಪ್ರತಿ ತಿಳಿಸುತ್ತದೆ.

* ಶ. ೧೫೧೮ ಆಂಗೀರಸಂ ಭಾದ್ರಚಾಳ ಬಿದಿಗೆಯಲ್ಲು ಮಂಗಳವಾರದಲ್ಲಿ ಶ್ರೀಮತು ಶಾಂತದೇವರು ದನುಗೂರು ಚಂದ್ರಶೇಕ್ರ ದೇವರಿಗೆ ಬರದುಕೊಟ್ಟ ಷಟ್ಸ್ಥಲ ತಿಲಕ...ಯಿ ಪುಸ್ತಕ ಮೌನ ದೇವರ ಪುಸ್ತಕ ಬೆಂಗಳೂರಲ್ಲಿ ಬರದಾತ ಸಾಂತಯ್ಯನೂ[೭೭] (ಕ್ರ.ಸಂ. ೨೮೭೯) ದನುಗೂರು ಬೆಂಗಳೂರು ಎಂಬ ಎರಡು ಸ್ಥಳನಾಮಗಳನ್ನು ಗುರುತಿಸಬಹುದು. ಶಾಂತದೇವರು ದನುಗೂರುನವರೆಂದು ಮತ್ತು ಶಾಂತದೇವರು ಚಂದ್ರಶೇಕ್ರ ದೇವರಿಗೆ ಷಟ್ಸ್ಥಲ ತಿಲಕ ಕೃತಿಯನ್ನು ಬರೆದು ಕೊಟ್ಟಿರುವುದನ್ನು ನೋಡಬಹುದು.

* ಸ್ವಭಾನು ಸಂವತ್ಸರ ಶ್ರಾವಣ ಶುದ್ಧ ೧೩ರಲ್ಲೂ ಗುಮ್ಮಳುಪುರದ ಸಿಂಹಾಸನಕ್ಕೆ ಕರ್ತರಾದ ಪಟ್ಟದ ವಿಶ್ವನಾಥದೇವರವರ ಶಿಷ್ಯನು ಸಿದ್ಧಣ್ಣನು ಸ್ವಹಸ್ತದಲ್ಲು ಭದ್ರಪ್ಪ ದೇವರಿಗೆ ಬರೆದುಕೊಟ್ಟ ಪುಸ್ತಕ ಸಮಾಪ್ತ[೭೮] (ಕ್ರ.ಸಂ. ೩೦೨೫) ಗುಮ್ಮಳಾಪುರ ಎಂಬ ಸ್ಥಳನಾಮವನ್ನು ದಾಖಲಿಸಿದ್ದಾರೆ. ವಿಶ್ವನಾಥದೇವರ ಶಿಷ್ಯನಾದ ಸಿದ್ಧಣ್ಣನು ಗುಮ್ಮಳಾಪುರದವನೆಂದು ತಿಳಿಯಬಹುದಾಗಿದೆ. ಸಿದ್ಧಣ್ಣನು ಭದ್ರಪ್ಪ ದೇವರಿಗೆ ಕೃತಿಯನ್ನು ಬರೆದು ಕೊಟ್ಟಿರುವುದನ್ನು ಕಾಣಬಹುದು.

* ಶ್ರೀ ಯಡೆಯೂರ ಸಿದ್ಧಲಿಂಗಸ್ವಾಮಿಯವರ ಭಾಮನಾಮ ಸಂವತ್ಸರದ ಫಾಲ್ಗುಣದ ಬ ೧೩ ಲ್ಲು ಚಂನರಾಯದುರ್ಗದ ತಾಲೂಕಿಗೆ ಸಲುವ ಬುಕ ಪಟಣದ ಹೋಬಳಿವಳಿತವಾದ ಚಂನಪಟ್ಟಣದ ಶ್ಯಾನುಭಾಗ ಶ್ಯಾಮಂಣಪ್ಪ ನವರ ಕೊಮಾರ ನಾರಾಣಪ್ಪನವರ ಮಗ ಶ್ಯಾಮಂಣನು. ಚರಿತ್ರೆ[೭೯] (ಕ್ರ.ಸಂ. ೩೧೦೦)

ತಾಲ್ಲೂಕು, ಹೋಬಳಿ, ಊರಿನ ಹೆಸರಿನ ಮೂಲಕ ಸ್ಥಳನಾಮವನ್ನು ಗುರುತಿಸಬಹುದು. ಚಂನರಾಯದುರ್ಗದ ತಾಲೂಕು ಬುಕಪಟ್ಟಣದ ಹೋಬಳಿ, ಚಂನಪಟ್ಟಣ ಎಂಬ ಊರು ಹೀಗೆ ಮೂರು ಸ್ಥಳನಾಮವನ್ನು ನೋಡುವ ಮೂಲಕವಾಗಿ ಲಿಪಿಕಾರನು ಯಾವ ಸ್ಥಳಕ್ಕೆ ಸೇರಿದವನು ಎಂಬುದನ್ನು ಹಸ್ತಪ್ರತಿ ತಿಳಿಸುತ್ತದೆ.

ಹೀಗೆ ಸ್ಥಳನಾಮವು ಸಾಮಾಜಿಕವಾಗಿ ಪ್ರಮುಖವಾಗಿದ್ದು ವಿಭಿನ್ನ ನೆಲೆಗಳಲ್ಲಿ ಸಾಂಸ್ಕೃತಿಕ ಅಂಶಗಳನ್ನು ತಿಳಿಯಬಹುದಾಗಿದೆ.

ಒಟ್ಟಾರೆಯಾಗಿ ಸಾಮಾಜಿಕತೆಯಲ್ಲಿ ವೃತ್ತಿನಾಮಗಳೊಂದಿಗೆ, ಕುಲನಾಮ, ಸ್ಥಳನಾಮವನ್ನು ತಿಳಿಯುವುದರೊಂದಿಗೆ ಅಂತಹ ವ್ಯಕ್ತಿಗಳು ಯಾವ ವೃತ್ತಿಗಳಲ್ಲಿ ತೊಡಗಿ ತಮ್ಮ ಜೀವನವನ್ನು ನಡೆಸುತ್ತಿದ್ದರೆಂಬುದನ್ನು ತಿಳಿಯಬಹುದಾಗಿದೆ.

ಒಂದು ಕಾಲದಲ್ಲಿ ಹಸ್ತಪ್ರತಿಗಳನ್ನು ಲಿಪಿ ಮಾಡುವ ಲಿಪಿಕಾರರೆಲ್ಲರೂ ಮೇಲ್ವರ್ಗದವರೇ ಆಗಿದ್ದರು. ಇವರು ಮಾತ್ರವೇ ಲಿಪಿಕರಿಸಬೇಕಿತ್ತು. ಇವರು ರಾಜರ ಆಜ್ಞೆಯ ಮೇರೆಗೆ ಸಾವಿರಾರೂ ಸಂಖ್ಯೆಯಲ್ಲಿ ಕೃತಿಗಳನ್ನು ಬರೆದಿರುವುದನ್ನು ನಾವು ಕಾಣಬಹುದು. ಲಿಪಿಕಾರರಿಗೆ ರಾಜರು ಉತ್ತಮ ಸ್ಥಾನಮಾನಗಳನ್ನು ನೀಡಿ ಗೌರವಿಸುತ್ತ ಬಂದಿರುವುದನ್ನು ಕಾಣಬಹುದಾಗಿದೆ. ಸಮಾಜದಲ್ಲಿ ಲಿಪಿಕಾರರಿಗೆ ಶ್ರೇಷ್ಠ ಮಟ್ಟದ ಬೆಲೆ-ಗೌರವಗಳು ದೊರೆಯುತ್ತಿದ್ದವು. ಈ ಕಾಲದಲ್ಲಿ ಯಾವುದೇ ಕೆಳವರ್ಗದ ಲಿಪಿಕಾರರು ಸಹ ಕಂಡುಬರುವುದಿಲ್ಲ. ಏಕೆಂದರೆ ಕೆಲವೇ ಕೆಲವು ವರ್ಗದವರಿಗೆ ಮಾತ್ರ ಲಿಪಿ ಮಾಡುವ ಕೆಲಸ ಸೀಮಿತವಾಗಿತ್ತು. ಇವರು ಬರೆದರೆ ಮಾತ್ರ ಶ್ರೇಷ್ಠ ಎಂಬ ಮನೋಭಾವ ಆಗಿನ ಕಾಲದಲ್ಲಿ ಬೇರುಬಿಟ್ಟಿತ್ತು. ಹಾಗಾಗಿ ಕೆಳವರ್ಗದ ಲಿಪಿಕಾರರು ಕಂಡುಬರುವುದಿಲ್ಲ ಎಂದು ಹೇಳಬಹುದು. ಕೆಳವರ್ಗದವರು ಕೇವಲ ಕೆಲವೊಂದು ಕೆಲಸಗಳಿಗೆ ಮಾತ್ರ ಸೀಮಿತ ಎಂದು ಆ ಕಾಲಘಟ್ಟದಲ್ಲಿ ಬಿಂಬಿಸಲಾಗಿತ್ತು. ಇವರು ಮೇಲ್ವರ್ಗದವರು ಹೇಳಿದ ಕೆಲಸಗಳನ್ನು ಮಾತ್ರವೇ ಮಾಡಬೇಕು. ಏಕೆಂದರೆ ಲಿಪಿ ಮಾಡುವ ಕಾರ್ಯ ಶ್ರೇಷ್ಠ ಕಾರ್ಯ ಯಾವುದೇ ಕೆಳವರ್ಗದ ಜನರು ಅದನ್ನು ಮಾಡಬಾರದು ಎಂಬ ಭಾವನೆ ಆಗಿನ ಕಾಲದ ಸಮಾಜದಲ್ಲಿ ನೆಲೆಸಿತ್ತು ಎಂದೇ ಹೇಳಬಹುದು. ಆದರೆ ಕಾಲ ಕಳೆದಂತೆ ಲಿಪಿ ಮಾಡುವ ಕಾರ್ಯವು ಸಹ ಕೆಳವರ್ಗದ ಜನರಲ್ಲಿ ಪ್ರಚಲಿತಗೊಂಡಿರುವುದನ್ನು ನಾವು ನೋಡಬಹುದು. ಉದಾಹರಣೆಗೆ ಬಯಲಾಟದ ಹಸ್ತಪ್ರತಿಗಳನ್ನು ಬರೆದವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವುದು ಕೆಳವರ್ಗದ ಲಿಪಿಕಾರರೇ. ಒಂದು ಕಾಲದಲ್ಲಿ ಇವರಿಗೆ ಸಿಗದಿರುವ ಲಿಪಿ ಮಾಡುವ ಕಾರ್ಯವು ಇಂದು ಎಲ್ಲ ಕೆಳವರ್ಗದವರಿಗೂ ದೊರೆತಿರುವುದನ್ನು ನಾವು ಗಮನಿಸಬಹುದು. ಇವರು ಸಮಾಜದಲ್ಲಿ ತಮ್ಮದೇ ಆದ ಅಂತಸ್ತು ಮತ್ತು ಗೌರವಗಳನ್ನು ಪಡೆದುಕೊಂಡು ಬಂದಿರುವುದನ್ನು ನೋಡಬಹುದಾಗಿದೆ. ಇವರು ಬಯಲಾಟದ ಹಸ್ತಪ್ರತಿ, ಭಜನೆ ಪದಗಳ ಹಸ್ತಪ್ರತಿ, ಕುಮಾರರಾಮನ ಸಾಂಗತ್ಯದ ಹಸ್ತಪ್ರತಿ, ತತ್ವಪದಗಳ ಹಸ್ತಪ್ರತಿ, ವೈದ್ಯಶಾಸ್ತ್ರದ ಹಸ್ತಪ್ರತಿ, ಬಾಲಗ್ರಹದ ಹಸ್ತಪ್ರತಿ, ಮಾಟ-ಮಂತ್ರದ ಹಸ್ತಪ್ರತಿ ಹೀಗೆ ಅನೇಕ ಹಸ್ತಪ್ರತಿಗಳನ್ನು ಬರೆದಿರುವುದನ್ನು ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಿದ ಹಸ್ತಪ್ರತಿಗಳನ್ನು ಅಧ್ಯಯನ ಮಾಡಿದಾಗ ತಿಳಿದುಬಂದಿದೆ. ಕೆಳವರ್ಗದ ಲಿಪಿಕಾರರು ಸಹ ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಅತ್ಯುನ್ನತ ಕಾರ್ಯವನ್ನು ಮಾಡಿ ಸಮಾಜದಲ್ಲಿ ಅನೇಕ ಬದಲಾವಣೆಗೆ ಕಾರಣರಾಗಿದ್ದಾರೆ ಎಂದು ಹೇಳಬಹುದು. ಅಂತಹ ಬದಲಾವಣೆಗೆ ಕಾರಣರಾದ ಲಿಪಿಕಾರರನ್ನು ನೋಡುವುದಾದರೆ

* ವಿರೋಚನ ಕಾಳಗವನ್ನು ಭೀಮಪ್ಪನವರು ಪ್ರತಿ ಮಾಡಿದ್ದಾರೆ.

* ತಾಮ್ರಧ್ವಜನ ಕಥೆಯನ್ನು ಗೌಡರ ಸಣ್ಣೋಬಯ್ಯನವರು ಬರೆದಿದ್ದಾರೆ.

* ರತಿ ಕಲ್ಯಾಣವನ್ನು ಕಲ್ಲೇನಹಳ್ಳಿ ಸಾಧು ಓಬಣ್ಣನವರು ಪ್ರತಿಮಾಡಿದ್ದಾರೆ.

* ಶಶಿರೇಖ ಪರಿಣಯವನ್ನು ಹನುಮಂತಪ್ಪನವರು ಬರೆದಿದ್ದಾರೆ.

* ಸತ್ಯಹರಿಶ್ಚಂದ್ರ ಕಥೆಯನ್ನು ಹನುಮಂತಪ್ಪನವರು ಪ್ರತಿ ಮಾಡಿದ್ದಾರೆ.

* ದುಶ್ಯಾಸನ ಕಥೆಯನ್ನು ಬೆಳಗಟ್ಟದ ಬೋರಯ್ಯನವರು ಬರೆದಿದ್ದಾರೆ.

* ದುಶ್ಯಾಸನ ಕಥೆ ಇದನ್ನು ಪ್ರತಿ ಮಾಡಿದವರು ಶಿವಸ್ವಾಮಿನಾಯ್ಕ ರಾಮದುರ್ಗ

* ಮಾಂದಾತ ಮಹಾರಾಜ ಇದನ್ನು ಬರೆದವರು ಪೂಜಾರಿ ತಿಪ್ಪಯ್ಯ,

* ಪಾರ್ಥ ಪಾಂಚಾಲಿಯುದ್ಧ ಪ್ರತಿಮಾಡಿದವರು ಎಸ್. ತಿಪ್ಪೇಸ್ವಾಮಿ

* ಸಾರಂಗಧರನ ಕಥೆಯನ್ನು ಬರೆದವರು ಎನ್.ಎಂ. ಬೊಮ್ಮಯ್ಯ

* ಭಕ್ತ ಪ್ರಹ್ಲಾದ ಕಥೆಯನ್ನು ಪ್ರತಿ ಮಾಡಿದವರು ಹನುಮಂತಪ್ಪ ಹಾಯ್ಕಲ್

* ಕರ್ಣಾರ್ಜುನರ ಕಾಳಗವನ್ನು ಪ್ರತಿ ಮಾಡಿದವರು ರುದ್ರಪ್ಪ

* ಪಾರ್ಥ ವಿಜಯವನ್ನು ಬರೆದವರು ಕೆ.ಸಿ. ತಿಪ್ಪೇಸ್ವಾಮಿ.

* ಅಭಿಮನ್ಯು ಕಾಳಗವನ್ನು ಪ್ರತಿ ಮಾಡಿದವರು ದೋಣಿಹಳ್ಳಿ ತಿಪ್ಪೇರುದ್ರಪ್ಪನವರು.

* ರಾಜಾಸತ್ಯ ವ್ರತನ ಕಥೆ ಇದನ್ನು ಮೊಳಕಾಲ್ಮೂರು ತಾಲ್ಲೂಕು ತುಮಕೂರ್ಲಹಳ್ಳಿ ಗ್ರಾಮದ ವಾಸಿಯಾದ ಮ್ಯಾಸನಾಯಕರ ಮಿಲ್ಟ್ರಿ ಬಯ್ಯಣ್ಣನ ಮಗ ಮಾಸ್ಟರ್ ಬೇಟಿ ಬಸಯ್ಯನವರು ಬರೆದಿದ್ದಾರೆ.

* ಸೌಂಗಧಿಕ ಪುಷ್ಪವನ್ನು ಪ್ರತಿ ಮಾಡಿದವರು ತಿಪ್ಪಯ್ಯನವರು

* ಕುಮಾರ ರಾಮನ ಸಾಂಗತ್ಯವನ್ನು ಪ್ರತಿ ಮಾಡಿದವರು ಮ್ಯಾಸನಾಯ್ಕ, ಎಚ್. ಮಲಿಯಪ್ಪ, ವೈ. ಓಬಯ್ಯ, ಎಸ್.ಆರ್. ದೊಡ್ಡಪಾಲಯ್ಯ, ಚಿ॥ ಓಬಯ್ಯ ಇವರು ಬರೆದಿದ್ದಾರೆ.

* ಭಜನೆ ಪದಗಳ ಹಸ್ತಪ್ರತಿಯನ್ನು ಲಿಪಿ ಮಾಡಿದವರು ಮಾರಮ್ಮನಹಳ್ಳಿ ಮಂಜಣ್ಣ ಪಿ.

* ಬಾಲಗ್ರಹದ ಹಸ್ತಪ್ರತಿಯನ್ನು ಪ್ರತಿ ಮಾಡಿದವರು ಕೊಂಡ್ಲಹಳ್ಳಿ ಮಲ್ಲಿಕಾರ್ಜುನ

* ಮಾಟ-ಮಂತ್ರದ ಹಸ್ತಪ್ರತಿಯನ್ನು ಲಿಪಿ ಮಾಡಿದವರು ತಿಪ್ಪೇಸ್ವಾಮಿ ಕೊಂಡ್ಲಹಳ್ಳಿ

ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೆಳವರ್ಗದ ಲಿಪಿಕಾರರನ್ನು ಚಿತ್ರದುರ್ಗ ಪರಿಸರದಲ್ಲಿ ನೋಡಬಹುದಾಗಿದೆ.

ಬಯಲಾಟಗಳಲ್ಲಿ ಸಾಮಾಜಿಕತೆಯನ್ನು ನೋಡೋಣ. "ಕರ್ನಾಟಕ ಜನಪದ ರಂಗಭೂಮಿಯ ಅಡಿಪಾಯಗಳಾದ ಬಯಲಾಟಗಳು ದೇಸೀ ಸಂಸ್ಕೃತಿಯ ಉಳಿವಿಗೆ ತಮ್ಮದೇ ಆದ ಕೊಡುಗೆಯನ್ನು

ನೀಡುತ್ತ ಬಂದಿವೆ. ದೊಡ್ಡಾಟಗಳಲ್ಲಿ ಮೂಡಲಪಾಯ ಮತ್ತು ಪಡುವಲಪಾಯಗಳೆಂಬ ಪ್ರಭೇದಗಳೊಡನೆ ಅಸ್ತಿತ್ವ ಉಳಿಸಿಕೊಂಡ ರಂಗಭೂಮಿ ೧೮ನೆಯ ಶತಮಾನದ ಉತ್ತರಾರ್ಧದಲ್ಲಿ ಮತ್ತೊಂದು ಬೆಳವಣಿಗೆಗೆ ಕಾರಣವಾಯಿತು. ವಸ್ತ್ರಾಲಂಕಾರ, ವರ್ಣಲಂಕಾರ, ವಿಜೃಂಭಣೆಯಿಲ್ಲದೆ ಸರಳವಾಗಿ ಪ್ರದರ್ಶನಗೊಳ್ಳಬಹುದಾದ ಸಣ್ಣಾಟವೆಂದು ಕರೆಸಿಕೊಂಡು ಮುಖ್ಯವಾಹಿನಿಗೆ ಬಂದಿದೆ.

ಶಿವಶರಣರು ಜನರಿಗೆ ಸಮಾಜ ಸುಧಾರಣೆ ಮೋಕ್ಷದ ಪರಿಕಲ್ಪನೆ, ಕಾಯಕದ ಮಹತ್ವ, ಏಕದೇವೋಪಾಸನೆ, ಜಾತಿಭೇದ, ನೀತಿಪ್ರಭುತ್ವದ ನಿರಾಕರಣೆ ಮುಂತಾದವುಗಳನ್ನು ತಮ್ಮ ವಚನಗಳ ಮೂಲಕ ಬಿತ್ತಿದರು. ಶರಣರ ಆಂದೋಲನಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ತಮ್ಮಲ್ಲಿರುವ ಜನಪದ ಕಲಾಪ್ರಕಾರದಲ್ಲಿ ಭಕ್ತಿ ಶಿವಶರಣರ ತತ್ವಗಳನ್ನು ತುಂಬಿ ಮೈಮರೆತು ಹಾಡಿ ಕುಣಿಯತೊಡಗಿದರು"[೮೦] ಈ ಪ್ರಕಾರ ಕೇವಲ ಮತ ಪ್ರಸಾರದ ದೃಷ್ಟಿಯಿಂದ ಹುಟ್ಟಿಕೊಂಡ ಬೆಳವಣಿಗೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. "ಕೇವಲ ಇದೊಂದೇ ಉದ್ದೇಶಗಳನ್ನಿಟ್ಟುಕೊಂಡು ಪೈಪೋಟಿಯಲ್ಲಿ ಈ ಸಣ್ಣಾಟಗಳು ರೂಪುಗೊಂಡಿಲ್ಲ. ಸಣ್ಣಾಟಗಳ ಮೂಲ ಉದ್ದೇಶ ಮನೋರಂಜನೆಯ ಜೊತೆಗೆ ಮಾನವತ್ವದ ಸಾಫಲ್ಯವನ್ನು ಸಾದರಪಡಿಸುವುದು. ಭಾರತೀಯರಿಗೆ ಅಧ್ಯಾತ್ಮ ರಕ್ತಗತ; ಹಾಗಾಗಿ ಮನೋವಿಕಾಸನದ ಮಾಧ್ಯಮವಾಗಿ ಈ ಪ್ರಕಾರ ಹುಟ್ಟಿಕೊಂಡಿದೆ; ದಿಟ್ಟತನದಿಂದ ಬೆಳೆದಿದೆ."[೮೧]

*** ಸಂಗ್ಯಾ-ಬಾಳ್ಯಾ. ಬೋಸೇದೇವರಹಟ್ಟಿ ಪ್ರತಿ :**

ಕಥಾ ಸಾರಾಂಶ : ಊರ ಶ್ರೀಮಂತನ ಮಗನಾದ ಸಂಗ್ಯಾ ಅಂತ್ಯಂತ ಧಾರಾಳ ಜೀವದ ಗೆಳೆಯ ಬಾಳ್ಯಾ ತೀರ ಬಡವ. ಆ ಊರಿನ ಲಗಳೇರ ಕುಟುಂಬದ ಈರ್ಯಾ ಪ್ರಮುಖ ನಾಗರಿಕ ವಿರೂಪಾಕ್ಷಿ, ಬಸವಂತ, ಈರ್ಯಾನ ತಮ್ಮಂದಿರು ಆಗಾಗ ಈರ್ಯಾ ವ್ಯಾಪಾರಕ್ಕೆ ದೂರದೂರಿಗೆ ಹೋಗುತ್ತಿರುತ್ತಾರೆ. ಒಮ್ಮೆ ಬಳ್ಳಾರಿಗೆ ಹೊರಡುವಾಗ ಮನೆದೇವರಾದ ಮರಡಿ ಬಸವಣ್ಣನಿಗೆ ಪೂಜೆ ಸಲ್ಲಿಸಲು ಹೆಂಡತಿ ಗಂಗೆಗೆ ಹೇಳಿ ಹೋಗುತ್ತಾನೆ. ಆಕೆಯೊಡನೆ ಪರಮ್ಮಳನ್ನು ಕಳುಹಿಸುತ್ತಾನೆ. ಅಲ್ಲಿ ಸಂಗ್ಯಾ ಗಂಗಿಯನ್ನು ನೋಡುತ್ತಾನೆ. ಆಕೆಯನ್ನು ಮೋಹಿಸುತ್ತಾನೆ. ಆಕೆಯ ಪ್ರಣಯ ಬಯಸುತ್ತಾನೆ. ಇದಕ್ಕೆ ಗಂಗಿ ಒಪ್ಪುವುದಿಲ್ಲ. ತಾನು ಇನ್ನೊಬ್ಬರ ಸತಿಯೆಂದು ಬುದ್ಧಿವಾದ ಹೇಳುತ್ತಾಳೆ. ಮೂಲತಃ ಸಂಗ್ಯಾ ಒಳ್ಳೆಯವನು ಗಂಗಿಯ ರೂಪ, ಲಾವಣ್ಯಕ್ಕೆ ಮನಸೋತ ಅವನು ಗೆಳೆಯ ಸಂಗ್ಯಾಗೆ ಹೇಗಾದರೂ ಮಾಡಿ ಆಕೆಯನ್ನು ಒಪ್ಪಿಸುವಂತೆ ದೈನ್ಯತೆಯಿಂದ ಬೇಡಿಕೊಳ್ಳುತ್ತಾನೆ. ಬಾಳ್ಯಾಗೂ ಇದು ಹಿಡಿಸಿರಲಿಲ್ಲ. ಬದಲಾಗಿ ಅವನ ಉಪಕಾರಕ್ಕೆ ಪೂರಕವಾಗಿ ಅನಿವಾರ್ಯವಾಗಿ ಈ ಕಾರ್ಯಕ್ಕೆ ಒಪ್ಪುತ್ತಾನೆ. ಕಾರ್ಯಕ್ಕಾಗಿ ಹಗಲೂ ರಾತ್ರಿ ಶ್ರಮಿಸಿ ಗಂಗಿಯನ್ನು ಭೇಟಿಯಾಗಿ ಈ ವಿಷಯವನ್ನು ಹೇಳಿ ಅವಮಾನಿತನಾಗುತ್ತಾನೆ. ಈ ಕೆಲಸ ತನ್ನಿಂದ ಆಗದೆಂದು ಮನಗಂಡ ಸಂಗ್ಯಾ ಮೇಲ್ಮನೆ ಪರಮ್ಮಳಿಗೆ ಸಗೆ, ಬಳೆ, ಸೀರೆಯ, ಆಸೆಯನ್ನು ತೋರಿಸಲು ಪರಮ್ಮ ಈ ದುಸ್ಸಾಹಸಕ್ಕೆ ಒಪ್ಪುತ್ತಾಳೆ. ಮೊದಲೇ ವ್ಯಾಪಾರಕ್ಕೆಂದು

ಮೇಲಿಂದ ಮೇಲೆ ಹೋಗುತ್ತಿದ್ದ ಪತಿಯ ಅಗಲಿಕೆಯಿಂದ ಯೌವನದ ಹೊಳೆಯಲ್ಲಿ ತೇಲುತ್ತಿದ್ದ ಗಂಗಾ ಪರಮ್ಮಳ ಕುಟಿಲತನಕ್ಕೆ ಬಲಿಯಾಗಿ ಸಂಗ್ಯಾನ ತೆಕ್ಕೆಯಲ್ಲಿ ಬೀಳುತ್ತಾಳೆ. ಈ ವಿಷಯ ಗಂಡ ಹಾಗೂ ಮೈದುನರಿಗೆ ತಿಳಿದು ಸಂಗ್ಯಾನನ್ನು ಮೋಸದಿಂದ ಕರೆಸಿಕೊಂಡು ಕೊಂದು ಜೈಲಿಗೆ ಹೋಗುತ್ತಾರೆ. ಇದು ಬೈಲವಾಡ ಗ್ರಾಮದ ಕತೆಯ ಇರಲಿ, ಲಗಳೇರ ಕುಟುಂಬದಲ್ಲಿ ನಡೆದಿರಬಹುದಾದರೂ ಇರಲಿ ಅಥವಾ ಎಂ. ಎಂ. ಕಲಬುರ್ಗಿಯವರ ಖರೇ ಖರೇ ಸಂಗ್ಯಾ-ಬಾಳ್ಯದ ಪತ್ತಾರ ಮಾಸ್ತರನ ಕಲ್ಪನೆಯೇ ಇರಲಿ. ಇದರಲ್ಲೊಂದು ನೀತಿವಾಕ್ಯ ಸಮಾಜಕ್ಕೆ ಧ್ವನಿಸುತ್ತದೆ. ಪತಿಯಿದ್ದು ಯಾವುದೋ ಪರಿಸ್ಥಿತಿಯ ಒತ್ತಡಕ್ಕೆ ಪರಪುರುಷನನ್ನು ಕೂಡಿದ್ದೇ ಆದರೆ ಗಂಗಿಯ ಸ್ಥಿತಿ ಎಲ್ಲರಿಗೂ ಬರುತ್ತದೆ. ವಯಸ್ಸು-ಅನುಭವಕ್ಕೆ ಕಿಮ್ಮತ್ತು ಕೊಡುವ ಸಾತ್ವಿಕ ಸಜ್ಜನ ಸಮಾಜದೆದುರು ಹಾದರಕ್ಕೆ ಹಾದಿ ಮಾಡಿಕೊಟ್ಟ ಕುಟಿಲತನದ ಪರಮ್ಮಳಂತಹ ಪಾತ್ರಗಳು ಎಚ್ಚರಿಕೆಯನ್ನು ನೀಡುತ್ತವೆ. ಬೆಳ್ಳಗಿರುವುದೆಲ್ಲಾ ಹಾಲಲ್ಲ ವಯಸ್ಸಾದವರೆಲ್ಲಾ ಪಕ್ವವಾದವರಲ್ಲವೆಂಬ ಸತ್ಯ ಪರಮ್ಮಳ ಮುಖಾಂತರ ತಿಳಿಯುತ್ತದೆ. ಪರಸತಿಯ ಮೇಲೆ ಕಣ್ಣು ಹಾಕಿದರೆ ಮಣ್ಣಾಗುವುದು ಖಂಡಿತವೆಂದು ಸಂಗ್ಯಾನ ಪಾತ್ರ ಸಾರುತ್ತದೆ. ಗೆಳೆತನಕ್ಕೆ ಕಟಿಬಿದ್ದು ಮಾಡಬಾರದ್ದನ್ನು ಮಾಡಿದರೆ ಏನಾದೀತೆಂದು ಬಾಳ್ಯಾನ ಪಾತ್ರ ಬುದ್ಧಿ ಹೇಳುತ್ತದೆ ಹೀಗೆ ಬಯಲಾಟದ ಇಂಥ ಸಾಮಾನ್ಯ ವಸ್ತುವಿನಲ್ಲಿ ಅದೆಷ್ಟು ಸಂದೇಶಗಳನ್ನು ಸಾರಿದ್ದಾರೆಂದು ಈ ಕತೆಯೊಂದರಿಂದಲೇ ನೋಡಬಹುದು.

*** ವೈದ್ಯಶಾಸ್ತ್ರದ ಹಸ್ತಪ್ರತಿ : ಕೊಂಡ್ಲಹಳ್ಳಿ ತಿಪ್ಪೇಸ್ವಾಮಿಯವರ ಪ್ರತಿ :**

ಕನ್ನಡ ವೈದ್ಯಶಾಸ್ತ್ರ ಕ್ಷೇತ್ರವು ಸಮುದ್ರದ ಆಳ ವಿಸ್ತಾರಗಳಂತೆ ಗಂಭೀರ ಮತ್ತು ವ್ಯಾಪಕವಾಗಿದೆ. ವೈದ್ಯಶಾಸ್ತ್ರದ ಹಸ್ತಪ್ರತಿಗಳು ಮಾನವನ ಸ್ವಾರಸ್ಯಕರ ಆಧ್ಯಾತ್ಮಿಕ, ಮಾನಸಿಕ, ಶಾರೀರಿಕ ಹಾಗೂ ಸಾಮಾಜಿಕ ಅಂಶಗಳನ್ನು ಒಳಗೊಂಡಿವೆ. ಇಂಥ ಹಸ್ತಪ್ರತಿಗಳಲ್ಲಿರುವ ವೈದ್ಯಶಾಸ್ತ್ರವು ಕೇವಲ ಶಾಸ್ತ್ರವಾಗಿ ಉಳಿಯದೇ ಪ್ರಯೋಗಾಚರಣೆಯಲ್ಲಿ ಇಂದು ವಿಜ್ಞಾನವು ಆಗಿದೆ. ನಮ್ಮ ಪೂರ್ವಜರು ಬರೆದಿಡುತ್ತಿದ್ದ ವೈದ್ಯಶಾಸ್ತ್ರ ಗ್ರಂಥಗಳಿಗೆ ಬಹು ವಿಸ್ತಾರವಾದ ಇತಿಹಾಸವಿದೆ. ಆಸಕ್ತರಿಂದ ಆಸಕ್ತರಿಗೆ ಹರಿದುಬರುತ್ತಿದ್ದ ವೈದ್ಯ ವಿದ್ಯೆಯನ್ನು ಹಿಡಿದಿಡುವ ಪ್ರಕಾರಗಳನ್ನು ಗುರುತಿಸುವುದು ಕಷ್ಟಕರವಾದದ್ದು. ಕನ್ನಡಿಗರು ಸಾವಿರಾರು ವರ್ಷಗಳ ಹಿಂದಿನಿಂದ ತಮಗೆ ಗೊತ್ತಿದ್ದ ಮತ್ತು ಸಂಸ್ಕೃತ ಗ್ರಂಥಗಳ ಅಧ್ಯಯನಗಳಿಂದ ವೈದ್ಯಶಾಸ್ತ್ರವನ್ನು ತಮ್ಮ ಮುಂದಿನ ಪೀಳಿಗೆಗಾಗಿ ತಾಳೆಗರಿ, ಕೋರಿ ಕಾಗದಗಳ ಮೇಲೆ ಬರೆದಿಟ್ಟಿರುವುದು ಕಂಡುಬರುತ್ತದೆ.

*** ಸಾಮಾನ್ಯ ವೈದ್ಯ :** ಸಾಮಾನ್ಯ ವೈದ್ಯ ಪುರುಷ, ಸ್ತ್ರೀ ಮತ್ತು ಮಕ್ಕಳಿಗೆ ತಗಲುವ ರೋಗ ಮತ್ತು ಚಿಕಿತ್ಸೋಪಾಯಗಳನ್ನು ತಿಳಿಸುವ ವೈದ್ಯಪದ್ಧತಿಯಾಗಿದೆ. ರೋಗಗಳು ಮನುಷ್ಯ ಶರೀರದಲ್ಲಿ ಪಾದದಿಂದ ನಾಭಿ, ನಾಭಿಯಿಂದ ಎದೆ, ಎದೆಯಿಂದ ತಲೆಯವರಿಗೆ ಕ್ರಮವಾಗಿ ವಾತ, ಪಿತ್ತ, ಕಫಗಳ ತಾಣವಾಗಿರುತ್ತವೆ. ದೇಹದಲ್ಲಿ ವಾತ, ಪಿತ್ತ, ಕಫಗಳ ಉಲ್ಬಣದಿಂದಾಗಿ ಶೂಲೆ, ಉಷ್ಣ ತಿಮಿರಾದಿ ರೋಗಗಳು ಹುಟ್ಟುತ್ತವೆ "ವಾತ ವಿಕಾರದಿಂದ ೮೦ ರೋಗಗಳು ಪಿತ್ತ

ವಿಕಾರದಿಂದ ೪೦ ರೋಗಗಳು ಕಫ ವಿಕಾರದಿಂದ ೨೦ ರೋಗಗಳು ಹುಟ್ಟುತ್ತವೆ" ಎಂಬುದು ಚರಕನ ಅಭಿಪ್ರಾಯವಾಗಿದೆ.

* **ಪುಷ್ಟಿಗೆ ಸಮಸ್ತ ವಿಧವಾದ ಕಾಯಿಲೆಗೆ :** ವಜ್ರ ನೀಲಿ ಗಿಡದ ಬೇರು, ಮೂರು ತೊಲ, ಗುಬ್ಬಿಕಾಲು ಸೊಪ್ಪು ಮೂರು ತೊಲ, ಚಿತ್ರ ಮೂಲದ ಬೇರು ಮೂರು ತೊಲ, ದಾಸುಮುತ್ತಿಗನ ಬೇರು, ಮೂರು ತೊಲ, ಪನ್ನೆರುಗಡ್ಡೆ ಮೂರು ತೊಲ, ಸಣ್ಣಜಾಲಿ ಸೊಪ್ಪನ್ನು ಚೂರ್ಣಮಾಡಿ ಒಣಕೊಬ್ಬರಿ ಒಂದು ಬಾದಾಮಿ, ಒಂದು ಸೇರು ಉತ್ತತ್ತಿ, ಒಂದು ಸೇರು ಬೀಜಬಂದ, ಮೂರು ತೊಲ ಲವಂಗ, ಮೂರು ತೊಲ ಜಾಯಿಕಾಯಿ, ಮೂರು ತೊಲ ಜೀರಿಗೆ, ಮೂರು ತೊಲ ಯಾಲಕ್ಕಿ, ಮೂರು ತೊಲ ಇಪ್ಲಿ, ಮೂರು ತೊಲ ಮೊದಿ, ಮೂರು ತೊಲ ಜೇಷ್ಟಮದ್ದು, ಮೂರು ತೊಲ ಅತಿಮದುರ ಮೂರುತೊಲ ಕಲ್ಮಾರು, ಮೂರು ತೊಲ ಅಕಂಳಕರೆ, ತುಪ್ಪ ಎರಡು ಸೇರು, ಜೇನುತುಪ್ಪ ಒಂದು ಸೇರು, ಆ ಚೂರ್ಣದಲ್ಲಿ ಕಲಸಿ ತಿನ್ನಬೇಕು.

ಪತ್ಯ– ಇಚ್ಚ ಹಾಸಿಗೆ ಹನ್ನೊಂದು ದಿನ ಬಿಡಬೇಕು[೮೨]

ನಾಟಿ ವೈದ್ಯರು ಹೇಳಿದ ಈ ಮೇಲಿನ ಔಷಧಿಗಳನ್ನು ಸರಿಯಾದ ಕ್ರಮದಲ್ಲಿ ತೆಗೆದುಕೊಂಡು ಪತ್ಯೆ ಇದ್ದರೆ ಪುಷ್ಟಿಗೆ ಮತ್ತು ಯಾವುದೇ ಕಾಯಿಲೆಯು ಸಹ ಬರುವುದಿಲ್ಲ ಎಂಬ ಉಲ್ಲೇಖ ಇದರಲ್ಲಿ ಕಂಡುಬರುತ್ತದೆ. ಇಂದಿನ ಆಧುನಿಕ ಕಾಲದಲ್ಲಿಯೋ ಸಹ ನಾಟಿ ವೈದ್ಯ ಪದ್ಧತಿಯನ್ನು ಅನುಸರಿಸಿಕೊಂಡು ಔಷಧಿಗಳನ್ನು ತೆಗೆದುಕೊಳ್ಳುವುದನ್ನು ಕಾಣಬಹುದಾಗಿದೆ.

* **ರೇಷಿಮೆ ಕಾಯಿಲೆಗೆ :** ಗಿಳಕಬೇರು ನಂಜು ನಾರಾಣಿಬೇರು, ತಂಗಡಿ ಬೇರಿನ ಚಕ್ಕೆ, ಗೆಜ್ಜುಗದ ಸೊಪ್ಪು, ಇಪ್ಪಲಿ, ಕಡ್ಡಿಜಾಜು, ಕಾಯಿಪತ್ರಿ, ಬೆಳ್ಳುಳ್ಳಿ, ಮೆಣಸು, ಯಾಲಕ್ಕಿ, ಬುಡ್ಡೆ ಇವೆಲ್ಲವನ್ನು ಸಣ್ಣಗೆ ಅರೆದು ಹನ್ನೆರಡು ದಿವಸ ಕೊಡಬೇಕು ಪತ್ಯ–ಸಜ್ಜೆಗಂಜಿ, ರಾಗಿಮುದ್ದೆ, ಕೊಡಬೇಕು[೮೩]

* **ಸಕಲ ಜ್ವರಕ್ಕೆ ಕಷಾಯ :** ನೆಲಗುಳ್ಳಗಿಡ, ದೊಡ್ಡಗುಳ್ಳಗಿಡ, ತುಳಸಿಗಿಡ, ಮೆಣಸು ಶುಂಠಿ ಹಾಕಿ ಪೊಂಗು ಮಾಡಿಕೊಂಡುವುದು.

ಪತ್ಯ : ಅನ್ನಸಾರು[೮೪]

* **ಕಾಕಿ ಸಮ್ಮಿಗೆ :** ಸೀಗಿಯಗಿಡ, ಎರಡು ಮೆಣಸು, ಎರಡು ಬೆಳ್ಳುಳ್ಳಿಹಾಕಿ, ಅರೆದು ಕರೆ ಮೇಕೆಯ ಹಾಲಿನಲ್ಲಿ ಅರೆದು ಕುಡಿಸುವುದು.

ಪತ್ಯ : ರಾಗಿಮುದ್ದೆ, ಮೆಣಸಿನಕಾಯಿ ಇಡುವುದು ಐದು ದಿನ[೮೫]

* **ಮೂಗಿನಲ್ಲಿ ರಕ್ತ ಬೀಳುವುದಕ್ಕೆ :** ಕರಿಕೆಯ ರಸ, ದಾಳಿಂಬೆ ಮರದ ಹೂವಿನ ರಸವನ್ನು ಮೂಗಿನಲ್ಲಿ ಹಿಂಡಬೇಕು[೮೬]

* **ಕಣ್ಣು ಸೂತ್ತಿಗೆ :** ಹಂದಿ ಮುಸಣಿಸೊಪ್ಪ ಬಿಳಿಉಮ್ಮತ್ತಿ ಬೆಕ್ಕಿನ ಕೊರಡಿನ ಸೊಪ್ಪನ್ನು ಸುಟ್ಟು ಬೂದಿ ಮಾಡಿ ಆಕಳ ಬೆಣ್ಣೆಯೊಂದಿಗೆ ಕುಂಬಾಣಿಯಲ್ಲಿ ಹಾಕಿ ತಾಮ್ರದ ತಂಬಿಗೆಯಿಂದ ಅರೆದು ಮುಲಾಮು ಮಾಡಿ ಹಚ್ಚಬೇಕು[೮೭]

* **ಕಾಲುಮಡಿ (ಮೂತ್ರ) ಕಟ್ಟಾದರೆ :** ಯಡತಿರಿ ಬೇರು ಅರೆದು ಕುಡಿಸಲು ಮೂತ್ರ ಬರುವುದು[೮೮]

* **ಶೀತದಿಂದ ಕೈಕಾಲು ಬಾವಿಗೆ :** ಎರಡು ತೊಲ ಒಣ ಶುಂಠಿ, ಒಂದು ತೊಲ ಸೈಂದವ ಲವಣಗಳನ್ನು ಅರೆದು ಗರುಗದ ಸೊಪ್ಪಿನ ರಸದಲ್ಲಿ ಕಲಸಿ ಹಚ್ಚಲು ಗುಣವಾಗುವುದು.[೮೯]

* **ಸ್ತ್ರೀ ವೈದ್ಯ :** ಆಧುನಿಕ ವೈದ್ಯ ಪದ್ಧತಿಯಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕ ಆಸ್ಪತ್ರೆಗಳಿದ್ದಂತೆ ಪ್ರಾಚೀನ ಕಾಲದಲ್ಲಿಯೂ ಸ್ತ್ರೀಯರಿಗೆ ಬರುವಂಥ ಕೆಲವು ವಿಶಿಷ್ಟ ಕಾಯಿಲೆ ತೊಂದರೆಗಳಿಗೆ ಚಿಕಿತ್ಸೋಪಾಯ ನೀಡಲು ಪ್ರತ್ಯೇಕವಾದ ವೈದ್ಯರು ಇದ್ದದ್ದು ತಿಳಿದುಬರುತ್ತದೆ. ಸ್ತ್ರೀಯರಿಗೆ ಸಂಬಂಧಿಸಿದಂತೆ ಸ್ತ್ರೀವೈದ್ಯ ಗ್ರಂಥವನ್ನು ತಿಮ್ಮಣ್ಣನೆಂಬ ಶಾಸ್ತ್ರಜ್ಞ ಬರೆದಿದ್ದಾನೆ. ಆದರೆ ಈ ಕುರಿತ ಹಸ್ತಪ್ರತಿಗಳು ಲಭ್ಯವಾಗಿಲ್ಲ. ಚಾವುಂಡರಾಯನ ಲೋಕೋಪಕಾರ, ವೀರರಾಜೇಂದ್ರನ ಸಕಲವೈದ್ಯ ಸಂಹಿತ ಸರ್ಹಿಣವ, ಜಗದ್ದಳ ಸೋಮನಾಥನ ಕಲ್ಯಾಣಕಾರಕ ಹಾಗೂ ಇನ್ನಿತರ ವೈದ್ಯಶಾಸ್ತ್ರ ಹಸ್ತಪ್ರತಿಗಳಲ್ಲಿ ಗರ್ಭಿಣಿಯರಿಗೆ ಸಂಬಂಧಿಸಿದ ಮುಟ್ಟಿನ ತೊಂದರೆ, ಕೆಂಪು, ಸೆರಗು, ಬಿಳಿಸೆರಗು, ಸ್ತನರೋಗ, ಬಂಜೆರೋಗ, ಗರ್ಭಪಾತ, ಎದೆಹಾಲು ವೃದ್ಧಿ ಇತ್ಯಾದಿ ತೊಂದರೆಗಳಿಗೆ ಪ್ರತ್ಯೇಕವಾದ ಚಿಕಿತ್ಸಾಕ್ರಮಗಳನ್ನು ನೀಡಲಾಗಿದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊರೆತ ವೈದ್ಯಶಾಸ್ತ್ರದ ಹಸ್ತಪ್ರತಿಯಲ್ಲಿ ಸ್ತ್ರೀಯರಿಗೆ ಬರುವ ಕೆಲವು ರೋಗಗಳ ಲಕ್ಷಣ ಹಾಗೂ ಚಿಕಿತ್ಸಾ ವಿಧಾನಗಳನ್ನು ಈ ಕೆಳಗಿನಂತೆ ಕೊಡಲಾಗಿದೆ.

* **ಬಿಳಿ ಕರಿಗೆ :** ಕಿರಸಾಲಿನ ಸೊಪ್ಪು ಎಳ್ಳು, ಮೆಣಸು, ಬೆಳ್ಳುಳ್ಳಿ ಬೇಳೆಯನ್ನು ಅರೆದು ಹದಿನೇಳು ಗುಳಿಗೆ ಮಾಡಿ ಏಳು ದಿವಸ ಮೇಕೆ ಹಾಲಿನಲ್ಲಿ ಬಿಸಿಮಾಡಿ ಸಕ್ಕರೆಯೊಂದಿಗೆ ಕೊಡಬೇಕು[೯೦]

* **ಬಾಣಂತಿ ರೋಗಕ್ಕೆ :** ಇಸುಮುದಾರಿ, ಗಾಮುಂದಾರಿ, ಉಲ್ಲೀಸಲು, ಕತ್ತೆಗಿರಬಿನ ಸೊಪ್ಪು ಕೊಂಡಗುಂಬಳ ಎಲೆ, ಶಂಕುಬಂಸ್ಮಡುಪ್ಪಿಕೊಂಬು, ಗಂದಕೇರನ್ನು ನಿಂಬೆ ಹಣ್ಣಿನ ರಸದಲ್ಲಿ ಕುಡಿಸಬೇಕು.

ಪತ್ಯ : ರಾಗಿಮುದ್ದೆ ತೊಗರಿಬೇಳೆ ಸಾಂಬರು ಸೇವಿಸಬೇಕು[೯೧]

* **ಯೋನಿಬಾಧೆಗೆ :** ಅವು ಮೆಕ್ಕಬೇರು, ಆಡಿನ ತುಪ್ಪ ಅಥವಾ ಹಾಲಿನಲ್ಲಾಗಲಿ ಹಚ್ಚುವುದು. ಇಗಂದವನ್ನು ಹೊಟ್ಟೆಯೊಳಕ್ಕೆ ತೆಗೆದುಕೊಳ್ಳಬೇಕು. ಅಕವ ಕರೇವಾದ್ದು ಗುಣಿಕೆಯ ಎರಡು ಎಲೆಗಳನ್ನು ಸಣ್ಣಗೆ ಅರೆದು ತುಪ್ಪ ಸೈಂದ್ರ ಲವಣ ಕಲಸಿ ಯೋನಿಗೆ ಹಚ್ಚಬೇಕು; ನೋವು ಕಡಿಮೆಯಾಗುತ್ತದೆ.[೯೨]

* **ಸ್ತ್ರೀಯರ ಹೊಟ್ಟೆ ಕುಟ್ಟಿಗೆ :** ಹಣ್ಣು ಎಕ್ಕೆಗಿಡದ ಹಾಲಿನಲ್ಲಿ ಅರಳೆಯನ್ನು ತೊಯಿಸಿ ತುಪ್ಪದೊಂದಿಗೆ ನುಂಗುವುದು. ಪತ್ಯ : ಅನ್ನತುಪ್ಪ ಕಾರದ ಪುಡಿ[೯೩]

* **ಹೊಟ್ಟೆಯಲ್ಲಿ ಕೂಸು ಸತ್ತಿದ್ದರೆ :** ಬ್ರಹ್ಮದಂಡೆ ಬೇರು ತಂದು ಬಿಳ್ಳೆಣೆಯಲ್ಲಿ ಕುಡಿಸಲು ಕೂಸು ಬೀಳುವುದು.[೯೪]

* **ಮುಟ್ಟು ನಿಲ್ಲುವುದಕ್ಕೆ :** ಎರಡು ಸೇರು ಮುನಿಚಕ್ಕೆ, ಎರಡು ಸೇರು ಹಸುವಿನ ಹಾಲು ಒಂದು ನಾಲ್ಕು ಸೇರು ಅರಳೆಣ್ಣೆ ಕಾಸಿ ಕೊಡಲು ಮುಟ್ಟು ನಿಲ್ಲುವುದು.[೯೫]

* **ಮೊಲೆಯಲ್ಲಿ ಹಾಲು ಇಲ್ಲದಿದ್ದರೆ :** ಮಿಂಡ ಮಗನ ಸೊಪ್ಪನ್ನು ಕೆಂಪು ಜೋಳದ ರೊಟ್ಟಿಯಲ್ಲಿ ಎರಡು ದಿನ ಕೊಡುವುದು.[೯೬]

* ಸ್ತ್ರೀಯರ ಸಂತಾನಕ್ಕೆ : ಪುತ್ರಂಜಿಯ ಬೀಜವನ್ನು ತಿರುಳು ತೆಗೆದು ಆಕಳ ಹಾಲಿನಲ್ಲಿ ಅರೆದು ಮುಟ್ಟಾದ ದಿವಸ ಕೊಡುವುದು; ಮೂರು ದಿನ ಕೊಡಬೇಕು.[೯೭]

* ಮೈನೆರೆಯುವುದಕ್ಕೆ : ಮುದುಕದ ಬೀಜ, ಎಕ್ಕೆಯ ಬೀಜ, ಗುಲಗಂಜಿಯ ಬೇಳೆ ಗಜ್ಜುಗದ ಸೊಪ್ಪುತಾಳೆ ಬೆಲ್ಲ ಇವೆಲ್ಲವನ್ನು ಅರೆದು ಗಜ್ಜುಗದ ಪ್ರಮಾಣದ ಗುಳಿಗೆಯನ್ನು ಮಾಡಿ ಎರಡು ದಿವಸ ಹಾಲಿನಲ್ಲಿ ಕುಡಿಸುವುದು[೯೮]

ಭಾರತದ ವೈದ್ಯಶಾಸ್ತ್ರದಲ್ಲಿ ಧನ್ವಂತರಿಯನ್ನು ಸಹಸ್ರಮಾನಗಳ ಮೌಖಿಕ ಪರಂಪರೆಯಲ್ಲಿ ದೈವತ್ವಕ್ಕೆ ಏರಿಸಿ ಕೃತಜ್ಞತೆ ವ್ಯಕ್ತಪಡಿಸಿದ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ದೇಶಿ ವಿದ್ವಾಂಸರು ತಮ್ಮ ಪರಿಸರದಲ್ಲಿ ಸಿಗುವ ಅನೇಕ ಗಿಡ, ಮರ, ಬಳ್ಳಿಗಳಿಂದ ಪ್ರಾಥಮಿಕ ಔಷಧಿಗಳನ್ನು ತಯಾರಿಸುವ ಜ್ಞಾನವನ್ನು ಹೊಂದಿದ್ದರು. ಮಾರ್ಗ ಸಾಹಿತ್ಯದಲ್ಲಿ ಕೇವಲ ಮಾವಿನಮರ, ತೆಂಗು ಇಂತಹ ಶ್ರೇಷ್ಠಮಟ್ಟದ ಮರಗಳನ್ನಷ್ಟೇ ಔಷಧಿಗಾಗಿ ಬಳಸಿರುವ ಕುರುಹುಗಳು ಕಂಡುಬರುತ್ತವೆ. ಆದರೆ ಸ್ಥಳೀಯ ಜನರು ತಮಗೆ ಏನಾದರೂ ಕಾಯಿಲೆಗಳಾದರೆ ಚೇಳು, ಹಾವು ಕಚ್ಚಿದರೆ ತಮ್ಮ ಸುತ್ತಮುತ್ತಲೇ ಇರುವ ಸಸ್ಯಗಳಿಂದ ಔಷಧಿಯನ್ನು ತಯಾರಿಸುವ ಕೌಶಲ ಇಂದಿಗೂ ಗ್ರಾಮೀಣರಲ್ಲಿದೆ. ಇಷ್ಟೆಲ್ಲ ಇದ್ದರೂ ಇಂದು ಇಂಗ್ಲೀಷ್ ವೈದ್ಯರ ಬಳಿಯಲ್ಲಿಯೇ ಸಣ್ಣ ಕಾಯಿಲೆಗಳಿಗೂ ಮೊರೆಹೋಗುವುದನ್ನು ನೋಡುತ್ತೇವೆ.

ಹೀಗೆ ಮನುಷ್ಯರಿಗೆ ತಗಲುವ ಸಾಮಾನ್ಯ ರೋಗಗಳಿಗೆ ಗಿಡಮೂಲಿಕೆಗಳಿಂದ ಔಷಧಗಳನ್ನು ತಯಾರಿಸಿ ಕ್ರಮಾನುಗತವಾಗಿ ಬಳಸುತ್ತಿದ್ದರು ಎಂಬುದಕ್ಕೆ ಕನ್ನಡ ವೈದ್ಯಶಾಸ್ತ್ರದ ಹಸ್ತಪ್ರತಿಗಳಲ್ಲಿ ನೂರಾರು ಪ್ರಯೋಗಗಳು ನಡೆದಿರುವುದನ್ನು ಕಾಣಬಹುದು.

ಒಟ್ಟಾರೆಯಾಗಿ ಸಾಮಾಜಿಕ ಅನನ್ಯತೆಯನ್ನು ಕಾಲೊಫಿನ್ಸ್ ಮೂಲಕ ಅಧ್ಯಯನ ಮಾಡಿ ಇದರಿಂದ ಎಲ್ಲಾ ಸಾಂಸ್ಕೃತಿಕ ಮಾಹಿತಿಯನ್ನು ಹೊರತೆಗೆಯಬಹುದು. ಹಾಗೆಯೇ ಬಯಲಾಟ ಹಾಗೂ ವೈದ್ಯಶಾಸ್ತ್ರದ ಹಸ್ತಪ್ರತಿಗಳನ್ನು ಅಧ್ಯಯನ ಮಾಡಿದಾಗ ಲಿಪಿಕಾರರ ಸಾಮಾಜಿಕ ಸ್ಥಾನಮಾನ ಬೆಲೆ, ಗೌರವ ಮತ್ತು ಸಾಮಾಜಿಕ ಅಂಶಗಳನ್ನು ಗುರುತಿಸಬಹುದು.

ಈ ಅಧ್ಯಾಯದಲ್ಲಿ ಸಾಮಾಜದಲ್ಲಿನ ವ್ಯಕ್ತಿಗಳ ಹೆಸರುಗಳನ್ನು ವೃತ್ತಿಯನ್ನು ಸ್ಥಳಗಳನ್ನು ಗುರ್ತಿಸುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ ಬಯಲಾಟದ ಸಂಗ್ಯಾ-ಬಾಳ್ಯಾ ಹಸ್ತಪ್ರತಿಯಲ್ಲಿ ಹೇಗೆ ಸಾಮಾಜಿಕ ಅಂಶಗಳು ಕಂಡು ಬರುತ್ತವೆ ಎಂಬುದನ್ನು ಚರ್ಚಿಸಲಾಗಿದೆ. ವೈದ್ಯಶಾಸ್ತ್ರದ ಹಸ್ತಪ್ರತಿಯಲ್ಲಿ ಯಾವ ಯಾವ ಕಾಯಿಲೆಗೆ ಯಾವ ಯಾವ ಔಷಧಿಯನ್ನು ನೀಡಬೇಕು ಎಂಬುದರ ಬಗ್ಗೆ ಚರ್ಚಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಗೀತಾಚಾರ್ಯ ನಾ. ಹಸ್ತಪ್ರತಿ ಅಧ್ಯಯನಶಾಸ್ತ್ರ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು–೨೦೦೯ ಪು.ಸಂ, ೯

೨. ಅದೇ, ಪು.ಸಂ–೫೦

೩. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಶಿವಣ್ಣ ಎಸ್. (ಸಂ), ವೀರಶೈವ ಅಧ್ಯಯನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ–ಗದಗ, ೧೯೯೪, ಪುಟ, ೨೧

೪. ಅದೇ, ಪು.ಸಂ, ೩೭

೫. ಅದೇ, ಪು.ಸಂ, ೪೩

೬. ಅದೇ, ಪು.ಸಂ, ೫೬

೭. ಅದೇ, ಪು.ಸಂ, ೫೬

೮. ಅದೇ, ಪು.ಸಂ, ೬೧

೯. ಅದೇ, ಪು.ಸಂ, ೬೪

೧೦. ಅದೇ, ಪು.ಸಂ, ೬೮

೧೧. ಅದೇ, ಪು.ಸಂ, ೭೮–೭೯

೧೨. ಅದೇ, ಪು.ಸಂ, ೮೩

೧೩. ಅದೇ, ಪು.ಸಂ, ೮೩

೧೪. ಅದೇ, ಪು.ಸಂ, ೯೦

೧೫. ಅದೇ, ಪು.ಸಂ, ೧೩೭

೧೬. ಅದೇ, ಪು.ಸಂ, ೧೩೯

೧೭. ಅದೇ, ಪು.ಸಂ, ೧೫೦

೧೮. ಅದೇ, ಪು.ಸಂ, ೧೫೩

೧೯. ಅದೇ, ಪು.ಸಂ, ೧೯೨

೨೦. ಅದೇ, ಪು.ಸಂ, ೨೧೩

೨೧. ಅದೇ, ಪು.ಸಂ, ೨೩೬

೨೨. ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ–೧ (ಸಂ), ಶಿವಣ್ಣ ಎಸ್. ಪು.ಸಂ, ೩೭೮

೨೩. ಅದೇ, ಪು.ಸಂ, ೩೭೯

೨೪. ಅದೇ, ಪು.ಸಂ, ೩೮೧

೨೫. ಅದೇ, ಪು.ಸಂ, ೩೮೨

೨೬. ಅದೇ, ಪು.ಸಂ, ೩೮೪

೨೭. ಅದೇ, ಪು.ಸಂ, ೩೮೬

೨೮. ಅದೇ, ಪು.ಸಂ, ೩೮೮

೨೯. ಅದೇ, ಪು.ಸಂ, ೩೮೯

೩೦. ಅದೇ, ಪು.ಸಂ, ೩೯೦

೩೧. ಅದೇ, ಪು.ಸಂ, ೩೯೨

೩೨. ಅದೇ, ಪು.ಸಂ, ೩೯೪

೩೩. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಶಿವಣ್ಣ ಎಸ್.(ಸಂ), ವೀರಶೈವ ಅಧ್ಯಯನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ, ೧೯೯೪, ಪು.ಸಂ, ೧೯

೩೪. ಅದೇ, ಪು.ಸಂ, ೨೮

೩೫. ಅದೇ, ಪು.ಸಂ, ೯೫

೩೬. ಅದೇ, ಪು.ಸಂ, ೯೫

೩೭. ಅದೇ, ಪು.ಸಂ, ೧೪೫

೩೮. ಅದೇ, ಪು.ಸಂ, ೧೬೮

೩೯. ಅದೇ, ಪು.ಸಂ, ೧೮೧

೪೦. ಅದೇ, ಪು.ಸಂ, ೧೯೩-೯೪

೪೧. ಅದೇ, ಪು.ಸಂ, ೨೩೭

೪೨. ಅದೇ, ಪು.ಸಂ, ೨೭೧-೨೭೨

೪೩. ಮುರುಘಾರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ-೧, ಚಿತ್ರದುರ್ಗ, ೧೯೯೧, ಪು.ಸಂ, ೩೮೭

೪೪. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಶಿವಣ್ಣ ಎಸ್. (ಸಂ), ವೀರಶೈವ ಅಧ್ಯಯನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ, ೧೯೯೪, ಪು.ಸಂ, ೪೦

೪೫. ಅದೇ, ಪು.ಸಂ, ೬೦

೪೬. ಅದೇ, ಪು.ಸಂ, ೬೦

೪೭. ಅದೇ, ಪು.ಸಂ,-೬೮

೪೮. ಅದೇ, ಪು.ಸಂ, ೭೧

೪೯. ಅದೇ, ಪು.ಸಂ, ೮೩

೫೦. ಅದೇ, ಪು.ಸಂ, ೮೩

೫೧. ಅದೇ, ಪು.ಸಂ, ೧೦೮

೫೨. ಅದೇ, ಪು.ಸಂ, ೧೩೬

೫೩. ಅದೇ, ಪು.ಸಂ, ೧೪೬

೫೪. ಅದೇ, ಪು.ಸಂ, ೧೫೦

೫೫. ಅದೇ, ಪು.ಸಂ, ೧೫೫-೧೫೬

೫೬. ಅದೇ, ಪು.ಸಂ, ೧೮೧

೫೭. ಅದೇ, ಪು.ಸಂ, ೧೯೨

೫೮. ಅದೇ, ಪು.ಸಂ, ೨೦೪

೫೯. ಅದೇ, ಪು.ಸಂ, ೨೧೩

೬೦. ಅದೇ, ಪು.ಸಂ, ೨೪೦-೨೪೧

೬೧. ಅದೇ, ಪು.ಸಂ, ೨೭೧-೨೭೨

೬೨. ಅದೇ, ಪು.ಸಂ, ೧೧೩

೬೩. ಅದೇ, ಪು.ಸಂ, ೧೧೩

೬೪. ಅದೇ, ಪು.ಸಂ, ೪೫

೬೫. ಮುರುಘಾರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ-೧, ಚಿತ್ರದುರ್ಗ, ೧೯೯೧, ಪು.ಸಂ, ೩೭೮

೬೬. ಅದೇ, ಪು.ಸಂ, ೩೮೦

೬೭. ಅದೇ, ಪು.ಸಂ, ೩೮೨

೬೮. ಅದೇ, ಪು.ಸಂ, ೩೮೩

೬೯. ಅದೇ, ಪು.ಸಂ, ೩೮೩

೭೦. ಅದೇ, ಪು.ಸಂ, ೩೮೪

೭೧. ಅದೇ, ಪು.ಸಂ, ೩೮೪-೩೮೫

೭೨. ಅದೇ, ಪು.ಸಂ, ೩೮೫

೭೩. ಅದೇ, ಪು.ಸಂ, ೩೮೬

೭೪. ಅದೇ, ಪು.ಸಂ, ೩೮೮

೭೫. ಅದೇ, ಪು.ಸಂ, ೩೯೦

೭೬. ಅದೇ, ಪು.ಸಂ, ೩೯೨

೭೭. ಅದೇ,, ಪು.ಸಂ, ೩೯೩

೭೮. ಅದೇ,,, ಪು.ಸಂ, ೩೯೩–೩೯೪

೭೯. ಅದೇ, ಪು.ಸಂ, ೩೯೪

೮೦. ಶ್ರೀರಾಮ್ ಇಟ್ಟಣ್ಣನವರ, ಸಣ್ಣಾಟ ಭೌಗೋಳಿಕ ಪ್ರಸಾರ, ಪು.ಸಂ, ೧೭–೧೮

೮೧. ಪಾಟೀಲ ಗುಂಡೂರು ಎಸ್.ವಿ., ನಂದೇ ನಾಬರೆದೆ, ಪು.ಸಂ, ೮೦

೮೨. ವೈದ್ಯಶಾಸ್ತ್ರದ ಹಸ್ತಪ್ರತಿ, ಕೊಂಡ್ಲಹಳ್ಳಿ, ಪು.ಸಂ, ೨೦

೮೩. ಅದೇ, ಪು.ಸಂ, ೨೨

೮೪. ಅದೇ, ಪು.ಸಂ, ೨೪

೮೫. ಅದೇ, ಪು.ಸಂ, ೨೪

೮೬. ಅದೇ, ಪು.ಸಂ, ೨೫

೮೭. ಅದೇ, ಪು.ಸಂ, ೨೫

೮೮. ಅದೇ, ಪು.ಸಂ, ೨೬

೮೯. ಅದೇ, ಪು.ಸಂ, ೨೬

೯೦. ಅದೇ, ಪು.ಸಂ, ೩೦

೯೧. ಅದೇ, ಪು.ಸಂ, ೩೧

೯೨. ಅದೇ, ಪು.ಸಂ, ೩೧

೯೩. ಅದೇ, ಪು.ಸಂ, ೩೧

೯೪. ಅದೇ, ಪು.ಸಂ, ೩೧

೯೫. ಅದೇ, ಪು.ಸಂ, ೩೩

೯೬. ಅದೇ, ಪು.ಸಂ, ೩೪

೯೭. ಅದೇ, ಪು.ಸಂ, ೩೪

೯೮. ಅದೇ, ಪು.ಸಂ, ೩೪

ಅಧ್ಯಾಯ : ೫

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು : ಸಾಹಿತ್ಯಿಕ ಅನನ್ಯತೆ

ಅಧ್ಯಾಯ: ೫

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಹಿತ್ಯಿಕ ಅನನ್ಯತೆ

"ಸಾಹಿತ್ಯಿಕ ಅಧ್ಯಯನವಾಗಿ ಹಸ್ತಪ್ರತಿ ಅಧ್ಯಯನ ನಮಗೆ ಮುಖ್ಯವಾಗುತ್ತದೆ. ಸಾಹಿತ್ಯ ಕೃತಿಯ ಪ್ರಸಾರದ ಸ್ವರೂಪವನ್ನು ಈ ಹಸ್ತಪ್ರತಿ ಮೂಲಕ ಗ್ರಹಿಸಬಹುದಾಗಿದೆ. ಕುಮಾರವ್ಯಾಸ ಭಾರತದ್ದೇ ಸಿಗುವಂಥ ನೂರಾರು ಹಸ್ತಪ್ರತಿಗಳ ಪ್ರಶಸ್ತಿಗಳನ್ನು ಪ್ರಾದೇಶಿಕವಾಗಿ ವಿಂಗಡನೆ ಮಾಡುತ್ತಾ ಹೋದಾಗ ಯಾವ ಯಾವ ಪ್ರದೇಶಗಳಲ್ಲಿ ಕುಮಾರವ್ಯಾಸನ ಓದುವ ವರ್ಗ ಇತ್ತು. ಅವರ ಮನೋಭಾವ ಏನಿತ್ತು"[೧] ಎಂಬ ಸಾಹಿತ್ಯದ ಮೂಲಕವಾಗಿ ತಿಳಿದುಕೊಳ್ಳಬಹುದು. 'ವೀರಶೈವ ಹಸ್ತಪ್ರತಿ ಪುಷ್ಪಿಕೆ' ಎಂಬ ಗ್ರಂಥವನ್ನು ಪ್ರಮುಖವಾಗಿ ಸಾಹಿತ್ಯ ಕೃತಿ ಎಂದೇ ಕರೆಯಬಹುದಾಗಿದೆ. ಈ ಕೃತಿಯಲ್ಲಿ ಎಸ್. ಶಿವಣ್ಣನವರು ೨೩೧೬ ಕೃತಿಗಳನ್ನು ಉಲ್ಲೇಖಿಸಿರುವುದನ್ನು ನೋಡಬಹುದು. ಕವಿ–ಕೃತಿಗಳನ್ನು ಅಕಾರಾಧಿ ರೂಪದಲ್ಲಿ ಕೊಟ್ಟಿರುವುದರಿಂದ ಪ್ರಮುಖ ಕವಿಗಳನ್ನು ಮತ್ತು ಪ್ರಮುಖ ಕೃತಿಗಳನ್ನು ನೋಡಬಹುದು. ಸಾಹಿತ್ಯ ಪ್ರಕಾರಗಳಾದ ವಚನ, ರಗಳೆ, ಚರಿತ್ರೆ, ಸಾಂಗತ್ಯ, ಲೌಕಿಕ, ಅಲೌಕಿಕ ಕೃತಿಗಳು ಮತ್ತು ಜನಪದ ಕೃತಿಗಳು ಹೀಗೆ ಹಲವು ಪ್ರಕಾರದ ಕೃತಿಗಳನ್ನು ಈ ಗ್ರಂಥದಲ್ಲಿ ನೋಡಬಹುದು. ಹಾಗೆಯೇ ಚಿತ್ರದುರ್ಗ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟದಲ್ಲಿಯೂ ಇದೇ ಮಾದರಿಯನ್ನು ಅನುಸರಿಸಿ ಕೃತಿಗಳ ಹಾಗೂ ಕವಿಗಳ ಕೃತಿಗಳನ್ನು ಪಟ್ಟಿ ಮಾಡಿರುವುದನ್ನು ನೋಡಬಹುದು.

ಇನ್ನೊಂದು ರೀತಿಯಲ್ಲಿ ಸಾಹಿತ್ಯದ ಚಾರಿತ್ರಿಕ ವಿಮರ್ಶೆಯನ್ನು ಈ ಹಸ್ತಪ್ರತಿ ಮೂಲಕ ನಾವು ಕಟ್ಟಿಕೊಡಬಹುದು. ಕನ್ನಡ ಹಸ್ತಪ್ರತಿ ವಿಷಯದಲ್ಲಿ ಕೇವಲ ಸಾಹಿತ್ಯ ಪ್ರಧಾನವಾದ ಸ್ವರೂಪವಿಲ್ಲ. ಅಲ್ಲಿ ಕಲೆ, ಧರ್ಮ, ಸಮಾಜ, ಜನಾಂಗ, ಸಮುದಾಯ, ಒಕ್ಕೂಟ, ರಾಜಸತ್ತೆ ಬಂಡವಾಳಶಾಹಿ, ಪುರೋಹಿತಶಾಹಿ, ಮತಪ್ರಚಾರಕ ಸಂಸ್ಥೆಗಳು ಮತೀಯ ಶಕ್ತಿಗಳು ಹಾಗೆಯೇ

ಸಂಸ್ಕೃತಿ ಮತ್ತು ವಸಾಹತೋತ್ತರ ಸಂಸ್ಕೃತಿಯೆಂಬ ಗೋಣಿ ಚೀಲದಲ್ಲಿ ಏನೆಲ್ಲಾ ತುಂಬಬಹುದೋ ಅಂತಹ ಘಟಕಗಳೆಲ್ಲ ಕನ್ನಡ ಹಸ್ತಪ್ರತಿಗಳ ವಿಷಯ ಸ್ವರೂಪದಲ್ಲಿದೆ. ಅದ್ದರಿಂದ ವಸ್ತುವಿಗೆ ಮಾತ್ರವಲ್ಲದೆ, ನಾವು ಕಲ್ಪಿಸಿಕೊಂಡ ಮೇಲಿನ ಎಲ್ಲಾ ಪರಿಕಲ್ಪನೆಗಳೊಂದಿಗೆ ಹಸ್ತಪ್ರತಿಗಳ ವಿಷಯ ಸಂಪತ್ತನ್ನು ನೋಡಲಾಗಿದೆ. ಹಸ್ತಪ್ರತಿಗಳ ಒಳ ಹೊಕ್ಕು ಶೋಧಿಸಿದಾಗ ಅವುಗಳ ಏನನ್ನು ಹಿಡಿದಿಟ್ಟುಕೊಂಡಿವೆ ಎನ್ನುವುದು ಕೂಡ ಇದರಿಂದ ಗೊತ್ತಾಗುತ್ತದೆ. ಚಿತ್ರದುರ್ಗವನ್ನು ಆಳಿದ ನಾಯಕ ಅರಸರು ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿರುವುದು ನಿಜ. ವಿಶೇಷವಾಗಿ ವೀರಶೈವ ಸಾಹಿತ್ಯಕ್ಕೆ ಅದರ ಜೊತೆ ಜೊತೆಗೆ ವೈಷ್ಣವ, ಶೈವ, ಮತ್ತು ಇತರೆ ಧರ್ಮಗಳ ಸಾಹಿತ್ಯಕ್ಕೆ ಅವರ ಕೊಡುಗೆ ನೀಡಿದ್ದಾರೆ. "ಭರಮಣ್ಣ ನಾಯಕನು ಚಿತ್ರದುರ್ಗದಲ್ಲಿ" ಆಳಿದ ಪಾಳೆಯಗಾರರಲ್ಲಿ ಪ್ರಭಾವಶಾಲಿಯಾದ ದೊರೆ; ಅವನು ಮಹಾಶೂರ. ತನ್ನ ಬಲದಿಂದ ಅನೇಕ ನೆರೆಹೊರೆಯ ಪಾಳೆಯಗಾರರನ್ನು ಸದೆಬಡಿದು ತನ್ನ ಸಂಸ್ಥಾನಕ್ಕೆ ಒದಗಿದ ಕುತ್ತನ್ನು ಬಗೆಹರಿಸಿದ ಸಮಕಾಲೀನ ನಾಯಕರುಗಳಲ್ಲಿಯೇ ಅಧಿಕ ಧೈರ್ಯಶಾಲಿ. ಗರ್ವದಿಂದ ಎದುರಿಸಿದವರನ್ನು ಸೋಲಿಸುತ್ತಗಿಬಂದ. ಶರಣಜನ ಬಂಧುವಾಗಿ ಕೃಪಾಸಿಂಧುವೆಂದು ಅನೇಕ ಕವಿಪುಂಗವರಿಗೆ, ಸಾಧು ಸಂತರಿಗೆ ಆಶ್ರಯದಾತನೆಂದು ಕವಿಗಳು ಅವನನ್ನು ಹೊಗಳಿದ್ದಾರೆ. ಆದರೆ ಅವನ ಕಾಲಕ್ಕೆ ಸಂಬಂಧಿಸಿದ ವಿಫುಲವಾದ ಸಾಹಿತ್ಯ ಸಂಪತ್ತು ನಮಗೆ ಇನ್ನು ಲಭ್ಯವಾಗಿಲ್ಲ. ಭರಮಣ್ಣ ನಾಯಕನ ಕಾಲಕ್ಕೆ ಸಂಬಂಧಿಸಿದ ಭರಮಣ್ಣ ನಾಯಕನ ಸಮರ ವಿಜಯ ಎನ್ನುವ ಕವ್ಯವು ದೊರಕಿದೆ. ಅದನ್ನು ಬರೆದ ಕವಿಯ ಹೆಸರಾಗಲಿ ಇತರೆ ವಿಷಯಗಳಾಗಲಿ ತಿಳಿದು ಬಂದಿಲ್ಲ. ಭರಮಣ್ಣ ನಾಯಕನ ಪೂರ್ಣ ಚರಿತ್ರೆಯನ್ನು ಇದರಲ್ಲಿ ವಿವರಿಸಲಾಗಿದೆ. ಆದ್ದರಿಂದ ಈ ನಾಯಕನ ಕಾಲದಲ್ಲಿಯೇ ಈ ಸಮರ ವಿಜಯವನ್ನು ಬರೆದಿರುವಂತೆ ತಿಳಿದುಬರುತ್ತದೆ."[೨] ಚಿತ್ರದುರ್ಗದ ಪಾಳೆಯಗಾರರಲ್ಲಿ ಹಿರಿಯ ಮದಕರಿ ನಾಯಕನು ಕೂಡ ಹೆಸರುವಾಸಿಯಾದ ನಾಯಕ. ಇವನು ಕವಿಗಳಿಗೆ ಆಶ್ರಯ ನೀಡಿದನು. ಇವನ ಕಾಲದಲ್ಲಿ ತಾರಾವಳಿ, ಕೋಲುಪದ, ದಂಡಕ, ಲಾವಣಿ ಮೊದಲಾದ ಕವಿತೆಗಳನ್ನು ರಚಿಸಿ ಅನೇಕ ಕವಿಗಳು ಇವನ ಕೀರ್ತಿಯನ್ನು ಹಾಡಿದ್ದಾರೆ. ಈ ನಾಯಕನ ಬಗ್ಗೆ ಕೆಲವು ಜನಪದ ಮತ್ತು ಶಿಷ್ಟ ಸಾಹಿತ್ಯ ಕೃತಿಗಳು ಸಿಗುತ್ತವೆ. ಅವುಗಳಲ್ಲಿ ಕವಿತೆಗಳಿಂದ ಕೂಡಿರುವ ಹಿರಿಯ ಮದಕರಿ ನಾಯಕನ ತಾರಾವಳಿಯು ಒಂದಾಗಿದೆ.

ಉದಾಹರಣೆಗೆ ಮದಕರಿ ರಾಜೇಂದ್ರನ ತಾರಾವಳಿ

೧

"ಶ್ರೀ ವಿಜಯ ವೀರ ಮದಕರಿ ರಾಜೇಂದ್ರ
ಕಾಮಗೇತಿಯ ಅರಸೆ ನಿಜಗುಣ ಸಾಂದ್ರ॥
ಝುಗಝುಗಿಪ ರತ್ನ ಪೀಠದ ಸದರಿನಲ್ಲಿ

[illegible]

ಮೃಗಧರನ ಪ್ರತಿಬಿಂಬ ಇಂಬು ರೂಪಿನಲ್ಲಿ
ಅಘಹರನ ಮುರಿಗೆ ಶಾಂತನ ಕರುಣದಲ್ಲಿ
ನಗೆ ಮುಖದ ಜಾಣ ಕುಳಿತಿಹ ಸದರಿನಲ್ಲಿ॥

೨

ಮಿಸುನಿ ಕಾಂತಿಯಲ್ಲಿ ಎಸೆವ ಕಂದರವು
ಹೊಸ ಮುತ್ತು ಪವಳ ರಂಜಿಸುವ ದಶನಗಳು
ಎಸೆವ ಕಿರು ಬೆರಳಲಿಟ್ಟ ಮುದ್ರೆಯುಂಗುರವು
ಹಸನಾದ ಬಿಡಿ ಮುತ್ತಿನೊಂಟಿ ಸಂಭ್ರಮವು॥

೩

ಅಚ್ಚ ಬಿಳಿಯ ಪಟ್ಟಿ ಹಚ್ಚಡವ ಹೊಂದಿದ್ದು
ಗಚ್ಚು ಚಿನ್ನದ ಕಂಬಿಪಾಗು ಸುತ್ತಿದ್ದು
ಮುತ್ತಿನ ತಾಣಯದ ಸರ ಇಳಿಯ ಬಿಟ್ಟಿದ್ದು
ಗತ್ತಿನಾ ಸದರಿನಲ್ಲಿ ಸುಖದಿ ಕುಳಿತಿದ್ದು॥

೪

ಚತುರಂಗ ಮುರ್ಬಲವು ಬಂದು ಕೈ ಮುಗಿಯೆ
ಅತಿಶಯದಿ ಕರೆದು ಕಪ್ಪುರ ವೀಳ್ಯೆ ಈಯೆ
ಕ್ಷಿತಿಗೊಡೆಯ ಬುದ್ಧಿಗೊಡು ಎನ್ನುತಾ ಬೆಸಸೆ
ಪ್ರೀತಿಯಲಿ ಸುಭಟರು ಬಂದು ಕೈ ಮುಗಿಯೆ॥

೫

ಅರಮನೆಯೊಳಗಿದ್ದ ದೊರೆ ಮಕ್ಕಳೊಳಗೆ
ಹಿರಿಯ ಮಗ ಕಸ್ತೂರಿ ರಂಗ ಭೂವರಗೆ
ಸ್ಥಿರ ಪಟ್ಟಗಟ್ಟಿ ಎಚ್ಚರವು ನಿಮ್ಮಳಗೆ
ಇರಲೆಂದು ಬುದ್ಧಿಯನ್ನು ಹೇಳಿ ಸರ್ವರಿಗೆ॥

೬

ಪೆನ್ನಾಳದಿಂದ ಫತೇಹಜಂಗ ಬಂದ
ಮಾನ್ನಾರಾ ದಂಡು ಭೇಟಿಯ ಹೊರಟ ಚಂದ
ಚಿನ್ನ ಗಾಳೆಯನಾ ಹೊಯಿಸಿ ಮುದದಿಂದ
ತನ್ನ ಮಾರ್ಬಲ ಕೂಡಿ ನಡೆವುದೊಂದಂದ॥

೭

ಧರೆಯೊಳಗೆ ಹೆಸರಾದ ಹಿರಿಯೊರಬಳಿಗೆ
ದೊರೆರುಯಸಿದೆಲ್ಲಣನಿಳಿದ ತೊರೆಗೆ
ಕರೆಸಿದನು ಪಾಳೆಗಾರರು ತನ್ನ ಬಳಿಗೆ
ಹರುಷವಾದನು ನೋಡಿ ತನ್ನ ಮನದೊಳಗೆ॥

೮

ಹದಿನಾರು ಸಾವಿರ ಕುದುರೆ ರಾವುತರು
ಮದಗಜಗಳೇಳ್ನೂರು ವೀರ ರಾವುತರು
ವದಗಿದ ದಳ ಲಕ್ಷ ಮಂದಿ ನಾಯಕರು
ಕದನ ವಿಕ್ರಮ ವಿಜಯನೆಂದು ಹೊಗಳಿದರು॥

೯

ಅರಿನೃಪರ ಗಂಡ ಆನೆಯನೇರಿ ನೋಡಿ
ಧರೆ ನಡುಗುವಂತೆ ಭೇರಿಯ ಸನ್ನೆ ಮಾಡಿ
ತರತರದ ಮಂದಿ ಕುದುರೆಯ ಫವುಜು ಮಾಡಿ
ಶರತಿನಲ್ಲಿ ಚಿನ್ನಗಾಳಿಗಳು ಭೋರು॥

ಹೀಗೆಯೇ ಈ ತಾರಾವಳಿಯು ಮುಂದುವರೆಯುತ್ತದೆ."[೩]

ಕಾಮಗೇತಿ ವಂಶಾಬ್ಧಿ ಚಂದ್ರ ಸದ್ಗುಣಗಳ ಖಣಿ ವೀರಮದಕರಿ ರಾಜೇಂದ್ರನಿಗೆ ಜಯವಾಗಲಿ, ಕೈಲಾಸ ಶಿಖರದಲ್ಲಿ ಈಶ್ವರನು ಗಣಸಮೂಹಗಳ ಮಧ್ಯದಲ್ಲಿ ಮಂಡಿಸಿರುವಂತೆ ಚಿನ್ಮೂಲಾದ್ರಿಯಲ್ಲಿ ಬೆಳಗುವ ರತ್ನ ಪೀಠದ ಮೇಲೆ ವೀರಮದಕರಿ ರಾಜೇಂದ್ರನು ಮಾಡಳೀಕರು, ಸರದಾರರು, ಪರಿವಾರದವರು ಮುಂತಾದವರು ಸಭೆಯ ಮಧ್ಯದಲ್ಲಿ ಮಂದಹಾಸದಿಂದ ಕುಳಿತಿರುವನು. ಶ್ರೀಗುರು ಮುರಿಗೆಯ ಶಾಕನ ಕರುಣಾ ಕಟಾಕ್ಷವು ಈ ರಾಜನ ಮೇಲೆ ಬೀರಿದೆ. ಬಂಗಾರದ ಬಣ್ಣದ ಕಂಧರವು ಮುತ್ತಿನಂತೆ ಹೊಳೆಯುವ ರದಿನ ಪಂಗ್ತಿಗಳು ಕಿರು ಬೆರಳಿನಲ್ಲಿ ಮುದ್ರೆಯುಂಗುರವನ್ನಿಟ್ಟಿದ್ದಾನೆ. ಮುತ್ತಿನ ಒಂಟಿ ಮುಂತಾದ ಕರ್ಣಾಭರಣಗಳನ್ನು ಧರಿಸಿದ್ದಾನೆ. ಧವಳಾಂಗ ಧರಿಸಿ ಝರಿಯ ಪಾಗು ಸುತ್ತಿಕೊಂಡು ಮುತ್ತಿನ ತಾರಾಯವಿಟ್ಟುಕೊಂಡು ಸುಖಾಸೀನನಾಗಿರುವನು. ಚತುರಂಗ ಮಾರ್ಬಲವು ಬಂದು ರಾಜನನ್ನು ವಂದಿಸಿತು. ಸರದಾರರು ಆಶ್ರಿತರಾಜರೂ ಮುಜುರೆ ಮಾಡಿ ಪಟ್ಟದ ಕಾಣಿಕೆಯನೊಪ್ಪಿಸಿದರು. ಎಲ್ಲರಿಗೂ ಗಂಧ ಪುಷ್ಪ ವೀಳೆಯವು ಹಂಚಲ್ಪಟ್ಟಿತು. ಹೀಗೆ ವಿವರಣೆಯು ಮುಂದುವರೆದುಕೊಂಡು ಮದಕರಿ ನಾಯಕನನ್ನು ಕೊಂಡಾಡಿರುವುದನ್ನು ಈ ತಾರಾವಳಿಯ ಮೂಲಕ ನಾವು ಗಮನಿಸಬಹುದು.

"ಚಿತ್ರದುರ್ಗವನ್ನು ಆಳಿದ ಪಾಳೆಯಗಾರರಲ್ಲಿ ಕೊನೆಯವನಾದ ವೀರಮದಕರಿ ನಾಯಕನ ಪ್ರೋತ್ಸಾಹದಿಂದ ಚಂದ್ರ ಭೀಮ ಕವಿಯು ಮದಕರಿ ರಾಜೇಂದ್ರ ದಂಡಕ ಎಂಬ ಗ್ರಂಥವನ್ನು ಬರೆದಿದ್ದಾನೆ. ಈತನು ತನ್ನ ಹೆಸರನ್ನು ಗ್ರಂಥದ ಕೊನೆಯಲ್ಲಿ ಚಂದ್ರ ಭೀಮಖ್ಯ ವಿದ್ವತ್ನವೀಂದ್ರ ಎಂದು ಹೇಳಿಕೊಂಡಿರುವನು. ಇದರ ವಿನಃ ಕವಿಯ ಕಾಲ, ದೇಶ, ಕುಲ–ಗೋತ್ರಗಳ ವಿಷಯದ ಬಗೆ ಈ ಗ್ರಂಥದಲ್ಲಿ ಏನೂ ದೊರೆಯುವುದಿಲ್ಲ. ಈ ಕೃತಿಯು ಈಶ್ವರನನ್ನು ಸ್ತುತಿಸುವುದರ ಮೂಲಕ ಪ್ರಾರಂಭಗೊಂಡ ಚಿತ್ರದುರ್ಗ ಬೆಟ್ಟದ ಮೇಲಿನ ದೇವಾಲಯಗಳು, ಮದಕರಿನಾಯಕನ ಸೈನ್ಯ ಕಾರ್ಯಚರಣೆಗಳು, ರಾಜ ದಿನನಿತ್ಯದ ಚಟುವಟಿಕೆಗಳು–ವೇಷಭೂಷಣಗಳನ್ನು ಇದರಲ್ಲಿ ಚಿತ್ರಿಸಲಾಗಿದೆ. ಕವಿಯು ತಾನು ನೋಡಿದ ವಿಷಯಗಳನ್ನೇ ವರ್ಣಿಸಿ ಬರೆದ ದಂಡಕವಾದುದರಿಂದ ಆ ಕಾಲದ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ವಿಷಯಗಳು ಇದರಲ್ಲಿ ಅಡಕವಾಗಿವೆ. ಒಟ್ಟಿನಲ್ಲಿ ಮದಕರಿ ನಾಯಕನ ದಿನಚರಿಯು ಇದರಿಂದ ವ್ಯಕ್ತವಾಗುತ್ತದೆ. ಈ ವೀರ ಮದಕರಿಯು ಸ್ವತಃ ಯೋಧನಾಗಿಯೂ ವೀರರಿಗೂ, ಕವಿಗಳಿಗೂ ಆಶ್ರಯದಾತನಾಗಿದ್ದನು."[೪] "ಏಕೆಂದರೆ ಹಿರಿಯೂರು ತಾಲ್ಲೂಕು ಆನೆಸಿದ್ರಿ ಗ್ರಾಮದ ಒಂದು ಶಿಲಾ ಶಾಸನದಲ್ಲಿ ಕೋನಪ್ಪನ ಹೆಸರು ಕಂಡು ಬರುತ್ತದೆ."[೫] ಚಿತ್ರದುರ್ಗದ ನಾಯಕರು ವೀರಶೈವ ಸಾಹಿತ್ಯವನ್ನು ಬಹುವಾಗಿ ಪ್ರೋತ್ಸಾಹಿಸಿದರು. "ಕೊನೆಯ ವೀರಮದಕರಿ ರಾಜೇಂದ್ರನ ಕಾಲದಲ್ಲಂತೂ ವೀರಶೈವ ಸಾಹಿತ್ಯವು ಉತ್ನತವಾದ ಸ್ಥಿತಿಗೇರಿತು. ಅವನ ಕಾಲದಲ್ಲಿ ಚನ್ನಬಸವಣ್ಣನು ಒಬ್ಬ ಕವಿಯಾಗಿದ್ದನು. ಅವನು ವೀರಮದಕರಿ ನಾಯಕನ ಹರಪನಹಳ್ಳಿಯ ಪಾಳೆಗಾರರನ್ನು, ರಾಯದುರ್ಗ ಪಾಳೆಗಾರನನ್ನು ಮತ್ತು ಸವಣೂರಿನ ನವಾಬರನ್ನು ಸೋಲಿಸಿದ ವಿಷಯವಾಗಿ ಲಾವಣಿಯನ್ನು ರಚಿಸಿರುವನು. ಹಾಗೆಯೇ ವೀರ ಮದಕರಿ ನಾಯಕನು ಹೈದರ್ ಆಲಿಗೆ ಸೆರೆಯಾಳಾದ ವಿಷಯಕ್ಕೆ ಸಂಬಂಧಿಸಿದ ಏಳಪ್ಪ ಮೆದಕೇರಣ್ಣ 'ಎಪ್ಪೋತು ಮಲಗಿದ್ದಿ' ಎಂಬ ಕೋಲುಪದವನ್ನು ಕೂಡ ರಚಿಸಿರುವನು."[೬] ಚಿತ್ರದುರ್ಗದಲ್ಲಿ ಪಾಳೆಯಗಾರರ ಕಾಲದಲ್ಲಿ ವೀರಶೈವ ಮಠ ಸ್ಥಾಪನೆಯಾದ ಮೇಲೆ ಮಠಾಧಿಪತಿಗಳು ಮತ್ತು ಈ ಮಠಾಧಿಪತಿಗಳ ಆಶ್ರಯದಲ್ಲಿದ್ದ ವೀರಶೈವ ಕವಿಗಳು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. "ಚಿತ್ರದುರ್ಗದಲ್ಲಿ ಬೃಹನ್‌ಮಠವನ್ನು ಸ್ಥಾಪಿಸಿದ ೨ನೆಯ ಮುರುಗೇಯ ಸ್ವಾಮಿಗಳು ಹಾಲಾಸ್ಯಪುರಾಣ, ದೇವಿಸ್ತೋತ್ರ ಮತ್ತು ಶಿವಲಿಂಗಾನಂದ ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಹಾಲಾಸ್ಯ ಪುರಾಣವು ಕ್ರಿ.ಶ. ೧೭೨೦ರಲ್ಲಿ ರಚಿತವಾಗಿರಬಹುದೆಂದು ಊಹಿಸಲಾಗಿದೆ. ಇದು ಪದ್ಯ–ಗದ್ಯ ಮಿಶ್ರವಾದ ಚಂಪೂ ಗ್ರಂಥವಾಗಿದೆ. ಇದರಲ್ಲಿ ಆ ಕಾಲದ ೬೬ ಆಶ್ವಾಸ ೩೬೭೨ ಪದ್ಯಗಳಿವೆ."[೭] ದೇವಿಸ್ತೋತ್ರದಲ್ಲಿ ೬೫ ಪದ್ಯಗಳಿವೆ. ಶಿವಲಿಂಗಾನಂದದಲ್ಲಿ ೨೫ ಪದ್ಯಗಳಿವೆ. "ನಂಜು ಎನ್ನುವ ಇನ್ನೊಬ್ಬ ವೀರಶೈವ ಕವಿಯು ಕಪೋತವಾಕ್ಯ ಎಂಬ ಆಖ್ಯಾನವನ್ನು ಸಾಂಗತ್ಯ ರೂಪದಲ್ಲಿ ರಚಿಸಿರುವನು. ಈ ಸಾಂಗತ್ಯದಲ್ಲಿ ವ್ಯಕ್ತವಾಗಿರುವ ಕೆಲವು ವಿಷಯಗಳಿಂದ ಕವಿಯು ಚಿತ್ರದುರ್ಗದ ನಾಯಕರ ಆಶ್ರಯ ಪಡೆದಿದ್ದನೆಂದು ತಿಳಿಯುತ್ತದೆ."[೮]

ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳ ಮಠದ ಗುರುಗಳಾಗಿದ್ದ ಮಹಾಲಿಂಗ ಸ್ವಾಮಿಗಳ ಚರಿತ್ರೆಯನ್ನು ಪುರಾಣ ರೂಪದಲ್ಲಿ ಮಹಾದೇವ ಕವಿಯಿಂದ ರಚಿಸಲ್ಪಟ್ಟಿದೆ. ಇದು ಷಟ್ಪದಿಯಲ್ಲಿದೆ. ಈ ಪುರಾಣದಲ್ಲಿ ೩೨ ಸಂಧಿಗಳು ಮತ್ತು ೨೦೬೪ ಪದ್ಯಗಳಿವೆ. ಹಾಗೆಯೇ "ಲಾಳಸಿಂಗಿ ಸೋಮಣ್ಣನು ರುಕ್ಮಾಂಗಧ ಚರಿತ್ರೆ, ಸ್ಮರವಿಜಯ ಲಿಖಿತ ಲೀಲಾ, ಲಕ್ಷ್ಮೀಸ್ವಯಂವರ ಮುಂತಾದ ಯಕ್ಷಗಾನ, ಬಯಲು ನಾಟಕಗಳನ್ನು ರಚಿಸಿರುವನು. ಹಗಲು ಕಗ್ಗೊಲೆಯ ಮಾನ್ಯ ಎಂಬ ಈ ಲೇಖನ ಕೃತಿ ಪ್ರಸಿದ್ಧವಾದದ್ದು"[೯] ಹೀಗೆ ವಿದ್ಯಾಪಕ್ಷಪಾತಿಗಳಾಗಿದ್ದ ನಾಯಕರು ಆಡಳಿತದಲ್ಲಿ ಪಾರಂಪರ್ಯವಾಗಿ ನಡೆದುಕೊಂಡ ಬಂದಿದ್ದ ಮೌಲ್ಯಗಳನ್ನು ಎತ್ತಿ ಹಿಡಿಯುವುದರ ಜೊತೆಗೆ ಮುಕ್ತ ಮನಸ್ಸಿನಿಂದ ಎಲ್ಲಾ ಧರ್ಮ, ಪಂಥಗಳ ಕವಿಗಳಿಗೂ ಆಶ್ರಯದಾತರಾಗಿದ್ದು, ಸಾಹಿತ್ಯ, ಕಲೆ, ಸಂಸ್ಕೃತಿಗಳ ಸರ್ವಾಂಗ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಹಸ್ತಪ್ರತಿಗಳಲ್ಲಿ ಕೇವಲ ಧಾರ್ಮಿಕ ಇತಿಹಾಸ ಮತ್ತು ವೈಚಾರಿಕ ವಿಷಯಗಳು ಮಾತ್ರ ದಾಖಲಿಸದೆ ಆ ಕಾಲದ ಜನಪದ ಜೀವನ ಆಶಯಗಳನ್ನು ಒಳಗೊಂಡ ಸಾಹಿತ್ಯಕ್ಕೂ ಮನ್ನಣೆ ನೀಡಿದ್ದಾರೆ. ಉದಾಹರಣೆಗೆ ತತ್ವಪದ, ಭಜನೆ ಹಾಡು, ದಾಸರ ಪದ, ಅಮ್ಮನವರ ಲಾಲಿಪದ, ಅಮ್ಮನವರ ಶೋಬಾನ ಪದ, ಜೋಗುಳ ಹಾಡುಗಳು, ಮಂಗಳಾರತಿ, ಹಾಡುಗಳಂಥ ಗೇಯ ಗೀತೆಗಳಲ್ಲದೇ ಕೃಷ್ಣಸಂಧಾನ, ಕರಿಭಂಟನ ಕಾಳಗ, ಗಂಗೆ–ಗೌರಿ ಸಂವಾದ, ಚಿತ್ರಶೇಖರ, ಕೃಷ್ಣಪಾರಿಜಾತ, ವೀರಭದ್ರ ಪಾರಿಜಾತ, ಚಂದ್ರಹಾಸನ ಕಥೆ ಡಂಭಾ ಚಾರಿಕಥೆಗಳಂಥ ಪ್ರಸಂಗಗಳು, ದವಳದ ಹಾಡು, ಉದಯರಾಗ, ಬಿರುದಾವಳಿಗಳಂಥ ತಾತ್ವಿಕ ಸಾಹಿತ್ಯವು ಹಸ್ತಪ್ರತಿಗಳಲ್ಲಿ ರಚನೆಗೊಂಡಿದೆ. ವಿಶೇಷವಾಗಿ ಜನರ ದಿನ ನಿತ್ಯ ಬದುಕಿಗೆ ಸಿದ್ಧೌಷಧಿಯಾದ ನಾಟಿಶಾಸ್ತ್ರಕ್ಕೆ ಸಂಬಂಧಿಸಿದ ಹಸ್ತಪ್ರತಿಗಳಂತೂ ಹೇರಳವಾಗಿ ದೊರೆಯುತ್ತವೆ. ಉದಾಹರಣೆ ವೈದ್ಯಶಾಸ್ತ್ರದಲ್ಲಿ ಅಶ್ವವೈದ್ಯ, ಗಜವೈದ್ಯ, ನರವೈದ್ಯಗಳಲ್ಲದೇ ಇನ್ನೂ ಅನೇಕ ಗುಪ್ತರೋಗಗಳಿಗೆ ಪರಿಹಾರವನ್ನು ನೀಡುವ ಶಾಸ್ತ್ರ ಸಾಹಿತ್ಯಗಳು ಹೇರಳವಾಗಿ ರಚನೆಗೊಂಡಿದೆ. ಹಾಗೆಯೇ ಮನೋವೈಜ್ಞಾನಿಕವಾದ ಸಾಮುದ್ರಿಕ, ಜ್ಯೋತಿಷ್ಯ, ಗಾರ್ದಬಶಾಸ್ತ್ರ, ಹಲ್ಲಿಶಕುನ, ಗೂಗಿ ಶಕುನಗಳು ಇಲ್ಲಿ ರಚನೆಯಾಗಿವೆ. ಯಂತ್ರ–ಮಂತ್ರ–ಪ್ರಶ್ನೆ ಶಾಸ್ತ್ರಗಳು ಒಂದು ಕಾಲಕ್ಕೆ ನಮ್ಮ ಜನಮನವನ್ನು ಆಳಿದ ಮಹತ್ವದ ಶಾಸ್ತ್ರ ಕೃತಿಗಳು ಹಸ್ತಪ್ರತಿಗಳ ಮೂಲಕ ಉಳಿದು ಬಂದಿವೆ.

ವೈದ್ಯಶಾಸ್ತ್ರ :

ವೈದ್ಯ ಪದ್ಧತಿಯಲ್ಲಿ ಪ್ರಮುಖವಾಗಿ ಆಯುರ್ವೇದ, ಯುನಾನಿ, ಹೋಮಿಯೋಪತಿ ಮತ್ತು ಅಲೋಪತಿ ಎಂಬ ನಾಲ್ಕು ಪ್ರಕಾರದ ಚಿಕಿತ್ಸಾ ವಿಧಾನಗಳು ಪ್ರಸಿದ್ಧವಾಗಿದೆ. ಇವುಗಳಲ್ಲಿ ಅತ್ಯಂತ ಪ್ರಾಚೀನ ವೈದ್ಯ ಪದ್ಧತಿಯೆಂದರೆ ಆಯುರ್ವೇದ. ಇಂದಿಗೂ ಕೂಡ ತನ್ನ ಅನನ್ಯತೆಯನ್ನು ಆಯುರ್ವೇದ ಉಳಿಸಿಕೊಂಡು ಬಂದಿರುವುದನ್ನು ನೋಡಬಹುದು. ಸಂಸ್ಕೃತ ಶ್ಲೋಕದಲ್ಲಿ ಸಮಸ್ತ ಆಯುರ್ವೇದವನ್ನು ತಿಳಿದವನು ಮತ್ತು ಚಿಕಿತ್ಸೆಯಲ್ಲಿ ನಿಪುಣ ಬುದ್ಧಿಯುಳ್ಳ ವೈದ್ಯನು ದೊಡ್ಡ ಮತ್ತು ಅಲ್ಪವಾಧಿಯಿಂದ ನರಳುತ್ತಿರುವ ರೋಗಿಯನ್ನು ನಿರೋಗಿಯಾಗಿ ಮಾಡುತ್ತಾನೆ

ಎಂದು ಹೇಳಲ್ಪಟ್ಟಿದೆ. ಇಂದಿನ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಯುಗದಲ್ಲೂ ಜನಸಾಮಾನ್ಯರು ಆಯುರ್ವೇದ ವೈದ್ಯಕ್ಕೆ ಹೆಚ್ಚು ಗಮನ ನೀಡುತ್ತಿರುವುದನ್ನು ನಾವು ನೋಡಬಹುದು. ಅಲ್ಲದೇ ಈಗ ಲಭ್ಯವಾಗುವ ವೈದ್ಯ ಹಸ್ತಪ್ರತಿಗಳಲ್ಲಿ ಆಯುರ್ವೇದಕ್ಕೆ ಸಂಬಂಧಿಸಿದ ಹಸ್ತಪ್ರತಿಗಳೇ ಅಧಿಕವಾಗಿವೆ.

ಕನ್ನಡದಲ್ಲಿ ಆಯುರ್ವೇದ ವೈದ್ಯ ವಿಚಾರಗಳನ್ನು ಮೊದಲು ಸಮಗ್ರವಾಗಿ ನಿರೂಪಿಸಿದವರು ಜಗದ್ಧಳ ಸೋಮನಾಥ. ಈತ ತನ್ನ ಕರ್ಣಾಟಕ ಕಲ್ಯಾಣಕಾರಕ ಎಂಬ ಕೃತಿಯಲ್ಲಿ ಘೋಡಶಜ್ವರ, ಅತಿಸಾರ, ಚಿಕಿತ್ಸಾ ನಿರೂಪಣ ರಕ್ತಪಿತ್ತನಿದಾನ, ಕ್ಷಯನಿದಾನ, ವಿದರರೊಲ್ಲ ನಿದಾನ, ಮತ್ತು ಗುಲ್ಮಿನಿದಾನ ಚಿಕಿತ್ಸೆ ಮುಂತಾದವುಗಳ ಬಗ್ಗೆ ವಿವರಗಳಿವೆ. ಇದೇ ಹಾದಿಯಲ್ಲಿ ಮುಂದೆ ದೇವೇಂದ್ರಮುನಿ, ಉಂಗರಾಜ, ಶ್ರೀಧರದೇವ, ಸಾಳ್ವ ಚಿಕ್ಕುಪಾಧ್ಯಾಯ, ನಂಜಿನಾಥ, ಭೂಪಾಲ, ವೀರರಾಜ ಮುಂತಾದ ಕವಿಗಳು ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಹಸ್ತಪ್ರತಿಗಳಲ್ಲಿ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ನೋಡೋಣ.

* ಪುಷ್ಟಿಗೆ ಸಮಸ್ತ ವಿಧವಾದ ಕಾಯಿಲೆಗೆ "ವಜ್ರ ನೀಲಿ ಗಿಡದ ಬೇರು ಮೂರು ತೊಲ ಗುಬ್ಬಿ ಕಾಲು ಸೊಪ್ಪು ಮೂರುತೊಲ, ಚಿತ್ರಮೂಲದ ಬೇರು ಮೂರುತೊಲ ದಾಸ್ಯ ಮುತ್ತಿಗನ ಬೇರು ಮೂರುತೊಲ, ಪನ್ನೆರುಗಡ್ಡ ಮೂರು ತೊಲ, ಸಣ್ಣಜಲಿಸೊಪ್ಪು ಮೂರುತೊಲ ಇದನ್ನು ಚೂರ್ಣ ಮಾಡಿ ಇದಕ್ಕೆ ಆಕುವ ದಿನಸು ಒಣಕೊಬರಿ ಒಂದುಸೇರು ಬಾದಾಮಿ, ಒಂದು ಸೇರು, ಉತ್ತತ್ತಿ ಒಂದು ಸೇರು ಬೀಜ ಬಂದು ಮೂರುತೊಲ ಲವಂಗ, ಮೂರುತೊಲ ಜಾಕಾಯಿ, ಮೂರುತೊಲ ಜೀರಿಗೆ ಮೂರುತೊಲ ಯಲಕ್ಕಿ ಮೂರುತೊಲ ಇಪ್ಲಿ, ಮೂರುತೊಲ ಮೊದಿ ಮೂರುತೊಲ ಜೇಷ್ಠ ಮದ್ದು ಮೂರುತೊಲ ಅತಿಮದುರ, ಮೂರುತೊಲ ಕಲ್ಮಾರು ಮೂರುತೊಲ, ಅಕಂಳಕರೆ ಮೂರುತೊಲ ತುಪ್ಪ ಎರಡು ಸೇರು, ಜೇನುತುಪ್ಪ ಒಂದು ಸೇರು, ಆ ಚೂರ್ಣದಲ್ಲಿ ಕಲಿಸಿ ತಿನ್ನಬೇಕು ಪತ್ಯ-ಇಚ್ಛ ಹಾಸಿಗೆ ಬಿಡಬೇಕು. ಹನ್ನೊಂದು ದಿನ ಇದು ಸಿದ್ಧಾಂತವಾದದ್ದು.[೧೦]

ಈ ಮೇಲಿನ ಎಲ್ಲಾ ನಾಟಿಗಿಡಗಳ ಮದ್ದುಗಳನ್ನು ಮೇಲೆ ಹೇಳಿದ ರೀತಿಯಲ್ಲಿ ಕಲಿಸಿ ಚೂರ್ಣ ಮಾಡಿಕೊಟ್ಟರೆ ಈ ಮೇಲಿನ ಕಾಯಿಲೆಯು ವಾಸಿಯಾಗುತ್ತದೆ.

* **ಕೈಕಾಲು ಹಿಡಿದವರಿಗೆ** : ದೇವದಾರಿ, ಇಸುಮುದಾರಿ, ಗಾಂಧಾರಿ ಇವು ಮೂರನ್ನು ತಂದು ಐದು ಮೆಣಸು ಐದು ಬೆಳೂಳ್ಳಿಯನ್ನು ಹಾಕಿ ಅರೆದು ಒಂಭತ್ತು ದಿವಸ ಎರಡು ಹೊತ್ತು ಕೊಡಬೇಕು. ಇದಕ್ಕೆ ಪತ್ಯ-ಶದ್ಲಿವರ್ಜಿತ
* **ಸಕಲ ಜ್ವರಕ್ಕೆ ಕಷಾಯ** : ನೆಲಗುಳ್ಳದಗಿಡ, ದೊಡ್ಡ ಗುಳ್ಳದಗಿಡ, ತುಳಸಿಗಿಡ ಈ ಮೂರನ್ನು ತಂದು ಮೆಣಸು ಶುಂಠಿ ಹಾಕಿ ಪೊಂಗು ಮಾಡಿಕೊಡುವುದು. ಪತ್ಯ-ಅನ್ನಸಾರು.[೧೧]

* **ಕಾಕಿ ಸಮ್ಮಿಗೆ :** ಸೀಗಿಯಗಿಡ, ಎರಡು ಮೆಣಸು, ಎರಡು ಬೆಳ್ಳುಳ್ಳಿ ಹಾಕಿ ಅರೆದು ಕರೆಮೇಕೆಯ ಹಾಲಿನಲ್ಲಿ ಅರೆದು ಕುಡಿಸುವುದು; ಪತ್ಯ ರಾಗಿಮುದ್ದೆ, ಮೆಣಸಿನಕಾಯಿ ಇಡುವುದು ಐದು ದಿನ.

* **ಮೂಗಿನಲ್ಲಿ ರಕ್ತ ಬೀಳುವುದಕ್ಕೆ :** ಕರಿಕೆಯರಸ ದಾಳಿಂಬರದ ಹೂವಿನ ರಸ, ಈ ರಸ ಸಮಗೊಂಡು ಮೂಗಿನಲ್ಲಿ ಹಿಂಡಬೇಕು.[೧೨]

* **ಕಣ್ಣು ಸೂತ್ತಿಗೆ :** ಹಂದಿ ಮುಸಣಿ ಸೊಪ್ಪು ಬಿಳೆಉಮ್ಮತ್ತು ಬೆಕ್ಕಿನ ಕೊರಡಿನ ಸೊಪ್ಪು, ಈ ಮೂರುಸುಟ್ಟು ಬೂದಿ ಮಾಡಿ ಆಕಳ ಬೆಣ್ಣೆಯಲ್ಲಿ ತಾಬಾಣೆಯಲ್ಲಿ ಹಾಕಿ ತಾಮ್ರದ ತಂಬಿಗೆಯಿಂದ ಅರೆದು ಮೂಲಾಮ ಮಾಡಿ ಹಚ್ಚಬೇಕು.[೧೩]

* **ಕಾಲು ಮಡಿ ಅಥವಾ ಮೂತ್ರ ಕಟ್ಟಿದರೆ :** ಯಡ ತಿರಿ ಬೇರು ಅರೆದು ಕುಡಿಸಲು ಮೂತ್ರ ಬರುವುದು.[೧೪]

* **ಮೂಲವ್ಯಾದಿಗೆ :** ಚೂರ್ಣದಗೆಡ್ಡೆ ನೆಲ ತಾಳೆಗೆಡ್ಡೆ ಗೊಡಚಕ ಇವು ಮೂರನ್ನು ಚೂರ್ಣ ಮಾಡಿ ಮಜ್ಜಿಗೆಯಲ್ಲಿ ಕೊಡಬೇಕು. ಪತ್ಯ ಮಜ್ಜಿಗೆ ಅನ್ನ ಐದು ದಿನ ಕೊಡಬೇಕು.[೧೫]

* **ಬಿಳಿಕರಿಗೆ :** ಕಿರಸಾಲಿಸೊಪ್ಪು ತಂದು ಎಳ್ಳು, ಮೆಣಸು, ಎಳ್ಳು ಬೆಳ್ಳುಳ್ಳಿ, ಬೇಳೆ, ಹಾಕಿ ಅರೆದು ಹದಿನೇಳು ಗುಳಿಗೆ ಮಾಡಿ ಏಳು ದಿವಸ ಮೇಕೆ ಹಾಲಿನಲ್ಲಿ ಕಾಸಿ ಸ್ವಲ್ಪ ಸಕ್ಕರೆ ಸೇರಿಸಿ ಕೊಡಬೇಕು.[೧೬] ಪತ್ಯ-ಶದ್ಲಿವರ್ಜಿತ ಬಿಡಬೇಕು ಎಂಟು ದಿವಸ.

* **ಬಾಣಂತಿರೋಗಕ್ಕೆ :** ಇಸುಮುದಾರಿ ಗಾಮೂಂದಾರಿ ಉಲ್ಲೀಸಲು ಕತ್ತೆಗಿರಬಿನ ಸೊಪ್ಪು ಕೊಂಡ ಗುಂಬಳಎಲೆ ಶಂಕುಬಾಸ್ಮಡುಪ್ಪಿ ಕೊಂಬು, ಗಂದಕೇರು ಅದರಲ್ಲಿ ಆಕಬೇಕು. ನಿಂಬೆಹಣ್ಣಿನ ರಸಲದಲ್ಲಿ ಕುಡಿಸಬೇಕು. ಪತ್ಯ-ಅಚ್ಚರಾಗಿ ಮುದ್ದೆ ಮೆಣಸಿನಕಾಯಿ ಉಪ್ಪನ್ನು ಅರಿಯಬೇಕು. ತೊಗರಿ ಬೇಳೆಯನ್ನು ತಿನ್ನಬೇಕು.[೧೭] ಶಿಷ್ಟ ಸಾಹಿತ್ಯದ ಒಂದು ಭಾಗ ಜನಪದ ಸಾಹಿತ್ಯ ಈ ಸಾಹಿತ್ಯದಲ್ಲಿ ವೈದ್ಯಶಾಸ್ತ್ರವು ಕೂಡ ಒಂದು. ಇದು ಹಿಂದಿನ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೂ ಕೂಡ ಮುಂದುವರೆದುಕೊಂಡು ಬರುತ್ತಿದೆ.

* **ಮಾಟ ಮಂತ್ರದ ಹಸ್ತಪ್ರತಿಗಳು :** ಮಾಟ-ಮಂತ್ರ-ಯಂತ್ರ ಸಾಹಿತ್ಯವನ್ನು ನಿಗೂಢ ಸಾಹಿತ್ಯವೆಂದು ಕರೆಯುವರು. ನಿಗೂಢ ಸಂಬಂಧಿ ಸಂಸ್ಥೆಗಳು ಪುರಾತನ ಕಾಲದಿಂದಲೂ ನಮ್ಮೊಂದಿಗೆ ಬಂದಿವೆ. ಪಾಶುಪತದಲ್ಲಿ ಗುಪ್ತ ಪೂಜೆ, ನರಬಲಿ ಕೊಡುತ್ತಿದ್ದರು. ಇವಕ್ಕೆ ಸಾಮೂಹಿಕ ಬೆಂಬಲವನ್ನು ನೀಡುತ್ತಿದ್ದರು. ಇವು ಸಾಮಾಜಿಕ ಆಚರಣೆಗಳಲ್ಲಿ ನೆಲೆ ನಿಂತಿರುವುದನ್ನು ಕಾಣಬಹುದು. ನಿಧಿನಿಕ್ಷೇಪ, ವೈರಿ ನಾಶ, ವಶೀಕರಣ, ಸಂತಾನಫಲ ಮದ್ದು ಇವುಗಳನ್ನು ಗುಪ್ತ ವೈದ್ಯಗಳೆಂದು ಗುರುತಿಸಲಾಗಿದೆ. ನರಬಲಿಯಂತಹ ಮಾಟಗಳಿದ್ದಂತೆ ಸಂತಾನಕ್ಕಾಗಿ ಮಾಡುವ ಪೂಜೆ ಹರಕೆಗಳು ಇದ್ದವು. ಇಂಥ ಗುಪ್ತ ಆಚರಣೆಗಳ ಬಗ್ಗೆ ಹಾಗೂ ಅವುಗಳಿಗೆ

ರಾಜಾಶ್ರಯ ದೊರಕಿರುವ ಬಗ್ಗೆ ವಿವೇಕ ಚಿಂತಾಮಣಿಯ ಹಸ್ತಪ್ರತಿಯಲ್ಲಿ ಉಲ್ಲೇಖಗಳು ದೊರೆಯುತ್ತದೆ.

"ಮಂತ್ರವಾದಿ ಮಾಂತ್ರಿಕ ಮಂತ್ರವಾದಿನಿ ಇವರೆಲ್ಲ ಪ್ರಾಚೀನ ಸಮಾಜದ ಅವಿಭಾಜ್ಯ ಅಂಗಗಳು ಸಾಂಸ್ಕೃತಿಕವಾಗಿ ಜನ ಸಮುದಾಯವನ್ನು ಮುನ್ನಡೆಸುವ ಮುಖಂಡರಲ್ಲಿ ಇವರು ಪ್ರಮುಖ ಪಾತ್ರವಹಿಸುತ್ತಿದ್ದರು. ಗ್ರಾಮೀಣ ಸಮಾಜಗಳಲ್ಲಿ ಮಾಂತ್ರಿಕ ಮತ್ತು ಮಾಟಗಾರ್ತಿ ಅತಿಮಾನುಷ ಶಕ್ತಿಗಳ ಪ್ರತಿನಿಧಿಗಳು. ಇದು ಅಲ್ಲದೆ ಪ್ರಾಚೀನ ಜನ ಸಮುದಾಯಗಳಲ್ಲಿ ಮತ್ತು ಸಮಾಜಗಳಲ್ಲಿ ಯಂತ್ರ ಮತ್ತು ತಂತ್ರಗಳು ಬರೀ ಕೇಡಿನ ಉಪಕರಣಗಳಾಗದೇ ವೈದ್ಯಕೀಯದ ಅವಿಭಾಜ್ಯ ಅಂಗಗಳಾಗಿ ಬೆಳೆದು ಬಂದಿರುವುದನ್ನು ವಿಜ್ಞಾನ ಮತ್ತು ಮಾನವನಶಾಸ್ತ್ರಗಳ ಅವಲೋಕನದಿಂದ ಗ್ರಹಿಸಲಾಗುತ್ತದೆ. ಯಾವುದೇ ಒಂದು ರೋಗ ಅಥವಾ ಗಾಯಗಳನ್ನು ಗುಣಪಡಿಸಲು ಗಿಡಮೂಲಕೆ ಮತ್ತು ಮಂತ್ರಗಳನ್ನು ಬಳಸುತ್ತಾರೆ. ಇದರಲ್ಲಿ ಯಾವುದು ಆರೋಗ್ಯವರ್ಧಕ ಶಕ್ತಿಯನ್ನು ಕೆಲಸ ಮಾಡುತ್ತದೆ.? ಬಹುಮುಖ್ಯವಾಗಿ ಮೌಖಿಕ ಸಂಪ್ರದಾಯ ಮತ್ತು ಪರಿಸರವನ್ನು ಹೆಚ್ಚು ಒಳಗೊಳ್ಳುವ ಈ ಮಂತ್ರ ಮಾಟದಂತಹ ಸಂಗತಿಗಳ ಅಧ್ಯಯನ ಕುತೂಹಲಕರವಾದಂಥದ್ದು. ಸಾಹಿತ್ಯ ವಲಯದಲ್ಲಿ ಇದು ಲೌಕಿಕ ಸಾಹಿತ್ಯ ಅಥವಾ ಲಘುಸಾಹಿತ್ಯ ಎಂದು ಕರೆಸಿಕೊಳ್ಳುವ ಮೂಲಕ ಹೆಚ್ಚಾಗಿ ಉಪೇಕ್ಷೆಗೆ ಒಳಗಾಗಿದೆ. ಇಂದು ದೊರಕುವ ನೂರಾರು ಹಸ್ತಪ್ರತಿಗಳು ಒಂದು ನಂಬಿಕೆ ಪ್ರಧಾನವಾದ ಸಂಕೀರ್ಣ ಬದುಕಿನ ಸಂಗತಿಗಳನ್ನು ಎತ್ತಿ ಹೇಳುತ್ತವೆ."[೧೮]

* **ಸ್ತ್ರೀ ವಶೀಕರಣಕ್ಕೆ :** ಬಿಳಿಯಕ್ಕೆ ಶೆಕ್ಕೆಯನ್ನು ಕಾಲುಮಡಿಯಲ್ಲಿ ನೆನೆಇಟ್ಟು ಅದನ್ನು ಕರೆಉಮ್ಮತ್ತಿ ರಸ ಸೇರಿಸಿ ಇದನ್ನು ಹಂಚಿನಲ್ಲಿ ಉರಿದು ನಮಗೆ ಬೇಕಾದ ಸ್ತ್ರೀತಲೆ ಕೂದಲನ್ನು ಉರಿದು ಕೊಬ್ಬರಿಯಣ್ಣೆಯಲ್ಲಿ ಕಲಸಿ ತಲೆಗೆ ಹಚ್ಚಿದರೆ ವಶ.[೧೯]

ಈ ಮೇಲೆ ಹೇಳಿದ ಹಾಗೆ ಮಾಡಿದರೆ ಸ್ತ್ರೀ ವಶವಾಗುವವಳು ಎಂದು ಹೇಳುತ್ತವೆ. ಈ ರೀತಿಯು ಈಗಲೂ ಸಹ ಮಂತ್ರಗಳು ಕೆಲಸ ಮಾಡುತ್ತಿರುವುದನ್ನು ಕೆಲ ಭಾಗಗಳಲ್ಲಿ ನೋಡಬಹುದು.

* ಅಂದಿಯ (ಹಂದಿಯ) ಅಸ್ತಿಯನ್ನು ಜಜ್ಜಿಕುಟ್ಟಿ ತನ್ನ ಮೂತ್ರದಲ್ಲಿ ಅರೆದು ಅದನ್ನು ಒವಣಗಿಸಿ ತನಗೆ ಬೇಕಾದ ಸ್ತ್ರೀಗೆ ಇಕ್ಕಲು ವಶ.[೨೦]

ಹಂದಿಯ ಅಸ್ತಿಯನ್ನು ಜಜ್ಜಿ ಅದನ್ನು ಕುಟ್ಟಿ ತನ್ನ ಮೂತ್ರದಲ್ಲಿ ಅರೆದು ಅದನ್ನು ಒಣಗಿಸಿ ತನಗೆ ಬೇಕಾದವರಿಗೆ ಹಚ್ಚಿದರೆ ಆ ಸ್ತ್ರೀಯು ವಶವಾಗುವವಳು ಎಂದು ಈ ಮಂತ್ರ ಹೇಳುತ್ತದೆ.

* ಮುಳ್ಳು ಸೊಂಡೆ ಸೊಪ್ಪಿನಬೇರು ಆದಿತ್ಯವಾರದ ದಿನ ಧೂಪ ದೀಪ ನೈವೇದ್ಯವನ್ನು ಕೊಟ್ಟು ತಂದು ಕಾಲುಮಡಿಯಲ್ಲಿ ೮ ದಿನ ನೆನಸಿ ಬೇಕಾದ ಸ್ತ್ರೀಯರಿಗೆ ಯಣ್ಣೆಯಲ್ಲಿ ಕಲಸಿ ತಲಿಗೆ ಮೂಸೆವಶ.[೨೧]

[illegible]

* ತಾಳನಾಯಿ ಹಲ್ಲನ್ನು ಅದರ ಅಸ್ತಿಯನ್ನು ತಂದು ತನ್ನ ಯಿಂದ್ರಿಯಲ್ಲಿ ಮರ್ಧಿಸಿ ತನಗೆ ಬೇಕಾದ ಸ್ತ್ರೀಗೆ ಯಿಕ್ಕಲು ಮರಣಾಂತರ ವಶ.[೨೨]
* ಕರೇರಾಕಿಬೇರು ಆವುಮೆಕ್ಕಬೇರು ಕತ್ತೆಕಿರುಬನ ಬೇರು ಮೇಗಳ ಸಾಮಾನಗಳನ್ನು ತನ್ನ ಇಂದ್ರಿಯಲ್ಲಿ ನೆನಸಿಕೊಡುವದು– ಇದು ಸಿದ್ಧಾಂತ ಇದನ್ನು ಚೂರ್ಣಮಾಡಿ ಕೂದಲಿಗೆ ಹಚ್ಚಿದರೆ ವಶ.[೨೩] ಈ ಮೇಲಿನ ಔಷಧದ ಗಿಡಗಳ ಬೇರುಗಳನ್ನು ತಂದು ಅವುಗಳನ್ನು ತನ್ನ ಇಂದ್ರಿಯಲ್ಲಿ ನೆನಸಿಕೊಂಡು ಅದನ್ನು ಚೂರ್ಣಮಾಡಿ ಅವರ ಕೂದಲಿಗೆ ಹಚ್ಚಿದರೆ ವಶವಾಗುತ್ತಾಳೆ ಎಂಬ ಭಾವನೆ ಇದೆ.

ಬಾಲಗ್ರಹ ಪೀಡೆ ನಿವಾರಣಯಂತ್ರ :

"ಓಂ ಶರಣು ಶ್ರೀ ಬಸವೇಶ್ವರ

ದಿನ ೧ ತಿಂಗಳು ೧ ವರುಷ ೧ ಆದ ಶಿಶುವಿಗೆ ನಂದಿನಿ ಎಂಬ ದೇವತೆ ಪೀಡಿಯುವಳು. ಇದರ ಲಕ್ಷಣ–ಜ್ವರ ಕಾಕಸ್ವರದಿಂದ ಅಳುವುದು, ಕೊರಳು ಆಡಿಸುವುದು, ಮೊಲೆಯನುಣ್ಣದು, ಬಡವಾಗುವುದು, ವಾಂತಿಯಾಗುವುದು, ಹೊಟ್ಟೆಹರಿಯುವುದು, ಕೈಕಾಲು ಆಡಿಸುವುದು, ಇದಕ್ಕೆ ಬಲಕಾಲುವೆ ಎರಡು ದಡದ ಮಣ್ಣು ತಂದು ಸ್ತ್ರೀ ಪ್ರತಿಮೆಯಂ ಮಾಡಿ ಬಿಳಿವಸ್ತ್ರವಂ ಹೊದಿಸಿ ಧೂಪದೀಪ ನೈವೇದ್ಯ ಕಾಣಿಕೆ ಸಹಮಂಡಲಿಗೆ ೧೦ ಮೇಲೂಗರ ೫ ಬಗೆ ಇವುಗಳನ್ನು ಹೊಸ ಕಪರಿಯಲ್ಲಿರಿಸಿ ಪಡವಲು ದಿಕ್ಕಿನಲ್ಲಿ ಬಲಿಯಂ ಕೊಡುವುದು."[೨೪]

* "ದಿನ ೨ ತಿಂಗಳು ೨ ವರ್ಷ ೨ ಆದ ಶಿಶುವಿಗೆ ಸುಂಗಂಧಿನಿ ಎಂಬ ದೇವತೆ ಪೀಡಿಯುವಳು ಇದರ ಲಕ್ಷಣ ಜ್ವರ–ಕಣ್ಣು ತೆರೆಯುವುದು, ವಾಂತಿಯಾಗುವುದು, ಕೈಕಾಲು ಮುದುರುವುದು, ಹೊಟ್ಟೆ ಹರಿಯುವುದು, ಮೇಲೆ ನೋಡುವುದು, ಬೆಕ್ಕಿನಂತೆ ಅಳುವುದು; ಇದಕ್ಕೆ ಬಲಿ[೨೫]
* ದಿನ ೩ ತಿಂಗಳು ೩ ವರ್ಷ ೩ ಆದ ಶಿಶುವಿಗೆ ಪೂತನೀ ಎಂಬ ದೇವತೆ ಪೀಡಿಯುವಳು ಇದರ ಲಕ್ಷಣ ಜ್ವರ ಬರುವುದು, ಕೊರಳನ್ನಾಡಿಸುವುದು, ಗಂಟಲು ಒಣಗುವುದು, ಹೊಟ್ಟೆ ಹರಿಯುವುದು ಬಡವಾಗುವುದು"[೨೬]
* "ದಿನ ೪ ತಿಂಗಳ ೪ ವರ್ಷ ೪ ಆದ ಶಿಶುವಿಗೆ ಮುರಾರಿ ಎಂಬ ದೇವತೆ ಪೀಡಿಯುವಳು ಇದರ ಲಕ್ಷಣ ಜ್ವರ ಮೈಮುರಿದುಕೊಳ್ಳುವುದು, ಮೊಲೆಯನುಣ್ಣದು, ಕೆಮ್ಮುವುದು, ಹೊಟ್ಟೆ ಹರಿಯುವುದು, ಹೊಟ್ಟೆ ನೋವು, ಕೈಕಾಲು ಮುದುರಿಕೊಂಬುದು.
* ದಿನ ೫ ತಿಂಗಳು ೫ ವರ್ಷ ೫ ಆದ ಶಿಶುವಿಗೆ ನೀಲಿವರ್ಣಿ ಎಂಬ ದೇವತೆ ಪೀಡಿಯುವಳು ಇದರ ಲಕ್ಷಣ ಜ್ವರ, ಕಣ್ಣು ರೋಗ, ಮೈಮುರಿದುಕೊಳ್ಳುವುದು, ಮೊಲೆಯನುಣ್ಣದು ಕಾರುವುದು, ಹೊಟ್ಟೆ ಹರಿಯುವುದು."[೨೭]

* "ದಿನ ೬ ತಿಂಗಳು ೬ ವರ್ಷ ಆದ ಶಿಶುವಿಗೆ ಶಕುನಿ ಎಂಬ ದೇವತೆ ಪೀಡಿಯುವಳು ಇದರ ಲಕ್ಷಣ ಜ್ವರ ಕಣ್ಣು ತೆರೆಯದು. ವಾಂತಿ ಕೈಕಾಲು ಮುರಿದು ಕೊಂಬುವುದು ಕೆಮ್ಮು ಉಬ್ಬಸ, ಮೇಲೆ ನೋಡುವುದು."[೨೮]
* "ದಿನ ೭ ತಿಂಗಳು ೭ ವರ್ಷ ಆದ ಶಿಶುವಿಗೆ ಶಾಕಿನಿ ಎಂಬ ದೇವತೆ ಪೀಡಿಯುವಳು. ಇದರ ಲಕ್ಷಣ ಜ್ವರ ವಾಂತಿಯಾಗುವುದು, ಗಂಟಲು ಒಣಗುವುದು, ಬಡವಾಗುವುದು."[೨೯]

ಈ ರೀತಿಯ ತೊಂದರೆಗಳ ನಿವಾರಣೆಗಾಗಿ ಬಾಲಗ್ರಹ ಪೀಡೆ ಯಂತ್ರವನ್ನು ಈಗಲೂ ಆಧುನಿಕ ಕಾಲದಲ್ಲಿ ಬಳಸುತ್ತಿರುವುದನ್ನು ನೋಡಬಹುದು. ಹುಟ್ಟಿದ ಮಗುವಿಗೆ ಈ ರೀತಿಯ ಯಂತ್ರಗಳನ್ನು ಮಾಡಿಸಿ ಹಾಕಿಸುವುದನ್ನು ನಾವು ಪ್ರತಿಯೊಂದು ಊರುಗಳಲ್ಲಿ ಕಾಣಬಹುದು.

* ಕುಮಾರರಾಮನ ಸಾಂಗತ್ಯದ ಹಸ್ತಪ್ರತಿ: ಇದು ಶಿಷ್ಟ ಸಾಹಿತ್ಯ ಕೃತಿಯಾಗಿದೆ. ಕುಮಾರ ರಾಮನ ಸಾಂಗತ್ಯ ಹೆಸರೇ ಹೇಳುವಂತೆ ಇದು ಸಾಂಗತ್ಯ ಕೃತಿಯಾಗಿದೆ. ಇದು ಕಾಗದದ ಪ್ರತಿಯಾಗಿದ್ದು, ಇದು ಒಟ್ಟು ೩೬೦ ಪುಟಗಳಿಂದ ಕೂಡಿದ ಪ್ರತಿಯಾಗಿದೆ. ಇದನ್ನು ಪ್ರತಿ ಮಾಡಿದ ಕಾಲ ಮತ್ತು ಪ್ರತಿಕಾರರುಗಳೆಂದರೆ,

"ರೌದ್ರಿ ಸಂವತ್ಸರದ ಜೇಷ್ಟ ಬಹುಳ ೬ಯಲ್ಲು ಭಾನುವಾರ ದಿವಸ ೯ ತಾಸಿನೊಳಗೆ ಕುಮಾರ ರಾಮನ ಪುಸ್ತಕ ಮುಗೆ ಬರದು ಯಿಧಿತೆ ತಪಂಬರದಾತಂಕಡು ಜಡನಪ್ಪೇತನೆಂದು ಬಯಲ್ಬೇಡಂ ತಪ್ಪಕ್ಕು ಶುದ್ಧಮಕ್ಕು, ತಪ್ಪುಳ್ಳರೆ ತಿದ್ದಿ ಓದುವದುತ್ತುಮ ಪುರುಷರು ಐಶ್ವರ್ಯಮಸ್ತು ಆಯುರಾರೋಗ್ಯ ಮಸ್ತು ಯೀಪುಸ್ತಕ ಯಾರಿಗೆ ಬರದು ಕೊಟ್ಟದುಯಂದರೆ ರಾಜೇಶ್ರೀ ಹಿರೆ ಕೆರೆಯಾಗಳಹಳ್ಳಿ ಗೌಡರ ಕರಿಬಸಪ್ಪನವರ ಗರ್ಭೋದ್ಭವರಾದ ಮರುಳಪ್ಪ ಶಿದ್ದಪ್ಪಗೆ ಬರದು ಕೊಟ್ಟು ಯೀಥಿತೆ ಯೀಪುಸ್ತಕ ಬರೆದವರು ರಾಜೇ ಶ್ರೀ ಉಜ್ಜನಿವಳಗೆ ಯಿರುವ ಮತ್ತಿಹಳ್ಳಿ ಸಿದ್ಧಲಿಂಗಪ್ಪನವರ ಮಗ ಚೆನ್ನವೀರಪ್ಪನು ಬರೆದ ಈ ಪುಸ್ತಕವನ್ನು ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲ್ಲೂಕು ಸೂಲದಹಳ್ಳಿ ಗ್ರಾಮದಲ್ಲಿರುವ ಎಮ್.ಎಸ್. ಓಬಯ್ಯನವರು ತಂದ ಈ ಹಳೆಯ ಪುಸ್ತಕವನ್ನು ನೋಡಿಕೊಂಡು ಈಥಿತೆಯ ಮುಗೆ ಬರದುದು ಶುಕ್ರವಾರ ಬೈಗಿನ ಮೂರುಗಂಟೆಗೆ ಮುಗೆ ಬರದವರು ಒಂದನೆ ಮ್ಯಾಸನಾಯ್ಕರ ೧ನೇ ಎಚ್. ಮಲಿಯಪ್ಪ ೨ನೇ ಓಬಯ್ಯ, ೨ನೇ ಎಸ್.ಆರ್. ದೊಡ್ಡಪಾಲಯ್ಯ ೪ನೇ ಚಿ॥ ಓಬಯ್ಯ ಮುಗೆ ಬರೆದವರು".[೩೦]

ಈ ಹಸ್ತಪ್ರತಿಯಲ್ಲಿ ಮೊದಲ ಎರಡು ಸಂಧಿಗಳು ಇಲ್ಲ. ೩ನೇ ಸಂಧಿಯಿಂದ ಕುಮಾರರಾಮನ ಸಾಂಗತ್ಯದ ಪದ್ಯಗಳು ಪ್ರಾರಂಭವಾಗುತ್ತವೆ. ಇದರಲ್ಲಿ ಒಟ್ಟು ಸಂಧಿಗಳು ೩೭, ಪದ್ಯಗಳು ೫೧೪೯ ಇರುವುದನ್ನು ನೋಡಬಹುದು. ಹಾಗೆಯೇ ಕೆಲವೊಂದು ಸಂಧಿಯ ಹೆಸರನ್ನು ಲಿಪಿಕಾರನು ಬರೆಯದೇ ಇರುವುದನ್ನು ನಾವು ಕಾಣಬಹುದು.

ಹಸ್ತಪ್ರತಿಯ ಪ್ರಾರಂಭವನ್ನು ಹೀಗೆ ನೋಡಬಹುದು.

"ಶ್ರೀಗುರು ಬಸವಲಿಂಗಾಯ ನಮಃ ಶ್ರೀಗುರು ಶ್ರೀ ಭ್ಯೋಬ್ಯಾಯ ನಮಃ
ಶ್ರೀಗುರು ಶಾಂತಾಂಭಯ ನಮಃ ಶ್ರೀಗುರು ಸಿದ್ಧಲಿಂಗಾಯ ನಮಃ
ಶ್ರೀ ಗಿರಿಜಾಧೀಶನಾಗ ಚರ್ಮಾಂಭಾರ ಯೋಗಿ ಜನ ನಮ್ರದಾಯಃ
ಆಗಮತೀತ ಆನಂದ ಭರಿತ ಜಯ ಭೋಗಿ ಭೂಷಣ ನೇತ್ರ ಗೋಪತಿ ಲಾಯಳ ಗೋಪತಿ
ನಿರತರ ಗೋಪತಿ ಕೋಟಿನಯನರ್ಚನೆ, ಗೋಪಿ ಕಂಕಣ ಸೂತ್ರ ಗೋಪಮಂಡಲಧರ
ಗೋಪಿಗುರ್ಣೊಪತೇಜ ಉರಿಗಣ್ಣ ಸಿರಮಾಲ ರೊಳ ಕಂದರವಾವಾ ಗಿರಿಜೆಯಧರಿಯ
ರಂಜಗೋಪ ಪರಂಜೊತಿಯಾದೆನ್ನ ಗುರುರಾಯ ನಿನ್ನ ಚರಣವನು ನಂಬಲಗೊಂಬೆ॥
ರಾಮನ ಪೆತ್ತವನೆ ಕಮಲಲೋಚನ॥ ಸತ್ತೆ ಭಾಮೆಯರಸನೇ ಶ್ರೀ ಕೃಷ್ಣ॥
ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಗುರು ಬಸವಲಿಂಗಾಯ ನಮಃ
ಶ್ರೀ ಜಾನಕಿವಾಸ ಸುಭಗೀರಿವಾಸ॥
ಭಾನುಕೋಟಿ ಪ್ರಕಾಶ ಭಕ್ತ ಜನಪೋಷಾ
ಭಾಳಾ ನೇತ್ರನೇ ಸಖಾನೆ ಭಜಕಾರ ರಕ್ಷನೆ
ಶ್ರಿ ಲಕ್ಷ್ಮಿವರನಾಥಾ ತಿಥಿ ಪಾರಿಜಾತ ಸಕಲಾಲೋಕೇಸ್ಪರನೆ॥"[೩೧] ಹೀಗೆಯೇ ಕುಮಾರ ರಾಮನ ಸಾಂಗತ್ಯವು ಪ್ರಾರಂಭವಾಗುತ್ತದೆ. ಕುಮಾರ ರಾಮನ ಕಥೆಯನ್ನು ನೋಡುವುದಾದರೆ ಮಲ ಪಂಥುಲ ದೇಶದ ರಾಜನಲ್ಲಿದ್ದ ಮುಮ್ಮಡಿ ಶಿಂಗ ಭಂಟನು ಜನ ಸಂಗಡ ವಾಗ್ದೋಷಗಳಿಂದ ಜಗಳ ಮಾಡಿಕೊಂಡು ರಾಯದುರ್ಗವನ್ನಾಳುವ ರಾಮದೇವರಾಯನು ರಾಜ್ಯ ಪರಿಪಾಲಿಸುವ ಇವರ ರಾಜ್ಯಕ್ಕೆ ಗಡಿ ಹತ್ತಿರ ಬಂದು ಮುಮ್ಮಡಿ ಸಿಂಗನು ತನ್ನ ಆಳುಗಳಲ್ಲಿ ಕೆಲವರನ್ನು ರಾಮದೇವರಾಯರ ಹತ್ತಿರಕ್ಕೆ ಕಳುಹಿಸುತ್ತಾನೆ. ದ್ವಾರಬಾಗಿಲ ಕಾಯುವ ಗೊಲ್ಲರು ರಾಜನಿಗೆ ಹೋಗಿ ಮುಝುರೆ ಮಾಡಿ ಸ್ವಾಮಿ ನಮ್ಮ ರಾಜ್ಯದ ಗಡಿಯ ಹತ್ತಿರ ಯಾವ ಪರದೇಶದ ವೀರ ಭಂಟನು ನಿಮ್ಮ ದರುಶನಕ್ಕೆ ಬಂದಿರುವನು. ನಿಮ್ಮ ಅಪ್ಪಣೆ ಕೇಳಲು ಚರರನ್ನು ಕಳುಹಿಸಿರುವನು. ಬಂದ ಚರರಿಗೆರಾಯ ಸಂತೋಷದಿಂದ ಅವರಿಗೆ ಉಡುಗೊರೆಯನ್ನು ಕೊಟ್ಟು ಅವರನ್ನು ಕರೆದುಕೊಂಡು ಬನ್ನಿರಿಯೆಂದನು. ಆಗ ಮುಮ್ಮಡಿ ಸಿಂಗನು ತನ್ನ ಸೈನ್ಯ ಸಮೇತವಾಗಿ ಬಂದು ರಾಮದೇವ ರಾಯರಿಗೆ ತನ್ನ ಅನಂತ ವಂದನೆಗಳನ್ನು ಸಲ್ಲಿಸಿದನು. ಆಗ ರಾಜನು ನೀನು ಯಾರು ಯಾವ ದೇಶ ನಿನ್ನ ಹೆಸರೇನು ಯೇನು ಕಾರಣ ನನ್ನಲ್ಲಿ ಬಂದೆ ಎಂದು ಕೇಳಲು ಆಗ ಮುಮ್ಮಡಿ ಸಿಂಗನು ನಮ್ಮ ದೇಶ ನಮ್ಮರಾಜನ ಬಳಿ ಮನಸ್ತಾಪ ಮಾಡಿಕೊಂಡು ನಿಮ್ಮ ಬಳಿಗೆ ಬಂದಿರುವೆನು. ನೀವು ಎನಗೆ ಆಶ್ರಯ ಕೊಟ್ಟರೆ ನಿಮ್ಮ ರಾಜಧಾನಿಯಲ್ಲಿ ಯಾವುದಾದರೊಂದು ಕೆಲಸವನ್ನಿಟ್ಟುಕೊಟ್ಟು ಇರಿಸಿಕೊಳ್ಳಿರಿ ಎಂದನು. ಆಗ ರಾಜನು ಈತನ ಮುಖಲಕ್ಷ್ಮಣಗಳನ್ನು ಶೌರ್ಯಧೈರ್ಯವನ್ನು ನೋಡಿ ಸಂತೋಷ ಪಟ್ಟು ತನ್ನಲ್ಲಿ ಮುಖ್ಯ ಭಟನ

ಪದವಿಯನ್ನು ಕೊಟ್ಟು ಸೇರಿಸಿಕೊಂಡನು. ಹಾಗೆಯೇ ಕುಮ್ಮಟದುರ್ಗವನ್ನು ಆಳಿದ ಕಂಪಾಲರಾಯ ಮತ್ತು ಮಗನಾದ ಕುಮಾರರಾಮ ಹಾಗೂ ಆ ಭಾಗದಲ್ಲಿದಂತಹ ಜೈನಬಾಂಧವರ ವೈಮನಸ್ಸಿಗೆ ಕಾರಣವಾದ ಜಾತಿಸೂತಕ ಸಂದರ್ಭ ಕಟ್ಟಿಕೊಡುವಲ್ಲಿ ಪ್ರಮುಖವಾದ ಆಕರವಾಗಿದೆ. ಕುಮಾರರಾಮನನ್ನು ಪ್ರೀತಿ ವಿಶ್ವಾಸಗಳಿಂದ ಕರೆಸಿಕೊಂಡ ಕುಮ್ಮಟದುರ್ಗದ ಜೈನರು ಆತೀಥ್ಯ ನೀಡಿ ಅನಂತರ ಕುಮಾರರಾಮ ಕುಳಿತ ಜಾಗವನಾ ಮಲಿನವಾಯಿತೆಂಬ ಭಾವನೆಯಿಂದ ಅದನ್ನು ಶುದ್ಧಗೊಳಿಸಿದರೆಂಬ ವದಂತಿಯನ್ನು ಕೇಳಿದ ಕುಮಾರರಾಮ ಜೈನರನು ಕುಮ್ಮಟದುರ್ಗದಿಂದ ಹೊರಹಾಕಿ ಬಸದಿಯಲ್ಲಿ ಕುರಿಕೋಣಗಳನ್ನು ಕೊಲ್ಲಿಸಿದ ಪ್ರಸಂಗವನ್ನು ಹಾಗೂ ರಾಮೈಯ್ಯ ಕೈಲಾಸದಿಂದ ಧರೆಗಿಳಿದು ಬಂದದ್ದನ್ನು ಈ ಹಸ್ತಪ್ರತಿ ಉಲ್ಲೇಖಿಸುತ್ತದೆ. ಹೀಗೆಯೇ ಕುಮಾರರಾಮನ ಸಾಂಗತ್ಯದ ಪದ್ಯಗಳ ವಿಶ್ಲೇಷಣೆಯು ಮುಂದುವರೆದುಕೊಂಡು ಹೋಗುವುದನ್ನು ನಾವು ನೋಡಬಹುದು. ಈ ಸಾಂಗತ್ಯ ಕೃತಿಯು ಸ್ಥಳೀಯ ಚರಿತ್ರೆಯನ್ನು ಸಹ ಹೇಳುತ್ತದೆ. ಹಾಗೂ ಸಾಹಿತ್ಯ ಕೃತಿಯಾಗಿಯೂ ನಮಗೆ ಗೋಚರಿಸುತ್ತದೆ. ಒಟ್ಟಾರೆಯಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕುಮಾರರಾಮನ ಸಾಂಗತ್ಯವು ಪ್ರಮುಖ ಕೃತಿಯಾಗಿರುವುದನ್ನು ನಾವು ನೋಡಬಹುದು.

ಶಿಷ್ಟ ಸಾಹಿತ್ಯದ ಒಂದು ಭಾಗವಾಗಿ ಜನಪದ ಸಾಹಿತ್ಯವು ಕಂಡುಬರುತ್ತದೆ. ಕರ್ನಾಟಕದ ಜನಪದ ರಂಗಕಲೆಯ ಹಲವು ಪ್ರಕಾರಗಳಲ್ಲಿ ಬಯಲಾಟ ಮತ್ತು ಯಕ್ಷಗಾನಗಳು ಪ್ರಮುಖವೆನಿಸಿವೆ. ಹೆಸರೇ ಸೂಚಿಸುವಂತೆ ಬಯಲಾಟವೆಂಬ ಬಯಲಿನಲ್ಲಿ ಆಡುವ ಆಟವಾಗಿದೆ. ಇಲ್ಲಿ ಬಯಲು+ಆಟ ಈ ಎರಡೂ ಪದಗಳು ಸೇರಿ ಬಯಲಾಟವಾಗಿದೆ. "ಬಯಲು" ಎಂಬುದು ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ನೆರೆಯುವ ಸ್ಥಳವಾಗಿದ್ದು, ಅಲ್ಲಿ ಆಡುವ ಆಟವೇ ಬಯಲಾಟ. ಯಕ್ಷಗಾನವೆಂಬುದು ಮೂಲತಃ ಬಯಲಾಟವೇ. ಆದರೆ ಅಲ್ಲಿನ ವಿದ್ವಾಂಸರು ಮತ್ತು ಕಲಾವಿದರು ತಮ್ಮ ಕಲೆಯ ಹೆಚ್ಚುಗಾರಿಕೆಯನ್ನು ತೋರಿಸಲು ಬಹುಶಃ ಯಕ್ಷಗಾನ ಪದವನ್ನು ಬಳಕೆಯಲ್ಲಿ ತಂದಿದನೆಂದು ಕಾಣುತ್ತದೆ. ಬಯಲಾಟ ಒಂದು ಪ್ರದರ್ಶನ ಕಲೆಯಾಗಿದ್ದರೂ ಅದಕ್ಕೆ ತನ್ನದೇ ಆದ ಸಾಹಿತ್ಯವಿದೆ. ಈ ಸಾಹಿತ್ಯ ಹಾಡು ಮತ್ತು ಸಂಭಾಷಣೆ ಎಂಬ ಎರಡು ರೂಪಗಳಲ್ಲಿ ಅಭಿವ್ಯಕ್ತಗೊಂಡಿದೆ. ಬಯಲಾಟದ ಹಾಡು ಮತ್ತು ಸಂಭಾಷಣೆಗಳೆರಡೂ ಕನ್ನಡ ಭಾಷೆಯ ಜಾಯಮಾನವನ್ನು ಅನುಸರಿಸಿ ರಚನೆಗೊಂಡಿರುವುದು ಕುತೂಹಲದ ಸಂಗತಿಯಾಗಿದೆ. ಕರ್ನಾಟಕದ ಉದ್ದಗಲಕ್ಕೂ ಬಯಲಾಟಗಳ ಪ್ರಭಾವ ಹರಡಿಕೊಂಡಿದ್ದು, ಇದು ಸ್ಥಳೀಯ ಲಿಪಿಕಾರರ ಸೃಜನಶೀಲತೆಗೆ ಪ್ರೇರಣೆ ನೀಡಿದೆ. ಅಸಂಖ್ಯಾತ ಬಯಲಾಟ ಕಲಾವಿದರು ರಚಿಸಿರುವ ನೂರಾರು ಬಯಲಾಟ ಕಥೆಗಳು ಮೌಖಿಕ ಮತ್ತು ಲಿಖಿತ ಈ ಎರಡೂ ರೂಪಗಳಲ್ಲಿ ನಮಗೆ ದೊರೆಯುತ್ತವೆ. ಹಾಗೆಯೇ ಒಂದೇ ವಸ್ತುವನ್ನು ಆಧರಿಸಿಯೂ ಬಯಲಾಟ ಕಥೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ಸ್ವರೂಪದಲ್ಲಿ ದೊರಕುವುದನ್ನು ನಾವು ನೋಡಬಹುದು. ಸಾಕಷ್ಟು ಸಮೃದ್ಧವೂ ಮತ್ತು ವೈವಿಧ್ಯಮಯವೂ ಆಗಿರುವ ಬಯಲಾಟ ಸಾಹಿತ್ಯದ ಸಂಗ್ರಹಕಾರ್ಯದ ಕಡೆಗೆ ವಿದ್ವಾಂಸರು

[illegible]

ಅಷ್ಟಾಗಿ ಗಮನಹರಿಸದಿರುವುದು ಆಶ್ಚರ್ಯಕರವಾಗಿದೆ. ಚಿತ್ರದುರ್ಗ ಪರಿಸರವು ಬಯಲಾಟಗಳ ತವರೂರು ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಪ್ರತಿಯೊಂದು ಹಳ್ಳಿಗಳಲ್ಲಿಯೂ ಈ ಬಯಲಾಟಗಳ ಪ್ರದರ್ಶನ ಮಾಡುವುದನ್ನು ನೋಡಬಹುದು. ಹಾಗಾಗಿ ಈ ಪರಿಸರದಲ್ಲಿ ಬಯಲಾಟಗಳ ಹಸ್ತಪ್ರತಿ ಉಳಿದುಕೊಂಡು ಬರಲು ಸಾಧ್ಯವಾಗಿದೆ. ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಯಲಾಟದ ಹಸ್ತಪ್ರತಿಗಳೇ ದೊರಕಿವೆ. ಅಂತಹ ಬಯಲಾಟದ ಹಸ್ತಪ್ರತಿಗಳು ಈ ಕೆಳಗಿನಂತಿವೆ.

೧. ಕರಿಭಂಟನ ಕಾಳಗ
೨. ಗಿರಿಜಾ ಕಲ್ಯಾಣ
೩. ಶಶಿರೇಖಾ ಪರಿಣಯ
೪. ಶತೃ ವಿಜಯನ ಕಥೆ
೫. ಲಕ್ಷ್ಮೀಣಿ ಸ್ವಯಂವರ
೬. ಭೋಜ ಕಾಳಿದಾಸ
೭. ಕಾಳಿಂಗ ರಾಜನಕಥೆ
೮. ರಾಮಾಯಣದೊಳಗಣ ಚಿತ್ರಪಟಸಂಧಿ
೯. ಜಗನ್ ಮೊಹಿನಿ ನಾಟಕ
೧೦. ತಾಮ್ರಧ್ವಾಜನ ಕಥೆ
೧೧. ರತಿ ಕಲ್ಯಾಣ
೧೨. ಅಭಿಮನ್ಯು ಕಾಳಗ
೧೩. ಬಬ್ರುವಾಹನ ಕಾಳಗ
೧೪. ಭಕ್ತ ಪ್ರಹ್ಲಾದ
೧೫. ಐರಾವಣ ಮೈರಾವಣ
೧೬. ದುಶ್ಯಾಸನ ಕಥೆ
೧೭. ನುಂಕೆಮಲೆ ಸಿದ್ಧೇಶ್ವರ ಪುರಾಣ
೧೮. ಕರ್ಣಾರ್ಜುನರ ಕಾಳಗ
೧೯. ಮಣಿ ಮಲ್ಲಾಪುರನ ಕಥೆ
೨೦. ದೇವಿ ಮಹಾತ್ಮೆ
೨೧. ವಿರಾಟ ಪರ್ವ
೨೨. ಚಿತ್ರುಕೇತು ಮಹಾರಾಜ

ಈ ಎಲ್ಲಾ ಹಸ್ತಪ್ರತಿಗಳು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ದೊರೆತಿವೆ. ಈ ಬಯಲಾಟ ಹಸ್ತಪ್ರತಿಗಳಲ್ಲಿ ಪುರಾಣಕ್ಕೆ ಸಂಬಂಧಿಸಿದಂತೆ, ಚರಿತ್ರೆಗೆ ಸಂಬಂಧಿಸಿದಂತೆ ಹಾಗೂ ರಾಮಾಯಣ–ಮಹಾಭಾರತಕ್ಕೆ ಸಂಬಂಧಿಸಿದಂತೆ ಬಯಲಾಟದ ಹಸ್ತಪ್ರತಿಗಳು ರಚನೆಗೊಂಡಿರುವುದನ್ನು ನಾವು ನೋಡಬಹುದು. ಕೆಲವೊಂದು ಬಯಲಾಟ ಹಸ್ತಪ್ರತಿಗಳ ವಸ್ತು ವಿಶ್ಲೇಷಣೆಯನ್ನು ಗಮನಿಸುವುದಾದರೆ,

ಬಬ್ರುವಾಹನ ಕಾಳಗ : ಪಾಂಡವರು ವೇದವ್ಯಾಸರ ಮಾತಿನಂತೆ ಅಶ್ವಮೇಧ ಯಾಗವನ್ನು ಪ್ರಾರಂಭ ಮಾಡುತ್ತಾರೆ. ಪಾರ್ಥ ಮತ್ತು ಕರ್ಣನ ಮಗನಾದ ವೃಷಕೇತು ಇಬ್ಬರೂ ಕುದುರೆಯ ಬೆಂಗಾವಲಿಗೆ ನಿಲ್ಲುತ್ತಾರೆ. ಕುದುರೆ ನಾನಾ ದೇಶಗಳನ್ನು ಸುತ್ತಿ ಮುಂದೆ ಹೋಗುತ್ತದೆ. ಹಾಗೆಯೇ ಆಯಾ ದೇಶದ ರಾಜರುಗಳಿಂದ ಕಪ್ಪಕಾಣಿಕೆಯೂ ಸಿಗುತ್ತದೆ. ಒದು ದಿನ ಕುದುರೆ ಮಣಿಪುರಕ್ಕೆ ಬರುತ್ತದೆ. ಮಣಿಪುರದ ಅರಸು ಬಬ್ರುವಾಹನ ಇವನ ತಾಯಿ ಚಿತ್ರಾಂಗದೆ, ಕುದುರೆಯ ಹಣೆಪಟ್ಟಿಯಲ್ಲಿನ ಬರಹವನ್ನು ಓದಿದ ಬಬ್ರುವಾಹನ ಕುದುರೆಯನ್ನು ಹಿಡಿದು ಕಟ್ಟಿ ಯುದ್ಧಕ್ಕೆ ಸಿದ್ಧನಾಗುತ್ತಾನೆ. ವಿಷಯ ತಿಳಿದ ಚಿತ್ರಾಂಗದೆ ಯಜ್ಞ ಮಾಡುತ್ತಿರುವವರು ನಿಮ್ಮ ದೊಡ್ಡಪ್ಪ. ಕಪ್ಪಕಾಣಿಕೆಯಲ್ಲಿ ಕೊಟ್ಟು ಬಾ ಎನ್ನುತ್ತಾಳೆ. ತಾಯಿಯ ಮಾತನ್ನು ಕೇಳಿದ ಬಬ್ರುವಾಹನ ತನ್ನ ತಂದೆಯಾದ ಅರ್ಜುನನಿಗೆ ನಮಸ್ಕರಿಸಿ ಕಪ್ಪವನ್ನು ತೆಗೆದುಕೊಳ್ಳಿ ಎಂದು ಹೇಳುತ್ತಾನೆ. ಆಗ ಅರ್ಜುನ, ಅಭಿಮನ್ಯು ಉಳಿದ ಬೇರೆ ಮಕ್ಕಳೆನಗಿಲ್ಲ, ನೀನು ನನ್ನ ಮಗನೇ ಆಗಿದ್ದರೆ ಕುದುರೆಯನ್ನು ಹಿಂದಿರುಗಿಸದೆ ಯುದ್ಧ ಮಾಡುತ್ತಿದ್ದೆ. ಹಾಗಾಗಿ ನೀನು ವೇಶ್ಯೆಯ ಮಗನಿರಬೇಕೆನ್ನುತ್ತಾನೆ. ಸಿಟ್ಟಿಗೆದ್ದ ಬಬ್ರುವಾಹನ ಯುದ್ಧ ಮಾಡುವುದರ ಮೂಲಕ ಅರ್ಜುನನ ಸೈನ್ಯವನ್ನು ಸೋಲಿಸುವುದರೊಂದಿಗೆ ಅವನನ್ನು ಕೊಲ್ಲುತ್ತಾನೆ.

ಶಶಿರೇಖಾ ಪರಿಣಯ : "ಸುಭದ್ರೆಯ ಮಾತು: ಅಣ್ಣಾ ಮುರಾರಿ ಇಕೋ ಆಲದರನು ನನ್ನ ಮಗನಾದ ಅಭಿಮನ್ಯುವಿಗೆ ಶಶಿರೇಖೆಯನ್ನು ಕೊಡುವುದು ನಿಶ್ಚಯವೆಂದು ಕರದಲ್ಲಿ ಕರವಿಟ್ಟು ಪ್ರಮಾಣ ಮಾಡಿರುವನು. ಇನ್ನು ಮೇಲೆ ಆಲಸ್ಯವನ್ನು ಮಾಡದೆ ನಿನ್ನ ಸೋದರಳಿಯನಾದ ಅಭಿಮನ್ಯುವಿನ ವಿವಾಹ ಮಾಡಿ ನನ್ನನ್ನು ಧನ್ಯಳಾನ್ನಾಗಿ ಮಾಡಬೇಕೆಂದು ವಂದನೆಯಂ ಮಾಡುವೆನು ನಿನ್ನ ಪೂರ್ಣ ಅತಃಕರುಣವಿರಲಿ ದೇವಕಿಬಾಲ ಭಕ್ತ ಜನಪಾಲ.

ಕೃಷ್ಣನ ಮಾತು : ಅಮ್ಮ ಸುಭದ್ರೆ ಅಣ್ಣನಾದ ಬಲರಾಮನು ಈ ರೀತಿ ಪ್ರಮಾಣವನ್ನು ಕೊಟ್ಟು ತರುವಾಯ ನಾನು ಸಹ ಆ ಕಾರ್ಯದಲ್ಲಿ ಬದ್ದನಾಗಿ ನಿಂತು ಪೂರೈಸುವೆನು. ಇದಕ್ಕೆ ಸಂಶಯವೇತಕ್ಕೆ ತಂಗಿ ಮಂಗಳಾಂಗಿ"[೩೨]

ಪಾಂಡವರು ಜೂಜಿನಲ್ಲಿ ಸೋತು ವನವಾಸದಲ್ಲಿರುತ್ತಾರೆ. ಇತ್ತ ಸುಭದ್ರೆಯ ಅಣ್ಣ ಬಲರಾಮ ತನ್ನ ಮಗಳಾದ ಶಶಿರೇಖಳನ್ನು ದುರ್ಯೋಧನನ ಮಗ ಲಕ್ಷ್ಮಣಕುಮಾರನಿಗೆ ಕೊಡುವ

ಆಲೋಚನೆಯಲ್ಲಿರುತ್ತಾನೆ. ವಿಷಯ ತಿಳಿದ ಸುಭದ್ರೆ ತನ್ನ ಅಣ್ಣನನ್ನು ಕುರಿತು ಮಗಳಾದ ಶಶಿರೇಖಳನ್ನು ತನ್ನ ಮಗನಾದ ಅಭಿಮನ್ಯುಗೆ ಕೊಡುವಂತೆ ಕೇಳುತ್ತಾಳೆ. ಆದರೆ ಬಲರಾಮ ಈ ಹಿಂದೆ ಅಭಿಮನ್ಯುವಿಗೆ ಕೊಟ್ಟು ಮದುವೆ ಮಾಡುತ್ತೇನೆಂದು ಹೇಳಿದ ಮಾತನ್ನು ಅಕ್ಷರಶಃ ಮರೆತಿರುತ್ತಾನೆ. ಹಾಗಾಗಿ ತನ್ನ ತಂಗಿ ಎನ್ನುವ ಮಮಕಾರವಿಲ್ಲದೆ ಸುಭದ್ರೆಯನ್ನು ಅವಾಚ್ಯವಾಗಿ ನಿಂದಿಸಿ ಹೊರಗಟ್ಟುತ್ತಾನೆ. ದುಃಖಿತಳಾದ ಸುಭದ್ರೆ ಇದನ್ನು ಕೃಷ್ಣನಿಗೆ ತಿಳಿಸುತ್ತಾ ಶಶಿರೇಖ ತನ್ನ ಮನೆಯ ಸೊಸೆಯಾಗಬೇಕೆಂದು ಕೇಳಿಕೊಳ್ಳುತ್ತಾಳೆ ಎಂದು ಕೃಷ್ಣ ಸಂತೈಸುತ್ತಾನೆ. ಹೀಗೆ ಕಥೆ ಮುಂದುವರೆದುಕೊಂಡು ಬರುತ್ತದೆ.

ದುಶ್ಯಾಸನ ಕಥೆ : ಕರ್ಣನ ಮಾತು "ಭಲಲ ಎಲ್ಯೆ ಮಾನ್ನವ ಪ್ರಭಾಕರ ಪ್ರಭಾಸಮಾನ ಈ ಸಭಾದ್ವಾರದಲ್ಲಿ ಅಭಯನಾಗಿ ನಿಂತು ಯನ್ನನ್ನು ಮಾತನಾಡಿಸುವುದಕ್ಕೆ ನೀನಾದರೂ ನಿನ್ನ ನಿಜ ಸ್ಥಳದಾವುದು, ನಿಮ್ಮ ಜನನೀ ಜನಕರು ಕರೆಯುವ ನಾಮವೇನು ಅಂದವಾಗಿ ಪೇಳೋ ನೃಪಕುಲ ಶಿರೋಮಣಿ ಧಿಮಣಿ.

ನಾಮಾಂಕಿತ ಮಾತು : ಭಲಲ ಎಲ್ಯೆ ಸಾರಥಿ ಈ ಎರಡೂ ಲೋಕಗಳಂ ಪರಿಪಾಲನೆ ಮಾಡುವ ದುರ್ಯೋಧನ ಚಕ್ರವರ್ತಿಗೆ ಸಹೋದರ ನೆನಿಸಿ ಧಡಧಡನೆ ಪ್ರಭಾಕರ ಕುಮಾರನಾದ ವೀರಕರ್ಣನೆಂದು ಈ ಬ್ರಂಹಾಂಡದೊಳಗೆ ದಡದಡಲ್ ಎಂದು ಜಯಭೇರಿಯನ್ನು ಹೊಡೆಸುವಂತನಾಗಲ್ಯೆ ಸಾರಥಿ ಮಾತಿನೊಳ್ ಅತಿ ಚಮತ್ ಮತಿ.[೩೩] ಹಿಗೇಯೇ ಈ ಬಯಲಾಟದ ಹಸ್ತಪ್ರತಿಯಲ್ಲಿ ಕರ್ಣನ ಮಾತುಗಳನ್ನು ನೋಡಬಹುದು.

ಶಕುನಿಯ ಕುತಂತ್ರದಿಂದ ಧರ್ಮರಾಯನು ತನ್ನ ರಾಜ್ಯವನ್ನು ಹಾಗೂ ಪ್ರೀತಿಯ ಹೆಂಡತಿಯಾದ ದ್ರೌಪದಿಯನ್ನು ಜೂಜಿನಲ್ಲಿಟ್ಟು ಸೋಲುತ್ತಾನೆ. ಆದ್ದರಿಂದ ದುರ್ಯೋಧನ ದ್ರೌಪದಿಯನ್ನು ಕರೆತರಲು ತನ್ನ ಪ್ರಾಣಸ್ನೇಹಿತನಾದ ಕರ್ಣನೊಂದಿಗೆ ವಿಚಾರ ಮಾಡಿ, ಮೊದಲಿಗೆ ಪ್ರತಿ ಕಾಮಿಕನನ್ನು ಕಳುಹಿಸುತ್ತಾನೆ. ಆದರೆ ಅವಳು ಸಭೆಗೆ ಬರಲು ಒಪ್ಪುವುದಿಲ್ಲ. ಧರ್ಮರಾಯ ತಾನೇ ಸೋತಾದ ಬಳಿಕ ತನ್ನನ್ನು ಪಣವಾಗಿ ಇಟ್ಟದ್ದು ನ್ಯಾಯವೇ ಎಂದು ಕೇಳುತ್ತಾಳೆ. ಪ್ರತಿಕಾಮಿಕನು ಅಸಹಾಯಕನಾಗಿ ಹಿಂದಕ್ಕೆ ಬರುತ್ತಾನೆ. ಆಗ ಅವಳನ್ನು ಕರೆತರಲು ದುಶ್ಯಾಸನನು ಬಂದು ಅವಳನ್ನು ಬಲವಂತವಾಗಿ ಕರೆತರಲು ಪ್ರಯತ್ನಿಸುತ್ತಾನೆ. ಆಗ ದ್ರೌಪದಿಯು ತಾನು ಬರುವುದಿಲ್ಲವೆಂದು ಪರಿಪರಿಯಾಗಿ ಕೇಳಿಕೊಂಡು ದುಃಖಿಸಿದರೂ ನೀನು ನನಗೆ ಮೈದುನನಾಗಬೇಕೆಂದು ನೀತಿಯನ್ನು ಹೇಳಿದರೂ ಬಿಡದೆ ಹಠ ಮಾಡುತ್ತಾನೆ. ಆಕೆ ರಜಸ್ವಲೆಯಾಗಿರುವುದಾಗಿ ತಿಳಿಸಿದಾಗಲೂ ಅವಳ ಮುಂದಲೆಯನ್ನು ಹಿಡಿದೆಳೆದು ಸಭೆಗೆ ಕರೆತಂದು ಅವಳ ಸೀರೆ ಸೆಳೆಯಲನುವಾಗುತ್ತಾನೆ. ಈ ಕೃತ್ಯದಿಂದ ಪಾಂಡವರು ಅವಮಾನದಿಂದ ತಲೆತಗ್ಗಿಸುತ್ತಾರೆ. ಕೊನೆಗೆ ಕೃಷ್ಣನ ಮೊರೆಹೋದಾಗ ಕೃಷ್ಣ ಅಕ್ಷಯಾಂಬರವನ್ನು ದಯಪಾಲಿಸುತ್ತಾನೆ. ಕೊನೆಗೆ ದುಶ್ಯಾಸನನ ಬಿಸಿರಕ್ತದಿಂದ ತನ್ನ ಮುಡಿಯನ್ನು ಅದ್ದಿ ಕಟ್ಟುವುದಾಗಿ ಪ್ರತಿಜ್ಞೆಗೆಯ್ಯುತ್ತಾಳೆ. ಭೀಮನ

ಕೈಯಿಂದ ದುಶ್ಯಾಸನನನ್ನು ಕೊಲ್ಲಿಸಿ ತಾನು ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳುವುದರೊಂದಿಗೆ ಈ ನಾಟಕವು ಸಮಾಪ್ತಿಗೊಳ್ಳುತ್ತದೆ.

ಭಕ್ತಪ್ರಹ್ಲಾದ : ಹಿರಣ್ಯಕಶಿಪುವಿನ ಸಭಾಮಾತು "ಭಲಲಯಲ್ಯೆ ಸಾರಥಿ ಈ ಸಭಾ ಭದ್ರಾಸನಕ್ಕೆ ಬಂದ ಕಾರಣವೇನೆಂದರೆ, ನಿನ್ನಿನ ದಿವಸ ವಿಷ್ಣು ಜಿಷ್ಣು ಮೊದಲಾದವರಿಗೆ ಶ್ರೇಷ್ಠ ಸ್ಥಾನಿಯಾದ ವಿಷ್ಣು ಎಂಬುವವನು ಯುದ್ಧದೋಳ್ ನಮ್ಮ ಅಗ್ರಜನ ವರಹಾವತಾರದಿಂದ ಸಂಹರಿಸಿದನು. ಯಿಕೋ ಇಂಥ ಮೋಸಗಾರ ಕಳ್ಳ–ಸುಳ್ಳ–ಮಾಯಕಾರನ ವೈಕುಂಟವಂ ಗೆದ್ದು ಲೋಕೈಕ ವರಹಿರಣ್ಯಕಶಿಪು ಎಂಬುದಕ್ಕೆ ವರಾವರನಾದ ಬ್ರಹ್ಮನಲ್ಲಿಗೆ ಹೋಗಿ ತ್ರಿಜಗಸ್ಥಾನಿಯೆಂಬ ವರವಂ ಪಡೆದುಕೊಂಡು ಬರುವುದಕ್ಕೆ ಸತ್ಯ ಲೋಕ ಸಮರಸ ನಿಮಿತ್ಯಾರ್ಥವಾಗಿ ಬರೋಣವಾಯಿತು. ಕಂಡೆಯ ಸಾರಥಿ ನೋಡು ಯನ್ನ ಚಮತ್ಕೃತಿ[೩೪]

"ಕಶ್ಯಪ ಮತ್ತು ದಿತಿ ಎನ್ನುವ ದಂಪತಿಗಳಿಗೆ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಎನ್ನುವ ಇಬ್ಬರು ಮಕ್ಕಳು ಹಿರಣ್ಯಕಶಿಪು ದೇವತೆಗಳಿಗೆ ತೊಂದರೆ ಕೊಟ್ಟಾಗ ಅವರು ವಿಷ್ಣುವಿಗೆ ಮೊರೆ ಹೋಗುತ್ತಾರೆ. ಆಗ ವಿಷ್ಣು ಹಿರಣ್ಯಕಶಿಪುವಿನ ಸಂಹಾರಕ್ಕಾಗಿ ಒಬ್ಬನನ್ನು ಕಳುಹಿಸುತ್ತಾನೆ. ವಿಷ್ಣು ಕಳುಹಿಸಿದ ಪುರುಷ ಹಿರಣ್ಯಕಶಿಪುವಿನ ಮಕ್ಕಳಾದ ಪ್ರಹ್ಲಾದನನ್ನು ಒಳಗೊಂಡಂತೆ ಎಲ್ಲರನ್ನೂ ಸೋಲಿಸಿ ಬಿಡುತ್ತಾನೆ. ಆಗ ಹಿರಣ್ಯಕಶಿಪು ಬಂದು ವಿಷ್ಣು ಪುರುಷನ ಎದೆಗೆ ಒದ್ದಾಗ ವಿಷ್ಣು ಪುರುಷನು ಹೆದರಿ ಓಡಿಹೋಗುತ್ತಾನೆ. ಮತ್ತು ನಡೆದುದ್ದೆಲ್ಲವನ್ನು ವಿಷ್ಣುವಿಗೆ ಅರಹುತ್ತಾನೆ. ಆಗ ವಿಷ್ಣು ನರಸಿಂಹನನ್ನು ಕಳುಹಿಸುತ್ತಾನೆ. ಪ್ರಹ್ಲಾದ ಮತ್ತು ಆತನ ಸಹೋದರರಿಂದಲೂ ಈ ನರಸಿಂಹನನ್ನು ಸೋಲಿಸಲಾಗಲಿಲ್ಲ; ಜೊತೆಗೆ ಬೇರೆ ಬೇರೆ ಮಾರ್ಗಗಳನ್ನು ಪ್ರಯೋಗಿಸಿದ್ದಾಗ್ಯೂ ಸಾಧ್ಯವಾಗದಿರುವುದನ್ನು ಪ್ರಹ್ಲಾದನು ತನ್ನ ತಂದೆಗೂ ಸಹ ಶರಣಾಗಲು ಹೇಳಿದರೂ ಕೇಳದ ಹಿರಣ್ಯ ಕಶಿಪು ಯುದ್ಧ ಮಾಡಿ ಪ್ರಾಣತೆತ್ತ. ಉಳಿದವರೆಲ್ಲ ನರಸಿಂಹನ ದೇಹದಿಂದ ಬಂದ ಸಿಂಹಗಳಿಂದ ಹತರಾಗುತ್ತಾರೆ. ಹಿರಣ್ಯಕ್ಷನು ಓಡಿ ಹೋಗುತ್ತಾನೆ. ಆಗ ಪ್ರಹ್ಲಾದ ತನ್ನ ಚಿಕ್ಕಪ್ಪನಿಗೆ ರಾಜ್ಯವನ್ನು ವಹಿಸುತ್ತಾನೆ. ಮತ್ತೆ ಹಿರಣ್ಯಕ್ಷನ ಉಪಟಳ ಹೆಚ್ಚಾದುದರಿಂದ ವಿಷ್ಣು ವರಾಹ ದೇವನ ಆರಾಧನೆಯಲ್ಲಿ ನಿರತನಾಗಿ ದೇವತೆಗಳನ್ನು ವಿಧಿವತ್ತಾಗಿ ಪೂಜಿಸುತ್ತಿದ್ದು ವಿಷ್ಣುವಿನ ವೈಭವದಿಂದ ಅವನ ರಾಜ್ಯ ನಿಷ್ಕಂಟಕವಾಗುತ್ತದೆ.[೩೫]

ತಾಮ್ರಧ್ವಜನ ಕಥೆ : "ಧರ್ಮಜನ ಮಾತು ಅಯ್ಯ ಸಾರಥಿ ನಾವುದಾರೆಂದರೆ ಶ್ರೀಮದನಂತಕೋಟಿ ವಿಸ್ತೀರ್ಣವಾದ ಈ ದಾರಾವಲಯದೊಳ್ ಶ್ರೀಕೃಷ್ಣತ್ವದಿ ವಿರಾಜಿಸುವ ಗಜಪುರಾಧ್ಯಾಕ್ಷ ಅಪ್ಪಜನರ ಮತ್ತು ಪುರಾತರ ಶಿಷ್ಯನೆಂಬಾ ಹೆಸರು ಪಡೆದು ಭೂವಲಯದೊಳ್ ಭಾವತಪ್ಪದೆ ಧರ್ಮಂಗಳಂ ನಾಲ್ಕು ಪಾದಗಳಿಂದು। ನಡೆಸಿದುರ್ಗಣವಂ ಬಿಟ್ಟು। ಕಾಮವಂಸುಟ್ಟು। ಹರಿಷಡ್ವಾರ್ಗದಿಗಳಂ ಬಿಟ್ಟು ಶಾಂತಿಯಂ ತೊಟ್ಟು ಶ್ರೀ ನಾರಾಯಣನ ಪಾದಕಮಲವಂ ಸಾಹಾಸ್ರಾರು ದಳವುಳ್ಳ ಚಕ್ರದಲ್ಲಿ ಸ್ಥಿರಗೊಳಿಸಿ ಸತ್ಯವಂ ಎಡಬಿಡದೆ। ಸ್ಮರಿಸುತ್ತಾ। ಈಜಗದಾಟವಂ ಕಂಡು ಸ್ಮರಿಸುತ್ತಾ ಪಾಪಾತ್ಮರಂ

[illegible]

ಶಿಕ್ಷಿಸಿ ಧರ್ಮಗುಣಗಳಿಗೆ ಅವರ ಮನವಂ ಎಳಸಿ ನಿರ್ಮಲ ಹೃದಯನೆಂಬ ಖ್ಯಾತಿಯಂ ಪಡೆದ ಧರ್ಮಜನಾನಲ್ಲ ವೇನಯ್ಯ ಸಾರಥಿ ಇದನ್ನು ತಿಳಿ ಜಾಗ್ರತಿ.[೩೬] ಮಹಾಭಾರತದ ಯುದ್ಧ ಮುಗಿದಿದೆ. ಈ ಸಂದರ್ಭದಲ್ಲಿ ಕರಿ ತರುಗಳಾದಿಯಾಗಿ ನಾಶಗೊಂಡು ಎಷ್ಟೋ ಪ್ರಾಣಹಾನಿ ಸಂಭವಿಸಿದೆ. ಧರ್ಮರಾಯನಿಗೆ ರಾಜ್ಯಲಕ್ಷ್ಮಿ ಲಭಿಸಿಯಾದ ಮೇಲೆ ಪಾಪ ಪರಿಹಾರಕ್ಕಾಗಿ ತಮ್ಮಂದಿರೆಲ್ಲರನ್ನು ಕುಳ್ಳಿರಿಸಿಕೊಂಡು ಸಮಾಲೋಚನೆ ನಡೆಸುತ್ತಾನೆ. ಅರ್ಜುನನ ಸಲಹೆ ಮತ್ತು ನಾರದರ ಸೂಚನೆಯಂತೆ ಶ್ರೀ ಕೃಷ್ಣನನ್ನು ಕರೆಸಿ ವಿಷಯವನ್ನು ಪ್ರಸ್ತಾಪಿಸುತ್ತಾನೆ. ಒಟ್ಟಿನಲ್ಲಿ ಎಲ್ಲರ ಅಭಿಪ್ರಾಯವೂ ಪ್ರಾಣಹಾನಿ ಮಾಡಿದ ಪ್ರಾಯಶ್ಚಿತ್ತಕ್ಕಾಗಿ ಅಶ್ವಮೇಧಯಾಗವೇ ಸೂಕ್ತ ಎಂದು ನಿಶ್ಚಯವಾಗುತ್ತದೆ. ಘಟೋತ್ಕಚನ ಮಗನಾದ ಮೇಘನಾಥ ಕರ್ಣನ ಮಗನಾದ ವೃಷಕೇತು ಮತ್ತು ಮೇಘನಾಥರಿಬ್ಬರು ಅಶ್ವಮೇಧ ಯಾಗದ ಕುದುರೆಯನ್ನು ತರುತ್ತಾರೆ. ಯಜ್ಞದ ತಯಾರಿ ನಡೆದು ಸಾಲ್ವಪ್ರದ್ಯುಮ್ನ ಅನುಸಾಲ್ವ ಮೊದಲಾದವರನ್ನೊಳಗೊಂಡ ಅರ್ಜುನನ ನೇತೃತ್ವವಿರುತ್ತದೆ. ಹೀಗೆ ಇದರ ವಿಶ್ಲೇಷಣೆಯು ಮುಂದುವರೆಯುತ್ತದೆ.

ಕರಿಭಂಟನ ಕಥೆ : "ಪುಂಡರಿಕಾಕ್ಷಿ ಮಾತು– ಯೇ ಚಂಚಲ ನೇತ್ರಿಯಾದ ಕಟಿಕೆಯೇ ಕೇಳು ಇಂದಿನ ಜನ್ಮದ ವರ್ತಮಾನವನ್ನು। ವಳತಾಗಿಪೇಳೆ। ಅಂಚಗಮನಿಯೆ। ಪಂಚಮುಕವುಳ್ಳ। ಪರಮೇಶ್ವರನಿಗೆ। ಪೂರ್ವಜನ್ಮದಲ್ಲಿ। ಉದ್ದಂಡಿಯಪುಷ್ಪ ದತ್ತನಾಗಿದ್ದು। ವಂದುಕಾಲದಲ್ಲಿ ವಂಚನೆಯನ್ನು। ಮಾಡಿದ ಕಾರಣ ಆಸಾಂಬನಿಂದ ಇವಳಿಗೆ ಶಾಪವುಂಟಾಯಿತು. ಸಕಿವರ ಚಂದ್ರಮುಕೀ ಕಟಿಕಿಮಾತು– ಅಮ್ಮ ದೊರೆಸಾನಿಯೇ ಕೇಳು ಪಾರ್ವತಿ ಪರಮೇಶ್ವರನಿಂದ। ನಿಮಿತವಾದ ಸುಖವನ್ನು ಕೊಡುವ ಸಿದ್ಧೇಶ್ವರನು। ಇದ್ದಾನೆ, ಯಾತಕ್ಕೆ ಚಿಂತೆ ಮಾಡುತ್ತೀಯಮ್ಮ ದೊರೆಸಾನೀ ನೀ ಬಹುಗ್ಯಾ ನೀ".[೩೭]

ಧಾರಪುರದ ಅರಸ ಮಾರಭೂಪಾಲ ಮತ್ತು ಬನವಂತ ದೇವಿಯ ಮಗ ಕರಿಭಂಟ, ಮಾರಭೂಪಾಲನು ತಾನು ಸಾಯುವುದಕ್ಕಿಂತ ಮೊದಲೇ ಹಳೇಬೀಡಿನ ಬಲ್ಲಾಳರಾಯನ ಮಗಳಾದ ಧರಿಣಿ ಮೋಹಿನಿಯೊಂದಿಗೆ ವಿವಾಹ ನಿಶ್ಚಯವನ್ನು ಮಾಡಿ ರಾಜ್ಯಾಧಿಕಾರವನ್ನು ತನ್ನಮಗನಿಗೊಪ್ಪಿಸಿರುತ್ತಾನೆ. ಕರಿಭಂಟ ತನ್ನ ಪರಿವಾರದೊಂದಿಗೆ ಹಳೇಬೀಡಿಗೆ ಹೊರಡುತ್ತಾನೆ. ಮಾರ್ಗಮಧ್ಯದಲ್ಲಿ ಪರಿವಾರವೇ ಒಂದು ಕಡೆ ಈತನೇ ಒಂದು ಕಡೆಯಾಗುತ್ತಾರೆ. ಘೋರಾರಣ್ಯದಲ್ಲಿ ನೀರು ನೆರಳಿಲ್ಲದೆ ಪರಿತಪಿಸುತ್ತಾನೆ. ಅರಣ್ಯದಲ್ಲಿ ತನ್ನನ್ನು ಮುತ್ತಿದ ಸಿಂಗನಾಯಕನನ್ನು ಗೆದ್ದು ಅವನಿಂದ ಕಪ್ಪಕಾಣಿಕೆಯನ್ನು ಸ್ವೀಕರಿಸಿ ಮುಂದೆ ನಡೆಯುತ್ತಾನೆ. ಹೀಗೆ ಸಾಗುತ್ತ ತೊಂಡನೂರು ರಕ್ಕಸಿ ಉದ್ದಾಂಡಿಯು ಮಗಳಾದ ಪುಂಡರೀಕಾಕ್ಷಿಯ ಪರಿಚಯವಾಗುತ್ತದೆ. ಈ ಪರಿಚಯ ಪ್ರೇಮಕ್ಕೆ ತಿರುಗುತ್ತದೆ. ಈ ಹಿಂದೆಯೇ ಉದ್ದಾಂಡಿಯ ತನ್ನ ತಮ್ಮನಾದ ಬೊಮ್ಮರಕ್ಕಸನೊಂದಿಗೆ ತನ್ನ ಮಗಳ ವಿವಾಹ ಮಾಡಲು ಯೋಚಿಸಿರುತ್ತಾಳೆ. ಇದರಿಂದಾಗಿ ವ್ಯಘ್ರಳಾದ ಉದ್ದಂಡಿ ನೇರವಾಗಿ ಕರಿಭಂಟನನ್ನು ಎದುರಿಸಲಾಗದೇ ದೂರಲೋಚನೆಯ ಉಪಾಯವೊಂದನ್ನು ಮಾಡಿ

ಅವನಿಗೆ ವಿವಾಹ ಮಾಡುವುದಾಗಿ ತನ್ನ ಮಗಳನ್ನು ನಂಬಿಸುತ್ತಾಳೆ. ಒಂದು ರಾತ್ರಿ ಕರಿಭಂಟ ಬೊಮ್ಮರಕ್ಕಸ ಮತ್ತು ಪುಂಡರೀಕಾಕ್ಷಿಯನ್ನು ಒಂದೇ ಕೊಠಡಿಯಲ್ಲಿ ಮಲಗುವಂತೆ ಉಪಾಯ ಮಾಡಿ ಕರಿಭಂಟನ ಕಾಲಿಗೆ ಮುತ್ತಿನ ಪೆಂಡೆ ಗುರುತೊಂದನ್ನು ಕಟ್ಟಿಸುವಳು ಇದರ ಮರ್ಮವನ್ನು ಅರಿತ ಪುಂಡರೀಕಾಕ್ಷಿ ಆ ಕಾಲ್ಪೆಂಡೆಯನ್ನು ಬೊಮ್ಮನ ಕಾಲಿಗೆ ಕಟ್ಟಿ ಬೊಮ್ಮನನ್ನು ಉದ್ದಂಡಿಯ ಕೈಯಿಂದಲೇ ಕೊಲ್ಲಿಸುತ್ತಾಳೆ. ಇದರಿಂದ ಮತ್ತಷ್ಟು ಕುಪಿತಳಾದ ಉದ್ದಂಡಿ ಮಾಯ ಬಾಣಂತಿಯ ವೇಷಧರಿಸಿ ಕರಿಭಂಟನನ್ನು ಹಿಂಬಾಲಿಸಿ ಮಲ್ಲಿಗೆಯೂರೆಂಬಲ್ಲಿ ಸಂಧಿಸುತ್ತಾಳೆ. ಆ ಊರಿನ ಗೌಡರನ್ನು ಕೂಡಿಸಿ ಈತ ನನ್ನ ಗಂಡ ನನ್ನನ್ನು ಬಿಟ್ಟು ಹೋಗುತ್ತಿದ್ದಾನೆ ಎಂದು ಗೌಡರನ್ನು ನಂಬಿಸುತ್ತಾಳೆ. ಕರಿಭಂಟ ಸುಳ್ಳು ಎಂದು ವಿಧವಿಧವಾಗಿ ಒಪ್ಪಿಸಲು ಪ್ರಯತ್ನಿಸಿದರೂ ಈತನ ಮಾತನ್ನು ಗೌಡರು ನಂಬದೇ ಹೋಗುತ್ತಾರೆ. ಹೆಣ್ಣಿನ ಮಾತಿಗೆ ಬೆಲೆಕೊಟ್ಟ ಗೌಡರು ಈತನಿಗೂ ಸಹ ಧೈರ್ಯ ತುಂಬಿ ಪ್ರಾಣಾಪಾಯವೇನಾದರೂ ಸಂಭವಿಸಿದರೆ ತಮ್ಮ ಪ್ರಾಣಗಳನ್ನು ಅರ್ಪಿಸುತ್ತೇವೆ ಎಂದು ವಾಗ್ದಾನ ಮಾಡುತ್ತಾರೆ. ಗೌಡರ ಸಲಹೆಯಂತೆ ಆ ಊರಿನ ದೇಗುಲದಲ್ಲಿ ಮಲಗುತ್ತಾರೆ. ಮಧ್ಯರಾತ್ರಿ ಕರಿಭಂಟ ಮತ್ತು ಉದ್ದಂಡಿಯ ನಡುವೆ ಕಾಳಗವಾಗುತ್ತದೆ. ಇಬ್ಬರೂ ಸಮ ಬಲದಿಂದಲೇ ಹೋರಾಡುತ್ತಾರೆ. ಕೊನೆಗೆ ಉದ್ದಂಡಿ ಉಚ್ಚಿದ ರಾಗಿಯನ್ನು ತುಳಿದು ಕೆಳಗೆ ಬೀಳುತ್ತಾನೆ. ಬಿದ್ದ ಕರಿಭಂಟನ ಕರುಳನ್ನು ಬಗೆದು ಸಾಯಿಸುತ್ತಾಳೆ. ರಾಕ್ಷಸಿ ದೇಗುಲದಿಂದ ಹೊರಬಂದು ತನ್ನ ಅಗಾಧವಾದ ಕೂಗಿನಿಂದ ಒಂದು ಬಾರಿ ಕೂಗಿ ಮಾಯವಾಗುತ್ತಾಳೆ. ಇದರಿಂದ ಮನನೊಂದ ಏಳು ಜನ ಗೌಡರು ಪ್ರಾಣಾರ್ಪಣೆ ಮಾಡಿಕೊಳ್ಳುವರು. ಇದನ್ನರಿತ ಪುಂಡರೀಕಾಕ್ಷಿ ಧರಣಿ ಮೋಹಿನಿ ಮತ್ತು ಬನವಂತ ದೇವಿ ಅಗ್ನಿ ಕುಂಡದಲ್ಲಿ ಬೀಳಲು ಮುಂದಾಗುತ್ತಾರೆ. ಕೊನೆಗೆ ಈಶ್ವರ ಪ್ರತ್ಯಕ್ಷನಾಗಿ ಕರಿಭಂಟನನ್ನು ಬದುಕಿಸಿ ಎಲ್ಲರೂ ಸುಖದಿಂದ ಬಾಳಿರೆಂದು ಆರ್ಶಿರ್ವದಿಸುತ್ತಾನೆ. ಹೀಗೆ ಮಿಶ್ರ ಸಾಹಿತ್ಯಕ್ಕೆ ಹೆಸರಾದ ಬಯಲಾಟದ ಹಸ್ತಪ್ರತಿಗಳು ಈ ಚಿತ್ರದುರ್ಗ ಪರಿಸರದಲ್ಲಿ ಸಮೃದ್ಧವಾಗಿವೆ. ಪ್ರತಿಯೊಂದು ಹಳ್ಳಿಗಳಲ್ಲಿ ಕನಿಷ್ಠ ಒಬ್ಬರೂ ಇಬ್ಬರಾರೂ ಬಯಲಾಟಗಳನ್ನು ಹವ್ಯಾಸಿಯಾಗಿ ಸಂಗ್ರಹಿಸಿರುವುದು ಕಂಡುಬರುತ್ತದೆ. ಹವ್ಯಾಸಿ ಲಿಪಿಕಾರರಿಗೆ ಕಲೆ, ಸಾಹಿತ್ಯದ ಒಲವು ಮುಖ್ಯ ಪ್ರೇರಣೆಯಾಗಿರುತ್ತದೆ. ಶಿಕ್ಷಣದಲ್ಲಿ ಹಿಂದುಳಿದಿದ್ದರೂ, ಸಾಹಿತ್ಯದಲ್ಲಿ ಜನ ಸಮ್ಮುಖವಾಗಿ ಸಲ್ಲುವಂತೆ ಬರೆದು ಉಳಿಸಲು ಕಾರಣರಾಗಿದ್ದಾರೆ. ಎಸ್. ಶಿವಣ್ಣನವರು ಚಿತ್ರದುರ್ಗದ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ–೧ರ ಅನುಬಂಧ ಮೂರರಲ್ಲಿ ಕವಿ ಕೃತಿಗಳನ್ನು ಅಕಾರಾದಿಯಲ್ಲಿ ಹೆಸರಿಸಿರುವುದನ್ನು ಮುಖ್ಯವಾಗಿ ಗಮನಿಸಬಹುದು.

ಕವಿಗಳ ಹೆಸರುಗಳು ಇಂತಿವೆ

ಅಕ್ಕಮಹಾದೇವಿ (ಕಾಲ ೧೧೬೦) (ಪ್ರಮುಖವಾಗಿ ಮೊಟ್ಟಮೊದಲ ವಚನಗಾರ್ತಿಯನ್ನು ಹೆಸರಿಸಿರುವುದನ್ನು ನೋಡಬಹುದು.

ಅಭಿವನ ಯಂಗರಸ, (೧೩೯೮) ಅಮರಕುಂಡಯ, ಅರಿತಟ್ಟು ಸಿದ್ದೇಶ (೧೭೪೦) ಅರಿವಿನ ಮಾರಿ ತಂದೆ (೧೩೦೦) ಅರುಣಾಚಲೇಶ (೧೬೦೦) ಅಲ್ಲಮಪ್ರಭುದೇವ (೧೧೬೦) ಅವಧೂತ ಶಿವಯೋಗಿ (೧೬೩೦) ಅವಿರಗಳ ಶಾಂತ, ಅಂಬಿಗರ ಚೌಡಯ್ಯ (೧೧೬೦) ಅಂಬುಲಿಗೆ ಚೆನ್ನ ಮಲ್ಲಯ್ಯ (೧೬೫೦), ಆದಯ್ಯ (೧೧೮೦), ಆದಿಮಲ್ಲನ ಮಾಲೆ, ಬಸವೇಶ, ಗುರುಸಿದ್ಧ (೧೭೨೪) ಇಮ್ಮಡಿ ಗುರುಸಿದ್ದರು, ಇಮ್ಮಡಿ ಮುರುಗಾ ಗುರುಸಿದ್ಧ ಸ್ವಾಮಿಗಳು, ಇಮ್ಮಡಿ ಮುರಿಗೆ ಸ್ವಾಮಿಗಳು, ಈಶ್ವರಕವಿ, ಉಜ್ಜೈನೀಶ, ಚಂದ್ರಮೌಳೀಶ ಬಸವಲಿಂಗ (೧೬೭೯) ಉದ್ದಾನ ಸಿದ್ಧಾಲಿಂಗ ದೇವ, (೧೭೫೦), ಉರಿಲಿಂಗದೇವ, (೧೧೮೦) ಉರಿಲಿಂಗಪೆದ್ದಿ (೧೧೮೦), ಉಳವಿ ಚೆನ್ನಬಸವ, ಎಮ್ಮೆ ಬಸವಣ್ಣ (೧೫೪೩) ಎಳಮಿರೆ ಗುರುಶಾಂತದೇವ (೧೬೨೫) ಎಳಂದೂರು ಹರೀಶ್ವರ (೧೬೦೬) ಒಪ್ಪತ್ತಿನ ಚೆನ್ನವೀರಸ್ವಾಮಿಗಳ ಶಿಷ್ಯ (೧೭೯೦) ಒರತೆಯ ರಾಮಯ್ಯ (೧೪೦೦) ಓದುವಗಿರಿಯ (೧೫೫೦) ಕನಕದಾಸ (೧೫೫೦), ಕಂಪಿನಂಜಯ್ಯ (೧೭೦೦), ಕಪಿಲ ಸಿದ್ಧಲಿಂಗ ಕರತಳೆ ಚೆನ್ನ ನಂಜಯ್ಯ ಕರಸ್ಥಲದ ಇಷ್ಟಬ್ರಹ್ಮಯ್ಯ ಕರಸ್ಥಲದ ನಾಗಿದೇವ (೧೪೩೦) ಕರಸ್ಥಲದ ವೀರಣ್ಣೊಡೆಯ (೧೪೩೦) ಕಲ್ಲರಸ (೧೪೫೦) ಕಲ್ಯಾಣದ ಸ್ವಾಮಿ (೧೫೦೦), ಕಲ್ಯಾಣದೈಯ್ಯ, ಕಲ್ಲುಮಠದ ಪ್ರಭುದೇವ (೧೪೩೦) ಕವಿ ಚೆನ್ನಕವಿಲಿಂಗ (೧೪೯೦) ಕಸ್ತೂರಿಸಿದ್ಧ (೧೭೦೦) ಕಳಲೇ ನಂಜರಾಜ (೧೭೪೦) ಕಂಬಳೀಶ, ಕಂಡಯ್ಯ ಕಾಶಿಕಾಂಡ ಚೆನ್ನವೀರ (೧೫೦೦), ಕಾಶಿ ಗುರುಲಿಂಗದೇವ (೧೭೨೦) ಕಿನ್ನರ ಬ್ರಹ್ಮಯ್ಯ (೧೧೬೦) ಕ್ರಿಯಾಶಕ್ತಿಯರಸ, ಕುನ್ನಪುರಿಮಸ ವೇದಾವತಿ ಮಲ್ಲೇಶಕುಮಾರ ಚೆನ್ನಬಸವ (೧೫೫೦) ಕುಮಾರವ್ಯಾಸ (೧೪೩೦), ಕೂಡಲುರು ಬಸವಲಿಂಗ (೧೮೦೦) ಕೆರೆಯ ಪದ್ಮರಸ (೧೨೦೦), ಕಸ್ತೂರದೇವ (೧೭೦೦), ಕೇತುರಲಿಂಗ, ಕೇಶವಚಂದ್ರಮುನಿ, ಕೇಶಿರಾಜ (೧೨೬೦) ಕೊಟ್ಟೂರ ಬಸವಲಿಂಗ, ಕೊಂಡಗುಳಿ ಕಾಶಿರಾಜ (೧೧೦೭) ಕೋಡಮೊಗ್ಗೆ ಸಿದ್ಧರಾಮ ಕೋಳೂರೇಶ, ಗರ್ದುಗಿನ ಬಸವ, ಗಂಗಾಧರ ಗಂಡುಗತ್ತರಿ ಚೆನ್ನವೀರ (೧೭೦೦) ಗುಟ್ಟಿನ ಸೋಮಶೇಖರ ಗುಬ್ಬಿಪುರದಲ್ಲಿ ನೆಲೆಸಿದ ಚೆನ್ನಬಸವೇಶ್ವರ ಗುಬ್ಬಿಮಲ್ಲಣ್ಣ, ಗುಬ್ಬಿಯಬಲ್ಲಳ್ಳಾ (೧೫೧೩-೩೦), ಗುಬ್ಬಿಯಮಲುಹಣ್ಣರಾಧ್ಯ, ಗುಮ್ಮಟಾರ್ಯ (೧೫೦೦), ಗರುಗೋಹೇಶ್ವರ ವಿರೂಪಾಕ್ಷ ಪ್ರಭುರಾಯ, ಗುರುದೇವ (೧೫೯೨) ಗುರುನಂಜ (೧೫೦೦) ಗುರು ನಿರಂಜನ, ಗುರುಪುರದ, ಮಲ್ಲಿಕಾರ್ಜುನ (೧೪೦೦) ಗುರುಬಸವ (೧೪೩೦), ಗುರುಬಸವಾರ್ಯ, (೧೭೦೦) ಗುರುಲಿಂಗವಿಭು, (೧೫೫೦), ಗುರುವಿರೂಪಾಕ್ಷ, ಗುರುಶಂಭುಲಿಂಗ, ಗುರುಶಾಂತ ಗುರುಶಾಂತಲಿಂಗ, ಗುರುಸಂಗಮೇಶ್ವರ (೧೭೦೦) ಗೌರೀಶ, ಘಟ್ಟಿಲಾಳಯ್ಯ (೧೧೬೦), ಘನಲಿಂಗಿದೇವ, (೧೫೬೧), ಚತುರಾಸ್ಯ, ಬೊಮ್ಮರಸ (೧೪೫೦), ಚನ್ನಮಲ್ಲಪ್ಪ, ಚನ್ನಮಲ್ಲಪ್ರಭುಸ್ವಾಮಿ ಚಂಪಕ ಸಿದ್ದೇಶ, ಚಾಮರಸ (೧೪೩೦), ಚಾವುಂಡರಾಯ (೧೧೫೦), ಚಿಕ್ಕನಂಜೇಶ (೧೬೦೦), ಚಿಕ್ಕಮಲ್ಲಿಕಾರ್ಜುನ (೧೪೦೦), ಚಿಕ್ಕವೀರೇಂದ್ರ, ಚಿದಾನಂದಾವಧೂತ

[illegible]

(೧೭೫೦) ಚೀಲಾಳಸ್ವಾಮಿ (೧೭೫೦), ಚೆನ್ನತುಡುಮೇಶ, ಚೆನ್ನದೇವ (೧೬೦೦), ಚೆನ್ನಬಸವ (೧೧೬೦), ಚೆನ್ನಬಸವೇಶ್ವರ, ಚೆನ್ನಮಲ, ಚೆನ್ನಮಲ್ಲಿಕಾರ್ಜುನ (೧೫೬೦) ಚೆನ್ನಮಲ್ಲಿಕಾರ್ಜುನ (೧೭೦೦), ಚೆನ್ನ ವೀರಾಚಾರ್ಯ (೧೭೦೦), ಚೆನ್ನವೃಷಭೇಂದ್ರಯೋಗಿ (೧೬೫೦) ಚೆಲುವ (೧೭೫೦), ಚೇರಮಾಂಕ (೧೫೨೬), ಜಕ್ಕಣಾರ್ಯ (೧೪೩೦), ಜ್ವಲಕಂಠ ಮಹಾಂತ ಸ್ವಾಮಿ (೧೭೦೦), ಜಿಗುನಿ ಮರುಳಾರ್ಯ (೧೫೮೦), ಜೆಡೆಯಬಸವೇಶ (೧೭೪೦), ಜೇಡರ ದಾಸಿಮಯ್ಯ (೧೧೪೦), ತರಳ ಚರಪತಿ (೧೭೫೦) ತ್ರಿಭುವನತಾತಾ (೧೨೯೦) ತುಂಗಭದ್ರೆ ಕೂಡಲ ಸಂಗಮೇಶ್ವರ ತುಂಗಭದ್ರವಾಸ ಹಂಪೆಯ ವಿರೂಪಾಕ್ಷಲಿಂಗ, ತೋಂಟದ ಸಿದ್ಧಲಿಂಗ (೧೫೬೧), ತೋಂಟದ ಸಿದ್ಧಲಿಂಗಪ್ರಭು, ದೇವರಾಜ (೧೪೧೦) ದೇವೋತ್ತಮ (೧೬೦೦), ಧರಣಿದೇವ, ಧೂಪದರಾಚಯ್ಯ, (೧೭೦೦), ನವಲಗುಂದದ ನಾಗಲಿಂಗಪ್ಪ (೧೯ನೇಶ), ನಂದಿ (೧೬೦೦), ನಂದೀಶ್ವರ, ನಾಗವರ್ಮ (೯೯೦), ನಾಗವರ್ಮ II (೧೦೪೨) ನಂಜೆರಾಜ (೧೩೦೦), ನಿಜಗುಣಶಿವಯೋಗಿ (೧೬೦೦), ನಿಜಗುರುಬಸವ, ನಿಟ್ಟೂರು ನಂಜಯ್ಯ (೧೭೫೦) ನಿಡಗಲ್ಲು ಚೆನ್ನಪ್ಪ (೧೭೦೦), ನಿರಂಜನೇಶ, ನೀಲಕಂಠಾರಾಧ್ಯ (೧೪೮೫) ನೀಲಕಂಠಾರಾಧ್ಯ (೧೫೦೦), ನೀಲವತಿಪುರಧಾಮಕಾಶಿ ಚನ್ವೀರ, ನೂತನಪುರಿ ಧೀರ ಚನ್ನವೀರಭದ್ರ, ಅರಿತಟ್ಟು ಸಿದ್ದೇಶ (೧೭೪೦) ಪದ್ಮಣಾಂಕ (೧೩೮೫), ಪರಂಜ್ಯೋತಿಯತಿ (೧೪೫೦) ಪರಶಿವಲಿಂಗ, ಪರ್ವತಶಿವಯೋಗಿ (೧೭೦೦), ಪರ್ವತೇಶ (೧೬೦೦) ಪಾ(ಲ್ಕುರಿಕೆ) ಸಂಗಯ್ಯ ಪಾ(ಲ್ಕುರಿಕೆ) ಸೋಮನಾಥ (೧೩೦೫), ಪಾರ್ವತೀರಮಣ, ಪುಲಿಗೆರೆ ಸೋಮ (೧೩೦೦), ಪೆಮ್ಮಿಶೆಟ್ಟಿ (೧೫೫೦) ಪೇರೂರ ಭೀಮೇಶ್ವರ, ಬರಹದ ಗುರುನಂಜೇದೇವ (೧೬೦೦), ಬಸವಣ್ಣ (೧೧೬೦), ಬಸವಾಂಕ (೧೫೫೦), ಬಸವಾರಾಧ್ಯ (೧೭೦೦) ಬಳ್ಳೇಶಮಲ್ಲಯ್ಯ (೧೧೬೦) ಬುಕ್ಕುಂಬುಧಿ ಆರಾಧ್ಯ, ಮಲ್ಲಿಕಾರ್ಜುನ, ಬೊಮ್ಮರಸ (೧೪೫೦) ಭಕ್ಷದ ಸಂಗಯ್ಯ, ಭೀಮಕವಿ (೧೩೬೯), ಮಡಿವಾಳದೇವಯ್ಯ, ಮಡಿವಾಳಯ್ಯ (೧೧೬೦), ಮದ್ದುಗ್ರು ಚೆನ್ನ ಶಾಂತಮಲ್ಲ ಮದ್ದುಗ್ರುಶಾಂತ, ಮರಿಗುರುಲಿಂಗದೇವ, ಮರಿಯಪ್ಪ ಸೆಟ್ಟಿ (೧೮೦೦), ಮರಿರಾಚವಟ್ಟೇಶ (೧೬೨೦) ಮರಿಸಿದ್ಧಲಿಂಗ (೧೭೪೧), ಮರುಳಸಿದ್ದಾಸ್ವಾಮಿ, (೧೭೦೦), ಮಲ್ಲನಮೂಲೆಯ ಬಸವೇಶ, ಮಲ್ಲಿಕಾರ್ಜುನ (೧೫೯೩), ಮಲ್ಲಿಕಾರ್ಜುನೋಡೆಯ, ಮಲ್ಲು (೧೭೦೦), ಮಹಲಿಂಗರಂಗ (೧೬೭೫), ಮಹಾಂತ ಶಿವಯೋಗಿ (೧೭೦೦), ಮಹಾಂತಸ್ವಾಮಿ (೧೭೦೦), ಮಹಾದೇವ (೧೭೦೦), ಮಹಾಲಿಂಗದೇವ (೧೪೭೦), ಮದೇಶ, ಮಂಗರಾಜ I (೧೩೬೦), ಮಾದಣಾಂಕ (೧೬೫೦), ಮಾರಿತಂದೆ (೧೧೬೦) ಮುಖಚೋಳ ಸಿದ್ಧರಾಮ (೧೫೯೬), ಮುದ್ದಿರಲಿಂಗ (೧೭೫೦), ಮುಪ್ಪಿನ ಷಡಕ್ಷರಿ (೧೬೦೦), ಮುಮ್ಮಡಿ ತಮ್ಮ (೧೬೬೫) ಮುರಿಗಾಸಿದ್ಧಿಲಿಂಗ (೧೭೮೦) ಮುರಿಗೆ ದೇಶಿಕ (೧೭೩೦), ಮುರಿಗೆಯ ದೇವ (೧೭೩೦), ಮುರಿಗೆ ಶಾಂತವೀರ (೧೭೦೩), ಮುರಿಗೆ ಶಾಂತವೀರೇಶ್ವರ (೧೩೩೦), ಮುಸುಕಿನ, ಸಂಗಯ್ಯ (೧೬೦೦),

ಮೇದಿನಿರಾಯ (೧೭೦೦) ಮೈಲಾರದ ಬಸವಲಿಂಗ (೧೮೦೦) ಮೊಗ್ಗೆಮಾಯದೇವ (೧೪೩೦) ಯಲಬುರ್ಗಿವಾಸ ಸಿದ್ದರಾಮೇಶ, ರತ್ನಾಕರವರ್ಣಿ (೧೫೫೭), ರಾಘವಾಂಕ (೧೨೦೦), ರಾಮಚಂದ್ರ ಗುರುಶಿವ (೧೫೫೦), ರಾಮಪುರದಬೊಕ್ಕಪ್ಪ (೧೭೦೦), ರಾಮರಸವಿರೂಪಾಕ್ಷ (೧೫೩೮), ರಾಯಮ್ಮ (೧೧೬೦), ರಾಯಸದಬಂಕಣ್ಣ (೧೧೬೦), ರಾವೂರ ವೊರತೆ ಸೋಮಯ್ಯ (೧೬೫೦), ರೇವಣ್ಣಸಿದ್ಧ (೧೧೬೦), ಲಕ್ಷ್ಮೀಶ (೧೫೫೦) ಲಿಂಗಮಂತ್ರಿ (೧೫೩೦), ವರತೆಯ ಸೋಮಯ್ಯ (೧೬೫೦) ವಿಠ್ಠಲ (೧೧೩೦) ವಿರಕ್ತಗುರು ಸಿದ್ಧಲಿಂಗೇಶ (೧೬೦೦) ವಿರಕ್ತಲೀಲಾಖ್ಯಾದ ಚನ್ನಬಸವೇಶ, ವೀರಕ್ತ ಲೀಲಾಖ್ಯದ ಮುರುಗೇಂದ್ರ, ವಿರತ ತೋಂಟದಾರ್ಯ (೧೬೧೬), ವಿರತಮಹಾಲಿಂಗ (೧೬೦೦), ವಿರಕ್ತ ಸಿದ್ಧಲಿಂಗ (೧೬೦೦), ವಿರುಪಾಕ್ಷ, ವಿರೂಪಾಕ್ಷ ಪಂಡಿತ (೧೫೮೪), ವಿರೂಪಾಕ್ಷಲಿಂಗ, ವೀರಣಾರ್ಯ, ವೀರಭದ್ರ ದೇವರು, ವೀರಭದ್ರರಾಜ (೧೫೫೦), ವೆಂಕಟ (೧೭೫೦), ವೆಂಕಟದಾಸ (೧೭೫೦), ವೇದ ಮೂರ್ತಿ ಸಂಗಣ್ಣ (೧೧೬೦) ವೈದ್ಯ ಸಂಗಯ್ಯ (೧೧೬೦) ಶಂಕರದೇವ (೧೬೦೦), ಶಂಭುಲಿಂಗ, ಶಂತ ಬಸವೇಶ (೧೭೦೦), ಶಾಂತಮಲ್ಲ (೧೭೦೦), ಶಾಂತಮಲ್ಲೇಶ (೧೭೦೦) ಶಾಂತಲಿಂಗದೇಶಿಕ, ಶಾಂತವೀರ (೧೭೫೦), ಶಾಂತವೀರೇಶ (೧೭೫೦), ಶಾಂತವೀರೇಶಲಿಂಗ (೧೭೫೦), ಶಾಂತಾಚಾರ್ಯ (೧೭೦೦), ಶಾಂತೇಶ (೧೫೬೧), ಶಿವಗಣಪ್ರಸಾದಿ ಮಹಾದೇವಯ್ಯ (೧೪೨೦), ಶಿವಲಿಂಗ (೧೭೦೦), ಶಿವಲಿಂಗಾಖ್ಯ (೧೭೦೦), ಶ್ರೀಗುರು ಸದಾಶಿವಯೋಗಿ ಶ್ರೀಧರಾಂಕ (೧೪೫೦), ಷಡಕ್ಷರದೇವ (೧೬೫೫–೭೭), ಷಣ್ಮುಖಸ್ವಾಮಿ (೧೭೦೦), ಸಚ್ಚಿದಾನಾಂದಾಶ್ರಮಯೋಗಿ ಸತಕ್ಕ (೧೧೬೦), ಸದ್ಗುರು ಭಾರತೀಶಿವು, ಸದ್ಗುರು ಶಾಂತ, ಸರ್ವಜ್ಞ (೧೫೫೦), ಸಂಗ, ಸಂಗಮನಾಥ, ಸಂಗಮೇಶ, ಸಂ(ಪಾದನೆ) ಚೆನ್ನಂಜೇದೇವ, (೧೫೮೦), ಸಂ(ಪಾದನೆ), ಬೋಳಬಸವ (೧೭೦೦), ಸಂ(ಪಾದನೆ) ಸಿದ್ಧವೀರಣ್ಣಾಂಡೆಯ (೧೬೦೦), ಸ್ವತಂತ್ರ ಸಿದ್ಧಲಿಂಗ, ಸಾಸಲ ಸೋಮರಾಧ್ಯ, ಸಾಂಬಯ್ಯ (೧೭೫೦), ಸ್ವಾದಿ ಬಸವಲಿಂಗ (೧೭೨೦), ಸಿದ್ಧನಂಜೇಶ (೧೬೦೦), ಸಿದ್ಧಮಲ್ಲ (೧೭೦೦), ಸಿದ್ಧರಾಮ (೧೧೬೦), ಸಿದ್ಧಲಿಂಗ, ಸಿದ್ಧವೀರಯ್ಯ, ಸಿದ್ಧಶಾಂತ ಸಿಂಗಳದ ಸಿದ್ಧಬಸವ (೧೬೦೦), ಸಿಂಗಿರಜ (೧೫೦೦), ಸುಬ್ಬರಾಯದಾಸ, ಸುಬ್ರಹ್ಮಣ್ಯ, ಸುರಂಗ, ಸೆಜ್ಜೆ ಸಿದ್ಧಲಿಂಗ (೧೬೬೫), ಸೋ(ಮನಹಳ್ಳಿ) ಚಿಕ್ಕವೀರಣ್ಣೊಡೆಯ (೧೬೦೦), ಸೋಮೇಕಟ್ಟೆ ಚೆನ್ನವೀರಸ್ವಾಮಿ (೧೮೦೦), ಸೋ(ಸಲೆ) ರೇವಣಾರಾಧ್ಯ (೧೬೨೩), ಹ(ಡಪದ) ಅಪ್ಪಣ್ಣ (೧೧೬೦), ಹಡಪದ ರೇಚಣ್ಣ (೧೧೬೦), ಹ(ರದನಹಳ್ಳಿ), ನಂಜಣಾರ್ಯ (೧೬೦೦), ಹೆಂಡೆಮಲ್ಲಪ್ಪ (೧೮೦೦), ಹಂಪೆಯ ಹರಿಹರ (೧೨೦೦), ಹಾ(ಗಲವಾಡಿ), ಮುದ್ದೀರಸ್ವಾಮಿ (೧೭೩೮) ಹೀರಣ್ಯದೇವ (೧೫೬೧), ಹುಬ್ಬಳ್ಳಿಸಂಗಯ್ಯ (೧೭೦೦), ಹಾ(ಮನಾಬಾದಿನ) ನಿರಂಜನಸ್ವಾಮಿ (೧೮೦೦), ಹೇರಂಬ (ನಾರಾಯಣ) (೧೭೪೦–೫೦) ಹೊನ್ನುಳಿಸಿದ್ಧಲಿಂಗಪ್ಪ (೧೮೫೦).[೩೮] ಇಲ್ಲಿ ಇವರ ಹೆಸರಿನೊಂದಿಗೆ ಕಾಲವನ್ನು ಸಹ

ಕೊಟ್ಟಿರುವುದರಿಂದ ಅವರ ಕಾಲವನ್ನು ತಿಳಿದುಕೊಳ್ಳುವುದಕ್ಕೆ ಸಹಾಯಕವಾಗುತ್ತದೆ. ಪ್ರಮುಖ ಕವಿಗಳಲ್ಲದೇ ಎಲ್ಲ ವರ್ಗದ ಕವಿಗಳನ್ನು ಹೆಸರಿಸಿರುವುದು ಪ್ರಶಂಸನೀಯ. ಶಿವಣ್ಣನವರು ಹೆಸರಿಸಿರುವ ಪ್ರಮುಖ ಕವಿಗಳ ಬಗ್ಗೆಯೂ ಹಾಗೂ ಇಂದು ಅವರ ಸಾಹಿತ್ಯಗಳ ಬಗ್ಗೆ ಪರಿಚಯಿಸುವ ಕಾರ್ಯವನ್ನು ಮಾಡಬೇಕಾಗಿದೆ. ಇವರ ಸಂಪಾದನೆಯ ಕೃತಿಯಲ್ಲಿ ಕವಿಗಳು ಬರೆದಿರುವ ಕೃತಿಗಳ ಮೇಲೆ ಅವರು ಯಾವ ಕಾಲಕ್ಕೆ ಸೇರಿದ್ದಾರೆಂಬುದನ್ನು ಗುರುತಿಸಬಹುದಾಗಿದೆ. ಇಲ್ಲಿ ಸಾಹಿತ್ಯ ಪ್ರಕಾರದ ಮೂಲಕವಾಗಿ ಸಾಹಿತ್ಯ ರಚನೆಯಾಗಿರುವುದರಿಂದ ಕವಿಗಳ ಕಾಲವನ್ನು ಗುರುತಿಸುವುದಕ್ಕೆ ನೆರವಾಗುತ್ತದೆ. ಇಲ್ಲಿ ಪ್ರಮುಖವಾಗಿ ವಚನ, ರಗಳೆ, ಸಾಂಗತ್ಯ, ತಾರಾವಳಿ, ಟೀಕೆ, ಷಟ್ಪದಿ, ಚರಿತ್ರೆ, ಲೌಕಿಕ ಕೃತಿಗಳನ್ನು ನೋಡಬಹುದು.

೧. ವಚನಕ್ಕೆ ಸಂಬಂಧಿಸಿದ ಕೃತಿಗಳು :

ಮಹಾದೇವಿಯಕ್ಕನ– ಅಕ್ಕಗಳಸೃಷ್ಟಿಯ ವಚನ, ಕ್ರ.ಸಂ.೩.), ಅಖಂಡೇಶ್ವರನ ವಚನ (ಕ್ರ.ಸಂ. ೧೦೦), ಅಮರನೀತಿಗಳ ವಚನ (ಕ್ರ.ಸಂ. ೧೬೫), ಅರಿವಿನ ವಚನ (ಕ್ರ.ಸಂ. ೧೭೬), ಅಷ್ಟಾವರಣದ ಸ್ತೋತ್ರದವಚನ (ಕ್ರ.ಸಂ. ೨೩೬), ಆಚರಣೆಯವಚನ (ಕ್ರ.ಸಂ. ೨೭೮), ಆಚರಣೆಯ ಸಂಬಂಧದವಚನ (ಕ್ರ.ಸಂ. ೨೮೭), ಇನ್ನೂರ ಇಪ್ಪತ್ತೈದು ಸಕೀಲದ ವಚನ (ಕ್ರ.ಸಂ. ೩೧೬), ಇಪ್ಪತ್ತೊಂದು ಸಾವಿರದ ಆರುನೂರ ಜಪಾನು ಭಾವದ ವಚನ (ಕ್ರ.ಸಂ. ೩೧೯), ಉದ್ಧರಣೆ ವಚನ (ಕ್ರ.ಸಂ. ೩೫೦), ಎಲ್ಲಾಪುರಾತನರು ನಿರೂಪಿಸಿದ ಬೆಡಗಿನ ವಚನ (ಕ್ರ.ಸಂ. ೩೮೯), ಎಂಟು ಸ್ವರಜಪದ ಉದ್ಧರಣೆಯ ಲಕ್ಷಣದ ವಚನ (ಕ್ರ.ಸಂ. ೩೯೫), ಕಲ್ಯಾಣದ ಮಹಾತ್ಮೆಯ ವಚನ (ಕ್ರ.ಸಂ. ೫೫೩) ಕಾಲಚಕ್ರದ ವಚನ (ಕ್ರ.ಸಂ. ೫೮೨), ಕಾಲಜ್ಞಾನವಚನ (ಕ್ರ.ಸಂ. ೫೯೨), ಗುರುಕಾರುಣ್ಯದ ವಚನ (ಕ್ರ.ಸಂ. ೬೮೦), ಘಟ ಚಕ್ರದ ವಚನ (ಕ್ರ.ಸಂ. ೭೫೯), ಘಟ್ಟಿವಾಳಯ್ಯಗಳ ವಚನ (ಕ್ರ.ಸಂ. ೭೬೪), ಘನಲಿಂಗಿದೇವರ ವಚನ (ಕ್ರ.ಸಂ. ೭೬೬), ಜಂಗಮ ಸ್ಥಲದ ವಚನ (ಕ್ರ.ಸಂ. ೮೮೫), ನವಚಕ್ರದವಚನ (ಕ್ರ.ಸಂ. ೧೦೩೧), ಪಂಚೀಕರಣದ ವಚನ (ಕ್ರ.ಸಂ. ೧೩೩೭), ಪ್ರಭುದೇವರ ಟೀಕಿನ ವಚನ (ಕ್ರ.ಸಂ. ೧೩೪೭), ಪ್ರಭುದೇವರ ವಚನ ವ್ಯಾಖ್ಯಾನ (ಕ್ರ.ಸಂ. ೧೪೦೯), ಪ್ರಭುದೇವರ ಷಟ್ಸ್ಥಲ ವಚನ ಟೀಕು (ಕ್ರ.ಸಂ. ೧೪೧೦), ಪ್ರಭುದೇವರ ಸೃಷ್ಠಿಯ ವಚನ (ಕ್ರ.ಸಂ.೧೪೧೧), ಪ್ರಭುದೇವರು ನಿರೂಪಿಸಿದ ಸೃಷ್ಠಿಯ ವಚನ (ಕ್ರ.ಸಂ. ೧೪೪೭), ಪ್ರಸಾದಿ ಸ್ಥಲವಚನ (ಕ್ರ.ಸಂ. ೧೪೯೮), ಪುರಾತರವಚನ (ಕ್ರ.ಸಂ. ೧೫೨೧), ಬಸವನ್ನನವರ ವಚನ (ಕ್ರ.ಸಂ. ೧೫೩೭), ಬಸವಣ್ಣನವರ ವಚನ ಷಡಸ್ಥಲದೇವಚನ (ಕ್ರ.ಸಂ.೧೫೩೯), ಬಸವರಾಜ ದೇವರ ಷಡುಸ್ಥಾಲದ ವಚನ (ಕ್ರ.ಸಂ. ೧೫೫೬), ಬಸವ ಸ್ತೋತ್ರದ ವಚನ (ಕ್ರ.ಸಂ. ೧೫೯೯), ಬಸವೇಶ್ವರ ದೇವರ ಷಟ್ಸ್ಥಲದ ವಚನ (ಕ್ರ.ಸಂ. ೧೬೦೫), ಬಸವೇಶ್ವರ ದೇವರ ಸ್ತೋತ್ರದ ವಚನ (ಕ್ರ.ಸಂ. ೧೬೦೬), ಬೆಡಗಿನ ವಚನ (ಕ್ರ.ಸಂ. ೧೬೬೮), ಬೆಡಗಿನ ವಚನ ಟೀಕೆ (ಕ್ರ.ಸಂ. ೧೬೬೯), ಮಿಶ್ರ ಸ್ತೋತ್ರದ

ವಚನ (ಕ್ರ.ಸಂ. ೨೦೦೩), ಮೂವತ್ತಾರು ಸಕೀಲದ ವಚನ (ಕ್ರ.ಸಂ. ೨೧೩೯), ಯುಗದ ವಚನ (ಕ್ರ.ಸಂ.೨೦೫೪), ರಾಜಯೋಗದ ವಚನ (ಕ್ರ.ಸಂ. ೨೧೭೨), ಲಿಂಗ ಸೂತ್ರದ ವಚನ (ಕ್ರ.ಸಂ. ೨೨೩೮), ವಚನಏಕೋತ್ತರ (ಕ್ರ.ಸಂ. ೨೩೧೫), ವಚನ ಶಿಖಾಮಣಿ (ಕ್ರ.ಸಂ. ೨೩೨೨), ವಚನ ಸಂಕಲನ (ಕ್ರ.ಸಂ. ೨೩೨೩), ವಚನಸಾರ (ಕ್ರ.ಸಂ. ೨೩೨೪), ವಿಕಳಾವಸ್ಥೆಯ ವಚನ (ಕ್ರ.ಸಂ. ೨೩೩೯), ಶಬರಶಂಕರ ಘಟ್ಟಿ ಘಟ್ಟಿ ವಚನ (ಕ್ರ.ಸಂ. ೨೫೧೪), ಶರಣಸ್ತೋತ್ರದ ವಚನ (ಕ್ರ.ಸಂ. ೨೫೫೨), ಶಾಂಭಲಿಚಕ್ರೋದ್ಧರಣೆ ವಚನ (ಕ್ರ.ಸಂ. ೨೬೫೩), ಷಟ್ಸ್ಥಲದ ವಚನಗಳು (ಕ್ರ.ಸಂ. ೨೮೯೬), ಷಟ್ಸ್ಥಲದ ಸ್ತೋತ್ರದ ವಚನ (ಕ್ರ.ಸಂ. ೨೮೯೭) ಷಟ್ಸ್ಥಲ ಬ್ರಹ್ಮಸೂಚನಾ ನಿರ್ವಚನ (ಕ್ರ.ಸಂ. ೨೮೯೮), ಷಡಕ್ಷರದೇವರ ವಚನ, (ಕ್ರ.ಸಂ. ೨೯೫೪), ಷಡಸ್ಥಲದ ವಚನ (ಕ್ರ.ಸಂ. ೨೯೬೪), ಷಡುಸ್ಥಲ ನಿರಸನದ ವಚನ (ಕ್ರ.ಸಂ. ೨೯೬೯), ಸಕಲಗಣಗಳ ವಚನ (ಕ್ರ.ಸಂ.೨೯೭೧), ಸರ್ವಾಂಲಿಗಲಿಂಗಸ್ಥಲದ ವಚನ (ಕ್ರ.ಸಂ. ೩೦೧೬), ಸಂಬಂಧದ ವಚನ (ಕ್ರ.ಸಂ. ೩೦೨೮), ಸಮ್ಮಂಧಾಚರಣೆಯ ವಚನ, (ಕ್ರ.ಸಂ. ೩೦೩೨), ಸ್ವತಂತ್ರ ಸಿದ್ಧಲಿಂಗೇಶ್ವರ ವಚನ (ಕ್ರ.ಸಂ. ೩೦೩೮), ಸ್ವತಂತ್ರ ಸಿದ್ಧಲಿಂಗೇಶ್ವರ ವಚನ ಟೀಕೆ (ಕ್ರ.ಸಂ. ೩೦೩೯), ಸ್ವರ ವಚನ (ಕ್ರ.ಸಂ.೩೦೫೩), ಸ್ವರ ವಚನದ ವ್ಯಾಖ್ಯಾನ (ಕ್ರ.ಸಂ. ೩೦೭೦), ಸಿದ್ದೇಶ್ವರನ ವಚನ (ಕ್ರ.ಸಂ.೩೧೭೦), ಸೃಷ್ಟಿಯ ವಚನ (ಕ್ರ.ಸಂ. ೩೯೯೧), ಹಡಪದಪ್ಪಣ್ಣಗಳ ವಚನ (ಕ್ರ.ಸಂ. ೩೨೭೨), ಶರಣಸ್ತೋತ್ರದ ವಚನ (ಕ್ರ.ಸಂ.೨೫೫೨), ಘನಲಿಂಗಿ ದೇವರ ವಚನ (ಕ್ರ.ಸಂ. ೭೬೬-೬೯), ಘಟಸಕ್ರದ ವಚನ (ಕ್ರ.ಸಂ. ೯೧೦-೧೩) ಕಲ್ಯಾಣದ ಮಹಾತ್ಮೆಯ ವಚನ (ಕ್ರ.ಸಂ. ೨೩೬೫), ಸ್ವರವಚನ (ಕ್ರ.ಸಂ. ೩೦೫೩), ರಾಯಮ್ಮನ ವಚನ (ಕ್ರ.ಸಂ. ೩೨೮೭), ವೇದಮೂರ್ತಿ, ಸಂಗಣ್ಣನ ವಚನ (ಕ್ರ.ಸಂ. ೨೨೯೬), ವೈದ್ಯ ಸಂಗಯ್ಯ ವಚನ (ಕ್ರ.ಸಂ. ೨೨೯೯), ಸತ್ಯಕ್ಕನ ವಚನ (ಕ್ರ.ಸಂ. ೨೨೯೫), ಗುರುರಾಯ ಚರಿತ್ರೆದೊಳಗಣ ಗುರುಬೋಧನಾ ಸ್ಥಲದ ವಚನ (ಕ್ರ.ಸಂ. ೭೨೮), ಅಮರ ನೀತಿಗಳ ವಚನ (ಕ್ರ.ಸಂ. ೧೬೫), ಪರಮ ಮೂಲಜ್ಞಾನ ಷಟ್‌ಸ್ಥಲದ ವಚನ (ಕ್ರ.ಸಂ. ೧೨೦೫), ಗುರುಕಾರುಣ್ಯದ ವಚನ (ಕ್ರ.ಸಂ. ೬೮೦), ನವ ಚಕ್ರದ ವಚನ (ಕ್ರ.ಸಂ.೧೧೩೩-೩೪), ಹಾಗಲವಾಡಿ ಮುದ್ದೀರಸ್ವಾಮಿ ವಚನ (ಕ್ರ.ಸಂ. ೨೨೮೭), ಇನ್ನು ಮುಂತಾದ ವಚನಗಳನು ನೋಡಬಹುದಾಗಿದೆ.

೨. ರಗಳೆ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೃತಿಗಳು :

ಅಮ್ಮವ್ವೆಯ ರಗಳೆ (ಕ್ರ.ಸಂ. ೧೭೦), ಅರವತ್ತು ಮೂವರ ರಗಲೆ (ಕ್ರ.ಸಂ.೧೭೪), ಅಸಂಖ್ಯಾತ ಪುರಾತನರಗಳೆ (ಕ್ರ.ಸಂ. ೨೭೦), ಇಷ್ಟಲಿಂಗ ರಗಳೆ (ಕ್ರ.ಸಂ. ೩೨೯), ಕಲಿಗಣನಾಥ ರಗಳೆ (ಕ್ರ.ಸಂ. ೫೬೧), ಗುರುರಗಲೆ (ಕ್ರ.ಸಂ. ೬೯೦), ಚೆನ್ನಬಸವ ರಗಳೆ (ಕ್ರ.ಸಂ. ೮೧೨), ಜರೂರ ರಗಳೆ (ಕ್ರ.ಸಂ.೮೮೦), ಜಂಗಮ ರಗಳೆ (ಕ್ರ.ಸಂ.೮೮೪), ನೂತನ ಪುರಾತನ ರಗಳೆ (ಕ್ರ.ಸಂ. ೧೧೬೩), ಪಂಚಾಕ್ಷರಿ ರಗಳೆ (ಕ್ರ.ಸಂ.೧೨೮೫), ಪ್ರಭುದೇವರ ರಗಳೆ (ಕ್ರ.ಸಂ.

೧೪೦೮), ಪುನದಿಣೆಕ್ಷರಗಳೆ (ಕ್ರ.ಸಂ. ೧೫೧೨), ಬಸವೇಶ್ವರನ ಎಂಬತ್ತೆಂಟು ಪವಾಡದ ರಗಳೆ (ಕ್ರ.ಸಂ. ೧೬೦೮), ಬಸವೇಶ್ವರನ ಪವಾಡದ ರಗಳೆ (ಕ್ರ.ಸಂ.೧೬೧೨) ಭಕ್ತಿ ಭಿನ್ನಾಹದ ರಗಳೆ (ಕ್ರ.ಸಂ.೧೬೭೪), ಭೀಮಕವೀಶ್ವರ ರಗಳೆ (ಕ್ರ.ಸಂ. ೧೭೩೯), ಭಂಗೀಶ್ವರನ ರಗಳೆ (ಕ್ರ.ಸಂ. ೧೭೫೧), ಮದ್ದುಗುರು ಬಸವರಗಳೆ (ಕ್ರ.ಸಂ.೧೮೦೬), ಮನೋವ್ಯಾಕುಲನಿರಸನ ರಗಳೆ (ಕ್ರ.ಸಂ. ೧೮೦೮), ಮಹಾರಗಳೆ (ಕ್ರ.ಸಂ. ೧೯೨೪), ರುದ್ರಾಕ್ಷಿರಗಳೆ (ಕ್ರ.ಸಂ. ೨೨೦೨), ಲಿಂಗ ರಗಳೆ (ಕ್ರ.ಸಂ.೨೨೨೫), ಲಿಂಗಾರ್ಚನೆಯ ರಗಳೆ (ಕ್ರ.ಸಂ.೨೨೭೭), ವಾಹಿಲ್ಯಭಕ್ತರ ರಗಳೆ (ಕ್ರ.ಸಂ.೨೩೫೭), ವಿಭೂತಿ ರಗಳೆ (ಕ್ರ.ಸಂ.೨೩೬೬), ವೀರಶೈವ ರಗಳೆ (ಕ್ರ.ಸಂ.೨೪೦೧), ಶರಣುಬಸವ ರಗಳೆ (ಕ್ರ.ಸಂ.೨೫೫೩), ಶಿವಗಣಂಗಳ ರಗಳೆ (ಕ್ರ.ಸಂ.೨೬೮೯), ಷಡಕ್ಷರ ಮಂತ್ರ ರಗಳೆ (ಕ್ರ.ಸಂ ೨೯೦೫), ಷಡಕ್ಷರಗಳೆ (ಕ್ರ.ಸಂ.೨೯೦೬), ಶಂಕರದೇವ ಕವಿಯ ಷಡಕ್ಷರಗಳೆ (ಕ್ರ.ಸಂ.೨೯೦೭), ಸದ್ಗುರುರಗಳೆ (ಕ್ರ.ಸಂ. ೨೯೮೩), ಸೋಮಾಸಿಮಾರರಗಳೆ (ಕ್ರ.ಸಂ.೨೨೨೩), ಹೀಗೆಯೇ ರಗಳೆ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ನೋಡಬಹುದು.

೩. ಸಾಂಗತ್ಯ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು :

ಅಮುಗಿದೇವಯ್ಯಗಳ ಸಾಂಗತ್ಯ (ಕ್ರ.ಸಂ.೧೭೧), ನನ್ನಯ್ಯನ ಸಾಂಗತ್ಯ (ಕ್ರ.ಸಂ.೯೫), ಪ್ರಸಾದ, ಸಾಂಗತ್ಯ (ಕ್ರ.ಸಂ.೧೮೯೭), ಮಡಿವಾಳಪ್ಪನ ಸಾಂಗತ್ಯ (ಕ್ರ.ಸಂ.೧೭೭೮), ಮಡಿವಾಳಯ್ಯನ ಸಾಂಗತ್ಯ (ಕ್ರ.ಸಂ.೧೭೮೦) ಹರಿಶ್ಚಂದ್ರ ಸಾಂಗತ್ಯ (೩೨೮೬), ಸಾನಂದ ಗಣೇಶನ ಸಾಂಗತ್ಯ (ಕ್ರ.ಸಂ.೩೦೮೧), ಸಾನಂದ ಗಣೇಶ್ವರ ಸಾಂಗತ್ಯ (ಕ್ರ.ಸಂ.೩೦೮೨), ಅಮುಗಿದೇವನ ಸಾಂಗತ್ಯ, (ಕ್ರ.ಸಂ ೨೯೨) ಹೀಗೆ ಸಾಂಗತ್ಯ ಕೃತಿಗಳನ್ನು ನೋಡಬಹುದು.

೪. ಚರಿತ್ರೆಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳು :

ಆರಾಧ್ಯ ಚಾರಿತ್ಯ (ಕ್ರ.ಸಂ.೩೧೨) ಇಷ್ಟಲಿಂಗಜಾರಿತ್ರ (ಕ್ರ.ಸಂ.೩೨೭) ಗುರುಭಕ್ತಾಂಡಾರಿ ಚರಿತೆ (ಕ್ರ.ಸಂ. ೬೮೮) ಗುರು ಭಕ್ತಾಂಡಾರಿಯರ ಚರಿತ್ರೆ (ಕ್ರ.ಸಂ. ೬೮೯) ಘಟ್ಟಿಮಳಯ್ಯನ ಚರಿತೆ (ಕ್ರ.ಸಂ.೭೬೫) ಜ್ಞಾನಚರಿತ್ರೆ (ಕ್ರ.ಸಂ.೮೮೬) ನನ್ನಯ್ಯನಗಳ ಚಾರಿತ್ರ (ಕ್ರ.ಸಂ.೯೮೪), ನನ್ನಯನ ಚಾರಿತ್ರ (ಕ್ರ.ಸಂ.೯೬), ಪ್ರಾಣಲಿಂಗಿಜ್ಞಾನದರ್ಪಣ ಚಾರಿತ್ರ (ಕ್ರ.ಸಂ.೧೫೦೮) ಬಸವ ಚಾರಿತ್ರ (ಕ್ರ.ಸಂ.೧೫೩೪), ಭಿಕ್ಷ್ಮಾಣ ಚರಿತೆ (ಕ್ರ.ಸಂ.೧೭೨೧) ಭಿಕ್ಷಾಟನ ಚರಿತ್ರ (ಕ್ರ.ಸಂ.೧೭೩೮) ಬೈರವೇಶ್ವರನ ಚಾರಿತ್ರ (ಕ್ರ.ಸಂ.೧೭೭೬) ಶುಕಮುನಿ ಚಾರಿತ್ರ (ಕ್ರ.ಸಂ.೨೮೩೧) ಷಟ್ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ್ಯ (ಕ್ರ.ಸಂ.೨೮೯), ಸಾಸಲ ಭೈರವೇಶ್ವರ ನ ಚರಿತ್ರೆ (ಕ್ರ.ಸಂ.೩೮೯), ಸಿರಿಯಾಳಸೆಟ್ಟಿ ಚಾರಿತ್ರ (ಕ್ರ.ಸಂ.೩೧೭೭) ಹೀಗೆ ವ್ಯಕ್ತಿಗಳ ವೈಯಕ್ತಿಕ ಚರಿತ್ರೆಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳನ್ನು ನೋಡಬಹುದಾಗಿದೆ.

೫. ಷಟ್ಪದಿ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು :

ಅನಾದಿ ವೃಷಭೇಶ್ವರನ ಉದ್ಧರಣೆಯ ವಾಚದ ವಾರ್ಧಿಕ ಷಟ್ಪದಿ (ಕ್ರ.ಸಂ.೧೨೧), ಅಲ್ಲಮ ಪ್ರಭುಸ್ತೋತ್ರದ ಷಟ್ಪದಿ (ಕ್ರ.ಸಂ.೧೮೬) ಅಷ್ಟಾವರಣದ ಸ್ತೋತ್ರ ಷಟ್ಪದಿ (ಕ್ರ.ಸಂ.೨೩೯) ಆಚರಣೆಯ ಸಂಬಂಧದ ಷಟ್ಪದಿ (೨೮೪) ಉಮಾಸ್ತೋತ್ರ ಷಟ್ಪದಿ (ಕ್ರ.ಸಂ.೩೮೨) ಗುರುಶಿಷ್ಯ ಪ್ರಶ್ನೆಯಭೋಗ ಷಟ್ಪದಿ (ಕ್ರ.ಸಂ.೭೩೨), ಚಂದಸ್ಸಿನ ಗಣನೆಯ ವಾರ್ಧಿಕ (ಕ್ರ.ಸಂ. ೮೭೪) ಜ್ಞಾನೋದಯದ ಷಟ್ಪದಿ (ಕ್ರ.ಸಂ. ೮೯೦) ನವಲಿಂಗದ ಜಡಗಣನೆಯ ಪರಿವರ್ಧಿನಿ (ಕ್ರ.ಸಂ. ೧೦೩೭), ನೀಲಾಂಬಿಕಾ ಲಲಿತಸ್ತೋತ್ರ ಭಾಮಿನಿ (ಕ್ರ.ಸಂ.೧೧೫೪) ಪ್ರಭುದೇವರ ಪುರಾಣದ ಸ್ತೋತ್ರದ ಷಟ್ಪದಿ (ಕ್ರ.ಸಂ. ೧೩೮೦), ಮಲಯರಾಜ ಪೌರಾಣದ ನಾಂದ್ಯದ ಷಟ್ಪದಿ (ಕ್ರ.ಸಂ.೧೮೮೨), ಮಲ್ಲೇಶ್ವರನ ನಾಂದ್ಯದ ವಾರ್ಧಿಕ (ಕ್ರ.ಸಂ.೧೮೯) ಮಲ್ಲೇಶ್ವರನ ವಾರ್ಧಿಕ (ಕ್ರ.ಸಂ.೧೯೦೧) ಉಹಿಮಾ ಷಟ್ಪದಿಯ ನುಡಿ (ಕ್ರ.ಸಂ.೧೯೩೩) ಮಿಶ್ರಾರ್ಪಣದ ವಾರ್ಧಿಕ ಷಟ್ಪದಿ (ಕ್ರ.ಸಂ. ೨೦೫೭), ಮುರಿಗಿಸ್ವಾಮಿಗಳ ಸ್ತೋತ್ರದ ಭಾಮಿನಿ (ಕ್ರ.ಸಂ.೨೦೮೬), ಮುರಿಗೆ ಸ್ವಾಮಿಗಳು ನಿರೂಪಿಸಿದ ವಾರ್ಧಿಕ (ಕ್ರ.ಸಂ. ೨೧೩೪) ಮೂರೇಳು ದೀಕ್ಷೆಯ ವಾರ್ಧಕ (ಕ್ರ.ಸಂ. ೨೧೩೮), ಲಿಂಗ ಷಟ್ಪದಿ (ಕ್ರ.ಸಂ.೨೨೩೩) ಲಿಂಗಸ್ತೋತ್ರದ ಷಟ್ಪದಿ (ಕ್ರ.ಸಂ.೨೨೪೨), ಲಿಂಗಸ್ತೋತ್ರದ ಷಟ್ಪದಿ ನುಡಿ (ಕ್ರ.ಸಂ.೨೨೭೦) ಲಿಂಗಸ್ತೋತ್ರ ಭಾಮಿನಿ ಷಟ್ಪದಿ (ಕ್ರ.ಸಂ.೨೨೭೨), ಲಿಂಗಸ್ತೋತ್ರ ಷಟ್ಪದಿ ಟೀಕು (ಕ್ರ.ಸಂ.೨೨೭೩) (ವಾರ್ಧಕ) (ಕ್ರ.ಸಂ. ೨೩೫೨), ವೈರಾಗ್ಯ ಷಟ್ಪದಿ (ಕ್ರ.ಸಂ.೨೪೭೧), ಶಂಕರ ಸಂಹಿತೆಯ ನಾಂದ್ಯದ ಲಿಂಗಸ್ತೋತ್ರದ ಷಟ್ಪದಿ (ಕ್ರ.ಸಂ.೨೬೪೫), ಶಿವಲಿಂಗನಾಂದ್ಯದ ಭಾಮಿನಿ ಪದ್ರ (ಕ್ರ.ಸಂ. ೨೭೪೧), ಶಿವಲಿಂಗ ಮಹಿಮಾ ಷಟ್ಪದಿ (ಕ್ರ.ಸಂ. ೨೭೪೬), ಶಿವಲಿಂಗ ಮಹಿಮಾ ಷಟ್ಪದದ ಟೀಕು (ಕ್ರ.ಸಂ.೨೭೪೯), ಶಿವಲಿಂಗ ಷಟ್ಪದಿ (ಕ್ರ.ಸಂ.೨೭೫೩), ಶಿವಲಿಂಗ ಷಟ್ಪದಿ ವಾರ್ಧಿಕ (ಕ್ರ.ಸಂ.೨೭೫೬), ಶಿವಲಿಂಗ ಷಟ್ಪದಿ (ಕ್ರ.ಸಂ.೨೭೫೭), ಶಿವಲಿಂಗ ಷಟ್ಪದಿಯ ನುಡಿ (ಕ್ರ.ಸಂ.೨೭೬೦), ಹತ್ತೊಂಬತ್ತನೆಯ ವಾರ್ಧಿಕ (ಕ್ರ.ಸಂ.೩೨೭೫), ಹೀಗೆಯೇ ಷಟ್ಪದಿ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ಈ ಮೇಲಿನಂತೆ ನೋಡಬಹುದು.

೬. ತಾರಾವಳಿ ಸಾಹಿತ್ಯ ಕೃತಿಗಳು :

ಅಲ್ಲಮಪ್ರಭು ಅವರ ನಟನ ತಾರಾವಳಿ (ಕ್ರ.ಸಂ.೧೮೨) ಅಲ್ಲಮಪ್ರಭು ನಟನ ತಾರಾವಳಿ (ಕ್ರ.ಸಂ.೧೮೩) ಅಲ್ಲಮಪ್ರಭು ಸ್ವಾಮಿಯ ತಾರಾವಳಿ (ಕ್ರ.ಸಂ.೧೮೫), ಇಕ್ಕದ ಮಾರಗೊಂಡನ ತಾರಾವಳಿ (ಕ್ರ.ಸಂ.೩೧೫), ಕಟ್ಟಿಗೆ ತಾರಾವಳಿ (ಕ್ರ.ಸಂ.೪೪೨), ಗಣನಾಮ ತಾರಾವಳಿ (ಕ್ರ.ಸಂ.೬೨೫), ಜಂಗಮಮಹಾತ್ಮೆಯ ತಾರಾವಳಿ (ಕ್ರ.ಸಂ.೮೮೨), ಪರವಾದಿಗಜಾಂಕುಶ ತಾರಾವಳಿ (ಕ್ರ.ಸಂ.೧೨೪೧), ಮಡಿವಾಳ ಮಾಚಯ್ಯನ ತಾರಾವಳಿ (ಕ್ರ.ಸಂ. ೧೭೭೯), ಮಹಂತಿನ ತಾರಾವಳಿ (ಕ್ರ.ಸಂ.೧೯೦೬), ಮುರಿಗೆಸ್ವಾಮಿಗಳ ತಾರಾವಳಿ (ಕ್ರ.ಸಂ.೨೦೭೫), ಸಂಪಾದನೆ ತಾರಾವಳಿ (ಕ್ರ.ಸಂ.೩೦೨೭), ಹೀಗೆಯೇ ತಾರಾವಳಿಗೆ ಸಂಬಂಧಿಸಿದಂತೆ ಪ್ರಮುಖ ಸಾಹಿತ್ಯ ಕೃತಿಗಳನ್ನು ನೋಡಬಹುದು.

೭. ಟೀಕಾ ಸಾಹಿತ್ಯ ಕೃತಿಗಳು :

ಅಕ್ಷರಮಾಲಿಕಾ ಗದ್ಯ ಟೀಕು (ಕ್ರ.ಸಂ.೭೧), ಅಕ್ಷರಾಂಕದ ಟೀಕು, (ಕ್ರ.ಸಂ.೭೬) ಚಿಕ್ಕ ನೀಲಮ್ಮನ ಸ್ತೋತ್ರದ ಟೀಕು, (ಕ್ರ.ಸಂ.೮೦೨), ಚೆನ್ನಬಸವ ರಗಳೆ ಟೀಕು (ಕ್ರ.ಸಂ. ೮೧೩), ಚೆನ್ನಬಸವೇಶ್ವರನ ಪುರಾಣದ ನಾಂದ್ಯದಲ್ಲಿ ಘಟ್ಟಿ ಪದಗಳಿಗೆ ಟೀಕೆ (ಕ್ರ.ಸಂ.೮೧೮) ಟೀಕಿನ ವಚನ (ಕ್ರ.ಸಂ. ೯೦೩), ತಾತ್ಪರ್ಯ ಸಂಗ್ರಹ ಟೀಕೆ (ಕ್ರ.ಸಂ.೯೧೭) ತ್ರಿವಿಧಿ ಸಾರದಟೀಕೆ (ಕ್ರ.ಸಂ.೯೨೦), ನೀಲಮ್ಮನ ಸ್ತೋತ್ರದ ಟೀಕೆ (ಕ್ರ.ಸಂ.೧೧೦೦), ನೂರೊಂದು ಸ್ಥಲ ಟೀಕು (ಕ್ರ.ಸಂ. ೧೧೬೮), ಮಾತ್ರಗೋಪ್ಯ ಟೀಕೆ (ಕ್ರ.ಸಂ.೧೧೮೪), ಪಂಚಪ್ರಕಾರದ ಗದ್ಯ ಟೀಕೆ (ಕ್ರ.ಸಂ.೧೨೭೭), ಪಂಜೀಕರಣ ಟೀಕೆ (ಕ್ರ.ಸಂ.೧೩೧೦), ಪಂಚೇಕರಣದ ಪದ ಟೀಕೆ (ಕ್ರ.ಸಂ.೧೩೨೧) ಪ್ರಭುದೇವರ ಷಟ್ಸ್ಥಲ ವಚನ ಟೀಕು (ಕ್ರ.ಸಂ.೧೪೧೦), ಪ್ರಭುದೇವರ ಸೃಷ್ಟಿಯ ವಚನ ಟೀಕೆ (ಕ್ರ.ಸಂ.೧೪೩೮), ಪ್ರಭುಲಿಂಗ ಕಂದದ ಟೀಕೆ (ಕ್ರ.ಸಂ. ೧೪೫೩), ಪ್ರಭುಸ್ವಾಮಿಯ ಟೀಕಿನ ವಚನ (ಕ್ರ.ಸಂ.೧೪೯೦), ಬೃಹಜ್ಜುತಕದ ಟೀಕು (ಕ್ರ.ಸಂ.೧೬೬೭), ಮಣ್ಣೇಶ್ವರನ ನಾಂದ್ಯದ ಟೀಕೆ (ಕ್ರ.ಸಂ.೧೭೯೪), ಉಲ್ಲಣಸ್ತೋತ್ರ ಟೀಕೆ (ಕ್ರ.ಸಂ.೧೮೭೭), ಮಲಿಯರಾಜ ಸ್ತೋತ್ರದ ಟೀಕೆ (ಕ್ರ.ಸಂ.೧೮೭೯), ಮಿಶ್ರಸ್ತೋತ್ರ ತ್ರಿವಿಧಿಯಸಾರ ಟೀಕೆ (ಕ್ರ.ಸಂ.೩೦೦೨), ಲಿಂಗಾಚಾರ ರಚನಾಗಮ ಟೀಕೆ (ಕ್ರ.ಸಂ.೨೨೭೮), ವಾತುಲಾಗಮ ಟೀಕೆ (ಕ್ರ.ಸಂ.೨೩೪೮), ಶತರತ್ನ ಟೀಕು (ಕ್ರ.ಸಂ.೨೫೧೩), ಶಂಕರ ಸಂಹಿತೆಯ ನಾಂದ್ಯದಲ್ಲಿ ೩೯ನೆಯ ಪದ್ಯಕ್ಕೆ ಟೀಕೆ (ಕ್ರ.ಸಂ.೨೭೪೬), ಶಿವಲಿಂಗ ಮಹಿಮಾ ಷಟ್ಪದದ ಟೀಕು (ಕ್ರ.ಸಂ.೨೭೪೯), ಶಿವಧಿಕ್ಯರತ್ನಾವಳಿ ಟೀಕೆ (ಕ್ರ.ಸಂ.೨೭೮೦), ಶಿವಾಧಿಕ್ಯಶಿಖಾಮಣಿ ಟೀಕೆ (ಕ್ರ.ಸಂ. ೨೭೮೨), ಶೀಲವಂತಯ್ಯನ ತಿವಿಧಿ ಟೀಕೆ (ಕ್ರ.ಸಂ. ೨೮೨೧), ಶ್ರೀರುದ್ರಭಾಷ್ಯದ ಟೀಕು (ಕ್ರ.ಸಂ.೨೮೩೦), ಷಟ್ಚಕ್ರ ಟೀಕೆ (ಕ್ರ.ಸಂ.೨೯೪೩), ಸ್ವತಂತ್ರ ಸಿದ್ಧಲಿಂಗೇಶ್ವರ ವಚನ ಟೀಕೆ (ಕ್ರ.ಸಂ.೩೦೩೯) ಇತ್ಯಾದಿ ಟೀಕು ಸಾಹಿತ್ಯದ ಕೃತಿಗಳನ್ನು ನೋಡಬಹುದಾಗಿದೆ.

೮. ಗದ್ಯ ಮತ್ತು ಪದ್ಯ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು :

ಅಕ್ಷರ ಮಾಲಿಕಾ ಗದ್ಯ (ಕ್ರ.ಸಂ.೪೦), ಅಕ್ಷರಾಂಕಗದ್ಯ (ಕ್ರ.ಸಂ.೭೪), ಅಕ್ಷರಾಂಕನಗದ್ಯ (ಕ್ರ.ಸಂ.೭೭), ಅಕ್ಷರ ಗದ್ಯ (ಕ್ರ.ಸಂ.೧೦೮), ಅಷ್ಟೋತ್ತರ ಶತನಾಮ ಗದ್ಯ (ಕ್ರ.ಸಂ.೨೪೦), ಉದಾಹರಣ ಗದ್ಯ (ಕ್ರ.ಸಂ.೩೫೭) ಗದ್ಯ (ಕ್ರ.ಸಂ.೬೪೭), ನಮಸ್ಕಾರ ಗದ್ಯ (ಕ್ರ.ಸಂ.೯೯೭), ನವ ಚಕ್ರದ ಗದ್ಯ (ಕ್ರ.ಸಂ.೧೦೭೦), ಪಂಚಪ್ರಕಾರದಗದ್ಯ (ಕ್ರ.ಸಂ.೧೨೪೬), ಶಂಕರ ಗದ್ಯ (ಕ್ರ.ಸಂ.೨೫೮೮), ಷಟ್ಸ್ಥಲದಗದ್ಯ (ಕ್ರ.ಸಂ.೨೮೮೬), ಷಡುಸ್ಥಲಗದ್ಯ (ಕ್ರ.ಸಂ. ೨೯೫೩) ಇತ್ಯಾದಿ ಗದ್ಯ ಸಾಹಿತ್ಯದ ಕೃತಿಗಳನ್ನು ನೋಡಬಹುದು.

೯. ಕಥೆ ಮತ್ತು ಕಾವ್ಯಕ್ಕೆ ಸಂಬಂಧಿಸಿದ ಸಾಹಿತ್ಯ ಕೃತಿಗಳು :

ಉಚಿತ ಕಥೆಗಳು (ಕ್ರ.ಸಂ.೩೩೬), ಉದ್ಭಟ ಕಾವ್ಯ (ಕ್ರ.ಸಂ.೩೫೨), ಚೆನ್ನಬಸವೇಶ್ವರ ಪುರಾಣ ಕಥೆ (ಕ್ರ.ಸಂ. ೮೨೦), ಚೇರಮಾಂಕನಕಾವ್ಯ (ಕ್ರ.ಸಂ ೮೬೦), ಬಸವೇಶ್ವರ ದೇವರ ಕಥಾ ಸಾಗರ (ಕ್ರ.ಸಂ.೧೬೦೪), ಬಸವೇಶ್ವರನ ಪುರಾಣದ ಕಥಾಸಾಗರ (ಕ್ರ.ಸಂ.೧೬೧೫), ಭಿಕ್ಷಾಟಣ ಕಾವ್ಯ (ಕ್ರ.ಸಂ.೧೭೧೭), ಭಿಕ್ಷಾಟಣ ಕಾವ್ಯದ ನುಡಿ (ಕ್ರ.ಸಂ. ೧೭೨೦), ಭೈರವೇಶ್ವರ ಕಾವ್ಯ (ಕ್ರ.ಸಂ.೧೭೫೨), ಭೈರವೇಶ್ವರ ಕಾವ್ಯದ ಕಥಾಸಾಗರ (ಕ್ರ.ಸಂ.೧೭೫೭), ಭೈರವೇಶ್ವರನ ಕಾವ್ಯ (ಕ್ರ.ಸಂ. ೧೭೬೩), ಭೈರವೇಶ್ವರನ ಕಾವ್ಯದ ಕಥಾಮಣಿ ಸೂತ್ರರತ್ನಾಕರ (ಕ್ರ.ಸಂ.೧೭೬೮), ಭೈರವೇಶ್ವರ ಕಾವ್ಯದ ನುಡಿ (ಕ್ರ.ಸಂ. ೧೭೭೨), ಮಲುಹಣನ ಕಾವ್ಯ (ಕ್ರ.ಸಂ.೧೮೮೫), ಮೆಲ್ಲೆಬೊಮ್ಮಯ್ಯಗಳ ಕಾವ್ಯ (೨೧೪೬), ಶಿವಪುರಾಣ ಕಥೆ (ಕ್ರ.ಸಂ.೨೬೬೦), ಸತ್ಯೇಂದ್ರ ಜೋಳನ ಕಾವ್ಯ (ಕ್ರ.ಸಂ.೨೯೭೪), ಸತ್ಯೇಂದ್ರ ಚೋಳರಾಯನ ಕಾವ್ಯ (ಕ್ರ.ಸಂ.೨೯೭೬), ಸಪ್ತಕಾವ್ಯ (ಕ್ರ.ಸಂ.೨೯೯೩), ಸಾರಂಗಧರನ ಕಥೆ, (ಕ್ರ.ಸಂ.೩೦೮೯), ಸಾಸಲಭೈರವೇಶ್ವರ ಕಾವ್ಯ (ಕ್ರ.ಸಂ.೩೦೯೩), ಸಿದ್ಧಲಿಂಗೇಶ್ವರನ ಕಾವ್ಯ (ಕ್ರ.ಸಂ.೩೧೦೦), ಸುರಂಗ ಕಾವ್ಯ (ಕ್ರ.ಸಂ. ೩೮೭), ಸೋಮನಾಥನ ಕಾವ್ಯ (ಕ್ರ.ಸಂ.೩೧೯೫), ಹಮ್ಮೀರ ಕಾವ್ಯ (ಕ್ರ.ಸಂ.೩೨೭೭) ಇತ್ಯಾದಿ ಕಥೆ ಮತ್ತು ಕಾವ್ಯಕ್ಕೆ ಸಂಬಂಧಿಸಿದ ಸಾಹಿತ್ಯ ಕೃತಿಗಳನ್ನು ನೋಡಬಹುದು.

೧೦. ತ್ರಿಪದಿ ಹಾಗೂ ಶತಕಕ್ಕೆ ಸಂಬಂಧಿಸಿದ ಸಾಹಿತ್ಯಕೃತಿಗಳು :

ಅಕ್ಕಮಹಾದೇವಿಯ ತ್ರಿವಿಧಿ (ಕ್ರ.ಸಂ. ೩೮) ಅಪರಾಜಿತೇಶ್ವರ ಶತಕ (ಕ್ರ.ಸಂ.೧೫೫), ಅರವತ್ತು ಮೂರು ಪುರಾತನರ ತ್ರಿವಿಧಿ (ಕ್ರ.ಸಂ.೧೭೭), ಅಷ್ಟಾವರಣ ಸ್ತೋತ್ರ ತ್ರಿವಿಧಿ ಸಿದ್ಧರಾಮ (ಕ್ರ.ಸಂ.೨೦೯), ಆಚರಣೆಯ ತ್ರಿವಿಧಿ (ಕ್ರ.ಸಂ.೨೭೬), ಗಣನಾಮಸ್ತೋತ್ರ ತ್ರಿವಿಧಿ (ಕ್ರ.ಸಂ.೬೨೬), ಗುಮ್ಮಟಯ್ಯಗಳ ಶತಕ (೮೭೬), ಗುಮ್ಮಟಶತಕ (ಕ್ರ.ಸಂ. ೬೭೭), ಗುರುಶಂಕರೇಶ್ವರ ಶತಕ (ಕ್ರ.ಸಂ.೭೨೯), ಗುರುಸ್ತೋತ್ರದ ತ್ರಿಪದಿ (ಕ್ರ.ಸಂ.೭೩೯), ಗೌರಮ್ಮನ ತ್ರಿವಿಧಿ (ಕ್ರ.ಸಂ. ೭೪೫), ಗೌರಮ್ಮ ಸೋಬಾನದ ತ್ರಿವಿಧಿ (ಕ್ರ.ಸಂ.೭೪೬), ಚಂದ್ರಲೇಖಾವತಂಸ ಶತಕ (ಕ್ರ.ಸಂ. ೭೭೫), ದಾರಿದ್ರ ವಿದ್ರಾವಣ ಶತಕ (ಕ್ರ.ಸಂ. ೯೩೭), ನಿಜ ಶರಣನ ತ್ರಿವಿಧಿ (ಕ್ರ.ಸಂ.೧೦೬೬), ನೀಲಮ್ಮನ ತ್ರಿವಿಧಿ (ಕ್ರ.ಸಂ.೧೦೭೬), ಪೊಂಪಾಪತಿ ಶತಕ (ಕ್ರ.ಸಂ.೧೫೩೦), ಬಸವಸ್ತೋತ್ರ ತ್ರಿಪದಿ, (ಸಿದ್ಧರಾಮ (ಕ್ರ.ಸಂ.೧೫೬೬), ಮಲ್ಲೇಶ್ವರ ಶತಕ (ಕ್ರ.ಸಂ.೧೯೦೩), ಮಹದೈಪುರೀಶ್ವರ ಶತಕ (ಕ್ರ.ಸಂ.೧೯೦೯), ಮಿಶ್ರಸ್ತೋತ್ರದ ತ್ರಿವಿಧಿ (ಕ್ರ.ಸಂ. ೧೯೭೩), ಯೋಗಾಂಗ ತ್ರಿವಿಧಿ (ಕ್ರ.ಸಂ.೨೧೫೮), ರತ್ನಾಕರಾಧೀಶ್ವರ ಶತಕ (ಕ್ರ.ಸಂ.೨೧೬೯), ಲಿಂಗಾಂಗ ಪ್ರಣವ ಸಂಯೋಗ ಸ್ಥಲ ತ್ರಿವಿಧಿ (ಕ್ರ.ಸಂ.೨೨೭೫), ಮಗಾದ್ವೈತ ನಿರಸನ ತ್ರಿವಿಧಿ (ಕ್ರ.ಸಂ.೨೩೯೩), ವಿರೂಪಾಕ್ಷ ಶತಕ (ಕ್ರ.ಸಂ.೨೩೭೨), ಶಿವಕಾರುಣ್ಯಹ್ವಾನ ಶತಕ (ಕ್ರ.ಸಂ.೨೬೫೮), ಶಿವಮಹಿಮಾ ಶತಕ (ಕ್ರ.ಸಂ೨೬೬೪), ಶಿವ ಶಿವಲಾವಣ್ಯ ಪುಣ್ಯಾಗ್ರಗಣ್ಯ ಶತಕ (ಕ್ರ.ಸಂ.೨೬೯), ಶಿವಲಿಂಗ ವಿಕಳತೆ ಸನ್ನಿದರ್ಶನಾರ್ಚನ

ಶತಕ (ಕ್ರ.ಸಂ. ೨೭೫೨), ಶಿವಾಧವ ಶತಕ (ಕ್ರ.ಸಂ. ೨೭೬೪), ಶಿವವಲ್ಲಭ ಶತಕ (ಕ್ರ.ಸಂ.೨೭೮೩), ಶೀಲವಂತಯ್ಯನ ತ್ರಿವಿಧಿ (ಕ್ರ.ಸಂ.೨೮೦೦), ಶೀಲವಂತಯ್ಯನ ತ್ರಿವಿಧಿ ವಾಕ್ಯಾರ್ಥ (ಕ್ರ.ಸಂ. ೨೮೨೩), ಶ್ರೀಕಂಠಸೋಮೇಶ್ವರ ಶತಕ (೨೮೨೬), ಶೂನ್ಯ ಲಿಂಗದ ವಾಕ್ಯ ತ್ರಿವಿಧಿ (ಕ್ರ.ಸಂ.೨೮೩೨), ಸರ್ವಜ್ಞನ ತ್ರಿವಿಧಿ (ಕ್ರ.ಸಂ.೩೦೦೯), ಸರ್ವಜ್ಞ ಮೂರ್ತಿ ತ್ರಿವಿಧಿ (ಕ್ರ.ಸಂ. ೩೦೧೩), ಸಿದ್ದೇಶ್ವರ ತ್ರಿವಿಧಿ (ಕ್ರ.ಸಂ.೩೧೦೨), ಸೋಮನಾಥ ಶತಕ (ಕ್ರ.ಸಂ.೩೨೧೫), ಸೋಮೇಶ್ವರ ಶತಕ (ಕ್ರ.ಸಂ.೩೨೪೯) ಇವೆಲ್ಲ ತ್ರಿಪದಿ ಮತ್ತು ಶತಕ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳಾಗಿವೆ.

೧೧. ಕಂದ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು :

ಅಭವ ಕಂದ (ಕ್ರ.ಸಂ.೧೫೬), ಎಳಮಲೆ ಗುರುಶಾಂತ ದೇವರು ನಿರೂಪಿಸಿದ ಕಂದ (ಕ್ರ.ಸಂ.೪೯೪), ಕರಸ್ಥಲದ ವೀರಣ್ಣ ದೇವರು ನಿರೂಪಿಸಿದ ಕಂದ (ಕ್ರ.ಸಂ.೫೪೬), ಕರಸ್ಥಲದ ವೀರಣ್ಣೊಡೆ ದೇವರ ಕಂದ (ಕ್ರ.ಸಂ.೫೪೭), ಕಂದನಾಂದ್ಯ (ಕ್ರ.ಸಂ.೫೬೬), ಕಂದನಾಂದ್ಯ ವೃತ್ತ (ಕ್ರ.ಸಂ.೫೭೧), ಕಂದಾಷ್ಟಕ (ಕ್ರ.ಸಂ.೫೭೨), ಕೇಶಿರಾಜನ ಕಂದ (ಕ್ರ.ಸಂ.೬೦೨), ಕೊಟ್ಟೂರಯ್ಯನ ಸ್ತೋತ್ರದ ಕಂದ (ಕ್ರ.ಸಂ. ೬೧೯), ಗುರುಸ್ತೋತ್ರದ ಕಂದನಾಂದ್ಯ (ಕ್ರ.ಸಂ.೭೩೮), ಪ್ರಭುದೇವರ ಲಿಂಗ ಕಂದ (೧೪೪೯), ಪ್ರಭುಲಿಂಗಕಂದ (ಕ್ರ.ಸಂ.೧೪೫೧), ಪ್ರಭುಲಿಂಗರಾಜ ಕಂದ (ಕ್ರ.ಸಂ.೧೪೭೧), ಮರುಳದೇವರ ಕಂದ (ಕ್ರ.ಸಂ.೧೮೩೮), ಮಂತ್ರ ಮಹತ್ವ ಕಂದ (ಕ್ರ.ಸಂ.೧೯೪೧), ಮುರಿಗಾಸ್ವಾಮಿಗಳು ನಿರೂಪಿಸಿದ ಕಂದ (ಕ್ರ.ಸಂ.೨೦೭೮), ಮುರಿಗೆ ಶಾಂತ ವೀರೇಶ್ವರನ ಕಂದ (ಕ್ರ.ಸಂ.೨೧೯೪), ಲಿಂಗಸ್ತೋತ್ರದ ಕಂದ (ಕ್ರ.ಸಂ.೨೨೪೯), ಶಂಕರ ದೇವರ ಕಂದ (ಕ್ರ.ಸಂ.೨೪೫೦), ಷಡಕ್ಷರಿಯ ಕಂದ (ಕ್ರ.ಸಂ.೨೯೩೮), ಹರಿಹರದೇವರ ಕಂದ (ಕ್ರ.ಸಂ.೩೨೮೮), ಹಾಲಾಸ್ಯದ ಕಂದ ನಾಂದ್ಯ (ಕ್ರ.ಸಂ.೩೪೯೨), ಹೀಗೆ ಕಂದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೃತಿಗಳನ್ನು ಈ ಮೇಲಿನಂತೆ ನೋಡಬಹುದು. ಹೀಗೆ ಸಾಹಿತ್ಯದ ಮೂಲಕವಾಗಿಯೇ ಎಲ್ಲಾ ಅಂಶಗಳನ್ನು ನೋಡಬಹುದಾಗಿದೆ. ಈ ಸಾಹಿತ್ಯದಿಂದ ಒಟ್ಟಾರೆ ಕವಿಗಳ ಹಾಗೂ ಕೃತಿಗಳ ಬಗೆಗೆ ಹೆಚ್ಚಿನ ಮಾಹಿತಿಗಳನ್ನು ಪಡೆದುಕೊಳ್ಳುವುದರೊಂದಿಗೆ ಕೃತಿಗಳು ವಿವಿಧ ಪ್ರಕಾರಗಳನ್ನು ಒಳಗೊಂಡಂತೆ ರಚನೆಯಾಗಿರುವುದನ್ನು ಈ ಸಾಹಿತ್ಯಿಕ ಅಂಶಗಳ ಮೂಲಕವಾಗಿ ನೋಡಬಹುದು.

[illegible]

ಕೊನೆ ಟಿಪ್ಪಣಿ

೧. ಗೀತಾಚಾರ್ಯ ನಾ., ಹಸ್ತಪ್ರತಿ ಅಧ್ಯಯನಶಾಸ್ತ್ರ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೯ ಪು.ಸಂ, ೫೧

೨. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ, ಎ.(ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು ಪು.ಸಂ, ೫೦-೫೫

೩. ವೀರಣ್ಣ ರಾಜೂರ (ಸಂ), ವೀರಶೈವ ತಾರಾವಳಿ ಸಂಪುಟ, ವೀರಶೈವ ಅಧ್ಯಯನ ಸಂಸ್ಥೆ ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ ೧೯೯೪ ಪು.ಸಂ, ೨೨೮-೨೩೦

೪. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ಎ. (ಸಂ) ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು ಪು.ಸಂ, ೬೬-೬೮

೫. ಹಿರಿಯೂರು ಎ.ಕ., ೫೭ ಶ.ಕ. ೧೬೪೨ಗೆ ಪ್ಲವ (ಕ್ರಿ.ಶ ೧೭೨೦)

೬. ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಪು.ಸಂ, ೧೫೯

೭. ಅದೇ, ಪು.ಸಂ, ೧೫೮

೮. ಅದೇ, ಪು.ಸಂ, ೧೫೯

೯. ಅದೇ, ಪು.ಸಂ, ೧೬೦

೧೦. ವೈದ್ಯಶಾಸ್ತ್ರದ ಹಸ್ತಪ್ರತಿ, ಕೊಂಡ್ಲಹಳ್ಳಿ ತಿಪ್ಪೇಸ್ವಾಮಿ, ಪು.ಸಂ, ೧೧

೧೧. ಅದೇ, ಪು.ಸಂ, ೧೨

೧೨. ಅದೇ, ಪು.ಸಂ, ೧೨

೧೩. ಅದೇ, ಪು.ಸಂ, ೧೩

೧೪. ಅದೇ, ಪು.ಸಂ, ೧೩

೧೫. ಅದೇ, ಪು.ಸಂ, ೧೪

೧೬. ಅದೇ, ಪು.ಸಂ, ೨೦

೧೭. ಅದೇ, ಪು.ಸಂ, ೨೨

೧೮. ವೀರೇಶ ಬಡಿಗೇರ, ಹಲಗೆ ಬಳಪ, ಮಯಾ ಪ್ರಕಾಶನ, ಕಮಲಾಪುರ ೨೦೦೫ ಪು.ಸಂ, ೯೦-೯೧

೧೯. ಮಾಟ-ಮಂತ್ರದ ಹಸ್ತಪ್ರತಿ, ಕೊಂಡ್ಲಹಳ್ಳಿ ತಿಪ್ಪೇಸ್ವಾಮಿ, ಪು.ಸಂ, ೧

೨೦. ಅದೇ, ಪು.ಸಂ, ೧೮

೨೧. ಅದೇ, ಪು.ಸಂ, ೧೯

೨೨. ಅದೇ, ಪು.ಸಂ, ೧೯

೨೩. ಅದೇ, ಪು.ಸಂ, ೨೦

೨೪. ಯಂತ್ರ-ಮಂತ್ರದ ಹಸ್ತಪ್ರತಿ ಕೊಂಡ್ಲಹಳ್ಳಿ ಮಲ್ಲಿಕಾರ್ಜುನ, ಪು.ಸಂ, ೧

೨೫. ಅದೇ ಪು.ಸಂ-೨.

೨೬. ಅದೇ, ಪು.ಸಂ, ೨

೨೭. ಅದೇ, ಪು.ಸಂ, ೩

೨೮. ಅದೇ, ಪು.ಸಂ, ೩

೨೯. ಅದೇ, ಪು.ಸಂ, ೪

೩೦. ಕುಮಾರರಾಮನ ಸಾಂಗತ್ಯದ ಹಸ್ತಪ್ರತಿ, ಬಂಜಗೆರೆ ಗುರುಮೂರ್ತಿ ಪು.ಸಂ, ೩೬೦.

೩೧. ಅದೇ, ಪು.ಸಂ, ೧

೩೨. ಶಶಿರೇಖಾ ಪರಿಣಯ ಬಯಲಾಟದ ಹಸ್ತಪ್ರತಿ, ದೇವರೆಡ್ಡಿಹಳ್ಳಿ ಪ್ರತಿ, ಪು.ಸಂ, ೧೭

೩೩. ದುಶ್ಯಾಸನ ಕಥೆ, ದೇವರೆಡ್ಡಿಹಳ್ಳಿ ದುರುಗಪ್ಪನವರ ಪ್ರತಿ ಪು.ಸಂ, ೪

೩೪. ಭಕ್ತಪ್ರಹ್ಲಾದನ ಬಯಲಾಟದ ಹಸ್ತಪ್ರತಿ, ಬೇಡರೆಡ್ಡಿಹಳ್ಳಿ ಪ್ರತಿ, ಪು.ಸಂ, ೨

೩೫. ಗುರುನಾಥ ಬಿ.ಎಂ., ಬಯಲಾಟದ ಹಸ್ತಪ್ರತಿಗಳ ಅಂತರ್ ಶೋಧ, ಶ್ರೀ ಅನ್ನಪೂರ್ಣ ಪ್ರಕಾಶನ ಬೆಂಗಳೂರು, ೨೦೧೨ ಪು.ಸಂ, ೧೧೦

೩೬. ತಾಮ್ರಾಧ್ವಜನ ಬಯಲಾಟದ ಹಸ್ತಪ್ರತಿ, ಗುರುನಾಥ ಬೆಳಗಟ್ಟ ಬಿ.ಎಂ., ಪು.ಸಂ, ೬

೩೭. ಕರಿಭಂಟನ ಕಾಳಗ, ಪ್ರತಿ ನಲಗೇತನಹಟ್ಟಿ, ಪು.ಸಂ, ೫೨-೫೩

೩೮. ಶಿವಣ್ಣ ಎಸ್. (ಸಂ), ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ-೧, ಪು.ಸಂ-೩೨೦-೩೬೪.

ಅಧ್ಯಾಯ : ೬

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು : ಧಾರ್ಮಿಕ ಅನನ್ಯತೆ

ಅಧ್ಯಾಯ : ಆರು

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು : ಧಾರ್ಮಿಕ ಅನನ್ಯತೆ

ಪ್ರಾಚೀನ ಹಾಗೂ ಮಧ್ಯಕಾಲೀನ ಸಂದರ್ಭಗಳಲ್ಲಿ ಗ್ರಂಥರಚನಾ ಕಾರ್ಯವು ಹೆಚ್ಚು ಧಾರ್ಮಿಕವಾಗಿತ್ತು. ಈ ಪರಂಪರೆ ಆಧುನಿಕ ಸಂದರ್ಭದಲ್ಲಿಯೂ ಮುಂದುವರೆದುಕೊಂಡು ಬರುತ್ತದೆ. ಪ್ರತಿ ಧರ್ಮ ಹಾಗೂ ಪಂಥಗಳು ತನ್ನ ಧರ್ಮದ ತತ್ವ, ಸಿದ್ಧಾಂತಗಳನ್ನು, ಆಚರಣೆಯ ವಿಚಾರಗಳನ್ನು ತಮ್ಮ ಕೃತಿಯಲ್ಲಿ ಅಳವಡಿಸಿಕೊಂಡು ಸಂಗ್ರಹಿಸುವ, ಸಂರಚಿಸುವ ಕೆಲಸ ಮಾಡುತ್ತ ಬಂದಿವೆ. ಧರ್ಮವು ಪ್ರಾಚೀನ ಗ್ರಂಥಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರತಿಕರಣವನ್ನು ಮಾಡುತ್ತಲೇ ಬರುತ್ತಿವೆ. ಉದಾ: ಮಠ-ಮಾನ್ಯಗಳು, ಜೈನ ಬಸದಿಗಳು, ಚೈತ್ಯಾಲಯಗಳು, ಅಗ್ರಹಾರಗಳು, ಚರ್ಚು, ಮಸೀದಿ ಹಾಗೂ ಗುರುದ್ವಾರಗಳು ಗ್ರಂಥಗಳನ್ನು ಬರೆಸಿ ಸಂರಕ್ಷಿಸಿ ಅಧ್ಯಯನ ಮಾಡಿ ಧರ್ಮದ ತತ್ವ ಸಿದ್ಧಾಂತಗಳನ್ನು ಉಳಿಸುವಲ್ಲಿ, ಬೆಳೆಸುವಲ್ಲಿ ಪ್ರಧಾನ ಪಾತ್ರವಹಿಸುವುದನ್ನು ಕಾಣಬಹುದಾಗಿದೆ.

ಕವಿ/ಲಿಪಿಕಾರರು ಕಾವ್ಯಗಳ ಮೂಲಕ ಧಾರ್ಮಿಕ ವಿಚಾರಗಳನ್ನು ಹೇಳಿದ್ದಾರೆ. ಶಿವಲೀಲೆಗಳು, ಪುರಾಣಗಳು, ಶತಕ ಸಾಹಿತ್ಯ, ಶರಣ ಚರಿತ್ರೆಗಳ ರಚನೆಗಳು ಈ ಹಂತದಲ್ಲಿ ನಡೆದಿವೆ. ಕವಿಗಳು ಬಹುಭಾಷಾ ಪಂಡಿತರು. ಧರ್ಮಾಭಿಮಾನಿಗಳಾದ ಕವಿಗಳು ಈ ಬಗೆಯ ಕಾವ್ಯಸೃಷ್ಟಿ ಮಾಡಿದ್ದಾರೆ. ವೀರಶೈವಾಮೃತ ಪುರಾಣದಲ್ಲಿ ಹೇಳಿದಂತೆ ಹಸ್ತಪ್ರತಿಗಳ ಅಭಿವೃದ್ಧಿಗೆ ವೀರಶೈವರು ಆಶ್ರಯದಾತರಾಗಿದ್ದರು. ತನ್ನ ಮನೆಯಲ್ಲಿಯೇ ವೀರಶೈವಾಮೃತ ಪುರಾಣದ ಬರವಣಿಗೆಗೆ ಅವಕಾಶ ಮಾಡಿಕೊಟ್ಟವಳು ಜ್ಯೋತಿಯಮ್ಮಳೆಂಬ ಸದ್ಭಕ್ತೆ. ಧಾರ್ಮಿಕ ಪವಾಡಗಳ ಮೂಲಕ ತನ್ನ ಧರ್ಮದ ಕೃತಿಗಳ ಸಂಘಟನೆಯನ್ನು ಈ ಸಂದರ್ಭದಲ್ಲಿ ಮಾಡಲಾಗುತ್ತಿತ್ತು. ರಾಘವಾಂಕನಂತಹ ಕವಿ ಹರಿಶ್ಚಂದ್ರ ಕಾವ್ಯವನ್ನು ವಿದ್ವಾಂಸರು ಮೆಚ್ಚುವಂತೆ ರಚಿಸಿ ಓದುವುದಕ್ಕಾಗಿ ಸೋದರ

[illegible]

[illegible]

[illegible]

[illegible]

ಮಾವನಾದ ಹರಿಹರನಿಂದ ಹಲ್ಲುಗಳನ್ನು ಮುರಿಸಿಕೊಂಡನೆಂದು ದಂತಕಥೆಯಿದೆ. ಆ ಪಾಪದ ನಿವಾರಣೆಗಾಗಿ ಸಿದ್ಧರಾಮ ಚರಿತ್ರೆ, ಸೋಮನಾಥ ಚರಿತೆಗಳನ್ನು ಬರೆದು ಮರಳಿ ಹಲ್ಲುಗಳನ್ನು ದೊರಕಿಸಿಕೊಂಡನಂತೆ. ಆದ್ದರಿಂದ "ಹಂಪೆಯರಸನ ಪೊಗಳ್ವ ನಾಲಗೆಯೊಳನ್ಯ ದೈವವ ಭವಿಗಳಂ ಕೀರ್ತಿಸಿದೆನಾದಡೆ ಮನಸಿಜಾರಿಯ ಭಕ್ತನಲ್ಲ" ಎನ್ನುವ ಮೂಲಕ ತನ್ನ ಧಾರ್ಮಿಕತೆಯನ್ನು ಮೆರೆದಿದ್ದಾನೆ. ಜನಸಾಮಾನ್ಯರು ತಮ್ಮ ಬದುಕಿನಲ್ಲಿ ಸಂಭವಿಸುವ ಘಟನೆಗಳಿಗೆ ದೇವನೇ ಕಾರಣವೆಂದು ನಂಬಿ ದೇವನ ಮೇಲೆ ಭಯ-ಭಕ್ತಿಯಿಂದ ಶ್ರದ್ಧೆಯಿಟ್ಟು, ಸುಖ-ಶಾಂತಿಯನ್ನು ಪಡೆಯುತ್ತಾ ಬಾಳುತ್ತಿದ್ದರು. ಶ್ರದ್ಧೆಯಿಂದ ಮಹಾತ್ಮರ ಕಥೆಗಳನ್ನು ಕೇಳುವುದರಿಂದ ಜನನ-ಮರಣದ ಜಂಜಾಟದಿಂದ ಮುಕ್ತಿ ಹೊಂದುವಂತಹ ಭಾವನೆಯಿತ್ತು. ಇಂಥ ಮೋಕ್ಷ ಹೊಂದಿದ ಮಹಾತ್ಮರ ಚರಿತ್ರೆಗಳು ಇಂದು ಹೆಚ್ಚು ಪ್ರಚಲಿತದಲ್ಲಿವೆ.

ಪುರಾಣ-ಪ್ರವಚನಗಳಿಂದ, ಹಿರಿಯರಿಂದ ಆಲಿಸುವುದರ ಮೂಲಕ ಆ ಮಹಾತ್ಮರ ಜೀವನಾಂಶವನ್ನು ತಮ್ಮ ಬಾಳಿನಲ್ಲಿ ಅಳವಡಿಸಿಕೊಳ್ಳಲು ಪ್ರೇರಣೆ ನೀಡಲಾಯಿತು. ಹಸ್ತಪ್ರತಿಕಾರರು ತಾವು ನಂಬಿದ ದೇವರನ್ನು ಅನುಸರಿಸಿ ಧರ್ಮಕ್ಕೆ ಸಂಬಂಧಪಟ್ಟಂತಹ ಕೃತಿಗಳನ್ನು ಮಾತ್ರ ಪ್ರತಿ ಮಾಡುತ್ತಿದ್ದರು. ವೈದಿಕ ಹಸ್ತಪ್ರತಿಕಾರರು ವೈದಿಕ ಕೃತಿಗಳನ್ನು, ಜೈನ ಹಸ್ತಪ್ರತಿಕಾರರು ಜೈನ ಧರ್ಮದ ಕೃತಿಗಳನ್ನು ಪ್ರತಿ ಮಾಡಿದಂತೆ, ವೀರಶೈವ ಹಸ್ತಪ್ರತಿಕಾರರು ವೀರಶೈವ ಕೃತಿಗಳನ್ನು ಪ್ರತಿ ಮಾಡಿರುವುದನ್ನು ಮುಖ್ಯವಾಗಿ ಗಮನಿಸಬಹುದು.

ವೀರಶೈವ ಕವಿಗಳು ಧರ್ಮದ ಪ್ರಚಾರಕರಾಗಿ, ಪ್ರಸಾರಕರಾಗಿ, ಮೌಲ್ಯಗಳ ಪ್ರತಿಪಾದಕರಾಗಿ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಅಂದರೆ ಇವರು ಧಾರ್ಮಿಕವಾಗಿ ಮಾತ್ರವಲ್ಲ, ಸಾಹಿತ್ಯಿಕವಾಗಿಯೂ ಶ್ರೇಷ್ಠ ಕೊಡುಗೆಯನ್ನು ಕೊಟ್ಟಿದ್ದಾರೆ. ಈ ಮೂಲಕ ಧಾರ್ಮಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳೆರಡರಲ್ಲೂ ಸಿದ್ಧಿ-ಪ್ರಸಿದ್ಧಿಯನ್ನು ಪಡೆದಿದ್ದಾರೆ. ಇವರು ಚಂಪೂ, ವಚನ, ಸ್ವರವಚನ, ಷಟ್ಪದಿ, ಟೀಕೆ, ನಾಂದ್ಯ, ಪುರಾಣ ಹಾಗೂ ತಾರಾವಳಿ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ಇವರ ಶ್ರಮ, ಪ್ರತಿಭೆ, ಪಾಂಡಿತ್ಯ, ಉಭಯ ಭಾಷಾಜ್ಞಾನ, ದೇಶಿಮಾರ್ಗ, ಸಮನ್ವಯ ದೃಷ್ಟಿಯಂತಹ ಸಂಗತಿಗಳು ಈ ಕೃತಿಗಳಲ್ಲಿ ಬಿಂಬಿತವಾಗಿವೆ.

ಇಲ್ಲಿ ಲಿಪಿಕಾರರಲ್ಲಿ ಹವ್ಯಾಸಿ ಲಿಪಿಕಾರರು, ನಿಯುಕ್ತ ಲಿಪಿಕಾರರು ತಮ್ಮ ಧರ್ಮದ ಗ್ರಂಥಗಳನ್ನು ಪ್ರತಿ ಮಾಡುತ್ತಿದ್ದಾರೆಂಬುದನ್ನು ನೋಡಬಹುದು. ಪ್ರತಿಯೊಬ್ಬ ಲಿಪಿಕಾರನೂ ಸಹ ತಾನೂ ಕೈಗೆತ್ತಿಕೊಂಡ ಗ್ರಂಥವನ್ನು ಪ್ರತಿ ಮಾಡುವ ಮೊದಲು ಇಷ್ಟದೈವ, ಆರಾಧ್ಯದೈವ ಹಾಗೂ ಗುರುಗಳನ್ನು ಸ್ತುತಿಸುವುದನ್ನು ನೋಡಬಹುದು.

"ಶ್ರೀ ಗುರು ಬಸವ ಲಿಂಗಾಯನಮಃ ಶ್ರೀ ವೀತರಾಗಾಯ ನಮಃ ಶ್ರೀ ಕಡಲೆಬ್ಬಾಗುದಿಂನ ಆಂಜನೇಯ ನಮಃ। ಒಬ್ಬಾಳು ಗುರುಬಾಳಿ ಗುರುವಿನ ಪಾದವೇಗತಿ। ಆದವಾನಿಯಲ್ಲಮ್ಮನ ಪಾದವೇ ಗತಿ। ಇತ್ಯಾದಿ ಉಲ್ಲೇಖಗಳು ಲಿಪಿಕಾರನ ಇಷ್ಟದೈವ ಮತ್ತು ಗುರು ಪರಂಪರೆಯನ್ನು ಹಾಗೂ ಧಾರ್ಮಿಕ ಮನೋಭಾವವನ್ನು ಹೇಳುತ್ತವೆ"[೧]

ಕಾಲ, ಘಳಿಗೆ, ದಿವಸ ಹೀಗೆ ಅನೇಕ ಅಂಶಗಳನ್ನು ದಾಖಲು ಮಾಡಿದ್ದಾರೆ. ಧಾರ್ಮಿಕ ದೃಷ್ಟಿಯಿಂದ ನೀಡಿದುದ್ದಾದರೂ ಲಿಪಿಕಾರರು ಲಿಪಿ ಮಾಡಿದ ಕಾಲವನ್ನು ಕೊಡುವುದರಿಂದ ಆ ಕೃತಿಗಳ ಮತ್ತು ಪ್ರತಿಗಳ ಕಾಲವನ್ನು ಗೊತ್ತು ಮಾಡುವುದಕ್ಕೆ ಸಹಾಯವಾಗುತ್ತವೆ.

ಜಗದ್ಗುರು ಪರಂಪರೆಯನ್ನು ಹೊಂದಿದ ಮುರುಘಾ ಪರಂಪರೆಯ ಕವಿಗಳು ವೀರಶೈವ ಧರ್ಮದ ಪ್ರಚಾರಕರಾಗಿ, ಪ್ರಸಾರಕರಾಗಿ, ಮೌಲ್ಯಗಳ ಪ್ರತಿಪಾದಕರಾಗಿ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಅಂದರೆ ಇವರು ಧಾರ್ಮಿಕವಾಗಿ ಮಾತ್ರವಲ್ಲ ಸಾಹಿತ್ಯಿಕವಾಗಿಯೂ ಶ್ರೇಷ್ಠ ಕೊಡುಗೆಯನ್ನು ಕೊಟ್ಟಿದ್ದಾರೆ. ವೀರಶೈವ ಧರ್ಮದ ಸಾಹಿತ್ಯ, ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವಲ್ಲಿ ಗುರುವರ್ಗ ಮತ್ತು ವಿರಕ್ತ ವರ್ಗದವರ ಪಾತ್ರ ಪ್ರಮುಖವಾದುದು. ಐತಿಹಾಸಿಕವಾಗಿ ತುಂಬ ಪ್ರಾಚೀನವೆನಿಸಿದ ಶೈವ ಧರ್ಮದ ಒಂದು ಪ್ರಭೇದವಾಗಿ ಬೆಳೆದುಬಂದ ವೀರಶೈವ ಧರ್ಮ ೧೨ನೆಯ ಶತಮಾನದಲ್ಲಿ ಹೊಸದೊಂದು ಸ್ವರೂಪವನ್ನು ಪಡೆದುಕೊಂಡಿತು. ಹಾಗೆಯೇ ಮಠಗಳು, ಬಸದಿಗಳನ್ನು ತಿಳಿಸುವುದರ ಜೊತೆಗೆ ಆ ಕಾಲದ ಧಾರ್ಮಿಕ ವಿಚಾರಗಳನ್ನು ಗ್ರಹಿಸುವುದಕ್ಕೂ ಸಹಾಯಕವಾಗುತ್ತದೆ. ಇದರಿಂದ ಗ್ರಂಥರಚನೆ ಯಾವ ಸ್ಥಳದಲ್ಲಿ ಆಗುತ್ತಿತ್ತೆಂಬುದನ್ನು ತಿಳಿಯಬಹುದಾಗಿದೆ.

ಧಾರ್ಮಿಕ ಅಂಶಗಳ ಮೂಲಕವಾಗಿ ಸಾಂಸ್ಕೃತಿಕ ಮಹತ್ವವನ್ನು ತಿಳಿಯಲು ಮೂರು ವಿಧಗಳಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಅವುಗಳೆಂದರೆ,

೧. ಕಾಲ, ಘಳಿಗೆ, ದಿವಸವನ್ನು ನೋಡಿ ಕೃತಿ ರಚನೆ ಮಾಡುವುದು

೨. ಇಷ್ಟದೈವ, ಆರಾಧ್ಯದೈವವನ್ನು ಸ್ತುತಿಸುವುದು

೩. ಮಠ, ಬಸದಿಗಳ ಹೆಸರಿನ ಮೂಲಕ ಧಾರ್ಮಿಕ ಅಂಶಗಳನ್ನು ಗುರುತಿಸಬಹುದು

೧. ಕಾಲ, ಘಳಿಗೆ, ದಿವಸವನ್ನು ನೋಡಿ ಕೃತಿ ರಚನೆ :

ಲಿಪಿಕಾರರು ಮೊದಲು ಗ್ರಂಥವನ್ನು ರಚನೆ ಮಾಡುವಾಗ ಆರಂಭ ಹಾಗೂ ಕೊನೆಯಲ್ಲಿ ಕಾಲ, ಘಳಿಗೆ, ದಿವಸವನ್ನು ನೋಡಿ ಗ್ರಂಥವನ್ನು ರಚನೆ ಮಾಡುವುದನ್ನು ಹಸ್ತಪ್ರತಿ ಪುಷ್ಪಿಕೆಗಳು ನಿರೂಪಿಸುತ್ತವೆ. ಇವು ಸಮಾಜದ ನಂಬಿಕೆಗಳಾಗಿದ್ದು ಧಾರ್ಮಿಕತೆಯನ್ನು ಸ್ತುತಿಸುತ್ತವೆ. ಲಿಪಿಕಾರ್ಯ ಕೂಡ ಶುಭ ಕಾರ್ಯವಾಗಿದ್ದು, ಇದರ ಹಿಂದೆ ಇದ್ದಂತಹ ಅವರ ಶ್ರದ್ಧೆಯನ್ನು ನೆನಪಿಸುತ್ತವೆ.

* ಸ್ವಭಾನು ಸಂ (ವತ್ಸರ) ಆಷಾಡ ಶುಲ ಗುರುವಾರ ಚಿತ್ತಾ ನಕ್ಷತ್ರ ೬೦ ಘಳಿಗೆ ತೂರ್ಯ ನಿರಾಲಂಬ ಶರಣನ ಅರುಹಿಸ ಷಟ್‌ಸ್ಥಲದ ವಚನ.[೨] (ಕ್ರ.ಸಂ. ೧೦೮) ತೂರ್ಯ ನಿರಾಲಂಬ ಶರಣನ ಅರುಹಿಸ ಷಟ್‌ಸ್ಥಲದ ವಚನವನ್ನು ಆಷಾಡ ಶುಲ ಗುರುವಾರ ಚಿತ್ತ ನಕ್ಷತ್ರ ೬೦ ಘಳಿಗೆಯಲ್ಲಿ ಬರೆದು ಮುಗಿಸಿರುವುದನ್ನು ನೋಡಬಹುದು.

* ಬಹುಧಾನ್ಯ ನಾಮ ಸಂ ಕಾರ್ತಿಕ ಬ ೨ ಗುರುವಾರದಲ್ಲು ಆ ಮುಗಿದೇವಯ್ಯಗಳ ಸಾಂಗತ್ಯ.[೩] (ಕ್ರಸಂ.. ೨೯೨) ಆಮುಗಿದೇವಯ್ಯಗಳ ಸಾಂಗತ್ಯವನ್ನು ಬಹುಧಾನ್ಯ ನಾಮ ಸಂ ಕಾತಿಳಿಕ ಬ ೨ ಗುರುವಾರದಲ್ಲು ಬರೆದು ಮುಗಿಸಿರುವುದು ಕಂಡುಬರುತ್ತದೆ.

* ಪ್ರಜೋತ್ಪತ್ಯ ಸಂವತ್ಸರದ ಜೇಷ್ಠಮಾಸದ ಬಹುಳದ ಚತುರ್ಥದ ಸೋಮವಾರಾದಲ್ಲೂ ನೂರೊಂದು ಸ್ಥಲ ಟೀಕು ಸಹಿತ ಪ್ರತಿ ಸ್ವರ ಏಕ್ಕೋತ್ತರ ಶತಸ್ಥಲದ ಟೀಕೆ[೪] (ಕ್ರ.ಸಂ. ೭೪೦) ಜೇಷ್ಠಮಾಸದ ಬಹುಳದ ಚತುರ್ಥದ ಸೋಮವಾರದಲ್ಲೂ ನೂರೊಂದು ಸ್ಥಲ ಟೀಕೆ ಬರೆಯುವುದನ್ನು ಕಾಣಬಹುದು.

* ಶಾರ್ವರಿನಾಮ ಸಂದ ಶ್ರಾವಣ ಶು ೨ ಕಪೋತನ ಸಾಂಗತ್ಯ.[೫] (ಕ್ರ.ಸಂ. ೮೪೧) ಕಪೋತನ ಸಾಂಗತ್ಯವನ್ನು ಶಾರ್ವರಿನಾಮ ಸಂದ ಶ್ರಾವಣ ಶು ೨ರಲ್ಲಿ ಲಿಪಿಕಾರನು ಬರೆದು ಮುಗಿಸಿರುವುದಾಗಿ ಹೇಳಿದ್ದಾನೆ.

* ಶಾರ್ವರೀ ಸರಿ ಮಾರ್ಗೀಶ್ವರ ಶು ೨ಲ್ಲು.[೬] (ಕ್ರ.ಸಂ. ೧೦೫೦) ಇದರಲ್ಲಿ ಕವಿಯ ಉಲ್ಲೇಖವಾಗಲಿ ಅಥವಾ ಲಿಪಿಕಾರನ ಉಲ್ಲೇಖವಾಗಲಿ ಈ ಹಸ್ತಪ್ರತಿ ಪುಷ್ಪಿಕೆಯಲ್ಲಿ ಇಲ್ಲ. ಈ ಮೇಲಿನ ಸಾಲನ್ನು ಮಾತ್ರ ನಾವು ನೋಡಬಹುದಾಗಿದೆ.

* ರಾಕ್ಷಸ ಸಂ ಬಹುಳ ಅಷ್ಟಮಿ ಸೋಮವಾರದ ಒಂಬತ್ತುಗಳಿಗೆ.[೭] (ಕ್ರ.ಸಂ. ೧೧೪೧) ಕೈವಲ್ಯ ಪದ್ಧತಿಯನ್ನು ರಾಕ್ಷಸ ಸಂ ಬಹುಳ ಅಷ್ಟಮಿಯ ಸೋಮವಾರದ ಒಂಬತ್ತು ಗಳಿಗೆಯಲ್ಲಿ ಲಿಪಿಕಾರನು ಬರೆದು ಮುಗಿಸಿರುವುದಾಗಿ ಕೃತಿಯಲ್ಲಿ ಹೇಳಿರುವನು.

* ಶಾಲಿವಾಹನ ಶಕವರ್ಷ ೧೭೫೦ನೆಯ ಪ್ರವರ್ತಮಾನ ಸಾರ್ವ ಧಾರೀ ಸಂವತ್ಸರ ಆಷಾಢ ಶುದ್ಧ ಸೌಮ್ಯವಾಸರ ದ್ವಿತೀಯ ಯಾಮ.[೮] (ಕ್ರ.ಸಂ. ೧೧೮೧) ಸೌಮ್ಯವಾಸರ ದ್ವಿತೀಯ ಯಾಮವನ್ನು ಶಕವರ್ಷ ೧೭೫೦ನೆಯ ಪ್ರವರ್ತಮಾನ ಸಾರ್ವ ಧಾರೀ ಸಂವತ್ಸರ ಆಷಾಢ ಶುದ್ಧದಂದು ಬರೆದು ಸಮಾಪ್ತಿಯಾಯಿತು.

* ವಿಕ್ರಮ ಸಂತ್ಸರ ಕಾರ್ತಿಕ ಶುದ್ಧ ೫ ಶುಕ್ರವಾರ ಗಣ ಸಹಸ್ರನಾಮ ಮಾಡಿ ಸಮಾಪ್ತ.[೯] (ಕ್ರ.ಸಂ. ೧೩೪೩) ಗಣ ಸಹಸ್ರನಾಮವನ್ನು ವಿಕ್ರಮ ಸಂವತ್ಸರ ಕಾರ್ತೀಕ ಶುದ್ಧ ೫ ಶುಕ್ರವಾರದಂದು ಬರೆದು ಮುಗಿಸಿರುವುದನ್ನು ನೋಡಬಹುದು.

* ರಾಕ್ಷಸ ಸಂವತ್ಸರ ಭಾದ್ರಪದ ಬಹುಳ ೧೨ಲ್ಲು ಗಣ ಸಹಸ್ರನಾಮ ಸಮಾಪ್ತ[೧೦] (ಕ್ರ.ಸಂ. ೧೩೪೪) ಸಂವತ್ಸರ ಭಾದ್ರಪದ ಬಹುಳ ೧೨ಲ್ಲು ಗಣ ಸಹಸ್ರನಾಮವನ್ನು ಪ್ರತಿಮಾಡಿ ಪೂರ್ಣಗೊಳಿಸಿದ್ದೆಂದು ಹೇಳುತ್ತದೆ.

* ಪ್ರಜೋತ್ಪತ್ಯ ನಾಮ ಸಂದ ವೈಸಾಕ ಸುದ್ಧ ೯ಯಲ್ಲೂ ಅಮೃತಗಳಿಗೆ ಬುಧವಾರ ೯ ತಾಸಿಗೆ ಗುರುಭಕ್ತರ ಕಾವ್ಯ ಸಂಪೂರ್ಣ ಮಂಗಳ ಮಹು ಶ್ರೀ.[೧೧] (ಕ್ರ.ಸಂ. ೧೯೪೮) ಗುರುಭಕ್ತರ ಕಾವ್ಯವನ್ನು ಲಿಪಿಕಾರನ್ನು ವೈಸಾಕ ಸುದ್ಧ ೯ಯಲ್ಲೂ ಅಮೃತಗಳಿಗೆ ಬುಧವಾರ ೯ ತಾಸಿಗೆ ಬರೆದು ಮುಗಿಸಿರುವುದಾಗಿ ಹೇಳಿರುವುದನ್ನು ನಾವು ಇಲ್ಲಿ ನೋಡಬಹುದು.

* ವಿಜಯಾಭ್ಯುದಯ ಶಾಲಿವಾಹನ ಶಕ ೧೬೩೬ನೆಯ ಜಯ ಸಂದ ಅಧಿಕಾಷಾಡ ಬ ೩ ಸ್ಥಿರವಾರ ಶತಾವಿಶಾಖೆ ನಕ್ಷತ್ರದಲ್ಲು ಚನ್ನಬಸವೇಶ್ವರ ಪುರಾಣ ಸಮಾಪ್ತ.[೧೨] (ಕ್ರ.ಸಂ. ೧೬೫೮) ಶಾಲಿವಾಹನಶಕ ೧೬೩೬ನೆಯ ಜಯ ಸಂದ ಅಧಿಕಾಷಾಡ ಬ ೩ ಸ್ಥಿರವಾರ ಶತಾವಿಶಾಖೆ ನಕ್ಷತ್ರದಲ್ಲು ಲಿಪಿಕಾರನು ಚನ್ನಬಸವೇಶ್ವರ ಪುರಾಣವನ್ನು ಬರೆದು ಮುಗಿಸಿರುವುದನ್ನು ಕಾಣಬಹುದು.

* ಶ. ೧೭೩೮ನೆಯ ಈ ಶ್ವರನಾಮ ಸಂ/ದ/ ಕಾರ್ತೀಕ ಶು ೩ ಶುಕ್ರವಾರ ಅಶ್ವನಿ ನಕ್ಷತ್ರ[೧೩] (ಕ್ರ.ಸಂ. ೧೬೬೭) ವೀರಶೈವ ದೈವವನ್ನು ಸೂಚಿಸುವಂತಹ ಈಶ್ವರನಾಮ ಸಂವತ್ಸರದಲ್ಲಿ ಶ. ೧೭೩೮ನೆಯ ಸಂ/ದ/ ಕಾರ್ತೀಕ ಶು ೩ ಶುಕ್ರವಾರ ಅಶ್ವನಿ ನಕ್ಷತ್ರದಂದು ಚನ್ನಬಸವ ಪುರಾಣವನ್ನು ಬರೆದಿರುವುದನ್ನು ನೋಡಬಹುದು.

* ನೃಪ ಶಾ. ಶಕ. ೧೭೬೮ನೆಯ ಕ್ರೋಧಿ ಸಂವತ್ಸರದ ಪುಷ್ಯಶುದ್ಧ ೧೪ ಸೌಮ್ಯವಾರ ಪುನರ್ವಸು ನಕ್ಷತ್ರ ತಾಸು ೬ಕ್ಕೆ.[೧೪] (ಕ್ರ.ಸಂ. ೧೬೭೨)ಚನ್ನಬಸವೇಶ್ವರ ಪುರಾಣವನ್ನು ಶಕ ೧೭೬೮ನೆಯ ಕ್ರೋಧಿ ಸಂವತ್ಸರದ ಪುಷ್ಯ ಶುದ್ಧ ೧೪ ಸೋಮವಾರ ಪುನರ್ವಸು ನಕ್ಷತ್ರ ತಾಸು ೬ಕ್ಕೆ ಬರೆದು ಮುಗಿಸಿರುವುದನ್ನು ನೋಡಬಹುದು.

* ವಿಭವ ಸಂ/ ಭಾದ್ರಪದ ಬಹುಳ ೫ ಸೋಮವಾರ ಘಳಿಗೆ ೧೦ ಭರಣಿ ನಕ್ಷತ್ರ ಚನ್ನಬಸವೇಶ್ವರ ದೇವರ ಪುರಾಣ.[೧೫] (ಕ್ರ.ಸಂ. ೧೮೬೮) ಚನ್ನಬಸವೇಶ್ವರ ದೇವರ ಪುರಾಣ ಭಾದ್ರಪದ ಬಹುಳ ೫ ಸೋಮವಾರ ಘಳಿಗೆ ೧೦ ಭರಣಿ ನಕ್ಷತ್ರದಂದು ಬರೆದು ಮುಗಿಸಿರುವುದನ್ನು ನೋಡಬಹುದು.

* ಶ್ರೀಮನ್ ಶಾಲಿವಾಹನ ಶಖೆ ೧೮೩೪ರಲ್ಲಿ ಫಾಲ್ಗುಣ ಮಾಸ ಶುಕ್ಲಪಕ್ಷದ ತ್ರಯೋದಸಿ ಬುಧವಾರ ಸಮಾಸ್ತ ಮಂಗಳ ॥ಯತಿ॥ ಶ್ರೀಮದ ವಿರಳ...ಚಂನಬಸವೇಶ್ವರ ಸ್ವಾಮಿನಾ ಕೃತಂ ವಚನ ಸಮಾಪ್ತಿ ದೇವ ಶ್ರೀ ಗುರುಸಿದ್ಧದೇವ.[೧೬] (ಕ್ರ.ಸಂ. ೧೭೨೧) ಚನ್ನಬಸವೇಶ್ವರ ವಚನವನ್ನು ೧೮೩೪ರಲ್ಲಿ ಫಾಲ್ಗುಣ ಮಾಸ ಶುಕ್ಲಪಕ್ಷದ ತ್ರಯೋದಸಿ ಬುಧವಾರ ಬರೆದು ಮುಗಿಸಿರುವುದನ್ನು ಕಾಣಬಹುದು.

* ದುಂದುಬಿನಾಮ ಸಂವತ್ಸರದ ಚೈತ್ರ ಶುದ್ಧ ೧೦ ಸೌಮ್ಯವಾದ ಹಗಲು ತಾಸು ೬ರಲ್ಲಿ ಚೋರ...ಶಾಲಿವಾಹನ ಶಕ ೧೭೪೮ಯ ದುರ್ಮುಖಿನಾಮ ಸಂವತ್ಸರದ ಚೈ.ಶು. ೧೦ಲ್ಲು ಬುಧುವಾರ ಹಗಲು ತಾಸು ೬ಕ್ಕೆ ಸಂಪೂರ್ಣ[೧೭] (ಕ್ರ.ಸಂ. ೧೭೫೯) ಚೋರಬಸವನ ಚಾರಿತ್ರ್ಯವನ್ನು ಶಕ ೧೭೪೮ಯ ದುರ್ಮುಖಿನಾಮ ಸಂವತ್ಸರದ ಚೈ.ಶು. ೧೦ಲ್ಲು ಬುಧವಾರ ಹಗಲು ೬ ಗಂಟೆಗೆ ಬರೆದು ಮುಗಿಸಿರುವುದನ್ನು ನೋಡಬಹುದು.

* ಶ್ರೀ ವಿಜಯಭ್ಯೂದಯ ಶಾಲಿವಾಹನ ಶಾಕಬ್ದಾ : ೧೭೮೫ನೆ ಪ್ರವರ್ತಮಾನಕ್ಕೆ ಸಲುವ ದುಂದುಭಿನಾಮ ಸಂವತ್ಸರ ದಕ್ಷಿಣಾಯನೆ ಶಿಮಂತ್ರುತೌ ಮಾರ್ಗಶಿರ ಮಾಸೆ ಶುಕ್ಲಪಕ್ಷ ತಿಥೌ

೨ ಭಾನುವಾರ ಜೇಷ್ಠ ನಕ್ಷತ್ರ ಮಧ್ಯಾನ್ಹ ಚಂನ ಬಸವ ಪುರಾಣಂ ಲಿಖ್ಯಿತೆ ಶುಭಮಸ್ತು.[೧೮] (ಕ್ರ.ಸಂ. ೨೨೮೪) ಚನ್ನಬಸವೇಶ್ವರ ಪುರಾಣವನ್ನು ೧೭೮೫ನೆ ಪ್ರವರ್ತಮಾನಕ್ಕೆ ಸಲುವ ದುಂದುಭಿನಾಮ ಸಂವತ್ಸರ ದಕ್ಷಿಣಾಯನೆ ಹಿಶಿಮಂತ್ರುತೌ ಮಾರ್ಗಶಿರ ಮಾಸದ ಶುಕ್ಲಪಕ್ಷ ತಿಥೌ ೨ ಭಾನುವಾರದ ಜೇಷ್ಠ ನಕ್ಷತ್ರ ಮಧ್ಯಾನ್ಹ ಬರೆದು ಮುಗಿಸಿರುವುದು ಗಮನಾರ್ಹ.

* ವಿಕಾರಿನಾಮ ಸಂವತ್ಸರ ಮಾಘಮಾಸ ಕೃಷ್ಣಪಕ್ಷ ಚತುರ್ದಸಿ ಶಿವಯೋಗ ಮಂದವಾರ ಸ್ಥೆದಲ್ಲಿ ಏಕೋತ್ತರ ಶತಸ್ಥಲಟೀಕು ಸಹಿತ ಬರದುದು ಸಂಪೂರ್ಣ.[೧೯] (ಕ್ರ.ಸಂ. ೪೧೬) ಏಕೋತ್ತರ ಶತಸ್ಥಲ ಟೀಕುವನ್ನು ಲಿಪಿಕಾರನು ವಿಕಾರಿನಾಮ ಸಂವತ್ಸರ ಮಾಘಮಾಸ ಕೃಷ್ಣಪಕ್ಷ ಚತುರ್ದಸಿಯಲ್ಲಿ ಬರೆದು ಮುಗಿಸಿರುವುದನ್ನು ಕಾಣಬಹುದು.

* ಪ್ರಜೋತ್ಪತ್ಯ ಸಂವತ್ಸರದ ಮೂರಣೇ ಜಾವದಲ್ಲಿಯು ಬರೆದು ಸಮಾಪ್ತಿಯಾದ ನಾನಾರ್ಥ ರತ್ನಾ.[೨೦] (ಕ್ರ.ಸಂ. ೧೦೪೯) ಚನ್ನಬಸವೇಶ್ವರ ದೇವರು ನಾನಾರ್ಥ ರತ್ನಾವನ್ನು ಪ್ರಜೋತ್ಪತ್ಯ ಸಂವತ್ಸರದ ಮೂರನೇ ಜಾವದಲ್ಲಿಯು ಬರೆದು ಮುಗಿಸಿರುವುದನ್ನು ನೋಡಬಹುದು.

* ದುರ್ಮುಖಿ ಸಂವತ್ಸರ ಆಶ್ವೀಜ ಶು.೮ ಚಂದ್ರವಾರ ೬ ತಾಸಿಗೆ.[೨೧] (ಕ್ರ.ಸಂ. ೧೪೭೫) ದುರ್ಮುಖಿ ಸಂವತ್ಸರ ಆಶ್ವೀಜ ಶು.ವ. ಚಂದ್ರವಾರ ೬ ತಾಸಿಗೆ ಪ್ರಭುಲಿಂಗ ಲೀಲೆಯನ್ನು ಬರೆದು ಮುಗಿಸಿದ್ದಾನೆ.

* ಬಹುಧಾನ್ಯ ಸಂವತ್ಸರದ ಜೇಷ್ಠಮಾಸ ಬಹುಳ ಪಂಚಮಿ ಸೋಮವಾರ[೨೨] (ಕ್ರ.ಸಂ. ೧೪೭೫) ಪ್ರಭುಲಿಂಗ ಲೀಲೆಯನ್ನು ಬಹುಧಾನ್ಯ ಸಂವತ್ಸರದ ಜೇಷ್ಠಮಾಸ ಬಹುಳ ಪಂಚಮಿಯ ಸೋಮವಾರದಂದು ಮುಗಿಸಿರುವುದು ಗಮನಾರ್ಹವಾಗಿದೆ.

* ವಿಕ್ರಮನಾಮ ಸಂವತ್ಸರ ಶ್ರಾವಣ ಸುಧ ೬ ಬುಧವಾರದಲ್ಲಿ ಯೆರೆಬುದಿಗಳ ಬಸವನ ಕರುಣದಿಂದ ಪ್ರಭುಲಿಂಗ ಲೀಲೆ.[೨೩] (ಕ್ರ.ಸಂ. ೧೪೮೨) ಯೆರೆಬುದಿಗಳ ಬಸವನು ಪ್ರಭುಲಿಂಗ ಲೀಲೆಯನ್ನು ವಿಕ್ರಮನಾಮ ಸಂವತ್ಸರ ಶ್ರಾವಣ ಸುಧ ೬ ಬುಧವಾರದಲ್ಲಿ ಬರೆದು ಪೂರ್ಣಗೊಳಿದರೆಂದು ತಿಳಿಸುತ್ತದೆ.

* ವಿಳಂಬಿ ಸಂವತ್ಸರ ಜೇಷ್ಠಮಾಸದ ದಶಮಿ ಗುರುವಾರ ಪ್ರಾರಂಭಂ ಭಾದ್ರಪದ ಮಾಸದ ಶುಕ್ಲಪಕ್ಷ ತದಿಗೆ ಸೋಮವಾರ ಪ್ರಾಂತಃ ಕಾಲದಲ್ಲಿ ವೃಷಭೇಂದ್ರ ವಿಜಯ ಮಹಾಪುರಾಣ ಸಮಾಪ್ತ.[೨೪] (ಕ್ರ.ಸಂ. ೧೫೬೦) ವೃಷಭೇಂದ್ರ ವಿಜಯ ಮಹಾಪುರಾಣವನ್ನು ವಿಳಂಬಿ ಸಂವತ್ಸರದ ಜೇಷ್ಠ ಮಾಸದ ದಶಮಿ ಗುರುವಾರ ಪ್ರಾರಂಭವಾದ ಭಾದ್ರಪದ ಮಾಸದ ಶುಕ್ಲಪಕ್ಷ ತದಿಗೆ ಸೋಮವಾರ ಬೆಳಿಗಿನ ಕಾಲದಲ್ಲಿ ಬರೆದಿರುವುದನ್ನು ಕಾಣಬಹುದು.

* ಶಾಲಿವಾಹನ ಶಕ ೧೬೫೧ನೆಯ ಕೀಲಕ ಸಂ.ದ. ಮಾಘ ಬಹುಳ ೧೪ ಶನಿವಾರದ ತಾಸು ೫ಕ್ಕೆ ಯುಂ ಎನ್ನೊಡೆಯ ಬಸವೇಶ್ವರನ ಪುರಾಣದ ಟೀಕು ಬರದು[೨೫] (ಕ್ರ.ಸಂ.

೧೫೬೨) ಬಸವೇಶ್ವರನ ಪುರಾಣದ ಟೀಕುವನ್ನು ೧೬೫೧ನೆಯ ಕೀಲಕ ಸಂ.ದ. ಮಾಘ ಬಹುಳ ೧೪ ಶನಿವಾರದಂದು ೫ ಗಂಟೆಗೆ ಬರೆದು ಮುಗಿಸಿರುವುದು ಗಮನಾರ್ಹ.

* ಶುಭಕೃತು ಸಂವತ್ಸರ ಭಾದ್ರಪದ ಬ೯ ಶನಿವಾರದಲ್ಲು ಸಾನಂದ.[೨೬] (ಕ್ರ.ಸಂ. ೧೭೮೧) ಮಡಿವಾಳಯ್ಯನ ಸಾಂಗತ್ಯವನ್ನು ಲಿಪಿಕಾರನು ಸಂವತ್ಸರ ಭಾದ್ರಪದ ಬ ೯ ಶನಿವಾರದಂದು ಬರೆದು ಮುಗಿಸಿರುವುದನ್ನು ನೋಡಬಹುದು.

* ಶ್ರೀಮತು ಶೋಭಕ್ರುತು ನಾಮ ಸಂವತ್ಸರದ ಮಾರ್ಗಶಿರ ಶು ೭ ಭೌಮ್ಯವಾರ ನಕ್ಷತ್ರ ಉತ್ರಾಭದ್ರೆ ಲಗ್ನ ಮಕರದಲ್ಲಿ ಮುಗಿದ.[೨೭] (ಕ್ರ.ಸಂ.೨೧೭೯) ರಾಜಶೇಖರ ವಿಳಾಸವನ್ನು ಲಿಪಿಕಾರನು ಮಾರ್ಗಶಿರ ಶು ೭ ಭೌಮ್ಯವಾರ ನಕ್ಷತ್ರ ಉತ್ರಾಭದ್ರೆ ಲಗ್ನ ಮಕರದಲ್ಲಿ ಬರೆದು ಮುಗಿಸಿರುವುದನ್ನು ಕಾಣಬಹುದು.

* ಕ್ರೋಧಿ ನಾಮ ಸಂವತ್ಸರದ ಭಾದ್ರ ಸಮಾಸ ಆದಿತ್ಯವಾರ ಅಮವಸೆಯಲ್ಲು ಇ ರಾಜಶೇಖರವು ಸಂಪೂರ್ಣವಾಯಿತ್ತು.[೨೮] (ಕ್ರ.ಸಂ. ೨೧೮೩) ಕ್ರೋಧಿ ನಾಮ ಸಂವತ್ಸರದ ಭಾದ್ರ ಸಮಾಸ ಆದಿತ್ಯವಾರ ಅಮವಾಸೆಯಲ್ಲಿ ರಾಜಶೇಖರ ಪುರಾಣವನ್ನು ಬರೆದು ಮುಗಿಸಿರುವುದನ್ನು ನೋಡಬಹುದು.

* ಶಾಲಿವಾಹನ ಸಖ ಸಂದ ೧೬೫೪ ಸಂದುದು ಶಕ್ಲ ಸಂವತ್ಸರ ಆಷಾಡಮಾಸದ ಶುಕ್ಲಪಕ್ಷದ ದಶಮಿ ಮಂಗಲ ದಿನದಲು ತಿಳಿವಳ್ಳಿ ಮಠದಲ್ಲಿ ಸಮಾಪ್ತಿಯಾದುದು.[೨೯] (ಕ್ರ.ಸಂ. ೨೨೭೮) ಲಿಂಗಾಚಾರ ರಚನಾಗಮ ಟೀಕೆಯನ್ನು ಲಿಪಿಕಾರನು ೧೬೫೪ ಸಂದುದು ಶುಕ್ಲ ಸಂವತ್ಸರ ಆಷಾಡಮಾಸದ ಶಕ್ಲಪಕ್ಷದ ದಶಮಿ ಮಂಗಲ ದಿನದಲ್ಲಿ ಬರೆದು ಮುಗಿಸಿರುವುದು ಗಮನಾರ್ಹ.

* ಸ್ವಸ್ತಿ... ಶಕವರ್ಷ ೧೫೭೦ನೆಯ ಬಸಂದ ವರ್ತಮಾನ ವೆಯ ಸಂವತ್ಸರದ ಮಾಗ ಬಷಿಗೆಯೂ ಗುರುಮಠರ ಹಸ್ತ ನಕ್ಷತ್ರದಲ್ಲಿ ಮುಗಿದ ಶ್ರೀ ಮದ್ವೀರ ಮಾಹೇಶ್ವರಾಚಾರ ಸಂಗ್ರಹಕ್ಕೆ.[೩೦] (ಕ್ರ.ಸಂ. ೨೩೯೮) ಮದ್ವೀರ ಮಾಹೇಶ್ವರಾಚಾರರು ವಿವೇಕ ಚಿಂತಾಮಣಿಯನ್ನು ೧೫೭೦ನೆಯ ಬಸಂದ ವರ್ತಮಾನವೆಯ ಸಂವತ್ಸರದ ಮಾಗ ಬಷಿಗೆಯೂ ಗುರುಮಠರ ಹಸ್ತ ನಕ್ಷತ್ರದಲ್ಲಿ ಬರೆದು ಮುಗಿಸಿರುವುದನ್ನು ನೋಡಬಹುದು.

* ಸೌಮ್ಯ ಸಂವತ್ಸರದ ಶ್ರಾವಣ ಮಾಸದ ಕೃಷ್ಣಪಕ್ಷದ ಶುದ್ಧ

ಪಂಚಮಿ ಶುಕ್ರವಾರದಲ್ಲು ಬಾವಿಗೆಯ ವಿರಕ್ತಮಠದಲ್ಲಿ ವೀರಶೈವಾಮೃತ ಪುರಾಣವ ಬರದು ಸಮಾಪ್ತಿಯಾಯಿತ್ತು...ಶುಭಮಸ್ತು.[೩೧] (ಕ್ರ.ಸಂ. ೨೪೧೪)

ವೀರಶೈವಾಮೃತ ಪುರಾಣವನ್ನು ಸಂವತ್ಸರದ ಶ್ರಾವಣ ಮಾಸದ ಕೃಷ್ಣಪಕ್ಷದ ಶುದ್ಧ ಪಂಚಮಿ ಶುಕ್ರವಾರದಲ್ಲಿ ಬರೆದಿರುವುದನ್ನು ಕಾಣಬಹುದು.

[illegible]

* ಕ್ರೋಧನ ಸಂವತ್ಸರದ ಕಾರ್ತೀಕ ಮಾಸದೊಳು ಸುಕ್ರವಾರದ

ಮೂರುವರೆ ಗಳಿಗೆಯಲ್ಲು ಮಹತ್ತದೇವರು ಭೈರವೇಶ್ವರನ ಕಾವ್ಯ ಬರದು ಸಂಪೂರ್ಣ.[೩೨] (ಕ್ರ.ಸಂ. ೩೦೯೪)

ಮಹತ್ತ ದೇವರು ಭೈರವೇಶ್ವರನ ಕಾವ್ಯವನ್ನು ಕ್ರೋಧನ ಸಂವತ್ಸರ ಕಾರ್ತೀಕ ಮಾಸದೊಳು ಶುಕ್ರವಾರದ ಮೂರುವರೆ ಗಳಿಗೆಯಲ್ಲಿ ಬರೆದು ಮುಗಿಸಿರುವುದನ್ನು ನೋಡಬಹುದು.

* ಕ್ರೋಧಿ ಸಂವತ್ಸರದ ಮಾಘಮಾಸದ ಕೃಷ್ಣಪಕ್ಷದ ಪಂಚಮಿಯ

ಬುಧವಾರದಲ್ಲಿಂಯು ಪಂಚಾಕ್ಷರಿದೇವರು ಸಿದ್ಧಾಂತ ಶಿಖಾಮಣಿಯು ಬರೆದು ಪರಿಸಮಾಪ್ತಿಯಾಯಿತ್ತು.[೩೩] (ಕ್ರ.ಸಂ. ೩೧೦೧)

ಪಂಚಾಕ್ಷರಿ ದೇವರು ಸಿದ್ಧಾಂತ ಶಿಖಾಮಣಿಯನ್ನು ಕ್ರೋಧಿ ಸಂವತ್ಸರದ ಮಾಘಮಾಸದ ಕೃಷ್ಣಪಕ್ಷದ ಪಂಚಮಿಯ ಬುಧವಾರದಲ್ಲಿ ಬರೆದು ಮುಗಿಸಿರುವುದನ್ನು ಕಾಣಬಹುದು.

* ರಉದ್ರಿನಾಮ ಸಂವತ್ಸರ ಶ್ರಾವಣ ಬ ೫ಲ್ಲು ಸುಕ್ರವಾರ

ತಾಸು ೯ಕ್ಕೆ ಸೋಮನಾಥಕಾವ್ಯ ಸಮಾಪ್ತ.[೩೪] (ಕ್ರ.ಸಂ. ೩೧೯೫)

ಸೋಮನಾಥ ಕಾವ್ಯವನ್ನು ಲಿಪಿಕಾರನು ರಉದ್ರಿನಾಮ ಸಂವತ್ಸರ ಶ್ರಾವಣ ಬ ೫ಲ್ಲು ಶುಕ್ರವಾರ ತಾಸು ೯ ಗಂಟೆಗೆ ಬರೆದು ಮುಗಿಸಿರುವುದನ್ನು ನೋಡಬಹುದು.

* ದುಂದುಭಿನಾಮ ಸಂವತ್ಸರದ ಚೈತ್ರ ಶುದ್ಧ ಬೃಹಸ್ಪತಿವಾರ ೧೩ ಸುಂಗಣಗೆರೆ ಮಠದಲ್ಲಿ ವಿರಕ್ತ್ಯಯ್ಯ ಮುಗಿಸಿದ್ದು.[೩೫] (ಕ್ರ.ಸಂ. ೬೩)

ಅಕ್ಷರ ಮಾಲಿಕಾ ಗದ್ಯವನ್ನು ಲಿಪಿಕಾರನುಬರೆದು ದುಂದುಭಿನಾಮ ಸಂವತ್ಸರದ ಚೈತ್ರ ಶುದ್ಧ ಬೃಹಸ್ಪತಿವಾರ ೧೩ ಸುಂಗಣಗೆರೆ ಮಠದಲ್ಲಿ ಬರೆದು ಮುಗಿಸಿರುವುದನ್ನು ನೋಡಬಹುದು.

* ಶಾಲಿವಾಹನ ಶಕ ೧೬೩೮ನೆಯ ದುರ್ಮುಖಿ ಸಂವತ್ಸರದ ಕಾರ್ತೀಕ

ಶುದ್ಧ ೧೦ಲ್ಲೂ ಸೀಣ್ಯದ ಶ್ಯಾನಭೋಗ ವೀರಸ್ಯೆಯ್ಯನ ಲಿಂಗಂಣನ ಮಗ ದೇವಪ್ಪನೂ ಬರೆದ ಪುಸ್ತಕ.[೩೬] (ಕ್ರ.ಸಂ. ೬೯)

ದೇವಪ್ಪನು ಅಕ್ಷರ ಮಾಲಿಕಾ ಗದ್ಯವನ್ನು ಶಾಲಿವಾಹನ ಶಕ ೧೬೩೮ನೆಯ ದುರ್ಮುಖಿ ಸಂವತ್ಸರದ ಕಾರ್ತೀಕ ಶುದ್ಧ ೧೦ಲ್ಲು ಬರೆದಿರುವುದನ್ನು ಕಾಣಬಹುದು.

* ತಾರಣನಾಮ ಸಂವತ್ಸರಸ್ಯ ಪಂಚಮಾಖ್ಯಂ ಭಾನುವಾರೇ

ಆಯಂ ಸ್ವರ್ಗ: ಸಮಾಪ್ತಿ.[೩೭] (ಕ್ರ.ಸಂ. ೫೫೧)

ಕಲ್ಯಾಣದ ಪ್ರಸಕ್ತಿಯನ್ನು ತಾರಣನಾಮ ಸಂವತ್ಸರಸ್ಯ ಪಂಚಮಾಖ್ಯಂ ಭಾನುವಾರದಂದು ಬರೆದು ಮುಗಿಸಿರುವುದನ್ನು ನೋಡಬಹುದು.

* ನಂದನ ಸಂವತ್ಸರದ ಶುದ್ಧ ೫ ಗುರುವಾರದಲ್ಲೂ ವಾತೂಲ ತಂತ್ರ

ದಶಪಟಲಲು ಬರದು ಸಂಪೂರ್ಣ.[೩೮] (ಕ್ರ.ಸಂ. ೬೧೨)

ಕೈವಲ್ಯ ಪದ್ಧತಿಯನ್ನು ನಂದನ ಸಂವತ್ಸರದ ಶುದ್ಧ ೫ ಗುರುವಾರದಲ್ಲು ಬರೆದು ಮುಗಿಸಿರುವುದನ್ನು ನೋಡಬಹುದು.

* ಕಲಿಸಂದ ೪೯೨೧ಯದಾದ ವಿಕ್ರಮ ಸಂವತ್ಸರದ ಶ್ರಾವಣ ಬಹುಳ ೧೨

ಸೋಮವಾರದಲ್ಲಿ ಶ್ರೀಮಚ್ಛಂಕರಾಧ್ಯಕೃತ ವೃಷಭ ಪುರಾಣವನು ಚಂಗಡಿಹಳ್ಳಿ ಚನ್ನವೀರದೇವರು ಲಿಖಿಸಿ ಸಮಾಪ್ತಿಯ ಮಾಡಿದರು.[೩೯] (ಕ್ರ.ಸಂ. ೬೮೩)

ವೃಷಭ ಪುರಾಣವನು ಕಲಿಸಂದ ೪೯೨೧ಯದಾದ ವಿಕ್ರಮ ಸಂವತ್ಸರದ ಶ್ರಾವಣ ಬಹುಳ ೧೯ ಸೋಮವಾರದಲ್ಲಿ ಬರೆದು ಮುಗಿಸಿರುವುದನ್ನು ಕಾಣಬಹುದು.

ಹೀಗೆ ಗ್ರಂಥಗಳ ರಚನೆ ಮಾಡುವಾಗ ಆರಂಭ ಮತ್ತು ಕೊನೆಯನ್ನು ಶುಭದಿನದಂದು ಕಾಲವನ್ನು ನೋಡಿ, ತಿಂಗಳು, ನಕ್ಷತ್ರನ್ನು ನೋಡಿ ಆರಂಭಿಸಿ ಮತ್ತು ಮುಕ್ತಾಯ ಮಾಡುತ್ತ ಇರುವುದನ್ನು ಈ ಮೇಲಿನಂತೆ ನೋಡಬಹುದು. ಇದರಿಂದ ಕೃತಿಯ ಕಾಲವನ್ನು ತಿಳಿಯುವುದಕ್ಕೆ ಸಹಾಯಕವಾಗುತ್ತದೆ.

೯. ಇಷ್ಟದೈವ, ಆರಾಧ್ಯದೈವವನ್ನು ಸ್ತುತಿಸುವುದು :

"ಜೈನ ಕೃತಿಗಳು ಶ್ರೀ ವಿತರಾಗಾಯನಮಃ ಸ್ತುತಿಯಿಂದ ವೀರಶೈವ ಕೃತಿಗಳಲ್ಲಿ ಹೆಚ್ಚಾಗಿ 'ಶ್ರೀ ಗುರುಬಸವಲಿಂಗಾಯ ನಮಃ'[೪೦] ಎಂಬ ಸ್ತುತಿಯಿಂದ ಪ್ರಾರಂಭವಾಗುವುದನ್ನು ನೋಡಬಹುದು 'ವೀರಶೈವ ಹಸ್ತಪ್ರತಿಪುಷ್ಪಿಕೆಗಳು' ಎಂಬ ಗ್ರಂಥದಲ್ಲಿ ಹೆಚ್ಚಾಗಿ 'ಶ್ರೀ ಗುರುಬಸವಲಿಂಗಾಯ ನಮಃ' ಎಂದು ಪ್ರಾರಂಭವಾಗುವುದನ್ನು ಕಾಣಬಹುದು. ಅದನ್ನು ಎಸ್. ಶಿವಣ್ಣನವರು

* (ನಕ್ಷತ್ರ) ಎಂಬ ಚಿಹ್ನೆಯ ಮೂಲಕ ಈ ಸ್ತುತಿಯನ್ನು ಗುರುತಿಸುವುದನ್ನು ನೋಡಬಹುದು. ಪ್ರತಿಯೊಬ್ಬ ಲಿಪಿಕಾರನೂ ಸಹ ಗ್ರಂಥಗಳನ್ನು ರಚನೆ ಮಾಡುವುದಕ್ಕೆ ಮುಂಚೆ ಇಷ್ಟದೈವ, ಆರಾಧ್ಯದೈವವನ್ನು ಸ್ತುತಿಸುವುದನ್ನು ನೋಡಬಹುದು. ಇದರಿಂದ ಲಿಪಿಕಾರನ ಪ್ರದೇಶವನ್ನು ಗುರುತಿಸಬಹುದಾಗಿದೆ.

* ಪುಟ್ಟನ್ನ ದಾನೇಶ್ವರಾಯ ನಮಃ.[೪೧] (ಕ್ರ.ಸಂ. ೭೭)

ಲಿಪಿಕಾರನಾದ ಗುರುಲಿಂಗ ದೇವರು ಪುಟ್ಟನ್ನ ದಾನೇಶ್ವರನನ್ನು ಸ್ತುತಿಸುವುದನ್ನು ನೋಡಬಹುದು.

* ಗವಿಮಠದ ಗುರುಬಸವೇಶ್ವರ ಪಾದವೆಗತಿ.[೪೨] (ಕ್ರ.ಸಂ. ೧೫೪)

ಲಿಪಿಕಾರನು ರಂಭಾಪುರಿಯಲ್ಲಿರುವ ಗವಿಮಠದ ಗುರುಬಸವೇಶ್ವರನನ್ನು ಸ್ತುತಿಸುವುದನ್ನು ಗಮನಿಸಿದಾಗ

* ಶ್ರೀ ಗುರು ಮುರಿಗಾ ಶಾಂತವೀರೇಶ್ವರಾಯ ನಮಃ

ಶ್ರೀ ಮದ್ಗುರು ಲೀಲಾಖ್ಯದೇಶಿಕೇಂದ್ರೋಭ್ಯೋ ನಮಃ

ಚನ್ನವೀರ ದೇಶಿಕೇಂದ್ರೋಭ್ಯೋ ನಮಃ

ಶ್ರೀ ಗುರು ಸ್ವತಂತ್ರ ಸಿದ್ಧಲಿಂಗೇಶ್ವರಾಯ ನಮಃ

ಶ್ರೀ ಮುರಿಗಾ ಜಗದ್ಗುರುವೇ ನಮಃ.[೪೩] (ಕ್ರ.ಸಂ. ೧೭೯)

ಈ ಮೇಲಿನ ಎಲ್ಲಾ ಸ್ತುತಿಗಳು ಸಹ ವೀರಶೈವ ಸ್ತುತಿಗಳಾಗಿದ್ದು ಲಿಪಿಕಾರನು ಈ ವ್ಯಕ್ತಿಗಳನ್ನು ತನ್ನ ಕೃತಿಯಾದ ಅನುಭವ ಮುದ್ರೆ ಬರೆಯುವ ಸಂದರ್ಭದಲ್ಲಿ ಸ್ತುತಿಸಿರುವುದು ಮುಖ್ಯವಾಗುತ್ತದೆ.

* ಶ್ರೀ ಗುರು ಯಿಮ್ಮಡಿ ಮುರಿಗೆ ಸ್ವಾಮಿನೇ ನಮಃ.[೪೪] (ಕ್ರ.ಸಂ. ೨೩೨)

ಸಂಗೀತದ ಚನಬಸವಪ್ಪ ಎಂಬ ಲಿಪಿಕಾರನು ಅನುಭವಸಾರ ಕೃತಿಯನ್ನು ಬರೆಯುವಾಗ ಶ್ರೀ ಗುರು ಯಿಮ್ಮಡಿ ಮುರಿಗೆಸ್ವಾಮಿಯನ್ನು ಸ್ತುತಿಸಿರುವುದ ಗಮನಾರ್ಹ.

* ಗುರುಬಸವ ಪ್ರಭವೇ ನಮಃ[೪೫] (ಕ್ರ.ಸಂ. ೩೫೧)

ಮರಿರಾಚವಟ್ಟೇಶ ಲಿಪಿಕಾರನು ಅಲ್ಲಮಪ್ರಭು ಸ್ತೋತ್ರದ ಷಟ್ಪದಿಯನ್ನು ಬರೆಯುವಾಗ ಗುರುಬಸವ ಪ್ರಭುವನ್ನು ಸ್ತುತಿಸಿರುವುದನ್ನು ಕಾಣಬಹುದು.

* ಶಾಂತವೀರಾರ್ಯಯೇಂ ನಮಃ.[೪೬] (ಕ್ರ.ಸಂ. ೫೯೮)

ಉದಯರಾಗವನ್ನು ಬರೆಯುವಾಗ ಲಿಪಿಕಾರನು ಶಾಂತವೀರಾರ್ಯನನ್ನು ಸ್ತುತಿಸಿರುವುದನ್ನು ನೋಡಬಹುದು.

* ನಿಡುಮಾಮಿಡಿ ಕರಿಬಸವ ಲಿಂಗಾಯ ನಮಃ[೪೭] (ಕ್ರ.ಸಂ. ೬೧೨)

ಇಲ್ಲಿ ಚಿಕ್ಕನಾಯಕನಹಳ್ಳಿಯ ಸುಬ್ಬೈಯನವರ ಮಗ ದಾಸಿಯಪ್ಪ ಎಂಬ ಲಿಪಿಕಾರನಿದ್ದು ನಿಡುಮಾಮಿಡಿ ಎಂಬ ಊರಿನಲ್ಲಿ ಕರಿಬಸವಲಿಂಗಾಯ ಎಂಬ ದೇವರಿದ್ದು ಅದನ್ನು ಲಿಪಿಕಾರ ಸ್ತುತಿಸಿರುವುದನ್ನು ನೋಡಬಹುದು.

* ಶ್ರೀ ಮುರಿಗಂ ಜಗದ್ಗುರು ಸ್ವಾಮಿನೆ ನಮಃ

ಶ್ರೀ ಗುರು ಶಿವನಂಕಾರೇಶ್ವರಾಯ ನಮಃ

ಶ್ರೀ ಗುರು ಚೆನ್ನೀರೇಶ್ವರಾಯ ನಮಃ

ಶ್ರೀ ಗುರು ತೋಂಟದ ಸಿದ್ಧಲಿಂಗೇಶ್ವರಾಯ ನಮಃ

ಶ್ರೀ ಗುರು ಸ್ವತಂತ್ರ ಸಿದ್ದೇಶ್ವರಾಯ ನಮಃ

ಶ್ರೀ ಗುರು ಶಾಂತ ಮಲ್ಲೇಶ್ವರಾಯ ನಮಃ.[೪೮] (ಕ್ರ.ಸಂ. ೭೧೨)

ಲಿಪಿಕಾರನಾದ ಕಟಿ ಬಸವಲಿಂಗದೇವರು ಏಕೋತ್ತರ ಶತಸ್ಥಲ ಟೀಕೆಯನ್ನು ಬರೆಯುವಾಗ ವೀರಶೈವ ದೈವಗಳನ್ನು ಸ್ತುತಿಸಿರುವುದನ್ನು ನೋಡಬಹುದು.

* ತೋಂಟದ ಸಿದ್ದೇಶ್ವರನೆ ನಮಃ

ಮುರಿಗ್ಯಾ ಗುರುವೇ; ಪಾಹಿಮಾಂ: ಶಾಂತಮಲ್ಲೇಶ್ವರನೆ ಪಾದವೇದಿಸು.[೪೯] (ಕ್ರ.ಸಂ. ೭೧೯)

ಲಿಪಿಕಾರನಾದ ಏಕೋತ್ತರ ಶತಸ್ಥಲ ಟೀಕು ಬರೆಯುವಾಗ ತೋಂಟದ ಸಿದ್ದೇಶ್ವರನನ್ನು ಸ್ತುತಿಸಿರುವುದನ್ನು ಕಾಣಬಹುದು.

* ಶಶಿಶೇಖರಾಯ ನಮಃ

ಚಂನಮಲ್ಲೇಶ್ವರಾಯ ನಮಃ.[೫೦] (ಕ್ರ.ಸಂ. ೩೫೪)

ಮರುಳಸಿದ್ದದೇವರು ಯೇಕೋತ್ತರ ಶತಸ್ಥಲವನ್ನು ಬರೆಯುವಾಗ ಈ ದೈವಗಳನ್ನು ಸ್ತುತಿಸುವುದನ್ನು ಕಾಣಬಹುದು.

ಶ್ರೀ ಗುರುವೇಗತಿ.[೫೧] (ಕ್ರ.ಸಂ. ೭೯೬)

ಮುರಿಗಾ ಶಾಂತವೀರರು ಕಟ್ಟಿಗೆ ತಾರಾವಳಿಯನ್ನು ಬರೆಯುವಾಗ ಗುರುವಿನ ಸ್ತುತಿಯನ್ನು ಸ್ತುತಿಸಿರುವುದನ್ನು ನೋಡಬಹುದು.

* ಗದುಗಿನ ವೀರನಾರಾಯಣನ ದಿವ್ಯ ಚರಣಾರವಿಂದವೆಗತಿಮತಿ

ತೃಣಪುರದ ಭೀಮರಾಯರ ದಿವ್ಯ ಚರಣಾರವಿಂದವೇ ಗತಿಮತಿ

ಚಿನ್ಮನಿದುರ್ಗದ ಕಾಳಂಮನವರ ಪಾದವೇಗತಿ.[೫೨] (ಕ್ರ.ಸಂ. ೮೫೬)

ಓದಿಸುವ ರಾಮಪ್ಪನು ಕರಣ ಹಸಿಗೆಯನ್ನು ಬರೆಯುವಾಗ ಗದುಗಿನ ವೀರನಾರಾಯಣನನ್ನು ತೃಣಪುರದ ಭೀಮರಾಯರನ್ನು ಹಾಗೂ ಚಿನ್ಮನಿದುರ್ಗದ ಕಾಳಂಮನವರನ್ನು ಸ್ತುತಿಸಿರುವುದನ್ನು ನೋಡಬಹುದು.

* ಶ್ರೀ ಶಾಂತವೀರಶ್ವರಾಯ ನಮಃ.[೫೩] (ಕ್ರ.ಸಂ. ೯೩೦)

ಲಿಪಿಕಾರನು ಕರಣ ಹಸಿಗೆ ಬರೆಯುವಾಗ ಶ್ರೀ ಶಾಂತವೀರಶ್ವರಾಯನನ್ನು ಸ್ತುತಿಸಿರುವುದನ್ನು ಕಾಣಬಹುದು.

* ಶ್ರೀ ಮುದ್ದುಗಿರು ಅರುಣಾಚಲೇಶ್ವರಾಯ ನಮಃ.[೫೪] (ಕ್ರ.ಸಂ. ೯೩೧) ಕರಣ ಹಸಿಗೆ ಕೃತಿಯನ್ನು ಬರೆಯುವಾಗ ಲಿಪಿಕಾರನು ಶ್ರೀ ಮುದ್ದುಗಿರು ಅರುಣಾಚಲೇಶ್ವರ ದೇವರನ್ನು ಸ್ತುತಿಸಿರುವುದನ್ನು ಕಾಣಬಹುದು.

* ಶ್ರೀ ಮುರಿಗೇಂದ್ರಾಯ ನಮಃ.[೫೫] (ಕ್ರ.ಸಂ. ೧೦೨೬)

ಕಲ್ಯಾಣಸ್ವಾಮಿ ಎಂಬ ಲಿಪಿಕಾರನು ಕಾರಣಾಗಮದ ವಾರ್ಧಕ ಕೃತಿಯನ್ನು ಬರೆಯುವಾಗ ಶ್ರೀ ಮುರಿಗೇಂದ್ರರನ್ನು ಸ್ತುತಿಸಿರುವುದು ಗಮನಾರ್ಹ.

* ಮುಚ್ಚೆನ್ನ ಬಸವೇಶ್ವರಾಯ ನಮಃ.[೫೬] (ಕ್ರ.ಸಂ. ೧೧೪೦)

ಲಿಪಿಕಾರನು ಕೈವಲ್ಯ ಪದ್ಧತಿಯನ್ನು ಬರೆಯುವಾಗ ಮುಚ್ಚೆನ್ನ ಬಸವೇಶ್ವರಾಯ ಎನ್ನುವ ದೈವವನ್ನು ಸ್ತುತಿಸಿರುವುದನ್ನು ನೋಡಬಹುದು.

ಶ್ರೀ ಮನ್ನುರಿಗಾ ಗುರುವೆ ನಮಃ.[೫೭] (ಕ್ರ.ಸಂ. ೧೧೮೨)

ಲಿಪಿಕಾರನು ಕೈವಲ್ಯಸಾರದ ಟೀಕೆಯನ್ನು ಬರೆಯುವಾಗ ಇಷ್ಟದೈವವಾದ ಶ್ರೀ ಮುನ್ನುರಿಗಾ ಗುರುಗಳನ್ನು ಸ್ತುತಿಸಿದ್ದಾನೆ.

* ಶ್ರೀ ಗುರು ಶಾಂತವೀರಸ್ವಾಮಿಗಳ ಪಾದವೆಗತಿ

ಶ್ರೀ ಗುರುಲಿಂಗ ಜಂಗಮದ ಪಾದ ಪದ್ಮಂಗಳಿಗೆ ಶರಣಾರ್ತಿ[೫೮] (ಕ್ರ.ಸಂ. ೧೨೪೩)

ರಾಮಘಟ್ಟ ಎಂಬ ಊರಿನಲ್ಲಿ ಬಸವಲಿಂಗ ದೇವರು ಎನ್ನುವ ಲಿಪಿಕಾರನು ಗಂಗೆಗೌರಿ ಸಂವಾದ ಎಂಬ ಕೃತಿಯನ್ನು ಬರೆಯುವಾಗ ಶ್ರೀ ಗುರು ಶಾಂತವೀರ ಸ್ವಾಮಿಗಳನ್ನು ಹಾಗೂ ಶ್ರೀ ಗುರುಲಿಂಗ ಜಂಗಮರನ್ನು ಸ್ತುತಿಸಿರುವುದನ್ನು ನೋಡಬಹುದು.

* ಶ್ರೀ ಶಿವಾಯ ನಮಃ.

ಪಂಡಿತಾರಾಧ್ಯ ಗುರುಭ್ಯೋ ನಮಃ.[೫೯] (ಕ್ರ.ಸಂ. ೧೨೮೬)

ಲಿಪಿಕಾರನು ಕೃತಿಯನ್ನು ಬರೆಯುವಾಗ ಶಿವನನ್ನು ಹಾಗೂ ಪಂಡಿತಾರಾಧ್ಯರನ್ನು ಸ್ತುತಿಸಿರುವುದು ಗಮನಾರ್ಹ.

* ಶ್ರೀ ಗುರು ಅಡವಿಶಿದ್ಧಯ ನಮಃ

ಶ್ರೀ ಚಾಮುಂಡೇಶ್ವರಿ ಪ್ರಸದೆ.[೬೦] (ಕ್ರ.ಸಂ. ೧೩೪೮)

ಲಿಪಿಕಾರನು ಗಣ ಸಹಸ್ರ ನಾಮಾವಳಿಯನ್ನು ಬರೆಯುವಾಗ ಶ್ರೀ ಗುರು ಅಡವಿಶಿದ್ದಯನನ್ನು ಹಾಗೂ ಹೆಣ್ಣು ದೇವತೆಯಾದ ಚಾಮುಂಡೇಶ್ವರಿಯನ್ನು ಸ್ತುತಿಸಿರುವನು.

* ಶ್ರೀ ಪಂಚಗುರುಭ್ಯೋ ನಮಃ.[೬೧] (ಕ್ರ.ಸಂ. ೧೩೬೨)

ಯೆಲಿವಕೂರಿನಲ್ಲಿರುವ ವಿರಪವೊಡೆಯರು ದೇವರ ಕೊಮಾರರೂ ಈ ಗಿರಿಜಾ ಕಲ್ಯಾಣವನ್ನು ಬರೆಯುವಾಗ ತಮ್ಮ ಇಷ್ಟದೈವವಾದ ಶ್ರೀ ಪಂಚಗುರುಭ್ಯೋನನ್ನು ಸ್ತುತಿಸಿರುವುದನ್ನು ಕಾಣಬಹುದು.

* ತೋಂಟದ ಸಿದ್ದೇಶ್ವರನ ಪಾದವೆಗತಿ

ಕೊಟ್ಟೂರ ಬಸವೇಶ ಪಾದವೆಗತಿ

ಅನೂಮಿಶ ದೇವರ ಪಾದವೆಗತಿ.[೬೨] (ಕ್ರ.ಸಂ. ೧೪೨೮)

ಈ ಮೇಲಿನ ಎಲ್ಲಾ ಸ್ತುತಿಗಳು ಯಾವ ಯಾವ ಊರಿನಲ್ಲಿ ದೇವರುಗಳು ನೆಲೆಸಿದ್ದಾರೆಂಬುದನ್ನು ನೋಡಬಹುದು. ಇಲ್ಲಿ ಎಲ್ಲಾ ದೇವರುಗಳ ಸ್ತುತಿಗಳು ಸಹ ವೀರಶೈವ ಧರ್ಮದ ದೇವರುಗಳಾಗಿವೆ. ಇಲ್ಲಿ ತೋಂಟದಲ್ಲಿ ಸಿದ್ದೇಶ್ವರ ನೆಲೆಸಿದ್ದನೆಂದು, ಕೊಟ್ಟೂರಿನಲ್ಲಿ ಬಸವೇಶ್ವರ ನೆಲೆಸಿದ್ದಾನೆಂದು

ಹೀಗೆಯೇ ಲಿಪಿಕಾರನು ಗುರುಬೋಧೆಯನ್ನು ಬರೆಯುವಾಗ ಈ ಮೇಲಿನ ಎಲ್ಲಾ ದೈವಗಳನ್ನು ಆದರದಿಂದ ಸ್ತುತಿಸಿದ್ದಾನೆ.

* ಶ್ರೀ ಗುರು ತೋಂಟದ ಸಿದ್ಧಲಿಂಗಾಯ ನಮಃ (ಕ್ರ.ಸಂ. ೧೫೫೨)

ಏಕೋರಾಮದೇಶಿ ಕೇಂದ್ರಾಯ ನಮಃ.[೬೩]

ಗುರು ಚೆನ್ನ ಮಲ್ಲೇಶ್ವನ ಶಿಷ್ಯನು ಘಟ್ಟವಾಳಯ್ಯನ ಚರಿತೆಯನ್ನು ಬರೆಯುವಾಗ ಶ್ರೀಗುರು ತೋಂಟದ ಸಿದ್ಧಲಿಂಗೇಶ್ವರನನ್ನು ಹಾಗೂ ಏಕೋರಾಮ ದೇಶಿಕೇಂದ್ರವನ್ನು ಸ್ತುತಿಸಿರುವುದನ್ನು ಕಾಣಬಹುದು.

* ಶ್ರೀ ಶಾಂತಮಲ್ಲೇಶ್ವರಾಯ ನಮಃ

ಶ್ರೀ ಮುರಿಗೆಸ್ವಾಮಿಗಳ ಪಾದವೇ ಗತಿ.[೬೪] (ಕ್ರ.ಸಂ. ೧೭೦೪)

ಲಿಪಿಕಾರನು ಚನ್ನಬಸವೇಶ್ವರ ಪುರಾಣದ ಕಥೆಯನ್ನು ಬರೆಯುವಾಗ ಶಾಂತಮಲ್ಲೇಶ್ವರನನ್ನು ಹಾಗೂ ಮುರಿಗೆಸ್ವಾಮಿಗಳನ್ನು ಸ್ತುತಿಸಿರುವುದನ್ನು ನೋಡಬಹುದು.

* ಶ್ರೀ ಗುರುವಿರೂಪಾಕ್ಷ ಲಿಂಗಾಯ ನಮಃ.[೬೫] (ಕ್ರ.ಸಂ. ೧೮೨೫)

ಶ್ರೀ ಮತು ನುಗ್ಗಿಹಳ್ಳಿ ಮಠದ ಸಿದ್ಧವೀರಪ್ಪನವರ ಮಗನಿಂದ ಹುಚ್ಚಪ್ಪನು ಸಿದ್ಧಲಿಂಗೇಶ್ವರ ಸ್ವಾಮಿಯವರ ಸಾಂಗತ್ಯವನ್ನು ಬರೆಯುವಾಗ ಶ್ರೀ ಗುರುವಿರೂಪಾಕ್ಷನನ್ನು ಸ್ತುತಿಸಿರುವುದನ್ನು ನೋಡಬಹುದು.

* ಯಕ್ಕಟಿ ಮಲ್ಲಿಕಾರ್ಜುನ ನಮಃ

ಬಹುಧ್ಯಾನ ಸಂ ಆಶ್ವೀಜ ಬ ೧೨ ಯಕ್ಕಟಿ ಮಲ್ಲಿಕಾರ್ಜುನ ನಮಃ.[೬೬] (ಕ್ರ.ಸಂ. ೧೯೫೯)

ಈ ಮೇಲಿನ ಸ್ತುತಿಯಲ್ಲಿ ಯಾವ ಊರಿನಲ್ಲಿ ಯಾವ ದೇವನು ನೆಲೆಸಿದ್ದಾನೆಂಬುದನ್ನು ಕಾಣಬಹುದು.

ಯಕ್ಕಟಿ ಮಲ್ಲಿಕಾರ್ಜುನಸ್ವಾಮಿ ನೆಲೆಸಿದ್ದು, ಲಿಪಿಕಾರನು ತನ್ನ ಕೃತಿಯನ್ನು ಬರೆಯುವಾಗ ತನ್ನ ಇಷ್ಟ ದೈವವಾದ ಯಕ್ಕಟಿ ಮಲ್ಲಿಕಾರ್ಜುನನ್ನು ಸ್ತುತಿಸಿರುವುದನ್ನು ನೋಡಬಹುದು.

* ಮುರಿಗೆ ಶಾಂತವೀರೇಶ್ವರನ ಪಾದಾರವಿಂದವೇ ಗತಿ

ಚನ್ನಮಲ್ಲೇಶ್ವರನ ಪಾದಾರವಿಂದವೇ ಗತಿ.[೬೭] (ಕ್ರ.ಸಂ. ೧೯೮೮)

ಗುರು ನಿತ್ಯಾನಂದನು ನಂದೀಶ್ವರನ ಪಾರಿಜಾತವನ್ನು ಬರೆಯುವಾಗ ಮುರಿಗೆ ಶಾಂತವೀರೇಶ್ವರನನ್ನು ಹಾಗೆಯೇ ಚನ್ನಮಲ್ಲೇಶ್ವರನನ್ನು ಸ್ತುತಿಸಿರುವುದು ಗಮನಾರ್ಹ.

* ಶ್ರೀ ಗುರುಲಿಂಗಾಯ ನಮಃ

ಶ್ರೀ ಸಪ್ಪೇಶ್ವರ ಲಿಂಗಾಯ ನಮಃ.[೬೮] (ಕ್ರ.ಸಂ. ೧೯೯೭)

ಶಿದ್ದರಾಮದೇವರು ನನ್ನಯ್ಯಗಳ ಚರಿತ್ರವನ್ನು ಬರೆಯುವಾಗ ಶ್ರೀ ಗುರುಲಿಂಗಾಯನನ್ನು ಹಾಗೂ ಶ್ರೀ ಸಪ್ಪೇಶ್ವರಿ ಲಿಂಗಾಯನನ್ನು ಸ್ತುತಿಸಿರುವುದನ್ನು ಕಾಣಬಹುದು.

* ಶ್ರೀ ಗುರು ಮುರುಗೇಂದ್ರಾಯ ನಮಃ.[೧೯] (ಕ್ರ.ಸಂ. ೨೦೭೩)

ಲಿಪಿಕಾರನು ಗುರು ಸ್ತೋತ್ರವನ್ನು ಬರೆಯುವಾಗ ಶ್ರೀ ಗುರು ಮುರುಗೇಂದ್ರನನ್ನು ಸ್ತುತಿಸಿರುವುದನ್ನು ನೋಡಬಹುದು.

* ಶ್ರೀ ಅಡವಿಶಿದ್ಧಾಯ ನಮಃ

ಶ್ರೀ ಚಾಮುಂಡಾಯ ನಮಃ.[೨೦] (ಕ್ರ.ಸಂ. ೨೦೭೪)

ಲಿಪಿಕಾರನು ಕೃತಿಯನ್ನು ಬರೆಯುವಾಗ ಅಡವಿಶಿದ್ಧಾ ಎನ್ನುವ ವ್ಯಕ್ತಿಯನ್ನು ಹಾಗೂ ಚಾಮುಂಡಿಯನ್ನು ಸ್ತುತಿಸಿರುವುದನ್ನು ನೋಡಬಹುದು.

* ಶ್ರೀ ಗುರು ಚಿಕ್ಕಬಸವೇಶ್ವರಾಯ ನಮಃ.[೨೧] (ಕ್ರ.ಸಂ. ೨೧೭೭)

ಶಿವಲಿಂಗಾರ್ಯ ಎನ್ನುವ ಲಿಪಿಕಾರ ಅಮುಗಿ ದೇವನ ಸಾಂಗತ್ಯವನ್ನು ಬರೆಯುವಾಗ ಶ್ರೀ ಗುರು ಚಿಕ್ಕ ಬಸವೇಶ್ವರನನ್ನು ಸ್ತುತಿಸಿರುವುದನ್ನು ಕಾಣಬಹುದು.

* ಶ್ರೀ ಅಂಕಸಾಗರ ಪುರವರಾಧೀಶಾಯ ನಮಃ

ಶ್ರೀ ಪಂಚ ವಿರೂಪಾಕ್ಷಯ ನಮಃ

ಶ್ರೀ ಗುರು ನಿರಂಜನ ಪ್ರಭುವೇ ನಮಃ

ಶ್ರೀ ತೋಂಟದಾರ್ಯರ ಪಾದವೇ ಗತಿ ಮತಿ.[೨೨] (ಕ್ರ.ಸಂ. ೨೨೮೨)

ದೊಡೇರಿ ಹಿರೇಮಠದ ಮುದ್ವೀರಾಖ್ಯರೂ ಚನ್ನಬಸವ ಪುರಾಣವನ್ನು ಬರೆಯುವಾಗ ತನ್ನ ಇಷ್ಟ ದೈವಗಳಿಂದ ಶ್ರೀ ಅಂಕಸಾಗರ ಪುರಾವರಾಧೀಶರನ್ನು ಶ್ರೀ ಪಂಪಾ ವಿರೂಪಾಕ್ಷನನ್ನು ಶ್ರೀ ಗುರು ನಿರಂಜನ ಪ್ರಭುವನ್ನು ಹಾಗೆಯೇ ಶ್ರೀ ತೋಂಟದಾರ್ಯರನ್ನು ಸ್ತುತಿಸಿರುವುದನ್ನು ನೋಡಬಹುದು.

* ಗುರು ಕರಿಸಿದ್ದೇಶ್ವರಾಯ ನಮಃ.[೨೩] (ಕ್ರ.ಸಂ. ೭)

ರಾಮಗಿರಿಯಲ್ಲಿ ಕರಿಸಿದ್ದೇಶ್ವರ ನೆಲೆಸಿರುವುದನ್ನು ನೋಡಬಹುದು. ಲಿಪಿಕಾರನು ಈ ಕೃತಿಯನ್ನು ಬರೆಯುವಾಗ ಗುರು ಕರಿಸಿದ್ದೇಶ್ವರನ್ನು ಸ್ತುತಿಸಿರುವುದು ಗಮನಾರ್ಹ.

* ಶ್ರೀ ಗುರು ಯಿಮ್ಮಡಿ ಮುರಿಗೆ ಸ್ವಾಮಿನೇ ನಮಃ.[೨೪] (ಕ್ರ.ಸಂ. ೧೩೬)

ಲಿಪಿಕಾರನು ಅನುಭವಸಾರ ಕೃತಿಯನ್ನು ಬರೆಯುವಾಗ ಶ್ರೀ ಗುರು ಯಿಮ್ಮಡಿ ಮುರಿಗೆ ಸ್ವಾಮಿಯನ್ನು ಸ್ತುತಿಸಿದ್ದಾನೆ.

* ಕೊಲ್ಲೂರ ಮುಕಾಂಬಿಕಾಯ ನಮಃ

ಇಕ್ಕೇರಿ ಅಘೋರೇಶ್ವರಿ ಪಾದವೆಗತಿ

ಮಂಜುನಾಥಾಯ ನಮಃ.[೨೫] (ಕ್ರ.ಸಂ. ೩೦೮)

ರಾಮಚಂದ್ರ ಗುರುಶಿಷ್ಯ ಎನ್ನುವ ಲಿಪಿಕಾರನು ಆದಿತ್ಯ ಪುರಾಣವನ್ನು ಬರೆಯುವಾಗ ಕೊಲ್ಲೂರಿನಲ್ಲಿರುವ ಮೂಕಾಂಬಿಕೆಯನ್ನು, ಇಕ್ಕೇರಿಯಲ್ಲಿ ನೆಲೆಸಿರುವ ಅಘೋರೇಶ್ವರನನ್ನು ಹಾಗೆಯೇ ಮಂಜುನಾಥ ಸ್ವಾಮಿಯನ್ನು ಸ್ತುತಿಸಿರುವುದನ್ನು ಗಮನಿಸಬಹುದು.

* ನಿಜಗುರು ಮಹತ್ವ ಪ್ರಭುವೇ ನಮಃ

ಲೋಚಿನ ಗುರು ಸಿದ್ದಸ್ವಾಮಿನೇ ನಮಃ.[೨೬] (ಕ್ರ.ಸಂ. ೩೪೯)

ಸಿಂಗಳದ ಸಿದ್ದಬಸವ ಎನ್ನುವ ಲಿಪಿಕಾರನು ಎಲ್ಲಾ ಪುರಾತನರು ನಿರೂಪಿಸಿದ ಬೆಡಗಿನ ವಚನವನ್ನು ಬರೆಯುವಾಗ ನಿಜಗುರು ಮಹತ್ವ ಪ್ರಭುವನ್ನು ಹಾಗೆಯೇ ಲೋಚಿನ ಗುರು ಸಿದ್ಧಸ್ವಾಮಿಗಳನ್ನು ಸ್ತುತಿಸಿ ಬರೆದಿರುವುದು ಗಮನಾರ್ಹ.

* ಶ್ರೀ ಗುರು ಲಿಂಗಾಯ ನಮಃ

ಶ್ರೀ ಸಪ್ಪೇಶ್ವರ ಲಿಂಗಾಯ ನಮಃ[೨೭] (ಕ್ರ.ಸಂ. ೯೯೪)

ಮಾದಣಾಂಕ ವೀರಶೈವ ಎನ್ನುವುದು ನಮಗೆ ಗೊತ್ತಾಗುತ್ತದೆ. ಇದನ್ನು ನನ್ನಯ್ಯಗಳ ಚಾರಿತ್ರವನ್ನು ಲಿಪಿಕರಿಸುವಾಗ ಶ್ರೀ ಗುರುಲಿಂಗಾಯನನ್ನು ಹಾಗೂ ಶ್ರೀ ಸಪ್ಪೇಶ್ವರ ಲಿಂಗನನ್ನು ಸ್ತುತಿಸಿರುವುದನ್ನು ನೋಡಬಹುದು.

* ಶ್ರೀ ಮದ್ಗುರು ಬಸವೇಶ್ವರಾಯ ನಮಃ[೨೮] (ಕ್ರ.ಸಂ. ೧೦೪೯)

ಲಿಪಿಕಾರನ ಹೆಸರು ತಿಳಿದುಬಂದಿಲ್ಲ. ಈ ಲಿಪಿಕಾರನು ನಾನಾರ್ಥ ರತ್ನಾಕರ ಕೃತಿಯನ್ನು ಬರೆಯುವಾಗ ತನ್ನ ಇಷ್ಟದೈವವಾದ ಶ್ರೀ ಮದ್ಗುರು ಬಸವೇಶ್ವರನನ್ನು ಸ್ತುತಿಸಿ ಈ ಕಾವ್ಯವನ್ನು ಬರೆದಿರವನು.

* ಶ್ರೀ ಮದ್ಗುರು ಲಿಂಗ ವಿಭೂತಿಯ ಪುರವರಾಧೀಶ್ವರಾಯ ನಮಃ.[೨೯] (ಕ್ರ.ಸಂ. ೧೨೦೯)

ಉದ್ದಾನ ಸಿದ್ಧಲಿಂಗದೇವ ಎನ್ನುವ ಲಿಪಿಕಾರನ್ನು ಪರಮ ರಹಸ್ಯ ಎನ್ನುವ ಕೃತಿಯನ್ನು ಪ್ರತಿ ಮಾಡುವಾಗ ವಿಭೂತಿಪುರದಲ್ಲಿರುವ ಶ್ರೀ ಮದ್ಗುರು ಲಿಂಗನನ್ನು ಸ್ತುತಿಸಿರುವುದು ಕಂಡುಬರುತ್ತದೆ.

* ಶ್ರೀ ಗುರು ನೀಲಕಂಠಾಯ ನಮಃ.[೩೦] (ಕ್ರ.ಸಂ. ೧೩೫೨)

ಮಹಾಲಿಂಗದೇವ ಎನ್ನುವ ಲಿಪಿಕಾರನು ಪ್ರಭುದೇವರ ಟೀಕಿನ ವಚನವನ್ನು ಬರೆಯುವಾಗ ಇವನ ಇಷ್ಟದೈವಾದ ಶ್ರೀ ಗುರು ನೀಲಕಂಠ ಎನ್ನುವ ವ್ಯಕ್ತಿಯನ್ನು ಈ ಕಾವ್ಯದಲ್ಲಿ ಸ್ತುತಿಸಿದ್ದಾನೆ.

* ಶ್ರೀ ಗುರು ಸಿದ್ಧರಾಮದೇವರ ಪಾದವೇ ಗತಿ.[೮೧] (ಕ್ರ.ಸಂ. ೧೩೫೩)

ಲಿಪಿಕಾರನು ಯಾರು ಎಂಬುದು ತಿಳಿದುಬಂದಿಲ್ಲ. ಲಿಪಿಕಾರನು ಪ್ರಭುದೇವರ ಟೀಕಿನ ವಚನವನ್ನು ಬರೆಯುವ ಮುನ್ನ ತನ್ನ ಇಷ್ಟದೈವವಾದ ಶ್ರೀ ಗುರು ಸಿದ್ಧರಾಮ ದೇವರನ್ನು ಭಕ್ತಿಯಿಂದ ನೆನೆದಿದ್ದಾನೆ.

* ಶ್ರೀ ಗುರು ಶಾಂತಲಿಂಗಾಯ ನಮಃ.[೮೨] (ಕ್ರ.ಸಂ. ೧೪೭೯)

ಇಲ್ಲಿಯೂ ಸಹ ಲಿಪಿಕಾರನ ಹೆಸರು ತಿಳಿದುಬಂದಿಲ್ಲ. ಈ ಲಿಪಿಕಾರನು ಪ್ರಭುಲಿಂಗ ಲೀಲೆಯನ್ನು ಬರೆಯುವಾಗ ಗುರು ಶಾಂತಲಿಂಗನನ್ನು ಸ್ತುತಿಸಿ ಬರೆದಿರುವುದನ್ನು ನೋಡಬಹುದಾಗಿದೆ.

* ಶ್ರೀ ಗುರು ಚಿನ್ಮೂಲ ಮುರಿಗೇಂದ್ರಾಯ ನಮಃ.[೮೩] (ಕ್ರ.ಸಂ. ೧೪೪೩)

ಲಿಪಿಕಾರನ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲ. ಈ ಲಿಪಿಕಾರನು ಸಹ ಪ್ರಭುಲಿಂಗ ಲೀಲೆಯನ್ನು ಬರೆಯುವಾಗ ಚಿತ್ರದುರ್ಗದಲ್ಲಿರುವ ಶ್ರೀ ಗುರು ಚಿನ್ಮೂಲ ಮುರಿಗೇಂದ್ರರನ್ನು ಸ್ತುತಿಸಿ ಬರೆದಿರುವುದು ಗಮನಾರ್ಹವಾಗಿದೆ.

* ಶಿವನಂಕಾರ ಲಿಂಗಾಯ ನಮಃ.[೮೪] (ಕ್ರ.ಸಂ. ೧೫೫೪)

ಲಿಪಿಕಾರನ ಹೆಸರು ತಿಳಿದುಬಂದಿಲ್ಲ. ಈತನು ಸಹ ಬಸವರಾಜ ದೇವರ ಷಡ್‌ಸ್ಥಲದ ವಚನವನ್ನು ಬರೆಯುವಾಗ ತನ್ನ ಇಷ್ಟದೈವವಾದ ಶಿವನಂಕಾರನನ್ನು ಸ್ತುತಿಸಿ ಬರೆದಿರುವುದನ್ನು ಕಾಣಬಹುದಾಗಿದೆ.

* ಶ್ರೀ ಗುರು ಚಿಕ್ಕ ಬಸವೇಶ್ವರಾಯ ನಮಃ

ಶ್ರೀ ಗುರು ಸಿದ್ಧಲಿಂಗೇಶ್ವರಾಯ ನಮಃ.[೮೫] (ಕ್ರ.ಸಂ. ೧೫೬೧)

ಲಿಪಿಕಾರನಾದ ಚೆಂನವೀರದೇವರು ಬಸವರಾಜ ವಿಜಯವನ್ನು ಬರೆಯುವಾಗ ಶ್ರೀ ಗುರು ಚಿಕ್ಕಬಸವೇಶ್ವರರನ್ನು ಹಾಗೂ ಶ್ರೀ ಗುರು ಸಿದ್ಧಲಿಂಗೇಶ್ವರರನ್ನು ಸ್ತುತಿಸಿದ್ದಾನೆ.

* ಶ್ರೀ ಗುರು ಸೋಲೂರು ಚೆನಂವೀರ ಲಿಂಗಾಯ ನಮಃ.[೮೬] (ಕ್ರ.ಸಂ. ೧೭೦೦)

ಶಾಂತವೀರ ಎನ್ನುವ ಲಿಪಿಕಾರನು ಭಿಕ್ಷಾಕಾಣ ಕಾವ್ಯವನ್ನು ಪ್ರತಿ ಮಾಡುವಾಗ ತನ್ನ ಇಷ್ಟದೈವವಾದ ಸೋಲೂರು ಎಂಬ ಸ್ಥಳದಲ್ಲಿ ಇರುವ ಚೆನ್ನವೀರ ಲಿಂಗನನ್ನು ಸ್ತುತಿಸಿ ಪ್ರತಿ ಮಾಡಿರುವನು.

* ಯೋಗಾಂಗದ ಗುರುಬಸವೇಶ್ವರ ನಮಃ

ಶ್ರೀ ಮದ್ಗುರು ಸ್ವತಂತ್ರ ಸಿದ್ಧಲಿಂಗಾಯ ನಮಃ.[೮೭] (ಕ್ರ.ಸಂ. ೨೧೬೩)

ಗುರುಬಸವ ಎಂಬ ಲಿಪಿಕಾರನು ಯೋಗಾಂಗ ವಿಭೂಷಣ ಎನ್ನುವ ಕೃತಿಯನ್ನು ಬರೆಯುವಾಗ ತನ್ನ ಇಷ್ಟದೈವವಾದ ಯೋಗಾಂಗದ ಗುರುಬಸವೇಶ್ವರರನ್ನು ಹಾಗೂ ಶ್ರೀ ಮದ್ಗುರು ಎಂಬ ಸ್ಥಳದಲ್ಲಿ ವಾಸವಾಗಿ ನೆಲೆ ನಿಂತಿರುವ ಸ್ವತಂತ್ರ ಸಿದ್ಧಲಿಂಗನನ್ನು ಸ್ತುತಿಸಿರುವುದನ್ನು ನೋಡಬಹುದು.

* ಶ್ರೀ ಮದ್ಗುರು ಬೋಳ ಮಲ್ಲಿಕಾರ್ಜುನ ದೇವಾಯ ನಮಃ.[೮೮] (ಕ್ರ.ಸಂ. ೨೧೬೬)

ಲಿಪಿಕಾರನ ಹೆಸರು ತಿಳಿದುಬಂದಿಲ್ಲ. ಈತನು ಯೋಗಾಂಗ ವಿಭೂಷಣ ಎನ್ನುವ ಕೃತಿಯನ್ನು ಬರೆಯುವಾಗ ತನ್ನ ಇಷ್ಟದೇವರಾದ ಶ್ರೀ ಮದ್ಗುರು ಬೋಳ ಮಲ್ಲಿಕಾರ್ಜುನನನ್ನು ಸ್ತುತಿಸಿರುವುದು ಕಂಡುಬರುತ್ತದೆ.

* ಶ್ರೀ ಗುರು ಸಿದ್ಧಲಿಂಗಾಯ ನಮಃ

ಶ್ರೀ ಗುರು ಪರುವತ ಮೂರ್ತಿ ಸಿದ್ಧಲಿಂಗ ನಿಮ್ಮ ಪಾದವೇಗತಿ.[೮೯] (ಕ್ರ.ಸಂ. ೨೧೯೯)

ಮುಪ್ಪಿನ ಶಾಂತಯ್ಯ ಎನ್ನುವ ಲಿಪಿಕಾರನು ರುದ್ರಭಾರತವನ್ನು ಬರೆಯುವಾಗ ಶ್ರೀ ಗುರು ಸಿದ್ಧಲಿಂಗನನ್ನು ಹಾಗೆಯೇ ಶ್ರೀ ಗುರು ಪರುವತ ಮೂರ್ತಿ ಸಿದ್ಧಲಿಂಗನನ್ನು ಸ್ತುತಿಸಿ ನಿಷ್ಠೆಯಿಂದ ಪ್ರತಿ ಮಾಡಿರುವನು.

* ಶ್ರೀ ಗುರು ಸಿದ್ಧ ಬಸವೇಶ್ವರಾಯ ನಮಃ.[೯೦] (ಕ್ರ.ಸಂ. ೨೨೩೦)

ಸಿದ್ಧಪ್ಪೊಡೆಯ ಎನ್ನುವ ಲಿಪಿಕಾರನು ಲಿಂಗ ಪುರಾಣದ ನಾಂದ್ಯವನ್ನು ಪ್ರತಿ ಮಾಡುವಾಗ ತನ್ನ ದೈವವಾದ ಗುರು ಸಿದ್ಧ ಬಸವೇಶ್ವರನನ್ನು ಸ್ತುತಿಸಿ ಬರೆದಿರುವುದನ್ನು ಇಲ್ಲಿ ಕಾಣಬಹುದಾಗಿದೆ.

* ಶ್ರೀ ಮದ್ಗುರು ಸಿದ್ಧಲಿಂಗಾಯ ನಮಃ.[೯೧] (ಕ್ರ.ಸಂ. ೨೩೭೪)

ತಿಪ್ಪೂರ ಚೆಂನ ಎನ್ನುವಂಥ ಲಿಪಿಕಾರನು ವೀರಶೈವ ಲಿಪಿಕಾರ ಎನ್ನುವುದನ್ನು ಆತನ ಹೆಸರಿನಿಂದಲೇ ಗುರುತಿಸಬಹುದು. ಈ ಲಿಪಿಕಾರನು ವಿವೇಕ ಚಿಂತಾಮಣಿಯನ್ನು ಪ್ರತಿ ಮಾಡುವಾಗ ತನ್ನ ಇಷ್ಟದೈವವಾದ ಶ್ರೀ ಮದ್ಗುರು ಸಿದ್ಧಲಿಂಗನನ್ನು ಸ್ತುತಿಸಿ ಪ್ರತಿ ಮಾಡಿರುವುದನ್ನು ನಾವು ಕಾಣಬಹುದಾಗಿದೆ.

* ಶ್ರೀ ಗುರು ಶಾಂತವೀರದೇಸಿ ಕೇಂದ್ರಾಯ ನಮಃ.[೯೨] (ಕ್ರ.ಸಂ. ೨೪೪೫)

ಚನ್ನಬಸಯ್ಯ ಎನ್ನುವ ಲಿಪಿಕಾರನು ವಸ್ತಾಕ ಪುರಾಣವನ್ನು ಪ್ರತಿ ಮಾಡುವಾಗ ದೇವರ ಸ್ವರೂಪಿಯಾದ ಶ್ರೀ ಮುರಿಗಾ ಶಾಂತವೀರ ದೇಸಿ ಕೇಂದ್ರರನ್ನು ಸ್ತುತಿಸಿರುವುದನ್ನು ನೋಡಬಹುದು.

* ಶ್ರೀ ಗುರು ಶಿವಲೆಂಕ ಮಂಚಣ್ಣ ಪಂಡಿತಾರಾಧ್ಯ ಗುರುಭ್ಯೋ ನಮಃ.[೯೩] (ಕ್ರ.ಸಂ. ೨೮೨೭)

ಲಿಪಿಕಾರನಾದ ಪರುತ್ಯುವರು ಶ್ರೀ ರುದ್ರ ಟೀಕುವನ್ನು ಪ್ರತಿ ಮಾಡುವಾಗ ತನ್ನ ಇಷ್ಟ ದೇವರಾದ ಶ್ರೀ ಗುರು ಶಿವಲೆಂಕ ಮಂಚಣ್ಣ ಪಂಡಿತಾರಾಧ್ಯರನ್ನು ಸ್ತುತಿಸಿ ಪ್ರತಿ ಮಾಡಿರುವುದನ್ನು ನಾವು ನೋಡಬಹುದು.

* ಗುರು ಹಾಸನದ ಸಿದ್ಧೇಶ್ವರನ ಪಾದವೆಗತಿ.[೯೪] (ಕ್ರ.ಸಂ. ೨೯೬೫)

ಲಿಪಿಕಾರನ ಹೆಸರು ತಿಳಿದುಬಂದಿಲ್ಲ. ಈ ಲಿಪಿಕಾರನು ಷಟ್‌ಸ್ಥಲದ ವಚನವನ್ನು ಪ್ರತಿ ಮಾಡುವಾಗ ಹಾಸನದಲ್ಲಿ ನೆಲೆಸಿರುವ ಸಿದ್ಧೇಶ್ವರನನ್ನು ಸ್ತುತಿಸಿ ಬರೆದಿರುವುದನ್ನು ಕಾಣಬಹುದು.

* ಮೇಗಣಗವಿಯ ಚೆನ್ನಬಸವೇಶ್ವರಾಯ ನಮಃ.[೯೫] (ಕ್ರ.ಸಂ. ೨೯೬೭)

ಲಿಪಿಕಾರನು ಷಟ್‌ಸ್ಥಲದ ವಚನವನ್ನು ಬರೆಯುವಾಗ ಮೇಗಣಗವಿಯ ಚೆನ್ನಬಸವೇಶ್ವರನನ್ನು ಸ್ತುತಿಸಿ ಬರೆದಿರುವುದನ್ನು ನಾವು ನೋಡಬಹುದು. ಚೆನ್ನಬಸವೇಶ್ವರ ಎನ್ನುವುದು ವ್ಯಕ್ತಿಯ ಹೆಸರಾಗಿದೆ.

* ಗುರು ಶಾಂತಮಲ್ಲೇಶ್ವರ ಲಿಂಗಾಯ ನಮಃ.[೯೬] (ಕ್ರ.ಸಂ. ೨೯೭೨)

ಲಿಪಿಕಾರನ ನಾಮಧೇಯ ತಿಳಿದುಬಂದಿಲ್ಲ. ಈ ಲಿಪಿಕಾರನು ಸಕಲಗಮ ಶಿಖಾಮಣಿಯನ್ನು ಪ್ರತಿ ಮಾಡುವಾಗ ಗುರು ಶಾಂತಮಲ್ಲೇಶ್ವರ ಲಿಂಗನನ್ನು ಸ್ತುತಿಸಿ ಬರೆದಿದ್ದಾನೆ.

* ಸುಮ್ಮನೆಯರ ಕರಿಬಸವೇಶ್ವರಾಯ ಓಂ ನಮಃ[೯೭] (ಕ್ರ.ಸಂ. ೨೯೯೦)

ಗುರುಬಸವ ಎನ್ನುವ ಲಿಪಿಕಾರನು ಸದ್ಗುರು ರಹಸ್ಯವನ್ನನು ಪ್ರತಿ ಮಾಡುವಾಗ ತನ್ನ ಇಷ್ಟದೈವವಾದ ಕರಿಬಸವೇಶ್ವರರನ್ನು ಸ್ತುತಿಸಿ ಬರೆದಿರುವುದನ್ನು ನೋಡಬಹುದು.

* ಮಹಾ ವಿರಕ್ತರ ಪಾದವೆಗತಿ

ಸುಮ್ಮನಿರುವ ಕರಿಬಸಪ್ಪನ ಪಾದವೆಗತಿ.[೯೮] (ಕ್ರ.ಸಂ. ೨೯೯೯)

ಗುರುಬಸವ ಎನ್ನುವ ಲಿಪಿಕಾರನು ಸಪ್ತಕಾವ್ಯವನ್ನು ಬರೆಯುವಾಗ ತನ್ನ ಇಷ್ಟದೈವವನ್ನು ಸ್ತುತಿಸಿ ರಚಿಸಿರುವುದನ್ನು ನೋಡಬಹುದು. ಈ ಮೇಲಿನ ಎಲ್ಲಾ ಸ್ತುತಿಗಳು ಸಹ ವೀರಶೈವ ಸ್ತುತಿಗಳಾಗಿವೆ.

* ಶ್ರೀ ಗುರು ಶಿವತಂತ್ರ ಗುರು ಶಾಂತಲಿಂಗಾಯ ನಮಃ.[೯೯] (ಕ್ರ.ಸಂ. ೩೦೮೪)

ಓದುವ ಗಿರಿಯ ಎನ್ನುವ ಲಿಪಿಕಾರನು ಸಾಮುದ್ರಿಕ ಲಕ್ಷಣವನ್ನು ಪ್ರತಿ ಮಾಡುವಾಗ ಶ್ರೀ ಗುರು ಶಿವನ ತಂತ್ರ ಗುರು ಶಾಂತಲಿಂಗನನ್ನು ಸ್ತುತಿಸಿ ಬರೆದಿರುವುನ್ನು ನೋಡಬಹುದು.

* ಗುರು ರಾಮೇಶ್ವರಾಯ ನಮಃ.[೧೦೦] (ಕ್ರ.ಸಂ. ೩೦೮೯)

ಸಾಂಬಯ ಎನ್ನುವ ಲಿಪಿಕಾರನು ಸಾರಂಗಧರನ ಕಥೆಯನ್ನು ಬರೆಯುವಾಗ ತನ್ನ ಇಷ್ಟದೈವವಾದ ಗುರು ರಾಮೇಶ್ವರನನ್ನು ಸ್ತುತಿಸಿ ಬರೆದಿರುವುನ್ನು ನಾವು ಕಾಣಬಹುದಾಗಿದೆ.

* ಶ್ರೀ ಗುರು ಸಿದ್ಧಲಿಂಗಾಯ ನಮಃ

ಶ್ರೀ ಚಂದ್ರ ಮೂರ್ತಿಯೆ ನಮಃ

ಶಿವರಾಮ ಗುರುವೇ ನಮಃ.[೧೦೧] (ಕ್ರ.ಸಂ. ೩೧೦೦)

ಹೇರಂಬ (ನಾರಾಯಣ) ಎಂಬ ಲಿಪಿಕಾರನು ಸಿದ್ಧಲಿಂಗೇಶ್ವರನ ಕಾವ್ಯವನ್ನು ಬರೆಯುವಾಗ ಗುರು ಸಿದ್ಧಲಿಂಗನನ್ನು, ಚಂದ್ರಮೂರ್ತಿಯನ್ನು ಹಾಗೆಯೇ ಶಿವರಾಮನನ್ನು ಸ್ತುತಿಸಿ ಈ ಕಾವ್ಯವನ್ನು ಬರೆದಿರುವುದನ್ನು ನೋಡಬಹುದು. ಈ ಲಿಪಿಕಾರನು ಎಲ್ಲಾ ಧರ್ಮದ ದೇವರುಗಳನ್ನು

ಸ್ತುತಿಸಿ ಬರೆದಿರುವುದರಿಂದ ಈತನು ಯಾವುದೇ ಒಂದು ಧರ್ಮಕ್ಕೆ ಮಾತ್ರ ಸೀಮಿತವಾಗಿರಲಿಲ್ಲ ಎಂಬುದು ಗೊತ್ತಾಗುತ್ತದೆ.

* ಆಚಾರ್ಯರು ಚಂದ್ರಶೇಖರ ದೇವರ ಪಾದವೇ ಗತಿ.[೧೦೨] (ಕ್ರ.ಸಂ. ೩೧೭೬)

ಲಿಪಿಕಾರನ ಬಗ್ಗೆ ಯಾವುದೇ ಮಾಹಿತಿಯು ದೊರೆತಿಲ್ಲ. ಈ ಲಿಪಿಕಾರನು ಸಿದ್ಧೇಶ್ವರನ ಷಟ್ಸ್ಥಲದ ವಚನಜ್ಞಾನಾಮೃತವನ್ನು ಬರೆಯುವಾಗ ತನ್ನ ಇಷ್ಟದೈವವಾದ ಆಚಾರ್ಯ ಚಂದ್ರಶೇಖರ ದೇವರನ್ನು ಸ್ತುತಿಸಿ ಬರೆದಿರುವುದನ್ನು ನೋಡಬಹುದು.

* ಶ್ರೀ ಮನ್ವಿತ ಮಹಾಲಿಂಗವರೇಣ್ಯಾಯೇಂ ನಮಃ

ಗರಡಿಯ ಭಗಲಿಯ ಬಸವಣ್ಣನ ಪಾದವೆಗತಿ.[೧೦೩] (ಕ್ರ.ಸಂ. ೩೧೯೩)

ಲಿಪಿಕಾರನ ಬಗ್ಗೆ ಯಾವುದೇ ಮಾಹಿತಿಯು ಲಭ್ಯವಾಗಿಲ್ಲ. ಈತನು ಸೊಬಗಿನ ಸೋನೆ ಎನ್ನುವ ಕೃತಿಯನ್ನು ಬರೆಯುವಾಗ ಶ್ರೀ ಮನ್ವಿತ ಮಹಾಲಿಂಗವರೇಣ್ಯರನು ಸ್ತುತಿಸಿ ಬರೆದಿರುವುದನ್ನು ನೋಡಬಹುದು.

* ಶ್ರೀ ಗುರು ಸಿದ್ಧೇಂದ್ರಾಯ ನಮಃ.[೧೦೪] (ಕ್ರ.ಸಂ. ೬೩)

ಶಂಕರಾಚಾರ್ಯ ಎಂಬ ಲಿಪಿಕಾರನು ಅಮರಸಿಂಹವನ್ನು ಬರೆಯುವಾಗ ತನ್ನ ಇಷ್ಟದೈವಾವದ ಶ್ರೀ ಗುರು ಸಿದ್ಧೇಂದ್ರನನ್ನು ಸ್ತುತಿಸಿ ಬರೆದಿರುವುನ್ನು ನೋಡಬಹುದು.

* ಕೀರ್ತಿ ಪಂಡಿತ್ಯೇವರ ಶ್ರೀ ಪಾದಕ್ಕೆ ನಮಃ.[೧೦೫] (ಕ್ರ.ಸಂ. ೫೭೭)

ಲಿಪಿಕಾರನ ಬಗ್ಗೆ ಯಾವುದೇ ಮಾಹಿತಿ ದೊರೆತಿಲ್ಲ. ಈತನು ರಾಘವ ಪಾಂಡವೀಯ ಎನ್ನುವ ಕೃತಿಯನ್ನು ಬರೆಯುವಾಗ ಕೀರ್ತಿ ಪಂಡಿತ್ಯೇವರರನ್ನು ಸ್ತುತಿಸಿರುವುದನ್ನು ನೋಡಬಹುದು.

* ಶ್ರೀ ರುದ್ರಾಯ ನಮಃ

ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರಾಯ ನಮಃ.[೧೦೬] (ಕ್ರ.ಸಂ. ೬೮೩)

ಕಂಚಿ ಶಂಕರಾರಾಧ್ಯ ಎನ್ನುವ ಲಿಪಿಕಾರನು ವೃಷಭೇಂದ್ರ ಪುರಾಣವನ್ನು ಬರೆಯುವಾಗ ತನ್ನ ಇಷ್ಟದೈವವಾದ ಶ್ರೀ ರುದ್ರನನ್ನು ಹಾಗೂ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರನನ್ನು ಸ್ತುತಿಸಿ ಬರೆದಿದ್ದಾನೆ.

* ಶ್ರೀ ಗುರು ಮರಿಗೆಯ ಕರಿಬಸವೇಶ್ವರ ಪಾದವೆಗತಿ.[೧೦೭] (ಕ್ರ.ಸಂ. ೭೧೪)

ಲಿಪಿಕಾರನ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಈತನು ಶಿವಕವಚವನ್ನು ಬರೆಯುವಾಗ ತನ್ನ ಇಷ್ಟದೈವವಾದ ಶ್ರೀ ಗುರು ಮುರಿಗೆಯ ಕರಿಬಸವೇಶ್ವರನನ್ನು ಸ್ತುತಿಸಿ ಬರೆದಿದ್ದಾನೆ.

ಈ ಉಲ್ಲೇಖಗಳ ಮೂಲಕ ದೇವರುಗಳ ಪ್ರಾದೇಶಿಕ ವಿಶಿಷ್ಟತೆಯನ್ನು ಹಾಗೂ ಯಾವ ಯಾವ ಪ್ರದೇಶದಲ್ಲಿ ಹಸ್ತಪ್ರತಿಗಳು ಪ್ರತಿಯಾಗಿವೆ ಎಂಬುದನ್ನು ಗಮನಿಸಬಹುದು. ಮುದ್ರಿತ

ಸಂಪಾದಿತ ಗ್ರಂಥಗಳಲ್ಲಿ ಇಂತಹ ಸ್ತುತಿಗಳನ್ನು ಪಠ್ಯದ ಭಾಗವಲ್ಲವೆಂದು ಬಿಡಲಾಗಿರುತ್ತದೆ. ಆದರೆ ಹಸ್ತಪ್ರತಿ ಅಧ್ಯಯನದಲ್ಲಿ ಇವು ಪಠ್ಯದ ಗ್ರಹಿಕೆಗೆ ಮುಖ್ಯ ಮಾಹಿತಿಗಳನ್ನು ಒದಗಿಸುತ್ತವೆ.

೩. ಮಠಗಳು, ಬಸದಿಗಳ ಹೆಸರಿನ ಮೂಲಕ ಧಾರ್ಮಿಕ ಅಂಶಗಳು :

"ಹಸ್ತಪ್ರತಿಗಳನ್ನು ಪ್ರತಿ ಮಾಡಲು ದೇವಾಲಯ, ಚೈತ್ಯಾಲಯ ಮತ್ತು ಮಠಗಳು ಬಹುಮುಖ್ಯ ಕೇಂದ್ರಗಳಾಗಿದ್ದವು. ಪ್ರಾಚೀನ ಗ್ರಂಥಗಳ ಮೇಲಿನ ಭಕ್ತಿಯಿಂದಾಗಿ ಪ್ರತಿಕಾರರು ಪ್ರತಿ ಮಾಡುವುದನ್ನು ಪವಿತ್ರ ಕಾರ್ಯವೆಂದು ತಿಳಿದಿದ್ದರು. ಆದುದರಿಂದ ಪವಿತ್ರ ಸ್ಥಳದಲ್ಲಿ ದೈವ ಸನ್ನಿಧಿಯಲ್ಲಿ ಕುಳಿತು ಬರೆಯುತ್ತಿದ್ದರು".[೧೦೮] ಈ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ಹಾಗೂ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ; ಹಾಗೆಯೇ ಕ್ಷೇತ್ರಕಾರ್ಯ ಮಾಡಿದಾಗ ದೊರೆತ ಹಸ್ತಪ್ರತಿಗಳಲ್ಲಿ ಲಿಪಿಕಾರರು ಗ್ರಂಥಗಳನ್ನು ಮಠಗಳಲ್ಲಿ, ಬಸದಿಗಳಲ್ಲಿ, ದೇವಾಲಯಗಳಲ್ಲಿ ಹಾಗೂ ತಮ್ಮ ಗೃಹದಲ್ಲಿಯೇ ರಚನೆ ಮಾಡುವುದರ ಮೂಲಕವಾಗಿ ಧಾರ್ಮಿಕ ಅಂಶಗಳನ್ನು ನೋಡಬಹುದು.

* ಷಟ್ಪದಿ॥ ವರುಷ ಸರ್ವಧಾರಿ ಮಾಸ ಫಾಲ್ಗುಣ ಬಹುಳ
ನೆರೆ ಪಕ್ಷ ತಿಥಿಯು ಅವತಾರದಲ್ಲಿರುವ ದಿನ
ಭರದಿ ಸುಧಕರನ ನಕ್ಷತ್ರ ಉತ್ರಾಷಾಢ ತ್ವರಿತಗಳಿಗೆಯನುಸುರ್ವೆನೂ
ಪರಮ ಷಂಡ್ರುಂಚಿಯ ಮೂಹೂರ್ತದಲಿ ಶಿರಿಗೆರೆಯಲ್ಲಿ
ಹರುದಿಂ ಜಂಬೈಯ್ಯನಾಲಯದಿ ಯೀ ಲಿಖಿತ
ಕರುಣಿ ಗುರು ಕಲ್ಲೆ ಲಿಂಗೇಶ್ವರನ ಚರಿತ್ರ ಬರೆಯೆ ಪ್ರಾರಂಭ ಶರಣೂ.[೧೦೯] (ಕ್ರ.ಸಂ. ೧೦೧೨)

ಕಲ್ಲೆಲಿಂಗೇಶ್ವರನ ಚಾರಿತ್ರವನ್ನು ಬರೆದ ದಿವಸವನ್ನು ಸೂಚಿಸುವುದರೊಂದಿಗೆ ಅದು ರಚನೆಯಾದ ಸ್ಥಳವನ್ನು ಸೂಚಿಸುವುದನ್ನು ನೋಡಬಹುದು. ಇದು ಸಿರಿಗೆರೆಯ ಜಂಬೈಯ್ಯನ ಮಠದಲ್ಲಿ ರಚನೆಯಾಗಿರುವುದನ್ನು ನೋಡಬಹುದು.

* ಹೊಸಬಾವಿ ಪೇಟೆಯ ಆನೆ ಹಂಪೈಯ್ಯನ ವಿರಕ್ತ ಮಟದಲ್ಲಿ
ಸೋಮವಾರ (ರ)ದಲು ಹನ್ನೊತ್ತಾಸೊತ್ತಿನಲ್ಲಿ ಗಣ...
ಶ್ರೀ ಮದ್ದುಗುರು ಕವುದಿ ಮಹಾಂತಸ್ವಾಮಿಯ ಭೃತ್ಯಮಹತ್ತ ದೇವರು
ಗಣಭಾಷಿತ ರತ್ನಮಂ ಬರೆದರು.[೧೧೦] (ಕ್ರ.ಸಂ. ೧೨೫೮)
ಶ್ರೀ ಮದ್ದುಗುರು ಕವುದಿ ಮಹಾಂತಸ್ವಾಮಿಯ ಭೃತ್ಯಮಹತ್ತ ದೇವರು

ಗಣಭಾಷಿತ ರತ್ನವನ್ನು ಸೂಚಿಸುವುದರ ಜೊತೆಗೆ ಅದು ರಚನೆಯಾದ ಗಳಿಗೆಯನ್ನು ಸೂಚಿಸುವುದನ್ನು ನೋಡಬಹುದು. ಇದು ಹೊಸಬಾವಿ ಪೇಟೆಯ ಆನೆ ಹಂಪೈಯನ ವಿರಕ್ತಮಠದಲ್ಲಿ ರಚನೆಯಾಗಿರುವುದನ್ನು ಕಾಣಬಹುದು.

* ಶ್ರೀ ಮತು ಖಾಸದ ಸೋಲೂರ ಗಂಟುನೂರ ಮಠದ ಸಿಂಗನ

ಬಸವಪ್ಪನವರು ಸರ್ವಧಾರಿ ಸಂವತ್ಸರ ಶ್ರಾವಣ ಸುದ್ಧ ವ್ಯಾಲ

ಚೌತಿ ಗುರುವಾರದ ಪ್ರಾತಃ ಕಾಲದಲ್ಲಿ ಶ್ರೀ ರುದ್ರ ಚಮೆ ಪುರುಷ ಸೂಕ್ತ ಸಹಸ್ರನಾಮಂಗಳ ಸೇರುವೆಯ ಪುಸ್ತಕ ಬರೆದು ಮುಗಿಸಿದ

ಪುಸ್ತಕಕ್ಕೆ ನಿರ್ವಿಘ್ನ ಮಸ್ತು.[೧೧೧] (ಕ್ರ.ಸಂ. ೧೩೨೭)

ಗುಂಟನೂರು ಮಠದ ಸಂಗನಬಸಪ್ಪನವರು ಲಿಪಿಕಾರರಾಗಿದ್ದು, ಶ್ರೀ ರುದ್ರ ಚಮೆ ಪುರುಷ ಸೂಕ್ತ ಸಹಸ್ರನಾಮಂಗಳ ಕೃತಿಯನ್ನು ಶ್ರಾವಣ ಶುದ್ಧ ವ್ಯಾಲ ಚೌತಿ ಗುರುವಾರ ದಿವಸ ರಚನೆಗೊಂಡಿರುವುದನ್ನು ನೋಡಬಹುದು.

* ಶಾ.ಶ. ೧೭೮೭ನೆ ರಕ್ತಾಕ್ಷಿ ಶ್ರಾವಣ ಬ೧೦ ಭೃಗುವಾರ ಮೃಗಶೀರ ನಕ್ಷತ್ರ

ವಜ್ರನಾಮ ಯೋಗ ವನಜಕರಣ ಧನುರ್ಲಗ್ನ ಶ್ರೀ ಮತು ನನಿವಾಳ ಮಠದ ಹಿರಿಯೂರಲ್ಲೂ ಇರುವ ಓದಿಸುವ ಸಿವರುದ್ರಪ್ಪನು ಬರೆದ ಚನ್ನಬಸಪ್ಪ ದೇವರ

ಪೌರಣ.[೧೧೨] (ಕ್ರ.ಸಂ. ೧೬೭೯)

ಚನ್ನಬಸವ ದೇವರ ಪುರಾಣವನ್ನು ಬರೆದ ಕಾಲ, ದಿವಸವನ್ನು ಸೂಚಿಸುತ್ತದೆ. ಇದನ್ನು ನನ್ನಿವಾಳ ಮಠದಲ್ಲಿ ಬರೆದು ಮುಗಿಸಿರುವುದನ್ನು ನೋಡಬಹುದು.

* ಪ್ರಮೋಧೂತ ಸಂ ಕಾರ್ತೀಕ ಕೃಷ್ಣಪಕ್ಷ ಅಷ್ಟಮಿ ಸೋಮವಾರ

ಪುಟ್ಟು ಬಸವಲಿಂಗ ದೇವರು ಸಹಪುರದ ಜುಟ್ಟಿನ

ಗಂಗಾಧರ ದೇವರ ಮಠದಲ್ಲಿ ಷಣ್ಕವ್ಯ ಬರೆದು ಮುಗಿತು.[೧೧೩] (ಕ್ರ.ಸಂ. ೩೫೪)

ಪುಟ್ಟು ಬಸವಲಿಂಗ ದೇವರು ಎಂಬ ಲಿಪಿಕಾರರನು ಗಂಗಾಧರ ದೇವರ ಮಠದಲ್ಲಿ ಪ್ರಮೋಧೂತ ಸಂಕಾರ್ತೀಕ ಕೃಷ್ಣಪಕ್ಷ ಅಷ್ಟಮಿ ಸೋಮವಾರದಂದು ಬರೆದು ಮುಗಿಸಿರುವುದನ್ನು ನೋಡಬಹುದು.

* ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ ಶಾಲಿವಾಹನ ಸಖದ ವರುಷ

೧೬೦೭ನೆಯ ಕ್ರೋಧನಾಮ ಸಂ.ದ. ಶುಕ್ಲಪಕ್ಷದ ಆಸ್ವೀಜ ಶುದ್ಧ

ಪೌರ್ನಮಿ ಬೃಹಸ್ಪತಿವಾರದಲ್ಲು ಕೊಡಗನೂರು ಮಠದಲ್ಲಿ ಅಖಿಳ

ಜನ ದುರಿತವನದಾಹ ಸುಲೇಗಾವಿಯ ಮಹತ್ತೇಶ್ವರನ ಶ್ರೀ

ಪಾದಕಮಲ ಭೃಂಗನಾಗಿ ಒಪ್ಪಲ್ಪಟ್ಟ ರುದ್ರಮುನಿ ದೇವರು ವಂಬತ್ತು

ತಾಸುತ್ತಿನ ಅಮೃತಗಳಿಗೆಯಲ್ಲಿ ಬರೆದ ಕಥಾಸಾಗರ ಸಮಾಪ್ತ.[೧೧೪] (ಕ್ರ.ಸಂ. ೫೪೭)

ಕಥಾಸಾಗರವನ್ನು ಬರೆದ ಕಾಲ, ದಿವಸವನ್ನು ಸೂಚಿಸುವುದರೊಂದಿಗೆ ಅದು ರಚನೆಯಾದ ಸ್ಥಳವನ್ನು ಸೂಚಿಸುತ್ತದೆ. ಇದು ಕೊಡಗನೂರು ಮಠದಲ್ಲಿ ಪ್ರತಿಯಾಗಿದೆ

* ಪಿಂಗಳ ಸಂವತ್ಸರದ ಚೈತ್ರ ಬಹುಳ ಅಷ್ಟಮಿಯ ಸುಕ್ರವಾರದ

ದಿನ ಓದುಗಿರಿಯ ವಿರಕ್ತ ಮಠದಲ್ಲಿ ಭೈರವೇಶ್ವರ ಕಾವ್ಯ ಸಮಾಪ್ತಿ.[೧೧೫] (ಕ್ರ.ಸಂ. ೧೭೬೧) ನಂಜುಂಡ ಎನ್ನುವ ಲಿಪಿಕಾರನು ಪಿಂಗಳ ಸಂವತ್ಸರದ ಚೈತ್ರ ಬಹುಳ ಅಷ್ಟಮಿಯ ಶುಕ್ರವಾರದಂದು ಭೈರವೇಶ್ವರನ ಕಾವ್ಯವನ್ನು ಓದುಗಿರಿಯ ವಿರಕ್ತ ಮಠದಲ್ಲಿ ಬರೆದಿರುವುದನ್ನು ನೋಡಬಹುದು.

* ಮಾಘಮಾಸ ಪೌಣಿಮಾ ಚತುರ್ದಶಿ ಸೋಮವಾರದಲ್ಲಿ

ಆವರಿಸಿದ್ಧರಾಮೇಶ್ವರನ ಗರ್ದುಗೆ ಮಠದಲ್ಲಿ ರುದ್ರದೇವರು ರಾಜಶೇಖರ

ವಿಳಾಸ...ಬರೆದು ಸಮಾಪ್ತಿ ಮಾಡಿದರು.[೧೧೬] (ಕ್ರ.ಸಂ. ೨೧೮೨)

ರುದ್ರದೇವರು ಎಂಬ ಲಿಪಿಕಾರನು ರಾಜಶೇಖರ ವಿಳಾಸವನ್ನು ಮಾಘಮಾಸ ಪೌಣಿಮಾ ಚತುರ್ದಶಿ ಸೋಮವಾರದಲ್ಲಿ ಆವರಿ ಸಿದ್ಧರಾಮೇಶ್ವರನ ಗರ್ದುಗೆ ಮಠದಲ್ಲಿ ಬರೆದು ಮುಗಿಸಿರುವುದನ್ನು ನೋಡಬಹುದು.

* ಶಾಲಿವಾಹನ ಸಖ ಸಂದ ೧೬೩೪ಳ ಸಂದುದು ಶುಕ್ಲ ಸಂವ

ತ್ಸರದ ಆಷಾಡ ಮಾಸದ ಶುಕ್ಲಪಕ್ಷದ ದಶಮಿ ಮಂಗಲ ದಿನದಲ್ಲು ತಿಳಿವಳ್ಳಿ

ಮಠದಲ್ಲಿ ಸಮಾಪ್ತಿಯಾದುದು.[೧೧೭] (ಕ್ರ.ಸಂ. ೨೨೭೮)

ಇ. ಗುರುಸಿದ್ದ ಎನ್ನುವ ಲಿಪಿಕಾರನು ಲಿಂಗಾಚಾರ ರಚನಾಗಮ ಟೀಕೆಯನ್ನು ಶಾಲಿವಾಹನ ಸಖ ೧೯೩೪ಳರಂದು ತಿಳಿವಳ್ಳಿ ಮಠದಲ್ಲಿ ಬರೆದು ಮುಗಿಸಿರುವುದನ್ನು ನೋಡಬಹುದು.

* ಶ್ರೀಮತು ರಕ್ತಾಕ್ಷಿ ನಾಮ ಸಂವತ್ಸರದ ಜೇಷ್ಟ ಬಿ೫ ಆದಿವಾರದ

ದಿವಸಕ್ಕೆ ಹುಣಸನಹಳ್ಳಿ ಪೇಟೆಯ ಉಗ್ಗದ ದೇವರ ಮಟದಲ್ಲಿ ಲೇಖನವ

ಮಾಡಿಸಿ ಸಂಪೂರ್ಣವಾಯಿತ್ತು.[೧೧೮] (ಕ್ರ.ಸಂ. ೨೩೭೬)

ಲಿಪಿಕಾರನ ಬಗ್ಗೆ ಮಾಹಿತಿಯು ದೊರೆಯುವುದಿಲ್ಲ. ಈ ಲಿಪಿಕಾರನು ವಿವೇಕ ಚಿಂತಾಮಣಿಯನ್ನು ರಕ್ತಾಕ್ಷಿ ನಾಮ ಸಂವತ್ಸರದ ಜೇಷ್ಠ ಬಿ೫ ಆದಿವಾರದಂದು ಹುಣಸನಹಳ್ಳಿಯಲ್ಲಿರುವ ಪೇಟೆಯ ಉಗ್ಗದೇವರ ಮಠದಲ್ಲಿ ಬರೆದು ಮಗಿಸಿರುವುದನ್ನು ದಾಖಲಿಸಲಾಗಿದೆ.

* ಸೌಮ್ಯ ಸಂವತ್ಸರದ ಶ್ರಾವಣ ಮಾಸದ ಕೃಷ್ಣಪಕ್ಷದ ಶುದ್ಧ

ಪಂಚಮಿ ಶುಕ್ರವಾರದಲ್ಲು ಬಾವಿಗೆಯ ವಿರಕ್ತಮಠದಲ್ಲಿ ವೀರಶೈವಾಮೃತ

ಪುರಾಣದ ಬರದು ಸಮಾಪ್ತಿಯಾಯಿತ್ತು. ಶುಭಮಸ್ತು.[೧೧೯] (ಕ್ರ.ಸಂ. ೨೪೧೪)

ಲಿಪಿಕಾರನ ಬಗ್ಗೆ ಮಾಹಿತಿಯು ಸಿಗುವುದಿಲ್ಲ. ಈ ಲಿಪಿಕಾರನು ವೀರಶೈವಾಮೃತ ಪುರಾಣವನ್ನು ಕೃಷ್ಣಪಕ್ಷದ ಶುದ್ಧ ಪಂಚಮಿ ಶುಕ್ರವಾರದಲ್ಲಿ ಬಾವಿಗೆಯ ವಿರಕ್ತಮಠದಲ್ಲಿ ಬರೆದು ಮುಗಿಸಿರುವುದನ್ನು ನೋಡಬಹುದು.

* ದುಂಧುಬಿನಾಮ ಸಂವತ್ಸರದ ಚೈತ್ರ ಶುದ್ಧ ಬೃಹಸ್ಪತಿವಾರ ೧೩ ಸುಂಣಗೆರೆ
ಮಠದಲ್ಲಿ ವಿರಕ್ತ್ಯಯ್ಯ ಮುಗಿಸಿದ್ದು.[೧೨೦] (ಕ್ರ.ಸಂ. ೬೩)

ವಿರಕ್ತ್ಯಯ್ಯ ಎಂಬ ಲಿಪಿಕಾರನು ಅಮರ ಕೋಶವನ್ನು ಸಂವತ್ಸರದ ಚೈತ್ರ ಶುದ್ಧ ಬೃಹಸ್ಪತಿವಾರ ೧೩ ಸುಂಣಗೆರೆ ಮಠದಲ್ಲಿ ಬರೆದು ಮುಗಿಸಿರುವುದನ್ನು ಕಾಣಬಹುದು.

ಹೀಗೆ ಧಾರ್ಮಿಕತೆಯ ಮೂಲಕವಾಗಿ ಇಲ್ಲಿ ವೀರಶೈವ ಧರ್ಮ ಪ್ರಧಾನವಾಗಿದ್ದರೂ, ಅನ್ಯ ಧರ್ಮಗಳಿಗೂ ಪ್ರಾಮುಖ್ಯತೆಯನ್ನು ನೀಡಿದ್ದಾರೆ ಎಂಬುದಕ್ಕೆ ಇಲ್ಲಿ ಅನ್ಯ ಧರ್ಮದ ದೇವರುಗಳನ್ನು ಸ್ತುತಿಸುವುದು ಕಾಣಬಹುದು. ಹಾಗೆಯೇ ಧರ್ಮದ ಮೂಲಕವಾಗಿ ಸಣ್ಣಪುಟ್ಟ ದೇವರಗಳಿಗೂ ಸಹ ಇಲ್ಲಿ ಪ್ರಾಮುಖ್ಯತೆಯನ್ನು ನೀಡಿದ್ದಾರೆ.

ಮಧ್ಯಕಾಲೀನ ಕನ್ನಡ ಹಸ್ತಪ್ರತಿಗಳ ಚರಿತ್ರೆ ಎಂದರೆ ಅದು ವೀರಶೈವ ಹಸ್ತಪ್ರತಿ ಪರಂಪರೆಯ ಅಧ್ಯಯನವೇ ಆಗಿದೆ. ಕನ್ನಡದ ಬೇರೆ ಬೇರೆ ಹಸ್ತಪ್ರತಿಗಳು ಬರಹ ಹಾಗೂ ವಿಷಯದ ಮೂಲಕವಾಗಿ ಗಮನ ಸೆಳೆದರೆ, ವೀರಶೈವ ಹಸ್ತಪ್ರತಿಗಳು ವಿಷಯ ವೈವಿಧ್ಯದ ಹಿನ್ನೆಲೆಯಲ್ಲಿ ವಿಶೇಷವಾಗಿ ಗಮನ ಸೆಳೆಯುತ್ತವೆ. ಶ್ರೀ ಗುರು ಬಸವಲಿಂಗಾಯ ನಮಃ ಶಂಭುಲಿಂಗಾಯ ನಮಃ ಎಂದು ಆರಂಭವಾಗುವ ವೀರಶೈವ ಧಾರ್ಮಿಕ ಹಸ್ತಪ್ರತಿಗಳು ಸ್ಪಷ್ಟವಾಗಿ ದ್ರಾವಿಡ ನೆಲದಲ್ಲಿ ರೂಪುಗೊಂಡವು.

ಹಸ್ತಪ್ರತಿಗಳನ್ನು ಆಂತರಿಕ ಸ್ವರೂಪದಿಂದ ಗಮನಿಸುವುದಾದರೆ ಜೈನ ಹಸ್ತಪ್ರತಿಗಳಿಗಿಂತ ವೀರಶೈವ ಹಸ್ತಪ್ರತಿಗಳಲ್ಲಿ ಸ್ಖಾಲಿತ್ಯದ ಪ್ರಮಾಣ ಹೆಚ್ಚು. ಯಾಕೆಂದರೆ ವೀರಶೈವ ಧರ್ಮದಲ್ಲಿ ಗುರು ಪರಂಪರೆಗೆ ಹೆಚ್ಚು ಮಹತ್ವ ಕೊಟ್ಟಿದ್ದರಿಂದ ಇಲ್ಲಿಯ ಒಂದು ಮೂಲ ಹಸ್ತಪ್ರತಿಗೆ ಅನೇಕ ಶಿಷ್ಯಂದಿರು ಪ್ರತಿ ಅಥವಾ ನಕಲು ಮಾಡುವುದರ ಮೂಲಕ ತಮ್ಮ ನಿಷ್ಠೆಯನ್ನು ತೋರುತ್ತಿದ್ದರು. ಹೀಗಾಗಿ ಇಲ್ಲಿ ಕವಿಯ ಏಕೈಕ ಹಸ್ತಪ್ರತಿಗಿಂತ ಅದರ ವಂಶಸ್ಥ ಪ್ರತಿಗಳೇ ಬಹು ಪ್ರಮಾಣದಲ್ಲಿ ದೊರೆಯುತ್ತವೆ. ಆದರೆ ಈ ಬಗೆಯ ಸ್ಖಾಲಿತ್ಯದ ತಾಂತ್ರಿಕ ಸ್ವರೂಪ ಜೈನ ಮತ್ತು ವೈದಿಕ ಪರಂಪರೆಯ ಹಸ್ತಪ್ರತಿಗಳಲ್ಲಿಲ್ಲ. ಜೈನರಿಗೂ ಕೂಡ ಶಿಷ್ಯ ಬಳಗವಿದ್ದರೂ, ಅವರು ನಂಬಿದ್ದು ಜಿನನನ್ನು ಮಾತ್ರ. ಆದರೆ ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣವನ್ನು ಸಾವಿರ ಪ್ರತಿಗಳಲ್ಲಿ ಬರೆಸಿ ಹಂಚಿದಾಗ ಎಷ್ಟು ಜನ ಪ್ರತಿಕಾರರು ಯಾವ ಯಾವ ಧರ್ಮದವರು ತಮ್ಮ ಮನೋಧರ್ಮದಿಂದ ಪ್ರತಿ ಮಾಡಿದವರೆಂಬುದು ಚರ್ಚಾಸ್ಪದ ಸಂಗತಿ. ಜಿನನ ನಂಬಿಕೆಯೇ ಕಾರಣವಾಗಿ ಜೈನರ ಹಸ್ತಪ್ರತಿಗಳಲ್ಲಿ ವಂಶಸ್ಥ ಪ್ರತಿಗಳಿಲ್ಲದೆ ಬಹುತೇಕ ಮೂಲ ಅಥವಾ ಏಕೈಕ ಹಸ್ತಪ್ರತಿಗಳೇ

ಇರುವುದರಿಂದ ಅಲ್ಲಿ ಸ್ಖಾಲಿತ್ಯದ ಪ್ರಮಾಣ ಇಲ್ಲವೆನ್ನುವಷ್ಟು ಕಡಿಮೆ. ಈ ದೃಷ್ಟಿಯಿಂದ ಮೂಡಬಿದರೆಯ ಜೈನ ಹಸ್ತಪ್ರತಿ ಭಂಡಾರದಲ್ಲಿ ರಕ್ಷಿತವಾಗಿರುವ ಧವಳ, ಜಯಧವಳ, ಮಹಾಧವಳ ಹಸ್ತಪ್ರತಿಗಳು ಏಕೈಕ ಹಸ್ತಪ್ರತಿಗಳಾಗಿ ಗಮನ ಸೆಳೆಯುತ್ತವೆ.

ವೀರಶೈವ ಸಂದರ್ಭದಲ್ಲಿ ಒಂದು ಮೂಲ ಪ್ರತಿಯನ್ನು ನಕಲುಗೊಳಿಸಿದ ಪ್ರತಿಕಾರನ ಕಾರಣ ಮತ್ತು ಮನೋಧರ್ಮವನ್ನಲ್ಲದೆ ಪ್ರತಿಯನ್ನು ಬರೆದು ಮುಗಿಸಿದ ಕಾಲ ಇತ್ಯಾದಿ ವಿವರಗಳನ್ನು ಮತ್ತು ಲಿಪಿಕಾರನ ವಂಶಾವಳಿಯನ್ನು ತಿಳಿಸುವ ಹಸ್ತಪ್ರತಿಗಳಿವೆ. ಇನ್ನು ಕೆಲವು ಹಸ್ತಪ್ರತಿಗಳು ಲಿಪಿಕಾರನ ವಂಶಾವಳಿಯನ್ನು ದಾಖಲಿಸುವುದರ ಮೂಲಕ ಒಂದು ಚರಿತ್ರೆಯನ್ನು ಕಟ್ಟುವಲ್ಲಿ ನೆರವಾಗುತ್ತವೆ. ಕ್ರಿ.ಶ. ೧೫೮೦ರಲ್ಲಿ ವಾರ್ಧಕ ಷಟ್ಪದಿಯಲ್ಲಿ ಅದೃಶ್ಯ ಕವಿಯಿಂದ ನಿರ್ಮಾಣಗೊಂಡ 'ಪ್ರೌಢದೇವರಾಯನ ಕಾವ್ಯ' ಲಿಪಿಕಾರನ ವಂಶಾವಳಿಯನ್ನು ತಿಳಿಸುವ ಅಪರೂಪದ ಹಸ್ತಪ್ರತಿಯಾಗಿದೆ.

ಈ ಮೇಲಿನ ಒಟ್ಟು ಸ್ವರೂಪದಿಂದ ಎಲ್ಲಾ ಧರ್ಮದ ಹಸ್ತಪ್ರತಿಗಳು ಸಾಮಾನ್ಯವಾಗಿ ಎಲ್ಲ ಬಗೆಯ ಹಸ್ತಪ್ರತಿಗಳಂತೆ ಆದಿ, ಅಂತ್ಯವೆಂಬ ವಿನ್ಯಾಸದಲ್ಲಿ ರಚನೆಗೊಂಡಿವೆ. ಅದರಲ್ಲಿಯೂ ವಿಶೇಷವಾಗಿ ವೀರಶೈವ ಹಸ್ತಪ್ರತಿಗಳು ಆದಿಭಾಗದಲ್ಲಿ "ಶ್ರೀ ಗುರು ಬಸವಲಿಂಗಾಯ ನಮಃ" ಎನ್ನುವ ಸೂತ್ರದೊಂದಿಗೆ ಆರಂಭವಾಗಿ ತಮಗಿಷ್ಟವಾದ ದೇವರ ನಾಮಾವಳಿ ಕವಿ ವಂಶವನ್ನು ನೆನೆಯುತ್ತಾರೆ. ಮಧ್ಯಭಾಗದಲ್ಲಿ ವಿಷಯ ಸ್ವರೂಪ ನಿರೂಪಿತವಾಗಿರುತ್ತದೆ. ಅಂತ್ಯಭಾಗದಲ್ಲಿ ಹಸ್ತಪ್ರತಿಯನ್ನು ಪ್ರತಿ ಮಾಡಿದ ಕಾಲ, ಮುಕ್ತಾಯ ಇತ್ಯಾದಿಗಳ ವಿವರಗಳಿರುತ್ತದೆ. ಮೂಲ ಹಸ್ತಪ್ರತಿಯೊಂದನ್ನು ಅನೇಕ ಪ್ರತಿಕಾರರು ನಕಲು ಮಾಡುವುದರಿಂದ ಸ್ಖಾಲಿತ್ಯದ ಪ್ರಮಾಣ ಅಧಿಕವಾಗಿದೆ. ಆಯಾ ಪ್ರತಿಕಾರರು ತಾವು ನಂಬಿದ ನೆಚ್ಚಿದ ದಾನ ಧರ್ಮಗಳನ್ನು ಕೂಡ ನೆನೆಯುತ್ತಾರೆ.

ವೀರಶೈವ ಧರ್ಮದ ಒಟ್ಟು ಸಂಸ್ಕೃತಿಯನ್ನು ನಿರೂಪಿಸುವ ಹಸ್ತಪ್ರತಿಗಳು ಧರ್ಮ, ತತ್ವ, ನೀತಿ, ಪಂಚಾಚಾರ, ಶಿವಲೀಲೆ, ಶಿವಭಕ್ತರ–ಶಿವಶರಣರ ಚರಿತೆ, ಷಟ್‌ಸ್ಥಲ, ಅಷ್ಟಾವರಣ ೬೩ ಪುರಾತನರ ಚರಿತೆ ಮುಂತಾದ ವಿಷಯ ಸಾಮಗ್ರಿ ಮತ್ತು ರೂಪ ವೈವಿಧ್ಯದ ಹಿನ್ನೆಲೆಯಲ್ಲಿ ರೂಪಿತಗೊಂಡಿವೆ.

ಒಂದು ಕಾಲಕ್ಕೆ ಸಾಹಿತ್ಯ ನಿರ್ಮಾಪಕರಾದ ಶರಣರು ಮುಂದಿನ ಹಲವು ನೂರು ವರ್ಷಗಳ ತರುವಾಯ ಅದೇ ವರ್ಗದ ಕವಿಗಳಿಗೆ ಸಾಹಿತ್ಯಿಕ ವಸ್ತುವಾದರು. ಮೊದಮೊದಲು ವೀರಶೈವ ಧರ್ಮ, ತತ್ವ, ನೀತಿಗಳು ಕುರಿತಾದ ಅಭಿವ್ಯಕ್ತಿಗೆ ಶರಣರೇ ಮೂಲ ಕಾರಣರಾದರು. ಇವರು ವಚನ ರೂಪದಲ್ಲಿ ಆ ಬಗೆಯ ವಿಷಯವನ್ನು ತಿಳಿಸುತ್ತಾ ಧಾರ್ಮಿಕ ಮೌಲ್ಯವನ್ನು ಜನರ ಬಳಿಗೆ ಕೊಂಡೊಯ್ದರು. ಆದ್ದರಿಂದ ವೀರಶೈವ ಹಸ್ತಪ್ರತಿಗಳನ್ನು ವಚನ ಮತ್ತು ವಚನೋತ್ತರ ಕಾಲಕ್ಕೆ ಮಿತಿಗೊಳಿಸಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ.

ಈ ಎಲ್ಲಾ ಹಸ್ತಪ್ರತಿಗಳ ಉದ್ದೇಶ ಸಾಮಾಜಿಕವಾದ ನೈತಿಕ ಮೌಲ್ಯಗಳನ್ನು ಪ್ರಸಾರ ಮಾಡುವ ಉದಾತ್ತ ಧ್ಯೇಯವೇ ಆಗಿತ್ತು. ವೀರಶೈವ ಧರ್ಮ, ತತ್ವ, ನೀತಿ ಮುಂತಾದ ವಿಷಯಗಳ ಅಭಿವ್ಯಕ್ತಿಗೆ ವಚನರೂಪ ಅಡಿಗಲ್ಲು ಹಾಕಿದ ತರುವಾಯವೇ ಇನ್ನುಳಿದ ಅನೇಕ ರೂಪಗಳು ಎಚ್ಚೆತ್ತು ಈ ವಿಷಯದ ನಿರೂಪಣೆಗೆ ತೊಡಗಿದವು. ಹೀಗಾಗಿ ರಗಳೆ, ಚಂಪು, ಸಾಂಗತ್ಯ, ಷಟ್ಪದಿ, ತ್ರಿಪದಿಗಳ ಇತಿಹಾಸ ಆರಂಭವಾಗುವುದು ವಚನೋತ್ತರ ಘಟ್ಟದ ನಂತರವೇ, ಒಂದು ಕಾಲಕ್ಕೆ 'ರೂಪಗಳ ರಾಜನಾಗಿ ವಿರಾಜಮಾನವಾಗಿದ್ದ ಚಂಪು ಕೂಡ ವೀರಶೈವ ಹಸ್ತಪ್ರತಿಗಳಲ್ಲಿ ಅವಕಾಶ ಪಡೆದದ್ದು ತಡವಾಗಿಯೇ. ಹೀಗೆ ವೀರಶೈವ ತಾತ್ವಿಕ ಹಸ್ತಪ್ರತಿಗಳು ಯಾವುದೇ ಒಂದು ನಂಬಿಕೆ, ಆಚರಣೆ, ಉದ್ದೇಶವನ್ನಿಟ್ಟುಕೊಂಡು ರಚಿತವಾದವುಗಳೇ. ಕೃತಿ ರಚನೆಯಲ್ಲಿ, ರೂಪ ಸೃಷ್ಟಿಯಲ್ಲಿ ವಸ್ತುವಿನ ಆಯ್ಕೆಯಲ್ಲಿ, ನಿರೂಪಣಾ ರೀತಿಯಲ್ಲಿ, ಕಾವ್ಯ ಸೌಂದರ್ಯದಲ್ಲಿ ಹೀಗೆ ಎಲ್ಲ ಮಾದರಿಗಳಲ್ಲಿ ಅವರು ತುಳಿದ ಮಾರ್ಗ ವಿಶಿಷ್ಟ ಎಂದೇ ಹೇಳಬಹುದು.

ವೀರಶೈವ ಹಸ್ತಪ್ರತಿಗಳನ್ನು ಬೆಳೆಸುವುದರಲ್ಲಿ ಕೂಲಿಮಠ, ಓದಿಸುವಮಠ, ಸಾಲಿಮಠ, ಆಯನಗಳ ಮಠಗಳಂತ ಮುಂತಾದ ಧಾರ್ಮಿಕ ಸಂಸ್ಥೆಗಳು ಪ್ರಧಾನ ಪಾತ್ರ ವಹಿಸಿವೆ. ಕರ್ನಾಟಕದ ಧಾರ್ಮಿಕ ಸಂಘರ್ಷದ ಸ್ವರೂಪವನ್ನು ದಾಖಲಿಸುವಲ್ಲಿ ಶಾಸನಗಳಂತೆ ಹಸ್ತಪ್ರತಿಗಳು ಬಹುಮುಖ್ಯ ಆಕರವಾಗುತ್ತವೆ ಎಂಬುದಕ್ಕೆ ಮಹಾದೇವ ಕವಿ ರಚಿಸಿದ ಹೇರೂರು ಹೆಣ್ಣಿನ ಸಾಂಗತ್ಯವೆಂಬ ಆಕರ್ಷಕ ಹಸ್ತಪ್ರತಿ ಉದಾಹರಣೆಯಾಗಿದೆ. ಇಲ್ಲಿ ಭಿನ್ನ ಭಿನ್ನ ಧರ್ಮಗಳು ಭಿನ್ನ ಭಿನ್ನ ಆಚರಣೆಗಳಲ್ಲಿ ಹೊಂದಿರುವುದನ್ನು ನೋಡಬಹುದು. ಹಾಗೆಯೇ ಅವುಗಳ ಕಾರಣದಿಂದ ಗ್ರಂಥ ರಚನೆ ಮತ್ತು ಪ್ರತಿ ಮಾಡುವಲ್ಲಿ ಭಿನ್ನ ಮನೋಭಾವಗಳಿರುತ್ತವೆ. ಅವುಗಳನ್ನೆಲ್ಲ ಈ ಹಸ್ತಪ್ರತಿಗಳಲ್ಲಿ ಕಾಣಬಹುದಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಈ ಹಸ್ತಪ್ರತಿಗಳ ಕೊನೆಯಲ್ಲಿ ಬರುವ ಪುಷ್ಪಿಕೆಗಳು ಬಹಳ ಅಮೂಲ್ಯವಾದ ಸಾಂಸ್ಕೃತಿಕ ಆಕರಗಳಾಗುತ್ತವೆ. ಇವುಗಳನ್ನು ಕಲೋಫಿನ್ಸ್ ಪ್ರಶಸ್ತಿ ಬರಹ ಎಂದು ಸಹ ಕರೆಯುತ್ತಾರೆ. ಅವು ಹಸ್ತಪ್ರತಿ ಪ್ರತಿಕಾರನ ಮನೋಭಾವಗಳನ್ನು ಹೇಳುತ್ತವೆ. ಅದರಲ್ಲಿ ನಮ್ಮ ಸಾಮಾಜಿಕವಾದ ಅನೇಕ ಆಚರಣೆಗಳು ಜೀವನ ವಿವರಗಳು ಬದುಕಿನ ಮೌಲ್ಯಗಳು ದಾಖಲಾಗಿರುತ್ತವೆ. ಗ್ರಂಥ ದಾನದ ಒಂದು ಸಾಂಸ್ಕೃತಿಕ ವಿವರ ನೋಡಬಹುದು. ಅತ್ತಿಮಬ್ಬೆಯನ್ನು ವಿಶೇಷವಾಗಿ ನಾವು ಗುರುತಿಸುವುದು ಗ್ರಂಥದಾನದ ಪುಷ್ಪಿಕೆಗಳ ಆದಾರದ ಮೇಲೆ ಮತ್ತು ಅದರ ಹಿನ್ನೆಲೆಯಲ್ಲಿ. ಕವಿಗಳು ಆಕೆಯನ್ನು ವರ್ಣಿಸುವುದರ ಹಿನ್ನೆಲೆಯಲ್ಲಿ ಗ್ರಂಥದಾನ ನಮ್ಮಲ್ಲಿ ಧಾರ್ಮಿಕವಾಗಿ ಎಷ್ಟು ಮುಖ್ಯವಾಗಿತ್ತು ಎಂಬುದು ಗೊತ್ತಾಗುತ್ತದೆ. ಹಾಗೆಯೇ ಅದರ ಮಹತ್ವವೇನು? ಅದರಿಂದಾದ ಸಾಮಾಜಿಕ ಪ್ರಯೋಜನವೇನು ಎಂಬುದನ್ನೆಲ್ಲ ಇಂತಹ ದಾನದ ವಿವರಗಳಿಂದ ಅರ್ಥ ಮಾಡಿಕೊಳ್ಳಬಹುದು. ಹಾಗೆಯೇ ಯಾವ ಯಾವ ಧರ್ಮದಲ್ಲಿ, ಯಾವ ಯಾವ ಸ್ವರೂಪದಲ್ಲಿ ಗ್ರಂಥದಾನ ಇತ್ತು. ಗ್ರಂಥಗಳನ್ನು ಯಾರು ಹೇಗೇ ಯಾರ್ಯಾರಿಗೆ ಪ್ರತಿ ಮಾಡಿಕೊಡುತ್ತಾರೆ.

ಕ್ರಯಕ್ಕೆ ಪ್ರತಿ ಮಾಡಿಕೊಡಬಹುದು ಅಥವಾ ಅದರಿಂದಾಗುವ ಲಾಭಕ್ಕೆ ಪ್ರತಿ ಮಾಡಿಕೊಡಬಹುದು ಅಥವಾ ತನ್ನ ಬಂಧುವನೊಬ್ಬನಿಗೆ ಸದ್ಭಾವನೆಯಿಂದ ಪ್ರತಿ ಮಾಡಿಕೊಡಬಹುದು. ಇಲ್ಲವೇ ಅವನಲ್ಲಿ ಓದುವ ಆಸಕ್ತಿ ಬೆಳೆಯಲಿಕ್ಕಾದರೂ ಪ್ರತಿ ಮಾಡಿಕೊಡಬಹುದು. ಒಂದು ಕುಟುಂಬದ ಧಾರ್ಮಿಕ ಆಚರಣೆಯ ಭಾಗವಾಗಿ ಪ್ರತಿ ಮಾಡಿಕೊಡಬಹುದು. ಒಟ್ಟಿನಲ್ಲಿ ಲಿಪಿಕಾರನ್ನು ತನ್ನ ಧರ್ಮವನ್ನು ಪ್ರಸಾರ ಮಾಡಲಿಕ್ಕೆ ಈ ಎಲ್ಲಾ ರೀತಿಯ ಜನರಿಗೆ ಹಸ್ತಪ್ರತಿಗಳನ್ನು ಲಿಪಿ ಮಾಡಿಕೊಟ್ಟರುವುದನ್ನು ನಾವು ಕಾಣಬಹುದು. ಚಿತ್ರದುರ್ಗ ಪರಿಸರದಲ್ಲಿ ಹೆಚ್ಚಾಗಿ ಎಲ್ಲಾ ಲಿಪಿಕಾರರು ಕೂಡ ವೀರಶೈವರಾಗಿದ್ದು, ತಮ್ಮ ಧರ್ಮವನ್ನು ಉಳಿಸಿ ಬೆಳೆಸಲು ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ಪ್ರತಿ ಮಾಡುವುದರ ಮೂಲಕ ಎಲ್ಲಾ ಜನಾಂಗದ ಜನರಿಗೂ ತಮ್ಮ ಧರ್ಮದ ತತ್ವ, ನೀತಿಗಳನ್ನು ತಲುಪಿಸುವಂತಹ ಕೆಲಸಗಳನ್ನು ಮಾಡುತ್ತಾ ಬಂದಿದ್ದಾರೆ. ಚಿತ್ರದುರ್ಗವನ್ನು ಆಳಿದ ನಾಯಕ ಮನೆತನದ ರಾಜರೂ ಸಹ ತಾವು ನಾಯಕ ಜಾತಿಗೆ ಸೇರಿದರೂ ಬೇರೆ ಧರ್ಮದವರಿಗೆ ಯಾವುದೇ ರೀತಿಯ ಅನಾನುಕೂಲಗಳನ್ನು ಮಾಡಲಿಲ್ಲ. ಅವರಿಗೆ ಎಲ್ಲ ರೀತಿಯ ಸೌಲಭ್ಯವನ್ನು ಒದಗಿಸಿ ಅವರಿಗೆ ಅಶ್ರಯವನ್ನು ನೀಡಿರುವುದನ್ನು ಈ ಹಸ್ತಪ್ರತಿಗಳಲ್ಲಿವೆ. ಹಾಗೆಯೇ ಕೆಲವು ರಾಜರು ವೀರಶೈವ ಧರ್ಮಕ್ಕೆ ಮತಾಂತರಗೊಂಡ ಮಾಹಿತಿಯನ್ನು ಒದಗಿಸಿಕೊಟ್ಟರುವುದನು ಇಲ್ಲಿ ಮುಖ್ಯವಾಗಿ ಗಮನಿಸಬಹುದಾಗಿದೆ.

ಕೊನೆ ಟಿಪ್ಪಣಿ

೧. ವೀರೇಶ ಬಡಿಗೇರ, ಹಲಗೆ ಬಳಪ, ಪು.ಸಂ, ೩೭, ೨೦೦೫

೨. ಶಿವಣ್ಣ ಎಸ್. (ಸಂ), ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು : ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಡಂಬಳ ಗದಗ, ೧೯೯೪, ಪು.ಸಂ,೯

೩. ಅದೇ, ಪು.ಸಂ, ೩೬

೪. ಅದೇ, ಪು.ಸಂ, ೮೨

೫. ಅದೇ, ಪು.ಸಂ, ೯೩

೬. ಅದೇ, ಪು.ಸಂ, ೧೧೩

೭. ಅದೇ, ಪು.ಸಂ, ೧೨೬

೮. ಅದೇ, ಪು.ಸಂ, ೧೩೦

೯. ಅದೇ, ಪು.ಸಂ, ೧೫೧

೧೦. ಅದೇ, ಪು.ಸಂ, ೧೫೧

೧೧. ಅದೇ. ಪು.ಸಂ, ೧೬೪

೧೨. ಅದೇ, ಪು.ಸಂ, ೧೮೮

೧೩. ಅದೇ, ಪು.ಸಂ, ೧೯೦

೧೪. ಅದೇ, ಪು.ಸಂ, ೧೯೨

೧೫. ಅದೇ, ಪು.ಸಂ, ೧೯೬

೧೬. ಅದೇ, ಪು.ಸಂ, ೧೯೯

೧೭. ಅದೇ, ಪು.ಸಂ, ೨೦೪

೧೮. ಅದೇ, ಪು.ಸಂ, ೨೭೧

೧೯. ಶಿವಣ್ಣ ಎಸ್. (ಸಂ), ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ –೧ ೧೯೯೧. ಚಿತ್ರದುರ್ಗ, ಪು.ಸಂ, ೩೮೧.

೨೦. ಅದೇ, ಪು.ಸಂ, ೩೮೫

೨೧. ಅದೇ, ಪು.ಸಂ, ೩೮೬

೨೨. ಅದೇ, ಪು.ಸಂ, ೩೮೬

೨೩. ಅದೇ, ಪು.ಸಂ, ೩೮೬

೨೪. ಅದೇ ಪು.ಸಂ, ೩೮೭

೨೫. ಅದೇ, ಪು.ಸಂ, ೨೮೭

೨೬. ಅದೇ, ಪು.ಸಂ, ೩೮೯

೨೭. ಅದೇ, ಪು.ಸಂ, ೩೮೯

೨೮. ಅದೇ, ಪು.ಸಂ, ೩೯೦

೨೯. ಅದೇ, ಪು.ಸಂ, ೩೯೦

೩೦. ಅದೇ, ಪು.ಸಂ, ೩೯೧

೩೧. ಅದೇ, ಪು.ಸಂ, ೩೯೧

೩೨. ಅದೇ, ಪು.ಸಂ, ೩೯೪

೩೩. ಅದೇ, ಪು.ಸಂ, ೩೯೪

೩೪. ಅದೇ, ಪು.ಸಂ, ೩೯೫

೩೫. ಅದೇ, ಪು.ಸಂ, ೩೯೬

೩೬. ಅದೇ, ಪು.ಸಂ, ೩೯೭

೩೭. ಅದೇ, ಪು.ಸಂ, ೩೯೭

೩೮. ಅದೇ, ಪು.ಸಂ, ೩೯೭

೩೯. ಅದೇ, ಪು.ಸಂ, ೩೯೭

೪೦. ಕಲಬುರ್ಗಿ ಎಂ. ಎಂ., ಕನ್ನಡ ಹಸ್ತಪ್ರತಿಶಾಸ್ತ್ರ ಸ್ನೇಹ ಪ್ರಕಾಶನ ಬೆಂಗಳೂರು, ೧೯೯೩ ಪು.ಸಂ, ೩೮

೪೧. ಶಿವಣ್ಣ ಎಸ್. (ಸಂ), ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ವೀರಶೈವ ಆ. ಸಂ. ಶ್ರೀ ಜ. ತೋಂಟದಾರ್ಯ ಸಂಸ್ಥಾನ ಮಠ ಡಂಬಳ, ಗದಗ ೧೯೯೪, ಪು.ಸಂ, ೬

೪೨. ಅದೇ, ಪು.ಸಂ, ೧೬

೪೩. ಅದೇ, ಪು.ಸಂ, ೧೮

೪೪. ಅದೇ, ಪು.ಸಂ, ೨೮

೪೫. ಅದೇ, ಪು.ಸಂ, ೪೩

೪೬. ಅದೇ, ಪು.ಸಂ, ೬೭

೪೭. ಅದೇ, ಪು.ಸಂ, ೬೮

೪೮. ಅದೇ, ಪು.ಸಂ, ೭೮-೭೯

೪೯. ಅದೇ, ಪು.ಸಂ, ೮೦

೫೦. ಅದೇ, ಪು.ಸಂ, ೮೩

೫೧. ಅದೇ, ಪು.ಸಂ, ೮೮

೫೨. ಅದೇ, ಪು.ಸಂ, ೯೫

೫೩. ಅದೇ, ಪು.ಸಂ, ೯೯

೫೪. ಅದೇ, ಪು.ಸಂ, ೯೯

೫೫. ಅದೇ, ಪು.ಸಂ, ೧೧೧

೫೬. ಅದೇ, ಪು.ಸಂ, ೧೨೫

೫೭. ಅದೇ, ಪು.ಸಂ, ೧೩೦

೫೮. ಅದೇ, ಪು.ಸಂ, ೧೩೭

೫೯. ಅದೇ, ಪು.ಸಂ, ೧೪೨

೬೦. ಅದೇ, ಪು.ಸಂ, ೧೫೨

೬೧. ಅದೇ, ಪು.ಸಂ, ೧೫೩

೬೨. ಅದೇ, ಪು.ಸಂ, ೧೬೧

೬೩. ಅದೇ, ಪು.ಸಂ, ೧೭೪

೬೪. ಅದೇ, ಪು.ಸಂ, ೧೯೭

೬೫. ಅದೇ, ಪು.ಸಂ, ೨೧೩

೬೬. ಅದೇ, ಪು.ಸಂ, ೨೨೯

೬೭. ಅದೇ, ಪು.ಸಂ, ೨೩೫

೬೮. ಅದೇ, ಪು.ಸಂ, ೨೩೬

೬೯. ಅದೇ, ಪು.ಸಂ, ೨೪೫

೭೦. ಅದೇ, ಪು.ಸಂ, ೨೪೬

೭೧. ಅದೇ, ಪು.ಸಂ, ೨೫೬

೭೨. ಅದೇ, ಪು.ಸಂ, ೨೩೦

೭೩. ಶಿವಣ್ಣ ಎಸ್. (ಸಂ), ಬೃಹನ್ಮಠದ ಹಸ್ತಪ್ರತಿ ಸೂಚಿ ಸಂ.೧.೧೯೯೧ ಪು.ಸಂ, ೩೭೮

೭೪. ಅದೇ, ಪು.ಸಂ, ೩೭೮

೭೫. ಅದೇ, ಪು.ಸಂ, ೩೭೯

೭೬. ಅದೇ, ಪು.ಸಂ, ೩೮೦

೭೭. ಅದೇ, ಪು.ಸಂ, ೩೮೪

೭೮. ಅದೇ, ಪು.ಸಂ, ೩೮೫

೭೯. ಅದೇ, ಪು.ಸಂ, ೩೮೫

೮೦. ಅದೇ, ಪು.ಸಂ, ೩೮೫

೮೧. ಅದೇ, ಪು.ಸಂ, ೩೮೫

೮೨. ಅದೇ, ಪು.ಸಂ, ೩೮೬

೮೩. ಅದೇ, ಪು.ಸಂ, ೩೮೬

೮೪. ಅದೇ, ಪು.ಸಂ, ೩೮೭

೮೫. ಅದೇ, ಪು.ಸಂ, ೩೮೭

೮೬. ಅದೇ, ಪು.ಸಂ, ೩೮೮

೮೭. ಅದೇ, ಪು.ಸಂ, ೩೮೯

೮೮. ಅದೇ, ಪು.ಸಂ, ೩೮೯

೮೯. ಅದೇ, ಪು.ಸಂ, ೩೯೦

೯೦. ಅದೇ, ಪು.ಸಂ, ೩೯೦

೯೧. ಅದೇ, ಪು.ಸಂ, ೩೯೦

೯೨. ಅದೇ, ಪು.ಸಂ, ೩೯೧

೯೩. ಅದೇ, ಪು.ಸಂ, ೩೯೨

೯೪. ಅದೇ, ಪು.ಸಂ, ೩೯೩

೯೫. ಅದೇ, ಪು.ಸಂ, ೩೯೩

೯೬. ಅದೇ, ಪು.ಸಂ, ೩೯೩

೯೭. ಅದೇ, ಪು.ಸಂ, ೩೯೩

೯೮. ಅದೇ, ಪು.ಸಂ, ೩೯೩

೯೯. ಅದೇ, ಪು.ಸಂ, ೩೯೪

೧೦೦. ಅದೇ, ಪು.ಸಂ, ೩೯೪

೧೦೧. ಅದೇ, ಪು.ಸಂ, ೩೯೪

೧೦೨. ಅದೇ, ಪು.ಸಂ, ೩೯೫

೧೦೩. ಅದೇ, ಪು.ಸಂ, ೩೯೫

೧೦೪. ಅದೇ, ಪು.ಸಂ, ೩೯೬

೧೦೫. ಅದೇ, ಪು.ಸಂ, ೩೯೭

೧೦೬. ಅದೇ, ಪು.ಸಂ, ೩೯೭

೧೦೭. ಅದೇ, ಪು.ಸಂ, ೩೯೭

೧೦೮. ಭಾನುಮತಿ ವೈ.ಸಿ., ಗ್ರಂಥ ಸಂಪಾದನೆ ಕೆಲವು ಅಧ್ಯಯನ, ಕೇಶವ ಪ್ರಕಾಶನ ಮೈಸೂರು, ೧೯೯೭, ಪು.ಸಂ, ೪

೧೦೯. ಶಿವಣ್ಣ ಎಸ್. (ಸಂ), ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಡಂಬಳ-ಗದಗ ೧೯೯೪, ಪು.ಸಂ, ೧೦೮

೧೧೦. ಅದೇ, ಪು.ಸಂ, ೧೪೬

೧೧೧. ಅದೇ, ಪು.ಸಂ,೧೫೦

೧೧೨. ಅದೇ, ಪು.ಸಂ, ೧೯೩

೧೧೩. ಅದೇ, ಪು.ಸಂ, ೪೩

೧೧೪. ಅದೇ, ಪು.ಸಂ, ೬೦

೧೧೫. ಶಿವಣ್ಣ ಎಸ್. (ಸಂ), ಚಿತ್ರದುರ್ಗದ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ೧. ೧೯೯೧, ಪು.ಸಂ, ೩೮೮

೧೧೬. ಅದೇ,ಪು.ಸಂ, ೩೯೦

೧೧೭. ಅದೇ, ಪು.ಸಂ, ೩೯೦

೧೧೮. ಅದೇ, ಪು.ಸಂ, ೩೯೧

೧೧೯. ಅದೇ, ಪು.ಸಂ, ೩೯೧

೧೨೦. ಅದೇ, ಪು.ಸಂ, ೩೯೭

ಅಧ್ಯಾಯ : ೭

ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳ ಪರಿಚಲನೆ

೭.೧. ಸಂಗ್ರಹಕಾರರು

೭.೨. ಕವಿಗಳು

೭.೩. ಲಿಪಿಕಾರರು

ಅಧ್ಯಾಯ : ೭
ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳ ಪರಿಚಲನೆ

ಚಲನಶೀಲತೆ ಎಂಬುದು ನಿಸರ್ಗದತ್ತ ನಿಯಮ. ಹಸ್ತಪ್ರತಿಗಳೂ. ಇದಕ್ಕೆ ಹೊರತಲ್ಲ ಹಸ್ತಪ್ರತಿಗಳ ಚಲನಶೀಲತೆ ಗುಣಾತ್ಮಕವಾಗಿದೆ. ಮನುಷ್ಯನ ಮಾತನಾಡುವ ಅಭಿವ್ಯಕ್ತಿ ಸ್ವರೂಪ ಕಾಲದಿಂದ ಕಾಲಕ್ಕೆ ಸನ್ನಿವೇಶದಿಂದ ಸನ್ನಿವೇಶಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಬದಲಾವಣೆ ಹೊಂದುತ್ತಾ ಸಾಗುತ್ತದೆ. ಸಂಸ್ಕೃತಿಯ ಪ್ರಸರಣ ಮತ್ತು ಸಂವರ್ಧನೆಯ ದೃಷ್ಟಿಯಿಂದ ಚಲನಶೀಲತೆ ಎನ್ನುವುದು ಹಸ್ತಪ್ರತಿಗಳ ಬೆಳವಣಿಗೆಯಲ್ಲಿ ಮಹತ್ವದ ಭಾಗವಾಗಿದೆ. ಹಾಗೆಯೇ ಬರವಣಿಗೆಯಲ್ಲಿಯೂ ಬದಲಾವಣೆ ಆಗುವುದು ಸಹಜವಾಗಿದೆ. ಹಸ್ತಪ್ರತಿ ಅಧ್ಯಯನದಲ್ಲಿ ಪಠ್ಯದ ಪರಿಚಲನೆಯನ್ನು ಹಾಗೂ ಅದರ ಹಿಂದಿರುವ ಆಶಯಗಳನ್ನು ಅಭ್ಯಸಿಸುವುದು ಇಂದು ಮುಖ್ಯವಾಗಿದೆ.

"ಸಂಸ್ಕೃತಿಯ ಪ್ರಸರಣ ಮತ್ತು ಸಂವರ್ಧನೆಯ ದೃಷ್ಟಿಯಿಂದಲೂ ಚಲನಶೀಲತೆ ಎಂಬುದು ಹಸ್ತಪ್ರತಿ ಅಧ್ಯಯನ ಶಿಸ್ತಿನ ಬೆಳವಣಿಗೆಯ ಮಹತ್ವದ ಭಾಗವಾಗಿದೆ. ನಾಗವರ್ಮನ 'ಭಾಷಾಭೂಷಣ' ಎಂಬ ಕನ್ನಡ ವ್ಯಾಕರಣ ಕೃತಿ ಸಂಸ್ಕೃತ ಭಾಷೆಯಲ್ಲಿ ರಚಿತವಾಯಿತು. ಆ ಗ್ರಂಥದ ಒಂದು ಪ್ರತಿ ತಮಿಳು ಲಿಪಿಯಲ್ಲಿಯೂ ಇದೆ. ಅದರಂತೆ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಹಸ್ತಪ್ರತಿಯೂ ತಮಿಳು ಲಿಪಿಯಲ್ಲಿಯೂ, ಕುಮಾರವ್ಯಾಸ ಭಾರತದ ಹಸ್ತಪ್ರತಿ ತೆಲುಗು ಲಿಪಿಯಲ್ಲಿಯೂ ಇರುತ್ತದೆ".[೧]

ಪ್ರಾಚೀನ ಕಾಲದಲ್ಲಿ ಅರಸರು ತಮ್ಮ ಪ್ರತಿಷ್ಠೆ ಮತ್ತು ಘನತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ 'ಗ್ರಂಥಪ್ರಸಾರ' ಕಾರ್ಯವನ್ನು ಮಾಡುತ್ತಿದ್ದುದನ್ನು ನೋಡಬಹುದು. ದಾನಚಿಂತಾಮಣಿ ಅತ್ತಿಮಬ್ಬೆಯು ರನ್ನನಿಂದ ಅಜಿತತೀರ್ಥಂಕರ ಪುರಾಣ ತಿಲಕವನ್ನು ಬರೆಸಿದಳು. ಹಾಗೆಯೇ ಪೊನ್ನನ ಶಾಂತಿಪುರಾಣದ ಒಂದು ಸಾವಿರ ಪ್ರತಿಯನ್ನು ಮಾಡಿಸಿ ಅಂದಿನ ಓದುಗ ಸಮಾಜಕ್ಕೆ ದಾನ ಮಾಡಿದಳು. ಹೀಗೆ ಪ್ರತಿಷ್ಠೆ ಅಗತ್ಯತೆ ಮತ್ತು ಸಾಮಾಜಿಕ ಕಾಳಜಿಯ ದೃಷ್ಟಿಯಿಂದ

ಹಸ್ತಪ್ರತಿಗಳ ಪರಿಚಲನೆ ನಡೆಯುತ್ತಿತ್ತು. ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳ ಪರಿಚಲನೆಯಲ್ಲಿ ಸಂಗ್ರಹಕಾರರು ಮತ್ತು ಲಿಪಿಕಾರರು ಪ್ರಮುಖ ಪಾತ್ರ ವಹಿಸುತ್ತ ಬಂದಿರುವುದನ್ನು ಈ ಮುಂದಿನಂತೆ ನಾವು ನೋಡಬಹುದು.

೭.೧ ಸಂಗ್ರಹಕಾರರು :

ಸಂಗ್ರಹಣಕಾರರಿಗಿಂತ ಮೊದಲು ಇದುವರೆಗೆ ಹೇಗೆ ಸಂಗ್ರಹಣ ಕಾರ್ಯ ಪ್ರಾರಂಭವಾಯಿತು ಎಂಬುದನ್ನು ತಿಳಿದುಕೊಳ್ಳುವುದಾದರೆ ಭಾರತದಲ್ಲಿ ಯುರೋಪಿಯನ್ನರು ಬಂದು ನೆಲೆಸಿದ ಮೇಲೆ ಈ ದೇಶದ ಶಾಸನ, ಸಾಹಿತ್ಯ, ಕಲೆ ಮುಂತಾದ ಸಾಂಸ್ಕೃತಿಕ ಪರಂಪರೆಗಳಲ್ಲಿ ಆಸಕ್ತಿಯನ್ನು ತಾಳಿ ಶಾಸನಾದಿ ಪ್ರಾಚ್ಯವಸ್ತು ಸಂಗ್ರಹಣದೊಂದಿಗೆ ಹಸ್ತಪ್ರತಿ ಸಂಗ್ರಹಣ ಕಾರ್ಯವನ್ನು ಕೈಗೊಂಡರು. ಅವಧಿಯವರೆಗೂ ಅಂದರೆ ಸುಮಾರು ೧೯ನೆಯ ಶತಮಾನದವರೆಗೂ ಭಾರತದಲ್ಲಿರುವ ಮಠ-ಮಾನ್ಯಗಳು, ದೇವಸ್ಥಾಗಳು ಹಾಗೂ ಪಂಡಿತರ ಆಶ್ರಯದಲ್ಲಿದ ಹಸ್ತಪ್ರತಿಗಳು ಸಂಗ್ರಹಗೊಳ್ಳ ತೊಡಗಿದವು. ದೇಶದಾದ್ಯಂತ ಚದುರಿಕೊಂಡಿದ್ದ ಇಂಥ ಸಂಗ್ರಹಗಳು ಅಸಂಖ್ಯಾತ ಹಸ್ತಪ್ರತಿಗಳಿಗೆ ಆಗರವಾಗಿದ್ದವು ಎಂಬುದಾಗಿ ತಿಳಿದು ಬರುತ್ತದೆ. ಹೀಗೆ ಹಿಂದಿನವರು ವಿಶ್ವಾಸ, ಶ್ರದ್ಧೆಗಳಿಂದ ಸಂಗ್ರಹಿಸಿಕೊಂಡು ಬಂದಿದ್ದ ಗ್ರಂಥ ಭಂಡಾರಗಳ ವಿಷಯದಲ್ಲಿ ನಾವು ಆಗಾಗ ತಳೆಯುತ್ತಲಿದ್ದ ಅನಾಸಕ್ತಿಗೆ ವಿರುದ್ಧವಾಗಿ ಯುರೋಪಿಯನ್ನರು ಈ ಬಗ್ಗೆ ತಾಳುತ್ತಿದ್ದ ಆಸಕ್ತಿಯು ಹಸ್ತಪ್ರತಿ ಸಂಗ್ರಹಣ ಕಾರ್ಯಕ್ಕೆ ಹೊಸ ತಿರುವನ್ನೇ ಕೊಟ್ಟಿತು ಎಂದು ಬಿ.ಕೆ. ಹೀರೆಮಠ ಅವರು ಹೇಳುತ್ತಾರೆ. ಸರ್. ವಿಲಿಯಂ ಜೋನ್ಸ್‌ರವರು ೧೮೦೭ರ ಹೊತ್ತಿಗೆ ಹಸ್ತಪ್ರತಿಗಳ ಸೂಚಿಯನ್ನು ಪ್ರಕಟಿಸಿದ್ದಾರೆ. ಇದಕ್ಕೂ ಪೂರ್ವದಲ್ಲಿ ಅಂದರೆ ೧೮ನೆಯ ಶತಮಾನದ ಉತ್ತರಾರ್ಧದಲ್ಲಿಯೇ ಹಸ್ತಪ್ರತಿ ಸಂಗ್ರಹಣ ಕಾರ್ಯ ನಡೆದಿದೆ.

ಕರ್ನಾಟಕದಲ್ಲಿಯೂ ಹೆಚ್ಚು ಕಡಿಮೆ ಇದೇ ಅವಧಿಯಲ್ಲಿಯೇ ಹಸ್ತಪ್ರತಿಗಳ ಸಂಗ್ರಹಣ ಕಾರ್ಯವು ನಡೆದಿರುವುದಾಗಿ ಕಂಡುಬರುತ್ತದೆ. ಇಲ್ಲಿಯೂ ದೇವಸ್ಥಾನ, ಧಾರ್ಮಿಕ ಸಂಸ್ಥೆ, ಹಾಗೂ ವ್ಯಕ್ತಿ ಸಂಗ್ರಹಗಳಿದ್ದವು. ಅವನ್ನು ಪರಂಪರಾಗತವಾಗಿ ಕಾಪಾಡಿಕೊಂಡು ಕೂಡ ಬರುತ್ತಿದ್ದರು. ೧೭೮೨ರಲ್ಲಿ ಮದ್ರಾಸ್ ಪ್ರಾಂತಕ್ಕೆ ಎಂಜಿನೀಯರ್ ಆಗಿ ಕರ್ನಲ್ ಮೆಕೆಂಜಿ ಬಂದರು. ಪ್ರಾಚ್ಯವಸ್ತು ಸಂಗ್ರಹಣ ಕಾರ್ಯದಲ್ಲಿ ತೊಡಗಿದ್ದ ಈ ಅಧಿಕಾರಿಯು ೧೭೭೬ರ ಸುಮಾರಿಗೆ ಸಂಗ್ರಹಕ್ಕೆ ತೊಡಗಿರುವುದಾಗಿ ತಿಳಿದುಬರುತ್ತದೆ. ಈ ಭಾಗದ ಧಾರ್ಮಿಕ ಕ್ಷೇತ್ರಗಳಾದ ದೇವಾಲಯ, ಮಠ, ವಿದ್ಯಾಕೇಂದ್ರ, ಪಂಡಿತರುಗಳ ಮನೆ ಮುಂತಾದ ಕಡೆಗಳಲ್ಲಿದ್ದ ಬಹುಶಃ ಅಲ್ಲಲ್ಲಿ ಅಲಕ್ಷ್ಯಕ್ಕೆ ಒಳಗಾಗಿದ್ದ ಹಸ್ತಪ್ರತಿಗಳನ್ನು ಸಂಗ್ರಹಿಸಿದ ಕರ್ನಲ್ ಮೆಕೆಂಜಿಯು ಕನ್ನಡ ಹಸ್ತಪ್ರತಿಗಳ ಸಂಗ್ರಹಣ ಕಾರ್ಯಕ್ಕೆ ನಾಂದಿಯನ್ನು ಹಾಡಿದರೆ, ಕಾವಲಿಬೋರಯ್ಯ ಆತನ ತಮ್ಮ ವೆಂಕಟಲಕ್ಷ್ಮಯ್ಯ ಜೈನ ವಿದ್ವಾಂಸರಾದ ಧರ್ಮಯ್ಯ, ಪುರುಷೋತ್ತಮಯ್ಯ ಬ್ರಾಹ್ಮಣ ಪಂಡಿತ ತಮಿಳು ಕನ್ನಡ ಬಲ್ಲ ನಾರಾಯಣರಾವ್ ಮತ್ತು ರಾಮದಾಸ್ ಇವರುಗಳು ಈ ನಾಂದಿಗೆ

ಮೇಳದವರಾಗಿ ನಿಂತಿದ್ದರು. ಈತನು ಸರ್ಕಾರವು ವಹಿಸಿಕೊಟ್ಟ ಮೋಜಣಿ ಕಾರ್ಯದ ಜೊತೆಗೆ ಕೃಷ್ಣೆಯಿಂದ ಕನ್ಯಾಕುಮಾರಿಯವರೆಗೆ ವ್ಯಾಪಕವಾದ ಕ್ಷೇತ್ರ ಕಾರ್ಯವನ್ನು ಕೈಗೊಂಡನು. ಸುಮಾರು ೩೮ ವರ್ಷಗಳ ದಿರ್ಘ ಅವಧಿಯವರೆಗೆ ಪರಿಶ್ರಮಪಟ್ಟು ಈ ಕಾರ್ಯದ ಫಲವಾಗಿ ಒಟ್ಟು ೧೩ ಭಾಷೆಗಳ ೧೫೬೮ ಹಸ್ತಪ್ರತಿಗಳ ದೊಡ್ಡ ಸಂಗ್ರಹವೇ ಈತನಿಂದ ಸಾಧ್ಯವಾಯಿತು. ಕ್ರಿ.ಶ. ೧೮೫೯ರಲ್ಲಿ ಸ್ಥಾಪಿತವಾದ "ಸರ್ಕಾರಿ ಹಸ್ತಪ್ರತಿ ಭಂಡಾರಕ್ಕೆ ಸೇರ್ಪಡೆಯಾದ ಈ ಮೆಕೆಂಜಿ ಸಂಗ್ರಹವೇ ಪ್ರಪ್ರಥಮ ಸಾರ್ವಜನಿಕ ಹಸ್ತಪ್ರತಿ ಭಂಡಾರ ಎಂಬುದಾಗಿ ಎಚ್. ದೇವೀರಪ್ಪನವರ ಅಭಿಪ್ರಾಯವಾಗಿದೆ.

ಮೈಸೂರಿನಲ್ಲಿ ೧೮೯೧ರಲ್ಲಿ ಸ್ಥಾಪಿತವಾದ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿಯೇ ಕರ್ನಾಟಕದಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸುವ ಸರ್ಕಾರದ ಮೊದಲ ಸಂಸ್ಥೆಯಾಯಿತು. ಇದನ್ನು ಬಿಟ್ಟರೆ ಸರ್ಕಾರಿ ವತಿಯಿಂದ ಸಂಗ್ರಹಿಸಿದ ಮತ್ತೊಂದು ಸಂಸ್ಥೆಯೆಂದರೆ ೧೯೩೯ರಲ್ಲಿ ಸ್ಥಾಪಿತವಾದ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಕರ್ನಾಟಕದಲ್ಲಿ ಈಗ ಹಸ್ತಪ್ರತಿಗಳ ಸಂಗ್ರಹ ಮಾಡಿರುವ ಸಂಸ್ಥೆಗಳೆಂದರೆ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯ ಕನ್ನಡ ಅಧ್ಯಯನ ಸಂಸ್ಥೆ, ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ, ಅರಮನೆಗೆ ಸೇರಿದ ಸರಸ್ವತಿ ಭಂಡಾರ, ಬೆಂಗಳೂರು ಕನ್ನಡ ಅಧ್ಯಯನ ಕೇಂದ್ರ, ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡ ಕನ್ನಡ ಅಧ್ಯಯನ ಪೀಠ ಮುಖ್ಯವಾಗಿವೆ. ಅಲ್ಲದೆ ಮಂಡ್ಯ, ಶ್ರವಣಬೆಳಗೊಳ, ಹೊಂಬುಜ, ವರಂಗ, ಮೂಡಬಿದರೆ, ಕಾರ್ಕಳಗಳಲ್ಲಿನ ಜೈನ ಮಠಗಳು ಮೂಡಬಿದರೆಯ ವೀರವಾಣಿ ಸಿದ್ಧಾಂತ ಭವನ, ಶೃಂಗೇರಿ , ಉಡುಪಿ, ಮೇಲುಕೋಟೆ, ಸಿರಿಗೆರೆ, ಚಿತ್ರದುರ್ಗ, ಬಳ್ಳಾರಿ, ಹುಬ್ಬಳ್ಳಿಯ ಮಠಗಳಲ್ಲಿ ಹಸ್ತಪ್ರತಿಗಳ ಸಂಗ್ರಹವಿದೆ. ಹಾಗೆಯೇ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಮತ್ತು ಧರ್ಮಸ್ಥಳದ ಮಂಜೂಷಾ ಹಸ್ತಪ್ರತಿ ಭಂಡಾರಗಳು ರೂಪುಗೊಂಡಿವೆ. ಹೀಗೆಯೇ ಮಠ–ಮಂದಿರಗಳಲ್ಲಿ ದೊರೆಯುವ ಹಸ್ತಪ್ರತಿಗಳಲ್ಲದೆ ಹಲವಾರು ವಿದ್ವಾಂಸರ ಮನೆಗಳಲ್ಲಿಯೂ ಹಲವು ಅಳಿದುಳಿದ ಹಸ್ತಪ್ರತಿಗಳು ದೊರೆಯುತ್ತವೆ. ಇದನ್ನು ಕೆಲವು ವಿದ್ವಾಂಸರು ತಮ್ಮ ಕೈಗೆ ಸಿಕ್ಕಿದವುಗಳನ್ನು ತಮ್ಮ ಮನೆಗಳಲ್ಲಿಯೇ ಸಂಗ್ರಹಿಸಿಟ್ಟು, ಎಲ್ಲಿಯೋ ಹಾಳಾಗುತ್ತಿದ್ದವನ್ನು ತಾವೇ ನಾಶ ಮಾಡುತ್ತಿರುವುದು ಉಂಟು.

"ಕರ್ನಾಟಕದ ಹೊರಗೆ ಮದರಾಸು ಗೌವರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಆಡಿಯಾರ್ ಲೈಬ್ರರಿ, ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಜೈನಮಠ, ಬಾಹುಬಲಿ ಆಶ್ರಯ ಪುನಾದ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಹೈದರಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಗ್ರಂಥ ಭಂಡಾರ, ಬಿಹಾರದ ಆರಾದಲ್ಲಿನ ಜೈನ ಸಿದ್ಧಾಂತ ಭವನ, ತಂಜಾವೂತರ್ ಸರಸ್ವತಿ ಮಹಲ್ ಲೈಬ್ರರಿ"[೨] ಮತ್ತು ಇತರೆಡೆ ಕನ್ನಡ ಹಸ್ತಪ್ರತಿಗಳು ಸಂಗ್ರಹವಾಗಿರುವುದು ಕಂಡುಬರುತ್ತವೆ. ಹೀಗೆ ಹೆಚ್ಚಿನ ಹಸ್ತಪ್ರತಿಗಳು ಮಠ, ಮಂದಿರ, ಬಸದಿ, ಭವನ, ಅರಮನೆ–ಗುರುಮನೆ ಮುಂತಾದ ಕಡೆ ಸಂಗ್ರಹವಾದಂತೆ ಆಸಕ್ತರ ಮನೆಗಳಲ್ಲೂ ಸೇರಿದವು. ನಮ್ಮ ಆಧುನಿಕ

ಸಂಸ್ಕೃತಿಯಿಂದ ಕಾವ್ಯವಾಚನ, ಗಮಕವಾಚನಗಳು ನಿಂತುಹೋಗಿ ಮುದ್ರಣ ಕಲೆ ಬಳಕೆಯಾದ ನಂತರ ಹಳೆಯ ತಲೆಮಾರಿನ ಜನ ನಶಿಸುತ್ತಿದ್ದಂತೆ ಹಳೆಯ ಹಸ್ತಪ್ರತಿಗಳನ್ನು ಓದುವವರೂ ನಶಿಸಿ ಅಲ್ಲಲ್ಲೇ ಉಳಿದವು. ಮಠ–ಮಂದಿರಗಳಂಥ ಕಡೆ ಸೇರಿದವುಗಳು ಬೆಳಕು ಕಂಡವು. ವ್ಯಕ್ತಿಗಳ ಕಡೆ ಇದ್ದವು ಅಲ್ಲೇ ಕತ್ತಲಲ್ಲೇ ಉಳಿದವು. ಎಷ್ಟೋ ಜನ ಅಜ್ಞಾನದಿಂದ ನೀರಿಗೆ ಹಾಕಿದ ಹಾಲು, ಮೊಸರು, ತುಪ್ಪ ಹಾಕಿ ಪೂಜೆ ಮಾಡಿದ ಒಲೆಗೆ ಹಾಕಿ ಉರಿಸಿದ, ಕಸಕ್ಕೆ ಎಸೆದ ಘಟನೆಗಳು ನಡೆದಿವೆ. ಇನ್ನೂ ಸಾವಿರಾರು ಹಸ್ತಪ್ರತಿಗಳು ಯಾರದೋ ಮನೆಗಳ ಅಟ್ಟದ ಮೇಲೆ ಬೆಳಕು ಕಾಣಲು ಕಾತರಿಸುತ್ತಿವೆ. ಇವುಗಳನ್ನು ಸಂಗ್ರಹಿಸುವ ಕಾರ್ಯವು ಇಂದಿನ ದಿನದಲ್ಲಿ ಬಹಳ ಮುಖ್ಯವಾಗಿದೆ. ಹೀಗೆ ಮೆಕೆಂಜಿ ಮೊದಲ್ಗೊಂಡು ಇಂದಿನವರೆಗೂ ನೂರಾರು ಜನ ವಿದ್ವಾಂಸರು ಸಂಸ್ಥೆಗಳ ಪರವಾಗಿಯೇ ವೈಯಕ್ತಿಕವಾಗಿಯೇ ಸಾವಿರ ಸಾವಿರ ಸಂಖ್ಯೆಯಲ್ಲಿ ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ; ಸಂಗ್ರಹಿಸುತ್ತಲಿದ್ದಾರೆ. ಚಿತ್ರದುರ್ಗ ಪರಿಸರದಲ್ಲಿಯೂ ಸಹ ಅನೇಕ ವ್ಯಕ್ತಿಗಳು ಹಸ್ತಪ್ರತಿಗಳನ್ನು ಸಂಗ್ರಹ ಮಾಡಿದ್ದಾರೆ. ಈ ಪರಿಸರದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಯಲಾಟದ ಹಸ್ತಪ್ರತಿಗಳೇ ದೊರೆಯುವುದರಿಂದ ಇಲ್ಲಿನ ವ್ಯಕ್ತಿಗಳು ಈ ಬಯಲಾಟದ ಹಸ್ತಪ್ರತಿಗಳನ್ನೇ ಸಂಗ್ರಹ ಮಾಡಿದ್ದಾರೆ. ನಾನು ಕ್ಷೇತ್ರಕಾರ್ಯ ಕೈಗೊಂಡಾಗ ಬಯಲಾಟದ ಸಂಗ್ರಹಕಾರರೇ ಹೆಚ್ಚಿನ ಸಂಖ್ಯೆಯಲ್ಲಿ ದೊರೆತ್ತಿದ್ದರಿಂದ ಅವರನ್ನೇ ಈ ಅಧ್ಯಾಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗುರ್ತಿಸಲಾಗಿದೆ. ಅಂತಹ ಹಸ್ತಪ್ರತಿಗಳ ಸಂಗ್ರಹಕಾರರನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

೧. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

* ಓಬಣ್ಣನಹಳ್ಳಿ ಯರಮಂಚಿನಾಯಕರ ಕಾಗದ ಪತ್ರಗಳು
* ಬೇಡರೆಡ್ಡಿಹಳ್ಳಿಯ ದೊಡ್ಡತಿರುಮಲ ಮತ್ತು ಕೊತ್ತಲಬೊಮ್ಮದೇವರಿಗೆ ಸಂಬಂಧಿಸಿದ ಪಂಚಾಯ್ತಿಯಲ್ಲಿ ತೀರ್ಮಾನ ಮಾಡಿದ ಪ್ರಮಾಣಪತ್ರ
* ಗೌರಿಪುರದ ಓಬಳದೇವರಪಟ್ಟದ ಪೂಜಾರಿ ಬಸಪ್ಪನವರ ಬರಹ; ಮ್ಯಾಸನಾಯಕರ ಮತ ವಿಚಾರಗಳು
* ಚನ್ನಬಸಯ್ಯನಹಟ್ಟಿ ಗಾದರಿಪಾಲನಾಯಕ ದೇವರಪಟ್ಟದ ಪೂಜಾರಿ ಮಾಡುವ ಸಂದರ್ಭದಲ್ಲಿ ಬರೆದ ಗ್ರಾಮಸ್ಥರ ಹಿರಿಯರ ಮುಚ್ಚಳಿಕೆ ಪತ್ರ.
* ಪಟೇಲ್ ತಿಪ್ಪೇಸ್ವಾಮಿ ವೋಬನಹಳ್ಳಿ ಅವರು ಬರೆದ ಪಂಚಾಯ್ತಿ ತೀರ್ಮಾನದ ಪತ್ರ.
* ನಾಯಕನಹಟ್ಟಿ ರಾಜಮಲ್ಲಪ್ಪ ನಾಯಕನ ವಂಶದ ಚರಿತ್ರೆಯನ್ನು ದೊರೆ ಬಸಪ್ಪ ನಾಯಕರ ವಿವರಪೂರ್ಣವಾದ ಮನವಿ ಪತ್ರ.

* ೧೯೩೨ ಮಾರ್ಚ್ ೮ರಂದು ಚಿಂತಗುಂಟ್ಲು ಬೋರದೇವರಹಟ್ಟಿ ನನ್ನಿವಾಳ ಕಟ್ಟೆಮನೆಗಳ ದೊರೆ ಶ್ರೀಕಂಪಳದೇವರಹಟ್ಟಿ ಅರಮನೆ ವಿಚಾರಗಳಿವೆ.
* ಮಹಾನಾಯಕಾಚಾರ್ಯ ಶಿರೋಮಣಿಹಟ್ಟಿ ಸಂಸ್ಥಾನ ಬಸಪ್ಪ ನಾಯಕರು ೧೩-೧-೯೩೦ ಸೋಮವಾರ ಪೇಲೋರ ಹಟ್ಟಿಯಲ್ಲಿ ಮ್ಯಾಸಮಂಡಳಿ ಹಿರಿಯರ ಸಭೆ ಕರೆದು ರಾಮಜೋಗಿಹಟ್ಟಿ ತಳವಾರ ಹನುಮಯ್ಯನ ಮಗ ಮಲ್ಲಯ್ಯನ ಫಿರ್ಯಾದು ಸಂಬಂಧಿಸಿದ ವಿವರಣೆ ಪತ್ರ.
* ೨೪.೧೦.೧೯೩೪ ಕಸ್ತೂರಿ ಮಲ್ಲಪ್ಪ ನಾಯಕರ ಜಮೀನು ವಿಚಾರದ ಬಗ್ಗೆ ಬಸಪ್ಪ ನಾಯಕರಿಗೆ ಕಾಟಮ್ಮನವರು ಬರೆದ ಮನವಿ ಪತ್ರ.
* ೨೮.೩.೧೯೩೧ ಶ್ರೀ ಬೋಸೆದೇವರ ಪೂಜಾರ ಬಸಯ್ಯ ನಾಯಕನಹಟ್ಟಿ ಇವರ ಗ್ರಾಮಗಳ ಹಿರಿಯರು ಬರೆದ ಪತ್ರ.
* ನಾಯಕನಹಟ್ಟಿ ಕಟ್ಟೆಮನೆ ನನ್ನಿವಾಳದ ಕಟ್ಟೆಮನೆ ಗಾದ್ರದೇವರ ಪೂಜಾರಿ ರಾಜಯ್ಯ ಮೊದಲಾದವರ ವಿವರಗಳಿವೆ.
* ೨೬.೩.೧೯೧೬ಕ್ಕೆ ಸೇರಿದ ಸಂಸ್ಕೃತ ಲಿಪಿ ಮುದ್ರೆ ಇರುವ ಪತ್ರ ಮೈಸೂರು ರಾಜರಿಗೆ ಪತ್ರವನ್ನು ಹಟ್ಟಿ ದೊರೆಗಳು ಬರೆದಿರುವುದು.
* ನೋಟೀಸ್ ಪತ್ರ ಹೊಳಲ್ಕೆರೆ ತಾಲೂಕು ಕಾಮಸಮುದ್ರದ ಮಜುರೆ ಅವಳೇಹಟ್ಟಿ ಮ್ಯಾಸನಾಯ್ಕರ ಓಬಯ್ಯನಮಗ ರಂಗಯ್ಯನು ೩.೧೨.೧೯೪೨ರಂದು ನಾನು ಮಾರನಾಯಕರ ಮತಕ್ಕೆ ಸೇರಿದವನೆಂದು ಹೇಳಿದ್ದೀರಿ ಅಲ್ಲವೆಂಬುದಕ್ಕೆ ಈ ನೋಟೀಸ್ ಕೊಡುತ್ತೇನೆ.
* ಮಾರ್ಲಹಳ್ಳಿ ಯರಗೊಡ್ಲಯ್ಯನ ಬಳಿಯಿರುವ ಯರಮಂಚಿನಾಯಕ ಯರಗೊಡ್ಲಯ್ಯ ಮತ್ತು ದಡ್ಡಿ ಸೂರನಾಯಕನ ವಿವರಗಳಿರುವ ಪ್ರಾಚೀನ ಕಾಗದ ಪತ್ರಗಳು.
* ಚಳ್ಳಕೆರೆ ತಾಲೂಕು ಹಿರೇಹಳ್ಳಿ ಯಜಮಾನರಾದ ಸೂರಯ್ಯನಿಗೆ ಸಂಬಂಧಿಸಿದ ಪತ್ರಗಳು.
* ದಳವಾಯಿ ಯಜಮಾನರು ಬರೆಸಿಕೊಟ್ಟ ವಿಜ್ಞಾಪನಾ ಪತ್ರ ಚಳ್ಳಕೆರೆಯ ಚಿತ್ತಯ್ಯನಹಟ್ಟಿ ರೆಡ್ಡಿಹಳ್ಳಿ ಬಂಜಿಗೆರೆ ದೇವರುಗಳಿಗೆ ಸಂಬಂಧಿಸಿದ ಮನವಿ ಪತ್ರಗಳು.
* ಹಿರೇಹಳ್ಳಿ ಕಟ್ಟೆಮನೆಗೆ ಆನೆಗುಂದಿ ಸಂಸ್ಥಾನದಿಂದ ಪತ್ರ.
* ೨೩.೮.೧೯೨೮ರ ಹಿರೇಹಳ್ಳಿ ಕಟ್ಟೆಮನೆ ಯಜಮಾನರ ಪತ್ರ.
* ೨೧.೮.೧೯೨೮ರಂದು ಯಳವರ್ತಿ ನಾಯಕರ ಹಿರೇಹಳ್ಳಿ ಸೂರ್ಯ ಸಿಂಹಾಸನಕ್ಕೆ ಬರೆದ ಪತ್ರ.
* ಮಲ್ಲಿಕಾರ್ಜುನಸ್ವಾಮಿ ಮುತ್ತೈದೆಗಳಹಟ್ಟಿ ಹಿರಿಯರಿಗೆ ಹಿರೇಹಳ್ಳಿ ಕಟ್ಟೆಮನೆಗೆ ಬರೆದ ಪತ್ರ.
* ೧೯೨೮ ಫೆಬ್ರವರಿ ೯ತೆದಿ ರಾಯದುರ್ಗದ ಉಡೇಗೊಳದ ಮ್ಯಾಸನಾಯಕರಿಂದ ಹಿರೇಹಳ್ಳಿ ಕಟ್ಟೆಮನೆಗೆ ಬರೆದ ಮನವಿ ಪತ್ರ.

* ೨೬.೫.೧೯೩೧ ಚಳ್ಳಕೆರೆ ತಾ. ನೇರ್ಲಗುಂಟೆ ಬತ್ತಯ್ಯಳಹಟ್ಟಿಯವರು ಹಿರೇಹಳ್ಳಿ ಸುರ ಸಿಂಹಾಸನಕ್ಕೆ ಕೊಟ್ಟ ಮನವಿ ಪತ್ರ.
* ೧೩.೧೦.೧೯೩೩ರಂದು ಹಿರೇಹಳ್ಳಿ ಯಜಮಾನರು ಪೆಲ್ಲೂರಹಟ್ಟಿಯ ಮ್ಯಾಸನಾಯಕರಿಗೆ ಬರೆದ ಪತ್ರ.
* ೨೨.೨.೧೯೯೦ ಚಿಂತಗುಂಟ್ಲು ಬೋರದೇವರಿಗೆ ಸಂಬಂಧಿಸಿದಂತೆ ನಾಯಕನಹಟ್ಟಿ ಸಂಸ್ಥಾನದ ಅಧಿಕಾರಿಗಳು ಹಿರೇಹಳ್ಳಿಗೆ ಬರೆದ ವಿವರ.
* ೮.೧೦.೧೯೨೮ ನಾಯಕ ಶಿರೋಮಣಿ ಮಹಾನಾಯಕಚಾರ್ಯ ಹಿರೇಹಳ್ಳಿ ಕಟ್ಟೆಮನೆಗೆ ಚಳ್ಳಕೆರೆ ಸಂಸ್ಥಾನಿಕರು ಬರೆದ ಪತ್ರ.
* ರಾಯದುರ್ಗ ತಾ. ಗೊಲ್ಲಹಳ್ಳಿಯಿಂದ ಮ್ಯಾಸಮಂಡಳಿಯವರಿಂದ ಹಿರೇಹಳ್ಳಿ ಕಟ್ಟೆಮನೆ ಪತ್ರ.
* ಹಿರೇಹಳ್ಳಿ ಕಟ್ಟೆಮನೆಗೆ ನಾಯ್ಕನಹಟ್ಟಿ ಚಿನ್ನಯ್ಯ ಬರೆದ ಪತ್ರ.
* ೧೯೭೧ ಜನವರಿ ೨೬ ಹಿರೇಹಳ್ಳಿ ದಡ್ಡಿಸೂರನಾಯಕ ಕಟ್ಟೆಮನೆ ಕಾರ್ಯಕಾರಣಿ ಸಭೆ ಸೇರಿ ಕೆಲವು ತೀರ್ಮಾನಗಳನ್ನು ಕೈಗೊಂಡ ವಿವರ.

೨. ಭೀಮಪ್ಪ, ತುರುವನೂರು

೧. ಕಾಳಾಸುರನ ಕಥೆ
೨. ಬಬ್ರುವಾಹನ ಕಾಳಗ
೩. ಬಾಣಾಸುರನ ಕಥೆ

೩. ಹನುಮಂತಪ್ಪ ಹಾಯ್ಕಲ್

೧. ಭಕ್ತ ಪ್ರಹ್ಲಾದ
೨. ದಕ್ಷಬ್ರಹ್ಮನ ಕಥೆ
೩. ಭಕ್ತ ಮಾರ್ಕಂಡೇಯ
೪. ಕರಿಭಂಟನ ಕಾಳಗ

೪. ಏಕಾಂತಪ್ಪ, ತುರುವನೂರು

೧. ಅಭಿಮನ್ಯು ಕಾಳಗ
೨. ಕಂಸವಧೆ
೩. ಇಂದ್ರಸಭಾ/ ದುರ್ಯೋಧನನ ಗರ್ವಭಂಗ

೫. ದಿ. ಕಾರೇಬೋರಯ್ಯ, ನಲಗೇತನಹಟ್ಟಿ

೧. ಸಂಪೂರ್ಣ ರಾಮಾಯಣ
೨. ಇಂದ್ರಜಿತು ಕಾಳಗ

೩. ಕರಿಭಂಟನ ಕಥೆ

೪. ಐರಾವಣ ಮೈರಾವಣ

೬. ಸಣ್ಣಗೌಡ್ರ ಓಬಯ್ಯ, ನಲಗೇತನಹಟ್ಟಿ

೧. ಕರಿಭಂಟನ ಕಾಳಗ

೨. ರತಿಕಲ್ಯಾಣ

೩. ಗಿರಿಜಾ ಕಲ್ಯಾಣ

೪. ಕರ್ಣ ಅರ್ಜುನ ಕಾಳಗ

೫. ಅಭಿಮನ್ಯು ಕಾಳಗ

೬. ಸುಧಾನ್ವನ ಕಾಳಗ

೭. ಕಂಸಸೂರನ ಕಥೆ

೭. ಬಿ.ನಾಗರಾಜು, ಗುಡೇಕೋಟೆ

೧. ಗಯ ಚರಿತ್ರೆ/ ಕೃಷ್ಣಾರ್ಜುನರ ಕಾಳಗ

೨. ಕಂಸವಧೆ

೩. ಬಸಪ್ಪಯ್ಯನ ಕಥೆ

೪. ರೇಣುಕ ಮಹಾತ್ಮೆ

೮. ಕೆ. ದೇವೇಂದ್ರಪ್ಪ, ಬೇರನಹಳ್ಳಿ ಹೊಳಲ್ಕೆರೆ ತಾಲ್ಲೂಕು

೧. ರಾಮಾಂಜನೇಯ ಯುದ್ಧ

೨. ಹಿಡಂಬಿ ಸ್ವಯಂವರ

೩. ಕೀಚಕವಧೆ

೪. ಪಾರ್ಥ ವಿಜಯ

೫. ದುಶ್ಯಾಸನ ಕಥೆ

೯. ಮಾಸ್ಟರ್ ಭೇಟಿ ಬಸಯ್ಯ, ತಾ॥ ತುಮಕೂರ್ಲಹಳ್ಳಿ, ಮೊಳಕಾಲ್ಮೂರು

೧. ರಾಜಾ ಸತ್ಯವ್ರತನ ಕಥೆ/ಶನಿಪ್ರಭಾವ

೨. ರಾಮಾಂಜನೇಯ ಯುದ್ಧ

೩. ರಾವಣ ದಿಗ್ವಿಜಯ

೪. ಐರಾವಣ ಮೈರಾವಣ

೧೦. ಗಂಗಪ್ಪ, ಮುತ್ತಿಗಾರನಹಳ್ಳಿ

೧. ಪಾರ್ಥವಿಜಯ

೨. ಸಂಪೂರ್ಣ ರಾಮಾಯಣ

೩. ರಾವಣ ದಿಗ್ವಿಜಯ

೪. ಸುಧನ್ವ ಕಾಳಗ

೫. ಸೌಗಂಧಿಕ ಪುಷ್ಪ

೧೧. ಕಿನ್ನರಿ ಬೊಮ್ಮಣ್ಣ ಮತ್ತು ತಿಪ್ಪೀರಮ್ಮ, ನಾಯಕನಹಟ್ಟಿ

೧. ಕರ್ಣಾರ್ಜುನರ ಕಾಳಗ

೨. ವಿರೋಚನ ಕಾಳಗ/ ವಜ್ರಮುಕುಟ ಮಹಾರಾಜ

೩. ಚಿತ್ರಪಟ ರಾಮಾಯಣ

೪. ಲಕ್ಷ್ಮೀಣಿ ಸ್ವಯಂವರ

೧೨. ಬೋರಯ್ಯ, ಬೆಳಗಟ್ಟ ಚಿತ್ರದುರ್ಗ ತಾ॥

೧. ದುಶ್ಯಾಸನ ಕಥೆ

೨. ಚಿತ್ರಕೇತು ಮಹಾರಾಜ

೩. ವಿರೋಚನ ಕಾಳಗ

೪. ಭಕ್ತಪ್ರಹ್ಲಾದ

೧೩. ವೈ. ನಾಟರಾಜ, ಹಿರೇಹಳ್ಳಿ ಚಳ್ಳಕೆರೆ ತಾ॥

೧. ಕಾಲಭೈರವ ಅಥವಾ ನುಂಕೆಮಲೆ ಸಿದ್ಧೇಶ್ವರ ಪುರಾಣ

೨. ಚಿತ್ರಪಟ ರಾಮಾಯಣ

೩. ಸುಂದ–ಉಪಸುಂದ

೪. ಕೀಚಕವಧೆ

೧೪. ಮಲ್ಲಯ್ಯ ಕಡಬನಕಟ್ಟೆ

೧, ಕರಿಭಂಟನ ಕಥೆ

೨, ಲಕ್ಷ್ಮೀಣಿ ಸ್ವಯಂವರ

೩, ಶತೃವಿಜಯ ಕಥೆ

೪, ಕಾಳಿಂಗರಾಜನ ಕಥೆ

೧೫, ಚಿಕ್ಕಪ್ಪ, ವಡ್ಡರಪಾಳ್ಯ ಚಿತ್ರದುರ್ಗ ತಾಲೂಕು

೧. ಶಶಿರೇಖ ಪರಿಣಯ

೨. ಇಂದ್ರಜಿತು ಕಾಳಗ

೩. ದಕ್ಷಬ್ರಹ್ಮನ ಕಥೆ

೪. ಶಂಬರಾಸುರನ ಕಥೆ

೫. ಷಣ್ಮುಖ ವಿಜಯ

೧೬. ಕಮಲ ಕೃಷ್ಣಯ್ಯ, ಪೇಲೂರಹಟ್ಟಿ ಚಿತ್ರದುರ್ಗ ತಾ॥

೧. ದುಶ್ಯಾಸನ ಕಥೆ

೨. ಮೋಹಿನಿ ಕಥೆ

೩. ರೇಣುಕಾ ಮಹಾತ್ಮೆ

೪. ಕಂಸಾಸೂರನ ಕಥೆ

೧೭. ಸಾದು ಓಬಣ್ಣ, ಕಲ್ಲೇನಹಳ್ಳಿ ಚಿತ್ರದುರ್ಗ ತಾ॥

೧. ರತಿ ಕಲ್ಯಾಣ / ಕೌಂಡ್ಲೀಕನ ವಧೆ

೨. ತಾಮ್ರಧ್ವಜನ ಕಥೆ

೩. ಲಕ್ಷಾಪತಿ ರಾಜನ ಕಥೆ

೪. ಇಂದ್ರಸಭಾ

೧೮. ಎಸ್.ಎಂ. ದುರುಗಪ್ಪ, ದೇವರೆಡ್ಡಿಹಳ್ಳಿ ಚಳ್ಳಕೆರೆ ತಾ॥

೧. ಶಶಿರೇಖ ಪರಿಣಯ

೨. ವೇದಾವತಿ ಚರಿತೆ

೩. ನುಂಕೆಮಲೆ ಸಿದ್ಧೇಶ್ವರ ಪುರಾಣ

೪. ದ್ರೌಪತಿ ವಸ್ತ್ರಾಪಹರಣ/ ದುಶ್ಯಾಸನ ಕಥೆ

೫. ಮಣಿಮಲ್ಲಾಸುರನ ಕಥೆ

೧೯. ಕಾಮಗೇತಲ ಮುತ್ತಯ್ಯ, ನಲಗೇತನಹಟ್ಟಿ

೧. ರಾಮಾಯಣ ಯುದ್ಧ

೨. ಲವಕುಶ ಕಾಳಗ

೩. ಇಂದ್ರಜಿತು ಕಾಳಗ

೪. ಕಾಳಸೂರನ ವಧೆ

೫. ದಕ್ಷಯಜ್ಞ

೬. ದುಂಡಾ ಸುರನ ವಧೆ

೭. ಬಾಣಾಸುರನ ವಧೆ

೮. ಶಶಿರೇಖ ಪರಿಣಯ

೨೦. ಲಕ್ಷ್ಮಣ ತೆಲಗಾವಿ, ಧಾರವಾಡ

೧. ಮದಕರಿ ರಾಜೇಂದ್ರ ದಂಡಕ

೨. ಚಂದ್ರಭೀಮ ರಚಿಸಿದ ದಂಡಕ

೩. ಪರಶುರಾಮನಾಯಕ ಭದ್ರಾವತಿ ಅವರಿಂದ ಸಂಗ್ರಹಿಸಲಾದ ಜಾನಪದ ಗೀತೆ

೪. ಚಿತ್ರದುರ್ಗದ ಬಖೈರು

೫. ಚಿತ್ರದುರ್ಗದ ಟಿ. ಜಯಣ್ಣ ಅವರು ಬರೆದ ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದ ಕೈಬರಹದ ದಾಖಲೆ

೬. ಪರಶುರಾಮಪ್ಪನಿಗೆ ಸೇರಿದ ಪೋಸ್ಟ್‌ರಂಗಪ್ಪ ಅವರ ವಶದಲ್ಲಿದ್ದ ದಾಖಲೆ

೭. ಭದ್ರಾವತಿಯ ಪರಶುರಾಮ ನಾಯ್ಕರ ವಶದಲ್ಲಿನ ಬಖೈರು

೮. ಚಿನ್ಮೂಲಾದ್ರಿಯ ಪೂರ್ವಪರ ವಿಚಾರದ ದಾಖಲೆ

೯. ಚಿತ್ರದುರ್ಗ ಸಂಸ್ಥಾನದ ವಂಶಾವಳಿ

೧೦. ಕುಂಚಿಟಿಗರ ಕುಲದ ವಿವರದ ತಾಮ್ರಪಟ

೧೧. ಸಜ್ಜೆಮುತ್ತೆ ಎಂಬಾತನಿಗೆ ಸಂಬಂಧಿಸಿದ ವಂಶಾವಳಿ

೨೧. ನಾಗರಾಜ ಡಿ., ಶಿಕ್ಷಕರು, ಹಿರಿಯೂರು, ತಾಲೂಕು

೧. ರಾಮಾಯಣದೊಳಗಣ ಚಿತ್ರಪಟ ಸಂಧಿ

೨. ಬೋಜಕಾಳಿದಾಸ ವಿಲಾಸ

೩. ಕಾಳಿಂಗರಾಜನ ಕಥೆ

೪. ಜಗನ್‌ಮೋಹಿನಿ ಕಥೆ

೨೨. ಗುರುಮೂರ್ತಿ, ಬಂಜಿಗೆರೆ

೧. ದೇವಿಮಹಾತ್ಮೆ

೨. ರತಿ ಕಲ್ಯಾಣಿ

೩. ತಾಂಬ್ರಾಧ್ವಾಜನ ಕಥೆ,

೪. ಕುಮಾರ ರಾಮನ ಸಾಂಗತ್ಯು

೨೩. ಎಸ್.ಟಿ. ವೀರಣ್ಣ ನಾಯಕ, ಘಟಪರ್ತಿ

೧. ವಿರಾಟಪರ್ವ

೨. ನುಂಕಪ್ಪನ ಕಥೆ

೩. ಮಣಿಮಲ್ಲಾ ಸುರನ ಕಥೆ

೪. ಶಶಿರೇಖಾ ಪರಿಣಯ

೨೪. ಪಾಲಣ್ಣ, ಎಲ್.ಐ.ಸಿ. ಸೂರಮ್ಮನಹಳ್ಳಿ

೧. ಯಂತ್ರ ಮಂತ್ರದ ಹಸ್ತಪ್ರತಿ

೨. ವೈದ್ಯಶಾಸ್ತ್ರದ ಹಸ್ತಪ್ರತಿ

೨೫. ಗೌಡ್ರು ಗಿಡ್ಡಪಾಪಯ್ಯ ಬಯಲಾಟದ ಮೇಳಗಾರರು, ಮಾರಮ್ಮನಹಳ್ಳಿ

೧. ಶಶಿರೇಖಾ ಪರಿಣಯ

೨. ಬಭ್ರುವಾಹನ ಕಾಳಗ

೩. ನುಂಕೆಮಲೆ ಪುರಾಣ

೪. ರಾಮಾಯಣ ಯುದ್ಧ

೨೬. ಎ.ಕೆ. ಓಬಯ್ಯ, ಬಯಲಾಟದ ಮೇಳಗಾರರು, ಬೇಡರೆಡ್ಡಿಹಳ್ಳಿ

೧. ಭಕ್ತಪ್ರಹ್ಲಾದ

೨. ವಿರಾಟಪರ್ವ

೩. ರತಿಕಲ್ಯಾಣ

೪. ಚಿತ್ರುಕೇತು ಮಹಾರಾಜ

೨೭. ಪೂಜಾರಿ ವೀರಣ್ಣ, ನಲಗೇತನಹಟ್ಟಿ

೧. ಕರಿಭಂಟನ ಕಾಳಗ

೨. ರತಿಕಲ್ಯಾಣ

೩. ಕೀಚಕನ ಕಥೆ

೪. ಲಕ್ಷ್ಮೀ ಸ್ವಯಂವರ

೨೮. ಜೂಗಲ ಪಾಪಯ್ಯ, ಬೋಸೇದೇವರಹಟ್ಟಿ

೧. ಕರಿಭಂಟನ ಕಾಳಗ

೨. ನುಂಕೆಮಲೆ ಸಿದ್ಧೇಶ್ವರ

೩. ರತಿಕಲ್ಯಾಣ

೪. ಸಾಂಗ್ಯ ಬಾಳ್ಯನ ಕಥೆ

೫. ರೇಣುಕಾ ಮಹಾತ್ಮೆ

೨೯. ಎತ್ತಿನ ಓಬಯ್ಯ, ರಾಮದುರ್ಗ ಚಳ್ಳಕೆರೆ (ತಾ)

೧. ಕೀರಾತಾರ್ಜುನ ವಿಜಯ

೨. ಶಬರಶಂಕರ ವಿಳಾಸ

೩. ಲವ-ಕುಶ ಕಾಳಗ

೪. ಕರಿಭಂಟನ ಕಾಳಗ

೩೦. ಬೋರಜ್ಜ, ಓಬಯ್ಯನಹಟ್ಟಿ

೧. ರತಿಕಲ್ಯಾಣ

೨. ಕುರುಕ್ಷೇತ್ರ

೩. ಚಿತ್ರಕೇತು ಮಹಾರಾಜ

೪. ಗಿರಿಜಾ ಕಲ್ಯಾಣ

೩೧. ಚಿನ್ನಪ್ಪ, ನೇರಲಗುಂಟೆ

೧. ರಕ್ತರಾತ್ರಿ

೨. ಕುರುಕ್ಷೇತ್ರ

೩. ತಾರಕಸುರನ ವಧೆ

೪. ಕರಿಭಂಟನ ಕಾಳಗ

೩೨. ದೊಡಗಟ್ಟಯ ಮತ್ತು ಸಣ್ಣಗಟ್ಟಯ್ಯ, ಅಡವಿ ಸೂರಮ್ಮನಹಳ್ಳಿ

೧. ಶಬರಶಂಕರ ವಿಳಾಸ

೨. ಕರ್ಣಾರ್ಜುನ ಕಾಳಗ

೩. ಶ್ರೀಕೃಷ್ಣ ಪಾರಿಜಾತ

೪. ಅಭಿಮನ್ಯು ಕಾಳಗ

೩೩. ಪ್ರೊ. ಬಿ. ರಾಜಶೇಖರಪ್ಪ : ಚಿತ್ರದುರ್ಗದಲ್ಲಿ ವಾಸ ಇವರು ಖ್ಯಾತ ಸಂಶೋಧಕರು ಶಾಸನ ತಜ್ಞರು ಇವರ ಹತ್ತಿರ ೧೫೦ಕ್ಕೂ ಹೆಚ್ಚು ಓಲೆ ಮತ್ತು ಕಾಗದದ ಹಸ್ತಪ್ರತಿಗಳನು ಸಂಗ್ರಹಿಸಿದ್ದಾರೆ. ಅಂತಹ ಕೆಲವು ಹಸ್ತಪ್ರತಿಗಳೆಂದರೆ

೧. ದೊಡ್ಡಮದಕೇರಿ ನಾಯಕನ ಕೈಫಿಯತ್ತು

೨. ಚಿತ್ರದುರ್ಗ ಪಾಳೆಗಾರರ ವಂಶಾವಳಿ

೩. ಮದಕರಿ ರಾಜೇಂದ್ರ ದಂಡಕ

೪. ನಾಯಕನಹಟ್ಟಿ ಪಾಳೆಗಾರರ ವಂಶಾವಳಿ

೫. ಈಚೆಗೆ ದೊರೆತ ಹೊಸ ದಾಖಲೆ/ತಿಮ್ಮಣ್ಣ ನಾಯಕ

ಹೀಗೆ ಮೆಕೆಂಜಿಯಿಂದ ಮೊದಲ್ಗೊಂಡು ಇಂದಿನವರೆಗೂ ನೂರಾರು ಜನ ವಿದ್ವಾಂಸರು ಸಂಸ್ಥೆಗಳ ಪರವಾಗಿಯೋ ವೈಯಕ್ತಿಕವಾಗಿಯೋ ಸಾವಿರ ಸಾವಿರ ಸಂಖ್ಯೆಯಲ್ಲಿ ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿದ್ದಾರೆ. ಸಂಗ್ರಹಿಸುತ್ತಲಿದ್ದಾರೆ. ಕ್ಷೇತ್ರಕಾರ್ಯ ಕೈಗೊಂಡು ಈ ಮೇಲಿನಂತೆ ಸಂಗ್ರಹಕಾರರನ್ನು ಹಾಗೂ ಅವರ ಮನೆಗಳಲ್ಲಿರುವ ಹಸ್ತಪ್ರತಿಗಳನ್ನು ಗುರುತಿಸುವ ಕೆಲಸವನ್ನು ಇಲ್ಲಿ ಮಾಡಲಾಗಿದೆ.

೭.೨ ಕವಿಗಳು :

ಮೂಲಕೃತಿಯ ಕರ್ತೃವೇ ಸ್ವಹಸ್ತದಿಂದ ಬರೆದಿರುವ ಪ್ರಾಚೀನ ಹಸ್ತಪ್ರತಿಗಳು ಈಗ ಸಿಗುವುದು ತುಂಬ ಕಷ್ಟಸಾಧ್ಯವಾದ ಮಾತಾಗಿದೆ. "೧೯ನೇ ಶತಮಾನದ ಅಂತ್ಯದಲ್ಲಿದ್ದ ಬಸವಪ್ಪಶಾಸ್ತ್ರೀ, ನಂದಳಿಕೆ ಲಕ್ಷ್ಮೀನಾರಾಯಣ್ಣಪ್ಪ ಮುಂತಾದ ಕವಿಗಳ ಸ್ವಹಸ್ತಪ್ರತಿಗಳು ಸಿಕ್ಕುತ್ತವೆ. ಇವರು ನಮ್ಮ ಕಾಲದವರೇ ಎಂದರೂ ಸಹ ಸಲ್ಲುವುದು ಶಂಕರನಾರಾಯಣನ "ಅಧ್ಯಾತ್ಮ ರಾಮಾಯಣ'ವು ನರಸುಂಹ್ಪನಿಂದ ತಿದ್ದಲ್ಪಟ್ಟು ೧೭೫೩ರಲ್ಲಿ ಪ್ರಕಟವಾಯಿತು. 'ನರಸುಂಹ್ವಂ ಕಂಬುಧರಾಜ್ಞಾತ ಚರಿತವಸುಂ ಬರೆದೆಂ ಪ್ರಥಮ ಲಿಖಿತಮಿದು ಜಗದೊಳ್" ಹಸ್ತಪ್ರತಿಯ ಅಂತ್ಯದಲ್ಲಿ ಬರುವ

ಮಾತುಗಳಿವು. ಇಷ್ಟನ್ನು ಬಿಟ್ಟರೆ ಎಲ್ಲಾ ಹಸ್ತಪ್ರತಿಗಳೂ ಪ್ರತಿಕಾರರು ಮಾಡಿದಂಥವು"[೩] ಕವಿಯ ಸ್ವಹಸ್ತಾಕ್ಷರದ ಪ್ರತಿಯು ಉಪಯೋಗಿಸಿ ಸವೆದು ನಾಶವಾಗಿರಬಹುದು. ಇಲ್ಲವೇ ಬೆಂಕಿ ನೀರಿನ ಪಾಲೋ ಆಗಿರಬಹುದು. ಆದುದರಿಂದ ನಾವು ಈಗ ಪ್ರತಿಕಾರನ ಕೈಬರಹದ ಮೂಲಕ ಕೃತಿಕಾರನ ಪರಿಚಯ ಮಾಡಿಕೊಳ್ಳಬೇಕಾಗುತ್ತದೆ. ಚಿತ್ರದುರ್ಗ ಪರಿಸರದಲ್ಲಿ ಬಯಲಾಟದ ಹಸ್ತಪ್ರತಿಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯವೆ. ಈ ಹಸ್ತಪ್ರತಿಗಳಲ್ಲಿಯೂ ಯಾವೊಬ್ಬ ಕವಿಯ ಹೆಸರನ್ನು ಹೊತ್ತು ಉಳಿದುಬಂದಿಲ್ಲ. ಮೂಲ ಕರ್ತೃವಿನ ಯಾವುದೇ ಸೂಚನೆಗಳು ಪ್ರಸ್ತುತ ಪ್ರತಿಗಳಲ್ಲಿ ಕಂಡುಬರುವುದಿಲ್ಲ. ಒಂದು ಜಿಲ್ಲೆಯ ಸಮಗ್ರ ಮಾಹಿತಿಯನ್ನು ದೊರೆಕಿಸಿಕೊಡುವ ಚಿತ್ರದುರ್ಗ ಜಿಲ್ಲಾ ಗೆಜೆಟೀಯರ್‌ನಲ್ಲಿಯೂ ಯಾವುದೇ ಬಯಲಾಟದ ಕವಿಗಳ ಮಾಹಿತಿ ಆಗಲಿ ಅಥವಾ ಬೇರೆ ಕವಿಯ ಮಾಹಿತಿಯಾಗಲಿ ಸಿಗುವುದಿಲ್ಲ. ಹೀಗೆ ಮಾಹಿತಿ ಸಿಗುವುದಿಲ್ಲವೆಂದ ಮಾತ್ರಕ್ಕೆ ಈ ಪ್ರದೇಶದಲ್ಲಿ ಬಯಲಾಟದ ಕವಿಗಳು ಇಲ್ಲವೇ ಇಲ್ಲ ಎನ್ನುವುದು ತಪ್ಪು ಗ್ರಹಿಕೆಯಾಗುತ್ತದೆ. ಮೂಲ ಪ್ರತಿಗಳು ಸಿಕ್ಕಿದ್ದಲ್ಲಿ ಸುಲಭವಾಗಿ ಕೃತಿಕಾರರನ್ನು ಗುರುತಿಸಲಿಕ್ಕೆ ಸಾಧ್ಯವಿತ್ತು. ಹೀಗಿದ್ದೂ ಈ ಪ್ರದೇಶದಲ್ಲಿ ಬಯಲಾಟಗಳು ಉಳಿದು ಬಂದಿರುವುದು ಈ ಜಿಲ್ಲೆಯ ಸಾಂಸ್ಕೃತಿಕ ಶ್ರೀಮಂತಿಕೆ ಮಾತ್ರವಲ್ಲದೆ, ಸಾಂಸ್ಕೃತಿಕ ಜವಾಬ್ದಾರಿತನದ ಪ್ರತೀಕವೆಂದು ಹೇಳಬಹುದು. ಪ್ರಸ್ತುತ ದೊರಕಿರುವ ಪ್ರತಿಗಳಲ್ಲಿ ಮೂಲ ಕರ್ತೃವಿನ ಯಾವುದೇ ಚಹರೆಗಳನ್ನು ಗುರುತಿಸುವುದು ಸಾಧ್ಯವಾಗದ ಮಾತಾಗಿದೆ. ಏಕೆಂದರೆ ಪ್ರತಿಗಳಲ್ಲಿ ಉಲ್ಲೇಖಿಸಲಾದ ವಿವರಣೆ, ಆಖ್ಯಾಯಿಕೆ, ಹಾಡು ಇತ್ಯಾದಿಗಳು ಪ್ರದರ್ಶಿಸಲ್ಪಡುವ ಪ್ರದೇಶದಲ್ಲಿನ ದೇವರು ಮತ್ತು ಪ್ರದರ್ಶನ ನಡೆಯುವ ಊರಿನ ಹೆಸರುಗಳು ಮಾತ್ರ ಕಂಡುಬರುತ್ತವೆ. ಕೆಲವು ಪ್ರತಿಗಳು ಹಿಂದೆ ಹೇಗೆ ಬರೆದಿದ್ದಾರೆಯೋ ಹಾಗೆಯೇ ದಾಖಲಾಗಿರುವುದುಂಟು. ಬಯಲಾಟದ ಹಸ್ತಪ್ರತಿಗಳಿಗೆ "ನೇರವಾಗಿ ಒಬ್ಬನೇ ಕರ್ತೃ ಎಂದು ನಿಶ್ಚಯಿಸುವುದು ಒಂದು ಸಮಸ್ಯೆಯಾಗುತ್ತದೆ"[೪] ಏಕೆಂದರೆ ಇದು ಶಿಷ್ಟ ಸಾಹಿತ್ಯವಾಗಿರದೆ ಮೌಖಿಕ ಪ್ರಸಾರವುಳ್ಳ ಸಾಹಿತ್ಯವೆಂದು ಕರೆಸಿಕೊಂಡಿದೆ. ಇದಕ್ಕೆ ಆಕರವಾದ ಪೌರಾಣಿಕ ಕಥೆಗಳನ್ನು ತಮಗೆ ತಿಳಿದಂತೆ ಆಟದ ಕಥೆಗಳಾಗಿ ಸಂಯೋಜಿಸಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುವ ದುರ್ಗಾದಾಸ ಅವರ ಈ ಅಭಿಪ್ರಾಯ ಬಯಲಾಟ ಕವಿಯ ಬಗೆಗೆ ಹುಟ್ಟಬಹುದಾದ ಯಾವುದೇ ಅನುಮಾನಗಳಿಗೆ ಪರಿಹಾರ ಎನ್ನುವಷ್ಟರಮಟ್ಟಿಗೆ ಸಹಕಾರಿಯಾಗುತ್ತದೆ. ಒಟ್ಟಿನಲ್ಲಿ ಪ್ರದರ್ಶನಕ್ಕಾಗಿ ಸಜ್ಜುಗೊಳಿಸಲ್ಪಟ್ಟ ಅನೇಕ ಕಥೆಗಳು ನಾಡಿನಾದ್ಯಂತ ದೊರಕುತ್ತವೆ. ಆದರೂ ಇವುಗಳು ಪಾಠಾಂತರಗಳನ್ನು ಹೊಂದಿ ಉಳಿದುಬಂದಿರುವುದನ್ನು ಕಾಣಬಹುದಾಗಿದೆ. ಹಾಗಾಗಿ ಬಯಲಾಟದ ಕವಿಗಳನ್ನು ಗುರುತಿಸುವುದು ಕಷ್ಟಸಾಧ್ಯವೆಂದೇ ಹೇಳಬೇಕಾಗುತ್ತದೆ. ಚಿತ್ರದುರ್ಗ ಪರಿಸರದಲ್ಲಿ ಇಷ್ಟೂ ಕೃತಿಗಳು ದೊರೆತ್ತಿದ್ದರೂ ಈ ಭಾಗದ ಬಯಲಾಟದ ಕವಿಗಳ ಬಗೆಗೆ ತಿಳಿದುಬರುವ ಮಾಹಿತಿಗಳು ಅಲ್ಪವೆಂದೇ ಹೇಳಬಹುದು. ಹಾಗೆಯೇ ಬಯಲಾಟಗಳು ಯಾವ ಪ್ರದೇಶದಲ್ಲಿ ಜರುಗುತ್ತವೆಯೋ ಆ ಪ್ರದೇಶದ ವ್ಯಕ್ತಿಯೇ ಕವಿಯಾಗಿರಬೇಕೆಂದೇನೂ ಇಲ್ಲ. ಪ್ರಮುಖವಾಗಿ

ಮೌಖಿಕ ಮಾಧ್ಯಮದ ಮೂಲಕ ಪ್ರಸಾರಗೊಂಡಿರುವ ಈ ಪ್ರತಿಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಬಂದಿರಲಿಕ್ಕೆ ಸಾಧ್ಯವಿದೆ. ಇಲ್ಲಿ ಬಯಲಾಟದ ಕವಿಗಳ ವಿಚಾರದಲ್ಲಿಯೂ ಈ ರೀತಿಯ ವಿಭಿನ್ನತೆ ಹಾಗೂ ವಿಶಿಷ್ಟತೆಯನ್ನು ಕಾಣಬಹುದು. ಬಯಲಾಟ ಎಲ್ಲಿಯೇ ನಡೆಯುತ್ತಿರಲಿ ಯಾರೇ ಪ್ರದರ್ಶಿಸಲಿ ಗಣಸ್ತುತಿಯಲ್ಲಿ 'ಪೊಡವಿಯೊಳ್ ಕುಡುತಿನಿಯ ಒಡೆಯ ಭೀಮೇಶನ ಎಂಬ ಅಂಕಿತ ಬರುವ ಸ್ತುತಿ ಪದವನ್ನು ತಪ್ಪದೇ ಹಾಡುತ್ತಾರೆ. ಇಲ್ಲಿ ಬರುವ "ಭೀಮೇಶ" ಒಬ್ಬ ಬಯಲಾಟದ ಕವಿ ಎಂಬುದು ಸತ್ಯ. ಪ್ರಸ್ತುತ ದೊರೆತ ಬಹುತೇಕ ಬಯಲಾಟದ ಪ್ರತಿಗಳಲ್ಲೂ ಮೇಲಿನ ಸ್ತುತಿ ಪದದ ಪಲ್ಲವಿ ದಾಖಲಾಗಿದೆ. ಆದರೂ ಬಹುತೇಕ ಬಯಲಾಟದ ಕವಿಗಳು ಅಜ್ಞಾತವಾಗಿ ಉಳಿದಿರುವುದು ಕಂಡುಬರುತ್ತದೆ. ಇದೇ ಪ್ರತಿಯಲ್ಲಿ 'ಧರೆಯೊಳ್ ತಳಕಿನ ಪುರದ ಮಲ್ಲೇಶನ' ಎನ್ನುವ ಮಲ್ಲೇಶನನ್ನು ಸ್ತುತಿಸುವ ಪದಗಳು ಅನೇಕವಿವೆ. ಇಲ್ಲಿನ ತಳಕು ಎಂಬ ಊರು ಚಳ್ಳಕೆರೆ ತಾಲ್ಲೂಕಿನಲ್ಲಿದೆ. ಇದೇ ಭೀಮೇಶನ ಮುದ್ರಿಕೆಯನ್ನೊಳಗೊಂಡ ಮತ್ತೊಂದು ಪ್ರತಿ ಸಾರಂಗಧರನ ಪ್ರತಿ. ಈ ಪ್ರತಿಯ ಸಭಾವಂದನೆಯ ಪದದಲ್ಲಿ "ಧರೆಯೊಳು ಮೆರೆಯುವ ಹಿರಿಯೂರಿನಲ್ಲಿರುವ ತೇರುಮಲ್ಲೇಶನಾ ಕರುಣಾದಿಂದಲಿ ಕಾಯೋ"[೫] ಎಂಬ ಮುದ್ರಿಕೆ ಇದೆ. ಈ ಕೃತಿಯ ಕರ್ತೃವನ್ನು ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನವನೆಂದು ಗುರುತಿಸಬಹುದು. ಒಂದು ವೇಳೆ ಮೂಲ ಕರ್ತೃ ಬಳ್ಳಾರಿಯವನೇ ಆಗಿದ್ದರೂ, ಇದನ್ನು ಪ್ರತಿಮಾಡುವ ಪ್ರತಿಕಾರ ಆ ಪ್ರತಿಯನ್ನು ಮುಂದಿಟ್ಟುಕೊಂಡು ಬರೆದು ಮೂಲದಿಂದ ಬೇರೆಯಾಗಲು ಬಯಸುತ್ತಿರ ಬಹುದು. 'ಶಶಿರೇಖ ಪರಿಣಯ' ಎನ್ನುವ ಬಯಲಾಟದ ಪ್ರತಿಯೂ ಸಹ ಬಳ್ಳಾರಿ ಭಾಗದಿಂದಲೇ ಬಂದು ಇಲ್ಲಿ ಪ್ರಸಾರಗೊಂಡಂಥದ್ದಾಗಿದೆ. ಈ ಪ್ರತಿಯ ಅನೇಕ ಪದಗಳಲ್ಲಿ 'ಹಾವಳ್ಗಿ ಈಶ'ನನ್ನು ಸ್ತುತಿಸಲಾಗಿದೆ. ಇದು ಸಹಜವಾದುದು ಹಾವಳ್ಗಿ ಎನ್ನುವ ಊರು ಬಳ್ಳಾರಿ ಜಿಲ್ಲೆಯಲ್ಲಿದೆ. ಚಿತ್ರದುರ್ಗ ಮೂಲತಃ ಬಳ್ಳಾರಿ ಜಿಲ್ಲೆಯ ಗಡಿ ಭಾಗದಲ್ಲಿರುವುದರಿಂದ ಅಲ್ಲಿನ ಬಯಲಾಟದ ಕೃತಿಗಳು ಇಲ್ಲಿಯೂ ಪ್ರಸಾರಗೊಂಡಿರಲಿಕ್ಕೆ ಸಾಧ್ಯವಿದೆ. ಹೀಗೆ ಪ್ರಸಾರಗೊಂಡ ಅನೇಕ ಬಯಲಾಟ ಪ್ರತಿಗಳಲ್ಲಿ 'ಭೀಮೇಶನ' ಮುದ್ರಿಕೆಯ ಅನೇಕ ಪ್ರತಿಗಳು ದೊರೆಯುತ್ತವೆ.

ಚಿನ್ಮೂಲಾದ್ರಿಯಲ್ಲಿ ವೀರಶೈವರ ಮಠ ಸ್ಥಾಪನೆಯಾದ ಮೇಲೆ ಮಠಾಧಿಪತಿಗಳೂ ಚಿತ್ರದುರ್ಗದ ಪಾಳೆಯಗಾರರ ಮತ್ತು ಈ ಮಠಾಧಿಪತಿಗಳ ಆಶ್ರಯದಲ್ಲಿದ್ದ ವೀರಶೈವ ಕವಿಗಳೂ ಅನೇಕ ಗ್ರಂಥಗಳನ್ನು ರಚಿಸಿರುವರು. ಬೆಳಕಿಗೆ ಬಂದಿರುವ ಕೆಲವರ ಕವಿಚರಿತ್ರೆಯನ್ನು ಇಲ್ಲಿ ಕೊಡಲಾಗಿದೆ.

೧. ಇಮ್ಮಡಿ ಮುರಿಗೆಯ ಸ್ವಾಮಿಗಳು ಚಿನ್ಮೂಲಾದ್ರಿಯಲ್ಲಿ ಬೃಹನ್ಮಠವನ್ನು ಸ್ಥಾಪಿಸಿದ ಈ ಗುರುಗಳು ಹಾಲಾಸ್ಯ ಪುರಾಣ, ದೇವಿಸ್ತೋತ್ರ, ಶಿವಲಿಂಗ ನಾಂದ್ಯ ಎಂಬ ಗ್ರಂಥಗಳನ್ನು ರಚಿಸಿದ್ದಾರೆ.

"ಓವಿದ ಶಾಲಿಸುವಾಹನ ।
ಸಾವಿರದರುನೂರರಿಂದೆ ನಾಲ್ವತ್ತೆರಡನೆ ॥
ಯಾವರಿಸಿದ ಸುತಶಾರ್ವರಿ ।
ಭಾವಿತವರ ಸಿಂಹಲಗ್ನದೊಳಗತಿಶಯದಿಂ ॥

ಅಂದರೆ ಶಕ ೧೬೪೨ನೆಯ (೧೭೨೦ಇಸವಿ) ಶಾರ್ವರಿ ಸಂವತ್ಸರದಲ್ಲಿ ಗ್ರಂಥವು ರಚಿಯವಾಯಿತೆಂದು ಉಕ್ತವಾಗಿದೆ. ಇದು ಪದ್ಯಗದ್ಯ ಮಿಶ್ರವದ ಚಂಪು ಗ್ರಂಥ ಇದರಲ್ಲಿ ಆ ಕಾಲದ ೬೬ ಆಶ್ವಾಸ ೩೬೭೨ ಪದ್ಯಗಳಿವೆ. ಮಧುರೆಯ ಸುಂದರೇಶ್ವರನ ೬೪ ಲೀಲೆಗಳು ವರ್ಣಿತವಾಗಿವೆ.

* ದೇವೀಸ್ತೋತ್ರ; ಇದರಲ್ಲಿ ೬೫ ಪದ್ಯಗಳಿವೆ.

ಜಯದೇವಿ ಜಗತ್ತಿಮಾತೆನುತೇ ।
ಹಯವಾಹನ ಮಿಶ್ರ ಶರೀರಯುತೇ ।
ನಯವಾಣಿ ಮಹಾಫಣಿವೇಣಿ ಗುಣಾ ।
ಲಯೆ ರಕ್ಷಿಪುದೆಮ್ಮನು ಮಾಯೆ ಶಿವೇ"[೬]

ಶಿವಲಿಂಗನಾಂದ್ಯ: ಇದರಲ್ಲಿ ೨೫ ಪದ್ಯಗಳಿವೆ. ಇವುಗಳಲ್ಲಿ ಕೆಲವು ಶಿವಲಿಂಗ ಎಂದು ಮುಗಿಯುತ್ತವೆ. ಶಿವಲಿಂಗನಾಂದ್ಯ ಮತ್ತು ದೇವಿ ಸ್ತೋತ್ರ ಇವು ಹಾಲಾಸ್ಯ ಪುರಾಣ ಆಶ್ವಾಸದ ಆದ್ಯಂತ ಪದ್ಯಗಳೆಂದು ತಿಳಿದುಬಂದಿದೆ.

೨. ನಂಜಕವಿ : ಈತನು ಕಪೋತವಾಕ್ಯ ಎಂಬ ಆಖ್ಯಾನವನ್ನು ಸಾಂಗತ್ಯ ರೂಪದಲ್ಲಿ ರಚಿಸಿದ್ದಾನೆ. ಇದರಲ್ಲಿ ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಆದರೆ ಕೈ ಬರೆಹದ ರಕ್ಷಾಪತ್ರದಲ್ಲಿ 'ನಂಜಕವಿ' ಎಂದು ಬರೆದಿದೆ. ಈ ಸಾಂಗತ್ಯದಲ್ಲಿ ಉಕ್ತವಾಗಿರುವ ಕೆಲವು ವಿಷಯಗಳಿಂದ ಕವಿಯು ಚಿತ್ರದುರ್ಗ ಪ್ರಾಂತದವನೆಂದು ಸೂಚಿತವಾಗುವುದು. ಕೊನೆಯ ಪದ್ಯದಲ್ಲಿ ಚಿನ್ಮೂಲಗಿರಿ ವಾಸನನ್ನೂ ಕಾಶೀವಿಶ್ವೇಶ್ವರನನ್ನೂ, ಚಂಪಕ ಸಿದ್ಧಲಿಂಗೇಶನನ್ನೂ ಸ್ಮರಿಸಿರುವನು ಶ್ರೀ ಮುರುಘರಾಜೇಂದ್ರ ಸ್ವಾಮಿಗಳ ಮಠದ ೨ನೆಯ ಗುರುಗಳಾದ ಶ್ರೀಗುರುಸಿದ್ಧರನ್ನು ಪರಮಪಾವನಮೂರ್ತಿ ಗುರುಸಿದ್ಧ ನೀನು ಎಂದು ಸ್ಮರಿಸಿರುವನು. ಆದುದರಿಂದ ಈ ಗ್ರಂಥದ ಕಾಲ ಕ್ರಿ.ಶ. ೧೮ನೆಯ ಶತಕದ ಪ್ರಥಮ ಪಾದ ಎಂದು ನಿರ್ಧರಿಸಬಹುದು.

೩. ಚನ್ನಬಸವಣ್ಣ : ಚಿತ್ರದುರ್ಗದ ಪಾಳೆಯಗಾರನಾದ ವೀರಮದಕರಿ ರಾಜೇಂದ್ರನು ಕೂಲಹಳ್ಳಿಯನ್ನು ಮುತ್ತಿದ್ದ ಹರಪನಹಳ್ಳಿ ಪಾಳೆಯಗಾರ, ರಾಯದುರ್ಗದ ಪಾಳೆಯಗಾರ ಮತ್ತು ಸವಣೂರಿನ ನವಾಬರನ್ನು ಸೋಲಿಸಿದ ವಿಷಯವಾಗಿ ಲಾವಣಿಯನ್ನು ರಚಿಸಿದ್ದಾನೆ. ಹೈದರಾಲಿಗೆ ಸೆರೆಹೋದ ವಿಷಯದ ಏಳಪ್ಪ ಮೆದಕೇರಣ್ಣ ಎಷ್ಟೊತ್ತು ಮಲಗಿದ್ದೆ ಎಂಬ ಕೋಲುಪದವನ್ನು ರಚಿಸಿರುವನು. ಇದರಲ್ಲಿ ೧೫ ಪದಗಳು ಮಾತ್ರ ಇವೆ. ತನ್ನ ಹೆಸರನ್ನು ಕೊನೆಯ ಪದದಲ್ಲಿ ಹೇಳಿಕೊಂಡಿದ್ದಾನೆ.

"ಮುದ್ರಿಕಿಲ್ಲದ ಪದ ಮೂವತ್ತು ಕೇಳಿದರೆ ।
ಮಗ್ಗಲೂರ ಚೆನ್ನಬಸವಣ್ಣ ಕೋಲು ॥
ಮಗ್ಗಲೂರಾನೆ ಚೆನ್ನಬಸವಣ್ಣ ಹೇಳಿದ ।
ಪದನಾಡ ಮೇಗೆಲ್ಲ ಹರಿದಾವು ॥ ಕೋಲು ॥

ಈ ಹೆಸರಿನಿಂದ ವೀರಶೈವ ಕವಿ ಎಂದು ತೋರುವುದು. ಇದು ಚಿತ್ರದುರ್ಗವು ಪತನವಾದ ನಂತರ ರಚಿತವಾಗಿರಬೇಕು; ಕಾಲ ಸುಮಾರು ಕ್ರಿ.ಶ. ೧೭೮೨.

೪. ಮಹಾದೇವ ಕವಿ : ಶ್ರೀಮುರುಘ ರಾಜೇಂದ್ರ ಸ್ವಾಮಿಗಳು ಮಠದ ಗುರುಗಳಾಗಿದ್ದ ಮಹಾಲಿಂಗ ಸ್ವಾಮಿಗಳ ಚರಿತ್ರೆಯು ಪುರಾಣರೂಪವಾಗಿ ಮಹಾದೇವ ಎಂಬ ಕವಿಯಿಂದ ರಚನೆಯಾಗಿದೆ. ಈ ಗ್ರಂಥದ ಅಂತ್ಯದಲ್ಲಿ ಶಾಲಿವಾಹನ ಶಕವರುಷಂಗಳು ೧೭೪೪ನೆಯ ಪ್ರವರ್ತಮಾನಕ್ಕೆ ಸಲ್ಲುವ ಶ್ರೀಮುಖನಾಮ ಸಂವತ್ಸರದ ಭಾದ್ರಪದ ಮಾಸ ಕೃಷ್ಣಪಕ್ಷ ೮ ಪೌ ೧೨ ಗುರುವಾರ ತಾಸು ೧೨ಕ್ಕೆ ಮುಗಿದುದು ಎಂದು ಬರೆದಿದೆ.

೫. ಮುರುಗಪ್ಪ ಕವಿ : ಚಿತ್ರದುರ್ಗ ತಾಲೂಕು ಕಛೇರಿಯಲ್ಲಿ ಮುಖ್ಯ ಗುಮಾಸ್ತರಾಗಿದ್ದರು, ಚಿತ್ರದುರ್ಗದಿಂದ ಹೊರಡುತ್ತಿದ್ದ 'ವೃತ್ತಾಂತ ರತ್ನಾಕರ' ಎಂಬ ವಾರಪತ್ರಿಕೆಯ ಉಪ ಸಂಪಾದಕರಾಗಿದ್ದರು. ಶ್ರೇಷ್ಠ ಕವಿಗಳಾಗಿದ್ದ ಇವರು ರಚಿಸಿದ ಗ್ರಂಥಗಳು ಉಪಲಬ್ದವಿಲ್ಲ.

೬. ಲಾಳಸಿಂಗಿ ಸೋಮಣ್ಣ : ಚಿನ್ಮೂಲಾದ್ರಿಯ ಚಂಪಕಾ ಪರಮೇಶ್ವರನ ಭಕ್ತರು ವಕೀಲರ ಬಳಿ ಗುಮಾಸ್ತರಾಗಿದ್ದರು. ರುಕ್ಮಾಂಗದ ಚರಿತ್ರೆ, ಸ್ಮರವಿಜಯ, ಲಖಿತಲೀಲಾ, ಲಕ್ಷ್ಮೀ ಸ್ವಯಂವರ ಮುಂತಾದ ಯಕ್ಷಗಾನ, ಬಯಲು ನಾಟಕಗಳನ್ನು ರಚಿಸಿರುವರು. 'ಹಗಲು ಕಗ್ಗೊಲೆಯ ಮಾನ್ಯ' ಎಂಬ ಈ ಲೇಖಕನ ಗದ್ಯಕತೆಯನ್ನು ಒಂದೇ ದಿನದಲ್ಲಿಯೇ ಸಾಂಗತ್ಯ ರೂಪದಲ್ಲಿ ಬರೆದುಕೊಟ್ಟರು ಎಂದು ತಿಳಿದುಬರುತ್ತದೆ.

ಚಿತ್ರದುರ್ಗ ಪರಿಸರದಲ್ಲಿ ಈ ಮೆಲಿನ ಕವಿಗಳು ಮಾತ್ರವೇ ಕಂಡುಬರುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಪ್ರಕಟಿತ ಹಸ್ತಪ್ರತಿಗಳು ಮತ್ತು ಅಪ್ರಕಟಿತ ಹಸ್ತಪ್ರತಿಗಳನ್ನು ಕೂಡ ತೆಗೆದುಕೊಂಡಿರುವುದರಿಂದ ಈ ಕವಿಗಳ ಉಲ್ಲೇಖವನ್ನು ಇಲ್ಲಿ ಮಾಡಲಾಗಿದೆ. ಚಿತ್ರದುರ್ಗ ಪರಿಸರದಲ್ಲಿ ಈ ಹಿಂದಿನದ್ದನ್ನು ಗಮನಿಸಿದ್ದಾಗ ಯಾವುದೇ ಕೃತಿಯನ್ನು ಸ್ವತಂತ್ರವಾಗಿ ರಚಿಸಿರುವ ಕವಿಗಳ ಕೃತಿಗಳು ನಮಗೆ ದೊರೆಯುವುದಿಲ್ಲ; ಕಾರಣ ಅವರೇ ಬರೆದ ಕೃತಿಗಳು ಇಲ್ಲಿಯವರೆಗೂ ಎಲ್ಲಿ ಮರೆಯಾಗಿ ಹೋಗಿವೆ ಎಂಬುದು ಮತ್ತು ಯಾವುದೇ ಹಸ್ತಪ್ರತಿಗಳನ್ನು ಸಂಗ್ರಹ ಮಾಡುವ ಸಂಗ್ರಹಣಕಾರರಿಗೆ ದೊರೆಯದೇ ಹೋಗಿವೆ. ಕಾರಣ ಅವು ಬೆಂಕಿಯ ಪಾಲೋ ಇಲ್ಲವೇ ನೀರಿನ ಪಾಲೋ ಅಥವಾ ಎಣ್ಣೆಗೆ ಬಿದ್ದು ನಾಶವಾಗಿರಬಹುದು. ಇದ್ದರೆ ಅವುಗಳನ್ನು ಕೆಲವರು ದೇವರ ಸಮಾನವೆಂದು ಪೂಜಿಸುತ್ತಿರಲೂಬಹುದು. ಹಾಗಾಗಿ ಕವಿಗಳೇ ಬರೆದ ಕೃತಿಗಳು ನಮಗೆ ದೊರೆಯುವುದು ಆಸಾಧ್ಯದ ಮಾತೇ ಆಗಿದೆ. ಹಾಗೆನಾದರೂ ದೊರೆತರೆ ನಮ್ಮ ಪುಣ್ಯವೇ ಸರಿಯೆಂದು ಹೇಳಬಹುದು. ನಾನು ಸಹ ಕ್ಷೇತ್ರಕಾರ್ಯ ಕೈಗೊಂಡಾಗಲೂ ಸಹ ಯಾವುದೇ

ಕವಿಗಳು ಬರೆದ ಕೃತಿಗಳು ದೊರೆಯಲಿಲ್ಲ. ಹಾಗಾದರೆ ಕವಿಗಳು ಬರೆದ ಕೃತಿಗಳು ಎಲ್ಲಿಗೆ ಹೋದವು? ಎಂಬುದು ಒಂದು ಪ್ರಶ್ನೆಯಾಗಿಯೇ ಉಳಿದುಕೊಂಡಿರುವುದನ್ನು ನಾವು ನೋಡಬಹುದು.

೭.೩ ಲಿಪಿಕಾರರು :

ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಸಂಸ್ಕೃತಿಯ ತೇರನ್ನು ನಿರಂತರವಾಗಿ ಎಲ್ಲೂ ತಪ್ಪದೆ ನಮ್ಮಲ್ಲಿಗೆ ಬಿಟ್ಟಿರುವವರು ಈ ಲಿಪಿಕಾರರು. ಇವರ ಕೊಡುಗೆ ಅಪಾರ; ಕವಿಗಿಂತ ಒಂದು ಪಾಲು ಹೆಚ್ಚು ಕವಿಯ ಸಂದೇಶವನ್ನು ಶಾಶ್ವತವಾಗಿ ಸಾರುವ ವಾಹಕರು ಇಂದು ನಾಡಿನಾದ್ಯಂತ ಸಿಗುತ್ತಿರುವ ಹಸ್ತಪ್ರತಿಗಳ ಮೂಲಕ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದೇವೆಂದರೆ ಅದಕ್ಕೆ ಕಾರಣ ಈ ಲಿಪಿಕಾರರು. ಇವರು ತಮಗೆ ಸಿಕ್ಕಿರುವಂತಹ ಹಸ್ತಪ್ರತಿಗಳನ್ನು ಶ್ರಮವಹಿಸಿ ಬರೆದು ಅವು ಮುಂದಿ ಜನಾಂಗದವರಿಗೂ ಸಹ ದೊರಕುವಂತೆ ಮಾಡಿದ್ದಾರೆ. "ಕವಿ ಕಾವ್ಯವನ್ನು ಹೇಳುತ್ತಾನೆ ಇಲ್ಲವಾದರೆ ಬರೆಯುತ್ತಾನೆ; ಅವನು ಹೇಳಿದ್ದನ್ನು ಬರೆದುಕೊಳ್ಳವವನು ಲಿಪಿಕಾರ, ಅವನು ಬರೆದದನ್ನು ನಕಲು ಮಾಡುವವನು ಲಿಪಿಕಾರ"[೭]

ಲಿಪಿ ಎಂಬ ಪದಕ್ಕೆ ಪಂಡಿತಕವಲಿಯವರು ಕಸ್ತೂರಿ ಕೋಶದಲ್ಲಿ ಈ ರೀತಿ ವಿವರಣೆ ನೀಡಿದ್ದಾರೆ "ಲಿಪಿ ಎಂದರೆ ಬರಹ, ಲೇಖನ, ಚಿತ್ರ ಬರೆಯುವಿಕೆ, ಬಣ್ಣ ಹಾಕುವಿಕೆ, ಶಿಲಾಲಿಪಿ ಮುಂತಾದ ಅರ್ಥ ಇದೆ"[೮]

ಲಿಪಿಕಾರ ಎಂಬುದಕ್ಕೆ ಬರೆದುಕೊಳ್ಳುವ ಬರಹಗಾರ, ಪ್ರತಿ ಮಾಡುವ ನಕಲುಗಾರ ಎಂಬ ಅರ್ಥಗಳಿವೆ. ಈ ಸಂದರ್ಭದಲ್ಲಿ ಲಿಪಿಕಾರ ಎಂಬುದು ಪ್ರತಿ ಮಾಡುವವ ಅಥವಾ ಬರಹಗಾರ ಎಂಬುದಕ್ಕೆ ಪರ್ಯಾಯ ಅರ್ಥವಾಗಿದೆ. "ಲಿಪಿಕಾರ ಎಂಬ ಪದವು ಕನ್ನಡದಲ್ಲಿ ಪ್ರಯೋಗವಾಗಿರುವುದು ನಮಗೆ ಗೊತ್ತಿರುವಂತೆ ಒಂದೇ ಒಂದು ಸಲ ಎಂದು ಹೇಳಬಹುದು. ಕುಮಾರವ್ಯಾಸನು ಭಾರತದ ಕಥೆಯನ್ನು ಪ್ರಾರಂಭಿಸುತ್ತ ವೀರನಾರಾಯಣನೆ ಕವಿ ಲಿಪಿಕಾರ ಕುಮಾರವ್ಯಾಸ' ಎಂದು ಹೇಳಿಕೊಂಡಿದ್ದಾನೆ. ಅಶೋಕನ ಬ್ರಹ್ಮಗಿರಿಯ ಶಾಸನದ ಅಂತ್ಯದಲ್ಲಿ "ಚಪಡೇನ ಲಿಖಿತಂ ಲಿಪಿಕರೇಣ"[೯] ಎಂಬ ವಾಕ್ಯವಿದೆ. ಚಪಡ ಎಂಬುವವನು ವೃತ್ತಿಯಲ್ಲಿ ಲಿಪಿಕಾರನಾಗಿದ್ದನು ಎಂದು ತಿಳಿದುಬರುತ್ತದೆ. ಶಾಸನದ ಅಕ್ಷರಗಳನ್ನು ಕೆತ್ತುವವನು ಕವಿ, ಹೇಳಿದುದನ್ನು ಬರೆದುಕೊಳ್ಳುವವನು ಇಬ್ಬರು ಲಿಪಿಕಾರರೆ. ಕನ್ನಡ ನಾಡಿನ ಶಾಸನಗಳಲ್ಲಿ ದೊರೆಯುವ ಪ್ರಥಮ ಲಿಪಿಕಾರ ಚಪಡ ಇವನು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಬಂದವನಿರಬೇಕೆಂದು ಡಿ.ಎಲ್. ನರಸಿಂಹಾಚಾರ್ ಅವರು ಅಭಿಪ್ರಾಯಪಡುತ್ತಾರೆ. ಲಿಪಿಕಾರ ಎಂದರೆ ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಹೇಳುವಂತೆ ಹಸ್ತಪ್ರತಿಗಳ ನಕಲುಗಳನ್ನು ಕಂಟ, ಕುಂಚ ಮೊದಲಾದ ಲೇಖನಿಗಳ ಸಹಾಯದಿಂದ ಕೊರೆಯುವವ ಅಥವಾ ಬರೆಯುವವನನ್ನು ಲಿಪಿಕಾರ ಎಂದು ಕರೆಯುವರು. ವೈ.ಸಿ. ಭಾನುಮತಿಯವರು ತಮ್ಮ "ಗ್ರಂಥ ಸಂಪಾದನೆಯ

ಕೆಲವು ಅಧ್ಯಯನ" ಎಂಬ ಪುಸ್ತಕದಲ್ಲಿ ಲಿಪಿಕಾರರ ಪಾತ್ರದ ಬಗೆಗೆ ಹೇಳುತ್ತಾ ಕೈಬರಹದ ಪ್ರತಿಗಳನ್ನು ಹಸ್ತಪ್ರತಿಗಳೆಂದು, ಪ್ರತಿಯನ್ನು ಸಿದ್ಧಪಡಿಸುವವರನ್ನು ಹಸ್ತಪ್ರತಿಕಾರರೆಂದು ಕರೆಯುವುದು ರೂಢಿ"[೧೦] ಎಂದು ಹೇಳಿದ್ದಾರೆ. ಮುದ್ರಣಪೂರ್ವದ ಸಾಹಿತ್ಯ ಸಂದರ್ಭದಲ್ಲಿ ಹಸ್ತಪ್ರತಿಗಳಿಗೆ ಮತ್ತು ಹಸ್ತಪ್ರತಿಕಾರರಿಗೆ ಮಹತ್ವದ ಸ್ಥಾನವಿದ್ದಿತು. ಪ್ರಾಚೀನ ಸಾಹಿತ್ಯದ ಅಮೂಲ್ಯ ಗ್ರಂಥ ರಾಶಿ ಉಳಿದು ಬಂದಿರುವುದೇ ಹಸ್ತಪ್ರತಿಕಾರರಿಂದ. ಕವಿ ಕಾವ್ಯವನ್ನು ಸೃಷ್ಟಿಸಿದರೆ ಲಿಪಿಕಾರರು ಆ ಕಾವ್ಯವನ್ನು ಪ್ರತಿ ಮಾಡಿ ಪೋಷಿಸಿಕೊಂಡು ಬಂದಿದ್ದಾರೆ. ಹೆಚ್. ದೇವೀರಪ್ಪನವರ ಅಭಿಪ್ರಾಯವನ್ನು ವೈ.ಸಿ. ಭಾನುಮತಿ ಹೀಗೆ ಹೇಳಿದ್ದಾರೆ. "ಅನೇಕ ಪ್ರತಿಗಳನ್ನು ಬರೆಯುವುದರ ಮೂಲಕ ಈ ಪ್ರತಿಕಾರರು ಪ್ರಾಚೀನ ಸಾಹಿತ್ಯದ ಒಂದು ಬೃಹತ್ ರತ್ನಾಕರವನ್ನೇ ರಚಿಸಿದ್ದಾರೆ. ಇದಕ್ಕಾಗಿ ಪ್ರತಿಯೊಬ್ಬ ಸಾಹಿತ್ಯ ಅಭಿಮಾನಿಯೂ ಈ ಲಿಪಿಕಾರರನ್ನು ಅಭಿನಂದಿಸಬೇಕು. ಹೀಗೆ ಒಂದು ಪ್ರತಿಯಿಂದ ಮತ್ತೊಂದು ಪ್ರತಿ ಹುಟ್ಟಿಕೊಳ್ಳುತ್ತಾ ಕಾಲಾದೇಶಗಳನ್ನು ದಾಟಿ ಒಂದು ಕೃತಿ ಜೀವಂತವಾಗಿ ಉಳಿದು ಬರಲು ಸಾಧ್ಯವಾದದ್ದು ಹಸ್ತಪ್ರತಿಕಾರರಿಂದ ಎಂಬುದು ನಿಸ್ಸಂಶಯ"[೧೧] ಹಸ್ತಪ್ರತಿಕಾರರು ಹಸ್ತಪ್ರತಿಯ ರಕ್ಷಕರು; ಕನ್ನಡ ಸಾಹಿತ್ಯ ಪರಂಪರೆಯ ಪ್ರಸಾದಕರು. ಈ ಪ್ರಸಾದಕರು ಇಲ್ಲದೇ ಹೋಗಿದ್ದರೆ ಧಾರ್ಮಿಕ, ಸಾಹಿತ್ಯ, ಚರಿತ್ರೆ, ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಟೀಕಾಸಾಹಿತ್ಯ, ವೈದ್ಯಶಾಸ್ತ್ರ, ಸೂಪಶಾಸ್ತ್ರ, ಅಶ್ವಶಾಸ್ತ್ರ ಮುಂತಾದ ವೈವಿಧ್ಯಮಯವಾದ ವಿಷಯ ಸಂಪತ್ತು ಹೊರಬರದೆ ಕಾಲಗರ್ಭದಲ್ಲಿ ಕೊಳೆತು ಹೋಗುತ್ತಿತ್ತು. ಇಂದು ಆ ವಿಷಯಗಳನ್ನು ಪುನಾರಚಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದವರು ಲಿಪಿಕಾರರು ಎಂದು ಹೇಳಬಹುದು. ಹಸ್ತಪ್ರತಿಗಳಲ್ಲಿ ಕಂಡುಬರುವ ಕನ್ನಡ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ನಮಗೆ ಪರಿಚಯ ಮಾಡಿಕೊಡುವಲ್ಲಿ ಶ್ರಮ, ಶ್ರದ್ಧೆ, ಭಕ್ತಿಯಿಂದ ದುಡಿದವರು ಈ ಲಿಪಿಕಾರರು. ಹಸ್ತಪ್ರತಿ ಲಿಪಿಕಾರರು ಕವಿಯ ಕೃತಿಯನ್ನು ಪ್ರತಿ ಮಾಡುವುದರ ಮೂಲಕ ಕವಿಗಳನ್ನು, ಆ ಮೂಲಕ ನಮ್ಮ ಸಂಸ್ಕೃತಿಯನ್ನು ಬದುಕಿಸಿಕೊಟ್ಟಿದ್ದಾರೆ. ಪ್ರತಿಯೊಬ್ಬ ಲಿಪಿಕಾರನೂ ತಾನು ಕೈಗೆತ್ತಿಕೊಂಡ ಗ್ರಂಥವನ್ನು ಪ್ರತಿ ಮಾಡುವ ಮೊದಲು ಇಷ್ಟದೈವ, ಆರಾಧ್ಯದೈವ ಹಾಗೂ ಗುರುಗಳನ್ನು ಸ್ತುತಿಸುತ್ತಿದ್ದರು. ಹಾಗೂ ಶುಭಮುಹೂರ್ತ ದಿನಗಳನ್ನು ನೋಡುತ್ತಿದ್ದರು. ಇವರು ಶ್ರದ್ಧೆ ಭಕ್ತಿಯಿಂದ ಪ್ರಾಮಾಣಿಕತೆಯಿಂದ ಪ್ರತಿ ಮಾಡುವ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ. ಆದರೂ ಕೆಲವು ಸಂದರ್ಭದಲ್ಲಿ ಅವರಿಗೆ ಅರಿಯದೇ ಕೆಲವು ದೋಷಗಳು ಕೈತಪ್ಪು, ಕಿವಿತಪ್ಪು, ಕಣ್ಣು ತಪ್ಪಿನಿಂದಾಗಿ ಉಂಟಾಗುವಂತಹುದು. ಅದಕ್ಕೆ ತನ್ನ ಪ್ರಾಮಾಣಿಕತೆಯಿಂದ ಇವರು ಗ್ರಂಥಗಳ ಕಡೆಯಲ್ಲಿ ಪ್ರತಿ ಮಾಡುವಾಗ ಮರವು, ಆಲಸ್ಯಗಳಿಂದ ಸಂಭವಿಸಿದ ಸ್ಖಾಲಿತ್ಯಗಳನ್ನು ಸರಿಪಡಿಸಿ ಓದಿಕೊಳ್ಳಬೇಕೆಂದು ವಿನಯದಿಂದ ಹೇಳಿಕೊಂಡಿರುವುದನ್ನು ನೋಡಬಹುದು. ಇದನ್ನು ಲಿಪಿಕಾರರ ಆದರ್ಶಗಳು ಎಂದು ಗುರುತಿಸಬಹುದು. ಈ ಆದರ್ಶಗಳಿಂದ ಲಿಪಿಕಾರರ ಮನೋಧರ್ಮವನ್ನು ತಿಳಿಯಬಹುದು. "ಇಲ್ಲಿ ಲಿಪಿಕಾರನು ಯಾವ ಮಾತೃಕೆಯನ್ನು ಪ್ರತಿ ಮಾಡುತ್ತಾನೋ ಅದರಲ್ಲಿರುವಂತೆಯೇ

ಬರೆಯುವುದು ತನ್ನ ಕೆಲಸವೆಂದು ಅದರಲ್ಲಿ ತಪ್ಪಿರಲಿ ಇಲ್ಲದಿರಲಿ ಅದರಂತೆ ಬರೆದೆ, ಇದರಲ್ಲಿ ತನ್ನ ದೋಷವೇನೂ ಇಲ್ಲ"[೧೨] ಎಂಬುದು ಇದರ ಮೂಲಕವಾಗಿ ಅವರು ಮೂಲಮಾತೃಕೆಗೆ ಎಷ್ಟು ಪ್ರಾಮಾಣಿಕವಾಗಿದ್ದರೆಂಬುದನ್ನು ನೋಡಬಹುದು. ಹಾಗೆಯೇ ಪ್ರತಿ ಮಾಡಿದ ಲಿಪಿಕಾರರನ್ನು ಆಗಿನ ಜನಸಮುದಾಯ ಪ್ರೀತಿ, ವಿಶ್ವಾಸ ಹಾಗೂ ಗೌರವದಿಂದ ಕಾಣುತ್ತಿತ್ತು. "ಸಂಸ್ಕೃತಿಯ ಸಂವರ್ಧನೆಗಾಗಿ ದುಡಿದ ಲಿಪಿಕಾರರನ್ನು ನಾಡಿನ ಜನತೆ ತುಂಬಾ ಅಭಿಮಾನದಿಂದ ಸ್ನೇಹ ಸೌಹಾರ್ದತೆಯಿಂದ ನಡೆಸಿಕೊಂಡ ರೀತಿ ತುಂಬಾ ಮೌಲಿಕವಾಗಿದೆ"[೧೩] ಎಂಬುದರ ಮೂಲಕ ಲಿಪಿಕಾರರಿಗೆ ಸಮಾಜದಲ್ಲಿದ್ದ ಸ್ಥಾನವನ್ನು ಗಮನಿಸಬಹುದು. ಲಿಪಿಕಾರರು ಲಿಪಿಗೈಯುವುದರೊಂದಿಗೆ ಇನ್ನಿತರ ಕಾಯಕಗಳನ್ನು ಅನುಸರಿಸುವುದರೊಂದಿಗೆ ಬರೆಯುವ ಕಾಯಕವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಲಿಪಿಕಾರರು ತಮ್ಮ ಸ್ಥಳದ ಹೆಸರು ತಂದೆಯ ಸಂತತಿಯೊಂದಿಗೆ ಇಂಥವರ ಮಗ ಇವರ ಉದರದಲ್ಲಿ ಜನಿಸಿರುವೆನು. ನನ್ನ ಹೆಸರು ಚನ್ನವೀರದೇವರು. ಗುರುಲಿಂಗದೇವರು ಮತ್ತು ಈರಪ್ಪ ಎಂಬುದಾಗಿ ತಿಳಿಸುತ್ತಾರೆ. ಇವರು ವೃತ್ತಿಯೊಂದಿಗೆ ಹಲವು ಕಾಯಕಗಳಲ್ಲಿ ಪರಿಣಿತರಾಗಿದ್ದುದನ್ನು ನೋಡಬಹುದು.

ಉದಾ: "ಕಿರಗಾವ ಸ್ಥಳದ ಶಾನುಭೋಗ ಮಲ್ಲಯ್ಯನವರ ಮಗ ಲಿಂಗಯ್ಯನವರ ಮಗ ದೇವಯ್ಯ.... ಅರಮನೆ ರಾಯಸ ಕಾಳೈಯ್ಯನ ಮಗ ರಾಮಯ್ಯ ಹಟ್ಟಿರಾಯಸ್ತ ವೆಂಕಣ್ಣನ ಮಗ ರಂಗಪ್ಪನು"[೧೪] ಹಸ್ತಪ್ರತಿಗಳು ಇಂದಿಗೂ ಉಳಿದುಕೊಂಡು ಬಂದಿರುವುದಕ್ಕೆ ಲಿಪಿಕಾರರು ಪೋಷಕರು ಪ್ರಮುಖವಾಗಿದ್ದಾರೆ. ಹಸ್ತಪ್ರತಿಗಳು ತಾಳೆಪ್ರತಿ, ಕೋರಿಕಾಗದ ಮತ್ತು ಕಾಗದ ಪ್ರತಿಗಳ ರೂಪದಲ್ಲಿರುವುದರಿಂದ ಪೂರ್ವಕಾಲದ ವಿಚಾರಗಳೆಂದೂ ಇಂದಿಗೂ ಸತ್ಯ ಎನ್ನುವ ನಂಬಿಕೆಯಿದೆ. ಹಸ್ತಪ್ರತಿಗಳು ಇತ್ತೀಚಿನ ದಿನಗಳಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಲಿಪಿಕಾರರಲ್ಲಿ 'ವಾಲೆ ಶಾಂತಯ್ಯ'ರವರು ಹಸ್ತಪ್ರತಿಯ ಮೊದಲ ಲಿಪಿಕಾರನೆಂದೆನಿಸಿಕೊಂಡಿದ್ದಾನೆ. ವಿಶ್ವನಾಥನು ತನ್ನ ಎರಡು ಕೈಗಳನ್ನು ಬಳಸಿಕೊಂಡು ಬರೆಯುತ್ತಿದ್ದನು ಎಂಬುದಾಗಿ ತಿಳಿದುಬಂದಿದೆ. ಈತನು ಒಂದು ಕೈ ಸೋತರೆ ಮತ್ತೊಂದು ಕೈಯಲ್ಲಿ ಬರೆಯುತ್ತಿದ್ದನು. ಮಲ್ಲಿನಾಥನು ಏಕಕಾಲದಲ್ಲಿಯೇ ಎರಡು ಕೈಗಳಿಂದ ಎರಡು ಪ್ರತಿಗಳನ್ನು ಬರೆಯುವ ಕೌಶಲ ಪ್ರವೃತ್ತಿಯನ್ನು ಹೊಂದಿದ್ದನು. ಕೇಶಿದಂಡನಾಯಕ, ರಾಮನಾಥ, ಬ್ರಹ್ಮ ಮತ್ತು ಲಕ್ಷ್ಮೀನರಸಿಂಹ ಇವರೆಲ್ಲರೂ ಬಹುಪರಿಣಿತರಾಗಿದ್ದರು.

ಲಿಪಿಕಾರರ ವರ್ಗೀಕರಣ

ಡಿ.ಎಲ್. ನರಸಿಂಹಾಚಾರ್ ಅವರ ಪ್ರಕಾರ

೧. ವೃತ್ತಿನಿರತ ಲಿಪಿಕಾರರು

೨. ವೃತ್ತಿನಿರತರಲ್ಲದ ಲಿಪಿಕಾರರು ಎಂದು ಎರಡು ವಿಧಗಳಾಗಿ ವಿಂಗಡಿಸಿದ್ದಾರೆ.

ಎಂ.ಎಂ. ಕಲಬುರ್ಗಿ ಅವರ ಪ್ರಕಾರ

೧. ನಿಯುಕ್ತ ಲಿಪಿಕಾರರು

೨. ಹವ್ಯಾಸಿ ಲಿಪಿಕಾರರು

೩. ವೃತ್ತಿ ಲಿಪಿಕಾರರು

ಬಿ.ಕೆ. ಹಿರೇಮಠ ಅವರ ಪ್ರಕಾರ

ಲಿಪಿಕಾರ/ಪ್ರತಿಕಾರ

೧. ವೃತ್ತಿ ಬರೆಪಕಾರರು ಇದರಲ್ಲಿ ಎರಡು ವಿಧಗಳು

೧. ನಿಯುಕ್ತ ಬರೆಪಕಾರರು

೨. ನೇಮಿತ ಬರೆಪಕಾರರು

೨. ಪ್ರವೃತ್ತಿ ಬರೆಪಕಾರರು ಎಂದು ಎರಡು ವಿಧಗಳಾಗಿ ವಿಂಗಡಿಸಿದ್ದಾರೆ. ಎಚ್. ದೇವೀರಪ್ಪ (ಸ್ವಲ್ಪ ಮಾರ್ಪಾಡಿನೊಂದಿಗೆ)ಸೀತಾರಾಮ ಜಾಗೀರದಾರ್ ಮತ್ತು ಬಿ.ಆರ್. ಹಿರೇಮಠ ಇವರುಗಳು ಎಂ.ಎಂ. ಕಲಬುರ್ಗಿ ಅವರ ವರ್ಗೀಕರಣವನ್ನೇ ತಮ್ಮ ಗ್ರಂಥ ಮತ್ತು ಲೇಖನಗಳಲ್ಲಿ ಬಳಸಿಕೊಂಡಿದ್ದಾರೆ. ಅಂದರೆ ಸ್ವಲ್ಪ ಹೆಚ್ಚುಕಡಿಮೆ ಈ ವರ್ಗೀಕರಣವನ್ನೇ ವಿದ್ವಾಂಸರು ಒಪ್ಪಿಕೊಂಡಿದ್ದಾರೆ ಎಂದು ಬಿ.ಕೆ. ಹಿರೇಮಠ ಅವರು ಹೇಳುತ್ತಾರೆ.[೧೫]

ಹಸ್ತಪ್ರತಿಗಳ ಉತ್ಪಾದನೆಗೆ ಅತಿಮುಖ್ಯವಾಗಿ ಇಬ್ಬರು ಕಾರಣರಾಗಿರುತ್ತಾರೆ. ಅವರಲ್ಲಿ ಮೊದಲಿಗ ಪ್ರತಿ ಮಾಡಿಸಿದಾತ. ಈತನನ್ನು ಸಹೃದಯ ಇಲ್ಲವೇ ಓದುಗ ಎಂದು ಕರೆಯಬಹುದು. ಇನ್ನೊಬ್ಬಾತ ಪ್ರತಿ ಮಾಡಿದಾತ; ಈತನನ್ನು ಲಿಪಿಕಾರ ಎಂದು ಕರೆಯುತ್ತಾರೆ. ಈ ಲಿಪಿಕಾರರಲ್ಲಿ ನಿಯೋಜಿತ, ಹವ್ಯಾಸಿ, ವೃತ್ತಿ ಎಂದು ಮೂರು ರೀತಿಯಲ್ಲಿ ಲಿಪಿಕಾರರು ಕಂಡು ಬರುತ್ತಾರೆ. ಪ್ರಸ್ತುತ ಮಹಾಪ್ರಬಂಧಕ್ಕೆ ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಮೂರು ವರ್ಗಕ್ಕೆ ಸೇರಿದ ಲಿಪಿಕಾರರನ್ನು ಕ್ಷೇತ್ರಕಾರ್ಯ ಮಾಡಿ ಹಾಗೂ ಈಗಾಗಲೇ ಮುರುಘರಾಜೇಂದ್ರ ಮಠದಿಂದ ಪ್ರಕಟಗೊಂಡ ಹಸ್ತಪ್ರತಿ ಸೂಚಿ ಸಂಪುಟ ೧. ಹಾಗೆಯೇ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ ಸಂಪುಟ–೨ನ್ನು ಬಳಸಿಕೊಳ್ಳಲಾಗಿದೆ. ಜಿಲ್ಲೆಯ ಲಿಪಿಕಾರರು ಹೇಳಿಕೊಂಡಿರುವ ಮಾಹಿತಿಯನ್ನು ನೋಡಿದರೆ ಈ ಪ್ರದೇಶದ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಅಧ್ಯಯನಕ್ಕೆ ಆಕರ ಒದಗಿರುವುದು ಕಂಡುಬರುತ್ತದೆ. ಇಲ್ಲಿಯ ಲಿಪಿಕಾರರಿಗೆ ಅಡ್ಡ ಹೆಸರುಗಳಿವೆ. ಕೆಲವು ಜನ ಶಿಕ್ಷಕರಿದ್ದಾರೆ. ಪುರಾಣಿಕರಿದ್ದಾರೆ. ಗ್ರಾಮೀಣ ಪ್ರದೇಶದ ಸ್ಥಳೀಯ ಆಡಳಿತಗಾರರಾಗಿದ್ದ ಗೌಡರು, ಕುಲಕರ್ಣಿಗಳು ಆಗಿದ್ದಾರೆ. ಧಾರ್ಮಿಕ ಸಂಸ್ಥೆಗಳಾದ ಮಠಗಳ ಭಕ್ತರಾಗಿಯೂ ಕಂಡುಬರುತ್ತಾರೆ. ಹೀಗೆ ಲಿಪಿಕಾರರನ್ನು ಕುರಿತು ಅಧ್ಯಯನ ಮಾಡುವ ಮೂಲಕ ಅವರ ಆಶಯಗಳು ಉದ್ದೇಶಗಳು ಮನೋಧರ್ಮಗಳನ್ನು ತಿಳಿದುಕೊಳ್ಳಬಹುದಾಗಿದೆ. ಹಾಗೂ

ಪ್ರತಿ ಮಾಡಿದ ಕಾಲ ತಿಳಿಯುವುದರಿಂದ ಒಂದು ಗ್ರಂಥದ ಪಾಠ ಆಯಾ ಕಾಲದಲ್ಲಿ ಯಾವ ರೂಪದಲ್ಲಿದ್ದಿತು. ಪ್ರತಿ ಮಾಡುವ ಕೆಲಸ ಯಾವ ಊರಿನಲ್ಲಿ, ಮಠದಲ್ಲಿ ನಡೆಯಿತೆನ್ನುವುದನ್ನು ತಿಳಿಯಬಹುದಾಗಿದೆ.

ಚಿತ್ರದುರ್ಗ ಪರಿಸರದಲ್ಲಿ ಕಂಡುಬರುವ ಲಿಪಿಕಾರರನ್ನು ಮೂರು ರೀತಿಯಲ್ಲಿ ವರ್ಗೀಕರಿಸಬಹುದು.

೧. ಹವ್ಯಾಸಿ ಲಿಪಿಕಾರರು

೨. ನಿಯುಕ್ತ ಲಿಪಿಕಾರರು

೩. ವೃತ್ತಿ ಲಿಪಿಕಾರರು

ಈ ಮೇಲಿನಂತೆ ವಿಭಿನ್ನ ಲಿಪಿಕಾರರನ್ನು ವರ್ಗೀಕರಿಸಿಕೊಂಡಿದ್ದು, ಅವರ ವಿವರಣೆಯನ್ನು ಮುಂದೆ ನೋಡಬಹುದಾಗಿದೆ.

೧. ಹವ್ಯಾಸಿ ಲಿಪಿಕಾರರು : "ಹವ್ಯಾಸಿ ಲಿಪಿಕಾರರ ಸಂಖ್ಯೆಯನ್ನು ಹೆಚ್ಚಾಗಿ ನೋಡಬಹುದು. ಇವರು ತಮ್ಮ ಸ್ವಪ್ರಯೋಜನಕ್ಕಾಗಿ, ಪರರ ಪ್ರಯೋಜನಕ್ಕಾಗಿ, ತಮ್ಮ ಜ್ಞಾನಾರ್ಜನೆಗಾಗಿ ತಮ್ಮ ಕುಟುಂಬದವರಿಗಾಗಿ ಬರವಣಿಗೆ ಕಾರ್ಯವನ್ನು ಪೂರೈಸಿದ್ದಾರೆ".[೧೬] ಹಾಗೆಯೇ ಬೇರೆಯವರಿಂದ ಗ್ರಂಥಗಳನ್ನು ಬರೆಯಿಸಿ ತಮ್ಮ ಉದ್ದೇಶವನ್ನು ಈಡೇರಿಸಿಕೊಂಡಿರುವುದನ್ನು ನೋಡಬಹುದು. ಸಾಮಾನ್ಯವಾಗಿ ಇವರು ವಿದ್ಯಾವಂತರಾಗಿರುತ್ತಿದ್ದರು. ಬುದ್ಧಿಪೂರ್ವಕ ಮತ್ತು ಉದ್ದೇಶಪೂರ್ವಕ ತಪ್ಪುಗಳಿಗೆ ಇವರೇ ಹೊಣೆಯಾದರೂ ನಮಗೆ ತಪ್ಪುಗಳೆನಿಸುವ ಈ ತಪ್ಪುಗಳು ಇವರ ದೃಷ್ಟಿಯಲ್ಲಿ ತಪ್ಪುಗಳಲ್ಲ. ಪಠ್ಯವನ್ನು ಗ್ರಹಿಸಲು ಮುಂದಿನ ಓದುಗರಿಗೆ ಮಾಡುವ ಅನುಕೂಲವಾಗಿರುತ್ತಿತ್ತು. ಚಿತ್ರದುರ್ಗ ಪರಿಸರದಲ್ಲಿಯೂ ಸಹ ಹವ್ಯಾಸಿ ಲಿಪಿಕಾರರು ಕಂಡುಬರುತ್ತಾರೆ.

ಹವ್ಯಾಸಿ ಲಿಪಿಕಾರರು ತಮ್ಮ ಸ್ವಂತಕ್ಕಾಗಿ ಗ್ರಂಥಗಳನ್ನು ಬರೆದುಕೊಂಡಿರುವುದು

* ರೌದ್ರಿ ಸಂವತ್ಸರದ ವೈಶಾಖ ಬಹುಳ ೨ ಸೋಮವಾರ ಯಿ ಆರಾಧ್ಯ ಚರಿತ್ರವನ್ನು ನಣಂಜಿಯ ಸಿಂಹಾಸನಾಗ್ರಣ್ಯರಾದ ಮರುಳವೀರಂಣೊಡೆದೇವರು ಅವರ ಕರಕಂಜೋದ್ಭವರು ಜಕ್ಕಡಹಳ್ಳಿಯ ವೀರಂಣೊಡ್ಡೆದೇವರು ಅವರ ಹಸ್ತಸಂಭವರು ಮರುಳಸಿದ್ಧದೇವರ ಅವರ ಕರಬಿಸರುಹರ ಚಂದ್ರಶೇಖರ ದೇವರು ಆ ಚಂದ್ರಶೇಖರ ದೇವರ ಕರಕಮಲದಲ್ಲಿ ಉತ್ಪತ್ತಿಯಾದ ವೀರಮಾಹೇಶ್ವರಾಚಾರ್ಯರ ಭೃತ್ಯರಾದ ವಿರಕ್ತಮಠ ಸಿದ್ದದೇವರು ತಮಗೆ ಬರೆದುಕೊಂಡ ಪುಸ್ತಕವಿದು.[೧೭] (ಕ್ರ.ಸಂ. ೫೧೪)

ವೀರಮಹೇಶ್ವರಾಚಾರ್ಯರ ವಿರಕ್ತ ಮರುಳ ಸಿದ್ಧದೇವರು ಆರಾಧ್ಯಚಾರಿತ್ರ್ಯವನ್ನು ತಮಗೆ ತಮ್ಮ ಸ್ವಂತಕ್ಕಾಗಿ ಬರೆದುಕೊಂಡಿದ್ದಾರೆ. ಹಾಗಾಗಿ ಇವರನ್ನು ಹವ್ಯಾಸಿ ಲಿಪಿಕಾರರೆಂದು ಹೇಳಬಹುದು.

* "ಸರ್ವಧಾರಿ ಸಂವತ್ಸರದ ಶ್ರಾವಣ ಬ ೫ ಲೂ ಅರುಟಾಳ ಮಠದ ಶಾಂತದೇವರ ಶಿಷ್ಯರು ಕೆಂಚಸಿದ್ದೆಯ ದೇವರು ಹಣಬೆಮಠದ ಚೆಂ.ನ. ವೀರಣೊಡೆದೇವರ ಶಿಷ್ಯ ಸಿದ್ಧಯ್ಯನಿಗೆ ಬರದ ಏಕೋತ್ತರ[೧೮] (ಕ್ರ.ಸಂ. ೭೫೨)

ಅರುಟಾಳ ಮಠದ ಶಾಂತ ದೇವರು ಮತ್ತು ಕೆಂಚಸಿದ್ದೆಯ ದೇವರು ಹವ್ಯಾಸಿ ಲಿಪಿಕಾರರಾಗಿದ್ದು ಹಣಬೆಮಠದ ಚೆಂನವೀರಣೊಡೆ ದೇವರ ಶಿಷ್ಯನಾದ ಸಿದ್ಧಇಯ್ಯನಿಗೆ ಏಕೋತ್ತರ ಬರೆದು ಕೊಟ್ಟಿರುವುದನ್ನು ನೋಡಬಹುದು.

* ದುಂದುಬಿ ಸಂಮ್ಮಸರದಾ ವೈಶಾಖ ಶು೨ಗೆ ಸೋಮವಾರ ದಿವಸ ಸಮಾಪ್ತಂ.. ಶ್ರೀ ಮಹಾರಾಜನದುರ್ಗದ ಕಲ್ಲೇನಿಂಗಯ್ಯನಮಗ ಕಲ್ಲೈಯನಮಗ ಸಿದ್ಧರಾಮನು ಓದಿಕೊಳದಕ್ಕೆ ಹಸ್ತಂತ್ರಬರದ ಬರಹ[೧೯] (ಕ್ರ.ಸಂ. ೮೨೦) ಕಲ್ಲೈಯನ ಮಗನಾದ ಸಿದ್ಧರಾಮನು ಹವ್ಯಾಸಿ ಲಿಪಿಕಾರನಾಗಿದ್ದು ತಾನು ಓದಿಕೊಳ್ಳುವುದಕ್ಕೆ ಕದಂಬ ನೀತಿಮಾಲಿಕೆ ಕೃತಿಯನ್ನು ಬರೆದು ಕೊಂಡಿದ್ದಾರೆ.

* ಈಶ್ವರ ಸಂವತ್ಸರದ ಜೇಷ್ಟ ಬಹುಳ ಬಿದಿಗೆ ಬೃಹಸ್ಪತಿವಾರ ತಾಸು ೬ಕ್ಕೆ ಗಿರುಜೆ ಪುಸ್ತಕ ಮುಗಿತು ಶ್ರೀ ದಕ್ಷಿಣಕಾಸಿ ಹರಿಹರ ಆವಿರಿಗೊಳ ಸಿಂಹಾಸನಾಧೀಶ್ವರಾದಂಥ ಪಡುವಿಡಿ ರಾಮಗಟ್ಟಿದ ಚರಮೂರ್ತಿ ಬಸವಲಿಂಗ ದೇವರ ಪಾದದಲ್ಲಿ ಹುಟ್ಟಿದ ಮರಿಬಸವಲಿಂಗ ದೇವರು ಬರದೋದಿ ಪೇಳಿದರು ಈ ಗಿರುಜೆ ಸಂವಾದ ಸಂಪೂರ್ಣ ವಿದ್ಯೆ ಗುರುವಿನ ಪಾದವೆಗತಿ[೨೦] (ಕ್ರ.ಸಂ. ೧೨೩೫) ಮರಿಬಸವಲಿಂಗ ದೇವರು ಹವ್ಯಾಸಿ ಲಿಪಿಕಾರರಾಗಿದ್ದು ಇವರು ಗಂಗೆಗಿರಿಜೆ ಸಂವಾದ ಕೃತಿಯನ್ನು ಬರೆದು ಓದಿ ಹೇಳುತ್ತಿರುವುದನ್ನು ನಾವು ಕಾಣಬಹುದಾಗಿದೆ.

* ನಂದನ ಸಂವತ್ಸರ ಮಾಘ ಶುದ್ಧ ೧೩ನೇ ಸೋಮವಾರ ದೊಡ್ಡೇರಿ ಹಿರಿ xx ದೇವರು ನಮಶ್ಯಾಂತ ಪ್ರೀತಿ ಭಕ್ತರಾದ ಚಿತ್ರದುರ್ಗದ ದೇವಶೆಟ್ಟಿ ಕೊಟ್ಟೂರಪ್ಪನವರಮಗ ಮರಿ ಕೊಟ್ಟುರಪ್ಪನು ಪ್ರತಿಸಾಂಧ್ಯಾಕಾಲದಲ್ಲು ಹಾಡಿಹರಸಿ ಪಠಿಸಿ ಓದಿಸಿ ಸ್ಮರಿಸಿ ನಿತ್ಯ ಸದ್ಯೋನ್ಮುಕ್ತರಾಗಲಿಯೆಂದು ಧನ ಧಾನ್ಯ ಸಮೃದ್ಧಿ ಧೀರ್ಘಾಯುರೋಗ್ಯ ಅಷ್ಟೈಶ್ವರ್ಯರಾಗಲಿಯೆಂದು ಗಣಸಹಸ್ತ್ರ ನಾಮವ ಬರೆದುಕೊಟ್ಟ.[೨೧] (ಕ್ರ.ಸಂ. ೨೨೫೪) ಕೊರಟಗೆರೆ ಚನ್ನಬಸಪ್ಪನು ದೇವಶೆಟ್ಟಿ ಕೊಟ್ಟೂರಪ್ಪನವರ ಮರಿಮಗನಾದ ಕೊಟ್ಟೂರಪ್ಪನಿಗೆ ಆಯುರಾರೋಗ್ಯ ಸಕಲ ಸೌಭಾಗ್ಯವನ್ನು ಹರಸಿ ಹಾಗೂ ಅಷ್ಟೈಶ್ವರ್ಯರಾಗಲಿಯೆಂದು ಈ ಗಣಸಹಸ್ರನಾಮ ಕೃತಿಯನ್ನು ಬರೆದು ಕೊಟ್ಟಿರುತ್ತಾರೆ.

* ಶ್ರೀ ಮನ್ಮಹಾನೃಪ ಶಾಲಿವಾಹನ ಶಖ ವರುಷಗಳು ೧೭೭೧ನೆ ಪ್ರವರ್ತಮಾನಕ್ಕೆ ಸಲುವ ಅಕ್ಷಯನಾಮ ಸಂವತ್ಸರದ ಮಾಘ ಶು೫ಯಂದು ವಾರದಲ್ಲು ದೊಡೇರಿ ಹಿರೇಮಠದ ಮುದ್ವೀರಾಖ್ಯರೂ ನಂಮ್ಮಾತ್ಯಂತ್ತ ಪ್ರೀತಿಯುಕ್ತರಾದ ಚಂನಮನಾಗತಿಹಳ್ಳಿಯಲ್ಲಿರುವ ತುಪ್ಪಾದ ತಿಪ್ಪಂಣನ ಮಗನಾದ ವೀರಂಣಗೆ ಹರಶಿ ಬರಕೊಟ್ಟ ಚಂ.ನ....ಕ್ಕೆ ಶುಭಮಸ್ತು[೨೨] (ಕ್ರ.ಸಂ. ೨೨೮೨)

ದೊಡೇರಿ ಹಿರೇಮಠದ ಮುದ್ವೀರಾಖ್ಯಾರೂ ಹವ್ಯಾಸಿ ಲಿಪಿಕಾರರಾಗಿದ್ದು. ಇವರು ಚಂನಮನಾಗತಿ ಹಳ್ಳಿಯಲ್ಲಿಯಿರುವ ತುಪ್ಪದ ತಿಪ್ಪಂಣನ ಮಗನಾದ ವೀರಂಣಗೆ ಚಂನಬಸವೇಶ್ವರ ಪುರಾಣವನ್ನು ಬರೆದುಕೊಟ್ಟಿರುವರು.

* ಸ್ವಸ್ತಿ ಶ್ರೀ... ಶಾಲಿವಾಹನ ಶಖ ವರುಷಂಗಳು ೧೭೭೮ ರಾಕ್ಷಸ ಸಂವತ್ಸರದ ಆಷಾಢ ಶುದ್ಧ ೫ಯಲಲ್ಲಿ ಶ್ರೀ ಮದ್ವೇದ ವೇದಾಂತ ಪ್ರತಿಪಾದಿತ ವೀರಶೈವ ಸಮಯ ಶತಕೇಕೋತ್ತರ ಸ್ಥಲೋಕ್ತ....... ಸನ್ಮೋಹನಾಂಗ ಮದನ ಮರ್ದನ ಮಾಯಾ ಕೋಳಾಹಲ ನಿತ್ಯನಿರಂಜನ ನಿರಾಕಾರ ನಿಗಮಗೋಚರ.... ಶ್ರೀ ಮದಲ್ಲಮಪ್ರಭುಸ್ವಾಮ್ಯನ್ವಯ ಸಂಜನಿತನಾಂ ಶ್ರೀ ಮದ್ವೀರ ಶೈವಸಿದ್ಧಾಂತ ಸಕಲ ಸಿಂಹಾಸನಾಧೀಶ ಷಟುಸ್ಥಲಸ್ಥಾನಾಚಾರ್ಯವರ್ಯಣಾಂ ಶ್ರೀ ಮದ್ಗುರು ಅಡವೀಶ ಕರಜಾತಮೂರ್ತಿ ಕೂಡಲಸಂಗಮಗೆ ಮೋಕ್ಷಾರ್ಥ ಕೊಡಲ್ಪಟ್ಟಾಂಥ ಮಹಾಸ್ವಾಮಿ ಅಡವೀಶನ ಪಾದಕ್ಕೆ ಶ್ರೀ ಮತರ್ಪಮಪಾವನ ಸದ್ಗುರು ಪದ ನಖಚೆಂದ್ರ ಸಾಂದ್ರ ಚೆಂದ್ರಿಕಾ ಚಂಚ ಚಂಕೋರಾಯ ಮಾನರಾದಂಥ ಯಿಕ್ಕನೂರಮಠ ಗುರುಲಿಂಗೈಯ್ಯ ಪುತ್ರ ಶಿದ್ದಪ್ಪನ ಕುಮಾರನಾದ ಶಿವೈಯ್ಯನು ಬರೆದು ವಪ್ಪಿಸಿದ ಪ್ರಭುಲಿಂಗಲೀಲೆ[೨೩] (ಕ್ರಮ.ಸಂ ೧೪೮೩) ಶಿವೈಯನ್ನು ಶ್ರೀಮತರ್ಪಮಪಾವನ ಸದ್ಗುರು ಪದನಖ ಚೆಂದ್ರ ಸಾಂದ್ರ ಮತ್ತು ಚಂದ್ರಿಕಾರಿಗೆ ಪ್ರಭುಲಿಂಗಲೀಲೆಯನ್ನು ಬರೆದು ಒಪ್ಪಿಸಿರುದ್ದಾರೆ.

* ಸುಉುಂದರ ಪುರಾಣವ ಗುರುನಂಜೇದೇವರ ಮೊಂಮಗ ರಾಜಪುರದ ಸ್ವಾಮಿಯವರ ಕರಜಾತನಾದ ಸಂಗೈಯ್ಯನು ಹೇರೂರ ಭೋಗಿಸೆಟ್ಟಿ ಮಗ ಭೋಗೈಯ್ಯಗೆ ಸಕಲ ಸಂಪತ್ಸವು ಭಾಗ್ಯ ಹೆಚ್ಚಲಿ ಎಂದು ಬರೆದ ಪುಸ್ತಕ[೨೪] (ಕ್ರ.ಸಂ. ೩೨೪೩)

ಸಂಗೈಯ್ಯನು ಹವ್ಯಾಸಿ ಲಿಪಿಕಾರನಾಗಿದ್ದು. ಇತನು ಹೇರೂರು ಭೋಗಿಸೆಟ್ಟಿಯ ಮಗನಾದ ಭೋಗೈಯ್ಯನಿಗೆ ಸಕಲ ಸಂಪತು ಮತ್ತು ಭಾಗ್ಯವು ಹೆಚ್ಚಾಗಲಿ ಎಂದು ಸಉುಂದರ ಪುರಾಣವನ್ನು ಬರೆದಿರುವುದು ಗಮನಾರ್ಹ.

* ಸನ್ ೧೮೬೭ನೆಯ/ಸನ್‌ಮಾಹೆ ನವ್ಹಂಬರ್ ತಾರೀಖು ೨೭ ರಂದು ಹದಿನೆಂಟುನೂರ ಅರವತ್ತೇಳನೆ ಇಸವಿಗೆ ಸರಿಯಾದ ಪ್ರಭವ ಸಂ॥ರದ ಪುಷ್ಯಶುದ್ಧ ೨ಯಲ್ಲು ಶುಕ್ರವಾರ ಸೂರ್ಯ ಉದಯದ ಏಳುಗಂಟೆ ಹೊಡೆದಯಾಳೆಕಲ್ಲಿ ಚಿತ್ರದುರ್ಗ ತಾಲೂಕು ಉರುವನೂರು x ಸಭೆಯಲ್ಲಿ ಇರುವ ಸವಾಳ ಯಿಲಾಕ ಮಹಮ್ಮದ್ ಫಕುದ್ಧೀನ್ ಸಾಹೇಬರ xxx ಚಂದನಾಗಲ್ಪಂಥರುಹಂ ಅಹ್ಮದ ಭಾಷಾಸಾಹೇಬರು ಅಕ್ಷರವನ್ನು ವಾಚಿಗೆಮಾಡಿ ಕೇಳವಗೋಸ್ಕರ ಬರೆದಂಥಾ ಸುಧನ್ವನ ಕಲಿಪಾರ್ಥರ ಸಂಗ್ರಮದ ಕಾಳಗ ಬರೆವುದಕ್ಕೆ ಶುಭವಸ್ತು । ಸೂಚನೆ । ಹಿಂದುಳಿದ ನಾಪಾವಕ್ಕೆಂದು ಹಂಶಧ್ವಜಂ। ನಂದನನ ನೆಣ್ಣೆಗಾಗಿರ್ದ x ಉರಿಗೆಯೊಳ ತಂದುಕೆಡಹಿ ಸಲಚ್ಯುತನ ಧ್ಯಾನದಿಂ ತಂಪವಡೆ ದನವನಚ್ಚರಿಯನೆ.[೨೫] (ಕ್ರ.ಸಂ. ೫೧೩) ಅಹ್ಮದಭಾಷಾಸಾಹೇಬರು ಹವ್ಯಾಸಿ ಲಿಪಿಕಾರರಾಗಿದ್ದು. ತಾವೇ ಓದಿಕೊಳ್ಳುವುದಕ್ಕಾಗಿ ಸುಧನ್ವನ ಕಥೆಯನ್ನು ಬರೆದುಕೊಂಡಿರುವುದನ್ನು ಕಾಣಬಹುದು.

* ರೌದ್ರಿ ಸಂವತ್ಸರದ ಜೇಷ್ಟ ಬಹುಳ ೬ಯಲ್ಲು ಭಾನುವಾರದಿವಸ ೯ ತಾಸಿನೊಳಗೆ ಕುಮಾರ ರಾಮಾನ ಪುಸ್ತಕ ಮುಗೆಬರದರು ಯೀ ಪುಸ್ತಕಯಾರಿಗೆ ಬರದು ಕೊಟ್ಟದ್ದು ಯಂದರೆ ರಾಜೇ

ಶ್ರೀ ಹಿರೆಕೆರೆಗಳಹಳ್ಳಿ ಗೌಡರ ಕರಿಬಸಪ್ಪನವರಗರ್ಭೋದ್ಭವರಾದ ಮರುಳಪ್ಪ ಶಿದ್ಧಾಪ್ಪಗೆ ಬರದು ಕೊಟ್ಟ ಪುಸ್ತಕ.[೨೬]

ಶಿದ್ದಲಿಂಗಪ್ಪನವರ ಮಗನಾದ ಚನ್ನವೀರಪ್ಪನು ಹವ್ಯಾಸಿ ಲಿಪಿಕಾರನಾಗಿದ್ದು, ಈ ಕೃತಿಯನ್ನು ಗೌಡರ ಕರಿಬಸಪ್ಪನವರ ಮಗನಾದ ಮರುಳ ಸಿದ್ಧಪ್ಪನಿಗೆ ಬರೆದುಕೊಟ್ಟಿದ್ದಾರೆ.

* ಪ್ಲವ ಸಂ ಮಾಘ ಬ೧೦ ಶುಕ್ರವಾರದಲ್ಲೂ ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧಮಂ ಮದ್ದಗಿರಿ ಗುರಿಕಾರು ನಂಜಪ್ಪನವರ ಕುಮಾರ ಕೊಮಾರಪ್ಪನು ಬರೆದಂಥಾ ಪ್ರತಿ ಯೀ ಪ್ರತಿ ತಂಮ ಮನಿಗೆಯೆಂಬುದಾಗಿ ಬರೆದಂಥ ಪ್ರತಿಗೆ ಶುಭಮಸ್ತು[೨೭] ಕುಮಾರ ಕೊಮಾರಪ್ಪನು ಹವ್ಯಾಸಿ ಲಿಪಿಕಾರನಾಗಿದ್ದು ತನ್ನ ಮನೆಗೋಸ್ಕರವಾಗಿ ಗಿರಿಕಾ ಕಲ್ಯಾಣ ಕೃತಿಯನ್ನ ಬರೆದುಕೊಂಡಿರುವುದನ್ನು ನೋಡಬಹುದು. ಹೀಗೆ ಬೇರೆಯವರಿಂದ ಹಾಗೂ ಬೇರೆಯವರು ಹರಸಿ ಬರೆದು ಕೊಟ್ಟಿರುವುದನ್ನು ಸಹ ನೋಡಬಹುದು. ಓದಿಕೊಳ್ಳಬೇಕೆಂದು ಯಾವಾಗಲೂ ಸಕಲಸೌಭಾಗ್ಯವು ಇರಲೆಂದು ಗ್ರಂಥವನ್ನು ಬರೆದುಕೊಟ್ಟಿರುವುದನ್ನು ಹಾಗೂ ಬರೆಸಿಕೊಂಡಿರುವುದನ್ನು ನೋಡಬಹುದು.

೨. ನಿಯುಕ್ತ ಲಿಪಿಕಾರರು

"ಇವರು ಸಂಬಳ ತೆಗೆದುಕೊಂಡು ಸರಕಾರದಲ್ಲಿ ಲೇಖನ ವೃತ್ತಿ ಮಾಡುವವರೇ ಹೊರತು, ಹಸ್ತಪ್ರತಿ ನಕಲು ಕಾರ್ಯಕ್ಕಾಗಿ ನೇಮಿಸಲ್ಪಟ್ಟವರಲ್ಲ. ಮೈಸೂರು ಅರಸರ ಕಾಲಕ್ಕೆ ಇವರನ್ನು 'ಲೇಖರಿ' ಎಂದು ಕರೆಯುತ್ತಿದ್ದರು.[೨೮] ಇವರು ಬೇರೆಯವರ ಆಜ್ಞೆಯ ಮೇರೆಗೆ ಅಥವಾ ಕೋರಿಕೆಯ ಮೇರೆಗೆ ಪ್ರತಿ ಮಾಡುವವರಾಗಿದ್ದಾರೆ. ಇವರನ್ನು ರಾಯಸದವರು, ಸುಬೇದಾರ, ಶಾನುಭೋಗ, ರಾಯಸ್ತ ಎಂದು ಗುರುತಿಸಬಹುದಾಗಿದೆ. ಈ ಪ್ರತಿಕಾರರ ತಾಳ್ಮೆ, ಶ್ರದ್ಧೆ, ಭಕ್ತಿಗಳು ಅನನ್ಯ; ಒಂದೊಂದು ಗ್ರಂಥದ ಪ್ರತಿಗೂ ತಿಂಗಳುಗಟ್ಟಲೆ ನಿರಂತರ ಶ್ರಮವನ್ನು ಇವರು ಪಡುತ್ತಿದ್ದರು. ಹಾಗೆಯೇ ಯಾರು ಯಾರಿಗೆ ಏಕೆ ಬರೆದುಕೊಡುತ್ತಿದ್ದರೆಂಬ ಸಂಗತಿಗಳು ಕುತೂಹಲ ಹುಟ್ಟಿಸುತ್ತವೆ. ಚಿತ್ರದುರ್ಗ ಪರಿಸರದಲ್ಲಿಯೂ ಸಹ ಈ ನಿಯುಕ್ತ ಲಿಪಿಕಾರರನ್ನು ಕಾಣಬಹುದಾಗಿದೆ.

* ಸಾಧಾರಣ ಸಂವತ್ಸರದ ಅಧಿಕ ವೈಶಾಕ ಶುಶಿಯ ಸೌಮ್ಯವಾರ

ಗಳಿಗೆ ೧೬ರಲ್ಲು ಮೊದ್ಲಪ್ರತಿ ಯಿದ್ದಾಗ್ಯೆ ಬರದಾಯಿದ್ದೇನೆ....

ಕೊಂಡ್ಲಿಪ್ಯಾಟೆಯಲ್ಲು ಯಿರುವ ಹಂಪಸಾಗರ ಚಿಪ್ಪಿಗರ ದೊಡ್ಡ

ಬಸ್ಸೈಯನಮಗ ಶಾಂತಪ್ಪ ಶೆಟ್ಟಿಯು ಯಸಳೂರ ಪ್ಯಾಟೆಯ ವೇಮಲ ಶೆಟ್ಟಿಪ್ಪಗೆ...[೨೯] (ಕ್ರಸಂ. ೧೮೧)

ಚಿಪ್ಪಿಗರ ದೊಡ್ಡಬಸ್ಸೆಯನ ಮಗನಾದ ಶಾಂತಪ್ಪ ಶೆಟ್ಟಿಯು ಯಸಳೂರು ಪ್ಯಾಟೆಯ ವೇಮಲು ಶೆಟ್ಟಪ್ಪಗೆ ಬರೆದಿರುವುದನ್ನು ಕಾಣಬಹುದಾಗಿದೆ.

* ಶ್ರೀಮತು ವಿಳಂಬಿನಾಮ ಸಂವತ್ಸರದ ಶ್ರವಣಬಹುಳ ೧೦ ಭಾನುವಾರ ಮಹಂತ ಮಲ್ಲಿಕಾರ್ಜುನಸ್ವಾಮಿ ಪಾದಾರವಿಂದಕ್ಕೆ ಸಂಗೀತದ ಚೆಂನಬಸಪ್ಪನು ಭಕ್ತ ಪುರಸ್ಸರದಿಂದ ಬರದು ಕೊಟ್ಟ ಅನುಭವಸಾರಕ್ಕೆ ಶುಭಮಸ್ತು.[೩೦] (ಕ್ರ.ಸಂ. ೨೩೨)

ಸಂಗೀತದ ಚೆಂನಬಸಪ್ಪನು ಭಕ್ತಿ ಪೂರ್ವಕವಾಗಿ ಮಹಂತ ಮಲ್ಲಿಕಾರ್ಜುನ ಸ್ವಾಮಿಗಳಿಗೆ ಅನವಸಾರವನ್ನು ಬರೆದು ಕೊಟ್ಟಿರುವುದನ್ನು ನೊಡಬಹುದು. ಹಾಗಾಗಿ ಸಂಗೀತದ ಚೆಂನಬಸವಪ್ಪನನ್ನು ನಿಯುಕ್ತ ಲಿಪಿಕಾರರೆನ್ನಬಹುದು.

* ಶ್ರೀ ಮಚ್ಚಿನ್ಮೂಲಾದ್ರಿ ಮಠಾಂತರೆ ಅರುವತ್ತು ಮೂವರ ಪುರಾತನರ ತ್ರಿವಿಧಿ ಬಾಗಡ ಕೋಟೆ ಚಂನವೀರಪ್ಪವರಿಗೆ ಲೋಚನದ ಮುರಿಗೆಮರಿಯ ಬರಕೊಟ್ಟ ಪುಸ್ತಕ ಶ್ರೀ ಚಿನ್ಮೂಲಾದ್ರಿ ಮಠಾಂತರದಲ್ಲಿ ಲೋಚನ ಚಿದಂಬರಪ್ಪನವರು ಚನವೀರಮರಿಗೆ ಲಿಖಿತವ ಮಾಡಿ ದಯದಿಂದ ಕೊಟ್ಟುದು.[೩೧] (ಕ್ರ.ಸಂ. ೩೦೯) ಬಾಗಡ ಕೋಟೆಯ ಚಂನವೀರಪ್ಪನವರಿಗೆ ಲೋಚನದ ಮುರಿಗೆಮರಿಯವರು ಅರವತ್ತು ಮುವರ ಪುರಾತನರ ತ್ರಿವಿಧಿಯನ್ನು ಬರೆದು ಕೊಟ್ಟದ್ದಾರೆ.

* ಸ್ವಸ್ತಿ ಸಮಸ್ತವಾದ ಶಕವರುಷಂ ೧೪೪೪ಕ್ಕೆ ಸಲುವ ವ್ಯಯ ಸಂವತ್ಸರದ ಆಶ್ವಯುಜ ೭ ಮಿಯೂ ಗುರುವಾರದ ದಿವಸದಲ್ಲಿ ಪದನು ೪೨೦೭ ಪದಕ್ಕಂ ಸಂಪೂರ್ನವಾಗಿ ವೊಡೆಯರು ಭಕ್ತರ ಕೃಪೆಯಲಿ ನಿರೂಪದಿಂದ ಮಯಿಸೂರ ಶ್ರೀ ಗಿರಿದೇವನು ಸುಪುತ್ರನಾದ ಚೆಂನಬಸವಯ್ಯನು ಬರದ ಆರಾಧ್ಯ ಚಾರಿತ್ರ.[೩೨] (ಕ್ರ.ಸಂ. ೫೧೨) ಶ್ರೀ ಗಿರಿದೇವನ ಸುಪುತ್ರನಾದ ಚಂನಬಸವಯನ್ನು ಈ ಆರಾಧ್ಯಚಾರಿತ್ರವನ್ನು ಬರೆದಿದ್ದಾನೆ. ಈತನು ಸಹ ನಿಯುಕ್ತ ಲಿಪಿಕಾರನಾಗಿದ್ದಾನೆ.

* ಪಾರ್ತಿವ ಸಂದ ಮಾಘ ಬ೧೧ಲ್ಲು ಮಾದಳ್ಳಿಮಠದ ಚಿಕ

ವೀರಂಗೊಡೆಯ ದೇವರ ಶಿಷ್ಯರು ಶಿವನಂಕಾರ ದೇವರಿಗೆ ತಗಡೂರ

ದೊಡಮಲ್ಲೊಡೆಯರ ಕುಮಾರ ಚಂದ್ರೊಡೆಯರು ತಮ್ಮ ಭಕ್ತಿಯಿಂದ

ಬೈಚಣ್ಣೊಡೆಯರ ಹಸ್ತದಲ್ಲಿ ಬರಯಿಸಿಕೊಟ್ಟ ಏಕೋತ್ತರ ಶತಸ್ಥಲ

ಶಿಲಾರ್ಪಣ ಮಸ್ತು.[೩೩] (ಕ್ರ.ಸಂ. ೭೫೩)

ಶಿವನಂಕಾರ ದೇವರಿಗೆ ತಗಡೂರ ದೊಡಮಲ್ಲೊಡೆಯರ ಕುಮಾರ ಚಂದ್ರೊಡೆಯರು ತಮ್ಮ ಭಕ್ತಿಯಿಂದ ಬೈಚಣ್ಣೊಡೆಯರ ಹತ್ತಿರ ಬರೆಸಿಕೊಟ್ಟ ಏಕೋತ್ತರ ಶತಸ್ಥಲ ಬೈಚಣ್ಣೊಡೆಯರು ಕೂಡ ನಿಯುಕ್ತ ಲಿಪಿಕಾರರಾಗಿದ್ದಾರೆ.

* ಸ್ವಸ್ತಿ ಶ್ರೀ.....ಶಾಲಿ..... ವರುಷಂಗಳು॥ ಖರನಾಮ ಸಂವತ್ಸರದ ಜೇಷ್ಟ ೧೨ರು ಅಕ್ಕಸಾಲೆ ಬೊಕ್ಕಸದ ಕುಮಾರ ಪುಲ್ಲಪಗೆ ಓದಿಸುವ ರಾಮಪ್ಪನು ಆ ಚಂದ್ರಾ ಬರದು ಕೊಟ್ಟಂಥ.[೩೪] (ಕ್ರ.ಸಂ. ೮೫೬) ಓದಿಸುವ ರಾಮಪ್ಪನು ನಿಯುಕ್ತ ಲಿಪಿಕಾರನಾಗಿರುವುದು ನಮಗೆ ಗೊತ್ತಾಗುತ್ತದೆ. ಈತನು ಅಕ್ಕಸಾಲೆ ಬೊಕ್ಕಸದ ಕುಮಾರಪುಲ್ಲಪಗೆ ಕೃತಿಯನ್ನು ಬರೆದು ಕೊಟ್ಟಿರುವುದಾಗಿ ತಿಳಿದುಬರುತ್ತದೆ.

* ಶಾಲಿವಾಹನ ಶಖೆ ೧೬೭೭ ಯಿವ ಸಂವತ್ಸರದಾ ಜೇಷ್ಠಸುದ್ಧ ೧೧ರಲ್ಲು ಪುರಾಣದ ಬಗೆ ವೀರಪ್ಪವಡೇರ ಕರಜಾತನಾದ ಕಲ್ಯಾಣದೈಯ್ಯನು ಹೇರೂರು ಕೆರೆಮ(ಠ)ದ ಚೆಂನಮಲ್ಲಪ್ಪನವರಿಗೆ ಬರಕೊಟ್ಟ............ ಗಣಂಗಳ ತಾರಾವಳಿ ಸೋಮೇಕಟ್ಟೆ ಚೆನ್ನವೀರಸ್ವಾಮಿ.[೩೫] (ಕ್ರ.ಸಂ. ೧೨೬೩) ವೀರಪ್ಪ ವಡೇರ ಕರಜಾತನಾದ ಕಲ್ಯಾಣದೈಯ್ಯನು. ಹೇರೂರು ಮಠದ ಚೆಂನಮಲ್ಲಪ್ಪನವರಿಗೆ ಗಣಂಗಳ ತಾರಾವಳಿಯನ್ನು ಬರೆದುಕೊಟ್ಟಿದ್ದಾನೆ. ಕಲ್ಯಾಣದೈಯ್ಯನನ್ನು ನಿಯುಕ್ತ ಲಿಪಿಕಾರರೆನ್ನ ಬಹುದಾಗಿದೆ.

* ಶ್ರೀ ಮತ್ಸಾ (ಲಿವಾಹನಶಕ) ವರ್ಷ ೧೪೩೫ ರಂದು ವರ್ತಮಾನ ಕಲಿಯುಗ ಧಾತು ಸಂವತ್ಸರದ ಫಾಲ್ಗುಣ ಬ೧೨ ಗುರುವಾರದಲೂ ಹೆಗ್ಗೆವಾಡಿಯಲು ಯಿಹ ನಾಗರಸಯ್ಯನವರ ಮಕ್ಕಳು ಸಂಣಂಹಂಣನವರು ಯೆಲವಕೂರಿನಲ್ಲಿಹ ವಿರಪವೊಡೆಯರು ದೇವರ ಕೊಮಾರರೂ ವೀರಂಣವೊಡೆಯರಿಗೆ ಬರದುಕೊಟ್ಟ ಗಿರಿಜಾಕಲ್ಯಾಣ.[೩೬] (ಕ್ರ.ಸಂ ೧೩೬೩)

ನಾಗರಸಯ್ಯನ ಮಕ್ಕಳು ಸಂಣಂಹಂಣನವರು ವಿರಪವೊಡೆಯ ದೇವರ ಕೊಮಾರರೂ ಆದ ವೀರಂಣವೊಡೆಯರಿಗೆ ಗಿರಿಜಾಕಲ್ಯಾಣವನ್ನು ಬರೆದುಕೊಟ್ಟಿದ್ದಾರೆ. ಇವರು ಸಹ ನಿಯುಕ್ತ ಲಿಪಿಕಾರರು.

* ಪರಾಭವ ಸಂ/ದ ಶ್ರಾವಣ ಶು ೧೦ಯಲು ಶ್ರೀಮತು ಯಾದಕೆರೆ ವೆಂಕಪನ ಕುಮಾರ ಸೀತಾರಾಮನು ಸ್ಥಳದ ಶಾನಭೋಗ ತಿಪ್ಪಣ್ಣನ ಕುಮಾರ್‍ರು ರುದ್ರಪ್ಪ ಅಯಾಣಗೆ ಬರಕೊಟ್ಟ.[೩೭] (ಕ್ರ.ಸಂ. ೧೬೧೧) ಯಾದಕೆರೆಯ ವೆಂಕಪನ ಮಗನಾದ ಸೀತಾರಾಮನು ಶಾನಭೋಗರ ತಿಪ್ಪಣ್ಣನವರ ಮಗನಾದ ರುದ್ರಪನಿಗೆ ಚಿತ್ರಶೇಖರ ಸೋಮಶೇಖರ ಯಕ್ಷಗಾನ ಕೃತಿಯನ್ನು ಬರೆದು ಕೊಟ್ಟಿದ್ದಾನೆ. ಸೀತಾರಾಮನು ಸಹ ನಿಯುಕ್ತ ಲಿಪಿಕಾರನಾಗಿದ್ದಾನೆ.

ಶಾ.ಶ. ೧೭೮೭ನೆ ರಕ್ತಾಕ್ಷಿ ಶ್ರಾವಣ ಬ೧೦ ಭೃಗುವಾರ ಮೃಗಶಿರ ನಕ್ಷತ್ರ ವಜ್ರನಾಮ ಯೋಗ ವನಜಕರಣ ಧನುರ್ಲಗ್ನ ಶ್ರೀಮತು ನನಿವಾಳ ಮಠದ ಹಿರಿಯೂರೆಲ್ಲೂ ಇರುವ ಓದಿಸುವ ಸಿವರುದ್ರಪ್ಪನು ಬರೆದ ಚನ್ನಬಸವ ದೇವರ ಪೌರಣ.[೩೮] (ಕ್ರ.ಸಂ. ೧೬೭೯) ಓದಿಸುವ ಸಿವರುದ್ರಪ್ಪನು ನಿಯುಕ್ತ ಲಿಪಿಕಾರನಾಗಿದ್ದಾನೆ. ಈತನು ಚನ್ನಬಸವ ದೇವರ ಪುರಾಣವನ್ನು ಬರೆದಿದ್ದಾನೆ.

* ನಳ ಸಂ ಆಶ್ವೀಜ ಶುದ್ಧ ಪೌರ್ನಮಿ ಸೋಮವಾರಬಿದುರೆಯ ಸಿದ್ಧಲಿಂಗ ದೇವರ ಶಿಷ್ಯರು ಚೆನ್ನಮಲ್ಲಿಕಾರ್ಜುನ ದೇವರು ಅನುಭಾವದ ವೀರಣ್ಣೊಡೆದೇವರ ಕುಮಾರು ಚೆಂನದೇವರಿಗೆ ಬರದುಕೊಟ್ಟರು.[೩೯] (ಕ್ರ.ಸಂ. ೧೮೬೧) ಚೆನ್ನಮಲ್ಲಿಕಾರ್ಜುನ ದೇವರು ನಿಯುಕ್ತ ಲಿಪಿಕಾರರಾಗಿದ್ದಾರೆ. ಇವರು ಅನುಭಾವದ ವೀರಣ್ಣೊಡೆದೇವರ ಮಗನಾದ ಚೆಂನದೇವರಿಗೆ ಬರೆದುಕೊಟ್ಟ ಕೃತಿ. ಇಲ್ಲಿ ಕೃತಿಯ ಹೆಸರು ತಿಳಿದುಬಂದಿಲ್ಲ.

* ಶ್ರೀ ನಿಜಲಿಂಗಶತಕ ನಿಜಗುಣ್ಯೈಯ್ಯನವರು ವಿರಚಿಸಿದ ಪುಸ್ತಕ ಕಟ್ಟೆ ತೋಟದ ಹಿರಿಯೂರ ಮಲ್ಲಪ್ಪಗೌಡನಮಗ ಬಸಪ್ಪನ ಪುತ್ರರಿಗೆ ಬರದಕೊಟ್ಟರು ನಳಸಂವತ್ಸರ ಪಾರ್ಥಿವಕ್ಕೆ ಸಮಾಪ್ತ ಇದಂ ಬರೆದಾತ ಮುತ್ತೂರ ಮಠದ ಮತ್ತುವಾರದ ಕಲ್ಲರೆ ಮಠದ ಶಿವಸೊತ್ರದ ಸಿದ್ದಬಸವನ ಬರಹ ತಪ್ಪುಳ್ಳಡೆ ತಿದ್ದುವುದು ಬರೆದೋದುವುದು ಗುರುಬಸಮ್ಮನಮಗಳ ಮೊಮ್ಮಗನ ಸುತನ ವರಪುತ್ರನಂ ಬರದುದ ಬಯ್ಯದಡೆ ಭವ ಪಾಶಮಕ್ಕುಂ ವರರತ್ನ ಚೂಡಾಕರ ವಾವೆಳಶಿಕ್ಕೆ ಪದನು ೧೨೭ಕ್ಕೆ ಮಂಗಳಂ.[೪೦] (ಕ್ರ.ಸಂ. ೨೦೪೫) ಮತ್ತುವಾರ ಕಲ್ಲರೆ ಮಠದ ಶಿವಸೂತ್ರದ ಸಿದ್ಧಬಸವನು ನಿಜಗುಣ್ಯೈಯ್ಯನವರು ವಿರಚಿತ ಪುಸ್ತಕವನ್ನು ಕಟ್ಟೆ ತೋಟದ ಹಿರಿಯೂರ ಮಲ್ಲಪ್ಪಗೌಡನ ಮಗನಾದ ಬಸಪ್ಪನ ಮಗನಿಗೆ ಸಿದ್ಧಬಸವನು ಬರೆದುಕೊಟ್ಟಿದ್ದಾನೆ. ಈತನು ನಿಯುಕ್ತ ಲಿಪಿಕಾರನೆನಿಸಿಕೊಂಡಿದ್ದಾನೆ.

* ಪರಿಭವ ಸಂ/ದ ಶ್ರಾವಣ ಶು ೧೦ಯಲ್ಲಿ ಶ್ರೀ ಮತುಯಾದ ಕರೆವೆಂಕಪನ ಕುಮಾರ ಸೀತಾರಾಮನು ಸ್ಥಳದ ಶಾನಭೋಗ ತಿಪ್ಪಂಣನ ಕುಮಾರ್‍ರು ರುದ್ರಪ್ಪ ಅಯಂಣಗೆ ಬರಕೊಟ್ಟ.[೪೧] (ಕ್ರ.ಸಂ. ೮೦೪) ಕುಮಾರ ಸೀತಾರಾಮನು ನಿಯುಕ್ತ ಲಿಪಿಕಾರನಾಗಿದ್ದಾನೆ. ಈತನು ಸ್ಥಳದ ಶಾನಭೋಗ ಶಿಪ್ಪಂಣನ ಕುಮಾರನಾದ ರುದ್ರಪ್ಪ ಅಯಂಣಗೆ ಶ್ರುತಿಸಾರ ಭಾಷ್ಯಾಂ ಕೃತಿಯನ್ನು ಬರೆದುಕೊಟ್ಟಿದ್ದಾನೆ.

* ಅಕ್ಷಯ ನಾಮ ಸಂವತ್ಸರದ ಅಧಿಕ ಶ್ರಾವಣ ಬಹುಳ ೧೧ಲ್ಲು ಚಿಗಟೇರ ಕಮಲಾಪುರದ ಕುಪ್ಪಸ್ತ ಶರಸಿಂಬೆ ಮಡಿವಾಳಪ್ಪನ ಕುಮಾರಪನಾದ ವೀರಪ್ಪನು ದುರ್ಗದ ಮೊದೆಹಳ್ಳಿಯಲ್ಲಿ ಸುಹಸ್ತದಿಂದ ಬರೆದ ಪ್ರಭುದೇವರ ವಚನಟೀಕು ಸಮಾಪ್ತ.[೪೨] (ಕ್ರ.ಸಂ. ೧೩೫೨) ಮಡಿವಾಳಪ್ಪನ ಮಗನಾದ ವೀರಪ್ಪನು ದುರ್ಗದ ಮೊದೆಹಳ್ಳಿಯಲ್ಲಿ ಸ್ವಹಸ್ತದಿಂದ ಬರೆದ ಪ್ರಭುದೇವರ ವಚನದ ಟೀಕು; ಈತನು ಕೂಡ ನಿಯುಕ್ತ ಲಿಪಿಕಾರನಾಗಿರುವುದು ಗಮನಾರ್ಹ.

* ಜಯ ಸಂವತ್ಸರದ ಮಾಘ ಶು ॥೫॥ ಸನಿವಾರ ದಿನದಲ್ಲು ವೋಟಾಳ ಬಸವ ಲಿಂಗದೇವರ ಕಾರುಣ್ಯದ ಶಿಷ್ಯರಾದ ತೋಟದ ದೇವರಿಗೆ ಕೆಸತ್ತೂರ ಆರಾಧ್ಯವ ದೇವರಮಕ್ಕಳು ಗುರು ಸಿದ್ಧರಾಮದೇವರು ಟೀಕಿನ ಪ್ರತಿಯಂ ಬರೆದು ತೋಟದ ದೇವರ ಪಾದಕ್ಕೆ ನಮಸ್ಕಾರ ಜಯತೂ.[೪೩] (ಕ್ರ.ಸಂ. ೧೩೫೩) ಕೆಸತ್ತೂರ ಆರಾದ್ಯವ ದೇವರ ಮಕ್ಕಳಾದ ಗುರುಸಿದ್ಧ ರಾಮದೇವರು ವೋಟಾಳ ಬಸವ ಲಿಂಗದೇವರ ಶಿಷ್ಯರಾದ ತೋಟದ ದೇವರಿಗೆ ಬರೆದ ಟೀಕಿನ ವಚನವನ್ನು ಬರೆದುಕೊಟ್ಟಿದ್ದಾರೆ. ಗುರುಸಿದ್ಧ ರಾಮದೇವರು ಕೂಡ ನಿಯುಕ್ತ ಲಿಪಿಕಾರರಾಗಿರುವುದನ್ನು ನೋಡಬಹುದು.

ರೊಉದ್ರಿ ಸಂವತ್ಸರ ವೈಖ್ಯಕ ಸುಂಧ ೧೩ಯಲು ಸಿಂದಗಟ್ಟದ ಮಠದೊಡ್ಯೆಯನೂರ ಮಗ ಕಲ್ಯಾಣದ್ಯೆ ಅವರ ಮಗ ಕಲ್ಯಾಣದ್ಯೆಯ ಬರದ ಪ್ರಭುಲಿಂಗಲೀಲೆ.[೪೪] (ಕ್ರ.ಸಂ.೧೪೮೧)

ಸಿಂದಗಟ್ಟದ ಮಠದ ದೊಡ್ಡೈಯನೊರ ಮಗನಾದ ಕಲ್ಯಾಣದೈಯ ಇವರ ಮಗನಾದ ಕಲ್ಯಾಣದೈಯನು ಪ್ರಭುಲಿಂಗಲೀಲೆಯನ್ನು ಬರೆದಿದ್ದಾನೆ. ಈತನು ಸಹ ನಿಯುಕ್ತ ಲಿಪಿಕಾರನಾಗಿದ್ದ.

* ವಿಕಾರಿ ಸಂವತ್ಸರದ ಜೇಷ್ಠ ಬ೭ಯಲ್ಲು ಹಂಪಯ್ಯನ ಮಟದ ಕಾಶಿದೇವರು ಭೋಗೇದೇವರ ಮಟದ ಕಂಥೆ ಸಂಗೈಯ್ಯನವರಿಗೆ ಅಂಬಿಗರಹಳ್ಳಿಯ ಸಂಗನಬಸವನ ಕೈಯ್ಯ ಬರಸಿಕೊಟ್ಟ ಲೀಲೆಪುಸ್ತಕ.[೪೫] (ಕ್ರ.ಸಂ. ೧೪೮೪) ಅಂಬಿಗರ ಹಳ್ಳಿಯ ಸಂಗನಬಸವನು ನಿಯುಕ್ತ ಲಿಪಿಕಾರನಾಗಿದ್ದಾನೆ. ಈತನು ಭೋಗೇದೇವರಮಟದ ಕಂಥೇ ಸಂಗೈಯ್ಯನವರಿಗೆ ಪ್ರಭುಲಿಂಗಲೀಲೆಯನ್ನಾ ಬರೆದುಕೊಟ್ಟಿದ್ದಾನೆ.

* ಸಿಂಧಾನೂರ ಗಚ್ಚಿನ ಹಿರೇಮಠದ ಮರಿರಾಚವಟ್ಟಿದೇವರು ಕುಪ್ಪಸದ ರಾಚಪ್ಪನಮಗ ವೀರಪ್ಪಗೆ ಬರಕೊಟ್ಟ ಹರವಾಕ್ಯವೂ.[೪೬] (ಕ್ರ.ಸಂ. ೧೫೩೫) ಮರಿರಾಚವಟ್ಟಿ ದೇವರು ಕುಪ್ಪಸದ ರಾಚಪ್ಪನ ಮಗನಾದ ವೀರಪ್ಪನಿಗೆ ಹರವಾಕ್ಯವನ್ನು ಬರೆದುಕೊಟ್ಟಿದ್ದಾನೆ. ಈತನು ನಿಯುಕ್ತ ಲಿಪಿಕಾರನೆನಿಸಿಕೊಂಡಿದ್ದಾನೆ.

* ಸ್ವಸ್ತಿ ಶ್ರೀ ಸಕವರ್ಷ ೧೫೬೮ನೆಯ ಸಂವ ಸರ್ವಜಿತು ಸಂವತ್ಸರದ ಜೇಷ್ಟ ಶು೧೦ ಬುಧವಾರದಲ್ಲು ಪೆನುಗೊಂಡೆಯ ಗಾಣಿಗರ ಹಂಪಸೆಟ್ಟಿ ಮಕ್ಕಳು ಅಪ್ಪುಸೆಟ್ಟಿಗೆ ಮಹಿಸೂರ ಗುರುದೇವರ ಮಕ್ಕಳು ಭೋಗಿವಡೆಯರು ಬರೆದ ಬಸವಪುರಾಣದ ಪುಸ್ತಕಕ್ಕೆ.[೪೭] (ಕ್ರ.ಸಂ. ೧೫೪೪) ಭೋಗಿವಡೆಯರು ನಿಯುಕ್ತ ಲಿಪಿಕಾರರಾಗಿರುವುದಾಗಿ ನೋಡಬಹುದು. ಇವರು ಬಸವ ಪುರಾಣ ಪುಸ್ತಕವನ್ನು ಬರೆದಿದ್ದಾರೆ.

* ಕ್ರೋಧಿ ಸಂವತ್ಸರ ಆಶಾಢ ಶುದ್ಧ ೫ ಸೋಮವಾರದಲ್ಲಿ ಪುರಾಣವನು ಸಿದ್ಧನಂಜೆದೇವರ ಶಿಷ್ಯರು ಶಿವಲಿಂಗದೇವರಿಗೆ ಬರದ ಷಟ್ಸ್ಥಲ.[೪೮] (ಕ್ರ.ಸಂ. ೧೫೪೭) ಸಿದ್ಧನಂಜೇದೇವರ ಶಿಷ್ಯರು ಶಿವಲಿಂಗದೇವರಿಗೆ ಬಸವಪುರಾಣವನ್ನು ಬರೆದು ಕೊಟ್ಟಿದ್ದಾರೆ. ಇವರು ಸಹ ನಿಯುಕ್ತ ಲಿಪಿಕಾರರಾಗಿ ಕಂಡುಬಂದಿದ್ದಾರೆ.

* ಸಿದ್ದಾರ್ಥಿ ಸಂವತ್ಸರದ ಮಾರ್ಗಶಿರ ಸು ೨ ಸೋಮವಾರದಲ್ಲು ಶ್ರೀಮತು ಕಡಲೂರಗಳಾದಂತ ನಂಜಪ್ಪವೊಡೇರ ಕುಮಾರ ಕಪ್ಪಿನಿವೊಡೇರ ಕೈಯ್ಯ ಬರಹ ಮಂಗಳ ಮಹಾ.[೪೯] (ಕ್ರ.ಸಂ. ೧೫೫೭) ನಂಜಪ್ಪವೊಡೇರ ಕುಮಾರ ಕಪ್ಪಿನಿವೊಡೇರು ನಿಯುಕ್ತ ಲಿಪಿಕಾರರಾಗಿದ್ದಾರೆ. ಇವರು ಸ್ವತ; ಹತಾವೇ ಬಸವರಾಜದೇವರ ಷಟ್‌ಸ್ಥಲದ ವಚನವನ್ನು ಬರೆದಿದ್ದಾರೆ.

* ಪ್ರಜೋತ್ಪತ್ತಿನಾಮ ಸಂವತ್ಸರದ ಕಾರ್ತಿಕ ಶು ೧೩ ನೆಲೆಗೆ ಕೋಳೂರು ಹಾವಣ್ಣ ಸೆಟ್ಟರ ಆತ್ಮಾಬ್ದಿ ಚೆಂದ್ರ ಗಂಗಪ್ಪ ಸೆಟ್ಟರಿಗೆ ಮೂಲ ಪ್ರತಿಯಿದ್ದಂತೆ ಕೊಡಲಿಪೇಠೆಯ ಬರಹದ ವೀರಣ್ಣದೇವರ ಮಗ ಪಾಲಾರದೈಯ್ಯನು ಬರದು ಕೊಟ್ಟ ಭೈರವೇಶ್ವರನ ಕಾವ್ಯ ಗುರುಭಕ್ತನ ಕಾವ್ಯಕ್ಕೆ ಶುಭಮಸ್ತು.[೫೦] (ಕ್ರ.ಸಂ. ೧೭೬೭) ಕೊಡಲಿ ಪೇಠೆಯ ಬರಹದ ವೀರಣ್ಣ ದೇವರ ಮಗನಾದ ಫಲಾರಧೈಯನು ಗಂಗಪ್ಪಸೆಟ್ಟರಿಗೆ ಮೂಲ ಪ್ರತಿಯಿದ್ದಂತೆಯೇ ಭೈರವೇಶ್ವರನ ಕಾವ್ಯವನ್ನು ಬರೆದುಕೊಟ್ಟಿದ್ದಾರೆ.

ಚಿತ್ರಭಾನು ಸಂವತ್ಸರದ ಮಾಘ ಶುದ್ಧ ಗುರುವಾರ ೧೫ಯಲ್ಲಿ ಚಿಕ್ಕ ಹಂಪಯ್ಯನವರ ಕರಜಾತ ಭಾಳಲೋಚನದೇವರ ಕುಮಾರ ಸಿದ್ಧನಂಜೇ ದೇವರು ಬರದ ಭೈರ.[೫೧] (ಕ್ರ.ಸಂ. ೧೭೭೧) ಚಿಕ್ಕಹಂಪಯ್ಯನವರ ಕರಜಾತ ಭಾಳಲೋಚನದೇವರ ಮಗನಾದ ಸಿದ್ಧನಂಜೇದೇವರು ಭೈರವೇಶ್ವರನ ಕಾವ್ಯದ ಕಥಾ ಸೂತ್ರ ರತ್ನಾವನ್ನು ಬರೆದಿದ್ದಾನೆ.

* ಭಾವನಾಮ ಸಂವತ್ಸರ ಕಾರ್ತೀಕ ೫ ಸೋಮವಾರ ಗಂಗಾಧರ ದೇವರಮಗ ಶೈಬೈಯ್ಯನವರ ಸ್ವಹಸ್ತದಬರಹ.[೫೨] (ಕ್ರ.ಸಂ. ೨೧೪೭) ಗಂಗಾಧರ ದೇವರಮಗನಾದ ಶೈಬೈಯ್ಯನವರು ಮೋಹನ ತರಂಗೀಣಿಯನ್ನು ಸ್ವಹಸ್ತದಿಂದ ಬರೆದಿದ್ದಾರೆ. ಶೈಬೈಯ್ಯನವರು ಕೂಡ ನಿಯಕ್ತ ಲಿಪಿಕಾರರಾಗಿದ್ದಾರೆ.

* ಗಣಪನವರ ರಘುಪತಯ್ಯನಮಗ ಚಿಗವರದಯ್ಯನು ಹೊಸಟ್ಟಿ ಹನುಮಯ್ಯನ ಮಗ ಕೆಂಚಯ್ಯಗೆ ವಿಕೃತಿ ಸಂವತ್ಸರದ ಆಶ್ವೀಜ ಶು೧೫ಲು ಬರಕೊಟ್ಟ ವಿರಾಟಪರ್ವ ಮಂಗಳಮಹಾ.[೫೩] (ಕ್ರ.ಸಂ. ೨೧೪೭) ರಘುಪತಯ್ಯನ ಮಗ ಚಿಗವರದಯ್ಯನು ಹೊಸಟ್ಟಿ ಹನುಮಯ್ಯನ ಮಗನಾದ ಕೆಂಚಯ್ಯನಿಗೆ ವಿರಾಟಪರ್ವವನ್ನು ಬರೆದುಕೊಟ್ಟಿದ್ದಾನೆ.

* ಬಾಗವಾಡದ ಮಠದ ಚರಂತಿ ಹಿರೇರಾದ ಕರಿಬಸವಪ್ಪನವರು ರಕ್ಷಿಸಿದಂಥ ಅಂದನಪ್ಪನವರ ಶಿಷ್ಯನಾದ ಬಸವಲಿಂಗ ಮರಿದೇವರಿಗೆ ಸುಲಿಗಾವಿ ಬಸವಲಿಂಗಪ್ಪನವರು ಬರಕೊಟ್ಟ ಬಸವಪುರಾಣ ವಸ್ತುಕದ ನುಡಿ ಸಮಾಪ್ತ...[೫೪] (ಕ್ರ.ಸಂ. ೨೪೪೬).

ಬಾಗವಾಡದ ಕರಿಬಸವಪ್ಪನವರು ರಕ್ಷಿಸಿದಂಥ ಅಂದನಪ್ಪನವರ ಶಿಷ್ಯನಾದ ಬಸವಲಿಂಗ ಮರಿದೇವರಿಗೆ ಸುಲಿಗಾವಿ ಬಸವಲಿಂಗಪ್ಪನವರು ಬಸವಪುರಾಣವನ್ನು ಬರೆದುಕೊಟಿದ್ದು ಇವರು ಕೂಡ ನಿಯುಕ್ತ ಲಿಪಿಕಾರರಾಗಿದ್ದಾರೆ. ಇವರು ಸಹ ನಿಯುಕ್ತ ಲಿಪಿಕಾರರಾಗಿದ್ದಾರೆ.

* ಶ್ರೀ ಶಕಾಬ್ದಾ ೧೭೭೯ನೆ ಕಾಳಯುಕ್ತಿ ನಾಮ ಸಂವತ್ಸರದ ಶ್ರಾವಣ ಬ ೧೪ ಸೋಮವಾರ ಮಗ ನಕ್ಷತ್ರ ಯುಕ್ತಮಾದ ಶುಭದಿವಸದಲ್ಲು ಪುಂಗನೂರು ಕೆಂಪಿನ ಯೇಕೋತ್ರ ಗವಿಮಠದ ರಾಘವಾಂಕ ಸ್ವಾಮಿಗಳವರು ಹೊಸಕೋಟೆ ಆಡಕೆ ಚಂಗಪ್ಪನಿಗೆ ಬರೆದು ಕೊಟ್ಟ ಶರಣಲೀಲಾವಿಲಾಸ.[೫೫] (ಕ್ರ.ಸಂ. ೧೫೫೧) ಪುಂಗನೂರ ಕೆಂಪಿನಯೇಕೋತ್ರ ಗವಿಮಠದ ರಾಘವಾಂಕ ಸ್ವಾಮಿಗಳವರು ಹೊಸಕೋಟೆ ಆಡಕೆಚಂಗಪ್ಪನಿಗೆ ಶರಣಲೀಲಾವಿಲಾಸವನ್ನು ಬರೆದು ಕೊಟ್ಟಿದ್ದಾರೆ.

ಚಿನ್ನದಕಂತೆಯ ಚೆನ್ನಮಲ್ಲಿಕಾರ್ಜುನದೇವರಿಗೆ ಅವರ ಶ್ರೀ ಪಾದಕಮಲ ಭೃಂಗನಾಗುತ್ತಂವಿದ್ದ ಕಾರೆಗನಹಳ್ಳಿ ನಂಜಯನು ಬರೆದುಮುಗಿದ ಶಾಂಕರ ಸಂಹಿತೆ ಪುಸ್ತಕ[೫೬] (ಕ್ರ.ಸಂ. ೨೬೪೯) ಚನ್ನಮಲ್ಲಿಕಾರ್ಜುನ ದೇವರಿಗೆ ಕಾರೆಗನಹಳ್ಳಿ ನಂಜಯನೂ ಶಾಂಕರ ಸಂಹಿತೆ ಪುಸ್ತಕವನ್ನು ಬರೆದುಕೊಟ್ಟಿದ್ದಾನೆ. ಈತನು ಸಹ ನಿಯುಕ್ತ ಲಿಪಿಕಾರನಾಗಿದ್ದಾನೆ.

* ಕ್ರೋಧಿ ಸಂವತ್ಸರದ ಫಾಲ್ಗುಣ ಶು. ಪಂ.೫ಮಿ ಸ್ಥಿರವಾರಕ್ಕೆ ಸಿದೇಶ್ವರನವಚನ ಬರಸಿದಂತ್ತಾವರು ಮಲ್ಲರಾ ಜೈಯ್ಯನವರಿಗೆ ಶುಭಮಸ್ತು[೫೭] (ಕ್ರ.ಸಂ. ೨೮೫೯) ಮಲ್ಲರಾಜೈಯ್ಯನವರು ನಿಯುಕ್ತ ಲಿಪಿಕಾರರು ಇವರು ಸಿದ್ದೇಶ್ವರನ ವಚನವನ್ನು ಬರೆದಿದ್ದಾರೆ.

* ಸ್ವಸ್ತಿ ವರುಷ ೧೫೫೨ ನೆಯ ನಳ ಸಂವತ್ಸರದ ಫಾಲ್ಗುಣ ಶು ೫ ಸೋಮವಾರ ಪ್ರಾತಃ ಕಾಲಕ್ಕೆ ಮುಗಿದ ಸಾಸಲಶ್ರೀಮತ್ಸಜ್ಜನ ಶುದ್ಧ ಶಿವಾಚಾರ ಸಂಪನ್ನರಾದ ದೇವಾಪೃಥ್ವಿ ಮಹಾಮಹತ್ತಿನೊಳಗಾದ ಹೊನ್ನಾಳಿಪೇಠೆಯ ಮಟದ ಮಹಾಂತ ದೇವರ ಮಗ ರಾಚವಟ್ಟಿದೇವರು ನೇಮತಿಗೌಡರು ಲಿಂಗಬಾನ ಮಗ ಲಿಂಗಯ್ಯಗೆ ಆಯುರಾರೋಗ್ಯ ಭೈರೇಶ್ವರ ಕಾವ್ಯವ ಬರದು ಕೊಟ್ಟರು[೫೮] (ಕ್ರ.ಸಂ. ೩೦೯೩) ಹೊನ್ನಾಳಿ ಪೇಠೆಯ ಮಟದ ಮಹಾಂತದೇವರ ಮಗ ರಾಚವಟ್ಟಿದೇವರು ನೇಮತಿ ಗೌಡರು ಲಿಂಗಯ್ಯಗೆ ಆಯುರಾರೋಗ್ಯ ವೃದ್ಧಿಸಲೆಂದು ಭೈರೇಶ್ವರನ ಕಾವ್ಯವನ್ನು ಬರೆದುಕೊಟ್ಟಿದ್ದಾರೆ.

* ಶ್ರೀಯಡೆಯೂರ ಸಿದ್ಧಲಿಂಗ ಸ್ವಾಮಿಯವರ...ಭಾವನಾಮ ಸಂವತ್ಸರದ ಫಾಲ್ಗುಣದ ಬ೧೩ಲ್ಲು ಚಂನರಾಯದುರ್ಗದ ತಾಲೂಕಿಗೆ ಸಲುವ ಬುಕಪಟಣದ ಹೋಬಳಿ ವಳಿತವಾದ ಚಂನಪಟ್ಟಣದ ಶ್ಯಾನುಭಾಗ ಶ್ಯಾಮಂಣಪ್ಪನವರ ಕೊಮಾರ ನಾರಾಣಪ್ಪನವರ ಮಗ ಶ್ಯಾಮಂಣನು ಚರಿತ್ರೆ[೫೯] (ಕ್ರ.ಸಂ. ೩೧೦೦) ಚಂನರಾಯದುರ್ಗದ ತಾಲೂಕಿಗೆ ಸಲುವ ಬುಕಪಟಣದ ಹೋಬಳಿ ಉಳಿತವಾದ ಚಂನಪಟ್ಟಣದ ಶ್ಯಾನುಭಾಗ ಶ್ಯಾಮಂಣಪ್ಪನವರ ಕೋಮಾರ ನಾರಾಣಪ್ಪನವರ ಮಗನಾದ ಶ್ಯಾಮಂಣನು ಸಿದ್ಧಲಿಂಗೇಶ್ವರನ ಕಾವ್ಯವನ್ನು ಬರೆದಿದ್ದಾನೆ.

* ಮಹತ್ತಿನೊಳಗಾದ ಸುತ್ತೂರ ಪಂಚಾಕ್ಷರಿ ದೇವರ ಶಿಷ್ಯ ಚರಲಿಂಗಮೂರ್ತಿ ಸಾಂತದೇವರು ಸೇಡಬಳದ ವಿರಕ್ತಮಠಕ್ಕೆ ಪತ್ರೆಯ ನಾಗಿಸೆಟ್ಟಿ ಧರಣಿ ಸೆಟ್ಟಿಯರು ಬರೆಸಿದ ಸಿಂಗಿರಾಜನ ಕಾವ್ಯ.[೬೦] (ಕ್ರ.ಸಂ. ೩೧೭೯) ಪಂಚಾಕ್ಷರಿ ದೇವರ ಶಿಷ್ಯರಾದ ಚರಲಿಂಗಮೂರ್ತಿ ಸಾಂತದೇವರು ಸೇಡುಬಳದ ವಿರಕ್ತಮಠಕ್ಕೆ ಪತ್ರೆಯನಾಗಿಸೆಟ್ಟಿ ಧರಣಿಸೆಟ್ಟಿಯರು ಸಿಂಗಿರಾಜನ ಕಾವ್ಯವನ್ನು ಬರೆಸಿಕೊಟ್ಟಿದ್ದಾರೆ.

ಹೇವಿಳಂಬಿ ಸಂವತ್ಸರದ ಆಶ್ವೀಜ ಶುದ್ಧ ೧೫ ಸ್ಥಿರವಾರದಲ್ಲೂ ಗುತ್ತಿಯ ಪಟ್ಟಣಸೆಟ್ಟಿ ಭದ್ರಸೆಟ್ಟಿಯರ ಮಗ ಕೆಂಚವೀರೈನೂ ಬರೆದ ಸೊಬಗಿನ ಸೋನೆ.[೬೧] (ಕ್ರ.ಸಂ. ೩೧೯೪) ಗುತ್ತಿಯ ಪಟ್ಟಣಸೆಟ್ಟಿ ಭದ್ರಸೆಟ್ಟಿಯರ ಮಗ ಕೆಂಚವೀರೈನೂ ನಿಯುಕ್ತ ಲಿಪಿಕಾರನಾಗಿದ್ದಾನೆ. ಈತನು ಸೊಬಗಿನ ಸೋನೆಯನ್ನು ಬರೆದಿದ್ದಾನೆ.

* ಶಾಲಿ.....॥ ॥ನೆಯ ಅಕ್ಷಯ ಸಂವತ್ಸರದ ಶ್ರಾವಣ ಬ೧ ಆದಿವಾರಕ್ಕೆ ಕೊಡಲಿಪೇಠೆಯ ಬರಹದ ವೀರಣ್ಣೊಡೆಯರ ಮಗ ಫಲಾರದೈಯ್ಯ ಯೋಗಿ ಬುಸ್ಸಟ್ಟಿಗೆ.....[೬೨] (ಕ್ರ.ಸಂ. ೩೨೪೪) ಕೊಡಲಿ ಪೇಠೆಯ ಬರಹದ ವೀರಣ್ಣೊಡೆಯರ ಮಗನಾದ ಫಲಾರದೈಯ್ಯನು ಯೋಗಿ ಬುಸ್ಸಟ್ಟಿಗೆ ಸೌಂದರ ಪುರಾಣವನ್ನು ಬರೆದುಕೊಟ್ಟಿದ್ದಾನೆ.

* ಕಲಿಸಂದ ೪೯೨೧ಯದಾದ ವಿಕ್ರಮ ಸಂವತ್ಸರದ ಶ್ರಾವಣ ಬಹುಳ ೧೨ ಸೋಮವಾರದಲ್ಲಿ ಶ್ರೀ ಮಚ್ಛಂ ಕರುರಾಧ್ಯಕೃತ ವೃಷಭ ಪುರಾಣವನು ಚಂಗಡಿಹಳ್ಳಿ ಚನ್ನವೀರದೇವರು ಲಿಖಿಸಿ ಸಮಾಪ್ತಿಯ ಮಾಡಿದರು.[೬೩] (ಕ್ರ.ಸಂ. ೬೮೩) ಚಂಗಡಿಹಳ್ಳಿ ಚನ್ನವೀರ ದೇವರು ವೃಷಭ ಪುರಾಣವನ್ನು ಬರೆದಿದ್ದಾರೆ.

* ಸಾಧಾರಣನಾಮ ಸಂವತ್ಸರ ಕಾರ್ತಿಕ ಶುದ್ಧ ೨ ಸೋಮವಾರ ದಲ್ಲು........ಅನವರತ ಶಿವಧ್ಯಾನ ಶಿವಪೂಜಾನಿರತರಾದ ಶಿವಭಕ್ತ ಶಿಖಾಮಣಿ ಗಳಾದ....... ಧೇನುನಗರ ನಿವಾಸ ಶ್ರೀ ಮದಮೃತೇಶ್ವರ ದಿವ್ಯ ಶ್ರೀ ಚರಣಕಮಲ ಸಂತೇವಿತರಾದಂಥಾ ದೇವಣ್ಣ ಗೌಡರವರಿಗೆ ಮುಖ್ಯಾಶ್ರಿತ ಸುಬ್ರಹ್ಮಣ್ಯನು ಬರದುಕೊಟ್ಟ ಶಿವಗೀತಾ ಪುಸ್ತಕಕ್ಕೆ ಆ ಚಂದ್ರಮಸ್ತು[೬೪] (ಕ್ರ.ಸಂ. ೭೧೭) ದೇವಣ್ಣಗೌಡರವರಿಗೆ ಮುಖ್ಯಾಶ್ರಿತ ಸುಬ್ರಹ್ಮಣ್ಯನು ಶಿವಗೀತಾ ಪುಸ್ತಕವನ್ನು ಬರೆದುಕೊಟ್ಟಿದ್ದಾನೆ.

* ಸಾಧಾರಣ ಸಂವತ್ಸರ ಶ್ರಾವಣ ಶುದ್ಧ ೬ ಬುಧದಿನದ ವೈದ್ಯಶಾಸ್ತ್ರ ಕರಡಿ ಕರಿಬಸಣ್ಣನಿಗೆ ದೇವಾಂಗದ ಚೌಡಪ್ಪನಮಗನು ಬರದುಕೊಟ್ಟ ವೈದ್ಯಶಾಸ್ತ್ರ[೬೫] (ಕ್ರ.ಸಂ. ೯೪೭) ಕರಡಿ ಕರಿಬಸವಣ್ಣನಿಗೆ ದೇವಾಂಗದ ಚೌಡಪ್ಪನ ಮಗನು ವೈದ್ಯಶಾಸ್ತ್ರವನ್ನು ಬರೆದುಕೊಟ್ಟಿರುವುದನ್ನು ನೋಡಬಹುದು.

ಬಯಲಾಟದ ಹಸ್ತಪ್ರತಿಗಳಲ್ಲಿ ಕಂಡುಬರುವ ನಿಯುಕ್ತ ಲಿಪಿಕಾರರು.

* ವಿರೋಚನ ಕಾಳಗವನ್ನು ಭೀಮಪ್ಪನವರು ೧೯೭೮ರಲ್ಲಿ ಪ್ರತಿಗೊಳಿಸಿರುವರು
* ಬಾಣಾಸುರನ ಕಥೆ; ಇದು ಪ್ರತಿಗೊಂಡದ್ದು ೧೯೮೫ರಲ್ಲಿ; ಇದರ ಲಿಪಿಕಾರ ಭೀಮಪ್ಪ
* ಬಬ್ರುವಾಹನ ಕಾಳಗ, ಲಿಪಿಕಾರ ಭೀಮಪ್ಪ; ಇದು ಎಷ್ಟರಲ್ಲಿ ರಚನೆಯಾಯಿತು ಎನ್ನುವುದನ್ನು ಲಿಪಿಕಾರ ನಮೂದಿಸಿಲ್ಲ
* ಕಾಳಾಸುರನ ಕಥೆ, ಇದು ಪ್ರತಿಯಾದ ಕಾಲ ೧೪.೧೧.೧೯೮೧ರಲ್ಲಿ; ಇದನ್ನು ಬರೆದವರು ಭೀಮಪ್ಪನವರು
* ತಾಮ್ರಧ್ವಜನ ಕಥೆ; ಇದನ್ನು ಪ್ರತಿ ಮಾಡಿದವರ ಮಾಹಿತಿಗಳು ಈ ಪ್ರತಿಯಲ್ಲಿ ದೊರೆಯುವುದಿಲ್ಲ. ಆದರೆ ಇದರ ವಾರಸುದಾರರಾದ ಗೌಡರ ಸಣ್ಣೋಬಯ್ಯ ಪ್ರಸ್ತುತ ಪ್ರತಿಯನ್ನು ತಾನೇ ಸ್ವತಃ ಬರೆದಿರುವುದಾಗಿ ಹೇಳುತ್ತಾರೆ.
* ರತಿಕಲ್ಯಾಣ; ಪ್ರಸ್ತುತ ಕೃತಿ ೦೧.೦೧.೧೯೮೮ರಲ್ಲಿ ಪ್ರತಿಯಾಗಿದೆ. ಇದನ್ನು ಬರೆದವರು ಕಲ್ಲೇನಹಳ್ಳಿಯ ಸಾಧುಓಬಣ್ಣ
* ಶಶಿರೇಖ ಪರಿಣಯ ಇದನ್ನು ಬರೆದವರು ಹನುಮಂತಪ್ಪ ಬರೆದ ವರ್ಷ ೦೧.೦೧.೧೯೮೯ನೇ ಶುಕ್ರವಾರದಂದು
* ಸತ್ಯಹರಿಶ್ಚಂದ್ರ ಈ ಕಥಾ ಪ್ರತಿಯನ್ನು ಬಸ್ತಿಹಳ್ಳಿ ಹನುಮಂತಪ್ಪನವರು ಬರೆದಿದ್ದಾರೆ. ಇದು ೧೯೮೪ರಲ್ಲಿ ರಚನೆಯಾಗಿದೆ.
* ಕಾಳಸುರನ ಕಥೆ; ಇದನ್ನು ಹನುಮಂತಪ್ಪನವರೆ ಬರೆದಿದ್ದಾರೆ. ಬರೆದ ಕಾಲ ೦೭.೦೪.೧೯೫೮ರಂದು ಎಂಬುದಾಗಿ ತಿಳಿದುಬಂದಿದೆ.
* ದುಶ್ಯಾಸನ ಕಥೆ; ಇದು ಪ್ರತಿಗೊಂಡ ಕಾಲ ೧೪.೦೭.೧೯೭೮. ಇದನ್ನು ಪ್ರತಿ ಮಾಡಿದವರು ಬೆಳಗಟ್ಟದ ಬೋರಯ್ಯ

* ದುಶ್ಯಾಸನ ಕಥೆ; ಇದು ಪ್ರತಿಗೊಂಡ ಕಾಲ ೨೦.೧.೧೯೭೬. ಇದನ್ನು ಪ್ರತಿ ಮಾಡಿದವರು ಶಿವಸ್ವಾಮಿನಾಯ್ಕ ರಾಮದುರ್ಗ
* ಮಾಂದಾತ ಮಹಾರಾಜ. ಇದನ್ನು ಪ್ರತಿ ಮಾಡಿದವರು ಪೂಜಾರಿ ತಿಪ್ಪಯ್ಯ. ಇದು ೧೯.೦೮.೧೯೮೧ರಲ್ಲಿ ಪ್ರತಿಗೊಂಡಿದೆ.
* ಪಾರ್ಥಪಾಂಚಾಲಿ ಯುದ್ಧ, ಪ್ರತಿ ಮಾಡಿದವರು ಎಸ್.ತಿಪ್ಪೇಸ್ವಾಮಿ, ಇದು ೨೯.೦೨.೧೯೮೦ರಲ್ಲಿ ಮುಕ್ತಾಯವಾಗಿದೆ.
* ಸಾರಂಗಧರನ ಕಥೆ, ಇದನ್ನು ಬರೆದವರು ಎನ್.ಎಂ. ಬೊಮ್ಮಯ್ಯನವರು, ಇದನ್ನು ೧೯೮೬ರಲ್ಲಿ ಬರೆದಿದ್ದಾರೆ.
* ಭಕ್ತಪ್ರಹ್ಲಾದ, ಇದನ್ನು ಪ್ರತಿ ಮಾಡಿದವರು ಹನುಮಂತಪ್ಪ, ಹಾಯ್ಕಲ್. ಇದು ೧.೦೭.೧೯೭೮ರಲ್ಲಿ ರಚನೆಯಾಗಿದೆ.
* ಕರ್ಣಾರ್ಜುನರ ಕಾಳಗ, ಇದನ್ನು ಬರೆದವರು ರುದ್ರಪ್ಪ, ೧೯೭೬ರಲ್ಲಿ ಬರೆದು ಮುಗಿಸಿದ್ದಾರೆ.
* ಪಾರ್ಥವಿಜಯ. ಇದನ್ನು ಬರೆದವರು ಕೆ.ಸಿ. ತಿಪ್ಪೇಸ್ವಾಮಿ. ೨.೪.೧೯೭೬ರಲ್ಲಿ ಪ್ರತಿಮಾಡಿದ್ದಾರೆ.
* ಅಭಿಮನ್ಯು ಕಾಳಗ. ಇದನ್ನು ಬರೆದವರು ದೋಣಿಹಳ್ಳಿ ತಿಪ್ಪೇರುದ್ರಪ್ಪ, ೧೨.೯.೧೯೬೫ರಲ್ಲಿ ಬರೆದು ಮುಗಿಸಿದ್ದಾರೆ.
* ರಾಜಾಸತ್ಯವ್ರತನ ಕಥೆ ಪ್ರಸ್ತುತ ಪ್ರತಿಯನ್ನು ಕೂಡ್ಲಿಗಿ ತಾಲ್ಲೂಕು ಬಳ್ಳಾರಿ ಜಿಲ್ಲೆಯ ಕಾತ್ರಿಕೇನಹಟ್ಟಿಯ ತಿಮ್ಮಯ್ಯನ ಮಗ ಕಾರಯ್ಯನು ಬರೆಸಿರುತ್ತಾನೆ. ಇದನ್ನು ಮೊಳಕಾಲ್ಮೂರು ತಾಲ್ಲೂಕು ತುಮಕೊರ್ಲಹಳ್ಳಿ ಗ್ರಾಮದ ವಾಸಿಯಾದ ಮ್ಯಾಸನಾಯಕರ ಮಿಲ್ಟ್ರಿಬಯ್ಯಣ್ಣನ ಮಗ ಮಾಸ್ಟರ್ ಭೇಟಿಬಸಯ್ಯನವರು ಬರೆದಿರುತ್ತಾರೆ. ೧೪.೦೭.೧೯೮೨ರಲ್ಲಿ ಕಥೆ ಮುಕ್ತಾಯವಾಗಿರುವುದಾಗಿ ತಿಳಿದುಬರುತ್ತದೆ.
* ರಾಮಾಂಜನೇಯ ಯುದ್ಧ. ಈ ಪ್ರತಿಯನ್ನು ಬರೆದವರ ಹೆಸರು ಪ್ರಸ್ತಾಪವಾಗಿಲ್ಲ, ಇದು ಪ್ರತಿಗೊಂಡ ಕಾಲ ೧೩.೦೬.೧೯೮೨ರಲ್ಲಿ ಮುಕ್ತಾಯವಾಗಿದೆ.
* ಸೌಗಂಧಿಕ ಪುಷ್ಪ, ಇದನ್ನು ಪ್ರತಿ ಮಾಡಿಸಿದವರು ತಿಪ್ಪಯ್ಯನವರು, ಇದು ರಚನೆಯಾದ ಕಾಲಾವಧಿ ೨೫.೧೦.೧೯೭೫ರಲ್ಲಿ ಮುಕ್ತಾಯವಾಗಿದೆ.

ಹೀಗೆಯೇ ನಿಯುಕ್ತ ಲಿಪಿಕಾರರಲ್ಲಿ ಈ ಮೇಲಿನಂತೆ ರಾಯಸ್ತ ಸುಬೇದಾರ, ಶಾನುಭೋಗ, ಉಪಾಧ್ಯ, ಮುಂತಾದವರು ಬೇರೆಯವರ ಆಜ್ಞೆಯ ಮೂಲಕವಾಗಿ ಅಥವಾ ತಮ್ಮ ಪ್ರೀತಿಯಿಂದ ಗ್ರಂಥಗಳನ್ನು ಬರೆದುಕೊಟ್ಟಿರುವುದನ್ನು ನೋಡಬಹುದು.

೩. ವೃತ್ತಿ ಲಿಪಿಕಾರರು :

ಇವರು ತಮ್ಮ ಜೀವನವನ್ನು ನಡೆಸುವುದಕ್ಕೆ ಬರವಣಿಗೆಯನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡವರಾಗಿದ್ದು, "ಇವರು ಹಣ, ಬಟ್ಟೆ ಇನ್ನು ಮುಂತಾದವುಗಳನ್ನು ಪಡೆದು ಹಸ್ತಪ್ರತಿಗಳನ್ನು ಬರೆದುಕೊಡುತ್ತಿದ್ದರು. ಈ ವೃತ್ತಿ ಲಿಪಿಕಾರರಲ್ಲಿ ಕೆಲವರ ಹೆಸರಿನ ಹಿಂದೆ ಬರಹದ ಎಂಬ ವಿಶೇಷಣವನ್ನು ನೋಡಬಹುದಾಗಿದೆ."[೬೬] "ಇವರು ಪ್ರಾಚೀನ ಕಾಲದಲ್ಲಿದ್ದು ಇಂದಿನ ಬೆರಳಚ್ಚುಗಾರರಂತೆ, ಮುದ್ರಣಾಲಯದವರಂತೆ ಗ್ರಂಥೋತ್ಪಾದನ ಕೆಲಸದಲ್ಲಿ ನಿರತರಾಗಿದ್ದರು."[೬೭] ಚಿತ್ರದುರ್ಗ ಪರಿಸರದಲ್ಲಿ ಅನೇಕ ಜನ ವೃತ್ತಿಲಿಪಿಕಾರರನ್ನು ನೋಡಬಹುದಾಗಿದ್ದು ಅವರನ್ನು ಈ ಗ್ರಂಥದ ಉಲ್ಲೇಖಗಳ ಮೂಲಕವಾಗಿ ಸೂಚಿಸಲಾಗಿದೆ.

* ಪ್ರಜೋತ್ಪತ್ಯನಾಮ ಸಂ ಮಾರ್ಗಶಿರ ಶುಷಿಲ್ಲೂ ಕೊಡಲಿಪೇಟೆಯ ಬರಹದ ಫಲಾರದಯ್ಯ ಸಂಗಪ್ಪಸೆಟ್ಟಿಗೆಧನ ಗುರುಭಕ್ತನಕಾವ್ಯಕ್ಕೆ ಶುಭಮಸ್ತು.[೬೮] (ಕ್ರ.ಸಂ. ೧೪೬೩) ಬರಹದ ಫಲಾರದಯ್ಯ ವೃತ್ತಿ ಲಿಪಿಕಾರನಾಗಿದ್ದು ಇವರು ಸಂಗಪ್ಪಸೆಟ್ಟಿಗೆ ಧನಕನಕ ಅಭಿವೃದ್ಧಿಯಾಗಲೆಂದು ಗುರುಭಕ್ತನ ಕಾವ್ಯವನ್ನು ಬರೆದಿರುವರು.

* ಶ್ರೀ ಮತುಖಾಸದ ಸೋಲೂರ ಗುಂಟನೂರ ಮಠದ ಸಂಗನ ಬಸವಪ್ಪನವರು ಸರ್ವಧಾರಿ ಸಂವತ್ಸರದ ಶ್ರಾವಣ ಸುದ್ಧವ್ಯಾಲ ಚೌತಿ ಗುರುವಾರದ ಪ್ರಾತಃ ಕಾಲದಲ್ಲಿ ಶ್ರೀ ರುದ್ರಚಮೆ ಪುರುಷಸೂಕ್ತ ಸಹಸ್ರ ನಾಮಂಗಳ ಸೇರುವೆಯ ಪುಸ್ತಕ ಬರದು ಮುಗಿದ ಪುಸ್ತಕಕ್ಕೆ ನಿರ್ವಿಘ್ನಮಸ್ತು[೬೯] (ಕ್ರ.ಸಂ. ೧೩೨೭) ಸೋಲೂರ ಗುಂಟನೂರಮಠದ ಸಂಗನಬಸವಪ್ಪನವರು ವೃತ್ತಿ ಲಿಪಿಕಾರರಾಗಿದ್ದಾರೆ. ಸಹಸ್ರನಾಮಂಗಳ ಸೇರುವೆಯ ಪುಸ್ತಕವನ್ನು ಬರೆದಿದ್ದಾರೆ.

* ಪ್ರಮೋಧೂತ ಸಂ ಕಾರ್ತೀಕ ಕೃಷ್ಣಪಕ್ಷ ಅಷ್ಟಮಿ ಸೋಮವಾರ ಪುಟ್ಟು ಬಸವಲಿಂಗದೇವರು ಸಹಪುರದ ಜುಟ್ಟಿನ ಗಂಗಾಧರ ದೇವರ ಮಠದಲ್ಲಿ ಷಟ್ಕಾವ್ಯ ಬರದು ಮುಗಿತು[೭೦] (ಕ್ರ.ಸಂ. ೩೫೪) ಪುಟ್ಟು ಬಸವಲಿಂಗ ದೇವರು ಸಹಪುರದ ಜುಟ್ಟಿನ ಗಂಗಾಧರ ದೇವರಮಠದಲ್ಲಿ ಷಟ್ಕಾವ್ಯ ಬರೆದು ಮುಗಿಸಿದ್ದಾರೆ.

* ಪ್ರಮಾಧೀಚ ಸಂವತ್ಸರದ ಮಾರ್ಗಶಿರ ಮಾಸದ ಶುದ್ಧ ಬಿದಿಗೆಯ ತಾಸೂವರೆಯಲ್ಲಿ ಸುಲೇಗಾಂವಿ ಚಂನಬಸವದೇವರು ಎಲ್ಲಾಪುರಾತೆರೆ ಶ್ರೀಪಾದಭೃಂಗನಾಗಿ ಬರೆದು ಸಮಾಪ್ತಿಯಾಯಿತ್ತು[೭೧] (ಕ್ರ.ಸಂ. ೬೩೦) ಸುಲೇಗಾಂವಿ ಚಂನಬಸವದೇವರು ಎಲ್ಲಾ ಪುರಾತರ ಶ್ರೀಪಾದಭೃಂಗನಾಗಿ ಸದ್ಧ ದೀಪಿಕೆಯನ್ನು ಬರೆದು ಮುಗಿಸಿದ್ದಾರೆ.

* ಪ್ರಮಾಧೀಚನಾಮ ಸಂವತ್ಸರದ ಮಾಘಮಾಸದ ಶುಕ್ಲ ಪಕ್ಷದ ಪಂಚಮ ಶುದ್ಧ ಸೋಮವಾರದ ಉದಯದ ತಾಸುವರೆಯೊಳಗೆ ಅಮೃತವ್ಯಾಳ್ಯದಲ್ಲಿ ಸೂಲೆಗಾವಿ ಚೆಂನಬಸವದೇವರು ಯೆಲ್ಲಾ ಪುರಾತರವಚನವ ಆ ಸಕಲ ಶರಣರ ರಹಷ್ಯೋತ್ತರದಿಂದ ಬರದು ಸಂಪೂರ್ನ್ನಮಾಡಿ (ಸ)

ಮಾಪ್ತಿ ಆಯಿತ್ತು ಮಂಗಳ ಮಹಾ[೭೨] (ಕ್ರ.ಸಂ. ೬೩೭) ಸೊಲೆಗಾವಿ ಚೆಂನಬಸವ ದೇವರು ವೃತ್ತಿ ಲಿಪಿಕಾರರಾಗಿದ್ದು ಇವರು ಎಲ್ಲಾ ಪುರಾತನ ವಚನಗಳನ್ನು ಬರೆದು ಮುಗಿಸಿದ್ದಾರೆ.

* ಪಿಂಗಳ ಸಂದ ಪುಷ್ಯ ಮಾಸವಧಿಯ ಬಹುಳ ಅಷ್ಟಮಿ ಸೋಮವಾರ ಆರುತಾಸಿನೊಳ್ ಶ್ರೀ ವೀರ ಮಾಹೇಶ್ವರಾಚಾರ ಪ್ರವರ್ತಕ ಪರ್ವತ ದೇವರಿಂದೆ ಲೇಖನಂಗೆಯ್ದು ಸಂಪೂರ್ಣವಾಯಿತ್ತು[೭೩] (ಕ್ರ.ಸಂ.೭೨೦) ಶ್ರೀ ವೀರಮಾಹೇಶ್ವರಾಚಾರ ಪ್ರವರ್ತಕ ಪರ್ವತ ದೇವರಿಂದೆ ಲೇಖನಂಗೆಯ್ದು ಸಂಪೂರ್ಣವಾಗಿ ಮುಗಿಸಿದ್ದಾರೆ.

* ಶಾಲಿವಾಹನ ಶಕಾಬ್ದಾ ೧೭೮೫ನೆಯ ಪ್ರವರ್ತಮಾನಕ್ಕೆ ಸಲುವ ದುಂದುಭಿನಾಮ ಸಂವತ್ಸರೆ ಉತ್ತರಾಯನೆ ಶಶಿರುತೌ ಫಾಲ್ಗುಣ ಮಾಸೆ ಕೃಷ್ಣಪಕ್ಷೆತಥೌ ಚತುರ್ದ್ಶಿ ೭೭ ಘಟಿ ೧೧ಪಳ ಶತತಾರ ನಕ್ಷತ್ರ ೨೦ ಘಟಿ ೧ಸುದಿವಸ ಬೀರೂರಲ್ಲಿರುವ ತ್ಯಾವಣಿಗೆ ಮಠದ ದತ್ತ ಪುರಯ್ಯನವರ ತನೂಭವ ಶಿವಲಿಂಗದೇವಾಹ್ವಯ ಸುಹಸ್ತದಿಂ ಚನ್ನಗಿರಿಯಲ್ಲಿರುವ ಜವಳಿ ನಾಗಪ್ಪನ ವರುದರುದ್ಭವರಾದ ಜೇಷ್ಟಪುತ್ರ ವೀರಪ್ಪಗೆ ಸದಾ ಸ್ಥಿರತಾರಾರೋಗ್ಯ ಸೌಭಾಗ್ಯಲಕ್ಷ್ಮಿ ಸಂಪತ್ಯ ಮುದ್ಯಾಗಳೆಂದಾ ಸ್ವಾಮಿ ಪ್ರಾರ್ಥನೆಯಿಂದ ಸದರಿ ಪೌರಾಣವನ್ನು ಲಿಖಿಸಿದೆ.[೭೪] (ಕ್ರ.ಸಂ. ೨೨೮೪) ತ್ಯಾವಣಿಗೆ ಮಠದ ದತ್ತ ಪುರಯ್ಯನವರ ಮಗನಾದ ಶಿವಲಿಂಗದೇವಾಹ್ವನ್ನು ಜವಳಿನಾಗಪ್ಪನವರ ಮಗನಾದ ವೀರಪ್ಪನಿಗೆ ಸದರಿ ಪೌರಾಣವನ್ನು ಬರೆದುಕೊಟ್ಟಿದ್ದಾನೆ.

* ಶ್ರೀ ಗುರು ಕಪಿಲಸಿದ್ದೇಶ್ವರನ ದಿವ್ಯ ಚರಣಾ.....

ಈ ಪ್ರಭುಲಿಂಗ ಲೀಲೆಯ ಸಿರಿಗಣಿ ಭದ್ರಯ್ಯಗೌಡರಿಗೆ ಮರಿಗೆ ಸೇನಭೋವ ಬರಕೊಟ್ಟ ಪುಸ್ತಕ ಸಖ ವರುಷ ೧೫೮೮ ರಾಕ್ಷಸ ಸಂವತ್ಸರ ಜೇಷ್ಟ ಶು೧ಲು[೭೫] (ಕ್ರ.ಸಂ. ೧೪೭೩)

ಮರಿಗೆ ಸೇನಭೋವ ವೃತ್ತಿ ಲಿಪಿಕಾರನಾಗಿದ್ದು ಸಿರಿಗಣಿ ಭದ್ರಯ್ಯ ಗೌಡರಿಗೆ ಪ್ರಭುಲಿಂಗ ಲೀಲೆಯನ್ನು ಬರೆದುಕೊಟ್ಟಿದ್ದಾನೆ.

* ವಿಳಂಬಿ ಸಂವತ್ಸರ ಜೇಷ್ಟಮಾಸದ ದಶಮಿ ಗುರುವಾರ ಪ್ರಾರಂಭಂ ಭಾದ್ರಪದ ಮಾಸದ ಶುಕ್ಲಪಕ್ಷ ತದಿಗೆ ಸೋಮವಾರ ಪ್ರಾಂತಃ ಕಾಲದಲೂ ವೃಷಭೇಂದ್ರ ವಿಜಯ ಮಹಾಪುರಾಣ ಸಮಾಪ್ತ[೭೬] (ಕ್ರ.ಸಂ. ೧೫೬೦) ಗುರುದೇವನು ವೃತ್ತಿ ಲಿಪಿಕಾರನಾಗಿದ್ದು ಈತನು ವೃಷಭೇಂದ್ರ ವಿಜಯವನ್ನು ಬರೆದಿರುವುದನ್ನು ನೋಡಬಹುದು.

* ಇದ ಬರದವರು ಮಹಾಂತದೇವರೂ ಮುರು ವಾರಹ ಲಿಂಗಪ್ಪನ ಕೈಯ ಹಂಚಡ ವಂದಕ್ಕೆ ಹೊನ್ನು ಅಂತು ಏಳು ಹೊನ್ನು ವೀರಪ್ಪ ೭ ವಹನ್ನು ಕೊಡಬೇಕು ಇದು ಚಕ್ರಹೊನ್ನು ಕೊಡಬೇಕು[೭೭] (ಕ್ರ.ಸಂ. ೨೮೫೮) ಮಹಾಂತ ದೇವರೂ ಲಿಂಗಪ್ಪ ವೀರಪ್ಪ ಇವರು ವೃತ್ತಿ ಲಿಪಿಕಾರರಾಗಿದ್ದು ಇವರು ಹಣವನ್ನು ತೆಗೆದುಕೊಂಡು ಷಟ್ಸ್ಥಲಜ್ಞಾನ ಸಾರಾಮೃತವನ್ನು ಬರೆದುಕೊಟ್ಟಿದ್ದಾರೆ.

* ಸೌಮ್ಯ ನಾಮ ಸಂವತ್ಸರದ ಆಷಾಢ ಶುದ್ಧ ೧೪ ಬುಧವಾರ ಸವುಮ್ಯ ನಾಮ ಸಂವತ್ಸರ ಆಶ್ವೀಜ ಬಹು ೧ಲ್ಲು ತರಿಕೆರೆಮಠದ ಸ್ವಾಮಿಗಳಿಗೆ ಸೂಲಿ ಕುಂಟೆಸೆಟ್ಟಿ ಬಾಳಪ್ಪನವರ ನಂಜುಡ ಬರದು ವಪ್ಪಿಸಿದ ಸಕಲಗಣಂಗಳ ವಚನಾ[೭೮] (ಕ್ರ.ಸಂ. ೨೯೭೧) ತರಿಕೆರೆಮಠದ ಸ್ವಾಮಿಗಳಿಗೆ ಸೂಲಿಕುಂಟೆ ಸೆಟ್ಟಿ ಬಾಳಪ್ಪನವರ ನಂಜುಂಡ ಬರದುವಪ್ಪಿಸಿದ ಸಕಲ ಗಣಂಗಳವಚನವನ್ನು ನೋಡಬಹುದು ಈತನು ಸಹ ವೃತ್ತಿ ಲಿಪಿಕಾರನಾಗಿ ಕಂಡುಬರುತ್ತಾನೆ.

* ಸ್ವಭಾನು ಸಂವತ್ಸರ ಶ್ರಾವಣ ಶುದ್ಧ ೧೩ರಲ್ಲೂ ಗುಮ್ಮಳಾಪುರದ ಸಿಂಹಾಸನಕ್ಕೆ ಕರ್ತರಾದ ಪಟ್ಟದ ವಿಶ್ವನಾಥ ದೇವರವರ ಶಿಷ್ಯನು ಸಿದ್ದಣನು ಸ್ವಹಸ್ತದಲ್ಲು ಭದ್ರಪ್ಪ ದೇವರಿಗೆ ಬರೆದುಕೊಟ್ಟ ಪುಸ್ತಕ ಸಮಾಪ್ತ[೭೯] (ಕ್ರ.ಸಂ. ೩೦೨೫) ಗುಮ್ಮಳಾಪುರದ ಸಿಂಹಾಸನಕ್ಕೆ ಕರ್ತರಾದ ಪಟ್ಟದ ವಿಶ್ವನಾಥದೇವರ ಶಿಷ್ಯನಾದ ಸಿದ್ದಣ್ಣನು ವೃತ್ತಿ ಲಿಪಿಕಾರನಾಗಿದ್ದು ಈತನು ಸಂಗನಬಸವೇಶ್ವರ ದೇವರು ನಿರೂಪಿಸಿದ ಷಟ್ಸ್ಥಲದ ವಚನವನ್ನು ಸ್ವಹಸ್ತದಲ್ಲು ಭದ್ರಪ್ಪದೇವರಿಗೆ ಬರೆದು ಕೊಟ್ಟಿರುವರು.

* ವಿಶ್ವಾವಸು ಸಂವತ್ಸರ ಜೇಷ್ಟಶುದ್ಧ ೭ ಬೃಹಸ್ಪತಿವಾರದಲ್ಲೂ ಭೈರವೇಶ್ವರ ಕಾವ್ಯವನ್ನು ಸಿದ್ದನಂಜೇದೇವರ ಶಿಷ್ಯರು ಶಿವಲಿಂಗದೇವರವರಿಗೆ ಪಂಚಕಿನಾಮಾ ಹ್ವಯದಿಂದೊಪ್ಪುವ ಷಟ್ಸ್ಥಲ ಚಕ್ರವರ್ತಿಸಾರ್ವ ಭೌಮಮಪ್ಪ ಪಂಚಾಕ್ಷರಿದೇವರು ಪರಿಸಮಾಪ್ತಿಯನೆಯಿದಿಸಿದರು[೮೦] (ಕ್ರ.ಸಂ. ೩೦೯೬)

ಸಿದ್ಧನಂಜೇದೇವರ ಶಿಷ್ಯರು ಶಿವಲಿಂಗದೇವರವರಿಗೆ ಭೈರವೇಶ್ವರ ಕಾವ್ಯವನ್ನು ಬರೆದು ಕೊಟ್ಟಿದ್ದಾನೆ.

* ಕ್ರೋಧಿ ಸಂವತ್ಸರದ ಮಾಘಮಾಸದ ಕೃಷ್ಣಪಕ್ಷದ ಪಂಚಮಿಯ ಬುಧವಾರದಲ್ಲಿಯು ಪಂಚಾಕ್ಷರಿದೇವರು ಸಿದ್ದಾಂತ ಶಿಖಾಮಣಿಯ ಬರೆದು ಪರಿಸಮಾಪ್ತಿಯಾಯಿತ್ತು[೮೧] (ಕ್ರ.ಸಂ. ೩೧೦೧) ಪಂಚಾಕ್ಷರಿ ದೇವರು ಸಿದ್ಧಾಂತ ಶಿಖಾಮಣಿಯನ್ನು ಬರೆದು ಮುಗಿಸಿದ್ದಾರೆ. ಇವರು ವೃತ್ತಿ ಲಿಪಿಕಾರರಾಗಿದ್ದಾರೆ.

* ನಳ ಸಂವತ್ಸರದ ಅಶ್ವೀಜ ಶುದ್ಧ ಪೌರ್ನಮಿ ಸೋಮವಾರ....ಬಿದುರೆಯ ಸಿದ್ಧಲಿಂಗದೇವರ ಶಿಷ್ಯರು ಚನ್ನಮಲ್ಲಿಕಾರ್ಜುನದೇವರು ಅನುಭವದ ವೀರಣ್ಣೊಡೆ ದೇವರ ಕೊಮಾರು ಚೆಂನ ದೇವರಿಗೆ ಬರದು ಕೊಟ್ಟ[೮೨] (ಕ್ರ.ಸಂ. ೩೧೮೭) ಬಿದುರೆಯ ಸಿದ್ಧಲಿಂಗದೇವರ ಶಿಷ್ಯರು ಚನ್ನಮಲ್ಲಿಕಾರ್ಜುನ ದೇವರು ಅನುಭಾವದ ವೀರಣ್ಣೊಡೆದೇವರ ಕುಮಾರ ಚೆಂನದೇವರಿಗೆ ಸುರಂಗ ಕಾವ್ಯವನ್ನು ಬರೆದು ಕೊಟ್ಟಿದ್ದಾರೆ. ಚಿತ್ರದುರ್ಗ ಪರಿಸರದಲ್ಲಿ ವೃತ್ತಿ ಲಿಪಿಕಾರರು ಹೆಚ್ಚಿನ ಸಂಖ್ಯೆಯಲ್ಲಿ ಕಾಣ ಸಿಗುವುದಿಲ್ಲ.

ಹೀಗೆ ಲಿಪಿಕಾರರು ಅತ್ಯಂತ ಪ್ರಮುಖರೆಂದೇ ಹೇಳಬಹುದು. ಈ ಮೇಲಿನಂತೆ ವಿಭಿನ್ನ ಲಿಪಿಕಾರರನ್ನು ವರ್ಗೀಕರಿಸಿಕೊಂಡಿದ್ದು ಅವರ ಬಗೆಗಿನ ವಿವರಣೆಯನ್ನು ಹಾಗೂ ಜೊತೆಗೆ ಅವರ ಆದರ್ಶಗಳನ್ನು ತಿಳಿಯಲಾಗಿದೆ. ಇವುಗಳ ಮೂಲಕವಾಗಿ ಸಮಾಜದಲ್ಲಿ ವಿವಿಧ ಉದ್ದೇಶಗಳಿಗಾಗಿ ಹಾಗೂ ಕುಟುಂಬ ಸ್ವಾಸ್ಥ್ಯಕ್ಕಾಗಿ ಹಸ್ತಪ್ರತಿಗಳು ಪ್ರಸಾರದಲ್ಲಿದ್ದುದ್ದನ್ನು ನೋಡಬಹುದು.

ಕೊನೆ ಟಿಪ್ಪಣಿ

೧. ಅಂಗಡಿ ಎಸ್. ಎಸ್., ಪಠ್ಯದ ಚಲನಶೀಲತೆ ಪು.ಸಂ. ೧೧೬ ಹಸ್ತಪ್ರತಿ ವ್ಯಾಸಂಗ, ೪, ಹಸ್ತಪ್ರತಿ ಅಧ್ಯಯನದ ಹೊಸಸಾಧ್ಯತೆಗಳು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವರ್ಷ ೨೦೦೩

೨. ಸಣ್ಣಯ್ಯ ಬಿ.ಎಸ್., ಹಸ್ತಪ್ರತಿಶಾಸ್ತ್ರ ಪರಿಚಯ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ೧೯೯೨ ಪು.ಸಂ. ೩೪ರಿಂದ ೩೫.

೩. ದೇವೀರಪ್ಪ ಎಚ್., ಕನ್ನಡ ಹಸ್ತಪ್ರತಿಗಳ ಇತಿಹಾಸ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೧೯೭೭, ಪು.ಸಂ, ೭೦.

೪. ದುರ್ಗಾದಾಸ್ ಕೆ.ಆರ್., ಬಳ್ಳಾರಿ ಜಿಲ್ಲೆಯ ಬಯಲಾಟಗಳು, ೧೯೯೬ ಪು.ಸಂ, ೭೯

೫. ಸಾರಂಗಧರ ಪ್ರತಿ ಪು.ಸಂ, ೧

೬. ಲಕ್ಷ್ಮಣ್ ತೆಲಗಾವಿ, ಎಂ.ವಿ. ಶ್ರೀನಿವಾಸ್ (ಸಂ) ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ೧೯೯೫ ಪು.ಸಂ, ೧೫೪

೭. ನರಸಿಂಹಾಚಾರ್ ಡಿ.ಎಲ್. ಕನ್ನಡ ಗ್ರಂಥ ಸಂಪಾದನೆ, ಶಾರದ ಮಂದಿರ ಮೈಸೂರು, ೧೯೩೬, ಪು.ಸಂ, ೪೫.

೮. ಪಂಡಿತಕವಲ್ಲಿ, ಕನ್ನಡ ಕಸ್ತೂರಿ ಕೋಶ, ರಾಮಾಶ್ರಯ ಪಬ್ಲಿಕೇಷನ್ಸ್ ಸುಭಾಷ್ ರಸ್ತೆ ಧಾರವಾಡ, ಪು.ಸಂ, ೭೩೯

೯. ದೇವೀರಪ್ಪ ಎಚ್., ಕನ್ನಡ ಹಸ್ತಪ್ರತಿಗಳ ಇತಿಹಾಸ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೭ ಪು.ಸಂ, ೪೫

೧೦. ಭಾನುಮತಿ ವೈ.ಸಿ., ಗ್ರಂಥ ಸಂಪಾದನೆ ಕೆಲವು ಅಧ್ಯಯನ: ಜೈನ ಹಸ್ತಪ್ರತಿಕಾರರು, ಕೇಶವ ಪ್ರಕಾಶನ ಮೈಸೂರು, ೧೯೯೭ ಪು.ಸಂ, ೧

೧೧. ಅದೇ, ಪು.ಸಂ, ೧

೧೨. ನರಸಿಂಹಾಚಾರ್ ಡಿ.ಎಲ್., ಕನ್ನಡ ಗ್ರಂಥ ಸಂಪಾದನೆ, ಶಾರದ ಮಂದಿರ ಮೈಸೂರು, ೧೯೭೬ ಪು.ಸಂ. ೫೨

೧೩. ಅಂಗಡಿ ಎಸ್.ಎಸ್., ಕನ್ನಡ ಗ್ರಂಥ ಸಂಪಾದನೆ ಬಂಧ ವಿನ್ಯಾಸ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೨೦೦೭, ಪು.ಸಂ, ೧೧.

೧೪. ಹಿರೇಮಠ ಬಿ.ಕೆ. ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ವೀರಶೈವ ಅಧ್ಯಯನ ವೇದಿಕೆ ವಿಜಾಪುರ ೧೯೬೨ ಪು.ಸಂ, ೭೪

೧೫. ಅದೇ, ಪು.ಸಂ, ೫೮

೧೬. ಕಲಬುರ್ಗಿ ಎಂ.ಎಂ., ಕನ್ನಡ ಹಸ್ತಪ್ರತಿಶಾಸ್ತ್ರ, ಸ್ನೇಹ ಪ್ರಕಾಶನ ಬೆಂಗಳೂರು ೧೯೯೩, ಪು.ಸಂ, ೨೦.

೧೭. ಶಿವಣ್ಣ ಎಸ್.(ಸಂ), ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಡಂಬಳ-ಗದಗ ಪು.ಸಂ, ೫೬-೫೭

೧೮. ಅದೇ, ಪು.ಸಂ, ೮೩

೧೯. ಅದೇ, ಪು.ಸಂ, ೯೦

೨೦. ಅದೇ, ಪು.ಸಂ, ೧೩೬

೨೧. ಅದೇ, ಪು.ಸಂ, ೨೬೭

೨೨. ಅದೇ, ಪು.ಸಂ, ೨೭೦ ರಿಂದ ೨೭೧

೨೩. ಶಿವಣ್ಣ ಎಸ್.(ಸಂ), ಶ್ರೀ ಜಗದ್ಗುರು ಮುರುಘಾರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ-೧ ಚಿತ್ರದುರ್ಗ, ೧೯೯೧ ಪು.ಸಂ, ೩೮೬

೨೪. ಅದೇ, ಪು.ಸಂ, ೩೯೬

೨೫. ವೀರೇಶ್ ಎಸ್. ಬಡಿಗೇರ, ಚನ್ನವೀರಪ್ಪ ಎಸ್.ಆರ್. (ಸಂ), ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂ.ಪು-೨ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦, ಪು.ಸಂ, ೩೯೬

೨೬. ಕುಮಾರರಾಮನ ಕಾಗದದ ಹಸ್ತಪ್ರತಿ ಪು.ಸಂ. ೫೩೦, ವರ್ಷ ೧೯-೩-೧೯೭೧

೨೭. ಗಿರಿಜಾ ಕಲ್ಯಾಣದ ಬಯಲಾಟದ ಹಸ್ತಪ್ರತಿ ಪು.ಸಂ, ೧

೨೮. ಕಲಬುರ್ಗಿ ಎಂ.ಎಂ., ಕನ್ನಡ ಹಸ್ತಪ್ರತಿಶಾಸ್ತ್ರ, ಸ್ನೇಹಪ್ರಕಾಶನ ಬೆಂಗಳೂರು ೧೯೯೩ ಪು.ಸಂ, ೧೯

೨೯. ಶಿವಣ್ಣ ಎಸ್. (ಸಂ), ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಡಂಬಳ-ಗದಗ, ೧೯೯೪, ಪು.ಸಂ, ೧೯

೩೦. ಅದೇ, ಪು.ಸಂ, ೨೮

೩೧. ಅದೇ, ಪು.ಸಂ, ೩೭ರಿಂದ ೩೮

೩೨. ಅದೇ, ಪು.ಸಂ, ೫೬

೩೩. ಅದೇ, ಪು.ಸಂ, ೮೩

೩೪. ಅದೇ, ಪು.ಸಂ, ೯೫

೩೫. ಅದೇ, ಪು.ಸಂ, ೧೩೯

೩೬. ಅದೇ, ಪು.ಸಂ, ೧೫೩

೩೭. ಅದೇ, ಪು.ಸಂ, ೧೮೧

೩೮. ಅದೇ, ಪು.ಸಂ, ೧೯೨

೩೯. ಅದೇ, ಪು.ಸಂ, ೨೧೭

೪೦. ಅದೇ, ಪು.ಸಂ, ೧೦೬೨

೪೧. ಶಿವಣ್ಣ ಎಸ್. (ಸಂ), ಮುರುಘಾರಾಜೇಂದ್ರ ಹಸ್ತಪ್ರತಿ ಸೂಚಿ ಸಂ-೧, ಚಿತ್ರದುರ್ಗ ಪು.ಸಂ, ೩೮೪

೪೨. ಅದೇ, ಪು.ಸಂ, ೩೮೫

೪೩. ಅದೇ, ಪು.ಸಂ, ೩೮೫

೪೪. ಅದೇ, ಪು.ಸಂ, ೩೮೬

೪೫. ಅದೇ, ಪು.ಸಂ, ೩೮೬

೪೬. ಅದೇ, ಪು.ಸಂ, ೩೮೬

೪೭. ಅದೇ, ಪು.ಸಂ, ೩೮೭

೪೮. ಅದೇ, ಪು.ಸಂ, ೩೮೭

೪೯. ಅದೇ, ಪು.ಸಂ, ೩೮೭

೫೦. ಅದೇ, ಪು.ಸಂ, ೩೮೮

೫೧. ಅದೇ, ಪು.ಸಂ, ೩೮೯

೫೨. ಅದೇ, ಪು.ಸಂ, ೩೮೯

೫೩. ಅದೇ, ಪು.ಸಂ, ೩೯೦

೫೪. ಅದೇ, ಪು.ಸಂ, ೩೯೧

೫೫. ಅದೇ, ಪು.ಸಂ, ೩೯೨

೫೬. ಅದೇ, ಪು.ಸಂ, ೩೯೨

೫೭. ಅದೇ, ಪು.ಸಂ, ೩೯೩

೫೮. ಅದೇ, ಪು.ಸಂ, ೩೯೪

೫೯. ಅದೇ, ಪು.ಸಂ, ೩೯೪

೬೦. ಅದೇ, ಪು.ಸಂ, ೩೯೫

೬೧. ಅದೇ, ಪು.ಸಂ, ೩೯೫

೬೨. ಅದೇ, ಪು.ಸಂ, ೩೯೬

೬೩. ಅದೇ, ಪು.ಸಂ, ೩೯೭

೬೪. ಅದೇ, ಪು.ಸಂ, ೩೯೮

೬೫. ಅದೇ, ಪು.ಸಂ, ೩೯೮

೬೬. ಕಲಬುರ್ಗಿ ಎಂ.ಎಂ., ಕನ್ನಡ ಹಸ್ತಪ್ರತಿಶಾಸ್ತ್ರ, ಸ್ನೇಹ ಪ್ರಕಾಶನ ಬೆಂಗಳೂರು, ೧೯೯೩ ಪು.ಸಂ, ೨೦.

೬೭. ಆದೇ, ಪು.ಸಂ, ೩೦.

೬೮. ಶಿವಣ್ಣ ಎಸ್. (ಸಂ), ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ವೀ.ಅ.ಸಂ.ಶ್ರೀ ಜ.ತೋಂಟದಾರ್ಯ ಸಂಸ್ಥಾನ ಮಠ ಡಂಬಳ-ಗದಗ ಪು.ಸಂ, ೧೬೬

೬೯. ಅದೇ, ಪು.ಸಂ, ೧೫೦

೭೦. ಅದೇ, ಪು.ಸಂ, ೪೩

೭೧. ಅದೇ, ಪು.ಸಂ, ೭೦

೭೨. ಅದೇ, ಪು.ಸಂ, ೭೧

೭೩. ಅದೇ, ಪು.ಸಂ, ೮೦

೭೪ ಅದೇ, ಪು.ಸಂ, ೨೭೧ರಿಂದ ೨೭೨

೭೫. ಶಿವಣ್ಣ ಎಸ್. (ಸಂ), ಶ್ರೀಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ-೧ ಚಿತ್ರದುರ್ಗ, ೧೯೯೧ ಪು.ಸಂ, ೩೮೬

೭೬. ಅದೇ, ಪು.ಸಂ, ೩೮೭

೭೭. ಅದೇ, ಪು.ಸಂ, ೩೯೨ರಿಂದ ೩೯೩

೭೮. ಅದೇ, ಪು.ಸಂ, ೩೯೩

೭೯. ಅದೇ, ಪು.ಸಂ, ೩೯೩ರಿಂದ ೩೯೪

೮೦. ಅದೇ, ಪು.ಸಂ, ೩೯೪

೮೧. ಅದೇ, ಪು.ಸಂ. ೩೯೪

೮೨. ಅದೇ, ಪು.ಸಂ. ೩೯೫

ಅಧ್ಯಾಯ : ೮

ಸಮಾರೋಪ

ಅಧ್ಯಾಯ: ಎಂಟು

ಸಮಾರೋಪ

ಹಸ್ತಪ್ರತಿಗಳ ಅಗತ್ಯತೆಯನ್ನು ಹಾಗೂ ಅನಿವಾರ್ಯತೆಯನ್ನು ಮನನ ಮಾಡುವುದು ಸ್ತುತ್ಯಾರ್ಹವೆಂದು ಭಾವಿಸಿ ಜಾಗತೀಕರಣದ ನೆಪದಲ್ಲಿ ಸಂಸ್ಕೃತಿ ವಿನಾಶದ ಸಂದರ್ಭದಲ್ಲಿ ಆಕ್ರಮಣಕಾರಿ ಪ್ರವೃತ್ತಿಗಳು ಒಳಹೊಕ್ಕು ಈ ನೆಲದ ಸಾಂಸ್ಕೃತಿಕ ಬಂಧನದ ಬದುಕನ್ನು ವಿಚ್ಛೇಧನಗೊಳಿಸುವ ಆತಂಕ ಶೋಚನೀಯವಾದದ್ದು. ಈ ಹಸ್ತಪ್ರತಿಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಇವುಗಳ ಕುರಿತಾಗಿ ಸರ್ವೇಕ್ಷಣೆ ಮತ್ತು ಅಧ್ಯಯನ ಕೈಗೊಳ್ಳುವದು ಶೈಕ್ಷಣಿಕವಾದ ಅಗತ್ಯದ ಪೂರೈಕೆಯಾಗಿ ಈ ಅಧ್ಯಯನ ರೂಪುಗೊಂಡಿದೆ. ಪ್ರಸ್ತುತ ಅಧ್ಯಯನಕ್ಕೆ ಚಿತ್ರದುರ್ಗ ಪರಿಸರದಲ್ಲಿನ ಹಸ್ತಪ್ರತಿಗಳ ಸರ್ವೇಕ್ಷಣೆ ಮತ್ತು ಅಧ್ಯಯನವನ್ನು ದಾಖಲೀಕರಣ ಮಾಡಲಾಗಿದೆ.

ಈ ಮಹಾಪ್ರಬಂಧವು ಪ್ರಮುಖವಾಗಿ ಎಂಟು ಅಧ್ಯಾಯಗಳಾಗಿ ವಿಭಾಗಿಸಿಲ್ಪಟ್ಟಿದೆ. ಈ ಅಧ್ಯಾಯಗಳ ಮೂಲಕ ಹೆಚ್ಚಿನ ಅಂಶಗಳನ್ನು ತಿಳಿದುಕೊಳ್ಳುಬಹುದಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಈ ಮಹಾಪ್ರಬಂಧದಲ್ಲಿ ಒಟ್ಟಾರೆಯಾಗಿ ಚರ್ಚಿಸುವ ಅಂಶಗಳನ್ನು ಸಂಕ್ಷಿಪ್ತವಾಗಿ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪದಲ್ಲಿ ಹೇಳಲಾಗಿದೆ. ಉದ್ದೇಶದಲ್ಲಿ ಏಕೆ ಈ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂಬ ಸಂಗತಿಯನ್ನು ವಿವರಿಸಲಾಗಿದೆ. ವ್ಯಾಪ್ತಿಯಲ್ಲಿ ಮಹಾಪ್ರಬಂಧದ ಅಧ್ಯಯನಕ್ಕೆ ವ್ಯಾಪ್ತಿಯಿದೆ. ಇಲ್ಲಿ ವ್ಯಾಪ್ತಿಯೆಂದರೆ ಅಧ್ಯಯನದ ಚೌಕಟ್ಟು ಎಂದರ್ಥ. ಯಾವುದೇ ಅಧ್ಯಯನಕ್ಕೆ ನಿರ್ದಿಷ್ಟವಾದ ಚೌಕಟ್ಟುಯಿರುತ್ತದೆ. ಇದರಿಂದ ಅಧ್ಯಯನದ ನಿಶ್ಚಿತವಾದ ಫಲಿತವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಹೀಗಾಗಿ ಪ್ರಸ್ತುತ ಮಹಾಪ್ರಬಂಧದಲ್ಲಿ ಚಿತ್ರದುರ್ಗ ಪರಿಸರದಲ್ಲಿ ಬರುವ ಹಳ್ಳಿಗಳನ್ನು ಕ್ಷೇತ್ರಕಾರ್ಯ ಮಾಡಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸ್ವರೂಪದಲ್ಲಿ ಈ ಮಹಾಪ್ರಬಂಧಕ್ಕೆ ಸಂಬಂಧಿಸಿದಂತೆ ಅಧ್ಯಾಯಗಳ ವಿಂಗಡಣೆ ಹಾಗೂ ಅನುಸರಿಲಾಗುವ ವಿಧಾನವನ್ನು ಕುರಿತು ಹೇಳಲಾಗಿದ್ದು ಈ ಎಲ್ಲಾ ಅಂಶಗಳನ್ನು ಸಹ ಅಧ್ಯಾಯ ಒಂದರಲ್ಲಿ ವಿವರಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಹಸ್ತಪ್ರತಿಗಳಲ್ಲಿ ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ, ರಾಜಕೀಯ, ಆರ್ಥಿಕ, ವಿಜ್ಞಾನ, ವೈದ್ಯ, ಸಂಗೀತ, ಎಲ್ಲ ಜ್ಞಾನಶಾಖೆಗಳಿಗೆ ಸಂಬಂಧಿಸಿದ ಮಾಹಿತಿಗಳು ಒಳಗೊಂಡಿರುವುದನ್ನು ಕಾಣಬಹುದಾಗಿದೆ. ಪ್ರಮುಖವಾಗಿ ಈ ಅಧ್ಯಾಯದಲ್ಲಿ ಎರಡು ರೀತಿಯ ಹಸ್ತಪ್ರತಿ ಒಡೆತನಗಳನ್ನು ಕಾಣಬಹುದು. ಅವುಗಳೆಂದರೆ ವ್ಯಕ್ತಿ ಒಡೆತನದ ಹಸ್ತಪ್ರತಿಗಳು, ಸಾಂಸ್ಥಿಕ ಒಡೆತನದ ಹಸ್ತಪ್ರತಿಗಳು ವ್ಯಕ್ತಿ ಒಡೆತನದ ಹಸ್ತಪ್ರತಿಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ನೋಡಬಹುದು. ಮಠ–ಮಾನ್ಯಗಳಂತಹ ಸಾಂಸ್ಥಿಕ ನೆಲೆಯಲ್ಲಿ ಇಲ್ಲಿಯ ಹಸ್ತಪ್ರತಿ ಸಂಪತ್ತನ್ನು ಗಮನಿಸಿದಂತೆ ಈ ಸಂಪತ್ತು ವ್ಯಕ್ತಿ ಒಡೆತನದಲ್ಲಿ ಸಂಗ್ರಹಗೊಂಡಿರುವುದು ಗೋಚರಿಸುತ್ತದೆ. ಅವುಗಳನ್ನು ಹಸ್ತಪ್ರತಿ ಪುಷ್ಪಿಕೆಗಳಿಂದ ತಿಳಿಯಬಹುದಾಗಿದೆ. ಹೀಗೆ ಈ ಅಧ್ಯಾಯದಲ್ಲಿ ವ್ಯಕ್ತಿ ಒಡೆತನದ ಹಸ್ತಪ್ರತಿ ನೆಲೆಗಳನ್ನು ಗುರುತಿಸಲಾಗಿದೆ. ಚಿತ್ರದುರ್ಗ ಪರಿಸರದ ಹಳ್ಳಿಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ವ್ಯಕ್ತಿ ಒಡೆತನದ ನೆಲೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ ಸಾಂಸ್ಥಿಕ ಒಡೆತನದಲ್ಲಿ ಧಾರ್ಮಿಕ ಹಾಗೂ ಸರ್ಕಾರಿ ಸಂಸ್ಥೆ ನೆಲೆಯಲ್ಲಿ ಅಧ್ಯಾಯ ಎರಡರಲ್ಲಿ ಚರ್ಚಿಸಲಾಗಿದೆ.

ಶಾಸನಗಳು, ರಾಜರ ಚರಿತ್ರೆಗಳು ಕೆಲವು ಸಾಹಿತ್ಯಗಳು ಒಂದು ನಾಡಿನ ಇತಿಹಾಸ ರಚನೆಗೆ ಸಾಧನಗಳಾಗಿರುವಂತೆ ಹಸ್ತಪ್ರತಿಗಳು ಕೂಡ ಆ ಬಗೆಗೆ ಮಾಹಿತಿಯನ್ನು ಒದಗಿಸುತ್ತವೆ. ಕರ್ನಾಟಕದಲ್ಲಿ ದೊರೆಯುವ ಹಸ್ತಪ್ರತಿಗಳನ್ನು ವರ್ಗೀಕರಿಸಿದರೆ ಚರಿತ್ರೆಯನ್ನೇ ಪ್ರಧಾನ ಉದ್ದೇಶವನ್ನಾಗಿಸಿಕೊಂಡು ರಚಿಸಲ್ಪಟ್ಟಿರುವ ಹಸ್ತಪ್ರತಿಗಳಿಂದ ಅನೇಕ ಐತಿಹಾಸಿಕ ಸಂಗತಿಗಳು ಪ್ರಕಟವಾಗುವ ಸಾಧ್ಯತೆಗಳಿವೆ. ಚಿತ್ರದುರ್ಗ ಇತಿಹಾಸಕ್ಕೆ ಸಂಬಂಧಿಸಿದಂತೆ ಕೈಫಿಯತ್ತು, ನಿರೂಪ, ಸನ್ನದು, ಬಖೈರು ಲಾವಣಿ, ಕೋಲುಪದ ಹಾಗೆಯೇ ವಿವಿಧ ವೃತ್ತಿಗಳಲ್ಲಿ ತೊಡಗಿದ್ದ ಆಡಳಿತ ವಿಭಾಗಗಳನ್ನು ಕುರಿತು ಅಧ್ಯಾಯ ಮೂರರಲ್ಲಿ ಚರ್ಚಿಸಲಾಗಿದೆ.

ಹಸ್ತಪ್ರತಿಗಳಲ್ಲಿ ಉಲ್ಲೇಖಿಸಲ್ಪಟ್ಟ ವ್ಯಕ್ತಿನಾಮ, ಸ್ಥಳನಾಮ, ವೃತ್ತಿಗಳ ಮೂಲಕವಾಗಿ ಸಮಾಜದಲ್ಲಿರುವ ವ್ಯಕ್ತಿಗಳ ಸ್ಥಾನವನ್ನು ಗುರುತಿಸಲಾಗಿದೆ. ಸ್ಥಳನಾಮಗಳ ವೈಶಿಷ್ಟ್ಯತೆಯ ಮೂಲಕ ಹಸ್ತಪ್ರತಿಶಾಸ್ತ್ರ ತನ್ನ ವಿಸ್ತಾರತೆಯನ್ನು ಎಲ್ಲಿಯವರೆಗೂ ಪಡೆದುಕೊಂಡಿತ್ತೆಂಬುದನ್ನು ಹಾಗೂ ಲಿಪಿಕಾರರ ಪರಿಸರವನ್ನು ಕುರಿತು ಅಧ್ಯಾಯ ನಾಲ್ಕರಲ್ಲಿ ಚರ್ಚಿಸಲಾಗಿದೆ.

ಸಾಹಿತ್ಯಿಕ ನೆಲೆಯಲ್ಲಿ ಕೂಡ ಹಸ್ತಪ್ರತಿಯ ಅಧ್ಯಯನ ನಮಗೆ ಮುಖ್ಯವಾಗುತ್ತದೆ. ಸಾಹಿತ್ಯ ಕೃತಿಯ ಪ್ರಸಾರ ಹಾಗೂ ಪರಿಚಲನೆಯ ಸ್ವರೂಪವನ್ನು ಈ ಹಸ್ತಪ್ರತಿಗಳ ಮೂಲಕ ಗ್ರಹಿಸಬಹುದಾಗಿದೆ. ಚಿತ್ರದುರ್ಗ ಪರಿಸರದಲ್ಲಿ ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತವೆ. ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ದೊರೆತ ಹಸ್ತಪ್ರತಿಗಳನ್ನು ಹಾಗೂ ಚಿತ್ರದುರ್ಗ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟವನ್ನು ಬಳಸಿಕೊಂಡು ಸಾಹಿತ್ಯಿಕ ಕೃತಿಗಳ ಬಗ್ಗೆ ಚರ್ಚಿಸುವುದರೊಂದಿಗೆ ಅವು ಯಾವ ಯಾವ ಪ್ರಕಾರಕ್ಕೆ ಸೇರಿದ ಕೃತಿಗಳಾಗಿವೆ. ಎಂಬುದನ್ನು ಕೂಡ ಗಮನಿಸಲಾಗಿದೆ. ಈ ಮೇಲಿನ ಎಲ್ಲ ಅಂಶಗಳನ್ನು ಅಧ್ಯಾಯ ಐದರಲ್ಲಿ ಚರ್ಚಿಸಲಾಗಿದೆ.

ಪ್ರಾಚೀನ ಹಾಗೂ ಮಧ್ಯಕಾಲೀನ ಸಂದರ್ಭಗಳಲ್ಲಿ ಗ್ರಂಥರಚನಾ ಕಾರ್ಯಾವು ಹೆಚ್ಚು ಧಾರ್ಮಿಕವಾಗಿತ್ತು. ಈ ಪರಂಪರೆ ಆಧುನಿಕ ಸಂದರ್ಭದಲ್ಲಿಯೂ ಮುಂದುವರೆದಿರುವುದನ್ನು ನೋಡಬಹುದು. ಪ್ರತಿ ಧರ್ಮ ಹಾಗೂ ಪಂಥಗಳು ತನ್ನ ಧರ್ಮದ ತತ್ವ, ಸಿದ್ಧಾಂತಗಳನ್ನು ಆಚರಣೆಯ ವಿಚಾರಧಾರೆಗಳನ್ನು ತಮ್ಮ ಕೃತಿಯಲ್ಲಿ ಅಳವಡಿಸಿಕೊಂಡು ಸಂಗ್ರಹಿಸುವ ಸಂರಚಿಸುವ ಕೆಲಸ ಮಾಡುತ್ತ ಬಂದಿವೆ. ಆಯಾ ಧರ್ಮದ ನೆರಳಲ್ಲಿ ಧರ್ಮವು ಪ್ರಾಚೀನ ಗ್ರಂಥಗಳ ಸಂಗ್ರಹ, ಸಂರಕ್ಷಣೆ, ಹಾಗೂ ಪ್ರತೀಕರಣ ಪ್ರಕ್ರಿಯೆಗಳು ನಡೆಯುತ್ತಲೇ ಬಂದಿವೆ. ಉದಾ: ಮಠ-ಮಾನ್ಯಗಳು ಜೈನ ಬಸದಿಗಳು ಚೈತ್ಯಾಲಯಗಳು ಅಗ್ರಹಾರಗಳು ಚರ್ಚು, ಮಸೀದಿ ಹಾಗೂ ಗುರುದ್ವಾರಗಳು ಗ್ರಂಥಗಳನ್ನು ಬರೆಸಿ ಸಂರಕ್ಷಿಸಿ ಅಧ್ಯಯನಮಾಡಿ ಧಾರ್ಮಿಕ ತತ್ವ ಸಿದ್ಧಾಂತಗಳನ್ನು ಸಂರಕ್ಷಿಸಿ, ಪುನರಚಿಸಿಕೊಳ್ಳುವಲ್ಲಿ ಉಳಿಸುವಲ್ಲಿ ಪ್ರಧಾನ ಪಾತ್ರವಹಿಸುವುದನ್ನು ಕಾಣಬಹುದಾಗಿದೆ. ಇಲ್ಲಿ ಲಿಪಿಕಾರರ ಇಷ್ಟದೈವ. ಆರಾಧ್ಯದೈವವನ್ನು ಸ್ತುತಿಸುತ್ತಿರುವುದನ್ನು ಗ್ರಂಥವನ್ನು ರಚಿಸುವಾಗ ಪ್ರಶಸ್ತ ಕಾಲ, ಗಳಿಗೆ, ದಿವಸ, ನಕ್ಷತ್ರವನ್ನು ಅನುಸರಿಸುತ್ತಿದ್ದುದು ಕಾಣಿಸುತ್ತದೆ. ಇಂತಹ ನಂಬಿಕೆ ಹಾಗೂ ಶಿಷ್ಟಾಚಾರದ ಸಂಗತಿಗಳನ್ನು ಅಧ್ಯಾಯ ಆರರಲ್ಲಿ ಚರ್ಚಿಸಲಾಗಿದೆ.

ಪ್ರಾಚೀನ ಕಾಲದಲ್ಲಿ ಅರಸರು ತಮ್ಮ ಪ್ರತಿಷ್ಠೆ ಮತ್ತು ಘನತೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಸ್ವಮತ ಅಭ್ಯುದಯದ ದೃಷ್ಟಿಯಿಂದ 'ಗ್ರಂಥಪ್ರಸಾರ' ಕಾರ್ಯವನ್ನು ಮಾಡುತ್ತಿದ್ದುದನ್ನು ನೆನೆಬಹುದು. ದಾನ ಚಿಂತಾಮಣಿ ಅತ್ತಿಮಬ್ಬೆಯು ರನ್ನನಿಂದ ಅಜಿತ ತೀರ್ಥಂಕರ ಪುರಾಣ ತಿಲಕವನ್ನು ಬರೆಸಿದಳು ಹಾಗೆಯೆ ಪೊನ್ನನ ಶಾಂತಿಪುರಾಣದ ಒಂದು ಸಾವಿರ ಪ್ರತಿಯನ್ನು ಮಾಡಿಸಿ ಅಂದಿನ ಓದುಗ ಸಮುದಾಯಕ್ಕೆ ದಾನ ಮಾಡಿದಳು ಹೀಗೆ ಪ್ರತಿಷ್ಠೆ, ಅಗತ್ಯತೆ, ಸ್ವಮತಾಭ್ಯುದಯ ಮತ್ತು ಸಾಮಾಜಿಕ ಕಾಳಜಿಯ ದೃಷ್ಟಿಯಿಂದ ಹಸ್ತಪ್ರತಿಗಳ ಪರಿಚಲನೆ ನಡೆಯುತ್ತಿತ್ತು. ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳ ಪರಿಚಲನೆಯಲ್ಲಿ ಸಂಗ್ರಹಕಾರರು ಮತ್ತು ಲಿಪಿಕಾರರು ಪ್ರಮುಖ ಪಾತ್ರವಹಿಸುತ್ತಾ ಬಂದಿರುವುದನ್ನು ಗುರುತಿಸಲಾಗಿದೆ.

ಹಸ್ತಪ್ರತಿಗಳ ರಚನೆಯಲ್ಲಿ ಕವಿಗಳು, ಪೋಷಕರು ಅವುಗಳ ಪರಿಚಲನೆಯಲ್ಲಿ ನೂರಾರು ಲಿಪಿಕಾರರು ಅವುಗಳ ಸಂಗ್ರಹದಲ್ಲಿ ಹತ್ತಾರು ಜನ ವಿದ್ವಾಂಸರು ದುಡಿದಿರುವವರನ್ನು ಅಧ್ಯಯನದಲ್ಲಿ ದಾಖಲಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಹಸ್ತಪ್ರತಿಗಳ ರಚನಾ ಸಂದರ್ಭದ ದುಡಿಮೆಯಲ್ಲಿ ಭಾಗವಹಿಸಿದ ಕವಿ, ಲಿಪಿಕಾರ ಸಂಗ್ರಹಕಾರರೆಂದು ಮೂರು ವರ್ಗವಾಗಿ ವಿಂಗಡಿಸಿಕೊಂಡು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಧ್ಯಾಯ ಏಳರಲ್ಲಿ ಈ ಎಲ್ಲ ಅಂಶಗಳನ್ನು ಚರ್ಚಿಸಲಾಗಿದೆ. ಸಮಾರೋಪ ಎಂಟನೆಯ ಅಧ್ಯಾಯವಾಗಿದ್ದು, ಇಲ್ಲಿ ನನ್ನ ಸಂಶೋಧನೆಯಿಂದ ಕಂಡುಕೊಂಡ ಫಲಿತಗಳನ್ನು ದಾಖಲಿಸಲಾಗಿದೆ.

ಒಟ್ಟಾರೆಯಾಗಿ ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು : ಸಾಂಸ್ಕೃತಿಕ ಅನನ್ಯತೆ ಎಂಬ ವಿಷಯದಿಂದ, ಹಸ್ತಪ್ರತಿ ನೆಲೆಗಳು, ಚರಿತ್ರೆ, ಸಾಮಾಜಿಕತೆ, ಸಾಹಿತ್ಯಕತೆ, ಧಾರ್ಮಿಕತೆ ಮತ್ತು ಹಸ್ತಪ್ರತಿಗಳ ಪರಿಚಲನೆ ಈ ಅಂಶಗಳ ಮೂಲಕ ಒಟ್ಟಾರೆ ಸಾಂಸ್ಕೃತಿಕ ಸಂಗತಿಗಳನ್ನು ಹೊರತೆಗೆದು ಚರ್ಚಿಸುವ ಪ್ರಯತ್ನವನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಪ್ರಸ್ತುತ ಅಧ್ಯಯನದ ಮುಖ್ಯ ಫಲಿತಗಳು

೧. ಚಿತ್ರದುರ್ಗ ಪರಿಸರದಲ್ಲಿ ಇರುವ ಹಲವು ಬಗೆಯ ಹಸ್ತಪ್ರತಿಗಳು ಜನ ಬದುಕಿನ ಪ್ರಗತಿಯ ಚಲನೆಯನ್ನು ಸೂಚಿಸುವಂಥವು. ಇಂತಹ ವೈವಿಧ್ಯಮಯ ಸಾಂಸ್ಕೃತಿಕ ಸಂಪತ್ತನ್ನು ತನ್ನ ಗರ್ಭದಲ್ಲಿ ಹುದುಗಿಸಿಕೊಂಡಿರುವ ಈ ಪರಿಸರದ ಹಸ್ತಪ್ರತಿಗಳ ವಿವಿಧ ಆಯಾಮಗಳನ್ನು ಅಧ್ಯಯನ ಮಾಡಲಾಗಿದೆ.

೨. ಚಿತ್ರದುರ್ಗ ಪರಿಸರದ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಹಸ್ತಪ್ರತಿಗಳಂತಹ ಲಿಖಿತ ಸಾಹಿತ್ಯದ ಅಗತ್ಯ ಇದೆ. ಶಾಸನ, ಸ್ಮಾರಕ, ನಾಣ್ಯ ಇತ್ಯಾದಿ ಆಕರಗಳಿಂದ ಒಂದು ಪ್ರದೇಶದ ಚರಿತ್ರೆಯನ್ನು ಕಟ್ಟುವಂತೆ ಹಸ್ತಪ್ರತಿಗಳಾಧಾರಿತ ಚರಿತ್ರೆಯನ್ನು ನಿರೂಪಿಸಲು ಸಾಧ್ಯ. ಉದಾಹರಣೆಗೆ ಚಿತ್ರದುರ್ಗದ ಬಖೈರು, ನಾಯಕನಹಟ್ಟಿಯ ಬುದಿಮಲ್ಲಪ್ಪ ನಾಯಕನ ಮೂಲ ವಿಚಾರ, ಚಿತ್ರದುರ್ಗದ ಡಿ ಮೊಳಕಾಲ್ಮೂರುವಿನ ಪೂರ್ವ ವಿಚಾರ, ಭರಮಣ್ಣ ನಾಯಕನ ಸಮರ ವಿಜಯ, ನಾಯಕನಹಟ್ಟಿಯ ಬಖೈರು ಇವುಗಳ ಅಧ್ಯಯನದಿಂದ ಈ ಪರಿಸರದ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡಬಹುದು.

೩. ಹಸ್ರಪ್ರತಿಗಳ ಆದಿ ಮತ್ತು ಅಂತ್ಯಗಳಲ್ಲಿ ಕಂಡುಬರುವ ಪುಷ್ಪಿಕೆಗಳು ಲಿಪಿಕಾರರ ಮನೋಧರ್ಮ, ವೃತ್ತಿ, ಸಾಮಾಜಿಕ ಸಂಬಂಧ ಹಾಗೂ ಸಮುದಾಯದಲ್ಲಿನ ಅವರ ಆರ್ಥಿಕ ಸಮಾನತೆಯನ್ನು ತಿಳಿಯುವಲ್ಲಿ ನೆರವಾಗುತ್ತವೆ.

೪. ಹಲವು ಹಸ್ತಪ್ರತಿಗಳ ಅಂತ್ಯದಲ್ಲಿನ ಪ್ರಶಸ್ತಿಗಳಿಂದ ಆ ಹಸ್ತಪ್ರತಿಗಳನ್ನು ಬರೆದವರ, ಬರೆಸಿದವರ ವಿವರಗಳು ದೊರೆಯುತ್ತವೆ. ಚಿತ್ರದುರ್ಗ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿದ್ದ ಲಿಪಿಕಾರರು ತಮ್ಮನ್ನು ಕುರಿತು ತಮ್ಮಿಂದ ಪ್ರತಿ ಮಾಡಿದವರನ್ನು ಕುರಿತು ಅನೇಕ ಸಂಗತಿಗಳನ್ನು ಹೇಳಿಕೊಂಡಿದ್ದಾರೆ. ಅವುಗಳಿಂದ ಆ ಕಾಲದಲ್ಲಿ ಯಾವ ಹಸ್ತಪ್ರತಿಗಳು ಯಾವ ಗ್ರಾಮಗಳಲ್ಲಿ ರಚಿತವಾದವು ಎಂಬುದು ಸ್ಪಷ್ಟವಾಗುತ್ತದೆ.

೫. ವಿಶೇಷವಾಗಿ ಚಿತ್ರದುರ್ಗ ಪರಿಸರದಲ್ಲಿ ರತಿಕಲ್ಯಾಣ, ವಿರಾಟಪರ್ವ, ಶಶಿರೇಖಾ ಪರಿಣಯ, ರಾಮಾಯಣ ಯುದ್ಧ, ಕೀಚಕನ ವಧೆ, ಸಂಗ್ಯ–ಬಾಳ್ಯಾನ ಕಥೆ, ಚಿತ್ರಕೇತು ಮಹಾರಾಜ ಈ ಬಯಲಾಟಗಳ ಹಸ್ತಪ್ರತಿಗಳು ಹೆಚ್ಚಾಗಿ ಕಂಡುಬರುತ್ತವೆ. ಅದರಲ್ಲಿಯೂ ವಿಶೇಷವಾಗಿ ಕರಿಭಂಟನ ಕಾಳಗದ ಬಯಲಾಟವು ಈ ಪ್ರದೇಶದಲ್ಲಿ ಹೆಚ್ಚಿನ ಪ್ರಸಿದ್ಧಿಯನ್ನು ಪಡೆದಿದೆ.

೬. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕು, ಬಂಜಿಗೆರೆ ಗ್ರಾಮದಲ್ಲಿ ದೊರೆತ ಕುಮಾರ ರಾಮನ ಸಾಂಗತ್ಯದ ಹಸ್ತಪ್ರತಿಯು ಕುತೂಹಲಕಾರಿಯಾಗಿದೆ. ಈ ಹಸ್ತಪ್ರತಿಯನ್ನು ಎಚ್. ಮಲಿಯಪ್ಪ, ಜಿ. ಓಬಯ್ಯ, ದೊಡ್ಡಪಾಲಯ್ಯ, ಚಿ॥ ಓಬಯ್ಯ ಒಟ್ಟು ನಾಲ್ಕು ಜನ ಲಿಪಿಕಾರರು ಪ್ರತಿಮಾಡಿರುವುದು ತುಂಬ ವಿಶೇಷ ಸಂಗತಿಯಾಗಿದೆ.

೭. ಚಿತ್ರದುರ್ಗ ಪರಿಸರದಲ್ಲಿ ಬೇರೆ ಬೇರೆ ಧರ್ಮದವರು ತಮ್ಮ ಧಾರ್ಮಿಕ ಹಸ್ತಪ್ರತಿಗಳನ್ನು ಪೂಜ್ಯಭಾವನೆಯಿಂದ ರಕ್ಷಿಸಿಕೊಂಡು ಬಂದಿದ್ದಾರೆ. ಹಬ್ಬ, ಜಾತ್ರೆಗಳಂತಹ ಸಂದರ್ಭಗಳಲ್ಲಿ ಮಾತ್ರ ಈ ಹಸ್ತಪ್ರತಿಗಳನ್ನು ಹೊರತೆಗೆದು ಪೂಜಿಸಿ ಮತ್ತೆ ರಕ್ಷಿಸಿಡುವಂಥ ಆಚರಣೆಗಳು ಹಸ್ತಪ್ರತಿಯ ಸುತ್ತ ಹುಟ್ಟಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಉದಾಹರಣೆಗೆ ಹರ್ತಿಕೋಟೆ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಅರ್ಚಕರಾದ ಎಚ್. ಗೋವರ್ಧನ ಅವರ ಬಳಿಯಿರುವ ಹಸ್ತಪ್ರತಿಗಳು ತೊರವೆ ರಾಮಾಯಣ, ಜೈಮಿನಿ ಭಾರತ ಈ ಎರಡು ಕೃತಿಗಳನ್ನು ಗೋವರ್ಧನ ಅವರ ಪೂರ್ವಿಕರು ಧಾರ್ಮಿಕ ಕಾರ್ಯಗಳಿಗಾಗಿ ಮಳೆ ಬಾರದೆ ಮತ್ತು ಬರಬಿದ್ದ ಸಂದರ್ಭದಲ್ಲಿ ಮಳೆಬಂದು ಸಮೃದ್ಧಿಯಾಗಲೆಂದು ಊರಿನ ಪ್ರಯೋಜನಕ್ಕಾಗಿ ವಾಚನ ಮಾಡುತ್ತಿದ್ದರು ಎನ್ನುವ ಸಂಗತಿ ಕಂಡುಬರುತ್ತದೆ.

೮. ಸಾಂಸ್ಕೃತಿಕ ಭಾಗವಾಗಿರುವ ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಚಿತ್ರದುರ್ಗ ಜಿಲ್ಲೆಯ ವೀರಶೈವ ಮಠಗಳ ಪಾತ್ರ ಪ್ರಮುಖವಾದದ್ದು. ಅಂತಹ ಮಠಗಳೆಂದರೆ ಮುರುಘಾರಾಜೇಂದ್ರ ಬೃಹನ್ಮಠ, ಸಿರಿಗೆರೆ ತರಳಬಾಳುಮಠ. ಈ ಮಠಗಳು ಅನ್ನದಾಸೋಹ, ಜ್ಞಾನದಾಸೋಹ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿವೆ. ಹಾಗೆಯೇ ಶಾಸ್ತ್ರದಾನವನ್ನು ಮಾಡುತ್ತಲೇ ಗ್ರಂಥಗಳ ಉತ್ಪಾದನೆ, ಸಂರಕ್ಷಣೆಯಲ್ಲಿ ಮಹತ್ವದ ಪಾತ್ರವಹಿಸಿವೆ. ಈ ಕಾರಣವಾಗಿ ಧಾರ್ಮಿಕ ಸಂಸ್ಥೆಗಳಾಗಿದ್ದ ಮಠಗಳು ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಸಂಸ್ಥೆಗಳಾಗಿ ಬೆಳೆದು ನಿಂತವು. ಅಂತೆಯೇ ಪ್ರಾಚೀನ ಕಾಲದಿಂದ ಮೊದಲುಗೊಂಡು ಇಂದಿನವರೆಗೂ ಈ ಮಠಗಳಲ್ಲಿ ಹಸ್ತಪ್ರತಿ ಭಂಡಾರಗಳು ಅಸ್ತಿತ್ವದಲ್ಲಿದ್ದು, ಸಾಕ್ಷಿಭೂತವಾಗಿವೆ.

೯. ಹಸ್ತಪ್ರತಿಗಳು ಗುಪ್ತ ನಿಧಿಗಳಿದ್ದಂತೆ. ಪಂಡಿತ–ಪ್ರತಿಷ್ಠಿತರ ಮನೆ ಜಗಲಿ, ಕೆಲ ಧರ್ಮ ಗುರುಗಳ ಮಠಗಳ ಗದ್ದುಗೆ, ಮಂದಿರಗಳ ಭಂಡಾರಗಳಲ್ಲಿ, ಅಧ್ಯಯನಾಸಕ್ತ ಹವ್ಯಾಸಿಗಳ ಪೆಟ್ಟಿಗೆಗಳಲ್ಲಿ ರಕ್ಷಿತಗೊಂಡಿರುವ ಹಸ್ತಪ್ರತಿಗಳು ಸಾಮಾನ್ಯರ ಕಣ್ಣಿಗೆ ಕಾಣವು. ಅವು ಆಗೊಮ್ಮೆ ಈಗೊಮ್ಮೆ ಸಂಶೋಧಕರ ಸೂಕ್ಷ್ಮ ಕಣ್ಣುಗಳಿಗೆ ಗೋಚರಿಸುತ್ತವೆ. ಇನ್ನು ಅಜ್ಞಾನ, ಮೂಢನಂಬಿಕೆ, ಧಾರ್ಮಿಕ ಕಂದಾಚಾರ, ಭಯ–ಭಕ್ತಿಗಳ ಕಾರಣ ಬಹುಪಾಲು ಹಸ್ತಪ್ರತಿಗಳು ಅಜ್ಞಾತವಾಸ ಅನುಭವಿಸುತ್ತಿವೆ. ಉದಾಹರಣೆಗೆ ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿಯಲ್ಲಿ ವಾಸವಾಗಿರುವ ದೊರೆಗಳ ಸಹೋದರರಾದ ತಿಪ್ಪೇಸ್ವಾಮಿ ಮತ್ತು ಮಹಾಂತೇಶ ಇವರ ಬಳಿ ಇಡೀ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದ ಸುಮಾರು ಹಳ್ಳಿಗಳಿಗೆ ಸಂಬಂಧಪಟ್ಟ ನೂರಾರು

ಸಂಖ್ಯೆಯ ದಾಖಲೆಯ ತಾಳೆಗರಿ ಮತ್ತು ಕಾಗದದ ಹಸ್ತಪ್ರತಿಗಳು ಇವೆ. ಆದರೆ ಅವುಗಳನ್ನು ಅವರು ಯಾರಿಗೂ ಸಹ ನೀಡದೆ ಹಸ್ತಪ್ರತಿಗಳನ್ನು ಗೋಪ್ಯವಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ಕರ್ನಾಟಕ ಸರ್ಕಾರದ ಪ್ರಾಚೀನ ಇತಿಹಾಸ ಹಾಗೂ ಪುರಾತತ್ವ ಇಲಾಖೆ ಈ ಕಡೆ ಗಮನಹರಿಸಬೇಕಾಗಿದೆ.

೧೦. ಈವರೆಗೆ ಚಿತ್ರದುರ್ಗ ಪರಿಸರದಲ್ಲಿನ ಹಸ್ತಪ್ರತಿಗಳ ಸಂಗ್ರಹ, ಸಂಪಾದನೆ ಹಾಗೂ ಅಧ್ಯಯನ ಕಾರ್ಯಗಳು ಬಹುಮುಖವಾಗಿ ನಡೆದಿದೆಯಾದರೂ ಇನ್ನೂ ಅನೇಕರಲ್ಲಿ ಗುಪ್ತವಾಗಿ ಉಳಿದುಕೊಂಡಿರುವ ಹಸ್ತಪ್ರತಿಗಳ ಸಂಗ್ರಹಣ ಕಾರ್ಯ ತೀವ್ರವಾಗಿ ನಡೆಯಬೇಕಾಗಿದೆ.

ಪರಾಮರ್ಶನ ಗ್ರಂಥಗಳು

* ಅಂಗಡಿ ಎಸ್.ಎಸ್., ಕನ್ನಡ ಹಸ್ತಪ್ರತಿ ಭಾಷಿಕ ವಿವೇಚನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

* ಕತ್ರೆ ಎಸ್.ಎಂ., ಭಾರತೀಯ ಗ್ರಂಥ ಸಂಪಾದನ ಪರಿಚಯ, ಹರ್ಷವರ್ಧನ ಪ್ರಕಾಶನ, ಬೆಂಗಳೂರು, ೧೯೬೮

* ಕಲಬುರ್ಗಿ ಎಂ.ಎಂ., ಕನ್ನಡ ಗ್ರಂಥ ಸಂಪಾದನಶಾಸ್ತ್ರ, ಸಿರಿಗನ್ನಡ ಪ್ರಕಾಶನ, ಧಾರವಾಡ, ೧೯೭೨

* ಕಲಬುರ್ಗಿ ಎಂ.ಎಂ., ಕನ್ನಡ ಹಸ್ತಪ್ರತಿಶಾಸ್ತ್ರ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೩

* ಕ್ರಿಷ್ಣಪ್ಪ, ಕನ್ನಡ ಹಸ್ತಪ್ರತಿಗಳು ಮತ್ತು ದೈವತ್ವದ ನೆಲೆ, ಮಯ ಪ್ರಕಾಶನ, ಕಮಲಾಪುರ, ೨೦೧೪

* ಗೀತಾಚಾರ್ಯ ನಾ., ಹಸ್ತಪ್ರತಿ ಅಧ್ಯಯನಶಾಸ್ತ್ರ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೯

* ಗುರುನಾಥ ಬಿ.ಎಂ., ಬಯಲಾಟದ ಹಸ್ತಪ್ರತಿಗಳ ಅಂತರ್ ಶೋಧ, ಶ್ರೀ ಅನ್ನಪೂರ್ಣ ಪ್ರಕಾಶನ, ಬೆಂಗಳೂರು, ೨೦೧೨

* ದೇವಿರಪ್ಪ ಎಚ್., ಕನ್ನಡ ಹಸ್ತಪ್ರತಿಗಳ ಇತಿಹಾಸ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೭೭

* ನರಸಿಂಹಾಚಾರ್ ಡಿ.ಎಲ್., ಗ್ರಂಥ ಸಂಪಾದನೆ, ಶಾರದಾ ಮಂದಿರ, ಮೈಸೂರು, ೧೯೭೬

* ನಾವಡ ಎ.ವಿ., ಅಂಗಡಿ. ಎಸ್.ಎಸ್. (ಸಂ), ಹಸ್ತಪ್ರತಿ ವ್ಯಾಸಂಗ-ಸಂ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

* ಪುಟ್ಟಣ್ಣ ಎಂ.ಎಸ್., ಚಿತ್ರದುರ್ಗದ ಪಾಳೆಗಾರರು, ಕಾವ್ಯಾಲಯ, ಮೈಸೂರು, ೧೯೯೭

* ಪುಟ್ಟಸ್ವಾಮಿ ಬಿ.ಎಸ್., ಕರ್ನಲ್ ಮೆಕೆಂಝಿ ಮತ್ತು ಕೈಫಿಯತ್ತುಗಳು, ಮನೋಜ ಪಬ್ಲಿಕೇಶನ್, ಬೆಂಗಳೂರು, ೨೦೧೨

* ಭಾನುಮತಿ ವೈ.ಸಿ., ಗ್ರಂಥ ಸಂಪಾದನೆ ಎಳೆಗಳು, ವಿಸ್ಮಯ ಪ್ರಕಾಶನ, ಮೈಸೂರು, ೨೦೦೯

* ಭಾನುಮತಿ ವೈ.ಸಿ., ಗ್ರಂಥ ಸಂಪಾದನೆ ಕೆಲವು ಅಧ್ಯಯನಗಳು, ಕೇಶವ ಪ್ರಕಾಶನ, ಮೈಸೂರು, ೧೯೯೭

* ಬಾಗೂರು ನಾಗರಾಜಪ್ಪ, ಹೊಸದುರ್ಗ ಸೀಮೆ ಜಾನಪದ, ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು, ೨೦೦೪

* ಮೃತ್ಯುಂಜಯ ಹೊರಕೇರಿ, ಚದುರ ಜಾನಪದ, ಮರುಗ ಪ್ರಕಾಶನ, ಗುಲ್ಬರ್ಗಾ, ೨೦೦೩

* ಯೋಗೀಶ್ವರಪ್ಪ ಡಿ.ಎನ್., ಮಧ್ಯಕಾಲಿನ ಕರ್ನಾಟಕದ ಪಾಳೆಗಾರರು, ಧಾತ್ರಿ ಪುಸ್ತಕ ಮಾಲೆ, ಬೆಂಗಳೂರು, ೨೦೦೨

* ರವೀಂದ್ರನಾಥ ಕೆ., ಕನ್ನಡ ದಾಖಲು ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

* ರವೀಂದ್ರನಾಥ ಕೆ., ಚರಿತ್ರೆ–ಚಾರಿತ್ರ್ಯ, ಅನ್ನಪೂರ್ಣ ಪ್ರಕಾಶನ, ಸಿರಿಗೇರಿ, ೨೦೦೮

* ರಾಜಶೇಖರಪ್ಪ ಬಿ., (ಸಂ), ಚಿತ್ರದುರ್ಗ ಪಾಳೆಗಾರರ ದಾಖಲೆಗಳು, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು, ೨೦೦೭

* ರಾಜಶೇಖರಪ್ಪ ಬಿ., ಇತಿಹಾಸ ಕಥನ, ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು, ೨೦೦೧

* ರಾಜಾರಾಮ ಹೆಗಡೆ (ಸಂ), ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

* ರಾಜೇಗೌಡ ಹ.ಕ., ಜಾನಪದ ಶೋಧ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

* ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ. (ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ, ೧೯೯೫

* ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ನಾಯಕ ಅರಸರು ರಾಜಕೀಯಚಿತ್ರ, ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ, ೨೦೦೯

* ಲಕ್ಷ್ಮಣ್ ತೆಲಗಾವಿ, ಎಪ್ಪತ್ತೇಳು ಪಾಳೆಗಾರರು, ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ, ೨೦೧೦

* ಲಕ್ಷ್ಮಣ್ ತೆಲಗಾವಿ, ದೊಡ್ಡೇರಿ ಕದನ ಚರಿತ್ರೆ ಮತ್ತು ಜಾನಪದಗಳ ನೆಲೆಯಲ್ಲಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

* ವಸು ಎಂ.ವಿ. (ಸಂ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು ಕರ್ನಾಟಕ ರಾಜ ಸಂಸ್ಥಾನಗಳು–೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

* ವಿರೂಪಾಕ್ಷ ಪೂಜಾರಹಳ್ಳಿ, ಕಾಮಗೇತಿ ವಂಶಜರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

* ವೀರೇಶ ಬಡಿಗೇರ, ಹಲಗೆ ಬಳಪ, ಮಯ ಪ್ರಕಾಶನ, ಕಮಲಾಪುರ, ೨೦೦೫

* ವೀರೇಶ ಬಡಿಗೇರ (ಸಂ), ಹಸ್ತಪ್ರತಿ ಅಧ್ಯಯನ–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

* ವೀರೇಶ ಬಡಿಗೇರ, ಕನ್ನಡ ಹಸ್ತಪ್ರತಿಗಳ ಬಹು ಪಠ್ಯೀಯ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

* ವೀರೇಶ ಬಡಿಗೇರ, ಹಸ್ತಪ್ರತಿ ಸಂಕಥನ, ಮಯ ಪ್ರಕಾಶನ, ಕಮಲಾಪುರ, ೨೦೧೪

* ವೀರೇಶ ಬಡಿಗೇರ, ಹಸ್ತಪ್ರತಿಗಳ ವ್ಯಾಸಂಗ–೧೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪

* ವೀರೇಶ ಬಡಿಗೇರ, ಚನ್ನವೀರಪ್ಪ ಎಸ್.ಆರ್., ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

* ಶಿವಣ್ಣ ಎಸ್., ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೪

* ಶಿವಣ್ಣ ಎಸ್., (ಸಂ), ಶ್ರೀ ಜಗದ್ಗುರು ಮುರುಘಾರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ–೧. ಚಿತ್ರದುರ್ಗ, ೧೯೯೧

* ಶಿವಣ್ಣ ಎಸ್., (ಸಂ), ಮುರುಗಿ ಶಾಂತವೀರ ಸ್ವಾಮಿಗಳ ಕೃತಿಗಳು ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೮೯

* ಶ್ಯಾಮಲ ಸಿ. ಆರ್., ಪೂರ್ವ ಕರ್ನಾಟಕದ ಪಾಳೆಗಾರರು: ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮

* ಸಣ್ಣಯ್ಯ ಬಿ.ಎಸ್. ಹಸ್ತಪ್ರತಿಶಾಸ್ತ್ರ ಪರಿಚಯ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೯೨

* ಸಿದ್ಧಯ್ಯ ಪುರಾಣಿಕ (ಪ್ರ.ಸಂ), ಸೀತಾರಾಮಯ್ಯ, ಎಂ.ವಿ., ಶೇಷಶಾಸ್ತ್ರೀ ಆರ್. (ಸಂ), ಮಣಿಹ (ಫ.ಗು. ಹಳಕಟ್ಟಿ ಸಂಸ್ಮರಣ ಸಂಪುಟ), ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೨

* ಸೀತಾರಾಮಯ್ಯ ಎಂ.ವೀ., ಚಿದಾನಂದಮೂರ್ತಿ, ಹಸ್ತಪ್ರತಿಶಾಸ್ತ್ರ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೩

* ಹಳ್ಳಿಕೇರಿ ಎಫ್.ಟಿ., ಹಸ್ತಪ್ರತಿ ಅಧ್ಯಯನ–ಸಂ–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

* ಹಳ್ಳಿಕೇರಿ ಎಫ್.ಟಿ., ಹಸ್ತಪ್ರತಿ ವ್ಯಾಸಂಗ–೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

* ಹಳ್ಳಿಕೇರಿ ಎಫ್.ಟಿ., (ಸಂ), ಹಸ್ತಪ್ರತಿ ವ್ಯಾಸಂಗ–೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

* ಹಳ್ಳಿಕೇರಿ ಎಫ್.ಟಿ., ಕಂಠಪತ್ರ–೩, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೪

* ಹಳ್ಳಿಕೇರಿ ಎಫ್.ಟಿ., ರವೀಂದ್ರನಾಥ ಕೆ., ಸಿರಿ ಸಂಪದ, (ಡಾ. ಬಿ.ವ್ಹಿ. ಶಿರೂರ ಅಭಿನಂದನಾ ಗ್ರಂಥ) ಯಲಬುರ್ಗಾ ಪ್ರಕಾಶನ, ೨೦೦೨

* ಹಳ್ಳಿಕೇರಿ ಎಫ್.ಟಿ., ರವೀಂದ್ರನಾಥ ಕೆ. (ಸಂ), ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

* ಹಳ್ಳಿಕೇರಿ ಎಫ್.ಟಿ., ರವೀಂದ್ರನಾಥ ಕೆ. (ಸಂ), ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂ-೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

* ಹಿರೇಮಠ ಬಿ.ಕೆ., ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ, ವೀರಶೈವ ಅಧ್ಯಯನ ವೇದಿಕೆ, ವಿಜಾಪುರ, ೧೯೬೨

* ಹುರಳಿ ಆಯ್.ಎನ್., ಕನ್ನಡದಲ್ಲಿ ವೈದ್ಯಶಾಸ್ತ್ರದ ಹಸ್ತಪ್ರತಿಗಳು ಸಾಂಸ್ಕೃತಿಕ ನಿರ್ವಚನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧

* ಹುಲ್ಲೂರು ಶ್ರೀನಿವಾಸ ಜೋಯಿಸರು, ಚಿತ್ರದುರ್ಗದ ಬಖೈರು, ತಳಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೯

ನಿಯತ ಕಾಲಿಕೆ/ಲೇಖನಗಳು

* ಜಂಗಮ ಜ್ಯೋತಿ ಶ್ರೀ ಜಗದ್ಗುರು ಜಯದೇವ ಪ್ರಶಸ್ತಿ, ಶತಮಾನ ಮಹೋತ್ಸವ ಸ್ಮರಣ ಸಂಚಿಕೆ, ಚಿತ್ರದುರ್ಗ, ೬ ಅಕ್ಟೋಬರ್, ೧೯೭೫

* ಹಸ್ತಪ್ರತಿ ಅಧ್ಯಯನ ಸಂಪುಟ-೨. ಸಂಚಿಕೆ-೨, ಜನವರಿ-ಜುಲೈ-೨೦೦೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

* ಹಸ್ತಪ್ರತಿ ಅಧ್ಯಯನ ಸಂಪುಟ-೨. ಸಂಚಿಕೆ-೧, ಜುಲೈ-ಡಿಸೆಂಬರ್-೨೦೦೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

* ಹಸ್ತಪ್ರತಿ ಅಧ್ಯಯನ ಸಂಪುಟ-೩. ಸಂಚಿಕೆ-೨, ಜೂನ್-೨೦೦೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

* ಹಸ್ತಪ್ರತಿ ಅಧ್ಯಯನ ಸಂಪುಟ-೩. ಸಂಚಿಕೆ-೧, ಜುಲೈ-ಡಿಸೆಂಬರ್-೨೦೦೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

* ಹಸ್ತಪ್ರತಿ ಅಧ್ಯಯನ ಸಂಪುಟ-೪. ಸಂಚಿಕೆ-೧, ಜುಲೈ-ಡಿಸೆಂಬರ್-೨೦೦೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

* ಇತಿಹಾಸ ದರ್ಶನ, ಸಂಪುಟ-೫, ಚಿತ್ರದುರ್ಗ ಬೆಟ್ಟದ ಪೆರಮಾಳೆಪುರ : ಮರು ಸಂಶೋಧನೆ, ಲಕ್ಷ್ಮಣ್ ತೆಲಗಾವಿ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೦

* ಇತಿಹಾಸ ದರ್ಶನ, ಸಂಪುಟ-೧, ಚಿತ್ರದುರ್ಗ ರಾಜಾ ಮದಕರಿ ನಾಯಕ ಗೌಡನಹಳ್ಳಿ ಶಾಸನ : ಮರು ಪರಿಶೀಲನೆ, ಲಕ್ಷ್ಮಣ್ ತೆಲಗಾವಿ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೮೬

* ಇತಿಹಾಸ ಸಂಪುಟ-೬, ಚಿತ್ರದುರ್ಗದ ಒನಕೆ ಓಬವ್ವೆಯ ಘಟನೆ : ಚಾರಿತ್ರಿಕ ವಿಮರ್ಶೆ,

ಲಕ್ಷ್ಮಣ್ ತೆಲಗಾವಿ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೧,

* ಇತಿಹಾಸ ಸಂಪುಟ–೩, ಎಪ್ಪತ್ತೇಳು ಪಾಳೆಗಾರರು, ಲಕ್ಷ್ಮಣ್ ತೆಲಗಾವಿ ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೮೮

* ಇತಿಹಾಸ ಸಂಪುಟ–೭, ಚಿತ್ರದುರ್ಗಕ್ಕೆ ಸಂಬಂಧಿಸಿದ ಶೃಂಗೇರಿ ಮಠದ ದಾಖಲೆಗಳು, ಶಾಸ್ತ್ರೀ ಎ.ಕೆ., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೨

* ಇತಿಹಾಸ ಸಂಪುಟ–೭, ಚಿತ್ರದುರ್ಗ ಬೃಹನ್ಮಠ ಸಂಗ್ರಹದಲ್ಲಿನ ಕೆಲವು ಕೃತಿಗಳು, ಶಿವಣ್ಣ ಎಸ್., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೨

ಅಪ್ರಕಟಿತ ಪ್ರಬಂಧಗಳು :

* ದೇವರಾಜ್ ಬಿ.ಕೆ., ಹಸ್ತಪ್ರತಿಶಾಸ್ತ್ರಕ್ಕೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಕೊಡುಗೆ : ಒಂದು ಅಧ್ಯಯನ, ಎಂ.ಎ.ಸಿ. ಸ್ನಾತಕೋತ್ತರ, ಸಂಶೋಧನ ಕೇಂದ್ರ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೭

* ಮ್ಯಾಗೇರಿ ಐ.ಜೆ., ಕನ್ನಡ ಹಸ್ತಪ್ರತಿಗಳ ವಿಷಯ ಸಂಪತ್ತು, ಕನ್ನಡ ವಿಶ್ವವಿದ್ಯಾಲಯ, ಹಂಪಿ

* ಸುಜಾತ ಎಸ್., ಡಾ. ಎಂ.ಎಂ. ಕಲಬುರ್ಗಿಯವರು ಹಸ್ತಪ್ರತಿಶಾಸ್ತ್ರಕ್ಕೆ ನೀಡಿದ ಕೊಡುಗೆ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

ಹಸ್ತಪ್ರತಿಗಳು :

* ಕುಮಾರ ರಾಮನ ಸಾಂಗತ್ಯ ಹಸ್ತಪ್ರತಿ ೨. ಸಂಗ್ಯ–ಬಾಳ್ಯಾ ೩. ಕಾಳಾಸುರನ ಕಥೆ ೪. ದಾನಸಾಲಮ್ಮ ಭಿಕ್ಷೆ ನೀಡಿದ್ದು ೫. ನುಂಕಪ್ಪನ ಕಥೆ ೬. ಕರಿಣಂಟನ ಕಾಳಗ ೭. ಚಿತ್ರಕೇತು ಮಹಾರಾಜ ೮. ರತಿ ಕಲ್ಯಾಣ

ಛಾಯಾಚಿತ್ರಗಳು

ಹಸ್ತಪ್ರತಿ ಸಂಗ್ರಹಕಾರರು



ಸಣ್ಣ ಗೌಡರ ಓಬಯ್ಯ, ನಲಗೇತನಹಟ್ಟಿ.




ಮೇಳಗಾರ ದೊಡ್ಡಬೋರಯ್ಯ, ನಲಗೇತನಹಟ್ಟಿ.



ಪ್ರಹ್ಲಾದ, ತಿಮ್ಮಪ್ಪಯ್ಯನಹಳ್ಳಿ.



ಎಸ್.ಬಿ. ರಂಗನಾಥ, ಸಿರಿಗೇರೆ.



ಮದಲಿ ಸಣ್ಣಪಾಲಯ್ಯ, ತಳುಕು



ಕೆಂಗಬೋರಯ್ಯ, ನಾಯಕನಹಟ್ಟಿ



ಶರಣಯ್ಯ, ನಾಯಕನಹಟ್ಟಿ.



ನಿಂಗಯ್ಯ, ದೋಣೆಹಳ್ಳಿ



ಪುರ್‍ನಾರ ಚೆನ್ನಕೇಶವಯ್ಯ, ನಲಗೇತನಹಟ್ಟಿ.












ಹಸ್ತಪತಿಗಳು




ಕಾಳಿಂಗರಾಜನ ಬಯಲಾಟದ ಕಥೆಯ ಹಸ್ತಪ್ರತಿ




ಲಕ್ಷೀಣಿ ಸ್ವಯಂವರದ ಹಸ್ತಪ್ರತಿ




ಬೋಜ ಕಾಳಿದಾಸ ವಿಲಾಸದ ಹಸ್ತಪ್ರತಿ



ತಾಮ್ರ ಧ್ವಜನ ಕಥೆಯ ಹಸ್ತಪ್ರತಿ.



ಜಗನ್ ಮೋಹೀನಿ ಕಥೆಯ ಹಸ್ತಪ್ರತಿ.




ರಾಮಾಯಣದೊಳಗಣ ಚಿತ್ರಪಟ ಸಂಧಿಯ ಹಸ್ತಪ್ರತಿ.











ಗಿರಿಜಾ ಕಲ್ಯಾಣದ ಬಯಲಾಟದ ಹಸ್ತಪ್ರತಿ



ವೀರ ಅಭಿಮಾನ್ಯುವಿನ ಕಾಳಗದ ಹಸ್ತಪ್ರತಿ




ತತ್ವಪದದ ಹಸ್ತಪ್ರತಿ












ನಲಗೇತನಹಟ್ಟಿಯ ದೇವರ ಪೂಜಾರಿಕೆ ಪಟ್ಟಕ್ಕೆ ಸಂಬಂಧಿಸಿದ ದಾಖಲೆಯ ಹಸ್ತಪ್ರತಿ



ಶಶಿರೇಖ ಪರಿಣಯದ ಹಸ್ತಪ್ರತಿ




ರತಿ ಕಲ್ಯಾಣಿ ಕಥೆಯ ಹಸ್ತಪ್ರತಿ











ಶಿವಜಲಂಧರ ನಾಟಕದ ಹಸ್ತಪ್ರತಿ



ನುಂಕೇಮಲೆಯ ಸಿದ್ದೇಶ್ವರ ಪುರಾಣದ ಹಸ್ತಪ್ರತಿ




ಸೌಗಂಧಿಕ ಪುಷ್ಪ ಬಯಲಾಟದ ಹಸ್ತಪ್ರತಿ











ಬಾಲಗ್ರಹದ ಹಸ್ತಪ್ರತಿ




ಶತ್ರುವಿಜಯನ ಕಥೆಯ ಹಸ್ತಪ್ರತಿ




ಮಣಿಮಲ್ಲಾಸುರನ ಕಥೆಯ ಹಸ್ತಪ್ರತಿ



ದಾನಸಾಲಮ್ಮನ ಭೀಕ್ಷೆ ಬೇಡಿದ ಹಸ್ತಪ್ರತಿ



ನಾಯಕನಹಟ್ಟಿಯ ಬೂದಿಮಲ್ಲಪ್ಪ ನಾಯಕನ ಮೂಲವಿಚಾರದ
ಹಸ್ತಪ್ರತಿ



ಸ್ತ್ರೀವಶೀಕರಣದ ಹಸ್ತಪ್ರತಿ


ತಾಳೆಗರಿಯ ಹಸ್ತಪ್ರತಿಗಳು



ವಾಲ್ಮೀಕಿ ರಾಮಾಯಣದ ಹಸ್ತಪ್ರತಿ



ವಾಲ್ಮೀಕಿ ರಾಮಾಯಣದ ಹಸ್ತಪ್ರತಿ



ಜೈಮಿನಿ ಭಾರತದ ಹಸ್ತಪ್ರತಿ



ಜೈಮಿನಿ ಭಾರತದ ಹಸ್ತಪ್ರತಿ

ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಭಂಡಾರದಲ್ಲಿನ ಹಸ್ತಪ್ರತಿಗಳು





